# ಕರ್ನಾಟಕ ವಿಧಾನ ಪರಿಷತ್ತು

**ಬುಧವಾರ, 17 ಜುಲೈ 2013**

**ಸದನವು ವಿಧಾನಸೌಧದಲ್ಲಿರುವ ವಿಧಾನ ಪರಿಷತ್ತಿನ ಸಭಾಂಗಣದಲ್ಲಿ ಪೂರ್ವಾಹ್ನ 11 ಗಂಟೆ 17 ನಿಮಿಷಕ್ಕೆ ಸಮಾವೇಶಗೊಂಡಿತು.**

**ಉಪ ಸಭಾಪತಿ (ಶ್ರೀಮತಿ ವಿಮಲಾಗೌಡ) ಅವರು ಪೀಠದಲ್ಲಿ ಉಪಸ್ಥಿತರಿದ್ದರು.**

## 1. ಗಮನ ಸೆಳೆಯುವ ಸೂಚನೆಯಡಿ ವಿಷಯ ಪ್ರಸ್ತಾಪಿಸಲು ಲಿಖಿತ ಪತ್ರ ನೀಡಿದ್ದಾಗ್ಯೂ ಕಾರ್ಯಕಲಾಪಗಳ ಪಟ್ಟಿಯಲ್ಲಿ ಹೆಸರು ಕೈಬಿಟ್ಟಿರುವ ಬಗ್ಗೆ

**ಶ್ರೀ ವೈ. ಎ. ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೆ, ನಾನು ನಿನ್ನೆ ಗಮನ ಸೆಳೆಯುವ ಸೂಚನೆ ಬಗ್ಗೆ ಸದನದಲ್ಲಿ ಪ್ರಸ್ತಾಪ ಮಾಡಲು ಪತ್ರವನ್ನು ನೀಡಿದ್ದೆ. ಆದರೆ ಇಂದಿನ ಅಜೆಂಡಾದಲ್ಲಿ ಆಗಮನದ ಸೂಚನೆಯಲ್ಲಿ ನನ್ನ ಹೆಸರನ್ನು ಬಿಟ್ಟು ಪ್ರಿಂಟ್ ಮಾಡಿದ್ದಾರೆ. ಈ ಗಮನ ಸೆಳೆಯುವ ಸೂಚನೆಯನ್ನು ಪ್ರಸ್ತಾಪ ಮಾಡುವ ಸಲುವಾಗಿ ಮಾನ್ಯ ಹೊರಟ್ಟಿಯವರು, ಮಾನ್ಯ ಪುಟ್ಟಣ್ಣನವರು ಮಾನ್ಯ ಮರಿತಿಬ್ಬೇಗೌಡ ಅವರು ಮತ್ತು ನಾನು ಪತ್ರವನ್ನು ಕೊಟ್ಟಿದ್ದೆವು. ಆ ಎಲ್ಲಾ ವಿಚಾರ ಒಂದೇ ಆಗಿದ್ದರೂ ಕೂಡ ಈ ಅಜೆಂಡಾದಲ್ಲಿ ಎಲ್ಲರ ಹೆಸರನ್ನೂ ಕ್ರೋಢೀಕರಿಸಿ ನನ್ನ ಹೆಸರನ್ನೂ ಅದರಲ್ಲಿ ಸೇರಿಸಬೇಕಾಗಿತ್ತಲ್ಲವೇ? ಆದರೆ ನನ್ನ ಹೆಸರು ಇದರಲ್ಲಿ ಹಾಕಿಲ್ಲ. ತಮ್ಮ chamber ನಲ್ಲಿ ಮಾನ್ಯ ಕಾರ್ಯದರ್ಶಿಯವರ ಕೈಗೆ ನಾನೇ ಕೊಟ್ಟಿದ್ದೇನೆ. ಏಕೆ ಹೀಗೆ ಮಾಡುತ್ತಿದ್ದಾರೆ ತಿಳಿಯುತ್ತಿಲ್ಲ. ಅದನ್ನು ಪ್ರಿಂಟ್ ಮಾಡಲು ನಿಮ್ಮಲ್ಲಿ ಕಾಸು ಇಲ್ಲಲ್ಲವೇ ಪೇಪರ್ ಇಲ್ಲವೇ ಇಂಕ್ ಇಲ್ಲವೇ ಏನಾಗಿದೆ ಎಂದು ತಿಳಿಯುತ್ತಿಲ್ಲ.

**ಶ್ರೀ ಡಿ.ವಿ. ಸದಾನಂದಗೌಡ:–** ಮಾನ್ಯ ಸಭಾಪತಿಗಳೇ, ಇದರ ಬಗ್ಗೆ ಗಂಭೀರವಾಗಿ ಆಲೋಚನೆ ಮಾಡಬೇಕಾಗುತ್ತದೆ. ಇದಕ್ಕೆ ಇಂತಿಷ್ಟು ಜನರ ಹೆಸರು, ಅಂದರೆ ಇಂತಿಷ್ಟು ನಂಬರ್ ಇರಬೇಕು ಎಂದು ಹೇಳುವುದಕ್ಕೆ ಕಾನೂನು ಇವೆಲ್ಲವೂ ಇರಬಹುದು. ಅದರಲ್ಲಿ ಎಲ್ಲವೂ ಇಲ್ಲವೆಂದು ಹೇಳುವುದಿಲ್ಲ. ಆದರೆ ಯಾರು ಯಾವಾಗ ಪ್ರಥಮವಾಗಿ ಕೊಟ್ಟಿದ್ದಾರೆ ಅದನ್ನು ನೋಡಿಕೊಂಡು ಅವರ ಹೆಸರನ್ನು ಸೇರಿಸುವಂತಹ ಕೆಲಸವನ್ನು ಮಾಡಲೇ ಬೇಕಾಗುತ್ತದೆ. ತಾವು ಪತ್ರವನ್ನು ಅವರಿಂದ ಎಷ್ಟು ಹೊತ್ತಿಗೆ ತೆಗೆದು ಕೊಂಡಿದ್ದೇವೆ. ಎಂದು ಹೇಳುವ ಸಲುವಾಗಿ ಅದರಲ್ಲಿ ಸಮಯವನ್ನು ಹಾಕಿ. ಏಕೆಂದರೆ ಎಷ್ಟು ಜನರ ಹೆಸರನ್ನು ಹಾಕಬೇಕು; 2–3–4 ಜನರ ಹೆಸರನ್ನು ಹಾಕಬೇಕೇ ಎಂಬ ಬಗ್ಗೆ ನಿಯಮಾವಳಿಗಳಲ್ಲಿ ಇದೆ. ಆದರೆ ಇದು ಆಭಾಸ ಆಗಬಾರದು. ಈ ಸದನದಲ್ಲಿ ಮೂರನೇ ಬಾರಿ ಈ ರೀತಿ ಪ್ರಸ್ತಾಪ ಆಗುತ್ತಿದೆ.

ನಮ್ಮ ಕಾರ್ಯದರ್ಶಿಯವರು ಅದರಲ್ಲಿ endorse ಮಾಡಲಿ. ನಮಗೆ ಇಷ್ಟು ಹೊತ್ತಿಗೆ ಆ ಪತ್ರ ಸಿಕ್ಕಿದೆ ಎಂದು ಸಮಯವನ್ನು ಹಾಕಿ. ಮೊದಲಿಗೆ ಕೊಟ್ಟವರ ಹೆಸರು ಅದರಲ್ಲಿ ಪ್ರಥಮವಾಗಿ ಇರಬೇಕು. ಎಲ್ಲೋ ಒಂದು ಕಡೆಯಲ್ಲಿ ತಮ್ಮನ್ನು ಭೇಟಿ ಮಾಡುವವರನ್ನು ತಮ್ಮ ಹತ್ತಿರ ಮಾತನಾಡುವವರ ಹೆಸರನ್ನು ಇಲ್ಲಿ ಹಾಕುತ್ತೀರಿ ಬಾಕಿಯವರ ಹೆಸರನ್ನು ಇಲ್ಲಿ ಹಾಕುವುದಿಲ್ಲ ಎಂಬ ವಾತಾವರಣ ಬರುತ್ತದೆ. ಇನ್ನು ಮುಂದಕ್ಕೆ ಅದು ಆಗಬಾರದು. ಆ ರೀತಿ ನೋಡಿಕೊಳ್ಳಿ.

**ಶ್ರೀ ಬಿ.ಜೆ. ಪುಟ್ಟಸ್ವಾಮಿಗೌಡ:–** ಒಂದು ಚುಕ್ಕೆ ಗುರುತಿನ ಪ್ರಶ್ನೆಯನ್ನು ನೀಡಿದರೆ ಆ ಪ್ರಶ್ನೆ ಸದನದ ಮುಂದೆ ಬರಬೇಕಲ್ಲವೇ? 2–3 ಪ್ರಶ್ನೆಗಳನ್ನು ನೀಡಿದರೆ ಅದಕ್ಕೆ ಬ್ಯಾಲೆಟ್ ಮಾಡುತ್ತಾರೆ. ಆದರೆ ಒಂದು ಚುಕ್ಕೆ ಗುರುತಿನ ಪ್ರಶ್ನೆಯನ್ನು ನೀಡಿದರೆ ಅದೂ ಕೂಡ ಸದನದ ಮುಂದೆ ಬರದಿದ್ದರೆ ಹೇಗೆ?

**ಉಪ ಸಭಾಪತಿಯವರು:–** ಯಾರು ಮೊದಲು ಕೊಟ್ಟರುತ್ತಾರೆ ಅವರ ಹೆಸರನ್ನು ಹಾಕಲಾಗುತ್ತದೆ. ನಿಯಮಾವಳಿ ಪ್ರಕಾರ 5 ಜನರ ಹೆಸರನ್ನು ಮಾತ್ರ ಇದರಲ್ಲಿ ಸೇರಿಸಬೇಕೆಂದು ಇದೆ. ಆದುದರಿಂದ ಯಾರು ಪ್ರಥಮವಾಗಿ ಕೊಟ್ಟಿರುತ್ತಾರೆ ಅವರ ಹೆಸರನ್ನು ಮೊದಲಿಗೆ ತೆಗೆದುಕೊಂಡು ಇದರಲ್ಲಿ ಸೇರಿಸಬೇಕಾಗುತ್ತದೆ. ಮೊದಲಿಗೆ ಅವರ ಹೆಸರನ್ನು ಹಾಕಿ ನಂತರ ಉಳಿದವರದ್ದನ್ನು ಅದಕ್ಕೆ ಸೇರಿಸಬೇಕಾಗುತ್ತದೆ.

**ಡಾ: ಎ.ಹೆಚ್. ಶಿವಯೋಗಿ ಸ್ವಾಮಿ–** ಈ ಸದನದಲ್ಲಿ ನಾವೇ ಮಾಡಿಕೊಂಡಿರುವ ನಿಯಮ. 5ಜನ ಸದಸ್ಯರಾಗಲೀ 8 ಜನ ಆಗಲೀ ಇದರಲ್ಲಿ ವ್ಯತ್ಯಾಸವಿಲ್ಲ. ಆದರೆ ಈ ಚರ್ಚೆಯಲ್ಲಿ ಆ ಸದಸ್ಯರು ಭಾಗವಹಿಸಿದ್ದಾರೆ ಎಂಬ ಒಂದು ಸಂದೇಶ ಹೋಗಬೇಕಾಗುತ್ತದೆ ಎಂಬ ವಿಚಾರ ಇದರಲ್ಲಿ ಇರುತ್ತದೆ. ಆದುದರಿಂದ ದಯವಿಟ್ಟು ಇದನ್ನು ಪರಿಗಣಿಸಬೇಕೆಂದು ವಿನಂತಿ. ಇದಕ್ಕೆ ತಕ್ಕ ನಿಯಮಾವಳಿಯನ್ನು ಬದಲಾವಣೆ ಮಾಡಬೇಕೋ ಆಮೇಲೆ ಯೋಚನೆ ಮಾಡೋಣ. ಆದುದರಿಂದ ಎಷ್ಟು ಜನ ಕೊಟ್ಟಿದ್ದಾರೋ ಅಷ್ಟು ಹೆಸರನ್ನು ಇದರಲ್ಲಿ ಸೇರಿಸಬೇಕಾಗುತ್ತದೆ.

**ಉಪಸಭಾಪತಿಯವರು :-** ಮೊದಲು ಯಾರು ಕೊಟ್ಟಿದ್ದಾರೆ ಅದನ್ನು ಸೇರಿಸಿ ಅದರ ನಂತರ ಉಳಿದವರ ಹೆಸರನ್ನು ಅದರಲ್ಲಿ ಸೇರಿಸುವಂತಹ ಒಂದು..

**ಡಾ. ಹೆಚ್. ಶಿವಯೋಗಿ ಸ್ವಾಮಿ :-** ಇಲ್ಲವಾದಲ್ಲಿ ತಪ್ಪಾಗುತ್ತದೆ. ಇದರಲ್ಲಿ ಇತರರು ಎಂದರೆ

**ಉಪಸಭಾಪತಿಗಳು :-** ಈಗ ಇದರ ಬಗ್ಗೆ ಸಾಕು. ಪ್ರಶ್ನೋತ್ತರವನ್ನು ಶುರು ಮಾಡಬೇಕು.

**ಶ್ರೀ ವೈ.ಎ. ನಾರಾಯಣಸ್ವಾಮಿ :-** ಈ ವಿಷಯದ ಬಗ್ಗೆ ತಮ್ಮ chamber ನಲ್ಲಿ ನಾನೇ ಬಂದು ಪತ್ರವನ್ನು ಕೊಟ್ಟಿದ್ದೇನೆ. ನನ್ನ ಹೆಸರೇ ಇದರಲ್ಲಿ ಇಲ್ಲ. 5 ಜನರ ಹೆಸರಿನಲ್ಲಿ ನನ್ನ ಹೆಸರೂ ಇರಬೇಕಲ್ಲಾ ?

**ಉಪಸಭಾಪತಿಯವರು :-** ಇನ್ನು ಮೇಲೆ ಆ ರೀತಿ ಆಗದ ಹಾಗೆ ನೋಡಿಕೊಳ್ಳಲಾಗುವುದು.

**Sri. Y.A. NARAYANASWAMY :-** You must give strict direction to your officers.

**ಶ್ರೀ ಬಸವರಾಜ ಹೊರಟ್ಟಿ :-** ಇದರ ಹಿನ್ನೆಲೆಯಲ್ಲಿ ನಾನು ಮಾನ್ಯ ಸಭಾಪತಿಯವರಿಗೆ ಒಂದು ಪತ್ರವನ್ನು ಬರೆದಿದ್ದೇನೆ. ಇದೇ ರೀತಿ ಆಗುತ್ತಿದೆ ಎಂದು ಹೇಳಿದ್ದೆ. ವಿಧಾನ ಮಂಡಲದಲ್ಲಿ ನಮಗೆ ಏನಾದರೂ ತೊಂದರೆ ಆದರೆ ನಾವು ಆ ಕುರಿತು ಇಲ್ಲಿ ಪ್ರಸ್ತಾಪ ಮಾಡಲು ಅನುಮತಿಯನ್ನು ಕೊಡುವುದಿಲ್ಲ. ಆದರೆ ಈ ರೀತಿಯ ತಪ್ಪುಗಳಾಗುತ್ತವೆ.

ಇವುಗಳನ್ನು ತಿದ್ದುಕೊಳ್ಳಬೇಕೆಂದು ಬಹಳಷ್ಟು ಸಾರಿ ಹೇಳಿದ್ದೇವೆ. ನಾವೇ ಮಾಡಿಕೊಂಡ ನಿಯಮಗಳ ಪಕಾರವಾಗಿಯಾದರು ಇಲ್ಲಿ ನಡೆಯ ಬೇಕಲ್ಲವೇ ? ಆ ರೀತಿಯಾಗಿ ನಡೆಯುತ್ತಿಲ್ಲ. ಈ ಅಫೀಸ್ನಲ್ಲಿ ಸರಿಯಾಗಿ ಕೆಲಸವನ್ನೇ ಮಾಡುವುದಿಲ್ಲ. ಆದರೂ ಇದರ ಬಗ್ಗೆ ನಾವು ಏನು ಮಾತ ನಾಡುವಂತಿಲ್ಲ. ಇಲ್ಲಿ ಬೇಕಾದ್ದು ನಡೆಯುತ್ತದೆ. ಬೇಕಾದವರ ಹೆಸರನ್ನು

ಹಾಕುತ್ತಾರೆ, ಬೇಡವಾದವರ ಹಸರನ್ನು ತೆಗೆಯುತ್ತಾರೆ. ಇದರ ಬಗ್ಗೆ ಮಾನ್ಯ ಸಭಾಪತಿಯವರಿಗೆ ಒಂದು ತಿಂಗಳ ಹಿಂದೆ ಈ ರೀತಿಯಾಗಿ ಆಗಬಾರದೆಂದು ಬರೆದಿದ್ದೇನೆ. ಕೊನೆಯ ಪಕ್ಷ ಸರಿಯಾಗಿ ಕಲಸ ಮಾಡುವುದಕ್ಕೆ ನೀವು ಅಫೀಸ್‌ಗೆ ಡೈರಕ್ಷನ್ ಕೊಡಿ.

**ಉಪ ಸಭಾಪತಿಯವರು:–** ಇನ್ನು ಮುಂದೆ. ಈ ರೀತಿಯಾಗ ಬಾರದೆಂದು ಡೈರಕ್ಷನ್ ಕೊಟ್ಟಿದ್ದೇನೆ.

**ಶ್ರೀ ಬಸವರಾಜ ಹೊರಟ್ಟಿ:–** ಮಾನ್ಯ ಸಭಾಪತಿಯವರೆ. ವಿಧಾನ ಮಂಡಲದಲ್ಲಿ ಏನು ನಡೆಯುತ್ತದೆ ಅದರ ಬಗ್ಗೆ ಇಲ್ಲಿ ಚರ್ಚೆ ಮಾಡುವಂತಿಲ್ಲ. ಚರ್ಚೆ ಮಾಡುವುದಕ್ಕೆ provision ಇಲ್ಲದೇ ಇರುವುದರಿಂದ ದಯಮಾಡಿ ಇನ್ನು ಮುಂದೆಯಾದರೂ ಕೂಡ ಸರಿಯಾಗಿ ನಡೆಯಲಿ. ಸದನದಲ್ಲಿ ಸರಿಯಾದಂತಹ ವ್ಯವಸ್ಥೆಯೇ ಇಲ್ಲ. ಸರಿಯಾದಂತಹ ರೀತಿಯಲ್ಲಿ ಕೆಲಸ ವಾಗುವಂತಿಲ್ಲ. ಕಾಗದ ಪತ್ರಗಳಿಗೆ ಕಿಮ್ಮತ್ತು ಇರುವುದಿಲ್ಲ. ಎಲ್ಲರೂ ಇದನ್ನು ಅರ್ಥ ಮಾಡಿಕೊಳ್ಳಬೇಕು. ಶ್ರೀ ವೈ ನಾರಾಯಣ ಸ್ವಾಮಿಯವರೆ ನನ್ನ ಎದುರಿಗೆ ಕೊಟ್ಟು ಸಹಿ ಮಾಡಿಕೊಂಡಿದ್ದರು ಆದರೆ ಅಜಂಡಾದಲ್ಲಿ ಅವರ ಹೆಸರನ್ನೇ ಹಾಕಿಲ್ಲ.

**ಉಪ ಸಭಾಪತಿಯವರು:–** ಈಗ ಪ್ರಶ್ನೋತ್ತರ ವೇಳೆಯನ್ನು ಪ್ರಾರಂಭ ಮಾಡೋಣ. ಇದರ ಬಗ್ಗೆ ಚರ್ಚೆ ಮಾಡುವುದು ಬೇಡ.

**ಶ್ರೀ ಪಟೇಲ್ ಶಿವರಾಂ:–** ಮಾನ್ಯ ಸಭಾಪತಿಯವರೆ., ಪ್ರಶ್ನೆಗಳಿಗೆ ಸಂಬಂಧಪಟ್ಟಂತೆ ನನ್ನದು ಒಂದೇ ಒಂದು ಮಾತು. ನೆನ್ನೆಯ ದಿವಸ ಲಿಖಿತ ಪ್ರಶ್ನೆಗಳಿಗೆ ಉತ್ತರವನ್ನು ಕೊಡುತ್ತೇವೆಂದು  ಕೊಟ್ಟರು. ಆದರೆ ಒಂದು ಪ್ರಶ್ನೆಗೆ ಉತ್ತರವನ್ನು ಕೊಟ್ಟರು ಮತ್ತೊಂದು ಪ್ರಶ್ನೆಗೆ ಉತ್ತರವನ್ನೇ ಕೊಟ್ಟಿಲ್ಲ. ಇದರ ಬಗ್ಗೆ ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯದರ್ಶಿಯವರಿಗೆ ಹೇಳಿದ್ದೇನೆ. ಏಕೆ ಈ ರೀತಿಯಾಗಿ ನಡೆದುಕೊಳ್ಳುತ್ತಿದ್ದಾರೆ?

**ಉಪ ಸಭಾಪತಿಯವರು:–** ಕಾರ್ಯದರ್ಶಿಯವರು ಇದನ್ನು ಗಮನಿಸಬೇಕು.

**ಶ್ರೀಎಸ್.ಆರ್.ಪಾಟೀಲ್ (ಸಭಾ ನಾಯಕರು):-** ಮಾನ್ಯ ಸಭಾಪತಿಯವರೆ, ಇದರ ಬಗ್ಗೆ ಕಟುನಿಟ್ಟಿನ ನಿರ್ದೇಶನವನ್ನು ನೀಡಿ ಬಿಡಿ. ಏಕೆಂದರೆ. ನಾವು ರಚಿಸಿದಂತಹ ನಿಯಮಾವಳಿಗಳಿದೆ ಆ ನಿಯಮಾವಳಿಗಳ ಪ್ರಕಾರ ನಡೆಯಲಿಕ್ಕೆ ಅಧಿಕಾರಿಗಳಿಗೆ ಆದೇಶವನ್ನು ಮಾಡಿ. ಇದರ ಬಗ್ಗೆ ಮಾನ್ಯ ಸದಸ್ಯರು ಪದೇ ಪದೇ ಪ್ರಸ್ತಾಪ ಮಾಡುವುದು ಸರಿ ಅನ್ನಿಸುವುದಿಲ್ಲ. ತಾವು ಕಟ್ಟುನಿಟ್ಟಿನ ಆಜ್ಞೆ ಮಾಡಿ. ನಿಯಮಕ್ಕೆ ಅನುಸಾರವಾಗಿ ನಡೆಯವುದಕ್ಕೆ ಆದೇಶ ಮಾಡಬೇಕು.

## 2. ಪ್ರಶ್ನೋತ್ತರ

**ಅ) ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಬಾಯಿ ಮಾತಿನ ಮೂಲಕ ನೀಡಲಾದ ಉತ್ತರಗಳು.**

**ರಾಜ್ಯದ ಕರಾವಳಿ ಪ್ರದೇಶದಲ್ಲಿ ಸಮುದ್ರ ಕೊರೆತವಾಗುತ್ತಿರುವ ಬಗ್ಗೆ**

**453; ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)**

**ಅ)** ಸಮುದ್ರ ಕೆರೆತಕ್ಕೆ ತಾತ್ಕಾಲಿಕ ತಡೆಗೋಡೆ ನಿರ್ಮಿಸಿ ಪುನಃ ಅದೇ ಕಲ್ಲನ್ನು ಉಪಯೋಗಿಸಿ ಶಾಶ್ವತ ತಡೆಗೋಡೆ ನಿರ್ಮಿಸಿ ಎರಡೂ ಕಾಮಗಾರಿಗೆ ಹಣ ಪಡೆದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ ಸರ್ಕಾರ ಕೈಗೊಂಡಿರುವ ಕ್ರಮಗಳೇನು; ಇಲ್ಲವಾದಲ್ಲಿ ಕಾರಣವೇನು ? (ವಿವರ ನೀಡುವುದು.)

**ಆ)** ರಾಜ್ಯದ ಎಷ್ಟು ಕರಾವಳಿ ಪ್ರದೇಶಗಳಲ್ಲಿ ಸಮುದ್ರ ಕೊರೆತಕ್ಕೆ ಶಾಶ್ವತ ತಡೆಗೋಡೆ ನಿರ್ಮಿಸುವ ಯೋಜನೆ ಹಾಕಲಾಗಿದೆ. (ಯೋಜನೆಯ ಪೂರ್ಣ ವಿವರ ನೀಡುವುದು)

**ಇ)** ರಾಜ್ಯದಲ್ಲಿ ಎಷ್ಟು ಕರಾವಳಿ ಪ್ರದೇಶಗಳಲ್ಲಿ ಸಮುದ್ರ ಕೊರೆತಕ್ಕೆ ತಾತ್ಕಾಲಿಕ ತಡೆಗೋಡೆ ಕಾಮಗಾರಿ ಪ್ರಾರಂಭಿಸಲಾಗಿದೆ ? (ಗುತ್ತಿಗೆದಾರರ ಹೆಸರು, ವಿಳಾಸ, ಹಿಂದೆ ನಿರ್ವಹಣೆ ಮಾಡಿದ ಕಾಮಗಾರಿಗಳ ಮಾಹಿತಿ ನೀಡುವುದು)

**ಶ್ರೀ ಬಾಬುರಾವ್ ಚಿಂಚನಸೂರ್ (ಜವಳಿ, ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವರು)**

ಅ) ಬಂದಿರುವುದಿಲ್ಲ.

ಆ) 2013–14ನೇ ಸಾಲಿನಲ್ಲಿ ಒದಗಿಸಿದ ಅನುದಾನಕ್ಕೆ ಒಳಪಟ್ಟು ಈ ಕೆಳಗಿನ ದೀರ್ಘಕಾಲಿಕ ತಡೆಗೋಡೆ ನಿರ್ಮಿಸುವ ಯೋಜನೆ ರೂಪಿಸಲಾಗಿದೆ.

**ಉತ್ತರ ಕನ್ನಡ ಜಿಲ್ಲೆ**

| ಪ್ರದೇಶ | ಉದ್ದ ಮೀ.ಗಳಲ್ಲಿ | ಅಂದಾಜು ವೆಚ್ಚ ರೂ ಲಕ್ಷಗಳಲ್ಲಿ |
|---|---|---|
| ಕಲಬಾಗ | 313 | 198 |
| ಕಾಸರಕೋಡು–ಟೊಂಕ | 125 | 98 |
| ಕಾಗಲ್ಲ | 55 | 37 |
| ಧಾರೇಶ್ವರ | 70 | 48 |

**ಉಡುಪಿ ಜಿಲ್ಲೆ**

| ಪ್ರದೇಶ | ಉದ್ದ ಮೀ.ಗಳಲ್ಲಿ | ಅಂದಾಜು ವೆಚ್ಚ ರೂ ಲಕ್ಷಗಳಲ್ಲಿ |
|---|---|---|
| ಬಿಜಾಡಿ | 35 | 30 |
| ಪಡುವರಿ | 30 | 25 |
| ಬೈಕಂಪಾಡಿ | 300 | 275 |

ಪ್ರಸ್ತಕ ಹೆಚ್ಚುವರಿಯಾಗಿ ನೀಡಿರುವ ರೂ. 10 ಕೋಟಿ ಅನುದಾನದಲ್ಲಿ ಕರಾವಳಿಯ 3 ಜಿಲ್ಲೆಗಳಲ್ಲಿ ತೀವ್ರ ಸಮುದ್ರ ಕೊರತಕ್ಕೆ ಒಳಗಾಗುತ್ತಿರುವ

ಆಯ್ದ ಪ್ರದೇಶಗಳಲ್ಲಿ 600 ಮೀ. ಉದ್ದದ ತಡೆಗೋಡೆಯನ್ನು ನಿರ್ಮಿಸಲು ಉದ್ದೇಶಿಸಲಾಗಿದೆ.

ಎಡಿಬಿ ಯೋಜನೆಯಡಿ ಸುಸ್ಥಿರ ಕರಾವಳಿಯ ತೀರ ಸಂರಕ್ಷಣೆ ಮತ್ತು ನಿರ್ವಹಣಾ ಯೋಜನೆಯನ್ನು ರೂ. 911 ಕೋಟಿ ಮೊತ್ತದಲ್ಲಿ ಕೈಗೊಳ್ಳಲು ಸರ್ಕಾರದ ಮಂಜೂರಾತಿ ದೊರಕಿರುತ್ತದೆ. ಇದನ್ನು 3 ಹಂತಗಳಲ್ಲಿ 8 ವರ್ಷಗಳಲ್ಲಿ ಕರಾವಳಿಯ 3 ಜಿಲ್ಲೆಗಳಲ್ಲಿ ಅನುಷ್ಠಾನಗೊಳಿಸಲು ಉದ್ದೇಶಿಸಿಲಾಗಿದೆ.

ಮೊದಲ ಹಂತದಲ್ಲಿ ದಕ್ಷಿಣ ಕನ್ನಡ ಜಿಲ್ಲೆಯ ಉಲ್ಲಾಳದಲ್ಲಿ ರೂ. 223.32 ಕೋಟಿ ಮೊತ್ತದಲ್ಲಿ ಸಮುದ್ರ ತೀರ ಸಂರಕ್ಷಣಾ ಕಾಮಗಾರಿ ಕೈಗೊಳ್ಳಲಾಗುತ್ತಿದೆ. ಈ ಪೈಕಿ ರೂ. 26.24 ಕೋಟಿ ವೆಚ್ಚದಲ್ಲಿ ನಾಲ್ಕು ಇನ್ ಶೋರ್ ಬರ್ಮುಗಳನ್ನು ನಿರ್ಮಿಸುವ ಕಾಮಗಾರಿ ಪ್ರಗತಿಯಲ್ಲಿದೆ.

ಯೋಜನೆಯ ಎರಡನೆಯ ಹಂತವಾಗಿ ಉಡುಪಿ ಹಾಗೂ ಉತ್ತರ ಕನ್ನಡ ಜಿಲ್ಲೆಯಲ್ಲಿ ಸ್ಥಳಗಳನ್ನು ಗುರುತಿಸಲಾಗಿದೆ.

ಇ) ಇಲಾಖಾ ವೆಚ್ಚದಲ್ಲಿ ಪ್ರಸಕ್ತ ಸಾಲಿನಲ್ಲಿ ಈವರೆಗೆ ಯಾವುದೇ ತಾತ್ಕಾಲಿಕ ತಡೆಗೋಡೆ ಕಾಮಗಾರಿಯನ್ನು ಕೈಗೊಂಡಿದ್ದು ಇರುವುದಿಲ್ಲ.

2010–12ನೇ ಸಾಲಿನಿಂದ 2013–14ನೇ ಸಾಲಿನವರೆಗೆ ನಿರ್ವಹಿಸಿದ ತುರ್ತು ಸಮುದ್ರ ಕೊರೆತ ಪ್ರತಿಬಂಧಕ ಕಾಮಗಾರಿಗಳ ಯಾದಿಯನ್ನು ಅನುಬಂಧ–1ರಲ್ಲಿ ಸಲ್ಲಿಸಿದೆ.

## ಅನುಬಂಧ – 1

**2010–11, 2011–12, 2012–13 ಹಾಗೂ 2013–14ನೇ ಸಾಲಿನಲ್ಲಿ ಕೈಗೊಂಡ ತುರ್ತು ಸಮುದ್ರ ಕೊರೆತ ತಡೆ ಕಾಮಗಾರಿಗಳ ವಿವರಗಳು**

| ಕ್ರಸಂ | ತುರ್ತು ತಡೆಗೋಡೆ ಕಾಮಗಾರಿ ನಿರ್ವಹಿಸಿದ ವರ್ಷ | ಕಾಮಗಾರಿ ನಿರ್ವಹಿಸಿದ ಸ್ಥಳಗಳು | ನಿರ್ವಹಿಸಿದ ತಡೆಗೋಡೆ ಒಟ್ಟು ಉದ್ದ | ಒಟ್ಟು ಅಂದಾಜು ವೆಚ್ಚ | ಕಾಮಗಾರಿ ನಿರ್ವಹಿಸಿದ ಗುತ್ತಿಗೆದಾರರ ಹೆಸರು ಮತ್ತು ವಿಳಾಸ |
|---|---|---|---|---|---|
| 1. | 2010–2011ನೇ ಸಾಲಿನ ಮಳೆಗಾಲ | ಉಡುಪಿ ಜಿಲ್ಲೆಯ ತೆಂಕ ಎರ್ಮಾಳ್, ಬಡಾ ಎರ್ಮಾಳ್ ಹಾಗೂ ಉದ್ಯಾವರ ಪಡುಕರೆ **(ಒಟ್ಟು 16 ಕಾಮಗಾರಿಗಳು)** | 487.00ಮೀ. | ರೂ. 62.45 ಲಕ್ಷ (ಪ್ರಾಕೃತಿಕ ವಿಕೋಪ ನಿಧಿ) | ಶ್ರೀ. ಯು ಸತೀಶ್ ಶೇಟ್, ಲೋ.ಇ.ಗುತ್ತಿಗೆದಾರರು, ಶೇಟ್ ಬಿಲ್ಡಿಂಗ್, ಮಾರುತಿ ವಿಥಿಕಾ, ಉಡುಪಿ |
| | | | | | ಶ್ರೀ. ಕಿಶೋರ್ ಕುಮಾರ್, ಲೋ.ಇ.ಗುತ್ತಿಗೆದಾರರು, ಕಳತ್ತೂರು, ಕಾಪು |
| 2. | –ಅದೇ– | ದ.ಕ.ಜಿಲ್ಲೆಯ ಉಳ್ಳಾಲ ಕ್ಷೇತ್ರದ ಕೋಡಿ, ಕೋಟೆಪುರ, ಮೊಗವೀರ ಪಟ್ಟಣ, ಗುಡ್‌ಶೆಫರ್ಡ್ ಚರ್ಚ್, ಮುಕ್ಕಚ್ಚೇರಿ ಹಿಲಾರಿನಗರ ಹಾಗೂ ಸುಭಾಷ್ ನಗರ ಮತ್ತು ಮೂಲ್ಕಿ ಮೂಲ್ಕಿ ಮೂಡಬಿದಿರೆ ವಿಧಾನಸಭಾ ಕ್ಷೇತ್ರದ ಸಸಿಹಿತ್ಲು **(ಒಟ್ಟು 87 ಕಾಮಗಾರಿಗಳು)** | 1285.00ಮೀ | ರೂ. 240.00 ಲಕ್ಷ (4711ರಡಿ) | ಶ್ರೀ. ಉದಯ ಚಂದ್ರ ಸುವರ್ಣ, ಲೋ.ಇ.ಗುತ್ತಿಗೆದಾರರು, ಮೈದಾನ್ ರಸ್ತೆ, ಮಂಗಳೂರು. |
| | | | | | ಶ್ರೀ. ಹೆರಾಲ್ಡ್.ಪಿ.ವೀರಾಂಡ ಲೋ.ಇ.ಗುತ್ತಿಗೆದಾರರು, ಬೋಂದೆಲ್, ಮಂಗಳೂರು. |
| | | | | | ಶ್ರೀ. ರಫಿ ಅಹಮ್ಮದ್ ಲೋ.ಇ.ಗುತ್ತಿಗೆದಾರರು, ಮಂಗಳೂರು. |
| | | | | | ಶ್ರೀ. ಕೆ.ಪುರುಷೋತ್ತಮ ಕುಲಾಲ್ ಲೋ.ಇ.ಗುತ್ತಿಗೆದಾರರು, ಕಲ್ಲಾವಿ, ಮಂಗಳೂರು. |
| | | | | | ಶ್ರೀ. ಕಿಶೋರ್ ಕುಮಾರ್, ಲೋ.ಇ.ಗುತ್ತಿಗೆದಾರರು, ಕಳತ್ತೂರು, ಕಾಪು |
| | | | | | ಶ್ರೀ. ಇಸ್ಮಾಯಿಲ್ ಅಜ್‌ಮಾಲ್ ಲೋ.ಇ.ಗುತ್ತಿಗೆದಾರರು, ಜೆಪ್ಪು, ಮಂಗಳೂರು |
| | | | | | ಮೇ.ರೂಪಾ ಇಂಜಿನಿಯರಿಂಗ್ ಕಾರ್ಪೋರೇಶನ್ ಲೋ.ಇ.ಗುತ್ತಿಗೆದಾರರು, ಮೈದಾನ್ ರಸ್ತೆ, ಮಂಗಳೂರು. |
| 3. | 2011–2012ನೇ ಸಾಲಿನ ಮಳೆಗಾಲ | ಉಡುಪಿ ಜಿಲ್ಲೆಯ ತೆಂಕ ಎರ್ಮಾಳ್, ಉದ್ಯಾವರ ಪಡುಕರೆ ಕೋಡಿಕನ್ಯಾನ, ಮರವಂತೆ, ತ್ರಾಸಿ, ಪಡುವರಿ, ಚಂದ್ರ ಕಳಿಹಿತ್ಲು ಹಾಗೂ **(ಒಟ್ಟು 25 ಕಾಮಗಾರಿಗಳು)** | 1426.00ಮೀ. | ರೂ. 269.00 ಲಕ್ಷ (ರೂ.111.14ಲಕ್ಷಗಳ 25 ಕಾಮಗಾರಿಗಳಿಗೆ (562ಮೀ.) ಪ್ರಾಕೃತಿಕ ವಿಕೋಪ ನಿಧಿಯಡಿಯಿಂದ ಮಂಜೂರಾತಿ ದೊರೆತಿರುತ್ತದೆ) | ಶ್ರೀ. ಕಿಶೋರ್ ಕುಮಾರ್, ಲೋ.ಇ.ಗುತ್ತಿಗೆದಾರರು, ಕಳತ್ತೂರು, ಕಾಪು |
| | | | | | ಶ್ರೀ. ರಾಜೇಶ್ ಕಾರಂತ್, ಲೋ.ಇ.ಗುತ್ತಿಗೆದಾರರು, ಕುಂದಾಪುರ |
| | | | | | ಶ್ರೀ. ಅರುಣ್ ಕುಮಾರ್ ಹೆಗ್ಡೆ, ಲೋ.ಇ.ಗುತ್ತಿಗೆದಾರರು, ಕುಂದಾಪುರ |
| | | | | | ಮೆ: ದುರ್ಗಾ ಕನ್ಸ್ಟ್ರಕ್ಷನ್ ಕಂಪೆನಿ ಲೋ.ಇ.ಗುತ್ತಿಗೆದಾರರು, ಕುಂದಾಪುರ |

| | | | | | |
|---|---|---|---|---|---|
| | 2011–2012ನೇ ಸಾಲಿನ ಮಳೆಗಾಲ | ದ.ಕ.ಜಿಲ್ಲೆಯಲ್ಲಿ 2011–12ನೇ ಸಾಲಿನಲ್ಲಿ ಯಾವುದೇ ತುರ್ತು ಕಾಮಗಾರಿಗಳನ್ನು ಕೈಗೊಂಡಿರುವುದಿಲ್ಲ. | | | |
| | 2012–2013ನೇ ಸಾಲಿನ ಮಳೆಗಾಲ | ಉಡುಪಿ ಜಿಲ್ಲೆಯ ತೆಂಕ ಎರ್ಮಾಳ್, ಉದ್ಯಾವರ ಪಡುಕರೆ, ಬಡಾಎರ್ಮಾಳ್, ಬೈಂದೂರು ಪಡುವರಿ (ಒಟ್ಟು 15 ಕಾಮಗಾರಿಗಳು) | 414.00ಮೀ | ರೂ.62.60ಲಕ್ಷ (ಪ್ರಾಕೃತಿಕ ವಿಕೋಪ) | ಶ್ರೀ. ಯು ಸತೀಶ್ ಶೇಟ್, ಲೋ.ಇ.ಗುತ್ತಿಗೆದಾರರು, ಶೇಟ್ ಬಿಲ್ಡಿಂಗ್, ಮಾರುತಿ ವಿಥಿಕಾ, ಉಡುಪಿ |
| | | | | | ಶ್ರೀ. ಕಿಶೋರ್ ಕುಮಾರ್, ಲೋ.ಇ.ಗುತ್ತಿಗೆದಾರರು, ಕಳತ್ತೂರು, ಕಾಪು |
| | | | | | ಶ್ರೀ. ವಿಕ್ರಮ್ ಶೇರೆಗಾರ್ ಲೋ.ಇ.ಗುತ್ತಿಗೆದಾರರು, ಗಂಗೊಳ್ಳಿ, ಕುಂದಾಪುರ |
| | 2012–2013ನೇ ಸಾಲಿನ ಮಳೆಗಾಲ | ದ.ಕ.ಜಿಲ್ಲೆಯಲ್ಲಿ 2012–13ನೇ ಸಾಲಿನಲ್ಲಿ ಯಾವುದೇ ತುರ್ತು ಕಾಮಗಾರಿಗಳನ್ನು ಕೈಗೊಂಡಿರುವುದಿಲ್ಲ. | | | |
| | 2013–14ನೇ ಸಾಲಿನ ಮಳೆಗಾಲ | ಉಡುಪಿ ಜಿಲ್ಲೆಯ ತೆಂಕ ಎರ್ಮಾಳ್, ಉದ್ಯಾವರ ಪಡುಕರೆ, ಬಡಾಎರ್ಮಾಳ್, ಕೊಪ್ಪಲಂಗಡಿ, ಮರವಂತೆ, ತ್ರಾಸಿ, ಶಿರೂರು ಮತ್ತು ದೊಂಬೆ ಹಾಗೂ ದಕ್ಷಿಣ ಕನ್ನಡ ಜಿಲ್ಲೆಯ ಸುಭಾಷ್‌ನಗರ ಕೈಕೋ | ಕಾಮಗಾರಿ ಪ್ರಾರಂಭಿಕ ಹಂತದಲ್ಲಿದ್ದು ಅಂದಾಜು ಪಟ್ಟಿಗೆ ಮಂಜೂರಾತಿ ಪಡೆಯುವ ಪ್ರಕ್ರಿಯೆ ಜಾರಿಯಲ್ಲಿದೆ. | ಕಾಮಗಾರಿ ಪ್ರಾರಂಭಿಕ ಹಂತದಲ್ಲಿದ್ದು ಅಂದಾಜು ಪಟ್ಟಿಗೆ ಮಂಜೂರಾತಿ ಪಡೆಯುವ ಪ್ರಕ್ರಿಯೆ ಜಾರಿಯಲ್ಲಿದೆ. | |

**ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ:** ಮಾನ್ಯ ಸಭಾಪತಿಯವರೆ, ನನ್ನ (ಅ) ಪ್ರಶ್ನೆಗೆ ಬಂದಿರುವುದಿಲ್ಲವೆಂದು ಲಿಖಿತ ಉತ್ತರದಲ್ಲಿ ತಿಳಿಸಿದ್ದಾರೆ. ಮಾನ್ಯ ಸಚಿವರು ಸರಿಯಾಗಿಯೇ ಉತ್ತರವನು. ಕೊಟ್ಟಿದಾರೆ. ಏಕೆಂದರೆ ಬಂದಿಲ್ಲದೇ ಇರುವುದರ ಬಗ್ಗೆ ಕ್ರಮವನ್ನು ತೆಗೆದುಕೊಂಡಿದ್ದೇವೆಂದು ಹೇಳುವುದಕ್ಕಾಗು ವುದಿಲ್ಲ. ನೀವು ಅಲ್ಲ ಇದು ಹಿಂದೆ ನಡೆದಿರತಕ್ಕಂತಹ ವ್ಯವಸ್ಥೆ ಆದ್ದರಿಂದ ಈಗಲಾದರೂ ಕೂಡ ಮಾನ. ಸಚಿವರ ಗಮನಕ್ಕೆ ಈ ವಿಷಯ ಬಂದಿದೆ. ಏಕೆಂದರೆ ಯಾವುದಾದರು ತಾತ್ಕಾಲಿಕ ತಡೆಗೋಡೆಯಾಗಲಿ, ಶಾಶ್ವತ ತಡೆಗೋಡೆಯಾಗಲಿ ನಿರ್ಮಿಸತಕ್ಕಂತಹ ಸಂದರ್ಭದಲ್ಲಿ chainage ಪ್ರಕಾರ ಇಲ್ಲಂದ ಇಲ್ಲಿಯವರೆಗೆ ಎನ್ನತಕ್ಕಂತಹ ವಿಚಾರಗಳಿರುವಾಗ, ಶಾಶ್ವತವಾದಂತಹ ತಡೆಗೋಡ ಮಾಡತಕ್ಕಂತಹ ಸಂದರ್ಭದಲ್ಲಿ, ಎಷ್ಟು ಕಲ್ಲುಗಳಿರುತ್ತದೆ ಅದನ್ನೇ ತೆಗೆದು ಕಟುವಂಥದ್ದು ಆಗುತ್ತಿದೆ. ಬಹುಶಃ ಈ ವ್ಯವಸ್ಥೇಗಳನ್ನು ತಮ್ಮ

ಮೂಲಕ ಮಾನ್ಯ ಸಚಿವರು ಮತು. ಸರ್ಕಾರದ ಗಮನಕ್ಕೆ ತರುವಂತಹ ಪ್ರಯತ್ನವನ್ನು ಮಾಡಿದ್ದೇನೆ... ಇದರ ಬಗ್ಗೆ ಏನು ಬೇಕೋ ಅದನ್ನು ಸಚಿವರು ಮಾಡಬೇಕು. ಮತ್ತೊಂದು ಕರಾವಳಿ ಜಿಲ್ಲೆಗಳಾದ ಮೂರು ಜಿಲ್ಲೆಗಳಲ್ಲಿ ಶಾಶ್ವತವಾಗಿ ಸಮುದ್ರ ಕೊರೆತ ಇರುವುದನ್ನು ನಾವು ಕಾಣುತ್ತಿದ್ದೇವ. ಈ ಶಾಶ್ವತವಾದಂತಹ ಸಮುದ ಕೊರತಕ್ಕೆ ಶಾಶ್ರತ ತಡೆಗೋಡೆಗಳನ್ನು ನಿರ್ಮಿಸಬೇಕು ಎನ್ನತಕ್ಕಂತಹ ಉದ್ದೇಶದಿಂದ ಈ ಒಂದು ತಡೆಗೋಡೆಗಳನ್ನು ಮಾಡುತ್ತಿದ್ದಾರೆ. ಬಹುಶಃ ಹಂತ ಹಂತವಾಗಿ ಮೂರು ಜಿಲೆಯ ಕಾರವಳಿ ಪ್ರದೇಶದಲ್ಲಿ ಆಗಬೇಕಾಗಿದೆ. ಆದರೆ ಇಷ್ಟು ವರ್ಷಗಳಲ್ಲಿ ನಾವು ಏನು ನಿರೀಕ್ಷಯನ್ನು ಮಾಡಿದ್ದೇವು ಆ ರೀತಿಯಾಗಿಲ್ಲ. ಇನ್ನಾದರೂ ಕೂಡ ಶಾಶ್ವತವಾದಂತಹ ತಡೆಗೋಡೆಗಳನ್ನು ಮಾಡಿ. ಶಾಶತ ಪರಿಹಾರವನ್ನು ಮಾಡಬೇಕು ಎನ್ನುವಂತಹ ಮಾತನು ತಮ್ಮ ಮುಖಾಂತರ ಮಾನ್ನ ಸಚಿವರ ಗಮನಕ್ಕೆ ತೆಗೆದುಕೊಂಡು ಬರುತ್ತಿದ್ದೇನೆ.

**ಶ್ರೀ ಬಾಬುರಾವ್ ಚಿಂಚನಸೂರು:–** ಮಾನ್ಯ ಸಭಾಪತಿಯವರೆ, ಮಾನ್ಯ ಸದಸ್ಯರ (ಆ) ಪ್ರಶ್ನೆಗೆ : ವಿವರವಾಗಿ ಉತ್ತರವನ್ನು ಕೊಟ್ಟಿದ್ದೇನೆ.

**ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ–** ಮಾನ್ಯ ಸಭಾಪತಿಯವರೆ, ನಾನು ತಮ್ಮ ಮುಖಾಂತರ ಸಚಿವರಲ್ಲಿ ಕೇಳುವುದೇನೆಂದರೆ, ಸಮುದ್ರ ಕೊರೆತಕ್ಕೆ ತಾತ್ಕಾಲಿಕವಾಗಿ ತಡೆಗೋಡೆಗಳನ್ನು ನಿರ್ಮಿಸತಕ್ಕಂತಹ ಸಂದರ್ಭದಲ್ಲಿ ಕಲವು ಸಂದರ್ಭದಲ್ಲಿ ಮರಳಿನ ಚೀಲಗಳನ್ನು ಹಾಕಲಾಗುತ್ತದೆ. ಕೆಲವು ಸಂದರ್ಭದಲ್ಲಿ ಕಲ್ಲುಗಳನ್ನು ಹಾಕಲಾಗುತ್ತದೆ. ಈ ಮರಳು ಚೀಲಗಳನ್ನು ಹಾಕುವುದು ಏಕೆ ಅಥವಾ ಕಲ್ಲುಗಳನ್ನು ಹಾಕುವುದು ಏಕೆ? ಒಂದೊಂದು ಸಾರಿ ಒಂದೊಂದನ್ನು ಹಾಕುವುದು ಏಕೆ? ಕಲ್ಲನ್ನು ಹಾಕಬೇಕು ಅದು ಸರಿ ಇಲ್ಲ ಎಂದರೆ ಮರಳು ಚೀಲಗಳನ್ನು ಹಾಕಬೇಕು. ಒಂದು ಸರ್ಕಾರ ಅಧಿಕಾರಕ್ಕೆ ಬಂದರೆ ತಾತ್ಕಾಲಿಕ ಸಮುದ್ರ ತಡೆಗೋಡೆಗೆ ಮರಳು ಚೀಲಗಳನ್ನು ಹಾಕಲಾಗುತ್ತದೆ ಮತ್ತೊಂದು ಸರ್ಕಾರ ಅಧಿಕಾರಕ್ಕೆ ಬಂದರೆ ಕಲ್ಲುಗಳನ್ನು ಹಾಕಲಾಗುತ್ತದೆ. ಪಾಪ ಸಚಿವರು ಸಮುದ್ರದಿಂದ ದೂರದ ಪದೇಶದಲ್ಲಿದ್ದಾರೆ.

**ಶ್ರೀ ಡಿ.ವಿ.ಸದಾನಂದಗೌಡ:-** ಮಾನ್ಯ ಸಭಾಪತಿಯವರೆ, ಕಾಂಗ್ರೆಸ್ ಪಕ್ಷದ ಸರ್ಕಾರ ಬಂದಾಗ ಸಮುದ್ರ ಕೊರೆತವನ್ನು ತಡೆಯಲು ತಾತ್ಕಾಲಿಕ ಗೋಡೆಗಳನು, ನಿರ್ಮಿಸಲು ಕಲ್ಲು ಹಾಕಬೇಕೋ ಮತ್ತೊಂದನ್ನು ಹಾಕ ಬೇಕೋ ಎಂದು ವಿಚಾರ ಮಾಡಿ. ಸಮ್ಮಿಶ್ರ ಸರ್ಕಾರ ಇದ್ದಾಗ ಕಲ್ಲು ಮತ್ತು ಮರಳು ಎಷ್ಟು ಹಾಕಬೇಕು ಎನ್ನುವುದು, ಸಮ್ಮಿಶ್ರ ಮಾಡಬೇಕಲ್ಲವೇ? ಆ ರೀತಿಯ ವಿದ್ಯಮಾನ ಎಲ್ಲಿಯೋ ವರ್ಷಗಳಿಂದ ಇದೇ ರೀತಿಯ ಉತ್ತರಗಳು ಮತ್ತು ಇದೇ ರೀತಿಯ ಪರಿಸ್ಥಿತಿ ನಡೆದಿರುವುದನ್ನು ಆವರು ಹೇಳಿದರು. ಆದರೆ ಸರ್ಕಾರಗಳು ಬದಲಾವಣೆಯಾಗಿರಬಹುದು. ಏನೇ ಆಗಿರಬಹುದು. ಆದರೆ ಸಮುದ್ರ ಕೊರೆತ ಮಾತ್ರ ನಿರಂತರವಾಗಿ ನಡೆಯು ತ್ತಲೇ ಇದೆ. ಕಲ್ಲುಗಳು ಕೊಚ್ಚಿಕೊಂಡು ಹೋಗುತ್ತದೆ. ಅವರು ಹೇಳಿದ ರೀತಿಯಲ್ಲ ಕೊಚ್ಚಿಕೊಂಡು ಹೋದಂತಹ ಕಲ್ಲುಗಳನ್ನು ಮತ್ತೆ ತೆಗೆದುಕೊಂಡು ಬಂದು ಮತ್ತೆ ರೀ-ಎಸ್ಟಿಮೇಟ್ ಮಾಡುವಂತಹ ಕೆಲಸವಾಗುತ್ತಿದೆ. ಇದನ್ನು ಸ್ವಲ್ಪ ನೋಡಬೇಕು. ನಮ್ಮ ಕಾಲದಲ್ಲಿಯೂ ಆಗಲಿಲ್ಲ ಎನ್ನುವುದು ಬೇರೆ... ಆದರೆ ಇದರಲ್ಲಿ ಇರುವಂತಹ ಒಂದು ಭಾರೀ ಸಂಗತಿ ಏನೆಂದರೆ, ಇದು ಕೇಂದ್ರ ಸರ್ಕಾರದ ಸಹಯೋಗದೊಂದಿಗೆ ಎಡಿಬಿ ಪ್ರಾಜೆಕ್ಟ್‌ನಲ್ಲಿ ಇದು ಆಗುವಂಥದ್ದು. ಆದಕಾರಣ ಕೇಂದ್ರ ಸರ್ಕಾರಕ್ಕೆ ಕಡತಗಳು ಹೋದಾಗ ಬಾರಿ ನಿಧಾನ ವಾಗಿದ್ದನ್ನು ಹಿಂದಿನ ಎಲ್ಲಾ ದಿನಗಳಲ್ಲಿಯೂ ನೋಡಿದ್ದೇವೆ. ಕೇಂದ್ರ ದಲ್ಲಿ ಎನ್‌ಡಿಎ ಸರ್ಕಾರ ಇದ್ದಾಗ ಇರಬಹುದು, ಯುಪಿಎ ಸರ್ಕಾರ ಅಧಿಕಾರ ದಲ್ಲಿದ್ದಾಗ ಇರಬಹುದು. ಸಮುದ್ರ ಕೊರೆತವನ್ನು ತಡೆಗಟ್ಟುವುದಕ್ಕೆ ಕೇಂದ್ರ ಸರ್ಕಾರದ ಮೊರೆ ಹೋಗುವಲ್ಲಿ ಕರ್ನಾಟಕ ರಾಜ್ಯ ಯಾವಾಗಲೂ ಕೂಡ ಹಿಂದೆ ಇದೆ. ಇದನ್ನೆಲ್ಲಾ ತೆಗೆದುಕೊಳ್ಳುವುದರಲ್ಲಿ ಕೇರಳ ರಾಜ್ಯದವರು ನಂಬರ್ ಒನ್ ಆಗಿದ್ದಾರೆ. ಈಗ ಕೇರಳ ರಾಜ್ಯದಲ್ಲಿ ಸಮುದ್ರ ಕೊರೆತ ತಡೆ ಗೋಡೆಗಳನ್ನೆಲ್ಲಾ almost finish ಮಾಡಿದ್ದಾರೆ. ಈಗ ಮಹಾರಾಷ್ಟ ರಾಜ್ಯದವರು ಪ್ರಾರಂಭ ಮಾಡಿದ್ದಾರೆ ಅಲ್ಲಿಯೂ ಕೂಡ ಸಮುದ್ರ ಕೊರೆತಕ್ಕೆ ತಡೆಗೋಡೆಯಾಗುತ್ತಿದೆ. ಮಧ್ಯೆದಲ್ಲಿರುವಂತಹ ಕರ್ನಾಟಕ ರಾಜ್ಯದಲ್ಲಿ ಭಾರೀ ಒತ್ತು ಕೊಡುವಂತಹ ಕೆಲಸ ಕಾರ್ಯಗಳನ್ನು ಕರ್ನಾಟಕ ರಾಜ್ಯದಲ್ಲಿ

ಬಂದಂತಹ ಯಾವುದೇ ಸರ್ಕಾರಗಳು ಮಾಡಲಿಲ್ಲ. ಅದಕ್ಕೆ ನಾನು ಹೇಳುವುದೇನೆಂದರೆ ಈಗ ಈ ಖಾತೆಯನ್ನು ವಹಿಸಿಕೊಂಡಿರುವಂತಹ ಸಚಿವರು ಬಹಳ sharp ಆಗಿದ್ದಾರೆ ಎಲ್ಲಿಗೆ ಬೇಕಾದರೂ ತೂರಿಕೊಂಡು ಹೋಗುವಂತಹ ತಾಕತ್ತು ಹೊಂದಿದ್ದಾರೆ... ಅದುದರಿಂದ ಈ ಭಾರಿ ನಿಮ್ಮ ಒಂದು ತೂರುವಿಕೆಯಿಂದಾಗಿ ಅಲ್ಲಿ ತಡೆಗೋಡೆಗಳಾಗಬೇಕು. ಮಾನ್ಯ ಸಚಿವರು ಮೊನ್ನೆಯ ದಿವಸ ಆ ಸ್ಥಳಕ್ಕೆ ಭೇಟಿಯನ್ನು ಕೊಟ್ಟಿದ್ದರು. ನನಗೆ: ಅವರು ಎಲ್ಲಿಯಾದರು ಗಾಳಿಗೆ ತೂರಿಕೊಂಡು ಹೋಗಿಬಿಡುತ್ತಾರೆನೋ ಎನ್ನುವಂತಹ ಹೆದರಿಕೆ ಇತ್ತು. ಗಾಳಿ ಮಧ್ಯೆಯಲ್ಲಿಯೇ ಪಡುವರಿಯಲ್ಲಿ ಎಲ್ಲಾ ಕಡೆ ಹೋಗಿರುವುದರ ಬಗ್ಗೆ ಪತ್ರಿಕೆಯಲ್ಲಿ ವರದಿಯಾಗಿರುವುದನ್ನು ನೋಡಿದೆ. ಆದರೆ ಇದಕ್ಕೆ ಸ್ವಲ್ಪ ಒತ್ತು ಕೊಟ್ಟು, ಕೇಂದ್ರ ಸರ್ಕಾರದ ಬಳಿ ಹೋಗಿ ಒತ್ತಡವನ್ನು ಹಾಕಬೇಕಾಗುತ್ತದೆ. ಕೇಂದ್ರ ಸರ್ಕಾರದ ಬಳಿಗೆ ಶ್ರೀ ಕೆ.ಪ್ರತಾಪಚಂದ್ರ ಶೆಟ್ಟಿಯವರನ್ನು, ನಮ್ಮ ಮೀನುಗಾರಿಕೆ ಸಚಿವರಾದ ಶ್ರೀಅಭಯಚಂದ್ರ ಜೈನವರನ್ನು ಇವರನ್ನೆಲ್ಲಾ ಒಳಗೊಂಡಂತ ಟೀಂ ಮಾಡಿಕೊಂಡು ಕರೆದುಕೊಂಡು ಹೋದರೆ ಇದನ್ನು ಸ್ನಲ್ಪ ವೇಗವಾಗಿ ಇದನ್ನು ಮಾಡುವುದಕ್ಕೆ ಸಾಧ್ಯವಾಗಬಹುದು. ನಮ್ಮೆಲ್ಲಾ ಕಡಲ ತೀರದವರ ಆಶ್ರಯ ಏನೆಂದರೆ ಸರ್ಕಾರ ಬದಲಾಗಿದೆ. ಆಡಳಿತ ಬದಲಾಗಿದೆ. ಎಲ್ಲವೂ ಬದಲಾಗಿದೆ. ಆದರೆ ತಡೆಗೋಡೆ ಬದಲಾಗಿಯೇ ಇಲ್ಲ. ಅಲ್ಲಿ ಕೊಚ್ಚಿ ಹೋದಂತಹ ಕಲ್ಲುಗಳೇ ಪುನಃ ಅಲ್ಲಿ ತಂದು ಹಾಕಿದ್ದಾರೆಯೇ ವಿನಃ ಯಾವುದೇ ಬದಲಾವಣೆಯಾಗಿಲ್ಲ. ಇಲ್ಲಿ ಶಾಶ್ವತ ತಡೆಗೋಡೆಯಾಗದೇ ಇದು ಸರಿಹಾರವಾಗುವಂತಹ ಸಾಧತೆಗಳೇ ಇಲ್ಲ ಎನ್ನುವುದು ನನ್ನ ಸ್ವಂತ ಅಭಿಪ್ರಾಯವಾಗಿದೆ.

**ಶ್ರೀ ಬಾಬುರಾವ್ ಚಿಂಚನಸೂರು:–** ಮಾನ್ಯ ಸಭಾಪತಿಯವರೇ, ಮಾನ್ಯ ವಿರೋಧ ಪಕ್ಷದ ನಾಯಕರು ಹಾಗೂ ಮಾಜಿ ಮುಖ್ಯಮಂತ್ರಿಗಳೂ ಆದಂತಹ ಶ್ರೀ ಡಿ.ವಿ.ಸದಾನಂದಗೌಡರು ಹಾಗೂ ಮಾನ್ಯ ಕೆ.ಪ್ರತಾಪಚಂದ್ರ ಶೆಟ್ಟಿಯವರು ತಿಳಿಸಿರುವಂತಹ ರೀತಿಯಲ್ಲಿ ಆಗದಂತೆ ನಾವು ನೋಡಿಕೊಳ್ಳುತ್ತೇವೆ. ಅದನ್ನು ಅವಸರದಲ್ಲಿ ಸಮುದ್ರದ ನೀರಿನ ರಭಸವನ್ನು ತಡೆಯುವುದಕ್ಕಾಗಿ ಕಲ್ಲು ಮತ್ತು ಮರಳಿನ ಚೀಲಗಳನ್ನು ಹಾಕಲಾಗುತ್ತದೆ. ಈಗ

ಶಾಶ್ವತವಾದ ಕ್ರಮಗಳನ್ನು ತೆಗೆದುಕೊಳ್ಳುವುದಕ್ಕಾಗಿ ADB (Asian Development Bank) ಯವರು ನಮಗೆ 911 ಕೋಟಿ ರೂಪಾಯಿಗಳ Loan ನ್ನು ಕೊಟ್ಟಿದ್ದಾರೆ. ಅದಕ್ಕೆ ಮಂಜೂರಾತಿ ಕೂಡ ದೊರಕಿದೆ. ನಾವು ಸಮ ರೋಪಾದಿಯಲ್ಲಿ ಕೆಲಸ ಮಾಡಿ ಆ ರೀತಿಯ ತೊಂದರೆಗಳಾಗದಂತೆ ನೋಡಿಕೊಂಡು ಬಹಳ ಅಚ್ಚುಕಟ್ಟಾಗಿ ಕೆಲಸ ಮಾಡಿ ತೋರಿಸುತ್ತೇವೆ.

**ಶ್ರೀ ಕೆ.ಪ್ರತಾಪಚಂದ್ರ ಶೆಟ್ಟಿ–** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಈ ವಿಚಾರವಾಗಿ ಈಗಾಗಲೇ ಉತ್ತರ ಕೊಡಬೇಕೆನ್ನುವಂತಹ ಇಚ್ಛೆ ನಮಗಿಲ್ಲ. ಆದರೆ ಒಂದು ವಿಚಾರವಂತೂ ಸಷ್ಟವಾಗಿದೆ. ಯಾವ ಸಂದರ್ಭ ದಲ್ಲಿ ಏನನ್ನು ಹಾಕಬೇಕು, ಏತಕ್ಕೆ ಹಾಕಬೇಕೆಂಬ ಬಗ್ಗೆ ಸರ್ಕಾರಕ್ಕೆ ಸ್ಪಷ್ಟವಾದ ನಿಲುವಿರಬೇಕು. ಕಲ್ಲು ಹಾಕುವುದೇಕೆ, ಅಥವಾ ಮರಳಿನ ಚೀಲ ಹಾಕುವುದೇಕೆ ಎಂದು ಕೇಳಿದರೆ ಅದಕ್ಕೆ ಸರ್ಕಾರ ಸಮರ್ಪಕವಾದ ಉತ್ತರವನ್ನು ಕೊಡುವುದಿಲ್ಲ, ಈ ವಿಚಾರದಲ್ಲಿ ಸರ್ಕಾರಕ್ಕೇ ಅಸ್ಪಷ್ಟತೆ ಇರುವಾಗ ಸಮುದ್ರದ ಕೊರೆತವನ್ನು ಅವರು ಹೇಗೆ ತಡೆಗಟ್ಟುತ್ತಾರ? ಇಂತಹ ಅವ್ಯವಸ್ಥೆಗಳಿರುವು ದರಿಂದಾಗಿಯೇ ಸರ್ಕಾರಕ್ಕೆ ಇಷ್ಟು ವರ್ಷಗಳಿಂದ ಇನ್ನೂ ಶಾಶ್ವಕವಾದಂತಹ ಒಂದು. ತಡೆಗೋಡೆಯನ್ನು ನಿರ್ಮಿಸುವುದಕ್ಕಾಗುತ್ತಿಲ್ಲ. ನಾನೀಗ ಮಾತನಾಡುತ್ತಿ ರುವುದು ತಾತ್ಕಾಲಿಕವಾದಂತಹ ತಡೆಗೋಡೆಯ ಬಗ್ಗೆ. ADB ಯಿಂದ ಆಗಬೇಕಾಗಿರುವಂಥದ್ದು ಶಾಶ್ವತವಾದ ತಡೆಗೋಡೆಯಾಗಿದ್ದು, ಅದಕ್ಕೆ ಅದರದ್ದೇ ಆದಂತಹ ಮಾದರಿ ಇರುತ್ತದೆ. ಮತ್ತು ಅದು ಬಹಳ ಸ್ಪಷ್ಟವಾಗಿ ರುತ್ತದೆ. ಆದರೆ ತಾತ್ಕಾಲಿಕ ತಡೆಗೋಡೆಯ ನಿರ್ಮಾಣದಲ್ಲಿ ಇವೊತ್ತಿಗೂ ಸಹ ಅಸ್ಪಷ್ಟತೆ ಇರುವಂತಹ ಹಿನ್ನೆಲೆಯಲ್ಲಿ ಪ್ರತಿಯೊಂದು ಸರ್ಕಾರ ಕೂಡ ಒಂದಲ್ಲಾ ಒಂದು ರೀತಿಯ ಗೊಂದಲದಲ್ಲಿರತಕ್ಕಂತಹ ಹಿನ್ನೆಲೆಯಲ್ಲಿ ಈ ವಿಚಾರವನ್ನು ಪ್ರಸ್ತಾಪ ಮಾಡಿದ್ದೇವೆ. ಮಾನ್ಯ ಸಚಿವರು ಇದಕ್ಕೆ ಇವೊತ್ತೇ ಉತ್ತರ ಕೊಡಬೇಕಾಗಿಲ್ಲ. ನಾಳೆ ಅಥವಾ ಮತೊಂದು ದಿನವೇ ಉತ್ತರವನ್ನು ಕೊಡಲಿ. ಆದರೆ ಯಾವ ಕಾರಣಕ್ಕಾಗಿ ಮರಳಿನ ಚೀಲವನ್ನು ಹಾಕದೆ ಕಲ್ಲನ್ನು ಹಾಕಲಾಗುತ್ತಿದೆ ಅಥವಾ ಯಾವ ಕಾರಣಕ್ಕಾಗಿ ಕಲ್ಲನ್ನು ಹಾಕದೆ ಮರಳಿನ

ಚೀಲವನ್ನು ಹಾಕಲಾಗುತ್ತಿದೆ ಎಂಬುದರ ಬಗ್ಗೆ ಸರ್ಕಾರ ಸ್ಪಷ್ಟವಾದ ಮಾಹಿತಿಯನ್ನು ನೀಡಬೇಕೆಂದು ವಿನಂತಿಸುತ್ತೇನೆ.

**ಶ್ರೀ ಬಾಬುರಾವ್ ಚಿಂಚನಸೂರು:–** ಮಾನ್ಯ ಸಭಾಪತಿಯವರೇ, ಮರಳಿನ ಚೀಲ ಮತ್ತು ಕಲ್ಲನ್ನು ಹಾಕುವಂಥದ್ದು ತಾತ್ಕಾಲಿಕ ತಡೆಗೋಡೆ ಯನ್ನು ನಿರ್ಮಿಸುವುದಕ್ಕಾಗಿ, ಮಳೆ ನಿಂತ ನಂತರ ಇಲಾಖೆಯ ಮುಖಾಂತರ ಮಾನ್ಯ ಸದಸ್ಯರು ತಿಳಿಸಿರುವ ಅಂಶಗಳನ್ನು ಗಮನದಲ್ಲಿಟ್ಟುಕೊಂಡು ಅಚ್ಚು ಕಟ್ಟಾಗಿ ಶಾಶ್ವತ ತಡೆಗೋಡೆಯನ್ನು ನಿರ್ಮಿಸುವ ಬಗ್ಗೆ ಕ್ರಮ ಕೈಗೊಳ್ಳಲಾಗು ತ್ತದೆ. ಈಗ ಅವಸರದಲ್ಲಿ ಕಾಮಗಾರಿಯನ್ನು ಕೈಗೊಳ್ಳುವಂತಹ ಸಂದರ್ಭದಲ್ಲಿ ತಾತ್ಕಾಲಿಕ ತಡೆಗೋಡೆಯ ನಿರ್ಮಾಣಕ್ಕಾಗಿ ಮರಳಿನ ಚೀಲಗಳು ಮತ್ತು ಕಲ್ಲನ್ನು ಹಾಕಲಾಗಿದೆ. ಮಳೆ ನಿಂತ ನಂತರ ನಾವು ಮಾನ್ಯ ಮಾಜಿ ಮುಖ್ಯಮಂತ್ರಿಗಳಾದ ದ.ವಿ.ಸದಾನಂದಗೌಡರು ಮತ್ತು ಮಾನ್ಯ ಪ್ರತಾಪಚಂದ್ರ ಶೆಟ್ಟಿಯವರು ತಿಳಿಸಿರುವಂತೆ ಶಾಶ್ವತವಾದ ಕ್ರಮಗಳನ್ನು ಕೈಗೊಳ್ಳುತ್ತೇವ. ಈ ವಿಚಾರದಲ್ಲಿ ಆಸಕ್ತಿ ಇರುವಂತಹ ಎಲ್ಲ ಸದಸ್ಯರನ್ನೂ ಕರೆದುಕೊಂಡು ಹೋಗಿ ಅಲ್ಲ ಶಾಶ್ವತವಾದಂತಹ ತಡೆಗೋಡೆಯ ವ್ಯವಸ್ಥೆಯನ್ನು ಮಾಡಿಸುತ್ತೇವೆ.

**ಶ್ರೀ ಡಿ.ವಿ.ಸದಾನಂದಗೌಡ:–** ಮಾನ್ಯ ಸಭಾಪತಿಯವರೇ, ಈಗ ಉಲ್ಲಾಳದಲ್ಲಿ 131 ಕೋಟಿ ರೂಪಾಯಿಗಳ ವೆಚ್ಚದ ಕಾಮಗಾರಿಗೆ ಮಂಜೂ ರಾತಿ ಸಿಕ್ಕಿದ್ದು ಆ ಕಾಮಗಾರಿಗಳಲ್ಲಾ ಪ್ರಾರಂಭವಾಗಿವೆ. ಆ ವಿಚಾರ ಮಾನ್ಯ ಕೋಟ ಶ್ರೀನಿವಾಸ ಪೂಜಾರಿ ಅವರಿಗೂ ಗೊತ್ತಿದೆ. ಆ 131 ಕೋಟಿ ರೂಪಾಯಿಗಳಲ್ಲಿ 25 ಕೋಟಿ ರೂಪಾಯಿಗಳ ಕಾಮಗಾರಿಗೆ ಮಾತ್ರ ಟೆಂಡರ್ ಆಗಿದೆ. ನಮಗೆ ಸಂಶಯಗಳಿರುವುದು ಈ ವಿಚಾರದಲ್ಲಿ, ಆ 25 ಕೋಟಿ ರೂಪಾಯಿಗಳಿಗೆ ಮಾತ್ರ ಏಕೆ ಟೆಂಡರ್ ಆಯಿತು, ಉಲ್ಲಾಳದ ಒಂದೇ ಭಾಗದಲ್ಲಿ 131 ಕೋಟಿ ರೂಪಾಯಿಗಳ ಕಾಮಗಾರಿಗೆ ಸಂಬಂಧಿಸಿದಂತೆ ಒಮ್ಮೆಗೇ ಟೆಂಡರ್ ಪ್ರಕ್ರಿಯೆಗಳನ್ನು ಪೂರ್ಣಗೊಳಿಸಿ ಆ ಕೆಲಸಕಾರ್ಯಗಳನ್ನು ಮಾಡುವಂಥದ್ದಕ್ಕೆ ಚಾಲನೆ. ಕೊಡಬಹುದಾಗಿತ್ತು. ಆದರೆ... 25 ಕೋಟಿ ರೂಪಾಯಿಗಳ ಕಾಮಗಾರಿಗಳಿಗೆ ಮಾತ್ರ ಟೆಂಡರ್ ಕರೆಯಲು ಅಪ್ರೂವಲ್ ಕೊಡಲಾಗಿದೆ. ಹೀಗಾಗಿ ಪ್ರತಿ ವರ್ಷ ಕೈಗೊಂಡಂತಹ ಕಾಮಗಾರಿಗಳು

ಕೂಡ ಕಡಲ ಕೊರೆತದಿಂದಾಗಿ ಕೊಚ್ಚಿ ಹೋಗುತ್ತವೆ. ಮತ್ತೆ ಮುಂದಿನ ವರ್ಷ 25 ಕೋಟಿ ರೂಪಾಯಿಗಳ ಕಾಮಗಾರಿಗಳನ್ನು ಕೈಗೊಳ್ಳಲು ಟೆಂಡರ್ ಕರೆಯುವುದಕ್ಕೆ ಅಪ್ರೂವಲ್ ದೊರೆತಾಗ ಮತ್ತೆ ಅದನ್ನು ಮೇಲೆ ತಂದು ನಿಲ್ಲಿಸುವಂತಹ ಕಲಸ ನಡೆಯುತ್ತದೆ. ಮಾನ್ಯ ನೀರಾವರಿ ಸಚಿವರಿಗೆ ನಾನು ಹೇಳುತ್ತಿರುವಂತಹ ವಿಚಾರ ಅರ್ಥವಾಯಿತೆಂದು ಕಾಣುತ್ತದೆ. ಅದಕ್ಕೆ ಅವರು ಮೆಲ್ಲನೆ ನಗುತ್ತಿದ್ದಾರೆ. ಸಾಧಾರಣವಾಗಿ ಈ 1 ರೀತಿಯ ಪರಿಸ್ಥಿತಿಗಳು ನಡೆಯುತ್ತಿವೆ. ಅದಕ್ಕೆ ನಾನು ಹೇಳುವುದೇನೆಂದರೆ, ಇವೊತ್ತು ಆ ಉಲ್ಲಾಳದಲ್ಲಿ 131 ಕೋಟಿ ರೂಪಾಯಿಗಳ ಕಾಮಗಾರಿಗೆ ತಾಂತ್ರಿಕ ಅನುಮೋದನೆ, ಆಡಳಿತಾತ್ಮಕ ಮಂಜೂರಾತಿ ಎಲ್ಲವೂ ಆಗಿರುವಾಗ ಏಕಕಾಲದಲ್ಲಿ ಟೆಂಡರ್ ಮಾಡಿ, ಕೆಲಸವನ್ನು ಮುಗಿಸಿದ್ದರೆ ಆ ಕಾಮಗಾರಿ ಶಾಶ್ವತವಾಗಿ ಉಳಿಯುತ್ತಿತ್ತು. ಕೇವಲ 25 ಕೋಟಿ ರೂಪಾಯಿಗಳ ವೆಚ್ಚದ ಕಾಮಗಾರಿಗಳಿಗೆ ಮಾತ್ರ ಟೆಂಡರ್ ಮಾಡಿದರೆ ಆ ಕಾಮಗಾರಿ ಶಾಶ್ವತವಾಗಿ ಉಳಿಯುವುದಿಲ್ಲ. ಹೀಗಾಗಿ ಮತ್ತೆ ಮುಂದಿನ ವರ್ಷ ಕೂಡ ಆ ಕಾಮಗಾರಿಯನ್ನು ಕೈಗೊಳ್ಳಬೇಕಾದಂತಹ ಪರಿಸ್ಥಿತಿ ಬರುತ್ತದೆ. ಮರಳಿನ ಮೇಲೆ ಕಟ್ಟಿದಂತಹ ಕಾಮಗಾರಿಗಳು ಮತ್ತೆ ಕೊಚ್ಚಿ ಹೋಗುತ್ತವೆ. ಆದಕಾರಣ ಆ ರೀತಿ ಆಗಬಾರದು.

ಮಾನ್ಯ ವಸಂತ ವಿ.ಸಾಲಿಯಾನ ಅವರು ಮೀನುಗಾರಿಕಾ ಸಚಿವ ರಾಗಿದ್ದಂತಹ ಸಂದರ್ಭದಲ್ಲಿ ಅವರು ಯಾವ ತಂತ್ರಜ್ಞಾನವನ್ನು ಉಪಯೋಗ ಮಾಡಬೇಕೆಂಬುದನ್ನು ನಿರ್ಧರಿಸುವುದಕ್ಕೆ ನಾವು ಸುಮಾರು. 3 ವರ್ಷಗಳನ್ನು ತೆಗೆದುಕೊಂಡೆವು. ಈ ವಿಚಾರ ಸಚಿವರಾದ ಮಾನ್ಯ ಅಭಯಚಂದ್ರರವರಿಗೆ ಹಾಗೂ ಮಾನ್ಯ ಸದಸ್ಯರಾದ ಮಾನ್ಯ ಪ್ರತಾಪಚಂದ್ರ ಶೆಟ್ಟಿಯವರಿಗೂ ಗೊತ್ತಿರ ಬಹುದು. ಅವರು ಆ ಸಂದರ್ಭದಲ್ಲಿ ಯಾವ ತಂತ್ರಜ್ಞಾನವನ್ನು ಉಪಯೋಗ ಮಾಡಬೇಕು, ಭಾರತೀಯ ತಂತ್ರಜ್ಞಾನವನ್ನು ಉಪಯೋಗ ಮಾಡಬೇಕೆ ಅಥವಾ ನಾರ್ವೆಗೆ ಹೋಗಿ ಅಧ್ಯಯನ ಮಾಡಿಕೊಂಡು ಬಂದಿರುವುದರಿಂದ ಆ ತಂತ್ರಜ್ಞಾನವನ್ನು ಉಪಯೋಗ ಮಾಡಿಕೊಳ್ಳಬೇಕೆ ಎಂದು ನಿರ್ಧರಿಸುವಷ್ಟು ಹೊತ್ತಿಗೆ ಅವರ ಸಚಿವ ಸ್ಥಾನ ಕುಸಿಯಿತು, ಮತ್ತೊಬ್ಬರು ಸಚಿವರು ಬಂದರು, ಅವರು ಸಹ ಅದೇ ರೀತಿ ಅಧ್ಯಯನ ಮಾಡಿದ ಸ್ವಲ್ಪ ಸಮಯದ ನಂತರ

ಅವರ ಸಚಿವ ಸ್ಥಾನ ಕೂಡ ಕುಸಿಯಿತು. ಹೀಗಾಗಿ ಈ ತಡೆಗೋಡೆ ಎಲ್ಲಿಯೂ ಸಹ ಶಾಶ್ವತವಾಗಿ ಆಗಲಿಲ್ಲ. ಆದಕಾರಣ ಆ ಅಧಿಕಾರ ಹೇಗೆ ಕುಸಿಯುತ್ತದೆಯೋ ಹಾಗೆಯೇ ತಡೆಗೋಡೆ ಕೂಡ ಕುಸಿಯುತ್ತಿರು ವುದನ್ನು ನಾವು ನಿರಂತರವಾಗಿ ನೋಡುತ್ತಿದ್ದೇವೆ. ಅಧಿಕಾರ ಏನೇ ಆಗಲಿ, ಆದರೆ ತಡೆಗೋಡೆ ಮಾತ್ರ ಏನೂ ಆಗದೆ ಶಾಶ್ವತವಾಗಿರುವಂತೆ ನೋಡಿಕೊಳ್ಳಬೇಕಾಗುತ್ತದೆ ಎನ್ನುವುದಷ್ಟೇ ನಮ್ಮ ವಿನಂತಿಯಾಗಿದೆ.

**ಶ್ರೀ ಬಾಬುರಾವ್ ಚಿಂಚನಸೂರು:–** ಸನ್ಮಾನ್ಯ ಸಭಾಪತಿಯವರೇ, ನಾನು ಮಾನ್ಯ ಮಾಜಿ ಮುಖ್ಯಮಂತ್ರಿಯವರಿಗೆ ಈ ಸದನದಲ್ಲಿ ಆಶ್ವಾಸನೆ ಕೊಡುತ್ತಿದ್ದೇನೆ, ಈಗ ಶಾಶ್ವತ ಕಾಮಗಾರಿಗೆ ತಗಲಬಹುದಾದ ವೆಚ್ಚದ ಬಗ್ಗೆ ಅಂದಾಜು ಕಾರ್ಯ ನಡೆದಿದೆ, ಆ ಕಾಮಗಾರಿಯ ಅಂದಾಜು ವೆಚ್ಚಕ್ಕೆ. ಲೋಕೋಪಯೋಗಿ ಇಲಾಖೆಯ ಪ್ರಧಾನ ಕಾರ್ಯದರ್ಶಿಯವರು ಅನು ಮೋದನೆ ನೀಡಬೇಕಾಗುತ್ತದೆ. ಅವರು ಅದಕ್ಕೆ ಅನುಮೋದನೆ ನೀಡಿದ ಕೂಡಲೇ ಆ ಕೆಲಸ ಪ್ರಾರಂಭವಾಗುತ್ತದೆ.

## ಶಾಶ್ವತ ನೀರಾವರಿ ಯೋಜನೆಗಳ ಬಗ್ಗೆ

### 427; ಶ್ರೀ ವೈ ಎ. ನಾರಾಯಣಸ್ವಾಮಿ (ಶಿಕ್ಷಕರ ಕ್ಷೇತ್ರ)

ಅ) ಕೋಲಾರ, ಚಿಕ್ಕಬಳ್ಳಾಪುರ ಹಾಗೂ ಬೆಂಗಳೂರು ಗ್ರಾಮಾಂತರ ಜಿಲ್ಲೆಗಳಲ್ಲಿರುವ ಕೆರೆಗಳನ್ನು ತುಂಬಿಸಲು ಹಾಗೂ ಕೃಷಿ ಚಟುವಟಿಕೆಗಳಿಗೆ ನೀರುಣಿಸಲು ಸರ್ಕಾರ ರೂಪಿಸಿರುವ ಶಾಶ್ವತ ನೀರಾವರಿ ಯೋಜನೆಗಳಾವವು (ವಿವರ ನೀಡುವುದು)

ಆ) ಈ ಯೋಜನೆಗಳ ಅನುಷ್ಠಾನಕ್ಕಾಗಿ ತಗಲುವ ಅಂದಾಜು ವೆಚ್ಚ ಹಾಗೂ ಪೂರ್ಣಗೊಳಿಸಲು ಬೇಕಾಗುವ ಅವಧಿ ಎಷ್ಟು ?

### ಶ್ರೀ ಎಂ.ಬಿ.ಪಾಟೀಲ್ (ಜಲ ಸಂಪನ್ಮೂಲ ಸಚಿವರು)

ಅ) ಸರ್ಕಾರವು ಕೋಲಾರ, ಚಿಕ್ಕಬಳ್ಳಾಪುರ ಹಾಗೂ ಬೆಂಗಳೂರು ಗ್ರಾಮಾಂತರ ಜಿಲ್ಲೆಗಳಿಗೆ ಹಾಗೂ ಬೆಂಗಳೂರು ಕುಡಿಯುವ ನೀರನ್ನು

ಪೂರೈಸಲು ಹಾಗೂ ಅಂತರ್ಜಲ ಮರು ಪೂರಣಗೊಳಿಸಲು ಈ ಗ್ರಾಮಾಂತರ ಜಿಲ್ಲೆಗಳಲ್ಲಿರುವ ಕೆಳಗಿನ ಯೋಜನೆಗಳನ್ನು ಅನುಷ್ಠಾನ ಗೊಳಿಸಲು ಯೋಜಿಸಿದೆ:

1. ಪರಮಶಿವಯ್ಯ ವರದಿ ಆಧಾರಿತ ಯೋಜನೆ

2. ಎತ್ತಿನಹೊಳೆ ಯೋಜನೆ

ಎತ್ತಿನಹೊಳೆ ಯೋಜನೆಯಿಂದ ಲಭ್ಯವಾಗುವ ನೀರನ್ನು ರಾಜ್ಯದ ಪೂರ್ವಭಾಗದ ನೀರಾವರಿ ಯೋಜನೆಗಳಾವುವು ಕುಡಿಯುವ ನೀರಿನ ಅತೀವ ಅಭಾವ ಎದುರಿಸುತ್ತಿರುವ ಜಿಲ್ಲೆಗಳಿಗೆ ಕುಡಿಯುವ ನೀರು ಮತ್ತು ಅಂತರ್ಜಲ ಮರುಪೂರಣಕ್ಕಾಗಿ ಬಳಸಿಕೊಳ್ಳಲು ಯೋಜಿಸ ಲಾಗಿದೆ. ಆದರೆ ಪರಮಶಿವಯ್ಯ ವರಧಿ ಆಧಾರಿತ ಯೋಜನೆಯಿಂದ ದೊರೆಯಬಹುದಾದ ನೀರಿನಿಂದ ಬರಪೀಡಿತ ಜಿಲ್ಲೆಗಳ ಪ್ರದೇಶಗಳಿಗೆ ಕುಡಿಯುವ ನೀರು ಮತ್ತು ಅಂತರ್ಜಲ ಮರುಪೂರಣದ ಜೊತೆ ನೀರಾವರಿ ಸೌಲಭ್ಯ ಒದಗಿಸಲು ಸಹ ಪರಿಶೀಲಿಸಲಾಗುತ್ತಿದೆ.

ಪರಮಶಿವಯ್ಯ ವರದಿ ಆಧಾರಿತ ಯೋಜನೆ: ಶ್ರೀ. ಜಿ.ಎಸ್. ಪರಮ ಶಿವಯ್ಯರವರ. ವರದಿಯ ಆಧಾರದ ಮೇಲೆ ಪಶ್ಚಿಮಾಭಿಮುಖವಾಗಿ ಹರಿಯುವ ನದಿಗಳ ಜಲಾನಯನ : ಪ್ರದೇಶದ ನೀರನ್ನು ಬರಪೀಡಿತ ಬಯಲು, ಸೀಮೆ ಪ್ರದೇಶಗಳಿಗೆ ಹರಿಸಿ ಕುಡಿಯುವ ನೀರು. ಮತ್ತು ಅಂತರ್ಜಲ ಮರುಪೂರಣಕ್ಕಾಗಿ ಯೋಜಿಸಿದ್ದು, ಈ ಯೋಜನೆಯ ಅನುಷ್ಠಾನಕ್ಕಾಗಿ ಸರ್ಕಾರವ್ರ ಈಗಾಗಲೇ ವಿವರವಾದ ಯೋಜನಾ ವರದಿ ತಯಾರಿಸಲು ಈ ಕೆಳಕಂಡ ಕ್ರಮಗಳನ್ನು ಕೈಗೊಂಡಿರುತ್ತದೆ: :

1. ಮಾಲಾ ಕಾಲುವೆಗಳ ಸರ್ವೆ ಕಾರ್ಯವನ್ನು ಮೆ ಎನ್.ಆರ್.ಎಸ್.ಸಿ ಸಂಸ್ಥೆಯ ಮೂಲಕ ಕೈಗೊಳ್ಳಲಾಗಿದೆ.

2. ಉಳಿಕೆ ಸೇವಾ ಕಾಲುವೆ ಸಮೀಕ್ಷೆ ಮತ್ತು ವಿವರವಾದ ಯೋಜನಾ ವರದಿಯನ್ನು ತಯಾರಿಸುವ ಕೌಶರ್ಯವನ್ನು ನವದೆಹಲಿಯ ಮೆ॥

ಯು.ಆರ್.ಎಸ್. ಸ್ಕಾಟ್ ವಿಲ್ಸನ್ ಇಂಡಿಯಾ ಪ್ರೈ ಲಿಮಿಟೆಡ್ ಸಂಸ್ಥೆಗೆ ಟೆಂಡರ್ ಮೂಲಕ ವಹಿಸಲಾಗಿದೆ. ಸದರಿ ಸಂಸ್ಥೆಯು ನೀಡಿರುವ ಆರಂಭಿಕ ವರದಿಯು ಶ್ರೀ ಜಿ.ಎಸ್. ಪರಮಶಿವಯ್ಯನವರ ಅಧ್ಯಕ್ಷತೆಯ ತಜ್ಞರ ಸಮಿತಿಯ ಪರಿಶೀಲನೆಯಲ್ಲಿರುತ್ತದೆ.

**ಎತ್ತಿನಹೊಳೆ ಯೋಜನೆ:** ಪರಮಶಿವಯ್ಯ ವರದಿ ಆಧಾರಿತ ಯೋಜನೆಯ ಒಂದು ಭಾಗವಾಗಿರುವ ಎತ್ತಿನಹೊಳೆ ತಿರುವು ಯೋಜನೆಯನ್ನು ಶೀಘ್ರವಾಗಿ ಅನುಷ್ಠಾನಗೊಳಿಸಿ ಕುಡಿಯುವ ನೀರಿನ ತೀವ್ರ ಅಭಾವ ಎದುರಿಸುತ್ತಿರುವ ರಾಜ್ಯದ ಪೂರ್ವ ಭಾಗದ ಜಿಲ್ಲೆಗಳ ಈ ಸಮಸ್ಯೆಯನ್ನು ನಿವಾರಿಸಲು ಕರ್ನಾಟಕ ಸರ್ಕಾರವು ತನ್ನ ಆದೇಶ ಸಂಖ್ಯೆ: ಜಸಂಇ 203 ವಿಬ್ಯಾಇ 2012, ಬೆಂಗಳೂರು, ದಿನಾಂಕ 13/7/2012ರಲ್ಲಿ ಪಶ್ಚಿಮಾಭಿಮುಖವಾಗಿ ಹರಿಯುವ ನದಿಗಳ ಪ್ರವಾಹದ 24.01 ಟಿ.ಎಂ.ಸಿ ನೀರನ್ನು ಸಕಲೇಶಪುರದಿಂದ ರಾಜ್ಯದ ಪೂರ್ವಭಾಗಕ್ಕ ತಿರುಗಿಸುವ ರೂ.8323.50. ಕೋಟಿಗಳ ಎತ್ತಿನಹೊಳೆ ಯೋಜನೆಗೆ ಆಡಳಿತಾತ್ಮಕ ಅನುಮೋದನೆ ನೀಡಿದೆ. ಇದಲ್ಲದೆ, ಕರ್ನಾಟಕ ನೀರಾವರಿ ನಿಗಮದ ತಾಂತ್ರಿಕ ಉಪ ಸಮಿತಿಯಿಂದ ತೀರುವಳಿಯಾಗಿರುವ ರೂ.3269.50 ಕೋಟಿ ಮೊತ್ತದ ಹರವನಹಳ್ಳಿ ವಿತರಣಾ ಕೇಂದ್ರದವರೆಗಿನ ಏತ ಕಾಮಗಾರಿಗಳನ್ನು ಇ.ಪಿ.ಸಿ. / ಟರ್ನ್‌ಕೀ ಆಧಾರದ ಮೇಲೆ ಮೊದಲನೇ ಹಂತದಲ್ಲಿ ಕೈಗೆತ್ತಿಕೊಳ್ಳಲು ಸಹ ಅನುಮೋದನೆ ನೀಡಿದೆ. ಹರವನಹಳ್ಳಿ ವಿತರಣಾ ತೊಟ್ಟಿಯ ನಂತರದ ನೀರು ಸಾಗಾಣಿಕೆಯ ಎರಡನೆಯ ಹಂತದ ಕಾಮಗಾರಿ ಗಳನ್ನು ಯೋಜನೆಯ ವಿಸ್ತೃತ ಯೋಜನಾ ವರದಿಯನ್ನು ತಯಾರಿಸಿ, ಪರಿಷ್ಕೃತ ಮೊತ್ತಕ್ಕೆ ಸರ್ಕಾರದ ಅನುಮೋದನೆ ಪಡೆದು ನಂತರ ಕೈಗೆತ್ತಿಕೊಳ್ಳಲು ಸಹ ಸೂಚಿಸಿದೆ. ಅದರಂತೆ, ಸದರಿ ಯೋಜನೆಯ ವಿಸ್ತೃತ ಯೋಜನಾ ವರದಿಯನ್ನು ತಯಾರಿಸಲು ಸಮಾಲೋಚಕರನ್ನು ಟೆಂಡರ್. ಮೂಲಕ ನಿಗದಿಪಡಿಸಲಾಗಿದ್ದು. ಕಾಮಗಾರಿಯು ಪ್ರಗತಿ ಯಲ್ಲಿದೆ.

ಆ) ಪರಮಶಿವಯ್ಯ ವರದಿ ಆಧಾರಿತ ಯೋಜನೆಯ ವಿವರವಾದ ಯೋಜನಾ ತಯಾರಿಕೆಯ ನಂತರ, ತಜ್ಞರ ಸಮಿತಿಯ ಅಭಿಪ್ರಾಯ ಪಡೆದು, ಯೋಜನೆಯ ಅನುಷ್ಠಾನಕ್ಕಾಗಿ ತಗಲುವ ಅಂದಾಜು ವೆಚ್ಚ ಮತ್ತು ಯೋಜನೆಯನ್ನು ಪೂರ್ಣಗೊಳಿಸಲು ಬೇಕಾಗುವ ಅವಧಿ ಯನ್ನು ನಿರ್ಧರಿಸಲಾಗುವುದು.

ಎತ್ತಿನಹೊಳೆ ಯೋಜನೆಯ ಅನುಷ್ಠಾನಕ್ಕೆ ಸರ್ಕಾರವು ತನ್ನ ಆದೇಶ ಸಂ: ಜಸಂಇ.. 203 ವಿಬ್ಯಾಇ 2012, ಬೆಂಗಳೂರು ದಿನಾಂಕ – 13/7/2012ರಲ್ಲಿ ₹.8323.50 ಕೋಟಿ ಮೊತ್ತದ ಯೋಜನೆಗೆ ಆಡಳಿತಾತ್ಮಕ ಅನುಮೋದನೆ ನೀಡಿ, ಮೊದಲನೇ ಹಂತದಲ್ಲಿ ಹರವ ನಹಳ್ಳಿ ವಿತರಣಾ ಕೇಂದ್ರದವರೆಗಿನ ₹3269.50 ಕೋಟಿಗಳ ಮೊತ್ತ ಏತ ಕಾಮಗಾರಿಗಳನ್ನು (lift components) EPC/Turnkety Tender ಅಧಾರದ ಮೇಲೆ ತೆಗೆದುಕೊಳ್ಳಲು ಮತ್ತು ಈ ಕಾಮಗಾರಿಗಳನ್ನು ಕರ್ನಾಟಕ ನೀರಾವರಿ ನಿಗಮ ನಿಯಮಿತದ ತಾಂತ್ರಿಕ ಉಪ ಸಮಿತಿಯ ಜೊತೆಗೆ ಸಮಾಲೋಚಿಸಿ ಅನುಕೂಲಕರ ಪ್ಯಾಕೇಜ್‌ಗಳಲ್ಲಿ ಕೈಗೆತ್ತಿಕೊಳ್ಳಲು ಸೂಚಿಸಿದೆ.

ಇದರನ್ವಯ ಎತ್ತಿನಹೊಳೆ ಯೋಜನೆಯ ಮೊದಲ ಹಂತದ ಏತ ಕಾಮಗಾರಿಗಳ ಅನುಷ್ಠಾನಕ್ಕಾಗಿ 5 ಪ್ಯಾಕೇಜುಗಳಲ್ಲಿ ಟೆಂಡರ್ "ಆಹ್ವಾನಿ ಸಿದ್ದು, ಸದರಿ ಟೆಂಡರುಗಳ ಮೌಲ್ಯನಿರ್ಧಾರಣ ವರದಿಯನ್ನು ಮುಂಬ ರುವ ನಿಗಮದ ತಾಂತ್ರಿಕ ಉಪಸಮಿತಿಯ ಮುಂದೆ ಮಂಡಿಸಲು ಅಗತ್ಯ ಕ್ರಮ ಜರುಗಿಸಲಾಗುತ್ತಿದೆ. ಈ ಕಾಮಗಾರಿಗಳನ್ನು 5 ವರ್ಷ ಗಳಲ್ಲಿ ಪೂರ್ಣಗೊಳಿಸಲು ಯೋಜಿಸಲಾಗಿದೆ.

ಎರಡನೇ ಹಂತದ ನೀರು ಸಾಗಾಣಿಕಾ ವ್ಯವಸ್ಥೆಯ (conveyance component) ತನಿಖೆ, ಸರ್ವೇಕ್ಷಣೆ, ವಿನ್ಯಾಸ, ಯೋಜನಾ ವರದಿ ತಯಾರಿಸಲು ಖಾಸಗಿ ತಾಂತ್ರಿಕ ಸಲಹೆಗಾರರನ್ನು ಟೆಂಡರ್ ಮೂಲಕ ನೇಮಿಸ ಲಾಗಿದ್ದು, 250.00 ಕಿ.ಮೀ ಉದ್ದದ ಕಾಲುವೆಗಳ ತನಿಖೆ,

ಸರ್ವೇಕ್ಷಣೆ, ಮತ್ತು ಸಂಗ್ರಹಣಾ ಜಲಾಶಯದ ಸಾಮರ್ಥ್ಯದ ಸರ್ವೆ ಕೆಲಸ ಪ್ರಗತಿಯಲ್ಲಿದೆ.

**ಶ್ರೀ ವೈ.ಎ.ನಾರಾಯಣ ಸ್ವಾಮಿ:–** ಮಾನ್ಯ ಸಭಾಪತಿಯವರೇ, ಸರ್ಕಾರ ಈ ಭಾಗಕ್ಕೆ 2 ನೀರಾವರಿ ಯೋಜನೆಗಳನ್ನು ತರಬೇಕೆನ್ನುವಂತಹ ಯೋಚನೆಯನ್ನು ಮಾಡಿರುವುದಕ್ಕಾಗಿ ನಾನು ಮೊದಲು ಸರ್ಕಾರಕ್ಕೆ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ತಮಗೆಲ್ಲರಿಗೂ ಗೊತ್ತಿರುವಂತೆ ಕೋಲಾರ, ಚಿಕ್ಕಬಳ್ಳಾಪುರ, ಬೆಂಗಳೂರು ಗ್ರಾಮಾಂತರ, ತಿಪ್ಪಗೊಂಡನಹಳ್ಳಿ ಕೂಡ ಸೇರಿದಂತೆ, ಕರ್ನಾಟಕ ರಾಜ್ಯದಲ್ಲಿ ಏನಾದರೂ zero irrigation, zero surface water flowing ಯಾವುದಾದರೂ ಇದ್ದರೆ ಅದು ಕೋಲಾರ, ಚಿಕ್ಕಬಳ್ಳಾಪುರ ಮತ್ತು ಬೆಂಗಳೂರು ಗ್ರಾಮಾಂತರ ಎಂದು ಹೇಳಬಹುದು. ಆ 2 ಜಿಲ್ಲೆಗಳಲ್ಲಿನ ಒಟ್ಟು 2019 ಹಳ್ಳಿಗಳಲ್ಲಿ ಸುಮಾರು 1942 ಹಳ್ಳಿಗಳ ಜನತೆ ಇವೊತ್ತಿಗೂ ಫ್ಲೋರೈಡ್ ಮಿಶ್ರಿತ ನೀರನ್ನು ಕುಡಿಯುತ್ತಿದ್ದಾರೆ. ಆ ಭಾಗದಲ್ಲಿನ ಜನರು ಕುಡಿಯುತ್ತಿರುವುದು ನೀರನ್ನಲ್ಲ, ವಿಷವನ್ನು ಕುಡಿಯುತ್ತಿದ್ದಾರೆ. ತಮಗೆಲ್ಲಾ ಗೊತ್ತಿರುವಂತೆ ಆ ಭಾಗದಲ್ಲಿನ ತಾಯಿಯರ ಎದೆ ಹಾಲು ಕೂಡ ಫ್ಲೋರೈಡ್ ಮಿಶ್ರಿತವಾಗಿದೆ ಎಂದು ವರದಿಗಳು ಹೇಳುತ್ತಿವೆ. ಅದೇ ರೀತಿ. ಬೆಂಗಳೂರು ಮತ್ತು ಕೋಲಾರ ಡೈರಿಗಳ ಮುಖಾಂತರ ಸರಬರಾಜಾಗುತ್ತಿರುವಂತಹ ಹಾಲಿನಲ್ಲಿ ಕೂಡ ಫ್ಲೋರೈಡ್ ಅಂಶ ಇದೆ ಎನ್ನುವಂತಹ ವಿಚಾರವನ್ನು ನಾವು ಯಾರೂ ಮರೆಯಬಾರದು. ಈ ವಿಷಯದಲ್ಲಿನ ಗಂಭೀರತೆಯ ಬಗ್ಗೆ ನಾನು ಹೆಚ್ಚಿಗೆ ಹೇಳುವುದಕ್ಕೆ ಹೋಗುವುದಿಲ್ಲ, ಏಕೆಂದರೆ ಈಗಾಗಲೇ ಬಹಳಷ್ಟು ಸಂದರ್ಭಗಳಲ್ಲಿ ಈ ವಿಚಾರವನ್ನು ಹೇಳಿ–ಹೇಳಿ ನನಗೆ ಸಾಕಾಗಿ ಹೋಗಿದೆ. ಆ ಭಾಗದ ಜನರ ಬದುಕು, ಆ ಸಾಮಾಜಿಕ ವ್ಯವಸ್ಥೆಯನ್ನು ನಾನು ಕಣ್ಣಾರೆ ಕಂಡಿದ್ದೇನೆ.

ಮಾನ್ಯ ಸಭಾಪತಿಯವರೇ, ಈ ರಾಜ್ಯದಲ್ಲಿ ಹೆಚ್ಚಿನ ಅಂಗವಿಕಲರಿದ್ದರೆ ಅದು ಕೋಲಾರ, ಚಿಕ್ಕಬಳ್ಳಾಪುರ ಮತ್ತು ಬೆಂಗಳೂರು ಗ್ರಾಮಾಂತರದಲ್ಲಿ ಮಾತ್ರ ಎಂದು ಹೇಳಬಹುದು. ಈಗಾಗಲೇ ಸನ್ಮಾನ್ಯ ಎಸ್.ಎಂ.ಕೃಷ್ಣ ಅವರು ಮುಖ್ಯಮಂತ್ರಿಗಳಾಗಿದ್ದಂತಹ ಸಂದರ್ಭದಲ್ಲಿ ಕೋಲಾರ ಮತ್ತು ಚಿಕ್ಕಬಳ್ಳಾಪುರ

ಜಿಲ್ಲೆಯಲ್ಲಿ ಈ ರೀತಿ ಪ್ಲೋರೈಡಯುಕ್ತ ನೀರಿನ ಸೇವನೆಯಿಂದ ಅಂಗವಿಕಲತೆಗೆ ಒಳಗಾದವರನ್ನು ಕರೆತಂದು ವಿಧಾನಸೌಧದ ಮುಂದೆ ಒಂದು parade ಕೂಡ ಮಾಡಿಸಲಾಗಿತ್ತು.

ಆ ಸಂದರ್ಭದಲ್ಲಿಯೇ ಮಾನ್ಯ ಮುಖ್ಯಮಂತ್ರಿಯವರು ಡಾ ಪರಮಶಿವಯ್ಯನವರ ಸಮತಿಯನ್ನು ರಚಿಸಲು ಒಪ್ಪಿಕೊಂಡು 2000ನೇ ಇಸವಿಯಲ್ಲಿ ಅದನ್ನು DPR (Detailed Project Report) ಮಾಡುವುದಕ್ಕೆ ಅವಕಾಶ ಮಾಡಿಕೊಟ್ಟರು. ಸರ್ಕಾರ ನೀಡಿರುವಂತಹ ಲಿಖಿತ ಉತ್ತರವನ್ನು ನಾನು ಸಂಪೂರ್ಣವಾಗಿ ಓದಿದ್ದೇನೆ. ಈಗಾಗಲೇ ನಾವು 2013ನೇ ಇಸವಿಯಲ್ಲಿದ್ದೇವೆ, ಈ ವಿಚಾರದಲ್ಲಿ 2000 ದಿಂದ 2013ರವರೆಗಿನ ಪ್ರಗತಿ Nil ಏನೂ ಇಲ್ಲವೆಂದೇ ಹೇಳಬಹುದು. M/s N.R.S.C. ಸಂಸ್ಥೆ ಗೆ. ಈ ಜವಾಬ್ದಾರಿಯನ್ನು ಕೊಟ್ಟಿದ್ದು ನಿಜ ಎಂಬುದನ್ನು ಸರ್ಕಾರ ಕೂಡ ಒಪ್ಪಿಕೊಂಡಿದೆ. ಆದರೆ ಅದಕ್ಕೆ ಹಣವನ್ನು ಸಕಾಲದಲ್ಲಿ ಬಿಡುಗಡೆ ಮಾಡಿಲ್ಲವೆಂದು ಹೇಳಿ M/s N.R.S.C. ನವರು 2012ರಲ್ಲಿ ರಿಪೋರ್ಟ್ ಕೊಟ್ಟರು. ಅಂದರೆ 2000ನೇ ಇಸವಿಯಲ್ಲಿ ಪ್ರಾರಂಭವಾದ ಸಮಿತಿ 2012ರಲ್ಲಿ ವರದಿ ಸಲ್ಲಿಸಿದೆ. ಅನಂತರ ಉಳಿಕೆ ಸೇವಾ ಕಾಲುವೆ ಸಮೀಕ್ಷೆ ಮಾಡುವುದಕ್ಕೆ DPR ಮಾಡುವುದಕ್ಕೆ Scott Wilson ಗೆ. ಕೊಟ್ಟರಿ. 11 ತಿಂಗಳಾಯಿತು ಇನ್ನೂ ರಿಪೋರ್ಟ್ ಕೊಟ್ಟಿಲ್ಲ, ಅವರಿಗೂ ಸರ್ಕಾರ ಹಣವನ್ನು ಬಿಡುಗಡೆ ಮಾಡಿ ದೆಯೋ-ಇಲ್ಲವೋ ನನಗೆ ಗೊತ್ತಿಲ್ಲ... ನನ್ನ apprehension ಏನೆಂದರೆ, ಮೂಗಿಗೆ ತುಪ್ಪ ಸವರಿ ಸರ್ಕಾರ ನಮ್ಮನ್ನು ಒಂದು ರೀತಿ ಭ್ರಮಾ ಲೋಕ ದಲ್ಲಿಡಬಾರದು, ನಾವು ಸಹ ಈ ರಾಜ್ಯದ ಜನತೆಯೇ ಹೊರತು ಬೇರೆ ಯವರಲ್ಲ. ಸನ್ಮಾನ್ಯ ಸದಾನಂದಗೌಡರು ಮುಖ್ಯಮಂತ್ರಿಗಳಾಗಿದ್ದಾಗ ಎತ್ತಿನ ಹೊಳೆ ಯೋಜನೆಗೆ ಬೀಜವನ್ನು ನೆಟ್ಟು ಹೋಗಿದ್ದಾರೆ. ಅವರು 8232 ಕೋಟಿ ಗಳ ಅಂದಾಜು ವೆಚ್ಚದ ಯೋಜನೆಗೆ ಅನುಮೋದನೆ ನೀಡಿ 3209 ಕೋಟಿಗೆ lift portion ಏನಿದೆ, ಅದಕ್ಕೆ ಟೆಂಡರ್ ಕರೆಯಲಾಗಿದೆ. ಅದಕ್ಕಾಗಿ ನಾನು ಅದನ್ನು ಸ್ವಾಗತ ಮಾಡುತ್ತೇನೆ. ಆ ಟೆಂಡರನ್ನು ಬೇಗನೆ ಫೈನಲೈಸ್ ಮಾಡ ಬೇಕು. ಈ ಇಲಾಖೆಯ ಅಧಿಕಾರಿಗಳು ಜಿಡ್ಡುಗಟ್ಟಿ ಹೋಗಿದ್ದಾರೆ, ದಯವಿಟ್ಟು

ಅದನ್ನು ಸರಿಪಡಿಸಬೇಕು. I am sorry to give a statement like this. ಏಕೆಂದರೆ ಏನೋ ಒಂದು ರೀತಿ prejudiced ಆಗಿಬಿಟ್ಟಿದ್ದಾರೆ. ಅಲ್ಲಿರುವಂತಹ ಇಂಜಿನಿಯರ್‌ಗಳ egoistic ವ್ಯವಸ್ಥೆಯಲ್ಲಿ ಈ ಯೋಜನೆ ನಲುಗುತ್ತಿದ್ದು ಒಂದು ರೀತಿಯಲ್ಲಿ sick baby ಆಗಿಬಿಟ್ಟಿದೆ. ದಯವಿಟ್ಟು ಆ ರೀತಿ ಆಗುವುದಕ್ಕೆ ಬಿಡಬಾರದೆಂದು ನಾನು ವಿನಂತಿಸಿಕೊಳ್ಳುತ್ತೇನೆ.

ಮಾನ್ಯ ಸಭಾಪತಿಯವರೇ, ಎತ್ತಿನಹೊಳೆ ಯೋಜನೆಗೆ ಏನು ಟೆಂಡರ್ ಕರೆಯಲಾಗಿದೆ ಅದನ್ನು ಯಾವಾಗ ಅಂತಿಮಗೊಳಿಸಲಾಗುತ್ತದೆ ಎಂಬುದು ನನ್ನ ಮೊದಲನೆಯ ಪ್ರಶ್ನೆ ಇನ್ನು ಎರಡನೆಯದಾಗಿ ಡಾ.ಪರಮ ಶಿವಯ್ಯ ವರದಿ ಪ್ರಕಾರ ಪಶ್ಚಿಮ ಘಟ್ಟಗಳ ಮುಖಾಂತರ ಸಮುದ್ರಕ್ಕೆ ಸೇರು ತ್ತಿರುವಂತಹ ನೀರನ್ನು ಈ ಭಾಗಗಳಿಗೆ ತರುವಂತಹ ಒಂದು ಪ್ರಯತ್ನ ವನ್ನೇನು ಮಾಡಿದ್ದೀರಿ, ಮುಂದಿನ ವರ್ಷದ ಮಕರ ಸಂಕ್ರಮಣದ ವೇಳೆಗೆ ಅಂದರೆ ಜನವರಿ ತಿಂಗಳಿನ ವೇಳೆಗೆ DPR ಮಾಡಿ, ಸರ್ವೇ ಕಾರ್ಯವನ್ನು ಮುಗಿಸಿ, ಕಾಮಗಾರಿಯ ಆರಂಭಿಕ ಪೂಜೆ ಮಾಡುವುದಕ್ಕೆ ವಿಶೇಷವಾದ... ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಬೇಕೆಂಬುದು ನನ್ನ ವಿನಂತಿಯಾಗಿದೆ. ಮೂರನೆಯದಾಗಿ ಈ ಎರಡು ಯೋಜನೆಗಳನ್ನು ಸಮರೋಪಾದಿಯಲ್ಲಿ ಕೈಗೊಳ್ಳುವುದಕ್ಕೆ ಒಂದು ಟಾಸ್ಕಪೋರ್ಸ್ ರಚನೆ ಮಾಡಬೇಕು. ಮಾನ್ಯ ಸಚಿವರು ಎಲ್ಲಾ ಜಿಲ್ಲೆಗಳ ಬಗ್ಗೆಯೂ ಕಾಳಜಿಯನ್ನು ವಹಿಸಬೇಕಾಗುತ್ತದೆ. ಆ ಎರಡು ಯೋಜನೆಗಳನ್ನು ಆಗಿಂದಾಗ್ಗೆ review ಮಾಡಲು ಅಧಿಕಾರಸ್ಥರ ಒಂದು ಟಾಸ್ಕಪೋರ್ಸ್ ಮಾಡಿ ಅದರಲ್ಲಿ ಒಬ್ಬಿಬ್ಬರು ಜನಪ್ರತಿನಿಧಿಗಳನ್ನು ಸೇರಿಸಿ ಇದರ ವೇಗವನ್ನು ಹೆಚ್ಚಿಸಬೇಕೆಂಬುದು ನಮ್ಮೆಲ್ಲರ ಆಗ್ರಹವಾಗಿದೆ.

**ಶ್ರೀ ಡಿ.ಎಸ್.ವೀರಯ್ಯ (ವಿಧಾನಸಭಾ ಕ್ಷೇತ್ರ)–** ಮಾನ್ಯ ಸಭಾಪತಿ ಯವರೇ, ಇತ್ತೀಚೆಗೆ ಆ ಭಾಗದ ಎಲ್ಲ ಜನಪ್ರತಿನಿಧಿಗಳು ಪ್ರವಾಸ ಮಾಡಿ ಸಭೆ ಮಾಡಿದಂತಹ ಸಮಯದಲ್ಲಿ ಮಾನ್ಯ ಸಚಿವರು ಜನವರಿ ತಿಂಗಳಿನಲ್ಲಿ ಅದಕ್ಕೊಂದು ಶಂಕುಸ್ಥಾಪನೆ ಕಾರ್ಯಕ್ರಮವನ್ನು ಹಮ್ಮಿಕೊಳ್ಳುವುದಾಗಿ ತಿಳಿಸಿ ದ್ದಾರೆ. ಇದು ಬಹಳ ವರ್ಷಗಳಿಂದ ನೆನೆಗುದಿಗೆ ಬಿದ್ದಿರುವಂತಹ ಒಂದು ಸಮಸ್ಯೆಯಾಗಿರುವುದರಿಂದ ಕಾಲಮಿತಿಯಲ್ಲಿ ಈ ಯೋಜನೆಯನ್ನು ಪೂರ್ಣ

ಗೊಳಿಸಿ ಯಾವ ಜಿಲ್ಲೆಗಳು ಕುಡಿಯುವ ನೀರಿನಿಂದ ವಂಚಿತವಾಗಿವೆಯೋ ಆ ಜಿಲ್ಲೆಗಳಿಗೆ ಅನುಕೂಲ ಕಲ್ಪಿಸಬೇಕೆಂದು ನಾನು ಮಾನ್ಯ ಸಚಿವರಲ್ಲಿ ವಿನಂತಿ ಸುತ್ತೇನೆ.

**ಶ್ರೀ ಎಂ.ಬಿ.ಪಾಟೀಲ್:–** ಮಾನ್ಯ ಸಭಾಪತಿಯವರೇ, ಈಗಾಗಲೇ ಮಾನ್ಯ ಸದಸ್ಯರು ತಿಳಿಸಿರುವಂತೆ ಚಿಕ್ಕಬಳ್ಳಾಪುರ, ಕೋಲಾರ ಮತ್ತು ಬೆಂಗ ಳೂರು ಗ್ರಾಮಾಂತರ ಜಿಲ್ಲೆಗಳಲ್ಲಿ ಕುಡಿಯುವ ನೀರಿನ ವಿಚಾರದಲ್ಲಿ ಅತ್ಯಂತ ಗಂಭೀರವಾದ ಪರಿಸ್ಥಿತಿ ಇದ್ದು, ಕೆಲವು ಕಡೆಗಳಲ್ಲಿ ನೀರಿನಲ್ಲಿ ಫ್ಲೋರೈಡ್ ಅಂಶ ಕೂಡ ಕಂಡುಬಂದಿದೆ. ಹಾಗಾಗಿ ಸರ್ಕಾರ ಎತ್ತಿನಹೊಳೆ ಹಾಗೂ ಡಾ.ಪರಮ ಶಿವಯ್ಯ ವರದಿ ಆಧಾರಿತ ಯೋಜನೆ ಈ ಎರಡು ಯೋಜನೆಗಳನ್ನು ಕೂಡ ಬಹಳ ಗಂಭೀರವಾಗಿ ಪರಿಗಣಿಸಿದ್ದೇವೆ. ಎತ್ತಿನಹೊಳೆ ಯೋಜನೆ ಇವೊತ್ತಿನ ದಿವಸ advanced stage ನಲ್ಲಿದೆ, ಶೀಘ್ರದಲ್ಲಿಯೇ ಅದನ್ನು ನಾವು ಬೋರ್ಡ್ ಮೀಟಿಂಗ್‌ನಲ್ಲಿ ಮಂಡಿಸಿ ಎತ್ತಿನಹೊಳ ಯೋಜನೆ ಕಾಮಗಾರಿಗಳಿಗೆ ಟೆಂಡರ್ ಕರೆಯುವಂತಹ ಕೆಲಸಕ್ಕೆ ಮುಂದಾಗುತ್ತೇವೆ.

ಇನ್ನು ಎರಡನೆಯದಾಗಿ ಡಾ.ಪರಮಶಿವಯ್ಯನವರ ವರದಿ ಆಧಾರಿತ ಯೋಜನೆ ಏನಿದೆ ಇದರ ಬಗ್ಗೆ ಈಗಾಗಲೇ ಮಾನ್ಯ ಸದಸ್ಯರು ತಿಳಿಸಿರುವಂತೆ prejudices ಎಲ್ಲಾ ಇತ್ತು. ಅದಕ್ಕೆ ಸಂಬಂಧಿಸಿದಂತೆ DPR ಸಿದ್ಧಪಡಿಸಲು ಈ ಸಾಲಿನ ಆಯವ್ಯಯದಲ್ಲಿ 50 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದೇವೆ... ಡಾ.ಪರಮಶಿವಯ್ಯನವರಿಗೆ ಏನೇನು ಅನಾನುಕೂಲತೆಗಳಿದ್ದವು, ಅವರಿಗೆ ಬೇಕಾಗಿದ್ದಂತಹ supporting facilities ಅಂದರೆ ಇಂಜಿನಿಯರ್‌ಗಳು ಮತ್ತಿತರ ಸಿಬ್ಬಂದಿಯನ್ನು ಕೂಡ ನಾವು ಒದಗಿಸಿದ್ದೇವೆ.

ತಮ್ಮ ಮೂಲಕ ಗೌರವಾನ್ವಿತ ಸದಸ್ಯರಿಗೆ ತಿಳಿಸುವುದೇನೆಂದರೆ, ಎತ್ತಿನ ಹೊಳೆ ಮತ್ತು ಪರಮಶಿವಯ್ಯ ಯೋಜನೆಯನ್ನು ಅತ್ಯಂತ ಗಂಭೀರವಾಗಿ ಪರಿಗಣಿಸಿದ್ದೇವೆ. ಮಾನ್ಯ ಸದಸ್ಯರು ನೀಡಿರುವಂತಹ ಎಲ್ಲಾ ಸಲಹೆಗಳನ್ನು ಪರಿಗಣಿಸಿ ಎರಡೂ ಯೋಜನೆಗಳನ್ನು DPR Ready ಆದ ಕೂಡಲೆ ತಕ್ಷಣ ಕೈಗೆತ್ತಿಕೊಳ್ಳಲಾಗುವುದು. ಏಕೆಂದರೆ, ಅದು Garland Canal, Garland canal

yield ಮೇಲೆ Common grid canal design ಮಾಡಬೇಕಾಗುತ್ತದೆ ವಿನಃ ಸುಮ್ಮನೆ ಮಾಡುವುದಕ್ಕೆ ಆಗುವುದಿಲ್ಲ. Common grid canal ಎಲ್ಲಾ ಕಡೆ ಬರಬೇಕಾಗುತ್ತದೆ. Garland canal ನಲ್ಲಿ ಎಷ್ಟು cuses yield ಬರುತ್ತದೆ ಅದರ ಮೇಲೆ we have to design the common grid canal whether it is 10,0000, 20,000 or 25,000 cuses ಇವೆಲ್ಲವೂ ಅವಲಂಭಿತವಾಗಿದೆ. ಒಟ್ಟಾರೆ ಈ ಎರಡು ಯೋಜನೆಗಳನ್ನು ಬಹಳ ಗಂಭೀರವಾಗಿ ಪರಿಗಣಿಸಿದ್ದೇವೆ.

**ಶ್ರೀ ಡಿ.ವಿ.ಸದಾನಂದಗೌಡ:–** ಸನ್ಮಾನ್ಯ ಸಭಾಪತಿಯವರೇ, ಈ ಸರ್ಕಾರಕ್ಕೆ ಅಭಿನಂದನೆಯನ್ನು ಸಲ್ಲಿಸಲಿಚ್ಛಿಸುತ್ತೇನೆ. ಏಕೆಂದರೆ ಕಳೆದ ಸಲ ನಾವು ಬಜೆಟ್‌ನಲ್ಲಿ 800 ಕೋಟಿ ರೂ.ಗಳನ್ನು ಇಡಲಾಗಿತ್ತು. ಹೊಸ ಸರ್ಕಾರ ಇದಕ್ಕೆ 1000 ಕೋಟಿ ರೂ.ಗಳನ್ನು ಮೀಸಲಿಟ್ಟು ತಕ್ಷಣ ಈ ಯೋಜನೆಯನ್ನು ಕೈಗೆತ್ತಿಕೊಳ್ಳಬೇಕು ಎಂದು ಹೇಳಿರುವುದು ಈ ಭಾಗದ ನಾಲ್ಕು ಜಿಲ್ಲೆಗಳಿಗೂ ಕೂಡ ಇದನ್ನು ಶೀಘ್ರವಾಗಿ ಕೊಡಬೇಕು ಎಂಬುದು ಸರ್ಕಾರದ ಭಾವನೆ ಇದೆ. ಅದಕ್ಕೆ ಸರಿಯಾಗಿ ಇತ್ತೀಚೆಗೆ ಮಾನ್ಯ ಮುಖ್ಯಮಂತ್ರಿಗಳು ಕೋಲಾರಕ್ಕೆ ಹೋದಾಗ ಹೇಳಿರುವಂಥದ್ದು ಅತ್ಯಂತ ಸ್ವಾಗತಾರ್ಹ. ಈಗಾಗಲೇ ತಾವು ಹೇಳಿದ ರೀತಿಯಲ್ಲಿ ಶೀಘ್ರವಾಗಿ ಅನುಷ್ಠಾನ ಮಾಡುವಂಥ ನಿಮ್ಮಪ್ರಯತ್ನ ಯಶಸ್ವಿಯಾಗಲಿ. ಅದರಲ್ಲೂ ಆ ಭಾಗದವರೇ ಆದಂತಹ ಮಾನ್ಯ ನಾರಾಯಣಸ್ವಾಮಿ, ಮಾನ್ಯ ವೀರಯ್ಯನವರು ಈ ಯೋಜನೆಯ ಬಗ್ಗೆ ಬಹಳ ಕಾತುರರಾಗಿದ್ದಾರೆ. ಎರಡನೆಯದಾಗಿ,

ಡಾ. ಪರಮಶಿವಯ್ಯನವರ ವರದಿಯಲ್ಲಿ ನೇತ್ರಾವತಿ ತಿರುವು ಯೋಜನೆ ಬಗ್ಗೆ ಹೇಳಿದ್ದಾರೆ. ಇದರ ಬಗ್ಗೆ ಕರಾವಳಿ ಭಾಗದ ಎರಡು ಮೂರು ಜಿಲ್ಲೆಯ ಜನರು ಆತಂಕಗೊಂಡಿದ್ದಾರೆ. ಇವತ್ತು ಪರಿಸರ ' ಅಸಮ ತೋಲನ ಆಗುವಂಥದ್ದು, ಪಶ್ಚಿಮಘಟ್ಟದ ಮೇಲೆ ಯಾವುದೇ ರೀತಿಯಲ್ಲಿ ತೊಂದರೆ ಆಗುವಂಥದ್ದರ ಬಗ್ಗೆ ನನಗೆ. ಮಾತ್ರವಲ್ಲ. ಮಾನ್ಯ ರಮಾನಾಥರೈ ರವರಿಗೆ, ಮಾನ್ಯ ಅಭಯಚಂದ್ರರವರಿಗೆ ಹಾಗೂ ನಮ್ಮ ಭಾಗದ ಎಲ್ಲಾ ಸಚಿವರೆಲ್ಲರಿಗೂ ತಿಳಿದಿದೆ. ಎಲ್ಲೋ ಒಂದು ಕಡೆ ಇಡೀ ಪಶ್ಚಿಮಘಟ್ಟದಲ್ಲಿಯೇ ನೀವು trenches ತೆಗೆದು ಅಲ್ಲಿ ಒಂದು ರೀತಿಯಲ್ಲಿ ನೀರನ್ನು ದಾಸ್ತಾನು

ಮಾಡಿ ಗುರುತ್ವಾಕರ್ಷಣೆಯ ಮುಖಾಂತರ ಇದನ್ನು ತರುತ್ತೇವೆಂದು ಹೇಳು ವಂಥ ಯೋಜನೆಗಳಿವೆ. ಇದರ ಬಗ್ಗೆ ನನ್ನ ಬಳಿ ಪೂರ್ಣ ಮಾಹಿತಿ ಇಲ್ಲ. ನನಗೆ ಡಾ.ಪರಮಶಿವಯ್ಯನವರು ಕೊಟ್ಟಿರುವಂತಹ ವರದಿಯ ಬಗ್ಗೆ ಪೂರ್ಣ ಮಾಹಿತಿ ಇಲ್ಲ. ಆದರ ಎಲ್ಲಾ ಕಡೆಯಿಂದಲೂ ನಾನು ತಿಳಿದಿರುವ ಪ್ರಕಾರ ಇದರಿಂದಾಗಿ ನಮ್ಮ ಪಶ್ಚಿಮಘಟ್ಟದ ಮೇಲೆ ತೀವ್ರವಾದಂತಹ ಪರಿಣಾಮ ಬೀರುತ್ತದೆ. ಈಗಾಗಲೇ ಪಶ್ಚಿಮಘಟ್ಟದ ಮೇಲೆ ಬೇರೆ ಬೇರೆ ರೀತಿಯಲ್ಲಿ ಆದಂತಹ ಪರಿಣಾಮಗಳು ಪರಿಸರವನ್ನು ಅಸಮತೋಲನಕ್ಕೆ ತೆಗೆದುಕೊಂಡು ಹೋಗಿದೆ. 2,000 ಟಿಎಂಸಿ ಗಿಂತ ಹೆಚ್ಚು ನೀರು ಮಳೆಗಾಲದಲ್ಲ ಸಮುದ್ರ ಸೇರುವಂಥದ್ದು, ಕರ್ನಾಟಕ ಬೇರೆ ಬೇರೆ ಭಾಗದಲ್ಲಿ ಬರ ಇರುವಂಥದ್ದು ಇದೆಲ್ಲದ್ದಕ್ಕೂ ನಮ್ಮ ಸಹಮತವಿದೆ. ಅವರೆಲ್ಲರಿಗೂ ನೀರು ಕೊಡಬೇಕು ಎಂಬುದು ನಮ್ಮೆಲ್ಲರ ಆದ್ಯತೆ ಕೂಡ ಆಗಿದೆ. ಆದರೆ, ಯಾರಿಗೊ ನೀರು ಕೊಡುವುದರಿಂದ ಕರಾವಳಿಯ ಮೂರು ಜಿಲ್ಲೆಗಳು ನಶಿಸಿ ಹೋಗುವುದು, ಇವತ್ತು ಪಶ್ಚಿಮ ಘಟ್ಟದಿಂದ ಹರಿಯುವ ನೀರು ಸಮುದ್ರ ಸೇರುವುದರಿಂದ ಅಲ್ಲಿ ಮೀನಿನ ಉತ್ಪತ್ತಿ ಆಗುತ್ತಿದೆ ಎಂದು ತಜ್ಞರು ಹಾಗೂ ಮೀನುಗಾರರು ಹೇಳಿದ್ದಾರೆ. ಇವತ್ತು ಎಲ್ಲಿಯಾದರು ಪಶ್ಚಿಮಘಟ್ಟದ ಮೇಲೆ ಭಾರೀ ಪ್ರಹಾರ ಗಳಾದರೆ ನಮ್ಮ ರಾಜ್ಯದ ಸಮುದ್ರದ ಕರಾವಳಿಯಲ್ಲಿ ಎಲ್ಲಾ ಮೀನಿನ ಸಂತತಿಗಳು ನಶಿಸಿ ಹೋಗುತ್ತವೆ. ಎರಡನೆಯದಾಗಿ ಅಲ್ಲಿರುವಂತಹ ವೈಪ ರೀತ್ಯ ವ್ಯತ್ಯಯಗಳು ಆ ಭಾಗದ ಸರ್ವನಾಶಕ್ಕೆ ಕಾರಣೀಭೂತವಾಗುವಂತಹ ಭಾರೀ ದೊಡ್ಡ ಆತಂಕಗಳು ಇವೆ. ತಮಗೆ ತಿಳಿದಿರಬಹುದು ನಮ್ಮ ಧರ್ಮಸ್ಥಳದ ಧರ್ಮಾಧಿಕಾರಿಗಳಾದ ಶ್ರೀ ವಿರೇಂದ್ರ ಹೆಗಡೆಯವರು ಇರಬ ಹುದು. ಬಾಕಿಯವರು ಇರಬಹುದು, ಅವರು ನೀರು ಕೊಡುವುದಕ್ಕೆ ನಮ್ಮ ಅಭ್ಯಂತರವಿಲ್ಲವೆಂದು ಹೇಳಿದ್ದಾರೆ. ಆದರೆ ಅದರ ಕ್ರಿಯಾ ಯೋಜನೆಯನ್ನು ಮಾಡುವಂಥ ಯಾವುದೇ ಸಂದರ್ಭದಲ್ಲಿಯೂ ಸಹ ಆ ಮೂರು ಜಿಲ್ಲೆಯ ಜನರನ್ನು ವಿಶ್ವಾಸಕ್ಕೆ ತೆಗೆದುಕೊಂಡು ಆ ಮೂರು ಜಿಲ್ಲೆಯಲ್ಲಿರುವ ಪಶ್ಚಿಮ ಘಟ್ಟಕ್ಕೆ ಯಾವುದೇ ಹಾನಿಯಾಗದ ರೀತಿಯಲ್ಲಿ ಸಮತೋಲನವನ್ನು ಕಾಪಾಡು ವುದಕ್ಕೆ ಪ್ರಥಮ ಆದ್ಯತೆಯನ್ನು ಕೊಟ್ಟು ಮಾಡಬೇಕು ಎಂಬುದು ನನ್ನ

ಆಗ್ರಹ. ಇಲ್ಲವೆಂದರೆ ಆ ಭಾಗದಲ್ಲಿರುವಂತಹ ಯಾವ ಮೀನುಗಾರರು ಸಹ ಬದುಕುವುದಕ್ಕೆ ಸಾಧ್ಯವಿಲ್ಲದಿರುವಂತಹ ಪರಿಸ್ಥಿತಿ ನಿರ್ಮಾಣವಾಗುತ್ತದೆಂದು ತಮ್ಮ ಮೂಲಕ ಸರ್ಕಾರಕ್ಕೆ ತಿಳಿಸಲಿಚ್ಛಿಸುತ್ತೇನೆ.

**ಶ್ರೀ ಎಂ.ಬಿ.ಪಾಟೀಲ್:–** ಸನ್ಮಾನ್ಯ ಸಭಾಪತಿಯವರೇ, ಎತ್ತಿನಹೊಳೆ ಯೋಜನೆ ಏನಿದೆ ಅದು advanced stage ನಲ್ಲಿದೆ. ಅದಕ್ಕೆ ಮಾನ್ಯ ಸದಾನಂದಗೌಡರು ಈ ಹಿಂದೆ ಮುಖ್ಯಮಂತ್ರಿಯಾಗಿದ್ದಂತಹ ಸಂದರ್ಭದಲ್ಲಿ ಅದಕ್ಕೆ clearance ಸಹ ಕೊಟ್ಟಿದ್ದಾರೆ. ನಾವು ಎತ್ತಿನಹೊಳೆ ಯೋಜನೆಯನ್ನು ಬಹಳ ವೇಗವಾಗಿ ಕೈಗೆತ್ತಿಕೊಂಡಿದ್ದೇವೆ. ಪ್ರಥಮ ಹಂತದಲ್ಲಿ 3,269.50 ಕೋಟಿ ರೂಪಾಯಿಗಳನ್ನು ಈ ಯೋಜನೆಯ ಅನುಷ್ಠಾನಕ್ಕಾಗಿ ಬಿಡುಗಡೆ ಮಾಡಲಾಗಿದೆ. ಎರಡನೆಯದಾಗಿ, concerns ಬಗ್ಗೆ ಮಾಜಿ ಮುಖ್ಯಮಂತ್ರಿ ಗಳಾದಂತಹ ಮಾನ್ಯ ಸದಾನಂದಗೌಡರು ಹೇಳಿದ್ದಾರೆ. ಆ ಎಲ್ಲಾ concerns ನಾವು ಇಟ್ಟುಕೊಳ್ಳುತ್ತಿದ್ದೇವೆ. ಒಟ್ಟಾರೆ ನಾವು DPR ಸಿದ್ಧ ಪಡಿಸುವುದಕ್ಕೆ we are involving five national experts ಇವತ್ತಿನ ದಿವಸ ಇಲ್ಲ ಸ್ವಲ್ಪ trust deficit ಆಗಿರುವುದನ್ನು ನಾವು ಕಾಣುತ್ತಿದ್ದೇವೆ. ಡಾ.ಪರಮಶಿವಯ್ಯನವರ ವರದಿ ಇರಬಹುದು, ನಮ್ಮ ಸ್ಥಳೀಯ ಹಿರಿಯ ತಾಂತ್ರಿಕ ತಜ್ಞರು ಅಥವಾ ಇಲಾಖೆಗಳಿರಬಹುದು. ಅದನ್ನು ನಾನು ಒಪ್ಪಿಕೊಳ್ಳುತ್ತೇನೆ. ಆದುದರಿಂದ 5 ಜನರನ್ನು ಅಂದರೆ ರಾಷ್ಟ್ರೀಯ ಮತ್ತು ಅಂತರಾಷ್ಟೀಯ ಮಟ್ಟದ technical experts, water resource experts ಅವರೆಲ್ಲರನ್ನೂ ಕರೆದುಕೊಂಡು ತಮ್ಮ concern ಏನಿದೆ, ಆ concern ನ address ಮಾಡಿ ಯಾವುದಕ್ಕೂ ತೊಂದರೆ ಬರದಂತೆ ಈ ಮೂರು ಜಿಲ್ಲೆಯ ಜನರನ್ನು ವಿಶ್ವಾಸಕ್ಕೆ ತೆಗೆದುಕೊಂಡು ಆ ಕೆಲಸವನ್ನು ಮಾಡುತ್ತೇವೆಂದು ತಮ್ಮ ಮೂಲಕ ಮಾನ್ಯ ಸದಸ್ಯರಿಗೆ ತಿಳಿಸಲಿಚ್ಛಿಸುತ್ತೇನೆ.

**ಶ್ರೀ ವೈ.ಎ.ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ಸದನದ ಮೂಲಕ ತಪ್ಪು ಸಂದೇಶ ಹೋಗಬಾರದು. ಅಲ್ಲಿ 2,000 ಟಿ.ಎಂ.ಸಿ ನೀರು ಏನು ವ್ಯರ್ಥವಾಗಿ ಹೋಗುತ್ತಿದೆ ಅದನ್ನು technology ಉಪಯೋಗಿಸಿ

ತರಬೇಕು. ಅದು ಬಿಟ್ಟು ಈ ರೀತಿ ಮಾತನಾಡಿದರೆ ಹೇಗ? ನಾವು ಬದುಕುವುದು ಬೇಡವೆ? ಜನರಿಗೆ ತಪ್ಪು ಸಂದೇಶ ಹೋಗಬಾರದು.

**ಶ್ರೀ ಎಂ.ಬಿ.ಪಾಟೀಲ್:–** ಸನ್ಮಾನ್ಯ ಸಭಾಪತಿಯವರೇ, ಸರ್ಕಾರ ಎತ್ತಿನಹೊಳೆ ಹಾಗೂ ಡಾ.ಪರಮಶಿವಯ್ಯ ಆಧಾರಿತ ಎರಡು ಯೋಜನೆ ಗಳನ್ನು ಅತ್ಯಂತ ಗಂಭೀರವಾಗಿ ಪರಿಗಣಿಸುತ್ತಿದೆ. ಆ ಎರಡೂ ಯೋಜನೆ ಗಳನ್ನು ಜಾರಿಗೆ ತರುವುದಕ್ಕೆ ಏನೇನು ಪ್ರಯತ್ನ ಮಾಡಬೇಕು, ಎಲ್ಲ concerns address ಮಾಡಿ ಎರಡೂ ಯೋಜನೆಗಳನ್ನು ಜಾರಿಗೆ ತರುವುದಕ್ಕೆ ನಮ್ಮ ಸರ್ಕಾರ ಬದ್ಧವಾಗಿದೆ ಎಂದು ಮಾನ್ಯ ಸದಸ್ಯರಿಗೆ ತಿಳಿಸಲಿಚ್ಛಿಸುತ್ತೇನೆ.

**ಶ್ರೀ ಕೃಷ್ಣಾ ಬೈರೇಗೌಡ:–** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ವಿರೋಧ ಪಕ್ಷದ ನಾಯಕರು ಹೇಳಿದಂತೆ. ನಾನು ಇನ್ನೊಂದು ಪೂರಕವಾಗಿ ಭರವಸೆಯನ್ನು ಕೊಡುವುದೇನೆಂದರೆ, ಪಶ್ಚಿಮಮುಖವಾಗಿ ಹರಿಯುವಂತಹ ನದಿಗಳಲ್ಲಿ ಸುಮಾರು 2.000 ಟಿಎಂಸಿ ಗಿಂತ ಹೆಚ್ಚು ನೀರು ಸಮುದ್ರ ಸೇರುತ್ತಿದೆ. ಈ 2,000 ಟಿಎಂಸಿ ನೀರನ್ನು ಯಾರೂ ಸಹ ಬದಲಾವಣೆ ಮಾಡುವುದಕ್ಕೆ ಆಗುವುದಿಲ್ಲ. ವಿಚಾರ ಇರುವಂಥದ್ದು ಸುಮಾರು 100 ರಿಂದ 150 ಟಿಎಂಸಿ ನೀರು ಮಾತ್ರ. ಹಾಗಾಗಿ ತಮಗೆ ನಾನು ಸರ್ಕಾರದ ಪರವಾಗಿ ವಿಶ್ವಾಸ ತುಂಬಿಸುವಂತಹ ಪ್ರಯತ್ನ ಏನೆಂದರೆ ಅಲ್ಲ ಮೀನುಗಾರರಿಗೆ ತೊಂದರೆ ಆಗುವಂತಹ ಪ್ರಶ್ನೆ ಉದ್ಭವಿಸುವುದಿಲ್ಲ. ಮೊನ್ನೆ ದಿವಸ ಒಂದೇ ಸಲ 2.000 ಟಿಎಂಸಿ ನೀರು ಸಮುದ್ರದ ಪಾಲಾಗಿದೆ. ಹಾಗಾಗಿ ಮೀನು ಉತ್ಪಾದ ನೆಗೆ ಯಾವುದೇ ತೊಂದರೆ ಆಗುವುದಿಲ್ಲ. ಆಗುವುದಕ್ಕೂ ಬಿಡುವುದಿಲ್ಲ. Sufficient ನೀರು ಸಮುದ್ರ ಸೇರುವುದರಿಂದ ಮೇಲ್ಪಟ್ಟದ ನೀರಿನ ಪದರ ಬೆಚ್ಚಗೆ ಇರುವುದರಿಂದ ಮೀನಿನ ಉತ್ಪಾದನೆಗೆ ಅನುಕೂಲವಾಗುತ್ತದೆ ಎಂಬುದು ನಿಮ್ಮ ವಾದ. ಅದಕ್ಕೆ ತೊಂದರೆ ಆಗದಂತೆ ಮಾಡುವುದಕ್ಕೆ ಅವಕಾಶವಿದೆ. ಎರಡನೆಯದಾಗಿ, ಇದು ಪಶ್ಚಿಮಮುಖವಾಗಿ ಹರಿಯುವಂತಹ ಎಲ್ಲಾ ನೀರನ್ನು ತಿರುಗಿಸುವಂತಹ ಕಾರ್ಯಕ್ರಮ ಅಲ್ಲವೇ ಅಲ್ಲ. ಮೇಲ್ಮಟ್ಟದ ಸ್ವಲ್ಪ ಪ್ರಮಾಣದ ನೀರನ್ನು ಉಪಯೋಗಿಸಿಕೊಳ್ಳುವುದು ಮಾತ್ರ ಆಗಿದೆ. ಮೂರನೆಯದಾಗಿ ಕರಾವಳಿ ಭಾಗದಲ್ಲಿ ಮೂರು ಜಿಲ್ಲೆಗೆ ಕುಡಿಯುವ ನೀರಿನ

ಯೋಜನೆಯನ್ನು ಪ್ರಥಮವಾಗಿ ಮಾಡಬೇಕು ಎನ್ನುವಂತಹ ಸಂಕಲ್ಪ ಮಾನ್ಯ ಮುಖ್ಯಮಂತ್ರಿಯವರಿಗೆ ಇದೆ. ಕರಾವಳಿ ಭಾಗದ ಜನರ ಅವಶ್ಯಕತೆಯನ್ನು ಪೂರೈಸುವುದರಲ್ಲಿ ನಮ್ಮ ಭಾಗದಿಂದ ಸಂಪೂರ್ಣ ಸಹಕಾರ ಇದೆ.

**ಶ್ರೀ ಡಿ.ವಿ.ಸದಾನಂದಗೌಡ:–** ಸನ್ಮಾನ್ಯ ಸಭಾಪತಿಯವರೇ, ನಮ್ಮ ರಾಜ್ಯದಲ್ಲಿ ಪಶ್ಚಿಮ ವಾಹಿನಿಯಾಗಿ ಹರಿಯುವಂತಹ ಎಲ್ಲಾ ನದಿಗಳ ನೀರನ್ನು ಕೊಡುವುದಕ್ಕೆ ನಮ್ಮ ಯಾರ ಅಭ್ಯಂತರವು ಇಲ್ಲ. I am stressing it again ನೀವು ಗೊಂದಲ ಮಾಡಿಕೊಂಡಿದ್ದೀರಿ. ನಮ್ಮ ಸಮಸ್ಯೆ ಅದಲ್ಲ, ನಮ್ಮ ಸಮಸ್ಯೆ ಏನೆಂದರೆ, ಆ ನೀರನ್ನು ಈ ಕಡೆಗೆ ತಿರುಗಿಸುವಂತಹ ಸಂದರ್ಭದಲ್ಲಿ ಪರಿಸರಕ್ಕೆ ಹಾನಿ ಆಗದಂತೆ ಜಾಗರೂಕತೆಯನ್ನು ಸರ್ಕಾರ ವಹಿಸಿಕೊಳ್ಳಬೇಕು ಎಂದು ಹೇಳುವಂಥದ್ದು ನನ್ನ ಆಗ್ರಹ. ಯಾವುದೇ ಸಂದರ್ಭದಲ್ಲಿ ನೀರು ತೆಗೆದುಕೊಂಡು ಹೋಗಬೇಡಿ ಎಂದು ನಾವು ಹೇಳುವುದಿಲ್ಲ. ಮಾನ್ಯ ನಾರಾಯಣಸ್ವಾಮಿಯವರು ಈ ವಿಷಯದ ಬಗ್ಗೆ ಬಹಳ ಆವೇಶವಾಗಿ, ಆಕ್ರೋಷವಾಗಿ ಮಾತನಾಡಿದರು. ಅದಲ್ಲ ಪ್ರಶ್ನೆ ನೀವು ಅರ್ಥಮಾಡಿ ಕೊಳ್ಳ ಬೇಕು. ನೀವು ಈ ಭಾಗದ ಜನರಿಗೆ ಬೇಕಾದಂತಹ ನೀರನ್ನು ಒದಗಿಸಬೇಕು. ಇದು ನಮ್ಮ ರಾಜ್ಯ ಸರ್ಕಾರದ ಕರ್ತವ್ಯ ರಾಜ್ಯದ ವ್ಯಾಪ್ತಿಯಲ್ಲಿರುವಂತಹ ನೀರನ್ನು, ಸಮುದ್ರಕ್ಕೆ ಸೇರುವಂಥ ನೀರನ್ನು ಕುಡಿಯುವುದಕ್ಕೆ ಕೊಡಬೇಕು. ಆದರೆ ಆ ಭಾಗದ ಜನರಿಗೆ ತೊಂದರೆ ಆಗದಂತೆ ನೋಡುವಂತಹ ಕೆಲಸ ಕಾರ್ಯಗಳನ್ನು ಸರ್ಕಾರ ಮಾಡಬೇಕು ಮಾನ್ಯ ಎಂ.ಬಿ.ಪಾಟೀಲರು ಸರಿ ಯಾಗಿ ಉತ್ತರವನ್ನು ಕೊಟ್ಟಿದ್ದಾರೆ.

ಆ ಭಾಗದ ಜನರಿಗೆ ತೊಂದರೆ ಆಗದಂತಹ ರೀತಿಯಲ್ಲಿ ಕೆಲಸ ಕಾರ್ಯಗಳನ್ನು ಮಾಡಬೇಕು. ಈ ಬಗ್ಗೆ ಮಾನ್ಯ ಸಚಿವರಾದ ಎಂ.ಬಿ. ಪಾಟೀಲ್ ಬಹಳ ಸ್ಪಷ್ಟವಾದ ಉತ್ತರವನ್ನು ನೀಡಿದ್ದಾರೆ. ಇದನ್ನೆಲ್ಲ ಗಮನ ದಲ್ಲಿಟ್ಟುಕೊಂಡೇ ನಾವು ಮುಂದಿನ ಹೆಜ್ಜೆಯನ್ನಿಡುತ್ತೇವೆ ಎನ್ನುವ ಮಾತನ್ನು ಹೇಳಿದ್ದಾರೆ. ಆದರೆ ಕೋಲಾರ ಜಿಲ್ಲೆಯವರಿಗೆ ಎಲ್ಲೋ ಒಂದು ಕಡೆ ಸದಾನಂದಗೌಡರು ಇದನ್ನು ವಿರೋಧ ಮಾಡುತ್ತಾರೆ ಎನ್ನುವ ಗೊಂದಲ ಇರಬಹುದು, ಆದರೆ ಕೋಲಾರ ಜಿಲ್ಲೆಗೆ ನೀರನ್ನು ಕೊಡಲು ಪ್ರಾರಂಭಿಸಿದ್ದೇ

ಈ ಸದಾನಂದಗೌಡರು ಎನ್ನುವುದನ್ನು ಅವರು ಮೊದಲು ತಿಳಿದು ಕೊಳ್ಳ ಬೇಕು.

(ಗೊಂದಲ)

**ಉಪಸಭಾಪತಿಯವರು:–** ಪ್ರಶ್ನೋತ್ತರ ಅವಧಿಯಲ್ಲಿ ಹೆಚ್ಚಿನ ಚರ್ಚೆಗೆ ನಾನು ಅವಕಾಶ ನೀಡುವುದಿಲ್ಲ.

**ಶ್ರೀ ಎಂ.ಬಿ.ಪಾಟೀಲ್:–** ಮಾನ್ಯ ಸಭಾಪತಿಗಳೇ, ಈ ಭಾಗಕ್ಕೆ ನೀರನ್ನು ಕೊಡುವುದಕ್ಕೆ ನಾವು ಬದ್ಧರಾಗಿದ್ದೇವೆ. At the same time ಅವರ concerns ಅನ್ನು ಕೂಡ ನಾವು ಗಮನಕ್ಕೆ ತೆಗೆದುಕೊಳ್ಳುತ್ತೇವೆ.

**ತುಂಗಾ ಮೇಲ್ದಂಡೆ ಯೋಜನೆಯ ಮುಳುಗಡೆ ಸಂತ್ರಸ್ಥರ ಬಗ್ಗೆ**

**308; ಶ್ರೀ ಆರ್. ಕೆ. ಸಿದ್ದರಾಮಣ್ಣ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)**

**ಅ)** ಶಿವಮೊಗ್ಗ ಜಿಲ್ಲೆಯ ತುಂಗಾ ಮೇಲ್ದಂಡೆ ಯೋಜನೆಯ ಮಂಡಗದ್ದೆ ಮುಳುಗಡೆ ಸಂತ್ರಸ್ಥ ಫಲಾನುಭವಿಗಳೆಷ್ಟು (ವಿವರ ನೀಡುವುದು);

**ಆ)** ಎಷ್ಟು ಫಲಾನುಭವಿಗಳಿಗೆ ಪರಿಹಾರ ಮತ್ತು ವಸತಿ ಕಲ್ಪಿಸಲಾಗಿದೆ (ವಿವರ ನೀಡುವುದು);

**ಇ)** ತುಂಗಾ ಮೇಲ್ದಂಡೆ ಯೋಜನೆ ಅನುಷ್ಠಾನದ ಬಗ್ಗೆ ಹೈಪವರ್ ಕಮಿಟಿ ರಚಿಸಲಾಗಿದೆಯೇ;

**ಈ)** ಸದರಿ ಕಮಿಟಿ ರಚನೆಯಾಗದಿದ್ದಲ್ಲಿ ಯಾವಾಗ ರಚಿಸಲಾಗುವುದು;

**ಶ್ರೀ ವಿ. ಶ್ರೀನಿವಾಸಪ್ರಸಾದ (ಕಂದಾಯ ಸಚಿವರು)**

**ಅ)**

| ಮುಳುಗಡೆಯಾದ ಗ್ರಾಮಗಳ ವಿವರ | ಕುಟುಂಬಗಳ ಸಂಖ್ಯೆ | ಒಟ್ಟು ಜನಸಂಖ್ಯೆ | ಒಟ್ಟು ಸ್ವತ್ತುಗಳ ಸಂಖ್ಯೆ |
|---|---|---|---|
| ಲಿಂಗಾಪುರ | 144 | 268 | 188 |

| | | | |
|---|---|---|---|
| ಕಣಗಾಲಕೊಪ್ಪ | 04 | 07 | 08 |
| **ಒಟ್ಟು** | **148** | **275** | **196** |

ಪುನರ್ವಸತಿ ಮತ್ತು ಪುನರ್ ನಿರ್ಮಣಕ್ಕಾಗಿ ಒದಗಿಸಲಾದ ಅನುದಾನ ಹಾಗೂ ಇದುವರೆವಿಗೂ ಯಾವ ಯಾವ ಸೌಲಭ್ಯಗಳನ್ನು. ಒದಗಿಸಲಾಗಿದೆ ಎಂಬ ಬಗ್ಗೆ ವಿವರಗಳು:

ಅಂದಿನ ಶಿವಮೊಗ್ಗ ಜಿಲ್ಲಾ ಸಚಿವರ ಅಧ್ಯಕ್ಷತೆಯಲ್ಲಿ ದಿನಾಂಕ:17–11–2003ರರಿದು ನಡೆದ ತುಂಗಾ: ಮೇಲ್ದಂಡೆ ಯೋಜನೆಯ ಪುನರ್ವಸತಿ ಸಲಹಾ ಸಮಿತಿ ಸಭೆಯಲ್ಲಿ ತೆಗೆದುಕೊಂಡ ತೀರ್ಮಾನದಂತೆ ತುಂಗಾ ಮೇಲ್ದಂಡೆ ಯೋಜನೆಯಲ್ಲಿ ಮುಳಗಡೆಯಾಗಿರುವ ಶಿವಮೊಗ್ಗ ಜಿಲ್ಲೆಯ ತೀರ್ಥಹಳ್ಳಿ ತಾಲ್ಲೂಕ್ಕಿನ ಲಿಂಗಾಪುರ ಮತ್ತು ಕಣಗಾಲಕೊಪ್ಪ ಗ್ರಾಮದ ಗ್ರಾಮಸ್ಥರಿಗೆ ಪುನರ್ ನಿರ್ಮಾಣ ಮತ್ತು ಪುನರ್ವಸತಿ ಕಲ್ಪಿಸುವ ಬಗ್ಗೆ ಸಂಖ್ಯೆ ಕಂಇ:133:ಆಇಹೆಚ್:2003 ದಿ:1–12–2006ರಂದು ಹೊರಡಿಸಿದ ಆದೇಶ ದಂತೆ ಲಿಂಗಾಪುರ ಮತ್ತು ಕಣಗಾಲಕೊಪ್ಪ ಗ್ರಾಮದ ಸಂತ್ರಸ್ಥ ಕುಟುಂಬಗಳಿಗೆ ಒಟ್ಟು ರೂ.2047–00 ಲಕ್ಷಗಳ ಪುನರ್ ನಿರ್ಮಾಣ ಮತ್ತು ಪುನರ್ವಸತಿ ಕಲ್ಪಿಸಲು ಅನುಮೋದನೆ ನೀಡಲಾಗಿದೆ.

ಈ ಯೋಜನೆಗೆ ತೀರ್ಥಹಳ್ಳಿ ತಾಲ್ಲೂಕಿನ ಲಿಂಗಾಮರ ಗ್ರಾಮದಲ್ಲಿ 144 ಕುಟುಂಬ, ಕಣಗಾಲಕೊಪ್ಪ ಗ್ರಾಮದಲ್ಲಿ 4 ಕುಟುಂಬ, ಒಟ್ಟು 148 ಕುಟುಂಬಗಳು ಸಂತ್ರಸ್ಥರೆಂದು ಗುರ್ತಿಸಿದ್ದು ಇದರಲ್ಲಿ 148 ಕುಟುಂಬದ ಮುಖ್ಯಸ್ಥರು ಹಾಗೂ ಈ ಕುಟುಂಬಗಳ ಇಬ್ಬರ ವಯಸ್ಕರ ಮಕ್ಕಳನ್ನು ಸಂತ್ರಸ್ಥರೆಂದು ಪರಿಗಣಿಸಿಕೊಂಡು ಲಿಂಗಾಮರದಲ್ಲಿ 126 ಮತ್ತು ಕಣಗಾಲ ಕೊಪ್ಪದಲ್ಲಿ 03 ಜನರನ್ನು ಪರಿಗಣನೆಗೆ ತೆಗೆದುಕೊಂಡು ಸಂತ್ರಸ್ಥರ ಒಟ್ಟು ಸಂಖ್ಯೆ 275 ಆಗುತ್ತದೆ. ಈ ಪೈಕಿ 14 ಜನ ಮುಳುಗಡೆಯಾಗದ ಸಂತ್ರಸ್ಥ ರೆಂದು ಪರಿಗಣಿಸಿ 261 ಫಲಾನುಭವಿಗಳಿಗೆ 255 ನಿವೇಶನಗಳನ್ನು ಈಗಾಗಲೇ ನೀಡಿದ್ದು, 6 ಫಲಾನುಭವಿಗಳು ಗ್ರಾಮದಲ್ಲಿ ವಾಸವಿರದ ಕಾರಣ ಹಾಗೂ

ದಾಖಲೆಗಳನ್ನು ಸಲ್ಲಿಸದ ಕಾರಣ ನಿವೇಶನ ನೀಡುವುದು ಬಾಕಿ ಉಳಿದಿರುತ್ತದೆ.

ಆ) ಲಿಂಗಾಪುರ ಮತ್ತು ಕಣಗಾಲಕೊಪ್ಪ ಗ್ರಾಮದ ಸಂತ್ರಸ್ಥರಿಗೆ ನೀಡಲಾದ ಪುನರ್ವಸತಿ ಅನುದಾನದ ವಿವರ

| **ಗ್ರಾಮ** | **ವಿಷಯ** | **ಬಿಡುಗಡೆಯಾದ ಅನುದಾನ (ಲಕ್ಷ)** | **ಷರಾ** |
|---|---|---|---|
| ಲಿಂಗಾಪುರ | ಕಟ್ಟಡ ಮತ್ತು ಖಾಲಿ ಇರುವ ನಿವೇಶನಗಳಿಗೆ ನೀಡಿರುವ ಪರಿಹಾರ (188 ಸ್ವತ್ತುಗಳು) | 1002.00 | |
| ಕಣಗಾಲಕೊಪ್ಪ | ಕಟ್ಟಡ ಮತ್ತು ಖಾಲಿ ನಿವೇಶನಗಳಿಗೆ ಪರಿಹಾರ ನೀಡುವುದ (ಸ್ವತ್ತು) | | ಮನೆಗಳನ್ನು ತೆರವುಗೊಳಿಸಿ ದಾಖಲೆಗಳನ್ನು ಸಲ್ಲಿಸದೇ ಇರುವುದರಿಂದ ಯಾವುದೇ ಅನುದಾನ ನೀಡಿರುವುದಿಲ್ಲ |

ಆ) ಅನುಗ್ರಹ ಅನುದಾನ ಮತ್ತು ಪುನರ್ವಸತಿ ಸೌಲಭ್ಯಗಳು

| **ಗ್ರಾಮ** | **ವಿಷಯ** | **ಬಿಡುಗಡೆಯಾದ ಅನುದಾನ (ಲಕ್ಷ)** | **ಷರಾ** |
|---|---|---|---|
| ಲಿಂಗಾಪುರ | 1 ಬೇರೆಯವರ ಸ್ವತ್ತಿನಲ್ಲಿ ಇತರೆಯವರು | 16.00 | ಉಳಿದ |

| | | | |
|---|---|---|---|
| | ಕಟ್ಟಡಗಳನ್ನು ಕಟ್ಟಿಕೊಂಡವರಿಗೆ ಅನುದಾನ ನೀಡಿದ ಬಾಬ್ತು (ಒಟ್ಟು 25 ಸ್ವತ್ತುಗಳು)<br>2 ಗೃಹ ನಿರ್ಮಾಣ ಅನುದಾನ ರೂ. 25,000 ದಂತೆ 57 ಫಲಾನುಭವಿಗಳಿಗೆ<br>3. ವ್ಯಾಪಾರಸ್ಥರಿಗೆ / ವೃತ್ತಿದಾರರಿಗೆ ರೂ. 20000 ದಂತೆ 20 ಫಲಾನುಭವಿಗಳಿಗೆ<br>4. ಸಾರಿಗೆ ವೆಚ್ಚ ರೂ 1000.00 ದಂತೆ 2 ಫಲಾನುಭವಿಗಳಿಗೆ | 14.25<br>02.80<br>0.02 | ಫಲಾನುಭವಿಗಳು ಮನೆಗಳನ್ನು ನಿರ್ಮಾಣ ಮಾಡಿಕೊಂಡ ಕೂಡಲೇ ಪಾವತಿಸಲಾಗುವುದು |
| ಕಣಗಾಲಕೊಪ್ಪ | ಅರಣ್ಯ ಮತ್ತು ಸರ್ಕಾರಿ ಜಾಗದಲ್ಲಿ ಕಟ್ಟಿಕೊಂಡಿರುವ ಮನೆಗಳಿಗೆ ಅನುದಾನ ನೀಡುವ ಬಾಬ್ತು ಒಟ್ಟು 20 ಸ್ವತ್ತುಗಳು | 5.00 | |

ಈ ಯೋಜನೆ ಅಡಿಯಲ್ಲಿ ಇದುವರೆಗೂ ಲಿಂಗಾಪುರ ಮತ್ತು ಕಣಗಾಲಕೊಪ್ಪ ಒಟ್ಟು 188 ಫಲಾನುಭವಿಗಳಿಗೆ ರೂ.10 ಕೋಟಿ 40ಲಕ್ಷ ಪರಿಹಾರವನ್ನು ನೀಡಲಾಗಿದೆ. ಈ ಯೋಜನೆಯಡಿಯಲ್ಲಿ 275 ಫಲಾನುಭ ವಿಗಳಿಗೆ 60'x40' ನಿವೇಶನ ನೀಡಲು ಫ್ಯಾಕೇಜಿನನ್ವಯ ಅನುಮೋದನೆ ಯಾಗಿದ್ದು, ಈ 275 ಫಲಾನುಭವಿಗಳ ಪೈಕಿ 14 ಫಲಾನುಭವಿಗಳು ಮುಳು ಗಡೆ ಪ್ರದೇಶದಿಂದ ಹೊರಗಡೆ ಇರುವವರನ್ನು ಹೊರತುಪಡಿಸಿ 261

ಫಲಾನುಭವಿಗಳಿಗೆ ನಿವೇಶನ ನೀಡಲು ಶಿವಮೊಗ್ಗ ನಗರಾಭಿವೃದ್ಧಿ ಪ್ರಾಧಿಕಾರ ದಿಂದ ರಚನೆಗೊಂಡ ಬಡಾವಣೆಯಲ್ಲಿ 261 ನಿವೇಶನಗಳನ್ನು ಪಡೆದು ಕೊಳ್ಳಲು ತೀರ್ಮಾನಿಸಿದ್ದು ಒಟ್ಟು 3 ಕೋಟಿ. 8ಲಕ್ಷ ಮೊತ್ತವನ್ನು ಶಿವಮೊಗ್ಗ ನಗರಾಭಿವೃದ್ಧಿ ಪ್ರಾಧಿಕಾರಕ್ಕೆ ಪಾವತಿಸಲಾಗಿದೆ. 261 ಫಲಾನುಭವಿಗಳ ಪೈಕಿ 258 ಜನ ಫಲಾನುಭವಿಗಳಿಗೆ 190 ನಿವೇಶನದ ಹಕ್ಕುಪತ್ರಗಳನ್ನು ವಿತರಿಸ ಲಾಗಿದೆ. ಕಾರಣ. ಈ ಫಲಾನುಭವಿಗಳಲ್ಲಿ ಒಂದು ಕುಟುಂಬದಲ್ಲಿ ಇದ್ದಂತಥ ಕುಟುಂಬದ ಮುಖ್ಯಸ್ಥರು ಬಾಗೂ ಎರಡು ಪ್ರಾಪ್ತ ವಯಸ್ಕ ನುಕ್ಕಳು 40x60 ನಿವೇಶನದ ಬದಲು ಜಂಟಿಯಾಗಿ ಒಟ್ಟಿಗೆ ಹೆಚನ ಅಳತೆಯ ನಿವೇಶನ ಕೋರಿದ್ದರ ಮೇರೆಗೆ ಅವರ ಕೋರಿಕೆಯನ್ನು ಪರಿಗಣಿಸಿ ಹೆಚ್ಚಿನ ನಿವೇಶನವನ್ನು ನೀಡಲಾಗಿದೆ. ಇದರಿಂದ 250 ಫಲಾನುಭವಿಗಳಿಗೆ 190 ನಿವೇಶನಗಳನ್ನು ನೀಡಲಾಗಿದೆ.

ಹೈ–ಪವರ್ ಕಮಿಟಿ ರಚಿಸಲಾಗಿರುವುದಿಲ್ಲ

ರಾಜ್ಯದ ಎಲ್ಲ ಜಿಲ್ಲೆಗಳಲ್ಲಿ ಜಿಲ್ಲಾ ಮಟ್ಟದ ಪುನರ್ವಸತಿ ಸಲಹಾ ಸಮಿತಿಗಳನ್ನು ಆಯಾ ಜಿಲ್ಲೆಯ ಉಸ್ತುವಾರಿ, ಸಚಿವರ ಅಧ್ಯಕ್ಷತೆಯಲ್ಲಿ ಸಮಿತಿಯನ್ನು ರಚಿಸಲಾಗಿದೆ. ಅದರಂತೆ ತುಂಗಾ ಮೇಲ್ದಂಡೆ ಯೋಜನೆಯ –ಅನುಷ್ಠಾನದ ಕುರಿತಾಗಿ ಆದೇಶ ಸಂಖ್ಯೆ: ಕಂಇ 136: ಆರ್ಇಹೆಚ್. 2012 ದಿನಾಂಕ: 31.08.2012 ರಂದು ಶಿವಮೊಗ್ಗ ಜಿಲ್ಲೆಯ ಜಿಲ್ಲಾ ಮಟ್ಟದ ಪುನರ್ವಸತಿ ಸಲಹಾ ಸಮಿತಿಯನ್ನು ರಚಿಸಲಾಗಿದೆ.

**ಶ್ರೀ ಆರ.ಕೆ. ಸಿದ್ದರಾಮಣ್ಣ.–** ಮಾನ್ಯ ಸಭಾಪತಿಯವರೆ, ಮಾನ್ಯ ಸಚಿವರು ನನ್ನ ಪ್ರಶ್ನೆಗೆ ಉತ್ತರವನ್ನು ನೀಡಿದ್ದಾರೆ. ಶಿವಮೊಗ್ಗ ಜಿಲ್ಲೆಯ ಬಗ್ಗೆ ಒಂದು ಮಾತನ್ನು ಹೇಳುವುದಾದರೆ ವಿಶೇಷವಾಗಿ ಶರಾವತಿ ಯೋಜನೆಯಿಂದ ಮುಳುಗಡೆ ಸಂತ್ರಸ್ಥರ ಸಂಖ್ಯೆ ಬಹಳ ದೊಡ್ಡದಿದೆ. 60 ದಶಕದಲ್ಲಿ ಆದಂತಹ ಮುಳುಗಡೆಗೆ ಇನ್ನೂ ಸಹ ಪರಿಹಾರವನ್ನು ನೀಡಲು ಸಾಧ್ಯವಾಗಿಲ್ಲ. ಅದೇ ರೀತಿ ಇತ್ತೀಚೆಗೆ ತುಂಗಾ ಮೇಲ್ದಂಡೆ ಯೋಜನೆಯಡಿಯಲ್ಲಿ ಮಂಡಗದ್ದೆ ಭಾಗದಲ್ಲಿ ಮುಳುಗಡೆ ಆದಂತಹ ಸಂತ್ರಸ್ಥರ ಬಗ್ಗೆ ಮಾಹಿತಿಯನ್ನು ಸಚಿವರು

ನೀಡಿದ್ದಾರೆ. ಆದರೆ ನನಗೆ ತಿಳಿದಿರುವ ಒಂದು ಸಣ್ಣ ಮಾಹಿತಿಯನ್ನು ತಮ್ಮ ಮೂಲಕ ಮಾನ್ಯ ಸಚಿವರ ಗಮನಕ್ಕೆ ತರಬಯಸುತ್ತೇನೆ. ಈ ಯೋಜನೆ ಯಡಿಯಲ್ಲಿ ಎರಡು ಗ್ರಾಮಗಳಲ್ಲಿ 144, 148 ಜನ ಸಂತ್ರಸ್ಥರು ಇದ್ದಾರೆಂದು ಪ್ರಸ್ತಾಪಿಸಿದ್ದಾರೆ. ಇನ್ನೂ ಕೂಡ ಸಂತ್ರಸ್ಥರು ಇದ್ದಾರೆನ್ನುವ ಬಗ್ಗೆ ನಮ್ಮ ಬಳಿ ಮಾಹಿತಿಯಿದೆ. ಅಲ್ಲಿನ ಜಿಲ್ಲಾಮಟ್ಟದಲ್ಲಿ ವಿಚಾರಣ ನಡೆಸಿದಾಗ ಸಂತ್ರಸ್ಥರಿಗೆ ಪರಿಹಾರ ನೀಡಲು ಯಾವುದೇ High Power Committee ಇಲ್ಲವೆನ್ನುವ ಮಾಹಿತಿಯನ್ನು ಅಲ್ಲಿನ ಜಿಲ್ಲಾಡಳಿತ ನೀಡಿದೆ. ಆದರೆ ಸಚಿವರು ನೀಡಿರುವ ಮಾಹಿತಿಯ ಪ್ರಕಾರ 2012ಕ್ಕೆ ಶಿವಮೊಗ್ಗ ಜಿಲ್ಲೆಯಲ್ಲಿ ಜಿಲ್ಲಾ ಮಟ್ಟದ ಪುನರ್ವಸತಿ ಸಲಹಾ ಸಮಿತಿಯನ್ನು ರಚಿಸಿರುವುದಾಗಿ ಹೇಳಿದ್ದಾರೆ. ಅದೇ ರೀತಿ ಎಲ್ಲಾ ಜಿಲ್ಲೆಗಳಲ್ಲಿಯೂ ಸಹ ಈ ಪುನರ್ವಸತಿ ಸಲಹಾ ಸಮಿತಿಗಳು ಇವೆ ಎನ್ನುವ ಮಾಹಿತಿಯನ್ನು ಸಹ ಸಚಿವರು ನೀಡಿದ್ದಾರೆ. ಈ ವಿಚಾರದಲ್ಲಿ ನನ್ನದೊಂದು ವಿನಂತಿ ಏನೆಂದರೆ ಎಲ್ಲೆಲ್ಲಿ ಮುಳಗಡೆ ಆಗಿದೆ, ಯಾರು ರಾಜ್ಯದ ಅಭಿವೃದ್ಧಿಗಾಗಿ ತಮ್ಮ ಜೀವನ ಅಥವಾ ಉದ್ಯೋಗವನ್ನು ಕಳೆದುಕೊಳ್ಳುತ್ತಿದ್ದಾರೆ ಅವರಿಗೆ ತಕ್ಷಣಕ್ಕೆ ಪರಿಹಾರವನ್ನು ನೀಡಬೇಕಾಗುತ್ತದೆ. ಹಾಗಾಗಿ High Power Committee ಎನ್ನುವುದು ಏನಾದರೂ ಇದ್ದಲ್ಲಿ ತತಕ್ಷಣ ಒಂದು ಪರಿಹಾರ ನೀಡಲು ಸಾಧ್ಯವಾಗುತ್ತದೆ. ಅದರ ಬದಲು ಈ ಪುನರ್ವಸತಿ ಸಲಹಾ ಸಮಿತಿ ಬೇರೆ ಬೇರೆ ಸಂದರ್ಭಗಳಲ್ಲಿ ಪ್ರಕೃತಿ ವಿಕೋಪಕ್ಕೆ ಒಳಗಾದವರಿಗೆ ಪರಿಹಾರ ನೀಡಲು ಮಾತ್ರ ಎಂದು ನಾನು ತಿಳಿದುಕೊಂಡಿದ್ದೇನೆ. ದಯಮಾಡಿ ಈ ಮುಳುಗಡೆಗೆ ಸಂಬಂಧಪಟ್ಟ ಹಾಗೆ ಒಂದು High Power Committee ಯನ್ನು ಮಾಡುವುದಕ್ಕೆ ಸರ್ಕಾರ ಮನಸ್ಸು ಮಾಡಬೇಕೆನ್ನುವ ಸಲಹ ಮತ್ತು ವಿನಂತಿಯ ಜೊತೆಗೆ ಇದನ್ನು ಮಾಡುವರೇ ಎನ್ನುವ ಪ್ರಶ್ನೆಯನ್ನು ಕೂಡ ಸಚಿವರಿಗೆ ಕೇಳಬಯಸುತ್ತೇನೆ.

**ಶ್ರೀ ವಿ. ಶ್ರೀನಿವಾಸ ಪ್ರಸಾದ್:–** ಮಾನ್ಯ ಸಭಾಪತಿಯವರೆ, ಮಾನ್ಯ ಸದಸ್ಯರ ಭಾವನೆಗಳು ನನಗೆ ಅರ್ಥವಾಗುತ್ತಿವೆ. ಸದಸ್ಯರು ತುಂಗಾ ಮೇಲ್ದಂಡೆ ಯೋಜನೆಯಡಿಯಲ್ಲಿ ಮಂಡಗದ್ದೆ ಭಾಗದಲ್ಲಿ ಮುಳುಗಡೆ ಆದಂತಹ ಸಂತ್ರಸ್ಥರ ಬಗ್ಗೆ ಮಾಹಿತಿ ಮಾತ ಕೇಳಿರುವುದಿಲ್ಲ. ಇಡೀ ರಾಜ್ಯದಲ್ಲಿ

ಮುಳುಗಡೆಗೆ ಸಿಲುಕಿದ ಸಂತ್ರಸ್ಥರ ಬಗ್ಗೆ ಪಶ್ನೆ ಕೇಳಿದ್ದು ಕೆಲವು ಸಲಹೆಗಳನ್ನು ಕೂಡ ನೀಡಿದ್ದಾರೆ. ಜೊತೆಗೆ ತುಂಗಭದ್ರಾ ಮೇಲ್ದಂಡೆ ಯೋಜನೆಯಲ್ಲಿ ಮುಳಗಡೆಗೆ ಒಳಗಾದ ಸಂತ್ರಸ್ಥರಿಗೆ ಪರಿಹಾರ ನೀಡಲು ಒಂದು High Power Committee ಯನ್ನು ರಚನೆ ಮಾಡಬೇಕೆ0ದು ಕೇಳಿಕೊಂಡಿದ್ದಾರೆ. ಶಿವಮೊಗ್ಗ ಜಿಲ್ಲೆಯ ಜಿಲ್ಲಾ ಮಟ್ಟದಲ್ಲಿ ಜಲ್ಲಾ ಉಸ್ತುವಾರಿ ಸಚಿವರ ಅಧ್ಯಕ್ಷತೆಯಲ್ಲಿ ಈ ರೀತಿಯ ಸಮಿತಿಗಳನ್ನು ನಾವು ಈಗಾಗಲೇ ನೇಮಕ ಮಾಡಿದ್ದೇವೆ. ಈ ಜಿಲ್ಲಾ ಉಸ್ತುವಾರಿ ಸಮಿತಿಗಳಿಗೆ ಯಾವ ರೀತಿ ಪುನರ್ವಸತಿ, ಪುನರ್ ನಿರ್ಮಾಣ ವನ್ನು ಯಾವ ರೀತಿ ಮಾಡಬೇಕೆನ್ನುವ ಪೂರ್ಣ ಅರಿವು ಮತ್ತು ಜವಾಬ್ದಾರಿ ಆ ಸಮಿತಿಗೆ ಇರುವುದರಿಂದ ಅದನ್ನು ನಿರ್ವಹಿಸುವ ನಿಟ್ಟಿನಲ್ಲಿ ಸಮಿತಿಗೆ ಅಧಿಕಾರವನ್ನು ನೀಡಲಾಗಿದೆ. ಹಾಗಾಗಿ ರಾಜ್ಯಮಟ್ಟದಲ್ಲಿ High Power Committee ಯನ್ನು ಸ್ಥಾಪಿಸುವ ವಿಚಾರ ನಮ್ಮ ಮುಂದೆ ಇಲ್ಲ. ಈ ಸಮಿತಿಯನ್ನು ರಚನೆ ಮಾಡಬಹುದೇ ಎನ್ನುವುದರ ಬಗ್ಗೆ ಚರ್ಚೆ ಮಾಡಿ, ಪರಿಶೀಲಿಸಿ ನಂತರ ತಿಳಿಸುತ್ತೇನೆ.

**ಅಂತರ್ಜಲವನ್ನು ಓಣಗಿಸುವ ನೀಲಗಿರಿ ನಿರ್ಮೂಲನೆ ಬಗ್ಗೆ**

**90; ಡಾ. ಎಸ್. ಆರ್. ಲೀಲಾ (ನಾಮ ನಿರ್ದೇಶನ ಹೊಂದಿದವರು)**

**ಅ)** ನೀಲಗಿರಿ ಅಂತರ್ಜಲವನ್ನು ಒಣಗಿಸುವ ಸಸ್ಯಜಾತಿ ಎಂದು ತಿಳಿದಿದ್ದರೂ ಅರಣ್ಯ ಇಲಾಖೆಯವರು ಹಾಗೂ ಖಾಸಗಿಯವರು ನೀಲಗಿರಿ ಅಕೇಶಿಯಾ ಸಸ್ಯಗಳನ್ನು ಅರಣ್ಯಗಳಲ್ಲಿ ಬೆಳೆಸುತ್ತಿರುವುದ ಸರ್ಕಾರದ ಗಮನಕ್ಕೆ ಬಂದಿದೆಯೇ

**ಆ)** ಹಾಗಿದ್ದರೆ, ಅದನ್ನು ತಡೆಗಟ್ಟುವ ನಿಟ್ಟಿನಲ್ಲಿ ಸರ್ಕಾರ ತೆಗೆದುಕೊಂಡ ಕ್ರಮಗಳೇನು

**ಇ)** ಈಗಾಗಲೇ ನೆಟ್ಟಿರುವ ಅಂತರ್ಜಲ ಒಣಗಿಸುವ ಸಸ್ಯಗಳನ್ನು ತೆಗೆಸುವ ನಿಟ್ಟಿನಲ್ಲಿ ಸರ್ಕಾರ ಯಾವ ಕ್ರಮ ಕೈಗೊಂಡಿದೆ.

**ಶ್ರೀ ಬಿ. ರಮಾನಾಥ ರೈ (ಅರಣ್ಯ ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು)**

**ಅ)** ನೀಲಗಿರಿ ಮರಗಳ ಕಾರಣದಿಂದ ಭೂಮಿಯಲ್ಲಿ ಅಂತರ್ಜಲ ಮಟ್ಟದ ಬಗ್ಗೆ ಹಾಗೂ ಭೂಮಿಯು ರಸ ಸಾರದ ಬಗ್ಗೆ ಹಲವು ತಜ್ಞರು ಮತ್ತು ಸಂಶೋಧನಾ ಕೇಂದ್ರಗಳು ಅಭಿಪ್ರಾಯವನ್ನು ವ್ಯಕ್ತಪಡಿಸಿರುತ್ತಾರೆ. ಬ್ರಿಟನ್ ದೇಶದಲ್ಲಿರುವ Oxford Forestry Institute and Oxford Institute of Hydrology, Walingford ಎಂಬ ಪ್ರತಿಷ್ಠಿತ ಸಂಸ್ಥೆಗಳು ಈ ಬಗ್ಗೆ 1987 ರಿಂದ 1995ರವರೆಗೆ ಅಧ್ಯಯನವನ್ನು ಮಾಡಿದ್ದು, ಅದರ ಸಾರಾಂಶ ಈ ಕೆಳಗಿನಂತಿದೆ:

1. ವರದಿಯ ಪ್ರಕಾರ ನೀಲಗಿರಿ ಮತ್ತು ಸ್ಥಳೀಯ ಕಾಡಿನ ನೀರಿನ ಬಳಕೆಯು ಆ ಸ್ಥಳದ ವಾರ್ಷಿಕ ಮಳೆಗೆ ಅನುಗುಣವಾಗಿ ರುತ್ತದೆ.
2. ಅಧ್ಯಯನದ ಸ್ಥಳಗಳಲ್ಲಿ ಜಲಮಟ್ಟದಿಂದ ನೀರನ್ನು ಸೆಳೆದಿರುವು ದಕ್ಕೆ ಯಾವುದೇ ಸಾಕ್ಷ್ಯಾಧಾರಗಳಿಲ್ಲ.
3. ಅರಣ್ಯದ ವಾರ್ಷಿಕ ನೀರಿನ ಬಳಕೆ ಪ್ರಮಾಣವು ಕೃಷಿ ಬೆಳೆಗಿಂತ ಎರಡರಷ್ಟು ಹೆಚ್ಚಿರುವುದು ತಿಳಿದ ಸಂಗತಿ. ಅರಣ್ಯದಲ್ಲಿ ಮರ ಗಳ ಬೇರುಗಳು ನೀರನ್ನು ಹಿಡಿದಿಟ್ಟುಕೊಳ್ಳುವ. ಗುಣ ಇರುವು ದರಿಂದ ನೀರಿನ ಬಳಕೆಯು ಸುಸ್ಥಿತಿಯಾಗಿರುವುದು ತಿಳಿದ ಸಂಗತಿ.

ನೀಲಗಿರಿ ಮರಗಳ ಬಗ್ಗೆ ಶ್ರೀಯುತ ಬಿ.ಕೆ.ಸಿ.ರಾಜನ್ ಮತ್ತು ಡಾ.ಕುಶಾಲಪ್ಪ ಇವರು ಅಧ್ಯಯನ ಮಾಡಿ ನೀಲಗಿರಿ ಮರ ಬೆಳೆಯು ವುದರಿಂದ ಪರಿಸರ ಹಾಗೂ ಜೀವಿಶಾಸ್ತ್ರಕ್ಕೆ ಸರ್ವೇಸಾಮಾನ್ಯವಾಗಿ ತಿಳಿದಂತೆ. ಮಾರಕವಾಗುವುದಿಲ್ಲವೆಂದು ಅಭಿಪ್ರಾಯ ವ್ಯಕ್ತಪಡಿಸಿ ರುತ್ತಾರೆ.

ಅದಾಗ್ಯೂ, ಸರ್ಕಾರದ ಸುತ್ತೋಲೆ ಸಂಖ್ಯೆ: ಅಪಜೀ 29 ಎಫ್‌ಎಪಿ 2011, ದಿನಾಂಕ 19–03–2011 ಹಾಗೂ ಅಪಜೀ 31 ಎಫ್‌ಎಪಿ 2011, ದಿನಾ0ಕ 18–05–2011ರಲ್ಲಿ ಕ್ರಮವಾಗಿ ನೀಲಗಿರಿ. ಮತ್ತು ಅಕೇಶಿಯಾ ಮರಗಳನ್ನು ಬೆಳೆಯಲು ಮಾರ್ಗಸೂಚಿ ಮತ್ತು ನಿಬರ್ಂಧಗಳನ್ನು ಹೊರಡಿಸಿರುತ್ತದೆ.

ಆ) ಸರ್ಕಾರದ ಸುತ್ತೋಲೆಗಳಂತೆ ನೀಲಗಿರಿ ಮರಗಳನ್ನು ಸೀಮಿತ ಪ್ರದೇಶ ಗಳಲ್ಲಿ ಮಾತ್ರ ಬೆಳೆಸಲಾಗುತ್ತಿದೆ ಹಾಗೂ ಅಕೇಶಿಯಾ ಮರಗಳ ಬೆಳೆಸು ವಿಕೆಯನ್ನು ಸುತ್ತೋಲೆ ನಿರ್ದೇಶನದಂತೆ ಕೆಲವು ನಿರ್ದಿಷ್ಟ ಪ್ರದೇಶಗಳಿಗೆ ಸೀಮಿತಗೊಳಿಸಲಾಗಿದೆ.

ಇ) ಕ್ರಮ ಸಂಖ್ಯೆ (ಅ) ದಲ್ಲಿ ವಿವರಸಿದಂತೆ ಸೀಮಿತ ಪ್ರದೇಶಗಳನ್ನು ಹೊರತುಪಡಿಸಿ ಉಳಿದ ಪ್ರದೇಶಗಳಲ್ಲಿ ಈಗಾಗಲೇ ಬೆಳೆಸಿರುವಂತಹ ನೀಲಗಿರಿ ಮತ್ತು ಅಕೇಶಿಯಾ ಮರಗಳನ್ನು  ಹಂತ ಹಂತವಾಗಿ ಕಟಾವು ಮಾಡಿ ಸ್ಥಳೀಯ ಪ್ರಭೇದಗಳನ್ನು ಬೆಳೆಸಲು ಕ್ರಮ ಕೈಗೊಳ್ಳ ಲಾಗುತ್ತಿದೆ.

**ಪ್ರೊ. ಎಸ್.ಆರ್.ಲೀಲಾ:–** ಮಾನ್ಯ ಸಭಾಪತಿಗಳೇ, ಮಾನ್ಯ ಸಚಿವರು ನನ್ನ ಪ್ರಶ್ನೆಗೆ ಉತ್ತರವನ್ನು ಒದಗಿಸಿದ್ದಾರೆ. ದಯಮಾಡಿ ಸಚಿವರು ತಮ್ಮ ಅಧಿಕಾರಿಗಳ ಮಾತನ್ನು ಕೇಳಬೇಡಿ, ನನ್ನ ಮಾತನ್ನು ಕೇಳಿ, ಏಕೆಂದರೆ ನನಗೆ ನೀಲಗಿರಿ ಗಿಡಗಳ ಮೇಲೆ ನನಗೆ ಯಾವುದೇ ವಿಧವಾದ ದ್ವೇಷವಿಲ್ಲ. ಈಗಷ್ಟೆ ಮಾನ್ಯ  ಸದಸ್ಯರಾದ ನಾರಾಯಣ ಸ್ವಾಮಿಯವರು ಕೋಲಾರ ಮತ್ತು ಚಿಕ್ಕಾಬಳ್ಳಾಪುರ ಜಿಲ್ಲಗಳು ನೀರಿಲ್ಲದೇ ಒಣಗಲು ಜಿಲ್ಲೆಗಳಾಗುತ್ತಿವೆ. ಎನ್ನುವ ವಿಚಾರವನ್ನು ಪಸ್ತಾಪಿಸಿದರು. ಇಂತಹ ಪ್ರದೇಶದಲ್ಲಿ ನೀಲಗಿರಿಯನ್ನು ಬೆಳೆಸುವುದು. ಉತ್ತಮವೇ? ಎನ್ನುವ ಪ್ರಶ್ನೆಯನ್ನು ನಾವು ಹಾಕಿಕೊಳ್ಳ ಬೇಕಾಗುತ್ತದೆ. ಇವತ್ತು ರಾಜ್ಯದ ಎಲ್ಲಾ ಭಾಗಗಳಲ್ಲೂ ಕೂಡ ಮಳ ಬರುತ್ತಿದೆ. ಆದರೆ ಕೋಲಾರ ಜಿಲ್ಲೆಯಲ್ಲಿ ಮಳೆಯೇ ಇಲ್ಲ. ವಿಶೇಷವಾಗಿ ನಾನು ಪ್ರತಿನಿಧಿಸುವ ಮಾಲೂರು ತಾಲ್ಲೂಕಿನಲ್ಲಿ ಶೇಕಡ 20ರಷ್ಟು ಕೂಡ ಆಗಿಲ್ಲ.

ಅಲ್ಲಿ ನೀಲಗಿರಿ ಮತ್ತು ಇಟ್ಟಿಗೆ ಗೂಡಿನ ಉದ್ಯಮವೇ ನಡೆಯುತ್ತಿರುವುದು. ಅಲ್ಲಿ ಭೂಮಿಯನ್ನು ಒಣಗಿಸಲು ಏನು ಬೇಕೋ ಅದನ್ನು ಮಾಡುತ್ತಿದ್ದಾರೆ. ಇದರಿಂದ ಅಲ್ಲಿ ನೀರೇ ಇಲ್ಲದಂತಹ ಪರಿಸ್ಥಿತಿ ಉದ್ಭವ ಆಗುತ್ತಿದೆ. . ನೀಲಗಿರಿ ಗಿಡದ ಮೇಲೆ ನನಗೇನೂ ದ್ವೇಷ ಇಲ್ಲವೆಂದು ಹೇಳಿದ್ದಕ್ಕೆ ಕಾರಣ ಏನೆಂದರೆ ನೀಲಗಿರಿ ಗಿಡಗಳಿಂದ ರೈತರಿಗೆ ಏನೇನು economic support ಸಿಗುತ್ತದೆ ಎನ್ನುವ ವಿಚಾರ ನನಗೂ ಸಹ ತಿಳಿದಿದೆ. ಪ್ರಪಂಚದಲ್ಲಿ ನೀಲಗಿರಿಯ ಗಿಡಗಳನ್ನು ಎಲ್ಲೆಲ್ಲಿ ಬೆಳಸಿದ್ದಾರೆ, ಅದರ ಲಾಭ ಮತ್ತು ಪರಿಣಾಮಗಳೇನು ಎನ್ನುವ ಎಲ್ಲಾ ಮಾಹಿತಿಗಳನ್ನು ಸಹ ನಾನು ಇಟ್ಟುಕೊಂಡಿದ್ದೇನೆ. ಕೋಲಾರ ದಲ್ಲಿ ನೀಲಗಿರಿಯನ್ನು ಬೆಳಸುವುದು ಸೂಕ್ತವೇ ಎನ್ನುವುದು ನನ್ನ ಪ್ರಶ್ನೆ? ಕಳದ 4–6 ವರ್ಷಗಳಿಂದ ನಮ್ಮ ಕರ್ನಾಟಕ ರಾಜ್ಯದಲ್ಲಿ ವಿಶೇಷವಾದ ಬೆಳವಣಿಗೆ ಕಂಡುಬಂದಿದೆ. ಅದೇನೆಂದರೆ Bio Fuel Park ಅನ್ನು ಮಾಡುತ್ತಿ ದ್ದಾರೆ. ಹಾಸನದಲ್ಲಿ, ಮಡೆನೂರಿನಲ್ಲಿ Bio fuel Park ಗಳು ಮಾತ್ರವಿಲ್ಲದೇ ಅಲ್ಲಿ oil supply ಅನ್ನು ಕೂಡ ಮಾಡುತ್ತಿದ್ದಾರೆ... ಕರ್ನಾಟಕದಲ್ಲಿ ಇದು ಇರುವುದರಿಂದ ನೀಲಗಿರಿ ಸಸ್ಯ ತುಂಬಾ ನೀರನ್ನು ಎಳೆದುಕೊಳ್ಳುತ್ತದೆ. ಅದರ ಬೇರು ತುಂಬಾ ಶಕ್ತಿಯುತವಾಗಿದ್ದು ಸ್ವಲ್ಪ ನೀರು ಇದ್ದರೂ ಸಹ ಅದನ್ನು ಎಳೆದುಕೊಂಡು ಬಿಡುತ್ತದೆ. ಇದರಿಂದ ಬೇರೆ ಸಸ್ಯಗಳಿಗೆ ತೊಂದರೆ ಆಗುತ್ತದೆ. ರೈತರು ನೀಲಗಿರಿ ಮರಗಳನ್ನು ಬೆಳೆಸುವುದನ್ನು ಬಿಟ್ಟಲ್ಲಿ ಏನೂ ತೊಂದರೆ ಆಗುವುದಿಲ್ಲ. ಅದಕ್ಕೆ ಬದಲಾಗಿ Jetropa, pongemia, neem, simarouba, mahua ಎಣ್ಣೆ ಬೀಜಗಳನ್ನು ಹಾಕಿದಲ್ಲಿ they are indigenous to our soil ಇದನ್ನು ಬೆಳೆಸುವುದರಿಂದ ನಮ್ಮ ರೈತರಿಗೆ ಯಾವುದೇ ತೊಂದರೆ ಆಗುವುದಿಲ್ಲ... Our economy will not be affected ಅದಕೋಸ್ಕರವೇ ನೀಲಗಿರಿ ಮರಗಳನ್ನು ತೆಗೆಸಿ ಎಂದು ನಾನು ಹೇಳುತ್ತಿದ್ದೇನೆ. ನೀಲಗಿರಿಯನ್ನು ಬೆಳೆಸುವುದರಿಂದ ನೀರೆ ಹಿಡಿಯದ ಗಂಟಲಲ್ಲಿ ಕಡುಬನ್ನು ತುರುಕಿದ ಹಾಗೆ ಆಗುತ್ತಿದೆ. ಇದು ಹೇಗೆ ಸಾಧ್ಯ? ಮೇಲಿನಿಂದಲೂ ಮಳೆ ಬಾರದೇ, ಕೆಳಗಿನ ನೀರು ಕೂಡ ನೀಲಗಿರಿಯಿಂದ ಬತ್ತಿ ಹೋದರೆ ಬೇರೆ ಗಿಡಗಳನ್ನು ಹೇಗೆ

ಬೆಳೆಸುವುದು? ಆದ್ದರಿಂದ ಮಾನ್ಯ ಸಚಿವರು ನನಗೆ ಒಂದು ಆಶ್ವಾಸನೆಯನ್ನು ನೀಡಬೇಕು.

**ಉಪಸಭಾಪತಿಯವರು:–** ಪ್ರಶ್ನೋತ್ತರ ಅವಧಿಯಲ್ಲಿ ಉಪಪ್ರಶ್ನೆಗಳನ್ನು ಕೇಳಬೇಕೆ ವಿನಃ ಭಾಷಣವನ್ನು ಮಾಡಬಾರದು.

**ಶ್ರೀ ರಮಾನಾಥ ರೈ:–** ಮಾನ್ಯ ಸಭಾಪತಿಗಳೆ, ನಾನು ಮತ್ತು ಸದಸ್ಯರಾದ ಲೀಲಾರವರು ಒಂದು ಸಾಮಾನ್ಯ ಜ್ಞಾನದಿಂದ ಮಾತನಾಡುತ್ತೇವೆ. ನೀಲಗಿರಿ ಬೆಳಸುವುದರಿಂದ ಅದು ಭೂಮಿಯ ನೀರನ್ನು ಸೆಳೆದುಕೊಂಡು ತೊಂದರೆ ಆಗುತ್ತದೆ ಎನ್ನುವುದು ಸಾಮಾನ್ಯ ಜನರು ಹೇಳತಕ್ಕ ಮಾತು, ಅದನ್ನೇ ಮಾನ್ಯ ಸದಸ್ಯರು ಹೇಳಿದ್ದಾರೆ. ಆದರೆ ಇದರ ಬಗ್ಗೆ ಒಂದು ಸಂಸ್ಥೆ ವೈಜ್ಞಾನಿಕವಾಗಿ ಅಧ್ಯಯನ ನಡೆಸಿ, ಈ ನೀಲಗಿರಿ ಮರಗಳನ್ನು ಬೆಳೆಸುವು ದರಿಂದ ಯಾವುದೇ ತೊಂದರೆ ಆಗುವುದಿಲ್ಲವೆಂದು ಒಂದು ವರದಿಯನ್ನು ನೀಡಿದ್ದಾರೆ. ನಾವು ಅದರ ಆಧಾರದ ಮೇಲೆ ಮಾತನಾಡಬೇಕಾಗುತ್ತದೆ. ಯಾರೋ ಮಾತನಾಡುವುದನ್ನು ಇಲ್ಲಿ ಉಲ್ಲೇಖ ಮಾಡಿ ಮಾತನಾಡುವುದು ಕಷ್ಟ Oxford Forestry Institute and Oxford Institute of Hydrology Wallingford ಎನ್ನುವ ಒಂದು ಪ್ರತಿಷ್ಠಿತ ಸಂಸ್ಥೆ 1987 ರಿಂದ 1995ರವರೆಗೆ ಅಧ್ಯಯನ ಮಾಡಿ ಕೊಟ್ಟಿರುವ ವರದಿ ಇದು. ಸ್ಥಳೀಯವಾಗಿ ವಿ.ಕೆ.ಸಿ ರಾಜನ್, ಡಾ:ಕುಶಾಲಪ್ಪ ಇವರು ನೀಲಗಿರಿ ಮರಗಳನ್ನು ಬೆಳೆಸಲು ಪರಿಸರ ಮತ್ತು ಜೀವಶಾಸ್ತ್ರಕ್ಕೆ ಸರ್ವೇಸಾಮಾನ್ಯವಾಗಿ ತಿಳಿದಿರುವಂತೆ ಮಾರಕವಾಗು ವುದಿಲ್ಲ ಎನ್ನುವುದನ್ನು ಅಧ್ಯಯನ ಮಾಡಿ ವರದಿಯನ್ನು ಕೊಟ್ಟಿದ್ದಾರೆ. ಆದರೆ ಬರಿ ಇದನ್ನೆ ಬೆಳೆಸಬೇಕು ಎಂದು ಅಲ್ಲ. ನೀಲಗಿರಿ ಜೊತೆಯಲ್ಲಿ ಮಾನ್ಯ ಸದಸ್ಯರು ಹೇಳಿದ ಹಾಗೆ ಬೇರೆ–ಬೇರೆ ಗಿಡಗಳನ್ನು ಅಂದರೆ ಸ್ಥಳೀಯವಾಗಿ ಬೆಳೆಯುವಂತಹ ಭೂಫಲವತ್ತತೆಯನ್ನು ಹೆಚ್ಚಿಸುವಂತಹ Gliricidia, ಕಮಲ, ರಾಮಫಲ, ಕಾಸೋಡ, ಹಲಸು, ಹೊಗೆ, ಬೇವು.ಗೊಡಂಬಿ, ಹಾಲೆ, ತಪ್ಪಸಿ, ಉದ್ದೇವು, ಮಾವು, ಆಲ, ಅರಳಿ, ಹುಣಸೆ, ಬಿಲ್ವಪತ್ರೆ, ಹೇಬ್ಬೇವು ಇವೆಲ್ಲವು ಗಳನ್ನು ನಾವು ಜೊತೆ–ಜೊತೆಯಾಗಿ ಬೆಳೆಸುವಂತದು. ಇದೇ ರೀತಿ ಗ್ರಾಮ ಗಳಲ್ಲಿ ಗ್ರಾಮ ಅರಣ್ಯ ಸಂಸ್ಥೆಗಳು ಇವೆ. ಅವರ ಬೇಡಿಕೆಯಂತೆ ಸೌದೆ ಸಣ್ಣ

ಮರಮಟ್ಟುಗಳನ್ನು ಪೂರೈಸುವಂತಹ ಗಿಡಗಳನ್ನು ನೆಡುವಂತಹ ಕಾರ್ಯವನ್ನು ಮಾಡುತ್ತಿದ್ದೇವೆ. ಕೆಲವು ಜಾಗಗಳಲ್ಲಿ ನೀಲಗಿರಿ ಅಕೇಶಿಯಾ ನೆಡುವುದು ಅಗತ್ಯವಿಲ್ಲ ಎಂದು ಆ ಭಾಗಗಳಲ್ಲಿ ನೆಡಲು ನಾವು ಪ್ರೋತ್ಸಾಹವನ್ನು ಕೊಡುತ್ತಿಲ್ಲ. ಬಯಲುಸೀಮೆ ವ್ಯಾಪ್ತಿ ಪ್ರದೇಶಗಳಲ್ಲಿ ಅಕೇಶಿಯಾ ಮರಗಳನ್ನು ಬೆಳಸಬಾರದು ಎಂದು ಜನರು ಹೇಳಿರುವುದರಿಂದ ಅವರ ಮಾತಿನಂತೆ ನಡೆದುಕೊಳ್ಳುತ್ತಿದ್ದೇವೆ. ವೈಜ್ಞಾನಿಕವಾಗಿ ತಜ್ಞರು ಅಧ್ಯಯನ ಮಾಡಿ ಕೊಟ್ಟಿರುವ ವರದಿಯ ಪ್ರಕಾರ ನೀಲಗಿರಿ ಮರಗಳನ್ನು ಬೆಳೆಸುವುದರಿಂದ ಸಮಸ್ಯೆ ಇಲ್ಲ ಎನ್ನುವುದನ್ನು ಮನಗಂಡು ಜನರಿಗೆ ಅನುಕೂಲವಿದೆ ಎಂದು ತಿಳಿದು ಬೆಳೆಸಲಾಗುತ್ತಿದೆ. ಆದರೆ ಇದನ್ನೇ ಬೆಳಸಬೇಕೆಂದು ಇಲ್ಲ.

**ಶ್ರೀ ಯಂ.ಸಿ.ನಾಣಯ್ಯ:-** ಮಾನ್ಯ ಸಭಾಪತಿಗಳೆ, ಈಗ ಇದನ್ನು ಡಿಬೇಟ್ ಮಾಡಿಬಿಟ್ಟರು ರಮಾರಾಥ್ ರೈ ರವರು. ನೀಲಗಿರಿ ಎಲ್ಲಿ ಬೆಳೆಸಬೇಕು ಎಂದು ಹೇಳುವಾಗ, ನೀಲಗಿರಿ ಮರ ಅಂತರ್ಜಲವನ್ನು ಹೆಚ್ಚು ಕುಡಿದು ಬಹಳ ವೇಗವಾಗಿ ಬೆಳೆಯುವಂತಹ ಒಂದು species ಮಾನ್ಯ ರಮಾನಾಥ್ ರೈರವರೆ ಈ ವರದಿಯಲ್ಲ ಪ್ರಪಂಚದಲ್ಲಿ there are more than about 10-12 reports ಇವತ್ತಿನ ವಿಚಾರವನ್ನು ನಾನು ಹೇಳುತ್ತಿಲ್ಲ. ನಾನು ಹಿಂದೆ ಅರಣ್ಯ ಮಂತ್ರಿಯಾಗಿದ್ದ ಸಮಯದಲ್ಲಿ ಇದರ ಬಗ್ಗೆ ನಾನು ಅಧ್ಯಯನ ಮಾಡಿದ್ದೇನೆ. ಎಲ್ಲಿ ಬೆಳೆಸಬೇಕು ಎಂದರೆ, where the rainfall is very high ಅಲ್ಲಿ ಇದನ್ನು ಬೆಳೆಸಿದರೆ ತೊಂದರೆಯಿಲ್ಲ. Where underground water is at a lower level ಎಲ್ಲಿ rainfall ಕಡಿಮೆ ಇದೆ ಆ ಭಾಗದಲ್ಲಿ ಇದನ್ನು ಬೆಳಸಬಾರದು ಎನ್ನುವುದು universally accepted ಮಾನ್ಯ ಕುಶಾಲಪ್ಪನವರು ತಮ್ಮ ವರದಿಯಲ್ಲ ಮಳೆಯನ್ನು ಆಧಾರಿಸಿ ಈ ಮರವನ್ನು ಬೆಳೆಸಬೇಕು ಎಂದು ಹೇಳಿದ್ದಾರೆ. ಇದನ್ನು ಬೆಳೆಸುವುದರ ಬಗ್ಗೆ ವಿಚಾರ ಬಂತು paper ಗಾಗಿ pulp ಬೇಕು ಅದಕ್ಕಾಗಿ ಆಗ ಬೇಕಾದಷ್ಟು ಇದನ್ನು ಬೆಳೆಸಿರುವುದು ಉಂಟು. ಇಲ್ಲ ಎಂದು ಹೇಳುವುದಿಲ್ಲ. ಆದರೆ ನೀಲಗಿರಿಯನ್ನು ಹೆಚ್ಚು ಮಳೆ ಬರುವ ಪ್ರದೇಶಗಳಲ್ಲಿ ಬೆಳೆಸಲು ಅನುಮತಿ ಕೊಡಿ, ಬೇರೆ ಯಾವ ಪ್ರದೇಶದಲ್ಲಿಯೆ? ಬೆಳೆಸಲು ಅನುಮತಿಯನ್ನು ಕೊಡಬೇಡಿ.

**ಶ್ರೀ ಬಿ. ರಮಾನಾಥ್ ರೈ:–** ಮಾನ್ಯ ಸಭಾಪತಿಗಳೆ, ಗೌರವಾನ್ವಿತ ಸದಸ್ಯರಾದ ಮಾನ್ಯ ನಾಣಯ್ಯನವರು ಹೇಳಿದಂತೆ, ಕೆಲವು ಭಾಗಗಳಲ್ಲಿ ಇದನ್ನು ಬೆಳೆಸಲು ನಾವು ಪ್ರೋತ್ಸಾಹ ಕೊಡುವುದಿಲ್ಲ. ವೈಜ್ಞಾನಿಕವಾಗಿ ಅನುಕೂಲಕರವಾದ ಸ್ಥಳದಲ್ಲಿ ಬೆಳೆಸಲಾಗುತ್ತದೆ. ಮಾನ್ಯ ನಾಣಯ್ಯನವರು ಹೇಳಿರುವುದು ಸತ್ಯವಾದ ವಿಚಾರ. ಸಾರಸಗಟಾಗಿ ಎಲ್ಲಾ ಕಡೆಯು ಬೆಳೆಸಬೇಕು ಎಂದು ನಾವು ಹೇಳುವುದಿಲ್ಲ. ಕೆಲವು ಪ್ರದೇಶಗಳಲ್ಲಿ ಬೆಳಸಬಾರದು ಎಂದು ನಿಷೇಧವನ್ನು ಮಾಡಿದ್ದೇವೆ. ಅದರ ಬದಲು ಬೇರೆ–ಬೇರೆ ಗಿಡಗಳನ್ನು ನಾವು ಬೆಳೆಸುತ್ತಿದ್ದೇವೆ.

**ಶ್ರೀ ವೈ.ಎ.ನಾರಾಯಣಸ್ವಾಮಿ:–** ನಮ್ಮ ಜಿಲ್ಲೆಯಲ್ಲಿ 1500 ಅಡಿ ಕೆಳಗೆ ಭೂಮಿಯನ್ನು ಕೊರೆದು ನೀರನ್ನು ಪಡೆಯಬೇಕಾಗಿದೆ.

**ಉಪಸಭಾಪತಿಯವರು:–** ಮಂತ್ರಿಗಳು ತಮ್ಮ ಉತ್ತರವನ್ನು ಹೇಳಿ. ಮುಗಿಸಲಿ. ಕುಳಿತುಕೊಳ್ಳಿ ನಾರಾಯಣಸ್ವಾಮಿಯವರೆ.

**ಶ್ರೀ ಬಿ ರಮಾನಾಥ್ ರೈ:–** ಕರಾವಳಿ ಪದೇಶ ಕ್ಷೀಣಿತ ಅರಣ್ಯ ಪ್ರದೇಶ, 25% ಕ್ಕಿಂತ ಕಡಿಮೆ ಅರಣ್ಯ ಇರುವ ಸ್ಥಳೀಯ ಮರಗಳ ನೈಸರ್ಗಿಕ ಪುನರ್ ಉತ್ಪತ್ತಿ ಕಡಿಮ ಇರುವ ಪ್ರದೇಶಗಳಲ್ಲಿ ಅರಣ್ಯ ಅತಿಕ್ರಮಣವನ್ನು ತೆರವುಗೊಳಿಸುವುದನ್ನು ಗ್ರಾಮ ಅರಣ್ಯ ಸಮಿತಿಗೆ ಉಸ್ತುವಾರಿಯನ್ನು ವಹಿಸಲಾಗಿದೆ. ಗ್ರಾಮ ಅರಣ್ಯ ಸಮಿತಿಯ ಕೋರಿಕೆಯಂತೆ ಮರಗಳನ್ನು ಬೆಳೆಸಲಾಗುವುದು. ಗ್ರಾಮ ಸಮಿತಿಯವರು ಕೆಲವು ಕಡೆ ಬೆಳೆಸಬೇಕು ಎಂದು ಬೇಡಿಕೆ ಇಡುತ್ತಾರೆ. ಅಂತಹ ಕಡೆಗಳಲ್ಲಿ ಬೆಳೆಸಲಾಗುತ್ತದೆ. ಕೆಲವು ಕಡೆಗಳಲ್ಲಿ ಬೆಳೆಸಲು ನಾವು ಪ್ರೋತ್ಸಾಹ ಕೊಡುವುದಿಲ್ಲ.

**ಪ್ರೋ.ಎಸ್.ಆರ್.ಲೀಲಾ:–** ಮಾನ್ಯ ಸಭಾಪತಿಗಳೆ, ನನ್ನ ಉಪಪ್ರಶ್ನೆ ಎಂದರೆ, ವೈಜ್ಞಾನಿಕವಾಗಿ ಸಿದ್ದಪಡಿಸಿದಂತಹ ಅಧ್ಯಯನಗಳಿಂದ ಅದರ ಆಧಾರದ ಮೇಲೆ ಮಾತನಾಡುತ್ತಿದ್ದೇವೆ ಎಂದು ಮಾನ್ಯ ಸಚಿವರು ಹೇಳಿದರು. ಅದನ್ನು ನಾನು ಒಪ್ಪಿಕೊಳ್ಳುತ್ತೇನೆ. ಈಗಾಗಲೇ ಮಾನ್ಯ ನಾಣಯ್ಯನವರು ಹೇಳಿದ ಹಾಗೆ ನೂರಾರು ವರದಿಗಳು ಇವೆ. ಅವೆಲ್ಲವು ವೈಜ್ಞಾನಿಕವಾಗಿಯೇ

ಸಿದ್ಧಪಡಿಸಿರುವಂತವು. I have a report with me. Project for integration of life and environment, Japan International Volunteer Centre ಇಡೀ ಏಷಿಯಾದಲ್ಲಿ ನೀಲಗಿರಿ ಮರಗಳನ್ನು ಎಲ್ಲೆಲ್ಲಿ ಬೆಳಸಬೇಕು, ಎಲ್ಲಿ ಬೆಳೆಸಿದರೆ ಏನಾಗುತ್ತದೆ ಎನ್ನುವುದರ ಬಗ್ಗೆ ಇದೆ. You can have all the reports.

**ಉಪಸಭಾಪತಿಯವರು:-** ಸದಸ್ಯರು ತಮ್ಮ ಹತ್ತಿರ. ಇರುವ ಮಾಹಿತಿಯನ್ನು ಮಂತ್ರಿಗಳಿಗೆ ಕಳುಹಿಸಿಕೊಡಿ.

**ಪ್ರೊ.ಎಸ್.ಆರ್.ಲೀಲಾ:-** ಇದರಲ್ಲಿ ನಕಾರತ್ಮಕ ಮತ್ತು ಸಕಾರಾತ್ಮಕ ಅಂಶಗಳು ಎರಡೂ ಇವೆ.

**ಶ್ರೀ ಬಿ. ರಮಾನಾಥ್ ರೈ:-** ಮಾನ್ಯ ಸಭಾಪತಿಗಳೆ, ಎಲ್ಲಾ ಕಡೆಗಳಲ್ಲಿ ನೀಲಗಿರಿ, ಅಕೇಶಿಯಾ ಮರಗಳನ್ನು ಬೆಳೆಯಲು ನಾವು ಪ್ರೋತ್ಸಾಹ ಕೊಡುತ್ತಿಲ್ಲ. ಎಲ್ಲಿ ವೈಜಾನಿಕವಾಗಿ ತೊಂದರೆ ಇದೆ. ಆ ಭಾಗವನ್ನು ಹೊರತು ಪಡಿಸಿ, ಎಲ್ಲಿ ಆ ಮರಗಳನ್ನು ಬೆಳೆದರೆ ಅನುಕೂಲವಾಗುತ್ತದೆ ಅಂತಹ ಕಡೆಗಳಲ್ಲಿ ಬೆಳೆಯಲು ನಾವು ಅನುಕೂಲ ಮಾಡಿಕೊಡುತ್ತೇವೆ. ಸಾರಾಸಗಟಾಗಿ ಎಲ್ಲಾ ಕಡೆಗಳಲ್ಲಿ ಬೆಳೆಸುವಂತಹ ಧೋರಣೆ ಸರ್ಕಾರದ್ದಲ್ಲ ಎನ್ನುವುದನ್ನು ತಮ್ಮ ಗಮನಕ್ಕೆ ತರುತ್ತೇವೆ. ಮಾನ್ಯ ಸದಸ್ಯರಾದ ಲೀಲಾರವರು ಏನು ಆತಂಕ ವನ್ನು ವ್ಯಕ್ತಪಡಿಸಿದ್ದಾರೆ, ಆ ಆತಂಕ ಪಡುವಂತಹ ಅವಶ್ಯಕತೆ ಇಲ್ಲ ಎನ್ನು ವಂತಹ ಸೂಚನೆಯನ್ನು ನಾನು ಕೊಟ್ಟಿದ್ದೇನೆ ಅಲ್ಲಿ ನೀಲಗಿರಿ ಮರಗಳನ್ನು ನೆಡಬೇಕು ಎನ್ನುವುದು ನಮ್ಮ ಅಪೇಕ್ಷೆಯಲ್ಲ. ಅರಣ್ಯ ಸಮಿತಿಯವರ ಕೋರಿಕೆಯ ಮೇಲೆ ಕೆಲವು ಕಡೆಗಳಲ್ಲಿ ನೆಡಲಾಗುತ್ತಿದೆ.

**ಉಪಸಭಾಪತಿಯವರು:-** ಮಾನ್ಯ ಸದಸ್ಯರು ನಂತರ ಮಂತ್ರಿಗಳ ಹತ್ತಿರ ಮಾತನಾಡಿ.

### ಹೈದರಾಬಾದ್ ಕರ್ನಾಟಕ ಭಾಗದಲ್ಲಿ ಯುವನೀತಿ ಯೋಜನೆ ಜಾರಿ ಬಗ್ಗೆ

### 82; ಶ್ರೀ ಅಮರನಾಥ ಪಾಟೀಲ್

ಅ) ರಾಜ್ಯದಲ್ಲಿ 'ಯುವನೀತಿ' ಯೋಜನೆ ಜಾರಿಗೊಳಿಸಲಾಗಿದೆಯೇ?

ಆ) ಹೈದರಾಬಾದ್ ಕರ್ನಾಟಕ ಭಾಗದಲ್ಲಿ ಸುಮಾರು 36 ಪ್ರತಿಶತ ನಿರುದ್ಯೋಗಿ ಪದವೀಧರರಿದ್ದು, ಅವರ ಯಶಸ್ಸಿಗೋಸ್ಕರ ವಿಶೇಷ ಯೋಜನೆ ರೂಪಿಸಲಾಗಿದೆಯೇ?

ಇ) ವಿಭಾಗೀಯ ಕೇಂದ್ರ ಗುಲ್ಬರ್ಗಾದಲ್ಲಿ ಕ್ರೀಡಾ ಪ್ರಾಧಿಕಾರ ಸ್ಥಾಪನೆಯ ಯೋಜನೆ ಸರ್ಕಾರದ ಮುಂದಿದೆಯೆ

ಈ) ಹಿಂದುಳಿದ ಈ ಭಾಗದ ಯುವಕರ ಕ್ರೀಡಾಸಕ್ತಿ ಉತ್ತೇಜಿಸಲು ಸರ್ಕಾರದ ಯೋಜನೆಗಳೇನು

**ಶ್ರೀ ಕೆ. ಅಭಯಚಂದ್ರ (ಯುವಜನ ಸೇವಾ ಮತ್ತು ಕ್ರೀಡಾ ಹಾಗೂ ಮೀನುಗಾರಿಕೆ ಸಚಿವರು)**

ಅ) ರಾಜ್ಯದಲ್ಲಿ. 'ಯುವ ನೀತಿ' ಯನ್ನು ಸರ್ಕಾರಿ। ಆದೇಶ ಸಂಖ್ಯೆ ಯುಸೇಇ 158 ಯುಸೇಕ್ರೀ 2012, ಬೆಂಗಳೂರು ದಿನಾಂಕ: 30–01–2013 ರ ಮೂಲಕ ಅಂಗೀಕರಿಸಲಾಗಿರುತ್ತದೆ.

ಯುವನೀತಿ ಜಾರಿಗೆ. ಸಂಬಂಧಿಸಿದಂತೆ. ವಿವಿಧ ಕಾರ್ಯಕ್ರಮಗಳ ಅನುಷ್ಠಾನಕ್ಕಾಗಿ ನಿಯಮಾವಳಿಗಳು, ಮಾರ್ಗದರ್ಶಿ ಸೂತ್ರಗಳನ್ನು ಸಿದ್ಧಪಡಿಸಿ ಯೋಜನಾ ಇಲಾಖೆಯ ಅನುಮೋದನೆ ಪಡೆಯಲು ಕ್ರಮ ವಹಿಸಲಾಗುತ್ತಿದೆ.

ಯುವನೀತಿ ಅಡಿ ರಾಜ್ಯದ ಭೌಗೋಳಿಕ ಮತ್ತು ಸಾಮಾಜಿಕ ಪರಿಸರಕ್ಕೆ ಅನುಗುಣವಾಗಿ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಹಾಗೂ ವಿವಿಧ ಇಲಾಖೆಗಳು ಅನುಷ್ಠಾನಗೊಳಿಸುತ್ತಿರುವ ಯುವಜನರಿಗೆ ತರಬೇತಿ ನೀಡುವಿಕೆ, ಕಾರ್ಯಕೌಶಲ್ಯತೆಯನ್ನು ಮೇಲ್ದರ್ಜೆಗೇರಿಸುವಿಕೆ. ಹಾಗೂ ಆರ್ಥಿಕ ನೆರವು ನೀಡುವ. ಮೂಲಕ ಯುವಜನರಿಗೆ ಪ್ರಯೋಜನಕಾರಿಯಾದ ಉದ್ಯೋಗಾವಕಾಶ ಕಲ್ಪಿಸುವುದು ಇತ್ಯಾದಿ ಕಾರ್ಯಕ್ರಮಗಳಲ್ಲಿ ಮಾರ್ಪಾಡುಗಳನ್ನು ಮಾಡಿ. ಅದಕ್ಕೆ ಅವಶ್ಯವಿರುವ ಅನುದಾನವನ್ನು ಆಯಾ ಇಲಾಖೆಗಳ ವಾರ್ಷಿಕ

ಆಯವ್ಯಯದಲ್ಲಿ ಕಲ್ಪಿಸಿಕೊಂಡು ಅನುಷ್ಠಾನಗೊಳಿಸಲು ಒತ್ತು ನೀಡ ಲಾಗಿದೆ.

ಯುವಜನರ ಪ್ರತಿಭೆಗಳನ್ನು ಕ್ರೋಢಿಕರಿಸಿ ಸೂಕ್ತ ರೀತಿಯ ಕಾರ್ಯ ಕ್ರಮಗಳನ್ನು ರೂಪಿಸಲು ಸಹಕಾರಿಯಾಗುವಂತೆ ಯುವಜನರ ವಿವರ ಗಳನ್ನೊಳಗೊಂಡ ಸಮಗ್ರ ದತ್ತಾಂಶ ಕೋಶವನ್ನು ಮತ್ತು ಯುವ ಪೋರ್ಟಲನ್ನು ಸಿದ್ಧಪಡಿಸುವ ದಿಶೆಯಲ್ಲಿ ಯುವ ಸಬಲೀಕರಣ ಮುತ್ತು ತ್ರೇಡಾ ಇಲಾಖೆಯು ರಾಷ್ಟ್ರೀಯ ಮಾಹಿತಿ-ವಿಜ್ಞಾನ ಕೇಂದ್ರದ ಸಹ ಯೋಗದೊಂದಿಗೆ ಕಾರ್ಯಪ್ರವೃತ್ತವಾಗಿದೆ.

ಹೆಚ್ಚಿನ ಪದವೀಧರರು ನಿರುದ್ಯೋಗಿಗಳಾಗಿರುವುದ್ಕು ಅವರಲ್ಲಿ ಜೀವನ ಕೌಶಲ್ಯಗಳ ಕೊರತೆಯಿಂದ ಎಂದು ಹಲವಾರು ವರದಿಗಳು ಒತ್ತಿ ಹೇಳುತ್ತಿವೆ. ಈ ಹಿನ್ನೆಲೆಯಲ್ಲಿ ಯುವನೀತಿಯಡಿ ಕೌಶಲ್ಯಗಳ ಉನ್ನತೀ ಕರಣಕ್ಕೆ ಸಂಬಂಧಿಸಿದಂತೆ ಜೀವನ ಕೌಶಲ್ಯ ಮುತ್ತು ಸ್ವಯಂ- ಉದ್ಯೋಗ ಕೌಶಲ್ಯ ತರಬೇತಿ ಕಾರ್ಯಕ್ರಮಗಳನ್ನು ಜಿಲ್ಲೆಗಳಲ್ಲಿ ಹಮ್ಮಿ ಕೊಳ್ಳಲು ಕಾರ್ಯಕ್ರಮ ರೂಪಿಸಲಾಗುತ್ತಿದೆ.

ಕರ್ನಾಟಕ ರಾಜ್ಯ ಯುವನೀತಿಯನ್ನು ರಾಜ್ಯದ ಎಲ್ಲಾ ಭಾಗದ ಯುವಜನರ ಅಗತ್ಯತೆಗಳನ್ನು ಪರಿಗಣನೆಗೆ ತೆಗೆದುಕೊಂಡು. ರೂಪಿಸ ಲಾಗಿದ್ದು, ಹೈದರಾಬಾದ್-ಕರ್ನಾಟಕ ಭಾಗದ ಯುವಜನರೂ ಸೇರಿ ದಂತೆ ರಾಜ್ಯದ ಎಲ್ಲಾ. ಭಾಗದ ಯುವಜನರನ್ನು ಗುರಿಯಾಗಿಟ್ಟು ಕೊಂಡು ಅನುಷ್ಠಾನಗೊಳಿಸಲಾಗುವುದು.

ಇ) ವಿಭಾಗೀಯ ಕೇಂದ್ರ ಗುಲ್ಬರ್ಗಾದಲ್ಲಿ ಕ್ರೀಡಾ ಪ್ರಾಧಿಕಾರ ಸ್ಥಾಪನೆಯ ಯೋಜನೆ ಸರ್ಕಾರದ ಮುಂದಿರುವುದಿಲ್ಲ.

ಈ) ಗುಲ್ಬರ್ಗಾ ವಿಭಾಗದ ಬೀದರ್, ಕೊಪ್ಪಳ, ರಾಯಚೂರು ಜಿಲ್ಲೆಗಳಲ್ಲಿ ಕ್ರೀಡಾ ಶಾಲೆಗಳನ್ನು ಆರಂಭಿಸಲಾಗಿದ್ದು, 2 ರಿಂದ 7ನೇ ತರಗತಿ ಅಧ್ಯಯನ ಮಾಡುತ್ತಿರುವ ಪ್ರತಿಭಾವಂತ ಯುವ ಕ್ರೀಡಾಪಟುಗಳಿಗೆ ಉಚಿತ ವಸತಿ, ಊಟೋಪಹಾರ, ವೈಜ್ಞಾನಿಕ ಕ್ರೀಡಾ ತರಬೇತಿ ಮತ್ತು

ಕ್ರೀಡಾಗಂಟು ಒದಗಿಸಲಾಗುತ್ತಿದೆ. ಪ್ರಸ್ತುತ, ಈ ಶಾಲೆಗಳಲ್ಲಿ ಕ್ರೀಡೆಗಳಲ್ಲಿ ಪ್ರತಿಭಾವಂತ 93 ಬಾಲಕರು ಮುತ್ತು 25 ಬಾಲಕಿಯರಿಗೆ ಅವಕಾಶ ಕಲ್ಪಿಸಲಾಗಿದೆ. ಗುಲ್ಬರ್ಗಾ ಮತ್ತು ಬಳ್ಳಾರಿ ಜಿಲ್ಲೆಯಲ್ಲಿ 8 ನೇ ತರಗತಿ ಯಿಂದ 10ನೇ ತರಗತಿಯವರೆಗೆ ವ್ಯಾಸಂಗ ಮಾಡುತ್ತಿರುವ ಪ್ರತಿಭಾ ವಂತ ಕ್ರೀಡಾಪಟುಗಳಿಗಾಗಿ ಕ್ರೀಡಾ ಶಾಲೆಗಳನ್ನು ಆರಂಭಿಸಲಾಗಿದೆ. ಈ ಶಾಲೆಗಳಲ್ಲಿ ಕ್ರೀಡೆಗಳಲ್ಲಿ ಪ್ರತಿಭಾವಂತ ಒಟ್ಟು 62 ಕ್ರೀಡಾಪಟುಗಳಿಗ ಅವಕಾಶ ಕಲ್ಪಿಸಲಾಗಿದೆ. ಪೌಢ ಶಾಲಾ ವ್ಯಾಸಂಗದ ನಂತರ ಪ್ರತಿಭಾನ್ವಿತ ಕ್ರೀಡಾಪಟುಗಳಿಗೆ ರಾಜ್ಯದ ಇತರೆ ಭಾಗಗಳಲ್ಲಿರುವ ಕ್ರೀಡಾ ನಿಲಯಗಳಲ್ಲಿ ಅವಕಾಶ ಕಲ್ಪಿಸಲಾಗುತ್ತಿದೆ.

ಕ್ರೀಡಾಸಕ್ತಿ ಉತ್ತೇಜಿಸುವ ದೃಷ್ಟಿಯಿಂದ ತಾಲ್ಲೂಕು ಮಟ್ಟದಿಂದ ವಿಭಾಗ ಮಟ್ಟದವರೆಗೆ ದಸರಾ ಕ್ರೀಡಾಕೂಟವನ್ನು ಆಯೋಜಿಸಲಾಗುತ್ತಿದೆ. ಆಯ್ಕೆಯಾದ ಪ್ರತಿಭಾವಂತ ಕ್ರೀಡಾಪಟುಗಳನ್ನು ರಾಜ್ಯ ಮಟ್ಟದ ದಸರಾ ಕ್ರೀಡಾಕೂಟಕ್ಕೆ ಪ್ರಯಾಣ ಭತ್ಯ ಮತ್ತು ದಿನಭತ್ಯಯನ್ನು ನೀಡಿ ನಿಯೋಜಿಸಲಾಗುತ್ತಿದೆ. ಅಲ್ಲದೇ, 16 ವರ್ಷ ವಯೋಮಿತಿಯ ಒಳಗಿನ ಕ್ರೀಡಾಪಟುಗಳಿಗೆ ಪಂಚಾಯತ್ ಯುವ ಕ್ರೀಡಾ ಮತ್ತು ಖೇಲ್. ಅಭಿಯಾನ ಯೋಜನೆಯಡಿ ಕ್ರೀಡಾ ಸ್ಪರ್ಧೆಗಳನ್ನು ಆಯೋಜಿಸಲಾ ಗುತ್ತಿದೆ.

ಗುಲ್ಬರ್ಗಾ ವಿಭಾಗದಲ್ಲಿ ಕ್ರೀಡಾ ಮೂಲಭೂತ ಸೌಲಭ್ಯಗಳ ಸೃಜನೆಗೆ ಒತ್ತು ನೀಡಲಾಗಿದ್ದು, ಕೆಳಕಾಣಿಸಿದ ಮೂಲಭೂತಸೌಲಭ್ಯ ಕಲ್ಪಿಸ ಲಾಗಿದೆ.

1. **ಗುಲ್ಬರ್ಗಾ ಜಿಲ್ಲೆ:** ಗುಲ್ಬರ್ಗಾ ಜಿಲ್ಲಾ ಕೇಂದ್ರದಲ್ಲಿ ಸುಸಜ್ಜಿತ ಜಿಲ್ಲಾ ಕ್ರೀಡಾಂಗಣ, ಒಳಾಂಗಣ ಕ್ರೀಡಾಂಗಣ, ಈಜುಕೊಳ, ಟೆನ್ನಿಸ್ ಅಂಕಣಗಳನ್ನು ನಿರ್ಮಿಸಲಾಗಿದೆ. ಅಳಂದಾ, ಸೇಡಂ, ಚಿತ್ತಾಪುರ, ಚಿಂಚೊಳ್ಳಿಗಳಲ್ಲಿ ತಾಲ್ಲೂಕು ಕ್ರೀಡಾಂಗಣ ನಿರ್ಮಾಣ ಕಾಮಗಾರಿ

ಪ್ರಗತಿಯಲ್ಲಿದೆ. ಜೇವರ್ಗಿಯಲ್ಲಿ ತಾಲ್ಲೂಕು ಕ್ರೀಡಾಂಗಣ ನಿರ್ಮಿಸಲಾಗಿದೆ.

2. **ಯಾದಗಿರಿ ಜಿಲ್ಲೆ:** ಯಾದಗಿರಿಯಲ್ಲಿ ಜಿಲ್ಲಾ ಕ್ರೀಡಾ ಸಂಕೀರ್ಣ ನಿರ್ಮಾಣಕ್ಕಾಗಿ ರೂ. 408.29– ಲಕ್ಷ ಬಿಡುಗಡೆ ಮಾಡಲಾಗಿದೆ.

3. **ಬೀದರ್ ಜಿಲ್ಲೆ:** ಬೀದರ್ ನಗರದಲ್ಲಿ ಸುಸಜ್ಜಿತ ಜಿಲ್ಲಾ ಕ್ರೀಡಾಂಗಣ, ಈಜುಕೊಳ, ಒಳಾಂಗಣ ಕ್ರೀಡಾಂಗಣ ಮತ್ತು ಮಲ್ಟಿ ಜಿಮ್ ಸೌಲಭ್ಯ ಕಲ್ಪಿಸಲಾಗಿದೆ. ಬಸವ ಕಲ್ಯಾಣ, ಔರಾದ್ ಮತ್ತು ಹುಮನಾಬಾದ್ ತಾಲ್ಲೂಕು ಕ್ರೀಡಾಂಗಣ ಕಾಮಗಾರಿ ಪೂರ್ಣಗೊಳಿಸಲಾಗಿದೆ.

4. **ಬಳ್ಳಾರಿ ಜಿಲ್ಲೆ:** ಬಳ್ಳಾರಿ ನಗರದಲ್ಲಿ. ಸುಸಜ್ಜಿತ ಜಿಲ್ಲಾ ಕ್ರೀಡಾಂಗಣ, ಒಳಾಂಗಣ ಕ್ರೀಡಾಂಗಣ ನಿರ್ಮಿಸಲಾಗಿದೆ. ಸಿಂಥೆಟಿಕ್ ಫುಟ್ಬಾಲ್ ಟರ್ಫ್ ಕ್ರೀಡಾ ಅಂಕಣ ಮುತ್ತು ಕ್ರೀಡಾ ಸಂಕೀರ್ಣ ನಿರ್ಮಾಣ ಕಾಮಗಾರಿ ಪ್ರಗತಿಯಲ್ಲಿದೆ. ಹೊಸಪೇಟೆ ಪಟ್ಟಣದಲ್ಲಿ ಒಳಾಂಗಣ ಈಜುಕೊಳ ಕಾಮಗಾರಿಯನ್ನು ಪೂರ್ಣಗೊಳಿಸಲಾಗಿದೆ ಮತ್ತು ಹೊರಾಂಗಣ ಕ್ರೀಡಾ ಸಂಕೀರ್ಣ ನಿರ್ಮಾಣ ಕಾರ್ಯ ಪ್ರಗತಿಯಲ್ಲಿದೆ. ಸಂಡೂರು, ಸಿರಗುಪ್ಪ, ಹಡಗಲಿ ಮತ್ತು ಹೊಸಪೇಟೆಗಳಲ್ಲಿ ತಾಲ್ಲೂಕು ಕ್ರೀಡಾಂಗಣಗಳನ್ನು ನಿರ್ಮಿಸಲಾಗಿದೆ.

5. **ಕೊಪ್ಪಳ ಜಿಲ್ಲೆ:** ಕೊಪ್ಪಳ ನಗರದಲ್ಲಿ ಜಿಲ್ಲಾ ಕ್ರೀಡಾಂಗಣ ನವೀಕರಣ ಕಾಮಗಾರಿ ಮತ್ತು ಈಜುಕೊಳ ನಿರ್ಮಾಣ ಕಾಮಗಾರಿ ಪ್ರಗತಿ ಯಲ್ಲಿದೆ. ಗಂಗಾವತಿ ನಗರದಲ್ಲಿ ತಾಲ್ಲೂಕು ಕ್ರೀಡಾಂಗಣ ಮತ್ತು ವ್ಯಾಯಾಮ ಶಾಲೆ ನಿರ್ಮಿಸಲಾಗಿದೆ

6. **ರಾಯಚೂರು ಜಲ್ಲೆ:** ರಾಯಚೂರು ನಗರದಲ್ಲಿ ಜಿಲ್ಲಾ ಕ್ರೀಡಾಂಗಣ, ಒಳಾಂಗಣ ಕ್ರೀಡಾಂಗಣ ಮತ್ತು ಈಜುಕೊಳ ನಿರ್ಮಿಸಲಾಗಿದೆ. ದೇವದುರ್ಗ ಮತ್ತು ಸಿಂಧನೂರುಗಳಲ್ಲಿ ತಾಲ್ಲೂಕು

ಕ್ರೀಡಾಂಗಣಗಳನ್ನು ನಿರ್ಮಿಸಲಾಗಿದೆ. ಲಿಂಗಸುಗೂರು ತಾಲ್ಲೂಕು ಕ್ರೀಡಾಂಗಣ ನಿರ್ಮಾಣ ಹಂತದಲ್ಲಿದೆ.

ಗ್ರಾಮೀಣ ಕ್ರೀಡೆಗಳಿಗೆ ಉತ್ತೇಜನ ನೀಡಲು ಯುವ. ಸಬಲೀಕರಣ ಮತ್ತು ಕ್ರೀಡಾ ಇಲಾಖೆಯು ಗ್ರಾಮೀಣ ಕ್ರೀಡೆಗಳು ಮತ್ತು ಪಂದ್ಯಗಳು ಎಂಬ ಯೋಜನೆಯನ್ನು: ರೂಪಿಸಿದ್ದು, ಕಳೆದ ಮೂರು ವರ್ಷಗಳಲ್ಲಿ 2010–11, 2011–12 ಮತ್ತು 2012–13 ನೇ ಸಾಲಿನಲ್ಲಿ ತಲಾ ₹ 100.00 ಲಕ್ಷ ವೆಚ್ಚ ಭರಿಸಲಾಗಿದೆ. ಸದರಿ ಕಾರ್ಯಕ್ರಮದಡಿ ಕೆಳಕಾಣಿಸಿದ ಗ್ರಾಮೀಣ ಕ್ರೀಡಾಭಿವೃದ್ಧಿ ಕಾರ್ಯ ಕೈಗೊಳ್ಳಲಾಗುತ್ತಿದೆ.

1) ಸಾಮೂಹಿಕ ಶ್ರೀಡೆಗಳು: 770 ಹೋಬಳಿಗಳಲ್ಲಿ ತಲಾ ₹ 5,000/– ವೆಚ್ಚದಲ್ಲಿ. ಎಲ್ಲಾ ವಯೋಮಾನದ ಸಾರ್ವಜನಿಕರು ಪಾಲ್ಗೊಳ್ಳ ಬಹುದಾದ ಸ್ಥಳೀಯವಾಗಿ ಜನಪ್ರಿಯವಾಗಿರುವ ಗ್ರಾಮೀಣ ಕ್ರೀಡೆ ಗಳನ್ನು ಆಯೋಜಿಸಲಾಗುತ್ತಿದೆ.

2) ಅಂತರ ಯುವ ಸಂಘಗಳ ಪಂದ್ಯಾವಳಗಳು: ಪ್ರತೀ... ಜಿಲ್ಲೆಯಲ್ಲಿ ₹ 27,750/– ವೆಚ್ಚದಲ್ಲಿ ಅಂತರ ಯುವ ಸಂಘಗಳ ಪಂದ್ಯಾವಳಿ ಗಳನ್ನು ಆಯೋಜಿಸಲಾಗುತ್ತಿದೆ.

3) ಜಿಲ್ಲಾ ಕ್ರೀಡಾ ಪ್ರಶಸ್ತಿ ಒಟ್ಟು ₹ 13.50 ಲಕ್ಷಗಳ ವೆಚ್ಚದಲ್ಲಿ ತಲಾ ₹ 5,000/– ರಂತೆ ಪ್ರತಿ ಜಿಲ್ಲೆಯಲ್ಲಿ ಗರಿಷ್ಠ 10 ಗ್ರಾಮೀಣ ಕ್ರೀಡಾಪಟುಗಳಿಗೆ ಜಿಲ್ಲಾ ಕ್ರೀಡಾ ಪ್ರಶಸ್ತಿಗಳನ್ನು ನೀಡಲಾಗುತ್ತಿದೆ.

4) ಸಂಘ ಸಂಸ್ಥೆಗಳಿಗೆ ಕ್ರೀಡಾ ಸಲಕರಣೆ ಖರೀದಿ: ಗ್ರಾಮೀಣ ಕ್ರೀಡಾ ಸಂಘಗಳಿಗೆ ಅಗತ್ಯ ಕ್ರೀಡಾ ಸಲಕರಣೆಗಳನ್ನು ಒದಗಿಸಲಾಗುತ್ತಿದ್ದು, ಪ್ರತೀ ಸಂಘಕ್ಕೆ ₹5,000/– ವೆಚ್ಚದಲ್ಲಿ ಪ್ರತಿಯೊಂದು ಜಿಲ್ಲೆಯಲ್ಲಿ 30 ಕ್ರೀಡಾ ಸಂಘಗಳಿಗೆ ಕ್ರೀಡಾ ಸಾಮಗ್ರಿ ಒದಗಿಸಲಾಗುತ್ತಿದೆ.

**ಶ್ರೀ ಅಮರನಾಥ ಪಾಟೀಲ್:–** ಮಾನ್ಯ ಸಭಾಪತಿಗಳೆ, ನಾಲ್ಕು ಪುಟಗಳಲ್ಲಿ ಉತ್ತರವನ್ನು ಕೊಟ್ಟಿದ್ದಾರೆ. ಸುಮ್ಮನೆ ಕರಿ ಅಕ್ಷರಗಳನ್ನು ಕೊಟ್ಟಿದ್ದಾರೆ

ಎನ್ನುವುದು ನನ್ನ ಭಾವನೆ. ಇದರಲ್ಲಿ ಯಾವ ದಿಕ್ಕು–ದೆಸೆಗಳು ಇಲ್ಲ. ಯುವ ಜನರ ಬಗ್ಗೆ ಯಾವ ನೀತಿಯನ್ನು ಅಳವಡಿಸಿಕೊಳ್ಳುತ್ತಾರೆ ಎನ್ನುವ ಉಲ್ಲೇಖವೇ ಮಾಡಿರುವುದಿಲ್ಲ ಎನ್ನುವುದು ನನ್ನ ಭಾವನೆ. ರಾಜ್ಯದ ಯುವ ಜನರಿಗಾಗಿ ಅವರ ಮುಂದಿನ ಭವಿಷ್ಯಕ್ಕಾಗಿ ರೂಪಿಸುವಂತಹ ಪ್ರಮುಖವಾದ ಯೋಜನೆ ಮತ್ತು ಸಂಕಲ್ಪಗಳನ್ನು ಬಹಿರಂಗಪಡಿಸುತ್ತದೆ. ಈ ಯುವರೀತಿ ತನ್ನ ಭವಿಷ್ಯಕ್ಕಾಗಿ ಮಾಡಿದ ಹೂಡಿಕೆಯ ಸಂಕೇತ. ಯುವಜನರ ಅಭಿಲಾಷೆಗೆ ಅವರ ಕನಸುಗಳಿಗೆ ಸಂಧಿಸುವಂತೆ ನೀತಿ ಇರಬೇಕು ಎನ್ನುವುದು ನನ್ನ ಭಾವನೆ. ಹಿಂದಿನ ಮುಖ್ಯಮಂತ್ರಿಗಳು ಮತ್ತು ಇವತ್ತಿನ ವಿರೋಧ ಪಕ್ಷದ ನಾಯಕರಾದಂತಹ ಮಾನ್ಯ ಸದಾನಂದಗೌಡರು ಹಿಂದೆ ಇದರ ಬಗ್ಗೆ ಹೆಚ್ಚು ಒತ್ತು ಕೊಟ್ಟಿದ್ದಾರೆ ಇದರಲ್ಲಿ ಗುರುತಿಸಲ್ಪಡುವ ಯುವಜನತೆ, ಸಾಮಾಜಿಕವಾಗಿ ತುಳಿತಕ್ಕೆ ಒಳಗಾಗಿ ಆರ್ಥಿಕವಾಗಿ ವಂಚಿತರಾದವರಿದ್ದಾರೆ, ಪರಿಶಿಷ್ಟ ಜಾತಿ/ಪರಿಶಿಷ್ಟ ವರ್ಗದ ಯುವ ಜನರಿದ್ದಾರೆ. ಅಲ್ಪಸಂಖ್ಯಾತ ಯುವಜನರು, ಶೈಕ್ಷಣಿಕವಾಗಿ ಶಿಕ್ಷಣ ವಂಚಿತರಿದ್ದಾರೆ. ಗ್ರಾಮೀಣ ಮತ್ತು ನಗರ ಪ್ರದೇಶದ ಬಡ ಯುವಜನರು, ಅಪಾಯಕರ ಸ್ಥಿತಿಯಲ್ಲಿರುವ ಯುವಜನರಿದ್ದಾರೆ. ಸಂಪೂರ್ಣ ಸಾಮರ್ಥ್ಯವನ್ನು ಅರಿತುಕೊಂಡು ತಮ್ಮ ಕೊಡುಗೆಯನ್ನು ನೀಡಲು ಸರ್ಕಾರ ಮಧ್ಯಪ್ರವೇಶ ಮಾಡಬೇಕು ಎಂದು ನಿರೀಕ್ಷೆಯಲ್ಲಿರುವ ಯುವಜನರು ಇದ್ದಾರೆ. ಆದರೆ ಇವರ ಬಗ್ಗೆ ಕಾಳಜಿವಹಿಸುವಂತಹ ಯಾವುದೇ ನಿಖರವಾದ ಕಾರ್ಯಕ್ರಮಗಳನ್ನು ಸರ್ಕಾರ ಕೊಟ್ಟಿರುವುದಿಲ್ಲ. ಮಾನ್ಯ ಸದಾನಂದಗೌಡರು ಮುಖ್ಯಮಂತ್ರಿಗಳಾಗಿದ್ದಾಗ್ ಈ ಯುವಜನರಿಗಾಗಿ ಯುವನೀತಿಯನ್ನು ಮುಂದಿನ ಯುವಜನರ ಭವಿಷ್ಯವನ್ನು ರೂಪಿಸುವಂತಹ ನೀತಿಯನ್ನು ತರಬೇಕು.

**ಉಪಸಭಾಪತಿಯವರು:–** ನೀವು ಉಪಪ್ರಶ್ನೆಯನ್ನು ಮಾತ್ರ ಕೇಳಿ, ಭಾಷಣ ಮಾಡಲು ಪ್ರಶ್ನೋತ್ತರದಲ್ಲಿ ಅವಕಾಶವಿಲ್ಲ.

**ಶ್ರೀ ಅಮರನಾಥ ಪಾಟೀಲ್:–** ಮಾನ್ಯ ಸಭಾಪತಿಗಳೆ, ನಮ್ಮ ಹೈದ್ರಾಬಾದ್ ಕರ್ನಾಟಕದಲ್ಲಿ 30% ರಷ್ಟು ಯುವ ನಿರುದ್ಯೋಗಿ ಪದವಿಧರ ಯುವಕರಿದ್ದಾರೆ. ಅವರ ಅಭಿವೃದ್ಧಿಗಾಗಿ ವಿಶೇಷವಾದ ಯಾವ ಯೋಜನೆಗಳು

ಇವೆ ಎಂದು ಕೇಳಿದ್ದೇನೆ. ಇಡೀ ರಾಜ್ಯದ ಯೋಜನೆ ಮಾಡುತ್ತೇವೆ ಅದು ಆದ ಮೇಲೆ ಹೈದ್ರಾಬಾದ ಕರ್ನಾಟಕಕ್ಕೆ ಏನು ಕೊಡಬೇಕು ಅದನ್ನು ಕೊಡುತ್ತೇವೆ ಎಂದು ಹೇಳಿದ್ದಾರೆ. ನಾನು ಏಕೆ ಈ ಮಾತಿಗೆ ಒತ್ತು ಕೊಡುತ್ತಿದ್ದೇನೆ ಎಂದರೆ, ಅಲ್ಲಿನ ಪರಿಸ್ಥಿತಿ ಹೇಗೆ ಇದೆ ಎಂದರೆ, ರಾಯಚೂರ ಮತ್ತು ಯಾದಗಿರಿ ಜಿಲ್ಲೆಯ ಯುವಕರನ್ನು ಯಾವುದೆ ಸಬ್ ಆಫ್ರಿಕನ್ ದೇಶ ಗಳೊಂದಿಗೆ ತಾವು. compare ಮಾಡಬಹುದು.

**ಉಪಸಭಾಪತಿಯವರು:–** ತಾವು ಉಪಪ್ರಶ್ನೆಯನ್ನು ಕೇಳಿ, ಭಾಷಣ ಮಾಡಬೇಡಿ. ಅದನ್ನು ಬೇಕಾದರೆ ಬೇರೆ ರೂಪದಲ್ಲಿ ತನ್ನಿ.

**ಶ್ರೀ. ಅಮರನಾಥ್ ಪಾಟೀಲ್ :–** ಯುವ ನೀತಿಯನ್ನು ರೂಪಿಸುವ ಬಗ್ಗೆ ನಾನು ಹೇಳುತ್ತಿದ್ದೇನೆ. ಮತ್ತು ಹೈದರಾಬಾದ್–ಕರ್ನಾಟಕಕ್ಕೆ ವಿಶೇಷವಾಗಿ ಏನೂ ಕೊಟ್ಟಿಲ್ಲ. ತಾಲ್ಲೂಕುಗಳಿಗೆ ಏನೂ ಕೊಟ್ಟಿಲ್ಲ.

**ಶ್ರೀ ಡಿ.ವಿ. ಸದಾನಂದಗೌಡ:–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರ ಕೆಲವು ಪ್ರಶ್ನೆಗಳಿಗೆ ಉತ್ತರವನ್ನು ಕೊಟ್ಟಿದ್ದಾರೆ. ಆದರೆ ಬಜೆಟನ್‍ಲ್ಲಿ ಕೇವಲ 1 ಕೋಟಿ ರೂಪಾಯಿಗಳ ಕಡಿಮೆ ಮೊತ್ತವನ್ನು ಯುವಜನ ಸೇವಾ ಮತ್ತು ಕ್ರೀಡಾ ಇಲಾಖೆಗೆ ಕೊಟ್ಟು, ಇಷ್ಟು ದೊಡ್ಡ ಯೋಜನೆಗಳನ್ನು ಅನುಷ್ಠಾನ ಮಾಡುವುದಕ್ಕೆ ಸಾಧ್ಯವೇ ಎಂಬ ಆತಂಕ ಸದಸ್ಯರಲ್ಲಿ ಇದೆ. ಆದಕಾರಣ ಸ್ಪಷ್ಟ ನಿಲುವು ತೆಗೆದುಕೊಳ್ಳುತ್ತಾರೆ ಎಂದು ಅವರ ಭಾವನೆ.

**ಶ್ರೀ ಅಮರನಾಥ್ ಪಾಟೀಲ್:–** ನನ್ನ ಹತ್ತಿರ INDIA TODAY ಪತ್ರಿಕೆ ಸರ್ವೆಮಾಡಿದ್ದು, ಅದರ ವಿವರ ಇದೆ. ಇತರ ಇಲಾಖೆಗಳ ಸಹಕಾರ ದೊಂದಿಗೆ ಈ ಕಾರ್ಯಕ್ರಮವನ್ನು ರೂಪಿಸಿ, ಅಲ್ಲಿನ ಪದವೀಧರರು ಮತ್ತು ಯುವಕರಿಗೆ ಕೊಡಬೇಕೆಂದು ವಿನಂತಿ. ಹಿಂದುಳಿದ ಭಾಗದ ಯುವಕರ ಕ್ರೀಡಾ ಶಕ್ತಿ ಉತ್ತೇಜಿಸಲು ಸರ್ಕಾರದ ಯೋಜನೆಗಳ ಬಗ್ಗೆ ಪ್ರಶ್ನೆಯನ್ನು ಕೇಳಿದ್ದೇನೆ. ತಾಲ್ಲೂಕು ಮತ್ತು ಜಿಲ್ಲಾ ಕ್ರೀಡಾ ಕೇಂದ್ರಗಳ ಬಗ್ಗೆ ಪ್ರಸ್ತಾಪ ಮಾಡಿದ್ದು. ಅವುಗಳ್ಯಾವುವೂ ಸುವ್ಯವಸ್ಥಿತ ಸ್ಥಿತಿಯಲ್ಲಿ ಇಲ್ಲ. ಅಲ್ಲಿನ ಸಿಬ್ಬಂದಿ

ಗಳು ಸರಿಯಾಗಿ ಕೆಲಸ ಮಾಡುತ್ತಿಲ್ಲ ಮತ್ತು ಯಾವುದೇ ಲಾಭ ಅದರಿಂದ ಆಗುತ್ತಿಲ್ಲ.

**ಶ್ರೀ ಕೆ. ಅಭಯಚಂದ್ರ:–** ಮಾನ್ಯ ಸಭಾಪತಿಯವರೇ, ಆ ಭಾಗದ ಶಾಸಕರನ್ನು ಸಭೆ ಕರೆದು ಸರಿಪಡಿಸುವ ಕೆಲಸವನ್ನು ಮಾಡುತ್ತೇನೆ.

**ಹಾಸನದ ಹುಣಸಿನ ಕೆರೆ ಅಭಿವೃದ್ಧಿ ಬಗ್ಗೆ**

**168; ಶ್ರೀ ಪಟೇಲ್ ಶಿವರಾಂ**

ಅ) ಹಾಸನ ನಗರಕ್ಕೆ ಹೊಂದಿಕೊಂಡಿರುವ ಹುಣಸಿನ ಕೆರೆ ಅಭಿವೃದ್ಧಿಗೆ ಕೈಗೊಂಡಿರುವ ಕ್ರಮಗಳೇನು ?

**ಶಿವರಾಜ ಎಸ್. ತಂಗಡಗಿ (ಸಣ್ಣ ನೀರಾವರಿ ಸಚಿವರು)**

ಅ) ಹಾಸನ ನಗರಕ್ಕೆ ಹೊಂದಿಕೊಂಡಿರುವ ಹುಣಸಿನಕೆರೆಯ ಭಾಗಶ: ಅಭಿವೃದ್ಧಿ ಕಾಮಗಾರಿಯನ್ನು ₹30.00 ಲಕ್ಷಗಳ ಅಂದಾಜಿನೊಂದಿಗೆ 4702–ಕರೆಗಳ ಆಧುನೀಕರಣ ಯೋಜನೆಯಡಿಯಲ್ಲಿ ಕೈಗೊಳ್ಳಲಾಗಿದೆ. ಪ್ರಸ್ತುತ ಕಾಮಗಾರಿಯು ಪೂರ್ಣಗೊಂಡಿದ್ದು, ಮಾರ್ಚ್–2013ರ ಅಂತ್ಯಕ್ಕೆ ₹37.15 ಲಕ್ಷಗಳು ವೆಚ್ಚವಾಗಿರುತ್ತದೆ.

ಕೆರೆ ಅಭಿವೃದ್ಧಿ ಪ್ರಾಧಿಕಾರ ಅನುದಾನದಿಂದ ಹಾಸನ ನಗರದ ಹುಣಸಿನ ಕೆರೆ ಅಭಿವೃದ್ಧಿಗಾಗಿ ಕೆ.ಟಿ.ಟಿ.ಪಿ.ಕಾಯ್ದೆಯನುಸಾರ ಟೆಂಡರ್ ಕರೆದು. ಕೆರೆಯನ್ನು ಅಭಿವೃದ್ಧಿಪಡಿಸುವ ಸಲುವಾಗಿ ವಿವರವಾದ ವರದಿ ತಯಾರಿಸಲು (ಡಿಪಿಆರ್) ಕನ್ಸಲ್‌ಟೆನ್ಸಿಯನ್ನು ದಿನಾಂಕ 28/07/2012 ರಂದು ಮೆ:ಎಸ್.ಎಸ್. ಬಿಲ್ಡರ್ಸ್, ಹಾಸನ ರವರನ್ನು ನೇಮಿಸಿ ಜಿಲ್ಲಾಧಿಕಾರಿಗಳು ಆದೇಶಿಸಿರುತ್ತಾರೆ. ಅದರಂತೆ ಮೆ:ಎಸ್.ಎಸ್. ಬಿಲ್ಡರ್ಸ್, ಹಾಸನರವರು ಕೆರೆಯನ್ನು ಸರ್ವೆ ಮಾಡಿ, ಪ್ರಾಥಮಿಕ ವರದಿಯನ್ನು ಸಲ್ಲಿಸಿದ್ದಾರೆ. ಸದರಿಯವರಿಗೆ ದಿನಾಂಕ 11/03/2013 ಹಾಗೂ 14/05/2013ರಂದು ಎರಡು ಸೂಚನಾ ಪತ್ರಗಳನ್ನು ನೀಡಿದ್ದು, ಒಂದು ತಿಂಗಳೊಳಗಾಗಿ ಡಿ.ಪಿ.ಆರ್. ತಯಾರಿಸಿ ಸಲ್ಲಿಸುವಂತೆ ಸೂಚಿಸಲಾಗಿದೆ.

ಸದರಿಯವರು ಡಿ.ಪಿ.ಆರ್. ಸಲ್ಲಿಸಲು ವಿಫಲವಾದಲ್ಲಿ ಟೆಂಡರ್‌ನ್ನು ರದ್ದುಪಡಿಸಿ, ಮರು ಟೆಂಡರ್ ಕರೆಯಲು ಕ್ರಮ ಕೈಗೊಳ್ಳಲಾಗುವುದು.

**ಶ್ರೀ ಪಟೇಲ್ ಶಿವರಾಂ:–** ಮಾನ್ಯ ಸಭಾಪತಿಯವರೇ, ಈ ಪ್ರಶ್ನೆ ಯನ್ನು ಒಂದು ವರ್ಷದ ಹಿಂದೆ ಕೇಳಿದ್ದು ಆಗ ಯಾವ ಉತ್ತರವನ್ನು ನೀಡಿದ್ದರೋ ಅದೇ ರೀತಿಯ ಉತ್ತರವನ್ನು ಈಗಲೂ ಕೊಟ್ಟಿದ್ದಾರೆ. ಈಗ ನೀಡಿರುವ ಉತ್ತರವು ಅದರ ಕಾಪಿ ಇದ್ದಂತೆ ಕಾಣುತ್ತಿದೆ. ಏಕೆಂದರೆ ಇದು ನಗರದ ಒಳಗಡ ಇರುವ ಕೆರೆ ಆಗಿದ್ದು, ಅಲ್ಲಿನ ಅಚ್ಚುಕಟ್ಟಿನ ಪ್ರದೇಶವು ನಿವೇಶನಗಳಾಗಿ ಪರಿವರ್ತನೆ ಆಗಿದೆ. 37 ಲಕ್ಷ ರೂಪಾಯಿಗಳಲ್ಲಿ ಅಭಿವೃದ್ಧಿ ಪಡಿಸಿದ್ದೇವೆ ಎಂದು ಹೇಳಿ ಎರಡನೆ ಪ್ಯಾರಾದಲ್ಲಿ ಕೆರೆ ಅಭಿವೃದ್ಧಿ ಪ್ರಾಧಿಕಾರ ಅನುದಾನದಿಂದ ಹಾಸನ ನಗರದ ಹುಣಸಿನ ಕೆರೆ ಅಭಿವೃದ್ಧಿಗಾಗಿ ಕೆಟಿಟಿಪಿ ಕಾಯ್ದೆಯನುಸಾರ ಟೆಂಡರ್ ಕರೆದು ಕೆರೆಯನ್ನು ಅಭಿವೃದ್ಧಿಪಡಿಸುವ ಸಲು ವಾಗ ವಿವರವಾದ ವರದಿ ತಯಾರಿಸಲು (ಡಿಪಿಆರ್) ಕನ್ಸಲ್ಟೆನ್ಸಿಯನ್ನು ದಿನಾಂಕ 28/7/12ರಂದು ಮೆ:ಎಸ್.ಎಸ್. ಬಿಲ್ಡರ್, ಹಾಸನ ರವರನ್ನು ನೇಮಿಸಿ ಜಿಲ್ಲಾಧಿಕಾರಿಗಳು ಆದೇಶಿಸಿರುತ್ತಾರೆ.

**ಉಪ ಸಭಾಪತಿಯವರು:–** ತಾವು ಉಪ ಪ್ರಶ್ನೆಯನ್ನು ಕೇಳಿ, ಓದಬೇಡಿ.

**ಶ್ರೀ ಪಟೇಲ್ ಶಿವರಾಂ:–** ಬೇರೆಯವರು ಅರ್ಧ ಗಂಟೆ ಮಾತ ನಾಡುತ್ತಾರೆ, ನಾನು ಇನ್ನೂ 5 ನಿಮಿಷಗಳೂ ಮಾತನಾಡಿಲ್ಲ. ಅಲ್ಲಿ ಕೆರೆಯ ಸುತ್ತಲೂ ಒತ್ತುವರಿಯಾಗಿದೆ. ಕೆರೆ ಸರ್ವೆ ಮಾಡಿಸಿದ್ದೇವೆ ಎಂದು ಹೇಳಿದ್ದಾರೆ. ಕೆರೆಯ ಹತ್ತಾರು ಎಕರೆಗಳು ಒತ್ತುವರಿಯಾಗಿದೆ. ಅಲ್ಲಿ ಇನ್ನೂ ಸಲ್ಪ ದಿವಸಗಳಲ್ಲಿ ಕೆರೆಯನ್ನು ಅಭಿವೃದ್ಧಿಪಡಿಸದಿದ್ದರೆ ಎಲ್ಲರೂ ಕೆರೆಯನ್ನು ಮುಚ್ಚಿ ಒತ್ತುವರಿ ಮಾಡುವ ಸಂದರ್ಭ ಇದೆ. ಇದು ಹಾಸನ ನಗರದ ಒಳಗೆ ಇದೆ. ಹಿಂದೆ ಶ್ರೀ ಗೋವಿಂದ ಕಾರಜೋಳರವರು ಮಂತ್ರಿಯಾಗಿದ್ದಾಗ ಪ್ರಸ್ತಾಪಿಸಿದ್ದು, ಅಲ್ಲಿಗೆ ವಿದೇಶಿ ಪಕ್ಷಿಗಳು ಬರುತ್ತವೆ. ಇದಲ್ಲದೇ ಬೇಲೂರು ಮತ್ತು ಹಳೇಬೀಡು ಪ್ರವಾಸಿ ತಾಣಗಳಿಗೆ ಹೋಗುವ ರಸ್ತೆಗಳು ಬರುತ್ತವೆ. ಅಲ್ಲಿ

ಪಾರ್ಕ್ ಮಾಡಿ, ಕೆರೆಯನ್ನು ಅಭಿವೃದ್ಧಿಪಡಿಸಿ ಬೋಟ್ ವ್ಯವಸ್ಥ ಮಾಡಿದರೆ ಪ್ರವಾಸಿಗರಿಗೂ ಅನುಕೂಲವಾಗುತ್ತದೆ ಎಂಬ ವಿಚಾರಗಳನ್ನು ಹೇಳಿದ್ದನು. ಇದ್ಯಾವುದೂ ಕಾರ್ಯಗತವಾಗಿಲ್ಲ. ಈಗ ಉತ್ತರದಲ್ಲಿ ಜಿಲ್ಲಾಧಿಕಾರಿಗಳ ಮೇಲೆ ಹಾಕಿದ್ದಾರೆ. ಅದನ್ನು ಅಭಿವೃದ್ಧಿಪಡಿಸದಿದ್ದರೆ ಅಲ್ಲಿಗೆ ಹಕ್ಕಿಪಕ್ಷಿಗಳೂ ಬರುವುದಿಲ್ಲ ಮತ್ತು ಕೆರೆಯೂ ಉಳಿಯುವುದಿಲ್ಲ. ನಾನು ಕೇವಲ ಒಂದು ಸಾಲಿನಲ್ಲಿ ಪ್ರಶ್ನೆಯನ್ನು ಕೇಳಿದ್ದೇನೆ ಎಂದು ಈ ರೀತಿ ಉತ್ತರವನ್ನು ಕೊಟ್ಟಿ ದ್ದಾರೆ. ಇದು ಬಹುಶ: ಹಳೆಯ ಪ್ರಿಂಟ್ ಹೊರತು ಹೊಸ ವಿಚಾರ ಏನೂ ಬಂದಿಲ್ಲ. ಅಲ್ಲಿ ಒತ್ತುವರಿಯಾಗಿರುವ ಒಂದು ಕುಂಟೆ ಪ್ರದೇಶವನ್ನು ಬಿಡುಗಡ ಮಾಡಿಸಿದಂತೆ ಕಾಣಿಸುವುದಿಲ್ಲ.

**ಉಪ ಸಭಾಪತಿಯವರು:–** ಉಪ ಪ್ರಶ್ನೆ ಕೇಳಿ, ಇಲ್ಲದಿದ್ದರೆ ಬೇರೆ ರೂಪದಲ್ಲಿ ಕೇಳಿ.

**ಶ್ರೀ ಪಟೇಲ್ ಶಿವರಾಂ:–** ಇದು ಕೇಳುವಂತಹ ವಿಚಾರವಾಗಿದ್ದು, ಇದು ಮುಖ್ಯವಲ್ಲದಿದ್ದರೆ ಕೇಳುವುದನ್ನೇ ಬಿಟ್ಟುಬಿಡುತ್ತೇನೆ. ದಯಮಾಡಿ ಕೆರೆಯನ್ನು ಸರ್ವೆ ಮಾಡಿ, ಒತ್ತುವರಿಯನ್ನು ತೆರವುಗೊಳಿಸಿ ಕೆರೆಯನ್ನು ಅಭಿವೃದ್ಧಿಪಡಿಸಬೇಕು.

**ಶ್ರೀ ಶಿವರಾಜ್ ಎಸ್. ತಂಗಡಗಿ:–** ಮಾನ್ಯ ಸಭಾಪತಿಯವರೇ, ಈಗಾಗಲೇ 28/7/12ರಂದು ಮೆ:ಎಸ್.ಎಸ್. ಬಿಲ್ಡರ್ಸ್, ಹಾಸನ ಈ ಕಂಪನಿಗೆ ಪ್ರಾಥಮಿಕ ಸರ್ವೆ ಮಾಡಿ ವರದಿ ಸಲ್ಲಿಸುವಂತೆ ಮತ್ತು ಕೆರೆಯನ್ನು ಅಭಿವೃದ್ಧಿಪಡಿಸುವ ಬಗ್ಗೆ ಜಿಲ್ಲಾಧಿಕಾರಿಗಳ ಮುಖಾಂತರ ಎರಡು ಪತ್ರಗಳನ್ನು ಬರೆಸಿದ್ದೇವೆ. ಮಾನ್ಯ ಹಿರಿಯ ಸದಸ್ಯರ ಆಸೆಯಂತೆ ಕೆರೆ ಅಂಗಳದ ಹೂಳು ತೆಗೆದು, ಅಭಿವೃದ್ಧಿಪಡಿಸಿ, ಪಾರ್ಕ್ ಹಾಗೂ ವಾಕ್‌ಪಾತ್‌ಗಳನ್ನು ನಿರ್ಮಿಸಿ, ಬೋಟಿಂಗ್ ವ್ಯವಸ್ಥೆ ಮಾಡಿ ಇತರೆ ಸೌಂದರ್ಯೀಕರಣ ಕಾರ್ಯಗಳನ್ನು ಕೈಗೊಳ್ಳುವುದಕ್ಕೆ ಸುಮಾರು 10 ಕೋಟಿ ರೂಪಾಯಿಗಳ ಅಂದಾಜು ಮಾಡಿದ್ದಾರೆ. ಇದರ ಬಗ್ಗೆ ಆದಷ್ಟು ಬೇಗ ಜಿಲ್ಲಾಧಿಕಾರಿಗಳಿಗೆ ಆದೇಶ ಮಾಡಿ

ಟೆಂಡರ್ ಕರೆಯುವ ಕೆಲಸ ಮಾಡಿ ಕೆರೆ ಅಭಿವೃದ್ಧಿ ಕೆಲಸಗಳನ್ನು ಮಾಡು ತ್ತೇನೆ.

**ಶ್ರೀ ಪಟೇಲ ಶಿವರಾಂ:–** ಸರ್ವೆ ಮಾಡಿ ಅಭಿವೃದ್ಧಿ ಮಾಡುವ ಕೆಲಸ ಮಾಡಬೇಕು.

**ಉಪ ಸಭಾಪತಿಯವರು:–** ಕುಳಿತುಕೊಳ್ಳಿ, ಇದು ಪ್ರಶ್ನೋತ್ತರ ವೇಳೆ

**ಶ್ರೀ ಶಿವಯೋಗ ಮಂದರ ದೇವಸ್ಥಾನಕ್ಕೆ ತಡೆಗೋಡೆ ನಿರ್ಮಿಸುವ ಕುರಿತು**

**578; ಶ್ರೀ ಮಹಾತೇಂಶ್ ಶಿವಾನಂದ ಕೌಜಲಗಿ**

**ಅ)** ಶಿವಯೋಗಮಂದಿರದ ದೇವಸ್ಥಾನ ನಾಶವಾಗದಂತೆ ತಡೆಯಲು 35 ಲಕ್ಷ ರೂ. ಬಿಡುಗಡೆ ಮಾಡಿ ಈ ಕೆಲಸ ತೆಗೆದುಕೊಳ್ಳುವುದಾಗಿ ದಿನಾಂಕ:16.03.2011ರಂದು (ಚು.ರ.ಪ್ರ: 989) ಆಶ್ವಾಸನೆ ನೀಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

**ಆ)** ಆರ್ಥಿಕ ವರ್ಷ ಕೊನೆಗೊಳ್ಳುತ್ತಿರುವ ಹಿನ್ನೆಲೆಯಲ್ಲಿ ಸದರಿ ಕಾಮಗಾರಿಯನ್ನು ಮುಂಬರುವ ಆರ್ಥಿಕ ವರ್ಷದಲ್ಲಿ ತೆಗೆದುಕೊಳ್ಳುವುದಾಗಿ ಸಚಿವರು ಆಶ್ವಾಸನೆ ನೀಡಿದ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೇ;

**ಇ)** ಹಾಗಿದ್ದಲ್ಲಿ ಮಾನ್ಯ ಸಚಿವರ ಆಶ್ವಾಸನೆಯಂತೆ ಕೂಡಲೇ ಕ್ರಮ ಕೈಗೊಳ್ಳಲಾಗುವುದೇ; ಹಾಗೂ ಅವಶ್ಯವಿರುವ ಹಣ ಬಿಡುಗಡೆ ಮಾಡಲಾಗುವುದೇ?

**ಶ್ರೀ ಶಿವರಾಜ್ ಎಸ್. ತಂಗಡಗಿ (ಸಣ್ಣ ನೀರಾವರಿ ಸಚಿವರು)**

ಅ) ಶಿವಯೋಗ ಮಂದಿರದ ಹತ್ತಿರ ಸಣ್ಣ ನೀರಾವರಿ ಇಲಾಖೆಯಿಂದ ಮಲಪ್ರಭಾ ನದಿಗೆ ಅಡ್ಡಲಾಗಿ ಬ್ಯಾರೇಜ್ ನಿರ್ಮಿಸಲಾಗಿದೆ. ನದಿಯಲ್ಲಿ ಪ್ರವಾಹ ಬಂದಾಗ ಶಿವಯೋಗ ಮಂದಿರದ ದೇವಸ್ಥಾನದ ಆವರಣದ ಕಟ್ಟಡಕ್ಕೆ ಪ್ರವಾಹದ ನೀರು ತಲುಪುತ್ತದೆ. ಇದರಿಂದ ಉಂಟಾಗುವ

ಕೊರೆತವನ್ನು ತಡೆಗಟ್ಟಲು ರೂ.25 ಲಕ್ಷ ಅಂದಾಜು ಮೊತ್ತದ ಅವಶ್ಯಕತೆ ಇರುತ್ತದೆ. 2011–12ನೇ ಸಾಲಿನಲ್ಲಿ ಸಣ್ಣ ನೀರಾವರಿ ಇಲಾಖೆಗೆ ಪ್ರವಾಹ. ಸಂರಕ್ಷಣೆ ಕಾಮಗಾರಿಗಳ ಅಡಿ ಒದಗಿಸಬಹುದಾದ ಅನು ದಾನದಲ್ಲಿ ಈ ಕಾಮಗಾರಿಯನ್ನು ಕೈಗೆತ್ತಿಕೊಳ್ಳಲು ಪರಿಶೀಲಿಸ ಲಾಗುವುದು" ಎಂದು ಉತ್ತರ ನೀಡಿರುವುದು ಗಮನಕ್ಕೆ ಬಂದಿದೆ.

ಪ್ರಸಕ್ತ ಸಾಲಿನಲ್ಲಿ. ಸೂಕ್ತ ಅನುದಾನ ಒದಗಿಸಿ ಈ ಕಾಮಗಾರಿಯನ್ನು ಕೈಗೊಳ್ಳಲಾಗುವುದು.

**ಶ್ರೀ ಮಹಾಂತೇಶ್ ಶಿವಾನಂದ ಕೌಜಲಗಿ:–** ಮಾನ್ಯ ಸಭಾಪತಿ ಯವರೇ, ಮೊದಲನೆ ಬಾರಿಗೆ ಮನಸ್ಸಿಗೆ ಮೆಚ್ಚುವ ಉತ್ತರವನ್ನು ನೀಡಿರುವು ದಕ್ಕಾಗಿ ಧನ್ಯವಾದಗಳು. ಆದಷ್ಟು ಬೇಗ ಕಾಮಗಾರಿಯನ್ನು ಪ್ರಾರಂಭಿಸ ಬೇಕೆಂದು ವಿನಂತಿಸಿ, ನನ್ನ ಮಾತುಗಳನ್ನು ಮುಗಿಸುತ್ತೇನೆ.

**ಶ್ರೀ ಶಿವರಾಜ್ ಎಸ್. ತಂಗಡಗಿ:–** ಮಾನ್ಯ ಸಭಾಪತಿಯವರೇ, ನಾನು ಈಗಾಗಲೇ ಹಣವನ್ನು ಒದಗಿಸುತ್ತೇನೆ ಎಂದು ಹೇಳಿದ್ದು, ಆದಷ್ಟು ಬೇಗ ಟೆಂಡರ್ ಕರೆದು ಕಾಮಗಾರಿಯನ್ನು ಪ್ರಾರಂಭಿಸುವ ಕೆಲಸ ಮಾಡಿಸುತ್ತೇನೆ.

## ಸಿಂಗಟಲೂರು ಏತ ನೀರಾವರಿ

### 13; ಶ್ರೀ ಬಸವರಾಜ ಹೊರಟ್ಟಿ (ಶಿಕ್ಷಕರ ಕ್ಷೇತ್ರ)

**ಅ)** ಸಿಂಗಟಾಲೂರು ಏತ ನೀರಾವರಿ ಯೋಜನೆಯನ್ನು ಯಾವಾಗ ಪ್ರಾರಂಭಿಸಲಾಯಿತು;

**ಆ)** ಈ ಯೋಜನೆಗೆ ನಿಗದಿಪಡಿಸಿದ ಅಂದಾಜು ಮೊತ್ತವೆಷ್ಟು;

**ಇ)** ಇಲ್ಲಿಯವರೆಗೆ ಖರ್ಚಾದ ಅನುದಾನವೆಷ್ಟು;

**ಈ)** ಈ ಯೋಜನೆಯಿಂದ ನೀರಾವರಿಗೆ ಒಳಪಟ್ಟ ಪ್ರದೇಶ ಎಷ್ಟು;

**ಉ)** ಯೋಜನೆ ಸಂಪೂರ್ಣವಾಗಿ ಮುಗಿಯಲು ಇನ್ನೂ ಎಷ್ಟು ವರ್ಷ ಬೇಕು;

ಊ) ಈ ಯೋಜನೆಯಡಿ ಮುಳಗಡೆಯಾಗಲಿರುವ ಗ್ರಾಮಗಳ ಸ್ಥಳಾಂತರ ಪ್ರಕ್ರಿಯೆ ಯಾವ ಹಂತದಲ್ಲಿದೆ ಸ್ಥಳಾಂತರಕ್ಕೆ ಖರ್ಚಾದ ಹಣ ಎಷ್ಟು ?

**ಶ್ರೀ ಎಂ.ಬಿ. ಪಾಟೀಲ್ (ಜಲಸಂಪನ್ಮೂಲ ಸಚಿವರು)**

ಅ) ಸಿಂಗಟಾಲೂರು ಏತ ನೀರಾವರಿ ಯೊಜನೆಯ ಕಾಮಗಾರಿಗಳನ್ನು 1997–98ನೇ ಸಾಲಿನಲ್ಲಿ ಪ್ರಾರಂಭಿಸಲಾಯಿತು.

ಆ) ಸಿಂಗಟಾಲೂರು ಏತ ನೀರಾವರಿ ಯೋಜನೆಗೆ ಆರಂಭದಲ್ಲಿ ಸರ್ಕಾರವು ತನ್ನ ಆದೇಶ ಸಂ:ವೀಇ 85 ಎಂಎಂ 92, ಬೆಂಗಳೂರು ದಿನಾಂಕ 19/9/1992ರಲ್ಲಿ ₹63.62 ಕೋಟಿಗಳಿಗೆ ಅಡಳಿತಾತ್ಮಕ ಅನುಮೋದನೆ ನೀಡಿದೆ. ತದನಂತರ ಆದೇಶ ಸಂ: ನೀಇ 90 ಎಂಟಿಪಿ 98, ಬೆಂಗಳೂರು ದಿನಾಂಕ 29/12/2000ರಲ್ಲಿ ಸದರಿ ಯೋಜನೆಯ ₹595.00 ಕೋಟಿಗಳ ಮೊತ್ತದ ಪರಿಷ್ಕೃತ ಅಂದಾಜಿಗೆ ಆಡಳಿತಾತ್ಮಕ ಅನುಮೋದನೆ ನೀಡಲಾಗಿದೆ.

ಪ್ರಸ್ತುತ, ಈ ಯೋಜನೆಯ ಮಾರ್ಪಾಡಿತ ಅಂದಾಜು ಮೊತ್ತ ₹1894.50 ಕೋಟಿಗಳಾಗಿರುತ್ತದೆ (2010–11 ರ ದರಪಟ್ಟಿಯಂತೆ).

ಇ) ಸಿಂಗಟಾಲೂರು ಏತ ನೀರಾವರಿ ಯೋಜನೆಗೆ. ಪ್ರಾರಂಭದಿಂದ ಜೂನ್ 2013ರವರೆಗೆ ಒಟ್ಟಾರೆ ₹1014.81 ಕೋಟಿಗಳನ್ನು ವೆಚ್ಚ ಮಾಡಲಾಗಿದೆ.

ಈ) ಈ ಯೋಜನೆಯಿಂದ ನೀರಾವರಿಗೆ ಒಳಪಡುವ ಕ್ಷೇತ್ರ 1,70,236 ಎಕರೆ ಆಗಿರುತ್ತದೆ. ಇದರ ಪೈಕಿ ಇಲ್ಲಿಯವರೆಗೆ 28,452 ಎಕರೆ ಪ್ರದೇಶಕ್ಕೆ ನೀರಾವರಿ ಕಲ್ಪಿಸಲು ಮೂಲಭೂತ ಸೌಲಭ್ಯ ಸೃಷ್ಟಿಸಲಾಗಿದೆ.

ಉ) ಈ ಯೋಜನೆಯನ್ನು ಡಿಸೆಂಬರ್ 2015ರ ಅಂತ್ಯಕ್ಕೆ ಪೂರ್ಣ ಗೊಳಿಸಲು ಯೋಜಿಸಲಾಗಿದೆ.

ಊ) ಈ ಯೋಜನೆಯಡಿ ಹೂವಿನಹಡಗಲಿ ತಾಲ್ಲೂಕಿನ ಅಲ್ಲಿಪುರ, ಮುಂಡರಗಿ ತಾಲ್ಲೂಕಿನ ಬಿದರಳ್ಳಿ ಮತ್ತು ಗುಮ್ಮಗೋಳ ಗ್ರಾಮಗಳು ಮುಳುಗಡೆಯಾಗದುತ್ತಿದ್ದು ಪುನರ್ ವಸತಿ ಕೇಂದ್ರಗಳ ಲೇಔಟ್ ಕಾಮ

ಗಾರಿಗಳು... ಪೂರ್ಣಗೊಳ್ಳುವ ಹಂತದಲ್ಲಿದೆ. ಪುನರ್ ವಸತಿ ಕೇಂದ್ರ ಗಳಿಗೆ ನೀರು ಸರಬರಾಜು ಮಾಡುವ ಕಾಮಗಾರಿಗಳು ಪ್ರಗತಿಯಲ್ಲಿದ್ದು, ವಿದ್ಯುತ್ ಪೂರೈಸುವ ಕಾಮರಾರಿಗಳ ಟೆಂಡರ್ ಪ್ರಕ್ರಿಯೆ ಜಾರಿಯಲ್ಲಿದೆ.

ಪುನವರ್ಸತಿ ಮತ್ತು ಮನರ್ ನಿರ್ಮಾಣ ಕಾಮಗದಾರಿಯ ಪರಿಷ್ಕೃತ ಅಂದಾಜು ಮೊತ್ತ ರೂ.109.91 ಕೋಟಿಗಳಿಗೆ ಸರ್ಕಾರದ ಆದೇಶ ಸಂ: ಕಂಇ 95 ಇಹೆಚ್ 2012 ದಿನಾಂಕ 19/12/2012ರಲ್ಲಿ ಅನುಮೋದನೆ ನೀಡಲಾಗಿದೆ. ಪುನರವರ್ಸತಿ ಮತ್ತು ಪುನರ್ ನಿರ್ಮಾಣ ಕಾಮಗಾರಿ ಗಳಿಗಾಗಿ ಇಲ್ಲಿಯವರೆಗೆ ₹.34.58 ಕೋಟಿಗಳನ್ನು ವೆಚ್ಚ ಮಾಡಲಾಗಿದೆ.

**ಶ್ರೀ ಬಸವರಾಜ ಹೊರಟ್ಟಿ:–** ಮಾನ್ಯ ಸಭಾಪತಿಯವರೇ, 1997–98ರಲ್ಲಿ ಸಿಂಗಟಾಲೂರು ಏತನೀರಾವರಿ ಯೋಜನೆಯು ಪ್ರಾರಂಭವಾಗಿದ್ದು, ಆಗ ಕೇವಲ 63.62 ಕೋಟಿ ರೂಪಾಯಿಗಳ ವೆಚ್ಚ ಇದ್ದು, ಈಗ 1894.40 ಕೋಟಿ ರೂಪಾಯಿಗಳಾಗಿದೆ. ಇದು ಇಷ್ಟು ತಡ ಆಗಲು ಏನು ಕಾರಣ ಮತ್ತು ಯಾವಾಗ ಇದನ್ನು ಮುಗಿಸುತ್ತಾರೆ ಪದೇ ಪದೇ schedule of rate ಜಾಸ್ತಿ ಮಾಡುತ್ತಾ ಇದ್ದರೆ ಅದರಿಂದ ರೈತರಿಗೂ ಉಪಯೋಗ ಇಲ್ಲ ಮತ್ತು ಜನರಿಗೂ ಉಪಯೋಗ ಇಲ್ಲ. ಹೂವಿನ ಹಡಗಲಿ ಮತ್ತು ಮುಂಡರಗಿ ತಾಲ್ಲೂಕಿನಲ್ಲಿ ಮುಳುಗಡೆಯಾದ ಎರಡು–ಮೂರು ಊರುಗಳಿದ್ದು, ಅಲ್ಲ ಸುಸಜ್ಜಿತ ವ್ಯವಸ್ಥ ಯಾವಾಗ ಕಲಿಸುತ್ತಾರೆ? ಸಂಪೂರ್ಣವಾದ ಕಾಮಗಾರಿ ಮುಗಿಸಲು ಒಂದು ಡೆಡ್ಲೈನ್ ದಿನಾಂಕವನ್ನು ಕೊಡಬೇಕೆಂದು ಕೋರುತ್ತೇನೆ.

**ಶ್ರೀ ಎಂ.ಬಿ.ಪಾಟೀಲ್:–** ಸನ್ಮಾನ್ಯ ಸಭಾಪತಿಯವರೇ, ಹಿರಿಯ ಸದಸ್ಯರಾದ ಮಾನ್ಯ ಹೊರಟ್ಟಿಯವರು ಹೇಳಿದಂತೆ. ಈ ಯೋಜನೆಯನ್ನು 1997–98ನೇ ಸಾಲಿನಲ್ಲಿ ಪ್ರಾರಂಭಿಸಲಾಯಿತು. ಈ ಯೋಜನೆಯ ಒಟ್ಟು ವೆಚ್ಚ 63.62 ಕೋಟಿ ರೂಪಾಯಿಗಳಿಗೆ ಆಡಳಿತಾತ್ಮಕ ಅನುಮೋದನೆಯನ್ನು ನೀಡಿ, ತದನಂತರ ದಿನಾಂಕ:29.12.2000ರಲ್ಲಿ ಸುಮಾರು 595 ಕೋಟಿ ರೂಪಾಯಿ ಗಳ ಪರಿಷ್ಕೃತ ಅಂದಾಜಿಗೆ ಆಡಳಿತಾತ್ಮಕ ಅನುಮೋದನೆಯನ್ನು ನೀಡಲಾಗಿದೆ. ಪ್ರಸ್ತುತ ಈ ಯೋಜನೆಯ ಮಾರ್ಪಾಡು ಅಂದಾಜು ಮೊತ್ತ 1894 ಕೋಟಿ

ರೂಪಾಯಿಗಳಾಗಿವೆ. ಮೊದಲು 1,70,236 ಎಕರೆ ಕ್ಷೇತ್ರವನ್ನು ನೀರಾವರಿಗೆ ಒಳಪಡಿಸುವ ಉದ್ದೇಶವಿತ್ತು. ಮೈಕ್ರೋ ನೀರಾವರಿಯ ಮೂಲಕ ಈಗ ಹೆಚ್ಚುವರಿಯಾಗಿ 84,000 ಎಕರೆ ಕ್ಷೇತ್ರವನ್ನು ನೀರಾವರಿಗೆ ಒಳಪಡಿಸಲಾಗುತ್ತಿದೆ. ಇದಕ್ಕೆ ಪ್ಲಾನ್ ಆಗಿದೆ, ಡಿ.ಪಿ.ಸಿ. ಕೂಡ ಪ್ರಗತಿಯಲ್ಲಿದೆ. ಈಗ ಒಟ್ಟಾರೆ, ಹಿ0ದಿನ 1,70,236 ಎಕರೆ ಕ್ಷೇತ್ರಕ್ಕೆ ಬದಲಾಗಿ ಈಗ 2,54,236ಎಕರೆ ಪ್ರದೇಶವನ್ನು ನೀರಾವರಿಗೆ ಒಳಪಡಿಸಲಾಗುತ್ತಿದೆ. ಈಗಾಗಲೇ ಬಲ ಭಾಗದಲ್ಲಿ 12,000 ಎಕರೆ ಪ್ರದೇಶವನ್ನು ಸಂಪೂರ್ಣವಾಗಿ ನೀರಾವರಿಗೆ ಒಳಪಡಿಸಲಾಗಿದೆ. 23,700 ಎಕರೆ ಪ್ರದೇಶ ಬಿಟ್ಟು ಎಲ್ಲವನ್ನು ಸಹ ಮುಕ್ತಾಯ ಮಾಡಿದ್ದೇವೆ. ಒಟ್ಟಾರೆ ಹೇಳುವುದಾದರೆ, 35,700 ಎಕರೆ ಕ್ಷೇತ್ರವನ್ನು ನೀರಾವರಿಗೆ ಒಳಪಡಿಸಲಾಗಿದೆ. ಕಾಲುವೆಗಳು ಮತ್ತು ಏತ ನೀರಾ ವರಿಗಳು ಪೂರ್ಣಗೊಂಡಿವೆ. ಸುಮಾರು 23,700 ಎಕರೆ ಪ್ರದೇಶದಲ್ಲಿ ಎಫ್.ಐ.ಸಿ. ಮಾತ್ರ ಬಾಕಿ ಇದೆ. ಎಡ ಭಾಗದಲ್ಲಿ 2000 ಎಕರೆ ಪ್ರದೇಶಕ್ಕೆ ನೀರಾವರಿಯನ್ನು ಕಲ್ಪಿಸಲಾಗಿದೆ. ಉಳಿದ 133,000 ಎಕರೆ ಪ್ರದೇಶಕ್ಕೆ ನೀರಾವರಿಯನ್ನು ಒದಗಿಸುವ ಕಾರ್ಯ ಪ್ರಗತಿಯಲ್ಲಿದೆ. ಕಾಲುವೆ ಮತ್ತು ಏತ ನೀರಾವರಿ ಇವು ಎಲ್ಲವೂ ಪ್ರಗತಿಯಲ್ಲಿದೆ. ಹೆಚ್ಚುವರಿಯಾಗಿ 84,000 ಎಕರೆ ಕ್ಷೇತ್ರವನ್ನು ಮೈಕ್ರೋ ನೀರಾವರಿಗೆ ಅಳವಡಿಸಿಕೊಳ್ಳಬೇಕೆನ್ನುವ ಕಾರಣದ ಹಿನ್ನೆಲೆಯಲ್ಲಿ ಹಂಚಿಕೆಯನ್ನು ಇನ್ನೂ ಬಾಕಿ ಉಳಿಸಿಕೊಂಡಿದ್ದೇವೆ.

ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಕೇಳಿದಂತೆ ಅಲ್ಲಿಪುರ, ಬಿದರಳ್ಳಿ ಗುಮ್ಮಗೋಳ ಮತ್ತು ವಿತಲಾಪುರ ಈ ನಾಲ್ಕು ಹಳ್ಳಿಗಳಿಗೆ ಪುನರ್ವಸತಿ ಕಲ್ಪಿಸಬೇಕಾಗಿತ್ತು. ಇದಕ್ಕಾಗಿ ಒಟ್ಟು 109 ಕೋಟಿ ರೂಪಾಯಿಗಳನ್ನು ವೆಚ್ಚ ಮಾಡಬೇಕಾಗಿದೆ. ಅದರಲ್ಲಿ ಈಗಾಗಲೇ 34 ಕೋಟಿ ರೂಪಾಯಿಗಳನ್ನು ವೆಚ್ಚ ಮಾಡಲಾಗಿದೆ. ಕಟ್ಟಡಗಳನ್ನು ಸ್ವಾಧೀನಪಡಿಸಿಕೊಂಡಿರುವುದಕ್ಕೆ ಹಣವನ್ನು ಕೊಟ್ಟಿದ್ದೇವೆ. ಭೂವಿಯನ್ನು ಮತ್ತು ಲೇ ಔಟಗಳನ್ನು ಸ್ವಾಧೀನಪಡಿಸಿಕೊಂಡಿರುವುದಕ್ಕೆ ಹಣವನ್ನು ಈಗಾಗಲೇ ಕೊಟ್ಟಿದ್ದೇವೆ. ರಸ್ತೆ ಮತ್ತು ಒಳಚರಂಡಿ ವ್ಯವಸ್ಥೆಯನ್ನು ಮಾಡಲಾಗಿದೆ. ನೀರು ಸರಬರಾಜು. ಕಾರ್ಯ ಪ್ರಗತಿಯಲ್ಲಿದೆ. ವಿದ್ಯುತ್ತೀಕರಣಗೊಳಿಸುವುದಕ್ಕೆ ಟೆಂಡರ್ ಅನುಮೋದನೆಗೊಂಡಿದೆ.

ಸನ್ಮಾನ್ಯ ಸಭಾಪತಿಯವರೇ. ವಿಠಲಾಪುರವನ್ನು ಇತ್ತೀಚೆಗೆ ಅಂದರೆ. ಅಕ್ಟೋಬರ್ 2012ರಲ್ಲಿ ಸೇರಿಸಲಾಗಿದೆ. ಕಟ್ಟಡಗಳ ಸ್ವಾಧೀನಕ್ಕಾಗಿ ನೋಟಿಫಿಕೇಶನ್ನು ಸಬ್‌ಮಿಟ್ ಮಾಡಲಾಗಿದೆ. ಹೀಗಾಗಿ ನಾಲ್ಕು ಹಳ್ಳಿಗಳು ಮೂರು ಕೇಂದ್ರಗಳಾಗಿವೆ. ಏಕೆಂದರೆ, ಎರಡು ಚಿಕ್ಕ ಚಿಕ್ಕ ಹಳ್ಳಿಗಳನ್ನು ಸೇರಿಸಿ ಒಂದು ಕೇಂದ್ರವನ್ನಾಗಿ ಮಾಡಿದ್ದೇವೆ. ಹಿಂದೆ ಮತ್ತು ಈ ದಿನ ಬೆಳಿಗ್ಗೆ ಕೂಡ ನಾನು ಈ ಯೋಜನೆಯ ಪ್ರಗತಿಯನ್ನು ರಿವ್ಯೂ ಮಾಡಿದ್ದೇನೆ. ಬೇರೆ ಯಾವುದೇ ತೊಂದರೆ ಇವತ್ತಿನ ದಿನ ಉಳಿದಿಲ್ಲ. ಇದನ್ನು ಶೀಘ್ರವಾಗಿ ಮುಕ್ತಾಯ ಮಾಡುವುದಕ್ಕೆ ಕ್ರಮವನ್ನು ಕೈಗೊಳ್ಳಲಾಗುವುದು. ಪುನರ್ವಸತಿ ಕಲ್ಪಿಸುವುದಕ್ಕೂ ಸಹ ಬೇಗ ಕ್ರಮವನ್ನು ಕೈಗೊಳ್ಳಲಾಗುವುದು.

**ಶ್ರೀ ಬಸವರಾಜ ಹೊರಟ್ಟಿ:–** ಸನ್ಮಾನ್ಯ ಸಭಾಪತಿಯವರೇ, 1998ರಲ್ಲಿ ಈ ಯೋಜನೆಯ ಅಂದಾಜು ವೆಚ್ಚ 63 ಕೋಟಿ ರೂಪಾಯಿಗಳಾಗಿತ್ತು. ನಂತರ 2000ನೇ ಇಸವಿಯಲ್ಲಿ 595 ಕೋಟಿ ರೂಪಾಯಿಗಳಾಗಿದೆ. ಈ ರೀತಿ ಸರ್ಕಾರದ ಹಣ ಪೋಲಾಗುವುದು ಎಷ್ಟರ ಮಟ್ಟಿಗೆ ಸರಿ ಎನ್ನುವುದು ನನ್ನ ಪ್ರಶ್ನೆಯಾಗಿದೆ. ಯಾವುದೇ ಯೋಜನೆಗೆ ಟೆಂಡರ್ ಕರೆದು ಕಾಮಗಾರಿಯನ್ನು ಮುಕ್ತಾಯಗೊಳಿಸುವುದಕ್ಕೆ ಒಂದು ನಿರ್ದಿಷ್ಟವಾದ ದಿನಾಂಕವನ್ನು ನಿಗದಿಪಡಿಸಲಾಗಿರುತ್ತದೆ. ಯೋಜನೆಯನ್ನು 2015ಕ್ಕೆ ಮುಕ್ತಾಯಗೊಳಿಸಲಾಗುತ್ತದೆ' ಎಂದು ಉತ್ತರದಲ್ಲಿ ಹೇಳಿದ್ದಾರೆ. ಸ್ಪಷ್ಟವಾಗಿ 2015ಕ್ಕೆ ಮುಕ್ತಾಯಗೊಳಿಸುವಂತಹ ತೀರ್ಮಾನವನ್ನು ಮಾಡಬೇಕಾಗುತ್ತದೆ. ಈ ಯೋಜನೆ ಅಡಿಯಲ್ಲಿ ಐದು ಹಳ್ಳಿಗಳಿಗೆ ಪುನರ್ವಸತಿ ಕಲ್ಪಿಸಲು 109 ಕೋಟಿ ರೂಪಾಯಿಗಳು ವೆಚ್ಚವಾಗುತ್ತದೆ. ಅದರಲ್ಲಿ 34 ಕೋಟಿ ರೂಪಾಯಿಗಳನ್ನು ಖರ್ಚು ಮಾಡಲಾಗಿದೆ' ಎಂದು ಮಾನ್ಯ ಸಚಿವರು ತಿಳಿಸಿದ್ದಾರೆ. ಇನ್ನು ಮುಕ್ತಾಯಗೊಳಿಸದೇ ಇನ್ನೂ ಮುಂದಕ್ಕೆ ಹಾಕುತ್ತಿದ್ದರೆ. 109 ಕೋಟಿ ರೂಪಾಯಿಗಳ ವೆಚ್ಚ ಎಸ್.ಆರ್... ರೇಟ್ ಪ್ರಕಾರ. 200 ಕೋಟಿ ರೂಪಾಯಿಗಳಾಗುತ್ತವೆ. ಇದಕ್ಕೊಂದು ಕಾಲಮಿತಿ ಎನ್ನುವುದು ಬೇಕಾಗುತ್ತದೆ. 2015ಕ್ಕೆ ಮುಕ್ತಾಯಗೊಳಿಸುತ್ತೇವೆಂದು ಹೇಳಿದ್ದಾರೆ, ಕಟ್ಟುನಿಟ್ಟಾಗಿ 2015ಕ್ಕೆ ಮುಗಿಸುವುದಕ್ಕೆ ಸರ್ಕಾರ ಸ್ಪಷ್ಟವಾಗಿರುವಂತಹ ನಿರ್ದೇಶನವನ್ನು ಕೊಡಬೇಕಾಗುತ್ತದೆ.

**ಶ್ರೀ ಎಂ.ಬಿ.ಪಾಟೀಲ್:–** ಸನ್ಮಾನ್ಯ ಸಭಾಪತಿಯವರೇ, ಈಗಾಗಲೇ ಉತ್ತರವನ್ನು ಕೊಟ್ಟಿದ್ದೇನೆ. ಡಿಸೆಂಬರ್ 2015ರೊಳಗೆ ಈ ಯೋಜನೆಯನ್ನು ಪೂರ್ಣಗೊಳಿಸಲಾಗುವುದು. ಅದಕ್ಕೆ ನಾವು ಬದ್ಧವಾಗಿದ್ದೇವೆ ಅದನ್ನು ನಾವು ಮಾಡುತ್ತೇವೆ. ಮಾನ್ಯ ಸದಸ್ಯರಿಗೆ ತಿಳಿದಿರುವಂತೆ ಪುನರ್ವಸತಿ ಕಲ್ಪಿಸಬೇಕಾಗಿರುವ ನಾಲ್ಕು ಹಳ್ಳಿಗಳ ಪಟ್ಟಿಗೆ ಇತ್ತೀಚೆಗೆ ವಿಠಲಾಪುರ ಸೇರ್ಪಡೆ ಆಗಿರುವುದರಿಂದ ಸ್ವಲ್ಪ ತಡವಾಗಿದೆ. ಉಳಿದ ಎಲ್ಲ ಕಾಮಗಾರಿಗಳು ಪ್ರಗತಿಯಲ್ಲಿವೆ. ಇದನ್ನೂ ಸಹ ಶೀಘ್ರಗತಿಯಲ್ಲಿ ಮುಕ್ತಾಯಗೊಳಿಸುತ್ತೇವೆ ಎನ್ನುವ ಭರವಸೆಯನ್ನು ಮಾನ್ಯ ಸದಸ್ಯರಿಗೆ ನೀಡುವುದಕ್ಕೆ ಬಯಸುತ್ತೇನೆ.

## ಕೊಡಗು ಜಿಲ್ಲೆಯಲ್ಲಿ ಗೋಮಾಳ ಹಾಗೂ ಊರುಡೆವೆಗಳಲ್ಲಿ ವಾಸವಿರುವವರ ಬಗ್ಗೆ

**87; ಶ್ರೀ ಟಿ.ಜಾನ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)**

ಅ) ಕೊಡಗು ಜಿಲ್ಲೆಯಲ್ಲಿ ಗೋಮಾಳ ಮತ್ತು ಊರುಡವೆಗಳಂತಹ ಜಾಗದಲ್ಲಿ. ಕಳೆದ 30–40 ವರ್ಷಗಳಿಂದ ಗುಡಿಸಲು ಗಮನಕ್ಕೆ ಬಂದಿದೆಯೇ (ವಿವರ ನೀಡುವುದು);

ಆ) ಈ ಜಾಗದಲ್ಲಿ ಸರ್ಕಾರ ಕೆಲವರಿಗೆ ಹಕ್ಕುಪತ್ರ ನೀಡಿ, ಬಹುತೇಕ ಮಂದಿಗೆ ಹಕ್ಕುಪತ್ರ ನೀಡದಿರುವುದು ಸರ್ಕಾರದಗಮನಕ್ಕೆ ಬಂದಿದೆಯೇ; (ವಿವರ ನೀಡುವುದು);

ಇ) ಹಾಗಿದ್ದಲ್ಲಿ ಇವರಿ ಹಕ್ಕುಪತ್ರವನ್ನು ವಿತರಿಸುವುದು ಯಾವಾಗ;

**ಶ್ರೀ ವಿ. ಶ್ರೀನಿವಾಸ ಪ್ರಸಾದ್ (ಕಂದಾಯ ಸಚಿವರು)**

ಅ) ಕೊಡಗು ಜಿಲ್ಲೆಯ ಗೋಮಾಳ ಮತ್ತು ಊರುಡವೆಗಳಂತಹ ಜಾಗದಲ್ಲಿ ಕಳೆದ 30–40 ವರ್ಷಗಳಿಂದ ಮಡಿಕೇರಿ ಇಕು ಬಿಟ್ಟು ಉಳಿದ ತಾಲ್ಲೂಕುಗಳಲ್ಲಿ ಗುಡಿಸಲು ಕಟ್ಟಿಕೊಂಡು ವಾಸವಿರುವುದು ಸರ್ಕಾರದ ಗಮನಕ್ಕೆ ಬಂದಿದೆ.

ಆ) ಕೊಡಗು ಜಿಲ್ಲೆಯ ಗೋಮಾಳ ಮತ್ತು ಉರುಡವೆಗಳಂತಹ ಜಾಗದಲ್ಲಿ ಗುಡಿಸಲು ನಿರ್ಮಿಸಿ ವಾಸಿಸುತ್ತಿರುವವರಿಗೆ ಹಕ್ಕುಪತ್ರ ನೀಡಲು ಬಾಕಿ ಇರುವ ಪ್ರಕರಣಗಳ ವಿವರ ಈ ಕೆಳಕಂಡಂತಿದೆ

| | | |
|---|---|---|
| ಮಡಿಕೇರಿ ತಾಲ್ಲೂಕು | – | ಇಲ್ಲ |
| ಸೋಮವಾರಪೇಟೆ ತಾಲ್ಲೂಕು | – | 3026 |
| ವಿರಾಜಪೇಟೆ ತಾಲ್ಲೂಕು. | – | 31 |
| **ಒಟ್ಟು** | | **3057** |

ಇ) ಗೋಮಾಳ ಜಮೀನುಗಳ ಪೈಕಿ ಬಹುತೀಕ ಜನರಿಗೆ. ಹಕ್ಕುಪತ್ರ ವಿತರಿಸಲಾಗಿದ್ದು, ಬಾಕಿ ಇರುವ ಪ್ರಕರಣಗಳಿಗೆ ಕರ್ನಾಟಕ ಭೂ ಕಂದಾಯ ನಿಯಮಗಳು 1966 ನಿಯಮ 97 (4) ರಡಿಯಲ್ಲಿ ಗೋಮಾಳ ಕ್ಕಾಗಿ ಅವಶ್ಯವಿರುವ ಜಾಗವನ್ನು ಗ್ರಾಮದಲ್ಲಿ ಇರುವ. ಜಾನುವಾರು ಸಂಖ್ಯೆಗೆ ಆಧಾರದ ಮೇಲೆ ಕಾಯ್ದಿರಿಸಿ, ಅರ್ಹ ಪ್ರಕರಣ ಗಳಿಗೆ ಹಕ್ಕುಪತ್ರ ವಿತರಿಸಲಾಗುವುದು.

ಕರ್ನಾಟಕ ಭೂ ಕಂದಾಯ ನಿಯಮಗಳು 1966ರ ನಿಯಮ 108(1) ರನ್ವಯ ಊರುಡ್ವೆ ಜಮೀನನ್ನು ಹಾಗೂ ಇತರೆ ಜಮೀನುಗಳನ್ನು ಮಂಜೂರು ಮಾಡುವ ಬಗ್ಗೆ ನಿಬರ್ಂಧವಿದ್ದು ನಿಯಮವು ಈ ಕೆಳಕಂಡಂತಿರುತ್ತದೆ

108I. Certain Lands not to be Granted: (1) Notwithstanding anything contained in this Chapter,lands assigned for special purposes under Section 71 of the Act and land described in revenue records, as - Devarakadu, Urduve, Gunduthop, Tankbed, Phut Khareb halla, burial grounds and such lands, which in the opinion of the Government is required for public purpose, shall not be granted:

(2) No Government land within the limits of a city or town, shall be granted to any individual or a private institution. All such lands shall be reserved for public or Government purposes to provide for public needs of a growing city or town.

Provided that the lands which have not lost the characteristics for which they were reserved shall be declassified and granted or leased for any other purposes:-

Provided that the provisions of this rule shall not apply to lands set apart for free pasturage under section 71 of Karnataka Land Revenue Act which will be governed by Rule 97.

**ಶ್ರೀ ಟಿ.ಜಾನ್:–** ಸನ್ಮಾನ್ಯ ಸಭಾಪತಿಯವರೇ, ಕೊಡಗು ಜಿಲ್ಲೆಯಲ್ಲಿ ಗೋಮಾಳ ಮತ್ತು ಊರುಡವೆಗಳಂತ ಜಾಗದಲ್ಲಿ ಕಳೆದ 30–40 ವರ್ಷಗಳಿಂದ ಗುಡಿಸಲು ಕಟ್ಟಿಕೊಂಡು ವಾಸವಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ಎನ್ನುವ ನನ್ನ ಪ್ರಶ್ನೆಗೆ, ಬಂದಿದೆ ಎನ್ನುವಂತಹ ಉತ್ತರವನ್ನು ಕೊಟ್ಟಿದ್ದಾರೆ. ಇನ್ನು ಎರಡನೆಯದಾಗಿ ಈ ಜಾಗದಲ್ಲಿ ಸರ್ಕಾರ ಕೆಲವರಿಗೆ ಹಕ್ಕುಪತ್ರ ನೀಡಿ, ಬಹುತೇಕ ಮಂದಿಗೆ ಹಕ್ಕುಪತ್ರ ನೀಡದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ಎನ್ನುವ ಪ್ರಶ್ನೆಗೆ "ಕೊಡಗು ಜಿಲ್ಲೆಯ ಗೋಮಾಳ ಮತ್ತು ಊರುಡವೆಗಳಂತಹ ಜಾಗದಲ್ಲಿ ಗುಡಿಸಲು ನಿರ್ಮಿಸಿ ವಾಸಿಸುತ್ತಿರುವವರಿಗೆ ಹಕ್ಕುಪತ್ರ ನೀಡಲು ಬಾಕಿ ಇರುವ ಪ್ರಕರಣಗಳು, ಮಡಿಕೇರಿ ತಾಲ್ಲೂಕಿನಲ್ಲಿ ಯಾವುದೂ ಇಲ್ಲ, ಸೋಮವಾರ ಪೇಟೆ ತಾಲ್ಲೂಕಿನಲ್ಲಿ 3026 ಮತ್ತು ವಿರಾಜಪೇಟೆ ತಾಲ್ಲೂಕಿನಲ್ಲಿ 31 ಒಟ್ಟು 3057 ಎನ್ನುವಂತಹ ಉತ್ತರವನ್ನು ಕೊಟ್ಟಿದ್ದಾರೆ, ಹಾಗಿದ್ದಲ್ಲಿ ಇವರಿಗೆ ಹಕ್ಕುಪತ್ರವನ್ನು ವಿತರಿಸುವುದು ಯಾವಾಗ ಎನ್ನುವ ಪ್ರಶ್ನೆ "ಗೋಮಾಳ ಜಮೀನುಗಳ ಪೈಕಿ ಬಹುತೇಕ ಜನರಿಗೆ ಹಕ್ಕುಪತ್ರ ವಿತರಿಸಲಾಗಿದ್ದು, ಬಾಕಿ ಇರುವ ಪ್ರಕರಣಗಳಿಗೆ ಕರ್ನಾಟಕ ಭೂ ಕಂದಾಯ ನಿಯಮಗಳು 1966 ನಿಯಮ 97(4)ರ ಅಡಿಯಲ್ಲಿ

ಗೋಮಾಳಕ್ಕಾಗಿ ಅವಶ್ಯವಿರುವ ಜಾಗವನ್ನು ಗ್ರಾಮದಲ್ಲಿ ಇರುವ ಜಾನುವಾರು ಸಂಖ್ಯೆಗೆ ಆಧಾರದ ಮೇಲೆ ಕಾಯ್ದಿರಿಸಿ ಅರ್ಹ ಪ್ರಕರಣಗಳಿಗೆ ಹಕ್ಕುಪತ್ರ ವಿತರಿಸಲಾಗುವುದು" ಎಂದು ಉತ್ತರವನ್ನು ಕೊಟ್ಟಿದ್ದಾರೆ. ಒಟ್ಟು ಎಷ್ಟು ಹಕ್ಕು ಪತ್ರಗಳನ್ನು ವಿತರಿಸಲಾಗಿದೆ ಮತ್ತು ಬಾಕಿ ಇರುವಂತಹ ಪ್ರಕರಣಗಳಿಗೆ ಯಾವಾಗ ಹಕ್ಕುಪತ್ರವನ್ನು ವಿತರಣೆ ಮಾಡಲಾಗುತ್ತದೆ ಎನ್ನುವುದು ನನ್ನ ಎರಡು ಉಪ ಪ್ರಶ್ನೆಗಳಾಗಿದೆ.

**ಶ್ರೀ ವಿ.ಶ್ರೀನಿವಾಸ ಪ್ರಸಾದ್:-** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರೇ ಉತ್ತರವನ್ನು ಕೊಟ್ಟಿದ್ದಾರೆ. ಅವರ ಪ್ರಶ್ನೆಗೆ ನಾನು ಈಗಾಗಲೇ ಉತ್ತರವನ್ನು ಕೊಟ್ಟಿದ್ದೇನೆ. ಕೊಡಗು ಜಿಲ್ಲೆಯಲ್ಲಿ ಗೋಮಾಳ ಮತ್ತು ಊರುಡವೆಗಳಂತಹ ಜಾಗದಲ್ಲಿ ಕಳೆದ 30-40 ವರ್ಷಗಳಿಂದ ಗುಡಿಸಲು ಕಟ್ಟಿಕೊಂಡು ವಾಸವಿರುವುದು ಸರ್ಕಾರದ ಗಮನಕ್ಕೆ ಬಂದಿದೆ. ಕಳೆದ 30 ವರ್ಷಗಳಿಂದ ಮಡಿಕೇರಿ ತಾಲ್ಲೂಕನ್ನು ಬಿಟ್ಟು, ವಿರಾಜಪೇಟೆ ಹಾಗೂ ಸೋಮವಾರಪೇಟೆ ತಾಲ್ಲೂಕುಗಳಲ್ಲಿ ಎಷ್ಟು ಜನರಿಗೆ ಹಕ್ಕುಪತ್ರಗಳನ್ನು ಕೊಟ್ಟಿ ದ್ದೇವೆ ಎನ್ನುವ ವಿವರಗಳನ್ನು ಕೊಟ್ಟಿದ್ದೇವೆ. ಸೋಮವಾರಪೇಟೆ ತಾಲ್ಲೂಕಿನಲ್ಲಿ 3026 ಮತ್ತು ವಿರಾಜಪೇಟೆ ತಾಲ್ಲೂಕಿನಲ್ಲಿ 31 ಒಟ್ಟು 3057 ಹಕ್ಕುಪತ್ರಗಳನ್ನು ಕೊಟ್ಟಿದ್ದೇವೆ. ಹಾಗಿದ್ದಲ್ಲಿ ಉಳಿದವರಿಗೆ ಯಾವಾಗ ವಿತರಿಸಲಾಗುವುದು ಎನ್ನುವಂತಹ ಪ್ರಶ್ನೆಯನ್ನು ಮಾನ್ಯ ಸದಸ್ಯರು ಕೇಳಿದ್ದಾರೆ. ಅದಕ್ಕೆ ಉತ್ತರವನ್ನು ಸಹ ಅವರೇ ಓದಿ ಹೇಳಿದ್ದಾರೆ. ಕರ್ನಾಟಕ ಭೂ ಕಂದಾಯ ನಿಯಮಗಳು 1966 ನಿಯಮ 97(4) ರ ಅಡಿಯಲ್ಲಿ ಇವತ್ತು ಪ್ರತಿಯೊಂದು ಗ್ರಾಮದಲ್ಲಿ ಸುಮಾರು 100 ಜಾನುವಾರುಗಳು ಇದ್ದರೆ ಅಲ್ಲಿ 12 ಹೆಕ್ಟೇರ್ ಗೋಮಾಳ ಮತ್ತು ಹುಲ್ಲುಬನಿ ಜಮೀನನ್ನು ಮೇವಿಗಾಗಿ ಕಾಯ್ದಿರಿಸಬೇಕಾಗುತ್ತದೆ. ಹಾಗಾಗಿ ಗೋಮಾಳ ಮತ್ತು ಹುಲ್ಲುಬನಿ ಜಮೀನುಗಳಲ್ಲಿ ಯಾವುದೇ ಖಾಸಗಿ ಸಂಸ್ಥೆಗಳಿಗಾಗಲೀ, ಖಾಸಗಿ ವ್ಯಕ್ತಿಗಳಿಗಾಗಲೀ ಅಥವಾ ಖಾಸಗಿ ಗೇಣಿದಾರಿಕೆ ಉದ್ದೇಶಕ್ಕಾಗಲೀ ಮಂಜೂರು ಮಾಡಲು ನ್ಯಾಯಾಲಯದ ತೀರ್ಪಿನ ಹಿನ್ನೆಲೆ ಯಲ್ಲಿ ಯಾವುದೇ ಕಾರಣಕ್ಕೂ ಅವಕಾಶ ಇರುವುದಿಲ್ಲ. ಕೊಡಗು ಜಿಲ್ಲೆಯಲ್ಲಿ ಇರುವ ಊರುಡ್ವೆ ಜಮೀನುಗಳಲ್ಲಿ ಜಾನುವಾರುಗಳಿಗೆ ಮೇವು ಮತ್ತು

ಅಡುಗೆಗೆ ಉರುವಲುಗಳನ್ನು ಉಪಯೋಗಿಸುವುದಕ್ಕೆ ಮಾತ್ರ ಅವಕಾಶವಿದೆ. ಈಗ ಪುನ: ಕರ್ನಾಟಕ ಭೂ ಕಂದಾಯ ನಿಯಮಗಳು 1966 ನಿಯಮ 97(4)ರ ಪ್ರಕಾರ ಹಕ್ಕುಪತ್ರ ಕೊಡುವುದು ಸಾಧ್ಯವಿಲ್ಲ.

**ಶ್ರೀ ಯಂ.ಸಿ.ನಾಣಯ್ಯ:-** ಸನ್ಮಾನ್ಯ ಸಭಾಪತಿಯವರೇ, ಕಾನೂನಿನಲ್ಲಿ ಬಹಳ ಸ್ಪಷ್ಟವಾಗಿ ಹೇಳಲಾಗಿದೆ. ಇವತ್ತು ರಾಜ್ಯದ ಉದ್ದ ಅಗಲಕ್ಕೆ ಎಲ್ಲಿಯೂ ಗೋಮಾಳಗಳು ಇಲ್ಲ. ಗೋಮಾಳಗಳನ್ನು ಬೇರೆ ಎಲ್ಲ ಉದ್ದೇಶಗಳಿಗಾಗಿ ಬಳಕೆ ಮಾಡಿಕೊಂಡಿದ್ದಾರೆ. ಯಾವ ಉದ್ದೇಶಕ್ಕಾಗಿ ಬಳಕೆ ಮಾಡಿಕೊಳ್ಳಬೇಕಾಗಿತ್ತು ಅದಕ್ಕಾಗಿ ಬಳಕೆ ಮಾಡಿಕೊಂಡಿಲ್ಲ. ಊರುಡ್ವೆ ಎನ್ನುವುದು ಸೋಮವಾರಪೇಟೆ ತಾಲ್ಲೂಕಿಗೆ ಮಾತ್ರ ಸೀಮಿತವಾಗಿರುವಂತಹ ವಿಚಾರ ವಾಗಿದೆ. ಇದರಲ್ಲಿ ಕಳೆದ 30-40 ವರ್ಷಗಳಿಂದ ಅಲ್ಲಿ ಜನ ವಾಸಿಸುತ್ತಿದ್ದಾರೆ. ಅದರ ಸುತ್ತಮುತ್ತ ಇರುವಂತಹ 30 ಸೆಂಟ್ ಅಥವಾ 50 ಸೆಂಟ್ ಪ್ರದೇಶ ಇರಬಹುದು. ಕಾನೂನಿನಲ್ಲಿ ಇದಕ್ಕೆ ನಿರ್ಬಂಧ ಇರುವುದರಿಂದ ಇದು ಇಷ್ಟೊಂದು ದೊಡ್ಡ ಪ್ರಶ್ನೆಯಾಗಿದೆ.

ನಾನು ಒಪ್ಪಿಕೊಳ್ಳುತ್ತೇನೆ ದೇವರ ಕಾಡು ಜಾಗ ಈಗಾಗಲೇ ಅದು reserve forest ಆಗಿಬಿಟ್ಟಿದೆ. ಅದನ್ನು ಮುಟ್ಟಲೇಬಾರದು, ಏಕೆಂದರೆ it is a village forest ಅದು ದೇವರ ಹೆಸರಿನಲ್ಲಿರತಕ್ಕಂಥ ದೇವರ ಕಾಡು ಜಾಗಗಳು ಇವತ್ತಿಗೂ ಕೂಡ ಕೊಡಗಿನಲ್ಲಿ ಜನರೇ ಅದನ್ನು ರಕ್ಷಣೆ ಮಾಡುತ್ತಿದ್ದಾರೆ. ಎಲ್ಲಿಯೂ ಒಬ್ಬರನ್ನು ಕೂಡ ಇಲ್ಲಗೆ ಅತಿಕ್ರಮಣ ಮಾಡಲಿಕ್ಕೆ ಬಿಡುತ್ತಿಲ್ಲ. ಊರಡವಿ ಎಂಬುದು ಕೂಡ ಇದೆ. ಊರಡವಿ ಮತ್ತು ಊರಡವಿ ಇವುಗಳನ್ನು ಸೋಮವಾರಪೇಟೆ ತಾಲ್ಲೂಕಿನಲ್ಲಿ ನಾವು ಬಹಳ ಯಥೇಚ್ಛವಾಗಿ ಕಾಣುತ್ತಿದ್ದೇವೆ ಉರುಡವಿ ಬಗ್ಗೆ ನಾವು ಸಹ ಸುಮಾರು 10 ವರ್ಷಗಳಿಂದ ಪ್ರಯತ್ನಪಡುತ್ತಿದ್ದೇವೆ. ಇದರ ಬಗ್ಗೆ ಏನಾದರೂ ಒಂದು ಮಾಡಬೇಕಾಗುತ್ತದೆ. ಅಲ್ಲಿ ಯಾರು ವಾಸವಿದ್ದಾರೆ ಅವರಿಗೆ ಮಾತ್ರ ವಾಸವಿಲ್ಲದೇ ಇರತಕ್ಕಂಥವರು ಮತ್ತು ಅಲಾಯದ (ಬೇರೆಯವರು) ಎನ್ನತಕ್ಕಂಥ ತೆರೆದ ಪ್ರದೇಶವನ್ನು ಯಾರಿಗೂ ಕೊಡಬಾರದು ಎಂಬುದು ನಮ್ಮ ಒಂದು ಚಿಂತನೆ. ಆದರೆ ಇವರ ಬಗ್ಗೆ ನಾವು ಏನಾದರೂ ಒಂದು ಮಾಡಬೇಕಾದ ಅವಶ್ಯಕತೆ ಇದೆ. ಕಾರಣ,

ಒಂದು ಕಡೆಯಲ್ಲಿ ಆ proviso ಇದೆಯಲ್ಲಾ, ಆ proviso ವನ್ನು ಎಲ್ಲಾದರೂ ಈಗ ಇರತಕ್ಕಂಥವರಿಗೆ ಉಪಯೋಗ ಮಾಡಲಿಕ್ಕೆ ಆಗುತ್ತದೆಯೇ? ಆ proviso ನಲ್ಲಿ ಏನಿದೆ ಎಂದರೆ, "Provided that the lands which have not lost the characteristics for which they were reserved, shall be de classified" Only in respect of those who have been in possession of it for more than 30-40-50 years, can it be done by using this proviso? ಇದು ಒಂದರ ಬಗ್ಗೆ ಸರ್ಕಾರ ಚಿಂತನೆ ಮಾಡಬೇಕು. ಇಲ್ಲದೇ ಹೋದರೆ ಅರಣ್ಯ ಇಲಾಖೆಯ ಅಧಿಕಾರಿಗಳು ಬಂದು ಅವರಿಗೆ ನೋಟಿಸ್ ಕೊಡುವುದು, ಕಂದಾಯ ಇಲಾಖೆಯವರ ಹತ್ತಿರ ಹೋದರೆ ಅವರು ನಮಗೆ ಇದನ್ನು ಕೊಡಲಿಕ್ಕೆ ಅವಕಾಶವಿಲ್ಲವೆಂದು ಹೇಳುತ್ತಾರೆ. ಅವರು ಒಂದು ಅತಂತ್ರ ಪರಿಸ್ಥಿತಿಯಲ್ಲಿದ್ದಾರೆ ಮತ್ತು ನಾಳೆಯ ದಿವಸ ಏನಾಗುತ್ತದೆಯೋ ಎನ್ನುವ ಒಂದು ಆತಂಕವಿದೆ. ಗೋಮಾಳ ಜಾಗ ಎಲ್ಲಾದರೂ ಇದ್ದರೆ ಇವತ್ತು ಕೂಡ ಅದನ್ನು ಕೊಡಬಾರದು. ಊರಡವಿ ಎನ್ನತಕ್ಕಂಥಾದ್ದನ್ನು ಕೊಡ ಬಾರದು. I am in favour of it ಅದೇ ರೀತಿ ದೇವರ ಕಾಡು ಜಾಗವನ್ನು ಮುಟ್ಟಬಾರದು. City ಮತ್ತು Town ಒಳಗಡೆ ಇರತಕ್ಕಂಥ ಜಮೀನುಗಳನ್ನು ಕೂಡ ಕೊಡಬಾರದು. ಏಕೆಂದರೆ it should be reserved for public prupose ಆದರೆ ಇಲ್ಲಿ ಸುಮಾರು 40–50 ವರ್ಷಗಳಿಂದ ವಾಸ ಮಾಡುತ್ತಿದ್ದಾರೆ. ಆಗ ಇದರ ಬಗ್ಗೆ ಕಾನೂನು ಇಷ್ಟು ಗಟ್ಟಿಯಾಗಿರಲಲ್ಲ. ಈ ಹಿನ್ನೆಲೆಯಲ್ಲಿ ಸರ್ಕಾರ ಅದರ ಬಗ್ಗೆ ಒಂದು ಯೋಚನೆಯನ್ನು ಮಾಡಬೇಕು. ಈ proviso ವನ್ನು ಸ್ವಲ್ಪಮಟ್ಟಿಗೆ ಕಾನೂನಿನಲ್ಲಿ ಅಳವಡಿಸಿಕೊಂಡು ಅವರಿಗೆ ಮಾತ್ರ ಅನುಕೂಲ ಮಾಡಿಕೊಡುವ ಹಾಗೆ ಮಾಡಲಿಕ್ಕೆ ಸಾಧ್ಯವಿದೆ, ಅದನ್ನು ತಾವು ಮಾಡಿ ಎಂದು ನಾನು ಮಾನ್ಯ ಸಚಿವರನ್ನು ಕೇಳುತ್ತಿದ್ದೇನೆ.

**ಶ್ರೀ ವಿ.ಶ್ರೀನಿವಾಸ ಪ್ರಸಾದ್:–** ಮಾನ್ಯ ಸಭಾಪತಿಯವರೆ, ಇದನ್ನು ಮಾನವೀಯತೆಯ ದೃಷ್ಟಿಯಿಂದ ನೋಡಬೇಕಾಗುತ್ತದೆ. ಮಾನ್ಯ ನಾಣಯ್ಯ ನವರು ಹಿರಿಯ ಸದಸ್ಯರು ಹಾಗೂ ವಕೀಲರು ಸಹ ಆಗಿದ್ದವರು. ಅವರು ತಮ್ಮ ಸಲಹೆಯನ್ನು ಕೊಟ್ಟಿದ್ದಾರೆ. ಊರಡವಿ ಬಗ್ಗೆ ಅದರಲ್ಲಿಯೂ ಕೂಡ

ಸೋಮವಾರಪೇಟೆ ತಾಲ್ಲೂಕಿನಲ್ಲಿ ಕಳೆದ 50–60 ವರ್ಷಗಳಿಂದ ವಾಸ ಮಾಡತಕ್ಕಂಥವರು ಇದ್ದಾರೆ. ನಾನು ಖಂಡಿತ ಇದರ ಬಗ್ಗೆ ಗಮನ ಹರಿಸಿ ಸೂಕ್ತವಾದ ಪರಿಶೀಲನೆ ಮಾಡಿಸುತ್ತೇನೆ.

**ಶ್ರೀಮತಿ ಮೋಟಮ್ಮ:–** ಮಾನ್ಯ ಸಭಾಪತಿಯವರೆ, ಈ ಗೋಮಾಳದ ಪ್ರಶ್ನೆ ಕೇವಲ ಕೊಡಗು ಜಿಲ್ಲೆಯಲ್ಲಿ ಮಾತ್ರವಲ್ಲ, ಇದು ಎಲ್ಲಾ ಕಡೆ ಇದೆ. ಜೊತೆಗೆ ಬಡವರ ಈ ಸಮಸ್ಯೆ ಕೂಡ ಎಲ್ಲಾ ಕಡೆ ಇದೆ. ಈಗ ಏನಾಗಿದೆ ಎಂದರೆ ಬಡವರಿಗೆ ಬೇರೆ ಎಲ್ಲಿಯೂ ಜಾಗ ಸಿಗದೇ ಊರ ಹತ್ತಿರವಿರುವ ಗೋಮಾಳ ಪ್ರದೇಶದಲ್ಲಿ ಬೇಲಿ ಹಾಕಿಕೊಂಡು, ಗುಡಿಸಲುಗಳನ್ನು ಕಟ್ಟಿ ಕೊಂಡು ಕುಳಿತಿದ್ದಾರೆ. ಕಳೆದ 30–40 ವರ್ಷಗಳಿಂದ ಅವರಿಗೆ ಯಾವುದೇ ಒಂದು ಹಕ್ಕುಪತ್ರ ಸಿಕ್ಕಿಲ್ಲ. ಈಗ ಇಲ್ಲಿ ಇವರು ಹೇಳುವ ಪ್ರಕಾರ 3,057 ಜನ ರನ್ನು ನೀವು ಗೋಮಾಳ ಬಿಡಬೇಕೆಂದರೆ ಅವರನ್ನು ಎಲ್ಲಿಗೆ ಕಳುಹಿಸುವುದು ಎಂಬುದು ಸಹ ಬೇಕಲ್ಲಾ. ಅದಕ್ಕೆ ಒಂದು ಪರ್ಯಾಯವಾದ ವ್ಯವಸ್ಥೆ ಆಗಬೇಕು. ಪರ್ಯಾಯ ವ್ಯವಸ್ಥೆಗೆ ಮಲೆನಾಡು ಪ್ರದೇಶದಲ್ಲಿ wasted land ತುಂಬಾ ಇದೆ. ಈ waste land ನ್ನು ನೀವು ಗೋಮಾಳವಾಗಿ convert ಮಾಡಿಕೊಂಡು, ಇವರುಗಳು ತಮಗೆ ಸೂಕ್ತವಾದ ಜಾಗ ಯಾವುದೆಂದು ಎಲ್ಲಿ ಕುಳಿತಿದ್ದಾರೆ, ಅಲ್ಲಿಯೇ ಅವರಿಗೆ ಹಕ್ಕುಪತ್ರವನ್ನು ಕೊಟ್ಟರೆ ಇವರಿಗೆ ತುಂಬಾ ಪುಣ್ಯ ಬರುತ್ತದೆ. ಏಕೆಂದರೆ ಗೋಮಾಳ, ಕೆರೆ ಪ್ರದೇಶವನ್ನು ಒತ್ತುವರಿ ಮಾಡಿಕೊಂಡು ಬಹಳಷ್ಟು ಜನರು ಬಹಳಷ್ಟು cultivate ಮಾಡಿಕೊಂಡು ಆರಾಮವಾಗಿದ್ದಾರೆ.. ಅವರುಗಳಿಗೆ ಈ ರೀತಿಯ ಪ್ರಶ್ನೆ ಬಂದಿಲ್ಲ... ಆದರೆ ಈ ಬಡವರನ್ನು ಎಲ್ಲಿಗೆ ಕಳುಹಿಸುತ್ತೀರಿ ಎಂಬುದನ್ನು ವಿಚಾರ ಮಾಡಿ. Waste land ಎಲ್ಲಿದೆ. C & D land ಅನ್ನು ನೀವು Deemed Forest ಎಂದು ಹೇಳಿ ಅರಣ್ಯ ಇಲಾಖೆಯವರಿಗೆ ಕೊಟ್ಟುಬಿಟ್ಟಿದ್ದೀರಿ. ಅಂತಹ ಭೂಮಿಯನ್ನು ನೀವು ಗೋಮಾಳವಾಗಿ convert ಮಾಡಿ ಈಗ ಜನ ಎಲ್ಲಿ ಕುಳಿತಿದ್ದಾರೆ, ಅವರಿಗೆ ಇಲ್ಲಿ ಹಕ್ಕುಪತ್ರವನ್ನು ಕೊಡುವಂಥ ವ್ಯವಸ್ಥೆ ಮಾಡಿ. ಮಲೆನಾಡು ಪ್ರದೇಶಗಳಲ್ಲಿ ಇದು ಹೆಚ್ಚಾಗಿರುತ್ತದೆ.

**ಶ್ರೀ ಯಂ.ಸಿ.ನಾಣಯ್ಯ:-** ಮಾನ್ಯ ಸಭಾಪತಿಯವರೆ, ಇದಕ್ಕೆ ಒಂದು ಸಮಸ್ಯೆ ಇದೆ. ರಾಜ್ಯ ಉಚ್ಚ ನ್ಯಾಯಾಲಯದಲ್ಲಿ ಈ ಗೋಮಾಳಗಳಿಗೆ ಸಂಬಂಧಪಟ್ಟ ಹಾಗೆ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಹಾಕಿರತಕ್ಕಂಥ ಸ0ದರ್ಭದಲ್ಲಿ ಮಾನ್ಯ ಉಚ್ಚ ನ್ಯಾಯಾಲಯದವರು ಸ್ಪಷ್ಟವಾಗಿ ಒಂದು ತೀರ್ಮಾನವನ್ನು ಕೊಟ್ಟಿದ್ದಾರೆ. ಎಲ್ಲೆಲ್ಲಿ ಗೋಮಾಳ ಜಮೀನುಗಳಿವೆ ಅದನ್ನು ಸರ್ಕಾರ ರಕ್ಷಣೆ ಮಾಡಲೇಬೇಕು ಎಂಬುದು ಒಂದು ವಿಚಾರ. ಗೋಮಾಳ ಜಮೀನುಗಳನ್ನು ಅತಿಕ್ರಮಣ ಮಾಡಿ ಅಲ್ಲಿ ಎಲ್ಲಾದರೂ ಮನೆ ಕಟ್ಟಿ ಕೊಂಡಿದ್ದರೆ ಅಥವಾ ವ್ಯವಸಾಯವನ್ನು ಮಾಡಿದ್ದರ ಅದನ್ನು ಅನಿವಾರ್ಯ ವಾಗಿ, ನಿರ್ದಾಕ್ಷಿಣ್ಯವಾಗಿ ನೀವು ತೆರವು ಮಾಡಬೇಕೆಂಬ ಒಂದು ಆದೇಶವನ್ನು ಕೊಟ್ಟುಬಿಟ್ಟಿದ್ದಾರೆ. ನಾನು ಒಂದು ಎಚಾರವನ್ನು ಹೇಳುತ್ತೇನೆ. ಇದು ಉಚ್ಚ ನ್ಯಾಯಾಲಯದ ಒಂದು ತೀರ್ಮಾನ. ಆದ್ದರಿಂದ ಇಂತಹ ಸಂದರ್ಭಗಳಲ್ಲಿ ಏನು ಮಾಡಬಹುದೆಂದು ನನಗೂ ಗೊತ್ತಿದೆ, ಮಾನ್ಯ ಮಂತ್ರಿಗಳಿಗೂ ಸಹ ಗೊತ್ತಿದೆ... ಬಹುಶಃ ಅಲ್ಲಿ ಏನು ಮಾಡಿದ್ದಾರೆಂದರೆ, ಕಂದಾಯ ಇಲಾಖೆಯ ಅಧಿಕಾರಿಗಳು ಗಲಾಟೆ ಮಾಡುವುದಿಲ್ಲ. ಆದರೆ ನೀವದನ್ನು ಮಂಜೂರಾತಿ ಮಾಡಿಕೊಡಿ ಎಂದು ಕೇಳಬೇಕಾದರೆ, ನಿಜವಾಗಿ ನಾನು ಹೇಳುತ್ತೇನೆ, ಈ ಉಚ್ಚ ನ್ಯಾಯಾಲಯದ ಒಂದು ತೀರ್ಪು ಬರುತ್ತದೆ. ನಾನು ಇದಕ್ಕೆ ಸಂಬಂಧಪಟ್ಟ ಹಾಗೆ ಹೇಳುತ್ತಿದ್ದೇನೆ. ಅದು ಗೋಮಾಳ. ಆದರೆ ಊಡವಿಗೆ ಸಂಬಂಧಪಟ್ಟ ಹಾಗೆ ಇದು ಒಂದನ್ನು ಮಾಡಲಿಕ್ಕೆ ಅವಕಾಶ ಉಂಟು. ಅದು ಅವರ ಚಿಕ್ಕಮಗಳೂರು ಜಿಲ್ಲೆಯಲ್ಲಿ ಇಲ್ಲವೆಂದು ಕಾಣುತ್ತದೆ. ಇದು ನಮ್ಮ ಸೋಮವಾರಪೇಟೆಯಲ್ಲಿ ಮಾತ್ರವಿದೆ. ಅದರ ಬಗ್ಗೆ ಖಂಡಿತವಾಗಿ ಸರ್ಕಾರ ಗಮನ ಹರಿಸಬೇಕು.

**ಶ್ರೀ ವಿ.ಶ್ರೀನಿವಾಸ ಪ್ರಸಾದ್:-** ಮಾನ್ಯ ಸಭಾಪತಿಯವರೆ, ಮಾನ್ಯ ಸದಸ್ಯರು ಬಹಳ ಸ್ಪಷ್ಟವಾಗಿ ಹೇಳಿ, ಊರುಡ್ವೆ ಮತ್ತು ಗೋಮಾಕಕ್ಕೆ ಇರತಕ್ಕಂಥ ವ್ಯತ್ಯಾಸವನ್ನು ಹೇಳಿದ್ದಾರೆ. ಇದರ ಬಗ್ಗೆ ಉಚ್ಚ ನ್ಯಾಯಾಲಯದ ಆದೇಶ ಬಹಳ ಸ್ಪಷ್ಟವಾಗಿದೆ. ಯಾವುದೇ ಕಾರಣಕ್ಕೂ ಗೋಮಾಳವನ್ನು ಅನಧಿಕೃತವಾಗಿ ಯಾವುದೇ ಉದ್ದೇಶಕ್ಕೆ ಕೊಡತಕ್ಕಂಥಾದ್ದು ಇಲ್ಲ. ಅವರು

ಹೇಳಿದ ಹಾಗೆ ಪ್ರತಿ ನೂರು ಜಾನುವಾರುಗಳಿಗೆ ಎಷ್ಟು ಹೆಕ್ಟೇರ್ ಜಮೀನನ್ನು ನಾವು ಬಿಡಸಬೇಕು, ಅದನ್ನು ಮೇವಿಗಾಗಿ ಯಾವ ರೀತಿಯಾಗಿ ಬೆಳೆಸಬೇಕು, ಅಭಿವೃದ್ಧಿಪಡಿಸಬೇಕು ಎನ್ನತಕ್ಕಂಥಾದ್ದು ಸ್ಪಷ್ಟವಾಗಿದೆ. ನಾವು ಅಕ್ರಮವನ್ನು ಸಕ್ರಮ ಮಾಡತಕ್ಕಂಥ. ಬಗರ್‌ಹುಕುಂ ಸಾಗುವಳಿ ಇದರಲ್ಲಿಯೂ ಮಾಡತಕ್ಕಂಥಾದ್ದನ್ನು ಸ್ಪಷ್ಟವಾಗಿ ಗಮನದಲ್ಲಿಟ್ಟುಕೊಂಡು, ಯಾವುದೇ ಕಾರಣಕ್ಕೂ ಕೂಡ ಗೋಮಾಳವನ್ನು ಒತ್ತುವರಿ ಮಾಡಿದರೆ ಅದಕ್ಕೆ ಸಕ್ರಮ ಮಾಡಿಕೊಡುವುದಕ್ಕೆ ತಾವು ಹೇಳಿದ ಹಾಗೆ ಉಚ್ಚ ನ್ಯಾಯಾಲಯದ ನಿರ್ದೇಶನದ ಮೇಲೆ ಅದು ಸಾಧ್ಯವಿಲ್ಲ ಎನ್ನತಕ್ಕಂಥಾದ್ದನ್ನು ತಾವು ಸ್ಪಷ್ಟವಾಗಿ ಹೇಳಿದ್ದೀರಿ. ಆದರೆ ಊರುಡವಿಗೆ ಸಂಬಂಧಪಟ್ಟ ಹಾಗೆ ನಾನು ಮತ್ತೊಮ್ಮೆ ಪರಿಶೀಲನೆ ಮಾಡಿ ಹೇಳುತ್ತೇನೆ.

**ಶ್ರೀ ಟಿ.ಜಾನ್:-** ಮಾನ್ಯ ಸಭಾಪತಿಯವರೆ, ನನಗೆ ಉತ್ತರ ಸಿಗಲಿಲ್ಲ. "ಕಂದಾಯ ನಿಯಮಗಳು 1966 ನಿಯಮ 97(4) ರಡಿಯಲ್ಲಿ ಗೋಮಾಳಕ್ಕಾಗಿ ಅವಶ್ಯವಿರುವ ಜಾಗವನ್ನು ಗ್ರಾಮದಲ್ಲಿ ಇರುವ ಜಾನುವಾರು ಸಂಖ್ಯೆಗೆ ಆಧಾರದ ಮೇಲೆ ಕಾಯ್ದಿರಿಸಿ, ಅರ್ಹ ಪ್ರಕರಣಗಳಿಗೆ ಹಕ್ಕುಪತ್ರ ವಿತರಿಸಲಾಗುವುದು." ಎಂದು ಉತ್ತರದಲ್ಲಿ ತಿಳಿಸಿದ್ದಾರೆ. ಯಾವಾಗ ಹಕ್ಕುಪತ್ರವನ್ನು ವಿತರಿಸುತ್ತಾರೆಂದು ಅಷ್ಟೇ ನಾನು ಕೇಳುತ್ತಿರುವುದು.

**ಶ್ರೀ ವಿ.ಶ್ರೀನಿವಾಸ ಪ್ರಸಾದ್:-** ಮಾನ್ಯ ಸಭಾಪತಿಯವರೆ, ಇಲ್ಲಿ ಹಕ್ಕುಪತ್ರವನ್ನು ಕೊಡುವಂಥ ಪ್ರಶ್ನೆಯೇ ಬರುವುದಿಲ್ಲವಲ್ಲ. ಈಗಾಗಲೇ ಅವರು ಕೂಡ ಸ್ಪಷ್ಟವಾಗಿ ಹೇಳಿದರು. Revenue Act 1966 ಪ್ರಕಾರ ಮತ್ತು ಉಚ್ಚ ನ್ಯಾಯಾಲಯದ ಆದೇಶದ ಬಗ್ಗೆಯೂ ಸಹ ಹೇಳಿದ್ದಾರೆ. ಇದು ಬಹಳ ಸ್ಪಷ್ಟವಾಗಿದೆ. ಅದರಲ್ಲಿ ಗೋಮಾಳಕ್ಕೆ ಸಂಬಂಧಪಟ್ಟ ಹಾಗೆ ಮತ್ತೆ ಹಕ್ಕುಪತ್ರವನ್ನು ಕೊಡತಕ್ಕಂಥ ಪ್ರಶ್ನೆ ಉದ್ಭವಿಸುವುದಿಲ್ಲ. ಊರುಡವಿಯ ಬಗ್ಗೆ ಒಂದು ಸಲಹೆಯನ್ನು ಕೊಟ್ಟಿದ್ದಾರೆ. ಅದನ್ನು ಪರಿಶೀಲಿಸುತ್ತೇವೆ ಎನ್ನತಕ್ಕಂಥ ಮಾತನ್ನು ಹೇಳುತ್ತೇನೆ.

## ರೈತರಿಗೆ ಕಂಪ್ಯೂಟರ್ ಪಹಣಿ ನೀಡುವುದು

**547; ಶ್ರೀ ಎಂ. ಟಿ. ಭಾನುಪ್ರಕಾಶ (ವಿಧಾನಸಭೆಯಿಂದ ಚುನಾಯಿತರಾದವರು)**

**ಅ)** ರಾಜ್ಯದ ಎಷ್ಟು ತಾಲ್ಲೂಕ್ ಕಛೇರಿಗಳಲ್ಲಿ ರೈತರ ಪಹಣಿಗಳನ್ನು.. (RTC) ಕಂಪ್ಯೂಟರ್ ಮೂಲಕ ಕೊಡಲಾಗುತ್ತಿದೆ;

**ಆ)** ಕಂಪ್ಯೂಟರ್ ಪ್ರತಿ ಸಿಗದ ರೈತರಿಗೆ ಕೈಬರಹದ ಪಹಣಿ ನೀಡಲು ಸರ್ಕಾರ ಕ್ರಮ ಕೈಗೊಂಡಿದೆಯೇ ;

**ಇ)** ಕಂಪ್ಯೂಟರ್‌ನ ಪ್ರತಿಗಳಲ್ಲಿ ಆಗಿರುವ ದೋಷಗಳನ್ನು ಸರಿಪಡಿಸಲು ಸೂಕ್ತ ವ್ಯವಸ್ಥೆ ಇಲ್ಲದೇ ಇರುವುದದಿಂದ ರೈತರಿಗೆ ತೊಂದರೆ ಯಾಗು ತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ ;

ಈ) ಹಾಗಿದ್ದಲ್ಲಿ, ಸಮಸ್ಯೆ ಪರಿಹರಿಸಲು ಸರ್ಕಾರ ಕ್ರಮ ಕೈಗೊಳ್ಳುವುದೇ ;

**ವಿ. ಶ್ರೀನಿವಾಸ ಪ್ರಸಾದ (ಕಂದಾಯ ಸಚಿವರು)**

**ಅ)** ರಾಜ್ಯದ ಎಲ್ಲಾ ತಾಲ್ಲೂಕುದಳಲ್ಲ ಪಹಣಿಗಳನ್ನು ರೈತರಿಗೆ ಕೊಡಲಾಗು ತ್ತಿದೆ.

**ಆ)** ಕೈಬರಹ ಪಹಣಿಗಳನ್ನು ಗಣಕೀಕರಿಸಿರುವ ಹಿನ್ನಲೆಯಲ್ಲಿ ಕೈ ಬರಹ ಪಹಣಿಗಳನ್ನು ನೀಡುವ ವಿತರಿಸುವ ಪ್ರಶ್ನೆ ಉದ್ಭವಿಸುವುದಿಲ್ಲ.

**ಇ)** ಹೌದು ಪಹಣಿಗಳು ಮೂಲ ಆಕಾರ್ ಬಂದ್‌ನಲ್ಲರುವ ವಿವರಗಳಿಗೆ (ವಿಸ್ತೀರ್ಣ, ಖರಾಬು ವಿವರ, ಕಾಲಂ 3 ಮತ್ತು 9 ರ ವ್ಯತ್ಯಾಸ ಇತ್ಯಾದಿ) ಹೊಂದಾಣಿಕೆಯಾಗದೆ. ತಪ್ಪುಗಳು ಮತ್ತು ಪಹಣಿಯಲ್ಲಿನ ಖಾತೆದಾರರ ಹೆಸರುಗಳಲ್ಲಿ ಹಾಗೂ ಪಹಣಿ ಕಾಲಂ 9 ಮತ್ತು 12 ರ ವ್ಯಪ್ಯಾಸಗಳು ಇರುವುದು ಸರ್ಕಾರದ ಗಮನಕ್ಕೆ ಬಂದಿದೆ.

**ಈ)** ಪಹಣಿಳಲ್ಲಿರುವ ಲೋಪದೋಷಗಳನ್ನು ವಿಶೇಷ ಅಂದೋಲನದ ಮೂಲಕ ಸರಿಪಡಿಸಲು ಕಾರ್ಯ ಯೋಜನೆಯನ್ನು ತಯಾರಿಸಿ ತುಮ

ಕೂರು ತಾಲ್ಲೂಕಿನಲ್ಲಿ ಪ್ರಾಯೋಗಿಕವಾಗಿ ಜುಲೈ 2013 ರ ಆರಂಭದಲ್ಲಿ ಕಾರ್ಯಕ್ರಮವನ್ನು ಪ್ರಾರಂಭಿಸಲಾಗಿದೆ.

**ಶ್ರೀ ಎಂ.ಬಿ.ಭಾನುಪ್ರಕಾಶ್:–** ಮಾನ್ಯ ಸಭಾಪತಿಯವರೆ, ಸರ್ಕಾರ ನನ್ನ ಪ್ರಶ್ನೆಗೆ ಉತ್ತರವನ್ನು ಕೊಟ್ಟಿದೆ. ಸರ್ಕಾರದ ಗಮನಕ್ಕೆ ಪಹಣಿಯಲ್ಲಿ ರುವಂಥ ದೋಷಗಳು ಇದೆಲ್ಲಾ ಬಂದಿದೆ ಎನ್ನುವಂಥಾದ್ದನ್ನು ಸರ್ಕಾರ ಗಮನಕ್ಕೆ ತೆಗೆದುಕೊಂಡಿದೆ. ಆದರೆ ಮುಂಚೆ ಕೈಯಲ್ಲಿ ಪಹಣಿಯನ್ನು ಬರೆಯುವಂಥ ವ್ಯವಸ್ಥೆ ಇತ್ತು. ಆ ಸಂದರ್ಭದಲ್ಲಿ ರೈತರಿಗೆ ಬಹಳಷ್ಟು ಅನುಕೂಲವಾಗುತ್ತಿತ್ತು. Information Technology ಎಲ್ಲಾ ಬಂದ ಮೇಲೆ ಅದನ್ನು upgrade ಮಾಡಿದ್ದಾರೆ, ಇದು ಬಹಳ ಸಂತೋಷದ ವಿಚಾರ. ಈಗ ಕಂಪ್ಯೂಟರ್‌ನಲ್ಲಿ ಯಾವ ತಪ್ಪುಗಳಾಗಿದೆ, ಅದನ್ನು ಸರಿಪಡಿಸುವುದಕ್ಕೆ ಮತ್ತೆ ಕಂಪ್ಯೂಟರಗೆ ಮೊರೆ ಹೋಗಬೇಕಾದ ಪರಿಸ್ಥಿತಿ ಆಗಿ ರೈತರಿಗೆ ಬಹಳ ತೊಂದರೆಯಾಗಿದೆ. ಬಹಳ ಸಣ್ಣಪುಟ್ಟ ಉದಾಹರಣೆಗಳನ್ನು ಸಹ ನಾವು ಕೊಡಬಹುದು. ತಂದೆ ಹೆಸರಿನ ಮುಂದೆ ಅದರಲ್ಲಿ ಮಗ ಎಂದು ಬರೆದಿದ್ದರೆ ಅದನ್ನು ಸರಿಪಡಿಸುವುದಕ್ಕೂ ಸಹ ಕಂಪ್ಯೂಟರ್‌ನಲ್ಲಿಯೇ ಮಾಡಬೇಕು. ರೈತ ಇಂತಹವುಗಳಿಗಾಗಿ ಹೋದಂಥ ಸಂದರ್ಭದಲ್ಲಿ ಕಂಪ್ಯೂಟರ್ ಸರ್ವರ್ ಡೌನ್ ಆಗಿರುತ್ತದೆ. ವಿದ್ಯು ಚ್ಛಕ್ತಿ ಇರುವುದಿಲ್ಲ. ಈ ರೀತಿಯ ಪರಿಸ್ಥಿತಿ ಕಾರಣಕ್ಕಾಗಿ ರೈತ ಇದರಲ್ಲಿ ತೊಂದರೆಗೆ ಒಳಗಾಗುತ್ತಿದ್ದಾನೆ. ಇನ್ನೊಂದು ಬಹಳ ಪ್ರಮುಖವಾದ ವಿಚಾರವೆಂದರೆ, ಪ್ರಾರಂಭದಲ್ಲಿ Village Accountant ಗಳು ಜಮೀನುಗಳಿಗೆ ಹೋಗಿ ಬೆಳೆಯನ್ನು ಗುರುತು ಮಾಡಿ ಬರೆಯುವಂಥ ಒಂದು ಪದ್ಧತಿ ಇತ್ತು. ಇವತ್ತು ಬೆಳೆಯನ್ನು ನಮೂದನೆ ಮಾಡದೇ ಕಂಪ್ಯೂಟರ್ ಶೀಟಗ್‌ಳಲ್ಲಿ ಕೊಡುವಂಥಾದ್ದು ಆಗುತ್ತಿದೆ. ಇದರಿಂದ ರೈತರಿಗೆ ಬಹಳ ತೊಂದರೆ ಯಾಗುತ್ತಿದೆ. ಇದನ್ನು ಸರ್ಕಾರ ಗಮನಕ್ಕೆ ತೆಗೆದುಕೊಳ್ಳಬೇಕು. ಹಾಗಾಗಿ ನನ್ನ ಎರಡು ಉಪ ಪ್ರಶ್ನೆಗಳೆಂದರೆ, ಒಂದು ಗ್ರಾಮ ಲೆಕ್ಕಿಗರು ಜಮೀನಿಗೆ ಭೇಟಿ ನೀಡಿ ಬೆಳೆಯನ್ನು ಬರೆಯುವಂಥ ಪದ್ಧತಿ ಮುಂಚೆ ಏನಿತ್ತು. ಅದನ್ನು ಪರಿಶೀ ಲನೆ ಮಾಡಬೇಕಾದುದು ರೆವಿನ್ಯೂ ಇನ್ಸ್ಪೆಕ್ಟರ್. ಅದರ ಮೇಲೆ ತಹಸೀಲ್ದಾರರು, ಅದಾದ ಮೇಲೆ ಎಸಿ ಮತ್ತು ಅದರ ನಂತರ ಡಿಸಿ ಈ ರೀತಿ

ಎಲ್ಲರೂ ಕೂಡ ಇದನ್ನು ಪರಿಶೀಲನೆ ಮಾಡಬೇಕೆಂಬ ಒಂದು ಪದ್ಧತಿ ಏನಿತ್ತು ಅದನ್ನು ಸರ್ಕಾರ ಮತ್ತೆ ಜಾರಿಗೆ ತಂದು ಕಟ್ಟುನಿಟ್ಟಾಗಿ ಬೆಳೆಯ ವಿವರವನ್ನು ಜಮೀನಿಗೆ ಹೋಗಿ ಬರೆಯುವಂಥ ಪದ್ಧತಿಯನ್ನು ಜಾರಿಗೆ ತರುತ್ತದೆಯೇ? ಎರಡನೆ ಯದಾಗಿ ಮುಂಚೆ ಉಚಿತವಾಗಿ ಪಹಣಿಯನ್ನು ಕೊಡುತ್ತಿದ್ದರು. ಸಾಲ ತೆಗೆದುಕೊಳ್ಳುವಂಥ ರೈತರು ತಮಗೆ ಬೇಕಾದರೆ 10 ರೂಪಾಯಿ ಅಲ್ಲ.

20 ರೂಪಾಯಿ ಕೊಟ್ಟು ಪಹಣಿಯನ್ನು ಪಡೆದುಕೊಳ್ಳುತ್ತಾರೆ. ಅದು ಬೇರೆ ವಿಚಾರ. ಆದರೆ ಪ್ರತಿ ರೈತ ತನ್ನ ಜಮೀನನ್ನು ಪರಿಶೀಲನೆ ಮಾಡಿ ಕೊಳ್ಳುವುದಕ್ಕೋಸ್ಕರ ಉಚಿತವಾಗಿ ಪಹಣಿಯನ್ನು ಕೊಡುವಂಥ ವ್ಯವಸ್ಥೆ ಮುಂಚೆ ಇತ್ತು. ಒಂದು ಸೆಟ್ ಪಹಣಿಯನ್ನು ಉಚಿತವಾಗಿ ಪ್ರತಿವರ್ಷ ಸರ್ಕಾರ ಕೊಡುವಂಥ ಯೋಚನೆ ಏನಾದರೂ ಸರ್ಕಾರ ಮಾಡುವುದಕ್ಕೆ ಸಾಧ್ಯವೇ? ಇನ್ನು ಮೂರನೆಯದಾಗಿ ಸಣ್ಣಪುಟ್ಟ ದೋಷಗಳನ್ನು ಸರಿಪಡಿಸುವು ದಕ್ಕೆ. ಉದಾಹರಣೆಗೆ ಭಾನುಪ್ರಕಾಶ್ ಸನ್ ಆಫ್ ಭಾಸ್ಕರ್ ಅವದಾನಿ ಇರುವ ಜಾಗದಲ್ಲಿ ಭಾನುಪಕಾಶ್ ವೈಫ್ ಆಫ್ ಭಾಸ್ಕರ್ ಅವದಾನಿ ಇದ್ದರೆ, 'ಇಲ್ಲರೀ ಅದು ಹಾಗೆ' ಎಂದು ಹೇಳುತ್ತಾರೆ. ನಾನು ಅವರ ಹೆ0ಡತಿ ಅಲ್ಲ, ಅವರು ನನ್ನ ತಂದೆ ಎಂದು ಹೇಳಿದರೆ, ಇಲ್ಲ ಅದನ್ನು ನಾನು ಸರಿ ಮಾಡುವುದಕ್ಕೆ ಆಗುವುದಿಲ್ಲ. ಕಂಪ್ಯೂಟರ್ ಬೆಂಗಳೂರಿನಲ್ಲಿದೆ. ಎನ್ನುವಂಥ ಉತ್ತರವನ್ನು ಹೇಳುತ್ತಾರೆ. ಹಾಗಾಗಿ ಸಣ್ಣಪುಟ್ಟ ದೋಷಗಳನ್ನು ಸರಿಪಡಿಸವುದಕ್ಕೆ ಸ್ಥಳೀಯ ಅಧಿಕಾರಿಗಳಿಗೆ ಯಾವುದೇ ಅರ್ಜಿ ಇಲ್ಲದೇ Put up ಎನ್ನುವಂಥ ಸರ್ಕಾರದ ವ್ಯವಸ್ಥೆ ಇಲ್ಲದೇ ತಹಸೀಲ್ದಾರರ ಮಟ್ಟದಲ್ಲಿಯೋ, ರೆವಿನ್ಯೂ ಇನ್ಸ್‌ಪೆಕ್ಟರ್ ಮಟ್ಟದಲ್ಲಿಯೋ ಅದನ್ನು ಸರಿಪಡಿಸುವುದಕ್ಕೆ ಸರ್ಕಾರ ಏನಾದರೂ ಕ್ರಮ ತೆಗೆದುಕೊಳ್ಳುತ್ತದೆಯೇ?

4ನೇ ದಾಗಿ, ತುಮಕೂರಿನಲ್ಲಿ ಪೈಲೆಟ್ ಪ್ರಾಜೆಕ್ಟ್ ಶುರು ಮಾಡಿದ್ದೀರಿ. ಅದು ಇಡೀ ರಾಜ್ಯಕ್ಕೆ ಅನ್ವಯವಾಗಬೇಕಾದರೆ ಬಹಳಷ್ಟು ದಿನಗಳಾಗುತ್ತವೆ. ಇದರಿಂದ ರೃತರಿಗೆ ತೊಂದರೆಯಾಗುತ್ತದೆ. ರೈತರಿಗೆ ಅನುಕೂಲವಾಗುವ ಹಾಗೆ ಈ ನಿಟ್ಟಿನಲ್ಲಿ ಶೀಘ್ರ ಕ್ರಮ ಕೈಗೊಳ್ಳಬೇಕೆಂದು ಕೇಳುತ್ತೇನೆ.

**ಶ್ರೀನಿವಾಸ ಪ್ರಸಾದ್:–** ಮಾನ್ಯ ಸದಸ್ಯರು ಪಹಣಿಯಲ್ಲಾಗುವ ಲೋಪ ದೋಷಗಳ ಬಗ್ಗೆ ಪ್ರಸ್ತಾಪ ಮಾಡಿದರು. ಹಿಂದೆ ಗ್ರಾಮ ಲೆಕ್ಕಿಗರು ದಾಖಲೆ ಗಳನ್ನು ಹೊತ್ತುಕೊಂಡು ಹೋಗಿ, ಸ್ಥಳದಲ್ಲೇ ಪರಿಶೀಲನೆ ಮಾಡಿ ಎಲ್ಲವನ್ನೂ ಮಾಡುತ್ತಿದ್ದರು... ಈಗ ಎಲ್ಲಾ ಗಣಕೀಕೃತಗೊಳ್ಳುತ್ತಿದೆ. ನಾವು modern technology ಬಳಸುತ್ತಿದ್ದೇವೆ. ಹಾಗಾಗಿ RTC ಯಲ್ಲಿ ತಪ್ಪುಗಳಾಗುತ್ತಿವೆ. ತಾವು ಹೇಳಿದ ಹಾಗೆ 3 ರಿಂದ 9ರವರೆಗಿನ ಕಾಲಂಗಳಲ್ಲಿ ಕೆಲವು ಲೋಪ ದೋಷಗಳಾಗುತ್ತಿವೆ. ಇಂತಹ ಲೋಪದೋಷಗಳನ್ನು ಸರಿಪಡಿಸುವ ನಿಟ್ಟಿನಲ್ಲಿ ತುಮಕೂರು ತಾಲ್ಲೂಕನ್ನು ಪೈಲೆಟ್ ಪ್ರಾಜೆಕ್ಟ್ ಆಗಿ ತೆಗೆದುಕೊಂಡಿದ್ದೇವೆ. ಇಂತಹ ಪ್ರಯತ್ನ ಹಿಂದೆ ಮಂಡ್ಯ ಜಿಲ್ಲೆಯಲ್ಲಿ ಆಗಿತ್ತು ಈ ರೀತಿ ಲೋಪ ದೋಷಗಳನ್ನು ಸರಿಪಡಿಸಲು ಜಿಲ್ಲಾಧಿಕಾರಿಗಳು ತಮ್ಮ ಎಲ್ಲಾ ಇತರ: ಕೆಲಸಗಳನ್ನು ಬದಿಗೊತ್ತಿ ಎಲ್ಲಾ ರೀತಿಯ ಪ್ರಯತ್ನಗಳನ್ನು ಮಾಡಿದರು. ಈಗ ನಾವು ತುಮಕೂರು ತಾಲ್ಲೂಕನ್ನು ಪೈಲೆಟ್ ಪ್ರಾಜೆಕ್ಟಾಗಿ ತೆಗೆದುಕೊಂಡಿ ದ್ದೇವೆ. ಈ ಯೋಜನೆ ರಾಜ್ಯಾದ್ಯಂತ ಜಾರಿಗೆ ಬರಲು ಬಹಳಷ್ಟು ದಿನಗಳಾಗು ತ್ತವೆ. ಎಂದು ನೀವು ಹೇಳಿದಿರಿ. ತುಮಕೂರಿನಲ್ಲಿ ತೆಗೆದುಕೊಂಡಿರುವ ಪೈಲೆಟ್ ಪ್ರಾಜೆಕ್ಟನ್ನು ಆದಷ್ಟು ಬೇಗ ಮುಗಿಸಿ, ವರದಿ ಬಂದಮೇಲೆ, ಆ ಹಿನ್ನೆಲೆಯಲ್ಲಿ ಯಾವುದೇ ರೀತಿ ತಡಮಾಡದೇ ಅದು ಕಾರ್ಯಗತವಾಗುವುದಕ್ಕೆ ವಿಶೇಷ ಗಮನಕೊಡುತ್ತೇವೆ. ಮತ್ತೆ, "ಅಟಲ್‌ಜೀ ಜನಸ್ನೇಹಿ ಕೇಂದ್ರಗಳಲ್ಲಿ ಪಹಣಿ ಗಳನ್ನು ಕೊಡಬೇಕಾದರೆ ಹತ್ತು ರೂಪಾಯಿಗಳನ್ನು ತೆಗೆದುಕೊಳ್ಳುತ್ತಿದ್ದೇವೆ. ಇದನ್ನು ಗಣಕೀಕೃತ ಮಾಡಬೇಕಾದರೆ ಅದಕ್ಕೆ ಸಂಬಂಧಪಟ್ಟಂತ ಸಾಫ್ಟ್‌ವೇರ್ ಏನು ಡೆವಲಪ್ ಮಾಡಿದ್ದೇವೋ ಅದಕ್ಕೆ 32 ಕೋಟಿ ರೂಪಾಯಿಗಳು ಖರ್ಚಾಗುತ್ತಿದೆ. ಇದಕ್ಕೆ ಸ್ವಲ್ಪ ಹಣಕಾಸಿನ ಅವಶ್ಯಕತೆ ಇರುತ್ತದೆ. ರೈತನಿಗೆ 10 ರೂಪಾಯಿ ಹೊರೆಯಾಗುವುದಿಲ್ಲ. ಎಲ್ಲವನ್ನೂ up-to-date ಮಾಡಿ ಸರಿಯಾದ ರೀತಿಯಲ್ಲಿ ಪಹಣಿ ಮತ್ತು ಎಲ್ಲಾ ರೀತಿಯ ಮಾಹಿತಿ ಒದಗಿಸುವ ನಿಟ್ಟಿನಲ್ಲಿ ಇದು ತುಂಬಾ ಸಹಕಾರಿಯಾಗುತ್ತದೆ. ಮಾನ್ಯ ಸದಸ್ಯರು ಕೊಟ್ಟಂಥ ಸಲಹೆಗಳನ್ನು ಗಮನದಲ್ಲಿಟ್ಟುಕೊಂಡು, ರೈತರ ಹಿತದೃಷ್ಟಿಯಿಂದ ಪರಿಶೀಲನೆ ಮಾಡುತ್ತೇನೆ.

**ಶ್ರೀ ಡಿ.ವಿ.ಸದಾನಂದಗೌಡ:–** ಮಾನ್ಯ ಸಭಾಪತಿಗಳೆ, valid point ಅಂದರೆ, appartent clerical error ಗಳದ್ದು. Son of ಇಂತಹ very apparent errors with regard to the particular land ಹೆಸರು, ಎಕರೆ, cents ಇಂಥದ್ದರಲ್ಲಿ ತಪ್ಪುಗಳಾಗಿದ್ದರೆ ಅದನ್ನು rectify ಮಾಡುವುದಕ್ಕೆ ಸುಲಭ ವಾಗಬೇಕು ಎನ್ನುವ ದೃಷ್ಟಿಯಿಂದ ತಹಸೀಲ್ದಾರ್ ಮಟ್ಟದಲ್ಲಿ ಒಂದು ವ್ಯವಸ್ಥೆ ಮಾಡಿದರೆ ಒಳ್ಳೆಯದು.

**ಶ್ರೀ ಶ್ರೀನಿವಾಸ ಪ್ರಸಾದ್:–** ಇದರ ಜವಾಬ್ದಾರಿಯನ್ನು ಇತ್ತೀಚೀಗೆ ನಾವು ಅಸಿಸ್ಟೆಂಟ್ ಕಮೀಷನರವರಿಗೆ ಕೊಟ್ಟಿದ್ದೇವೆ.

**ಶ್ರೀ ಇ.ಕೃಷ್ಣಪ್ಪ:–** ಅಸಿಸ್ಟೆಂಟ್ ಕಮೀಷನರವರಿಗೆ ಬೇರೆ ಕೆಲಸದ ಒತ್ತಡವಿರುತ್ತದೆ. ಈ ಕೆಲಸವನ್ನು ಮಾಡುವುದಕ್ಕೆ ಕಷ್ಟವಾಗುತ್ತದೆ. ಆದ್ದರಿಂದ ತಾಲ್ಲೂಕು ಕಚೇರಿ ಅಥವಾ ನಾಡ ಕಚೇರಿಯವರಿಗೆ ಆ ಪವರ್ ಕೊಟ್ಟರ ಒಳ್ಳೆಯದು ಎಂದು ನಾನು ಭಾವಿಸುತ್ತೇನೆ.

**ಉಪಸಭಾಪತಿಯವರು:–** ಒಂದು clarification ಕೇಳಬಹುದೇ ಹೊರತು ಉದ್ದಕ್ಕೆ ಮಾತನಾಡುವುದಕ್ಕೆ ಹೋಗಬಾರದು.

**ಶ್ರೀ ಎಂ.ಬಿ.ಭಾನುಪ್ರಕಾಶ್:–**ಅಸಿಸ್ಟೆಂಟ್ ಕಮೀಷನರ್ರಿಗೆ ಈ ಜವಾಬ್ದಾರಿ ವಹಿಸಿದ್ದೇವೆ ಎಂದು ಮಾನ್ಯ ಸಚಿವರು ಹೇಳಿದರು. ಆದರೆ ಸಮಸ್ಯ ಬಂದಾಗ ರೈತ ಅಸಿಸ್ಟಂಟ್ ಕಮಿಷನರ್ ಹತ್ತಿರ ಹೋಗುವುದಿಲ್ಲ. ಅವನು ತಹಸೀಲ್ದಾರರಿಗೆ. ಅರ್ಜಿ ಕೊಡುತ್ತಾನೆ, ತಹಸೀಲ್ದಾರರು ಅಸಿಸ್ಟೆಂಟ್ ಕಮಿಷನರವರು ಪುರುಸೊತ್ತು ಇರುವಾಗ ತೆಗೆದುಕೊಂಡು ಹೋಗಿ ಕೊಡಬೇಕಾಗುತ್ತದೆ. Data entry ಯಲ್ಲಿ ತಪ್ಪಾದರೆ ಅದಕ್ಕೆ ಯಾರು ಹೊಣೆ? ರೈತರಿಗೆ ಹತ್ತು ರೂಪಾಯಿ ಹೊರೆಯಾಗುವುದಿಲ್ಲ ಎನ್ನುವುದನ್ನು ನಾನು ಒಪ್ಪು ತ್ತೇನೆ. ಆಯಿತು, ಹತ್ತು ರೂಪಾಯಿಗಳನ್ನು ಕೊಡೋಣ. ಆದರೆ ಎಷ್ಟು ಬಾರಿ ಕೊಡಬೇಕು? ಒಂದು ಸಲ data entry ಯಲ್ಲಿ 3ನೇ ಕಾಲಂನಲ್ಲಿ ತಪ್ಪಿರುತ್ತದೆ, ಇನ್ನೊಂದು ಸಲ 9ನೇ ಕಾಲಂನಲ್ಲಿ ತಪ್ಪಿರುತ್ತದೆ. data entry ಮಾಡುವವರು ತಪ್ಪು ಮಾಡಿದರೆ ನಮ್ಮ ರೈತ ಏಕೆ 10 ರೂಪಾಯಿಗಳನ್ನು ಕೊಡಬೇಕು?

ಆದ್ದರಿಂದ ಸ್ಥಳದಲ್ಲಿ ಹೋಗಿ ಪರಿಶೀಲನೆ ಮಾಡುವಂಥದ್ದನ್ನು ಕಡ್ಡಾಯ ಮಾಡಬೇಕು. data entry ಮಾಡುವವರು ಮಾಡುವ ತಪ್ಪಿಗೆ ರೈತರು ಹೊರೆ ಹೊರುವ ಹಾಗೆ ಮಾಡಬೇಡಿ ಎಂದು ಹೇಳಬಯಸುತ್ತೇನೆ.

**ಶ್ರೀ ಶ್ರೀನಿವಾಸ್ ಪ್ರಸಾದ್:-** ಇದರ ಬಗ್ಗೆ ನಾನು ಈಗಾಗಲೇ ಚರ್ಚೆ ಮಾಡುತ್ತಿದ್ದೇನೆ. ಯಾವ ರೀತಿ ಲೋಪದೋಷಗಳಾಗಿವೆ, ಅದನ್ನು ಯಾವ ರೀತಿ ಸರಿಪಡಿಸಬೇಕು, ಹೇಗೆ. ಸರಳೀಕೃತಗೊಳಿಸಬೇಕು ಎನ್ನುವುದರ ಬಗ್ಗೆ ಪರಿಶೀಲನೆ ಮಾಡುತ್ತಿದ್ದೇನೆ. ರೈತನಿಗೆ ಅನುಕೂಲವಾಗುವ ರೀತಿಯಲ್ಲಿ, ಹೆಚ್ಚು ಅಡೆತಡೆಗಳು ಬರದೇ ಇರುವ ಹಾಗೆ ನಾವು ಸಹಾಯ ಮಾಡುತ್ತೇವೆ.

**ಶ್ರೀ ಡಿ.ವಿ.ಸದಾನಂದಗೌಡ:-** ಸಕಾಲದ ಮುಖಾಂತರ, ಜನಸ್ನೇಹಿ ಕೇಂದ್ರಗಳ ಮುಖಾಂತರ RTC ಯನ್ನು ಸಕಾಲಕ್ಕೆ ಕೊಡುವುದನ್ನು ಮಾಡಿದ್ದೀರಿ. ಆ ಸಕಾಲದ ಉಪಯೋಗವಾಗಬೇಕು ಎಂದಾದರೆ correction, rectification ಗೆ ಮತ್ತೆ ಸಮಯವನ್ನು ಖರ್ಚು ಮಾಡಬಾರದು ಎನ್ನುವುದು ಮಾನ್ಯ ಸದಸ್ಯರ ಅಭಿಪ್ರಾಯವಾಗಿದೆ.

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಗಳೆ, data entry ಸರಿಪಡಿಸುವ ಕೆಲಸವನ್ನು ಒಬ್ಬ ಜವಾಬ್ದಾರಿಯುತ ಅಧಿಕಾರಿ ಮಾಡಬೇಕು. ಆ ಜವಾಬ್ದಾರಿಯನ್ನು ಅಸಿಸ್ಟೆಂಟ್ ಕಮಿಷನರಗೆ ಕೊಟ್ಟಿದ್ದಾರೆ. ಈ ಕೆಲಸವನ್ನು ಮಾಡಲು ಕೆಳಗಿನವರಿಗೆ ಅವಕಾಶ ಮಾಡಿಕೊಟ್ಟರೆ, ಹಿಂದೆ. ಏನು ಒಬ್ಬ village Accountant ಒಂದು ಉತ್ತರ ಕೊಡುವುದಕ್ಕೆ ತೊಂದರೆ ಮಾಡುತ್ತಿದ್ದನೋ ಅದೇರೀತಿಯ ತೊಂದರೆ ಪ್ರಾರಂಭವಾಗಬಹುದು. ಮಾನ್ಯ ಸಚಿವರು ಹೇಳಿದಂತೆ, ಒಬ್ಬ ಜವಾಬ್ದಾರಿಯುತ ಅಧಿಕಾರಿಗೆ ಕೊಟ್ಟಿದ್ದು ಬಹಳ ಸೂಕ್ತವಾದುದಾಗಿದೆ. data entry ಯಲ್ಲಿ ಏನಾದರೂ ತಪ್ಪುಗಳನ್ನು ಮಾಡಿದರೆ ಅದು ಪರ್ಮನೆಂಟ್ ಆಗಿ ಉಳಿದುಬಿಡುತ್ತದೆ. ಅದಕ್ಕೋಸ್ಕರವೇ, ಇದಕ್ಕೆ ಒಬ್ಬ ಜವಾಬ್ದಾರಿಯುತ ಅಧಿಕಾರಿ ಇರಬೇಕೆಂದು ಸೂಕ್ತ ನಿರ್ಧಾರ ತೆಗೆದುಕೊಳ್ಳಲಾಗಿದೆ. It will not happen always ನನಗೆ ಅದರ ಅನುಭವ ಇದೆ. It wil not happen always data entry ಯಲ್ಲಿ mistake ಆದಾಗ Assistant

Commissioner ಎನ್ನುವಂಥ Sub Divisional Magistrate ಗೆ ಅಧಿಕಾರ ಕೊಟ್ಟಿದ್ದು ಸೂಕ್ತವಾದ ನಿರ್ಧಾರವಾಗಿದೆ.

**ಶ್ರೀ ಇ.ಕೃಷ್ಣಪ್ಪ–** ನನ್ನ ಪತ್ನಿಯ ಹೆಸರು ಜಗದಂಬ. ಪಹಣಿಯಲ್ಲಿ wife of E. Krishnappa ಎಂದು ಹಾಕುವ ಬದಲು wife of late E. Krishnappa ಎಂದು ಹಾಕಿದ್ದರು. ಅದನ್ನು ಸರಿಪಡಿಸುವುದಕ್ಕೆ ಒಂದು ವರ್ಷ ಬೇಕಾಯಿತು. ನನ್ನಂಥವನಿಗೆ ಒಂದು ವರ್ಷ ಕಾಲ ತೆಗೆದುಕೊಂಡರೆ, ಇನ್ನು ಅಸಿಸ್ಟಂಟ್ ಕಮಿಷನರ್ ಯವರಿಗೆ ಅಥವಾ ಸರ್ಕಾರಕ್ಕೆ ಕೊಟ್ಟಾಗ 2–3 ವರ್ಷಗಳು ವಿಳಂಬವಾದರೆ.

**ಉಪಸಭಾಪತಿಯವರು:–** ಈ ರೀತಿ ಮಧ್ಯದಲ್ಲಿ ಎದ್ದು ನಿಂತು ಮಾತ ನಾಡಿದರೆ ಪ್ರಶ್ನೋತ್ತರ ಅವಧಿಯನ್ನು ಮುಗಿಸುವುದಕ್ಕೆ ಆಗುವುದಿಲ್ಲ. ದಯವಿಟ್ಟು ಕುಳಿತುಕೊಳ್ಳಿ.

**ಗುಲ್ಬರ್ಗಾ ಜಿಲ್ಲೆಯಲ್ಲಿ ಭೂಮಾಪನ ಸರ್ವೇಯರುಗಳ ಕೊರತೆ**

**436; ಶ್ರೀ ಕೆ.ಬಿ.ಶಾಣಪ್ಪ**

ಅ) ಗುಲ್ಬರ್ಗಾ ಜಿಲ್ಲೆಯಲ್ಲಿ ಮತ್ತು ಎಲ್ಲಾ ತಾಲ್ಲೂಕುಗಳಲ್ಲಿ ರೈತರ ಜಮೀನು ಮಾಪನ ಮಾಡುವ ಸರ್ವೆಯರ್ ಸಂಖ್ಯೆ ಕಡಿಮೆ ಇರುವುದರಿಂದ ರೈತರು ತಮ್ಮ ಜಮೀನು ಸರ್ವೆ ಮಾಡಿಸುವಲ್ಲಿ ತುಂಬಾ ತೊಂದರೆ ಅನುಭವಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಭೂದಾಖಲೆ ಇಲಾಖೆಯಲ್ಲಿ ರೈತರ ಜಮೀನುಗಳ ನಕಾಶೆ, ಪೋಡಿ ಟಿಪ್ಪಣಿ, ಟೊಂಚ ನಕಾಶೆ ಇತ್ಯಾದಿ ದಾಖಲೆಗಳನ್ನು ಪಡೆಯಲು... ಕಾಲ ಕಾಲಕ್ಕೆ ಅರ್ಜಿ ಸಲ್ಲಿಸಿರುವ ರೈತರಿಗೆ ವಿಳಂಬದಿಂದಾಗಿ ರೈತರು ಭೂದಾಖಲೆ. ಇಲಾಖೆಯಿಂದ ಬಹಳಷ್ಟು ತೊಂದರೆಗೆ ಒಳಗಾಗಿರು ವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಇ) ಬಂದಿದ್ದರೆ ಈ ಕುರಿತಾಗಿ ಸರ್ಕಾರ ತೆಗೆದುಕೊಂಡ ಕ್ರಮಗಳೇನು ?

**ಶ್ರೀ ವಿ. ಶ್ರೀನಿವಾಸ ಪ್ರಸಾದ (ಕಂದಾಯ ಸಚಿವರು)**

ಅ) ಗುಲ್ಬರ್ಗಾ ಜಿಲ್ಲೆಗೆ ಒಟ್ಟು 76 ಸರ್ಕಾರಿ ಭೂಮಾಪಕರ ಹುದ್ದೆಗಳು ಮಂಜೂರಾಗಿದ್ದು ಇದರಲ್ಲಿ 55. ಭೂಮಾಪಕರು ಮಾತ್ರ ಕೆಲಸ ನಿರ್ವ ಹಿಸುತ್ತಿದ್ದಾರೆ. ಉಳಿದ 21 ಹುದ್ದೆಗಳು ಖಾಲಿ ಇರುತ್ತವೆ. ಇದರಿಂದ ರೈತರ ಜಮೀನು ಸರ್ವೆ ಮಾಡಿಸುವಲ್ಲಿ ವಿಳಂಬವಾಗುತ್ತಿದೆ. ಆದರೆ. ತತ್ಕಾಲ್ ಪೋಡಿ ಯೋಜನೆಯಡಿ ಅರ್ಜಿ ಸಲ್ಲಿಸಿದ್ದಲ್ಲಿ 30 ದಿವಸಗಳಲ್ಲಿ ಅಳತೆ ಕೆಲಸ ಪೂರೈಸಿ ಪಹಣಿಯಲ್ಲಿ ಇಂಡೀಕರಣ ಗೊಳಿಸುವ ಕ್ರಮ ಕೈಗೊಳ್ಳಲಾಗುತ್ತಿದೆ.

ಆ) ಜಿಲ್ಲೆಯಲ್ಲಿ ಭೂಮಾಪಕರ ಕೊರತೆ ಇರುವುದರಿಂದ ಹಾಗೂ ಅನೇಕ ಟಿಪ್ಪಣಿಗಳು ನಶಿಸಿ ಹೋಗಿರುವುದರಿಂದ ರೈತರಿಗೆ ದಾಖಲೆಗಳನ್ನು... ನೀಡಲು ವಿಳಂಬವಾಗುತ್ತಿದೆ. ಸರ್ಕಾರ ನಿಗದಿಪಡಿಸಿದ 07 ದಿನಗಳೊ ಳಗಾಗಿ ಭೂದಾಖಲೆ ಇಲಾಖೆಯಲ್ಲಿ ರೈತರು ಜಮೀನುಗಳ ನಕಾಶೆ, ಪೋಡಿ ಟಿಪ್ಪಣಿ, ಟೋಂಚ ನಕಾಶೆ ಕಾಲ ಕಾಲಕ್ಕೆ ಅರ್ಜಿ ಸಲ್ಲಿಸಿ ರುವ ರೈತರಿಗೆ: ವಿತರಿಸಲಾಗುತ್ತಿದೆ. ಅಲ್ಲದೆ ಸಕಾಲ ಯೋಜನೆ ಯಲ್ಲಿಯೂ ಸಹ ಸರ್ಕಾರ ನಿಗದಿಪಡಿಸಿರುವ ಅವದಿಯಲ್ಲಿ ದಾಖಲೆ ಗಳನ್ನು ವಿತರಿಸಲಾಗುತ್ತಿದೆ. ಸರ್ವೆ ದಾಖಲೆಗಳ ಸ್ಕ್ಯಾನಿಂಗ್ ಕಾರ್ಯ ಪ್ರಗತಿಯ ಲ್ಲಿದ್ದು ಸ್ಕ್ಯಾನಿಂಗ್ ಕಾರ್ಯ ಪೂರ್ಣಗೊಂಡ ಕೂಡಲೇ ಕಂಪ್ಯೂಟರ್ ಮುಖಾಂತರ ದಾಖಲೆಗಳನ್ನು ವಿಳಂಬವಿಲ್ಲದೆ ವಿತರಿಸಲು ಕ್ರಮ ಜರುಗಿಸಲಾಗುವುದು.

ಇ) ಗುಲ್ಬರ್ಗಾ ಜಿಲ್ಲೆಯಲ್ಲಿ ಕಳೆದ ಒಂದು ವರ್ಷದಲ್ಲಿ 8986 ಪ್ರಕರಣಗ ಳನ್ನು ವಿಲೇ ಮಾಡಿರುತ್ತದೆ.

ಮೇ–2013 ರ ಅಂತ್ಯಕ್ಕೆ 3228 ಪೋಡಿ ಪ್ರಕರಣಗಳು ಬಾಕಿ ಇರುತ್ತವೆ. ಇಲಾಖೆಯಲ್ಲಿ ಖಾಲಿ ಇರುವ 1791 ಭೂಮಾಪಕರ ಹುದ್ದೆಗಳ ನೇಮ ಕಾತಿ ಪ್ರಕ್ರಿಯೆಯು ಜಾರಿಯಲ್ಲಿದ್ದು. ನೇಮಕಾತಿ ಪ್ರಕ್ರಿಯೆ ಪೂರ್ಣ

ಗೊಂಡ ನಂತರ ಇನ್ನು ಹೆಚ್ಚಿನ ರೀತಿಯಲ್ಲಿ ಪೋಡಿ ಪ್ರಕರಣಗಳನ್ನು ಅಳತೆ ಮಾಡಲು ಕ್ರಮ ಕೈಗೊಳ್ಳಲಾಗುವುದು.

ಗುಲ್ಬರ್ಗಾ ಜಿಲ್ಲೆಯಲ್ಲಿ 64 ಪರವಾನಗಿ ಭೂಮಾಪಕರು ಕಾರ್ಯ ನಿರ್ವಹಿಸುತ್ತಿದ್ದು, ಹೊಸದಾಗಿ 31 ಪರವಾನಗಿ ಭೂಮಾಪಕರಿಗೆ ಪರ ವಾನಗಿಯನ್ನು ನೀಡಲಾಗಿದೆ. ಒಟ್ಟು. 95 ಪರವಾನಗಿ ಭೂಮಾಪಕರು ಕೆಲಸ ನಿರ್ವಹಿಸುತ್ತಿರುತ್ತಾರೆ.

ಇಲಾಖೆಯಲ್ಲಿ ಹೊಸದಾಗಿ 528 ಎಲೆಕ್ಟ್ರಾನಿಕ್ ಟೋಟಲ್ ಸ್ಟೇಷನ್ ಉಪಕರಣಗಳನ್ನು ಖರೀದಿಸುವ ಬಗ್ಗೆ ಪರಿಶೀಲಿಸಲಾಗುತ್ತಿದ್ದು ಇ.ಟಿ. ಎಸ್. ಉಪಕರಣಗಳನ್ನು ಖರೀದಿಸಿದ ನಂತರ ಹೆಚ್ಚಿನ ಪ್ರಗತಿ ಯನ್ನು ಸಾಧಿಸುವ ಬಗ್ಗೆ ಕ್ರಮ ಕೈಗೊಳ್ಳಲಾಗುವುದು.

**ಶ್ರೀ ಕೆ.ಬಿ.ಶಾಣಪ್ಪ:–**ಮಾನ್ಯ ಸಭಾಪತಿಗಳೆ, ನನ್ನ ಪ್ರಶ್ನೆಗಳಿಗೆ ಮಾನ್ಯ ಸಚಿವರು ಬಹಳ ಸವಿಸ್ತಾರವಾದ ಉತ್ತರವನ್ನು ಕೊಟ್ಟಿದ್ದಾರೆ. ನನಗೆ ತಿಳಿದಿರಿ ಲಾರದಂಥ ಕೆಲವು ವಿಷಯಗಳ ಬಗ್ಗೆ ಉತ್ತರದಲ್ಲಿ ಪ್ರಸ್ತಾಪ ಮಾಡಿದ್ದಾರೆ. I am very grateful to him ನಾನು ಇಷ್ಟನ್ನು ಕೇಳುತ್ತೇನೆ. ಗುಲ್ಬರ್ಗಾದಲ್ಲಿ ಸುಮಾರು 8986 ಪ್ರಕರಣಗಳನ್ನು ವಿಲೇ ಮಾಡಿದ್ದೀರಿ. ಆದರೆ 1791 ಭೂಮಾಪಕರ ಹುದ್ದೆ ಖಾಲಿ ಇದೆ ಎಂದು ಹೇಳಿದ್ದೀರಿ. ಅದು ಇಡೀ ರಾಜ್ಯಕ್ಕೆ ಇದೆಯೇ, ಹೈದರಾಬಾದ್–ಕರ್ನಾಟಕ ಭಾಗಕ್ಕಿದೆಯೇ ಅಥವಾ ಕೇವಲ ಗುಲ್ಬರ್ಗಾದಲ್ಲಿ ಮಾತ್ರ ಇಷ್ಟು ಹುದ್ದೆಗಳು ಖಾಲಿ ಇದೆಯೇ ಎನ್ನುವುದು ಗೊತ್ತಾಗುತ್ತಿಲ್ಲ. I think it is in respect of the entire State. 1,791 posts are vacabt as the Hon'ble Minister has said in his answer. Is it pertains to the whole State or Gulbarga ?

**ಶ್ರೀ ವಿ.ಶ್ರೀನಿವಾಸ ಪ್ರಸಾದ್:–** ಮಾನ್ಯ ಸಭಾಪತಿಗಳೆ, it is in respect of the whole State.

**ಶ್ರೀ ಕೆ.ಬಿ.ಶಾಣಪ್ಪ;–** ನಿಮಗೆ ಗೊತ್ತಿರುವ ಹಾಗೆ, the last Government had announced about 43 taluks ಅದರಲ್ಲಿ ಗರಿಷ್ಠ 33

ತಾಲ್ಲೂಕುಗಳು ಉತ್ತರ ಕರ್ನಾಟಕ ಭಾಗದ ವ್ಯಾಪ್ತಿಗೆ ಬರುತ್ತದೆ, 17 ತಾಲ್ಲೂಕುಗಳು ಹೈದರಾಬಾದ್-ಕರ್ಣಾಟಕ ಭಾಗದ ವ್ಯಾಪ್ತಿಗೆ ಬರುತ್ತದೆ. ಗುಲ್ಬರ್ಗಾದಲ್ಲಿ 7 ತಾಲ್ಲೂಕುಗಳಿತ್ತು ಮತ್ತೆ ಅದಕ್ಕೆ 4 ತಾಲ್ಲೂಕುಗಳು add ಆಯಿತು. ಈಗಾಗಲೇ ಅಲ್ಲಿ ಭೂಮಾಪಕರ ಕೊರತೆ ಇದೆ.. Scanning ಮಾಡುವುದೂ ಸೇರಿದಂತೆ ಇತರ ಕಾರ್ಯಗಳನ್ನು ಮಾಡಲು ಹೊಸ-ಹೊಸ ಪದ್ಧತಿ ಅಳವಡಿಸಲು ಪ್ರಯತ್ನಪಡುತ್ತಿದ್ದೀರಿ. But, with all these things, 95 licensed Surveyors ಗಳನ್ನು ತಾವು ತೆಗೆದುಕೊಂಡಿದ್ದೀರಿ. ಆದರೆ. 1800 ಭೂಮಾಪಕ ಹುದ್ದೆಗಳಿಗೆ ಸಂಬಂಧಪಟ್ಟಂತೆ ಸಂದರ್ಶನವಾಗಿದೆ. I am subject to correction ಸುಮಾರು 1800 ಜನಗಳದ್ದು. ಅದರಲ್ಲಿ ಹೈದರಾಬಾದ್-ಕರ್ನಾಟಕದ 200 ಅಭ್ಯರ್ಥಿಗಳಿದ್ದಾರೆ ಎ0ಬುದು ನಮ್ಮ ಗಮನಕ್ಕೆ ಬಂದಿದೆ... ಈಗಾಗಲೇ ಅವರು ಹೋರಾಟ ಮಾಡುತ್ತಿದ್ದಾರೆ. ತಾವು ಅವರಿಗೆ ಅಪಾಯಿಂಟ್ಮೆಂಟನ್ನು ಯಾವಾಗ ಕೊಡುತ್ತೀರಿ? It is already pending before your office. ದಯಮಾಡಿ ಆ ಅಭ್ಯರ್ಥಿಗಳನ್ನು ಭರ್ತಿ ಮಾಡಿ ಭೂಮಾಪಕರ ಕೊರತೆ ಎಲ್ಲಿದೆಯೋ ಅಂತಹ ತಾಲ್ಲೂಕುಗಳಿಗೆ ಕೊಟ್ಟರೆ ಅನುಕೂಲವಾಗುತ್ತದೆ.

528 Electronic Total Stations ಉಪಕರಣಗಳನ್ನು ಖರೀದಿಸುವ ಬಗ್ಗೆ ಪ್ರಸ್ತಾಪ ಮಾಡಿದ್ದೀರಿ. I am sorry to understand what it means ನನಗೆ ಗೊತ್ತಾಗುತ್ತಿಲ್ಲ... ಇದರ ಬಗ್ಗೆ ನಮಗೆ ಸವಿಸ್ತಾರವಾದ ತಿಳುವಳಿಕೆ ಕೊಟ್ಟರೆ I will be very grateful to you.

**ಶ್ರೀ ವಿ.ಶ್ರೀನಿವಾಸ್ ಪ್ರಸಾದ್:-**ಮಾನ್ಯ ಸಭಾಪತಿಗಳೆ, ಈಗಾಗಲೇ ರಾಜ್ಯದಲ್ಲಿ ಸುಮಾರು 25 ಲಕ್ಷಕ್ಕಿಂತಲೂ ಹೆಚ್ಚು ಪೋಡಿ ಪ್ರಕರಣಗಳು ಆಗಬೇವೆ. ಮುಖ್ಯವಾಗಿ ಇದಕ್ಕೆ ಸರ್ವೇಯರ್‌ಗಳ ಅವಶ್ಯಕತೆ ಇದೆ. ಹಿಂದಿನ ಸರ್ಕಾರ, 2012ರಲ್ಲಿ C & R Rules ಗೆ ತಿದ್ದುಪಡಿ ತಂದು ಸರ್ವೇ ಯರ್‌ಗಳನ್ನು ನೇಮಕ ಮಾಡಿಕೊಳ್ಳಬೇಕೆಂದು ತೀರ್ಮಾನ ತೆಗೆದುಕೊಂಡಿತು. ಇದನ್ನು ಯಾವರೀತಿ ಮಾಡಬೇಕು, ಯಾರ್‍ಯಾರು apply ಮಾಡಬೇಕು. ಅರ್ಜಿ ಹಾಕಬೇಕು ಎಂದು ಹೇಳಲಾಗಿತ್ತು. ಇವರಲ್ಲಿ B.E (Civil) Diploma in Civil

Engineering ಮಾಡಿರುವವರು, ಪಿಯುಸಿಯಲ್ಲಿ ವಿಜ್ಞಾನ ವಿಷಯವನ್ನು ತೆಗೆದುಕೊಂಡಿರುವವರು, ಈಗಾಗಲೆ licensed Surveyors ಆಗಿರುವಂಥವರು, job oriented courses (JOC) in surveying ಮಾಡಿಕೊಂಡಿರುವವರೆಲ್ಲರೂ apply ಮಾಡಬಹುದಾಗಿತ್ತು.

ಅವರನ್ನು ಆಯ್ಕೆ ಮಾಡತಕ್ಕಂಥ ವಿಧಾನ Karnataka Examination Authority ಯವರು examination ಅನ್ನು conduct ಮಾಡಿ ಆ examination ನಲ್ಲಿ ಯಾರು ಪಾಸ್ ಆಗುತ್ತಾರೆ ಅವರಿಗೆ ನೇಮಕಾತಿ ಮಾಡಿ ಕೊಳ್ಳುವುದು ಎಂದಾಯಿತು ಪರೀಕ್ಷೆಗಳು ಆಯಿತು. ಫಲಿತಾಂಶವೂ ಬಂತು. ಫಲಿತಾಂಶ ಬರುವಾಗಲೇ ದೊಡ್ಡ ಗಲಾಟೆಗಳಾಯಿತು. ಆಗಲೇ ಸರಿ ಮಾಡ ಬಹುದಾಗಿತ್ತು. ಪ್ರಶ್ನೆ ಪತ್ರಿಕೆಗಳು ಲೀಕೇಜ್ ಮಾಡಿ ತಮಗೆ ಬೇಕಾದವರಿ ಗೆಲ್ಲರಿಗೂ ಕೊಟ್ಟು ಬರೆಸಿದ್ದಾರೆ ಅವರು ಮಾತ್ರ ಪಾಸಾಗಿದ್ದಾರೆ. ನಿಜ ವಾಗಿಯೂ ನಾವು ಯಾರು ಕಷ್ಟಪಟ್ಟು ಬರೆದಿದ್ದೇವೆ ಅವರೆಲ್ಲರು ಅನುತ್ತೀರ್ಣ ರಾಗಿದ್ದೇವೆ ಎನ್ನುವಂಥದ್ದು ಇದೆ. ಆಗಲೇ ಅದನ್ನು ತನಿಖೆ ಮಾಡಬೇಕೆಂದು ಹೇಳಿದ್ದೆನು. ಅದರಲ್ಲಿ ಮೈಸೂರು ಮತ್ತು ಮಂಡ್ಯ ಜಿಲ್ಲೆಗಳನ್ನು ನೋಡಿದಾಗ ಅಲ್ಲಿಯ ಸೆಂಟರ್‌ಗಳಲ್ಲಿ ಲೀಕೇಜ್ ಆಗಿತ್ತು ಎಂದು ಅಲ್ಲಿನ ಪ್ರಾದೇಶಿಕ ಆಯುಕ್ತರವರಿಗೆ ಈ ಕುರಿತು ತನಿಖೆ ಮಾಡಿ ವರದಿ ಕೊಡಿ ಎಂದು ಹೇಳಿ ದೆವು. ಆದರೆ, ಏನಾದರೂ ಇದರ ಬಗ್ಗೆ ತನಿಖೆ ಮಾಡಿರುವ ವರದಿ ಇದೆಯೇ ಎಂದು ನಾನು ಬಂದ ಮೇಲೆ ಅವರನ್ನು ವಿಚಾರಿಸಿದೆ. ವರದಿ ಮಾಡಿ ಎಂದು ಹೇಳಿದರೆ ಹೊರತು, ಅವರು ಯಾವುದೇ ರೀತಿಯಾದಂತಹ ಮಾಹಿತಿಯನ್ನು ಕೊಡಲಿಲ್ಲ. ಅದು. Karnataka Examination Authority ರವರು ಕೊಡಲಿಲ್ಲ. ಇಲಾಖೆಯವರು ಕೊಡಲಿಲ್ಲ, ಅಲ್ಲೇ ಕುಳಿತಿದೆ. ಈಗ ಎರಡು ರೀತಿ ಆಗಿದೆ... ಈಗ ಪರೀಕ್ಷೆಯಲ್ಲಿ ಪಾಸ್ ಆದಂಥವರು ಕೂಡ ವೆರಿಫಿಕೇಶನ್ ಸಮಯದಲ್ಲಿ ಪಾಸ್ ಆಗಿದ್ದ ಕೆಲವರನ್ನೂ ಕೂಡ ಕೈಬಿಡಬೇಕಾಯಿತು. ಏಕೆಂದರೆ, ಕೆಲವರು false certificate ಕೊಟ್ಟು ಬಿಟ್ಟಿದ್ದರು ಈಗ 2 A Category ಅಲ್ಲದಿದ್ದವರು ಕೂಡ ಫಾಲ್ಸ್ ಸರ್ಟಿಫೀಕೆಟ್ ಕೊಟ್ಟು ಪರೀಕ್ಷೆ ಪಾಸ್ ಮಾಡಿದ್ದಾರೆ. Verification ಸಮಯದಲ್ಲಿ ಅವರನ್ನು ತೆಗೆದು ಹಾಕಿದ್ದಾರೆ. ಎರಡನೆ ಪ್ರಶ್ನೆ

ಏನು ಬಂತು ಎಂದರೆ, ಕೆಲವರದ್ದು certificate ಆಗಿ, police verification ಆಗಿ ಈಗ ನಮಗೆ ಕೆಲಸ ಕೊಡುವುದಿಲ್ಲ ಎಂದು ಸುಮಾರು 141 ಜನರು ನಮಗೆ ದೂರು ಕೊಟ್ಟರು.

ಯಾರು ಆ 147 ಜನರು ಎಂದರೆ, ಅವರು ಮಾನ್ಯತೆ ಪಡೆದಂತಹ ಸಂಸ್ಥೆಯಲ್ಲಿ ಕೋರ್ಸ್‌ನ್ನು ಮಾಡಿಲ್ಲ. ಆದ್ದರಿಂದ ಪರೀಕ್ಷೆಯಲ್ಲಿ ಪಾಸ್ ಆಗಿದ್ದರೂ ಕೂಡ ನಿಮಗೆ ನೇಮಕಾತಿ ಮಾಡಿಕೊಳ್ಳುವುದಕ್ಕೆ ಆಗುವುದಿಲ್ಲ ಎಂದು ಹೇಳಿದ್ದಾರೆ. ಇದು ನಮ್ಮ ಸರ್ಕಾರ ಬಂದ ಮೇಲೆ ಗೊಂದಲ ಆಯಿತು. ಅವರು ಕೂಡ ನಿರುದ್ಯೋಗಿ ಯುವಕರಾಗಿರುವಂಥವರು, ಪರೀಕ್ಷೆ ಯಲ್ಲಿ ಪಾಸ್ ಆಗಿರುವಂಥವರು. ಅವರು ಹೇಳುವಂಥದ್ದು ನಮಗೆ police verification ಗಾಗಿ ಏಕೆ ಬಂತು, ಮೊದಲ ಹಂತದಲ್ಲೇ ತಾವು ಹೇಳ ಬಹುದಾಗಿತ್ತಲ್ಲಾ, police verification ಆಗಿ ನಮಗೆ ನೇಮಕಾತಿ ಆದೇಶ ವನ್ನು ಕೊಡತಕ್ಕಂಥ ಸಮಯದಲ್ಲಿ ಈ ರೀತಿ ಮಾಡಿರುವುದು ಸರಿಯಿಲ್ಲ ಎಂದು ಹೇಳಿದಾಗ ನಾನು ಅವರನ್ನು ಕರೆಯಿಸಿ ನಮ್ಮ ಅಧಿಕಾರಿಗಳ ಜೊತೆ ಯಲ್ಲಿ ನಾವೆಲ್ಲಾ ಚರ್ಚೆ ಮಾಡಿದ್ದೇವೆ. ಮಾನವೀಯತೆಯ ದೃಷ್ಟಿಯಿಂದ ಅವರು ಕೂಡ ಯುವಕರಿದ್ದಾರೆ, ಪರೀಕ್ಷೆಯಲ್ಲಿ ಪಾಸ್ ಆಗಿದ್ದಾರೆ, police verification ಆಗಿದೆ ಈಗ ಅದು, ಮಾನ್ಯತೆ ಪಡೆದಂತಹ ಸಂಸ್ಥೆ ಅಲ್ಲ ಎಂದರೆ ಅವರು ಏನು ಮಾಡಬೇಕು ಹೇಗೆ ಎಂದು JOC ಮಾಡಿರ ತಕ್ಕಂಥ ವರನ್ನು ಪ್ರಶ್ನೆ ಮಾಡಿ, ಕೊನೆಗೆ ಮುಖ್ಯಮಂತ್ರಿಗಳ ಸಮಕ್ಷಮದಲ್ಲಿ ಇದರ ಬಗ್ಗೆ ನಾನು ಒಂದು ಸಲಹೆಯನ್ನು ಕೊಟ್ಟಿದ್ದೆನು 1791 ಜನರು ಏನು ಆಯ್ಕೆ ಯಾಗಿದ್ದಾರೆ ಅದರ ಜೊತೆಗೆ ಈ 147 ಜನರನ್ನು ತೆಗೆದು ಕೊಳ್ಳಬೇಕೆಂದು ನಾವು ಪರಿಶೀಲನೆ ಮಾಡುತ್ತಿದ್ದೇವೆ. ಆ ದಿನದಿಂದ ನಾವು ಹೇಳುವಂಥದ್ದು ಈಗೇನು ಆಯ್ಕೆಯಾಗಿದ್ದಾರೆ ಅವರಿಗೆ ಏನು ತೊಂದರೆ ಇಲ್ಲ. 1791 ಜನರು ಅಲ್ಲಿ ಕುಳಿತಿದ್ದಾರೆ ಅಲ್ಲಿಗೆ ನಾನು ಹೋಗಿ ಅವರಿಗೆ ಆಶ್ವಾಸನೆ ಯನ್ನು ಕೂಡ ಕೊಟ್ಟಿದ್ದೇನೆ. ಯಾವುದೇ ಕಾರಣಕ್ಕೂ ನಾವು ನಿಮ್ಮ ಕೈಬಿಡು ವುದಿಲ್ಲ, ನೀವು ಪರೀಕ್ಷೆಯಲ್ಲಿ ಪಾಸ್ ಆಗಿದ್ದೀರಿ, ಸ್ವಲ್ಪ ಮಧ್ಯೆ ಈ ರೀತಿಯ ಸಮಸ್ಯೆ ಬಂದಿದೆ, ಅದನ್ನು ನಾವು ಬಗೆಹರಿಸುತ್ತೇವೆ ಎನ್ನುವಂತಹ ಮಾತನ್ನು ಹೇಳಿದ್ದೇನೆ.

ನಮಗೂ ಬಹಳಷ್ಟು ಸರ್ವೆಯರ್‌ಗಳ ಕೊರತೆ ಇರುವುದರಿಂದ ಅದಾದರೆ ಈ ಸಮಸ್ಯ ಬಗೆಹರಿಯುವಂಥದ್ದು ಆಗುತ್ತದೆ. ಅದರ ಬಗ್ಗೆ ತಕ್ಷಣ ಬಹಳ ತೀವ್ರವಾದಂತಹ ಗಮನವನ್ನು ಹರಿಸುತ್ತೇವೆಂದು ನಾನು ಮಾನ್ಯ ಸದಸ್ಯರಿಗೆ ಹೇಳಬಯಸುತ್ತೇನೆ. ನಾನು ಕೂಡ ಒಬ್ಬ ನಿರುದ್ಯೋಗಿ ಯುವಕನಾಗಿ ಕೆಲಸಕ್ಕಾಗಿ ಹೇಗೆ ಅಲೆಯುತ್ತಿದ್ದೆ, ಅದರ ಕಷ್ಟ ಸುಖಗಳು ನಮಗೂ ಗೊತ್ತಿದೆ. ಹಾಗಾಗಿ ಅವರ ಮನಸ್ಸಿನ ಭಾವನೆ, ನೋವನ್ನು ಅರ್ಥ ಮಾಡಿಕೊಂಡಿದ್ದೇನೆ. ಯಾವುದೇ ಕಾರಣಕ್ಕೂ ನಿಮ್ಮನ್ನು ಕೈಬಿಡುವುದಿಲ್ಲ. ನಾನು ನಿಮಗೆ ನೇಮ ಕಾತಿಯನ್ನು ಆದಷ್ಟು ಬೇಗ ಮಾಡಿಕೊಡುವಂತಹ ಪ್ರಯತ್ನವನ್ನು ಮಾಡುತ್ತೇನೆ.

**ಶ್ರೀ ಕೆ.ಬಿ.ಶಾಣಪ್ಪ;–** ಆದಷ್ಟು ಬೇಗ ಎಂದು ಹೇಳಿದರೆ ಅದಕ್ಕೆ ಅರ್ಥ ಇಲ್ಲ. ತಾವು ಒಂದು ತಿಂಗಳು ಅಥವಾ ಎರಡು ತಿಂಗಳಲ್ಲಿ ಮಾಡುತ್ತೀರಾ ಎಂಬುದನ್ನು ಹೇಳಬೇಕು.

**ಶ್ರೀ ವಿ.ಶ್ರೀನಿವಾಸ ಪ್ರಸಾದ್:–** ಎಷ್ಟು ದಿನಗಳಲ್ಲಿ ಮಾಡಿಸಿಕೊಡಬೇಕು ಎಂಬುದನ್ನು ನೀವೇ ಹೇಳಿ? ನಾನು ಆಮೇಲೆ ಹೇಳುತ್ತೇನೆ. ಕೆಲವು ವಿಷಯಗಳನ್ನು ಪ್ರಸ್ತಾಪ ಮಾಡುವುದಕ್ಕೆ ಆಗುವುದಿಲ್ಲ. ಯಾವ ಹಂತದಲ್ಲಿದೆ, ಹೇಗೆ ಮಾಡುತ್ತೇವೆ ಎಂಬುದನ್ನು ನಾನು ತಮಗೆ ಹೇಳುತ್ತೇನೆ. ಬಹಳ ಶೀಘ್ರ ವಾಗಿಯೇ ಮಾಡಿಕೊಡುತ್ತೇನೆ. ಆದರೆ, ಉಳಿದವುಗಳನ್ನು ಬಹಳ ಚೆನ್ನಾಗಿ ಹೇಳಿದ್ದೀರಿ. ಇದರ ಬಗ್ಗೆ ನಾನು ಸಮಗ್ರವಾದ ವಿವರಗಳನ್ನು ಕೊಟ್ಟಿದ್ದೇನೆ.

**ಕಾವೇರಿ ಕೊಳ್ಳದ ನೀರಾವರಿ ಯೋಜನೆಗಳ ಬಗ್ಗೆ**

**390; ಶ್ರೀ ಗೋ. ಮಧುಸೂದನ್ (ಪದವೀಧರ ಕ್ಷೇತ್ರ)**

ಅ) ಕಾವೇರಿ ಕೊಳ್ಳದ ಯೋಜನೆಯಲ್ಲಿ ಬರುವ ಆಣೆಕಟ್ಟುಗಳಲ್ಲಿ ಗರಿಷ್ಠ ಮಟ್ಟದಲ್ಲಿ ನೀರು ಶೇಖರಣೆಯಾದಾಗ ಒಟ್ಟು ಎಷ್ಟು ಟಿ.ಎಂ.ಸಿ. ನೀರು ಸಂಗ್ರಹವಾಗುತ್ತದೆ (ವಿವರ ನೀಡುವುದು);

ಆ) ಈ ಆಣೆಕಟ್ಟುಗಳಿಂದ ಗ್ರಾಮಾಂತರ ಪ್ರದೇಶದ ಕೆರೆಕಟ್ಟೆಗಳಿಗೆ ನೀರು ತುಂಬಿಸುವ ಯೋಜನೆ ಸರ್ಕಾರಕ್ಕೆ ಇದೆಯೆ ? (ಯೋಜನೆಗಳ ವಿವರ ನೀಡುವುದು)

**ಉತ್ತರಿಸುವವರು : ಶ್ರೀ ಎಂ.ಬಿ. ಪಾಟೀಲ್ (ಜಲಸಂಪನ್ಮೂಲ ಸಚಿವರು)**

ಅ) ಕಾವೇರಿ ನೀರಾವರಿ ನಿಗಮದ ವ್ಯಾಪ್ತಿಯಲ್ಲಿನ ಕಾವೇರಿ ಕೊಳ್ಳದಲ್ಲಿ 21 ಆಣೆಕಟ್ಟೆಗಳಿವೆ. ಅವುಗಳ ಗರಿಷ್ಠ ಮಟ್ಟದಲ್ಲಿ ನೀರು ಶೇಖರಣೆಯಾದಾಗ ಒಟ್ಟು 139.935 ಟಿ.ಎಂ.ಸಿ. ನೀರು ಸಂಗ್ರಹವಾಗುತ್ತದೆ, ವಿವರಗಳನ್ನು ಅನುಬಂದ 1 ರಲ್ಲಿ ನೀಡಲಾಗಿದೆ

ಆ) ಈ ಆಣೆಕಟ್ಟೆಗಳ ನಾಲೆಗಳಿಂದ ಅಚ್ಚುಕಟ್ಟು ಪ್ರದೇಶದಲ್ಲಿ ಬರುವ ಕೆರೆ ಗ ಳನ್ನು ತುಂಬಿಸಲಾಗುತ್ತಿದೆ. ಇದಲ್ಲದೆ ಕಬಿನಿ ಹಿನ್ನೀರಿನ 2.07 ಟಿ.ಎಂ. ಸಿ. ನೀರನ್ನು ಎತ್ತಿ ತಾರಕಾ ಜಲಾಶಯ ತುಂಬಿಸುವ ಯೋಜ ನೆಯು ಪೂರ್ಣಗೊಂಡು ಚಾಲನೆಯಲ್ಲಿದೆ. ಅಲ್ಲದೆ, ಇಗ್ಗಲೂರು ಬ್ಯಾರೇಜ್‌ನ ಹಿನ್ನೀರಿನಿಂದ ಚನ್ನಪಟ್ಟಣ ತಾಲ್ಲೂಕಿನ ವಿರೂಪಾಕ್ಷಿಪುರ ಹೋಬಳಿ ಯಲ್ಲಿ ಬರುವ ಒಟ್ಟು 11 ಕೆರೆಗಳಿಗೆ ನೀರು ತುಂಬಿಸಲು ಗರಕಹಳ್ಳಿ ಏತ ನೀರಾವರಿ ಯೋಜನೆಯನ್ನು ಪೂರ್ಣಗೊಳಿಸಿದ್ದು ಚಾಲನೆಯಲ್ಲಿ ರುತ್ತದೆ.

ಇದಲ್ಲದೆ, ನದಿ ಮತ್ತು ನಾಲೆಗಳಿಂದ ಕುಡಿಯುವ ನೀರಿಗಾಗಿ ಕೆರೆಗಳಿಗೆ ನೀರೊದಗಿಸಲು 14 ಯೋಜನೆಗಳನ್ನು ಕೈಗೊಂಡಿದ್ದು ವಿವರಗಳನ್ನು ಅನುಬಂಧ 2 ರಲ್ಲಿ ನೀಡಲಾಗಿದೆ.

**ಅನುಬಂಧ 1**

| ಕ್ರ.ಸಂ | ಆಣೆಕಟ್ಟುಗಳು | ಗರಿಷ್ಠ ಮಟ್ಟದಲ್ಲಿ ಸಂಗ್ರಹಣಾ ಸಾಮರ್ಥ್ಯ (ಟಿ.ಎಂ.ಸಿ) |
|---|---|---|
| 1 | ಕೃಷ್ಣ ರಾಜಸಾಗರ | 49.452 |
| 2 | ಕಬಿನಿ | 19.52 |

| | | |
|---|---|---|
| 3 | ಹಾರಂಗಿ | 8.5 |
| 4 | ಹೇಮಾವತಿ | 37.103 |
| 5 | ಯಗಚಿ | 3.6 |
| 6 | ನುಗು | 5.44 |
| 7 | ತಾರಕ | 3.94 |
| 8 | ಕಣ್ವ | 0.841 |
| 9 | ಗುಂಡಾಲ್ | 0.969 |
| 10 | ಸುವರ್ಣಾವತಿ | 1.27 |
| 11 | ಮಂಚನಬೆಲೆ | 1.22 |
| 12 | ಇಗ್ಗಲೂರು | 0.182 |
| 13 | ಅರ್ಕಾವತಿ | 1.58 |
| 14 | ಉಡುತೊರೆಹಳ್ಳಿ | 0.67 |
| 15 | ವಾಟೆಹೊಳೆ | 1.51 |
| 16 | ಮಾರ್ಕೋನಹಳ್ಳಿ | 2.4 |
| 17 | ಚಿಕ್ಕಹೊಳೆ | 0.376 |
| 18 | ಚಿಕ್ಲಿಹೊಳೆ | 0.181 |
| 19 | ಮಂಗಳ | 0.53 |
| 20 | ನಲ್ಲೂರು ಅಮಾನಿಕೆರೆ | 0.231 |
| 21 | ಹೆಬ್ಬಳ್ಳ | 0.42 |
| | **ಒಟ್ಟು** | **139.935** |

ಕಾವೇರಿ ನೀರಾವರಿ ನಿಗಮ ವ್ಯಾಪ್ತಿಯಲ್ಲಿ ಗ್ರಾಮಾಂತರ ಪ್ರದೇಶದ ಕೆರೆಕಟ್ಟೆಗಳಿಗೆ ನೀರು ತುಂಬಿಸುವ ಯೋಜನೆಯ ವಿವರಗಳು

ಈಗಾಗಲೇ ಅನುಷ್ಠಾನಗೊಂಡಿರುವ / ಪ್ರಗತಿಯಲ್ಲಿರುವ ಕೆರೆ ತುಂಬಿಸುವ ಯೋಜನೆಗಳು

| ಕ್ರ.ಸಂ | ಯೋಜನೆಯ ಹೆಸರು | ಅಂದಾಜು ಮೊತ್ತ (ರೂ. ಕೋಟಿಗಳಲ್ಲಿ) | ಮೂಲ | ಕೆರೆಗಳ ಸಂಖ್ಯೆ | ನೀರಿನ ಪ್ರಮಾಣ (ಎಂ.ಸಿ. ಎಫ್.ಟಿ) | ಷರಾ |
|---|---|---|---|---|---|---|
| ಏತ ನೀರಾವರಿ ಯೋಜನೆಗಳು | | | | | | |
| 1 | ತಾರಕಾ ಏತ ನೀರಾವರಿ ಯೋಜನೆ | | ಕಬಿನಿ ಜಲಾಶಯದ ಹಿನ್ನೀರಿನಿಂದ | 1 ತಾರಕಾ ಜಲಾಶಯ | 2070.00 | ಕಬಿನಿ ಹಿನ್ನೀರಿನಿಂದ 2.07 ಟಿ.ಎಂ.ಸಿ. ನೀರನ್ನು ಎತ್ತಿ ತಾರಕಾ ಜಲಾಶಯ ತುಂಬಿಸುವ ಯೋಜನೆಯು ಪೂರ್ಣಗೊಂಡು ಚಾಲನೆಯಲ್ಲಿದೆ. |
| 2 | ಗರಕಹಳ್ಳಿ ಏತ ನೀರಾವರಿ ಯೋಜನೆ | 9.88 | ಇಗ್ಗಲೂರು ಬ್ಯಾರೇಜ್ | 11 | 325.00 | ಚೆನ್ನಪಟ್ಟಣ ತಾಲ್ಲೂಕಿನ ವಿರೂಪಾಕ್ಷಿಪುರ |

| | | | | | | |
|---|---|---|---|---|---|---|
| | | | ಹಿನ್ನೀರಿನಿಂದ | | | ಹೊಬಳಿಯಲ್ಲಿ ಬರುವ ಒಟ್ಟು 11 ಕೆರೆಗಳ 1861 ಎಕರೆ ಬಾಧಿತ ಅಚ್ಚುಕಟ್ಟು ಪ್ರದೇಶಕ್ಕೆ ನೀರೊದಗಿಸುವ ಈ ಯೋಜನೆಯನ್ನು ಪ್ರಾಯೋಗಿಕವಾಗಿ ಚಾಲನೆಗೊಳಿಸಲಾಗಿದೆ |
| ಕುಡಿಯುವ ನೀರಿನ ಯೋಜನೆಗಳು | | | | | | |
| 1 | ಗೂಳೂರು, – ಹಬ್ಬೂರು ಯೋಜನೆಯು ತುಮಕೂರು ತಾಲ್ಲೂಕಿನ 57 ಹಳ್ಳಗಳ ಕುಡಿಯುವ ನೀರಿಗಾಗಿ. ಹೇಮಾವತಿ ಯೋಜನೆಯ ತುಮಕೂರು ಶಾಖಾ ನಾಲೆಯ 142.225 ಕಿ.ಮೀ | 55.00 | ತುಮಕೂರು ಶಾಖಾ ನಾಲೆಯ ಸರ 142.225 ಕಿ.ಮೀ | 52 | 150.00 | ಪ್ರಾಯೋಗಿಕವಾಗಿ ಚಾಲನೆಗೊಳಿಸಲಾಗಿದೆ |

| | | | | | | |
|---|---|---|---|---|---|---|
| | ನಿಂದ<br>150. ಎಂ.ಸಿ.ಎಫ್.ಟಿಐ<br>ನೀರನ್ನು 2<br>1 ಹಂತಗಳಲ್ಲಿ ಎತ್ತಿ 52<br>ಕೆರೆಗಳಗೆ<br>ಒದಗಿಸುವ ಯೋಜನೆ 1 | | | | | |
| 2 | ಹೊನ್ನವಳ್ಳಿ ಮತ್ತು ಇತರೆ. ಹೋಬಳಿಗಳ ಕುಡಿಯುವ ನೀರಿನ. ಯೋಜನೆಯು ತಿಪಟೂರು, ಅರಸೀಕರೆ, ಕಡೂರು ಮತ್ತು ಹೊಸದುರ್ಗ ತಾಲ್ಲೂಕುಗಳ 86 ಹಳ್ಳಿಗಳ ಕುಡಿಯುವ ನೀರಿಗಾಗಿ. ಹೇಮಾವತಿ ಯೋಜನೆಯ ತುಮಕೂರು ಶಾಖಾ ನಾಲೆಯ 2.20 ಕಿ.ಮೀ ನಿಂದ 201 | 87.20 | ತುಮಕೂರು ಶಾಖಾ ನಾಲೆಯ ಸರ 9.900 ಕೀ.ಮೀ | 23 | 201.02 | ಪ್ರಾಯೋಗಿಕವಾಗಿ ಚಾಲನೆಗೊಳಿಸಲಾಗಿದೆ |

| | | | | | | |
|---|---|---|---|---|---|---|
| | ಎಂ.ಸಿ.ಎಫ್.ಟಿ ನೀರನ್ನು 23 ಕೆರೆಗಳಗೆ ಒದಗಿಸುವ ಯೋಜನೆ | | | | | |
| 3 | ದೊಡ್ಡಗುಣಿ ಕೆರೆಗೆ ನೀರು ಒದಗಿಸುವ ಕುಡಿಯುವ ನೀರಿನ ಯೋಜನೆಯು ಹೇಮಾವತಿ ಯೋಜನೆಯ ತುಮಕೂರು ಶಾಖಾ ನಾಲೆಯ 65 ನೇ ಕಿ.ಮೀ ನಿಂದ 18.20 ಎಂ.ಪಿ.ಎಫ್.ಟಿ ನೀರನ್ನು ಎತ್ತಿ ದೊಡ್ಡಗುಣಿ ಕೆರೆಗೆ ಹರಿಸುವ ಮೂಲಕ 14 ಗ್ರಾಮಗಳಗೆ ಕುಡಿಯುವ ನೀರನ್ನು ಒದಗಿಸುವ ಯೋಜನೆ | 3.25 | ತುಮಕೂರು ಶಾಖಾ ನಾಲೆಯ ಸರ 64.625 ಕಿ.ಮೀ | 14 | 18.20 | |
| 4 | ಹೇಮಾವತಿ ಯೋಜನೆಯ ತುಮಕೂರು ಶಾಖಾ | 5.70 | ತುಮಕೂರು ಶಾಖಾ | 5 | 7.5 | |

| | | | | | | |
|---|---|---|---|---|---|---|
| | ಸಾಲೆಯ ಸರಪಳಿ 1086800 ಮೀ ನಿಂದ ನೀರನ್ನು. ಎತ್ತಿ ಬೆಳ್ಳಾವಿ, ಚನ್ನೇನಹಳ್ಳ, ದೊಡ್ಡೇರಿ, ಟ.ಗೊಲ್ಲಹಳ್ಳಿ, ದೊಡ್ಡ ವೀರನಹಳ್ಳ ಹಾಗೂ ಸೋರೇಕುಂತೆ ಕೆರೆಗಳಿಗೆ ಹರಿಸಿ ಸುತ್ತಮುತ್ತಲ ಗ್ರಾಮಗಳಿಗೆ ಕುಡಿಯುವ ನೀರು ಒದಗಿಸುವ ಯೋಜನೆ. | | ನಾಲೆಯ ಸರ 106.800 ಕಿ.ಮೀ | | | |
| 5 | ತುಮಕೂರು ಜಿಲ್ಲೆ ಗುಬ್ಬಿ ತಾಲ್ಲೂಕಿನ ವಜ್ರನಕಟ್ಟೆ ಕೆರೆ, ಸಿ.ಕಟ್ಟಗೇನಹಳ್ಳಿ ಕೆರೆ, ಕೊಪ್ಪ ಕೆರೆಗಳಗೆ ಹೇಮಾವತಿ ಯೋಜನೆಯ ತುಮಕೂರು ಶಾಖಾ ನಾಲೆಯ ಸರ : 144.65 ರ ಕಿ.ಮೀ ನಿಂದ ಪ್ರಾರಂಭವಾಗುವ ವಿತರಣಾ ನಾಲೆ 23 ರ ಸರ: 14600 | 2.20 | ತುಮಕೂರು ಶಾಖಾ ನಾಲೆಯ ವಿತರಣಾ ನಾಲೆಯ 26 ರ ಸರ 14600 ಮೀ | 11 | 21.00 | |

| | | | | | | |
|---|---|---|---|---|---|---|
| | ಮಿ... ನಿಂದ ಸಂಪರ್ಕ ಕಲ್ಪಿಸಿ ಕುಡಿಯುವ ನೀರು ಒದಗಿಸುವ ಯೋಜನೆ | | | | | |
| 6 | ಚಿಕ್ಕನಾಯಕನಹಳ್ಳಿ ಕುಡಿಯುವ ನೀರಿನ ಯೋಜನೆಯು ಹೇಮಾವತಿ ಯೋಜನೆಯ ತುಮಕೂರು ಶಾಖಾ ಸಾಲೆಯ 46 ನೇ ಕಿಮೀ ನಿಂದ 800 ಎಂ.ಸಿ.ಎಫ್.ಟಿ ನೀರನ್ನು ಬಳಸಿ ಚಿಕ್ಕನಾಯಕನಹಳ್ಳಿ ತಾಲ್ಲೂಕಿನ 26 ಕೆರೆಗಳಗೆ ಹರಿಸುವ ಮೂಲಕ 26 ಗ್ರಾಮಗಳಗೆ ಕುಡಿಯುವ ನೀರನ್ನು ಒದಗಿಸುವ ಯೋಜನೆ | 94.70 | ತುಮಕೂರು ಶಾಖಾ ನಾಲೆಯ ಸರ 45.150 ಕಿ.ಮೀ ಮತ್ತು 48.175 ಕಿ.ಮೀ | 26 | 800.00 | |
| 7 | ಹಳೇಬೀಡು – ಮಾದಿಹಳ್ಳಿ ಯೋಜನೆಯು ಹಾಸನ | 9.00 | ಯಗಚಿ ಎಡದಂಡೆ | 39 | 220.00 | |

| | | | | | | |
|---|---|---|---|---|---|---|
| | ಜಿಲ್ಲೆಯ ಬೇಲೂರು ತಾಲ್ಲೂಕಿನ ಹಳೇಬೀಡು & ಮಾದೀಹಳ್ಳಿ ಹೋಬಳಿಯ 26 ಗ್ರಾಮಗಳಗೆ ಕುಡಿಯುವ ನೀರಿಗಾಗಿ ಯಗಚಿ ಯೋಜನೆಯ ಎಡದಂಡೆ ನಾಲೆಯ 27 ನೇ ಕಿ.ಮೀ ನಿಂದ 220 ಎಂ.ಸಿ.ಎಫ್.ಟಿ. ನೀರನ್ನು 39 ಕೆರೆಗಳಿಗೆ ಒದಗಿಸುವ ಯೋಜನೆ. | | ಶಾಖಾ ನಾಲಾ ಸರ 2633 ಮೀ | | | |
| 8 | ನುಗ್ಗೆಹಳ್ಳಿ ಕುಡಿಯುವ ನೀರಿನ ಯೋಜನೆಯು ನುಗ್ಗೆ ಹಳ್ಳಿ ಹೋಬಳಿಯ ಸುತ್ತಮುತ್ತಲಿನ 15 ಹಳ್ಳಿಗಳಿಗೆ ಕುಡಿಯುವ ನೀರಿನ ಸಲುವಾಗಿ ನುಗ್ಗೆಹಳ್ಳಿ ಹೋಬಳಿಯ ಕೆರೆಗಳನ್ನು ತುಂಬಿಸುವ ಯೋಜನೆ. | 17.60 | ಅಪ್ರೋಚ್ ನಾಲೆಯ ಬಾಗೂರು ನವಿಲೆ ಸುರಂಗ | 11 | 171.00 | |

| | | | | | | |
|---|---|---|---|---|---|---|
| 9 | ಕಬಿನಿ ನದಿಯಿಂದ ಚಾಮರಾಜನಗರ. ನಂಜನಗೂಡು ಮತ್ತು ಗುಂಡ್ಲುಪೇಟ ತಾಲ್ಲೂಕಿನ 20 ಕೆರೆಗಳಗೆ ಕುಡಿಯುವ ನೀರು ಒದಗಿಸುವ ಯೋಜನೆ | 212.00 | ಕಬಿನ ನದಿ | 20 | 600.00 | |
| 10 | ಇಗ್ಗಲೂರು ಬ್ಯಾರೇಜ್‌ನಿಂದ ಕಣ್ವ ಹಾಗೂ ಇತರೆ 17 ಕೆರೆಗಳಿಗೆ ಕುಡಿಯುವ ನೀರಿನ ಸಲುವಾಗಿ ನೀರು ಒದಗಿಸುವ ಯೋಜನೆ | 198 | ಶಿಂಷಾ ನದಿ | 17+1 | 903.00 | |

# ಕಾವೇರಿ ನೀರಾವರಿ ನಿಗಮ ವ್ಯಾಪ್ತಿಯಲ್ಲಿ ಈಗಾಗಲೇ ಆಡಳಿತಾತ್ಮಕ ಅನುಮೋದನೆ ದೊರೆತು ಕೈಗೊಳ್ಳಬೇಕಾಗಿರುವ ಯೋಜನೆಗಳು

| ಕ್ರ.ಸಂ | ಯೋಜನೆಯ ಹೆಸರು | ಅಂದಾಜು ಮೊತ್ತ (ರೂ. ಕೋಟಿಗಳಲ್ಲಿ) | ಮೂಲ | ಕೆರೆಗಳ ಸಂಖ್ಯೆ | ನೀರಿನ ಪ್ರಮಾಣ (ಎಂ.ಸಿ. ಎಫ್.ಟಿ) | ಷರಾ |
|---|---|---|---|---|---|---|
| 1 | ತುರುವೇಕೆರೆ ತಾಲ್ಲೂಕು ದಬ್ಬೇಘಟ್ಟ ಹೋಬಳಿಯ 6 ಗ್ರಾಮಗಳಿಗೆ ಕುಡಿಯುವ ನೀರಿಗಾಗಿ ನಾಗಮಂಗಲ ಶಾಖಾ ನಾಲೆಯ ಸರಪಳಿ 42.856 ಕಿ.ಮೀ ನಿಂದ ನೀರನ್ನು ಎತ್ತಿ ದಬ್ಬೇಘಟ್ಟ ಹಾಗೂ ಗೊಟ್ಟಿಕೆರೆ ಕೆರೆಗಳಿಗೆ ಹರಿಸುವ ಯೋಜನೆ | 3.00 | ನಾಗಮಂಗಲ ಶಾಖಾ ನಾಲೆ ಸರ 42.856 ಕಿ.ಮೀ | 6 | 16.40 | |

| | | | | | | |
|---|---|---|---|---|---|---|
| 2 | ತುರುವೇಕೇರೆ ತಾಲ್ಲೂಕು ದಬ್ಬೇಘಟ್ಟ ಹೋಬಳಿಯ 10 ಗ್ರಾಮಗಳಿಗೆ ಕುಡಿಯುವ ನೀರಿಗಾಗಿ ನಾಗಮಂಗಲ ಶಾಖಾ ನಾಲೆಯ ಸರ 22.75 ಕಿ.ಮೀ ನಿಂದ ಹಾಗೂ 27.325 ಕಿ.ಮೀ ನಿಂದ ನೀರನ್ನು ಎತ್ತಿ ಕ್ರಮವಾಗಿ ಹಬಕನಳ್ಳಿ ಹಾಗೂ ಕಣತ್ತೂರು ಕೆರೆಗಳಿಗೆ ಹರಿಸುವ ಯೋಜನೆ | 0.88 | ಬನ್ನಹಳ್ಳಿ ಕೆರೆ | 1 | 8.886 | |
| 3 | ಎಲೆಚಾಕನಹಳ್ಳಿ ಮತ್ತು ಇತರೆ 5 ಕೆರೆಗಳಿಗೆ ಕುಡಿಯುವ ನೀರಿನ ಸಲುವಾಗಿ ನೀರು ಒದಗಿಸುವ ಯೋಜನೆ | 18.50 | ಲೋಕಪಾವನಿ ನದಿ | 6 | 95.40 | |

**ಶ್ರೀ ಗೋ.ಮಧುಸೂದನ್:-** ಮಾನ್ಯ ಸಭಾಪತಿಯವರೇ, ಕೆರೆಯನ್ನು ತುಂಬಿಸುವಂತಹ ಪದ್ಧತಿಯನ್ನು ಏನು ಪ್ರಾರಂಭ ಮಾಡಿದ್ದಾರೆ ಇದು ಬಹಳ ಒಳ್ಳೆಯ ಪದ್ಧತಿ ಅನೇಕ ಬಾರಿ ಮಳೆಗಾಲದಲ್ಲಿ ಬಂದಂತಹ ನೀರು ನಮ್ಮ ಕಟ್ಟೆಗಳಲ್ಲಿ ಉಳಿದುಕೊಳ್ಳುವಂಥದ್ದು ಇದೆ. ಕಟ್ಟೆ ತುಂಬಿದ ನಂತರದಲ್ಲಿ ಅದು ನದಿಗೆ ಹರಿದು ಹೋಗುವಂಥದ್ದು ತಮಿಳುನಾಡಿಗೆ ಹರಿದು ಹೋಗುವಂಥದ್ದು ತಮಿಳುನಾಡಿನಿಂದಲೂ ಸಹ ಮುಂದಕ್ಕೆ ಅದು ಸಮುದ್ರಕ್ಕೆ ಹರಿದು ಹೋಗು ವಂಥದ್ದನ್ನು ನಾವು ಮಳೆಗಾಲ ಸಮಯದಲ್ಲಿ ಕಾಣುತ್ತೇವೆ. ಆದರೆ, ಅನೇಕ ಕಾರಣಗಳಿಂದಾಗಿ ನಮ್ಮ ಕಾವೇರಿ ನೀರಾವರಿ ಕೊಳ್ಳದ ಪ್ರದೇಶದಲ್ಲಿ ಅನೇಕ ಕಡೆಗಳಲ್ಲಿ ನಮಗೆ ಮಡಿಕೇರಿಯಲ್ಲಿ. ಮಳೆಯಾಯಿತು ಎನ್ನುವ ಕಾರಣ ಕೋಸ್ಕರವಾಗಿ ಕಟ್ಟೆ, ತುಂಬಿ ಹೋಗಿಬಿಡುತ್ತದೆ. ಮಲೆನಾಡಿನಲ್ಲಿ, ಸಕಲೇಶಪುರ, ಹಾಸನ, ಆ ಭಾಗದಲ್ಲಿ ಮಳೆ ಬಂತು ಎನ್ನುವ ಕಾರಣಕ್ಕಾಗಿ ಕಟ್ಟೆ ತುಂಬಿ ಹೋಗಿಬಿಡುತ್ತದೆ. ಕೇರಳದ ವಯನಾಡ್ನಲ್ಲಿ ಮಳೆ ಬಂತು ಎನ್ನುವ ಕಾರಣ ಕ್ಕಾಗಿ ಕಬಿನಿ ತುಂಬಿ ಹೋಗಿಬಿಡುತ್ತದೆ. ಆದರೆ, ನಮ್ಮ ಕೊಳ್ಳದ ಪ್ರದೇಶ ದಲ್ಲಿರುವ ಅನೇಕ ಕೆರೆಗಳಲ್ಲಿ ಮಳೆ ನೀರು ಕಡಿಮೆ ಇರುವುದ ಕೋಸ್ಕರವಾಗಿ ಅನೇಕ ಒಳ್ಳೆಯ ಕೆರೆಗಳು ಇವತ್ತು ಬತ್ತಿ ಹೋಗಿವೆ. ಆ. ಕರೆಗಳಿಗೆ ನಾವು ನೀರನ್ನು ಕೂಡಬೇಕಾಗಿರುವುದು ತುಂಬಾ ಅವಶ್ಯಕತೆ ಇದೆ. ಇದರಿಂದಾಗಿ ನಮ್ಮ water strata ಮೇಲೆ ಬರುವುದು ಒಂದು ಆಯಿತು ಎಂದರೆ ಇಡೀ ವರ್ಷ ಪೂರ್ತಿ ನಮ್ಮ ಜಾನುವಾರುಗಳಿಗೆ ಕುಡಿಯುವ ನೀರು ಸಿಗುವಂತಹ ಮತ್ತು ಹಳ್ಳಿಯ ಚಟುವಟಿಕೆಗಳಿಗೆ ಬೇಕಾಗುವ ನೀರು ಸಿಗುವಂತಹ ವ್ಯವಸ್ಥೆಗೆ ತುಂಬಾ ಪೋಷಕವಾಗುವ ಸಂಗತಿ ಇದೆ. ಆ ಕಾರಣ ಕೋಸ್ಕರವಾಗಿ ಇದನ್ನು ಅತ್ಯಂತ ಶೀಘ್ರವಾಗಿ ಮಾಡಬೇಕು. ಇಲ್ಲ ಅನೇಕ ಕೆಲಸಗಳು ಪ್ರಗತಿಯಲ್ಲಿವೆ ಎಂದು ನಾವು ಹೇಳುತ್ತಿದ್ದೆ. ಆದರೆ, ನಮ್ಮ ಕಾವೇರಿ ಕೊಳ್ಳ ಅತ್ಯಂತ ಪುರಾತನವಾದ ನೀರಾವರಿ ಯೋಜನೆ ಆಗಿದೆ. ಇದು ಇಷ್ಟು ದಿನ ತೆಗೆದು ಕೊಳ್ಳಬಹುದಾದ ಕೆಲಸ. ಆಗಿರಲಿಲ್ಲ. ಅತ್ಯಂತ ಶೀಘ್ರವಾಗಿ ಮಾಡಬೇಕು ಎನ್ನು ವುದು ನನ್ನ ಮೊದಲನೆಯ ಮನವಿ. ಎರಡನೆಯದು, ನಮ್ಮ ಕೆರೆಗಳಿಗೆ ನೀರು ತುಂಬುವಂತಹ ಪ್ರಕ್ರಿಯೆ ಇದೆಯಲ್ಲಾ ಇದಕ್ಕೆ ನೀರಾವರಿ ಸಲಹಾ ಸಮಿತಿ

ಇರುತ್ತದೆ. ಕಟ್ಟೆ ತುಂಬಿದ ನಂತರದಲ್ಲಿ ಮೊದಲ ಆದ್ಯತ ಕೆರೆಗಳಿಗೆ ನೀರು ತುಂಬಿಸುವಂಥದ್ದು ಆಗಬೇಕು.

ಅದಾದ ನಂತರದಲ್ಲಿ ನಾವು ಅಚ್ಚುಕಟ್ಟು ಪ್ರದೇಶಗಳಿಗೆ ನೀರು ಕೊಡುವ ಪದ್ಧತಿ ಇದೆ. ಆದರೆ, ಏನಾಗುತ್ತದೆ ಎ0ದರೆ, ಇವರು ಡ್ಯಾಮ್‌ಗಳು ತುಂಬಿದ ತಕ್ಷಣವೇ ನೀರು ಕೊಡುವುದಿಲ್ಲ. ನೀರಾವರಿ ಸಲಹಾ ಸಮಿತಿ ಗೋಸ್ಕರ ಕಾಯುತ್ತಾರೆ. ಒಂದು ತಿಂಗಳ ಅವಧಿವರೆಗೂ ಕೂಡ ಈ ಕಟ್ಟೆಗೆ ನೀರು ಕೊಡುವುದಿಲ್ಲ. ಆಮೇಲೆ ನೀರಾವರಿಗೂ ನೀರು ಕೊಡುತ್ತೇವೆ, ಕೆರೆ ಗಳಿಗೂ ನೀರು ಕೊಡುತ್ತೇವೆಂದು ಹೇಳುತ್ತಾರೆ. ಅಷ್ಟೊತ್ತಿಗೆ ಮಳೆ ಕಡಿಮೆ ಯಾಗುತ್ತದೆಯೋ ಅಥವಾ ಮಳೆ ಬರುವುದಿಲ್ಲವೋ ಕೊನೆಗೆ ರೈತರ ನೀರಾ ವರಿಗೆ ಆದ್ಯತೆ ಕೊಡಬೇಕೆನ್ನುವ ಕಾರಣಕ್ಕಾಗಿ ನೀರಾವರಿಗೆ ನೀರು ಕೊಟ್ಟು ಬಿಡುತ್ತೇವೆ. ಕೆರೆಗಳಿಗೆ ನೀರು ಕೊಡುವುದು ಹಿನ್ನೆಡೆಯಾಗುತ್ತದೆ. ಆ ಕಾರಣ ಕೋಸ್ಕರವಾಗಿ ನೀರಾವರಿ ಸಲಹಾ ಸಮಿತಿ ನಮ್ಮ ಕಟ್ಟೆ ತುಂಬಿದ ಒಂದು ತಿಂಗಳ ನಂತರ ಏನು ನಡೆಯುವುದಿದೆ ಅದಕ್ಕಿಂತ ಮುಂಚೆಯೇ ಈ ಒಂದು ತಿಂಗಳ ಅವಧಿಯಲ್ಲಿ ಎಲ್ಲಾ ಕೆರೆಕಟ್ಟೆಗಳಿಗೆ ನೀರು ತುಂಬಿಸುವಂತಹ ಕೆಲಸ ವನ್ನು ಮಾಡಬೇಕು. ಅದಕ್ಕೆ ಬೇಕಾದಂತಹ ಕ್ರಮವನ್ನು ತೆಗೆದು ಕೊಳ್ಳ ಬೇಕೆಂದು ನಾನು ಒತ್ತಾಯ ಮಾಡುತ್ತೇನೆ. ಅತೀ ಶೀಘ್ರವಾಗಿ ಕರೆ ತುಂಬಿಸು ವಂತಹ ಯೋಜನೆಗಳೇನಿವೆ, ವಿಶೇಷವಾಗಿ ಕಬಿನಿ ಡ್ಯಾಮ್‌ನಿಂದ ಬಹುಶಃ ಅತ್ಯಂತ ಮೊದಲು ರಾಜ್ಯದಲ್ಲಿ ತುಂಬುವಂತಹ ಡ್ಯಾಮ್ ಯಾವುದಾದರೂ ಇತ್ತು ಎಂದರೆ. ಅದು ಕಬಿನಿ ಡ್ಯಾಮ್. ಆದರೆ, ಕಬಿನಿ ನಮ್ಮ ಪ್ರದೇಶದಲ್ಲಿ ಬರುವಂತಹದ್ದಾಗಿದೆ. ನಂಜನಗೂಡು, ಗುಂಡ್ಲುಪೇಟೆ, ಚಾಮರಾಜನಗರ ಇರಬಹುದು, ಇಲ್ಲಿಗೆಲ್ಲಾ ನೀರು ಕೊಡುವ ಕಾಮಗಾರಿ ಇನ್ನೂ ಪ್ರಗತಿಯಲ್ಲಿದೆ ಎಂದು ಹೇಳುತ್ತಿದ್ದೇವೆ. ಇದರ ಬಗ್ಗೆ ಕೂಲಂಕುಷವಾಗಿ ಅಧ್ಯಯನ ಮಾಡಿ ಅತೀ ಶೀಘವಾಗಿ ಇದನ್ನು ಮಾಡಿಕೊಡಬೇಕೆಂದು ನಾನು ವಿನಂತಿ ಮಾಡು ತ್ತೇನೆ.

**ಶ್ರೀ ಎಂ.ಬಿ.ಪಾಟೀಲ್;–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಅನೇಕ ಸಲಹೆಗಳನ್ನು ಕೊಟ್ಟಿದ್ದಾರೆ. ನೀರಾವರಿ ಸಲಹಾ ಸಮಿತಿ

ನಮ್ಮ ಅಣೆಕಟ್ಟುಗಳು ತುಂಬಿದ ತಕ್ಷಣವೇ ಒಂದು ತಿಂಗಳ ಒಳಗಾಗಿ. ಕೆರೆ ತುಂಬಿಸುವಂತಹ ಕೆಲಸ ಮಾಡಬೇಕು. ಕೆರೆ ತುಂಬಿಸುವುದಕ್ಕೆ ಮೊದಲ ಆದ್ಯತೆಯನ್ನು ಕೊಡುತ್ತೇವೆ. ಏಕೆಂದರೆ, ಕುಡಿಯುವ ನೀರಿಗೆ ನಾವು ಪ್ರಥಮ ಆದ್ಯತೆಯನ್ನು ಕೊಡಬೇಕಾಗುತ್ತದೆ.

**ಶ್ರೀ ಸಿ.ಹೆಚ್.ವಿಜಯಶಂಕರ:–** ಮಾನ್ಕ ಸಭಾಪತಿಯವರೇ, ಅವರು ಹೇಳಿರುವುದನ್ನು. ಮಾನ್ಯ ಸಚಿವರು ಬಹಳ ತಪ್ಪಾಗಿ ಅರ್ಥೈಸುತ್ತಿದ್ದಾರೆ.

**ಶ್ರೀ ಎಂ.ಬಿ.ಪಾಟೀಲ್:–** ಮಾನ್ಯ ಸಭಾಪತಿಯವರೇ, ಈ ಸಲ ನಾವು ನೀರಾವರಿ ಸಲಹಾ ಸಮಿತಿಯ noises ಗಾಗಿ ಕಾಯಲಿಲ್ಲ. ಏಕೆಂದರೆ, ಆ ಸಮಿತಿಯಲ್ಲಿ 15 ಜನರ ಸದಸ್ಯರು ಇರುತ್ತಿದ್ದರು. ಅದರಲ್ಲಿ 8 ಜನ ಜನಪ್ರತಿ ನಿಧಿಗಳು ಮತ್ತು ಉಳಿದವರು ? ಜನ ಇದ್ದಾರೆ. ಅವರುಗಳನ್ನು ಕಾಯದೆ ಎಲ್ಲಾ ಜನಪ್ರತಿನಿಧಿಗಳನ್ನು ಕೂಡ invitees ಎಂದು ಹಾಕಿ ಈಗ ತಕ್ಷಣ ಏನಾಗಬೇಕು ಎನ್ನುವ ನಿರ್ಣಯವನ್ನು ನಾವು ಕೈಗೊಳ್ಳುತ್ತಿದ್ದೇವೆ. ಎಲ್ಲಾ ತೆಗೆದುಕೊಂಡು ಎಲ್ಲಾ ಸದಸ್ಯರುಗಳನ್ನು ಹಾಕಿಕೊಂಡು revamp ಮಾಡ ಬೇಕೆಂದರೆ ಎರಡು ತಿಂಗಳು ವೇಸ್ಟ್ ಆಗುತ್ತಿತ್ತು. ಅಲ್ಲಿಯ ICC (Irrigation Consultative Committee) ಅಲ್ಲಿಯ ಉಸ್ತುವಾರಿ ಸಚಿವರು, ಆ ಭಾಗದ ಎಲ್ಲಾ ಜನಪ್ರತಿನಿಧಿಗಳನ್ನು, ವಿಧಾನ ಪರಿಷತ್ತಿನ ಸದಸ್ಯರುಗಳಿರಬಹುದು, ವಿಧಾನಸಭಾ ಸದಸ್ಯರುಗಳರಬಹುದು, ಇವರೆಲ್ಲರನ್ನೂ invitees ಎಂದು ಹಾಕಿ ಆ ಪ್ರಕ್ರಿಯೆಯನ್ನು ಮಾಡಿದ್ದೇವೆ. ಆ time gap ಏನಿದೆ ಅದನ್ನು reduce ಮಾಡಬೇಕು, ತಕ್ಷಣ ಆಗಬೇಕೆಂದು ಮಾನ್ಯ ಸದಸ್ಕರು ಹೇಳಿದ್ದಾರೆ. ಅದನ್ನು ನಾನು ಗಂಭೀರವಾಗಿ ಪರಿಗಣಿಸುತ್ತೇನೆ. ಈ ಕೆರೆ ತುಂಬುವ ಯೋಜನೆಗಳನ್ನು ವಿಶೇಷವಾಗಿ ಕಾವೇರಿ ಕಣಿವೆಯಲ್ಲಿ ನಾವು ಹೆಚ್ಚಿನ ಆದ್ಯತೆಯನ್ನು ಕೊಡ ಬೇಕಾಗ್ದಿದೆ. ಏಕೆಂದರೆ ಅಲ್ಲಿ ನಮಗೆ ಬೇರೆ ದಾರಿ ಇಲ್ಲ. ಕುಡಿಯವ ನೀರಿಗಾಗಿ ಅಂತರ್ಜಲವನ್ನು ಅವಲಂಬಿಸಬೇಕಾಗಿದೆ. ನಾವು ಈ ಎಲ್ಲಾ ಕೆರೆ ತುಂಬುವ ಯೋಜನೆಗಳನ್ನು ಇನ್ನೂ ಹೆಚ್ಚಿಗೆ ತೆಗೆದುಕೊಳ್ಳಬೇಕಾಗಿದೆ. ಯಾವ್ಯಾವುದು ಆಗಿಲ್ಲ ಅದನ್ನು ಮಾಡುವುದರ ಜೊತೆಗೆ ಈಗ ಇದ್ದಂತಹ ಕಾಮಗಾರಿಗಳು ತ್ವರಿತಗತಿಯಲ್ಲಿ ನಡೆದಿದೆಯೋ ಅಥವಾ ಯಾವ ಕಾರಣಕ್ಕಾಗಿ ನಿಂತು

ಹೋಗಿದೆ ಅವಲ್ಲವೂಗಳನ್ನು ನಾವು speedup ಮಾಡಿಸಿ ತಕ್ಷಣವೇ ಎಷ್ಟು ಶೀಘ್ರವಾಗಿ ಮಾಡುವುದಕ್ಕಾಗುತ್ತದೆಯೋ ಅಷ್ಟು ಶೀಘ್ರವಾಗಿ ಕ್ರಮ ಕೈಗೊಳ್ಳು ತ್ತೇವೆ. ಈ ಹಿಂದೆ World Bank assisted JSY ಜಲ ಸಂವರ್ಧನೆ ಯೋಜನೆ ಇತ್ತು ಅಲ್ಲಿ ಕಾವೇರಿ ಕೊಳ್ಳದ ಎಲ್ಲಾ ಕೆರೆಗಳೂ ಕೂಡ include ಆಗಿತ್ತು. ತದನಂತರ ಏನಾಯಿತು ಎಂದರೆ, Tribunal ಇನ್ನು finalise ಆಗದೇ ಇದ್ದುದರಿಂದ, Award ಬರದಿದ್ದುದರಿಂದ ನೆರೆ ರಾಜ್ಯ ತಮಿಳುನಾಡು ಇವತ್ತಿನ ದಿವಸ ಕೇಂದ್ರ ಸರ್ಕಾರಕ್ಕೆ ಮತ್ತು ವಿಶ್ವಬ್ಯಾಂಕ್‌ಗೆ ನೇರವಾಗಿ ಬರೆದು stall ಮಾಡುವಂತಹ ಪಕ್ರಿಯೆ ಕೂಡ ನಡೆಯಿತು.

Although it is out of my purview ಅದರೂ ಕೂಡ ಹೇಳುತ್ತಿದ್ದೇನೆ. ನಾವು ಮತ್ತೆ ಅದರ ಬಗ್ಗೆ ಪ್ರಕ್ರಿಯೆಯನ್ನು ಪ್ರಾರಂಭ ಮಾಡಿ ಜಲಸಂವರ್ಧ ನೆಯವರ ಜೊತೆ ಮಾತನಾಡುತ್ತಿದ್ದೇವೆ... ಅವರು ಕೂಡ ಸ್ವಲ್ಪ positive indications ತೋರಿಸಿದ್ದಾರೆ. ಮತ್ತೊಮ್ಮೆ World Bank ನ್ನು approach ಆಗಿ ಈ ಜಲ ಸಂವರ್ಧನ ಯೋಜನೆಯನ್ನು ಪುನ: ಪ್ರಾರಂಭ ಮಾಡಲಿಕ್ಕೆ ಏನಾ ದರೂ ಸಾಧ್ಯತೆಗಳಿವೆಯೇ ಎನ್ನುವುದನ್ನೂ ಕೂಡ ನಾವು ಗಂಭೀರವಾಗಿ ತೆಗೆದುಕೊಂಡಿದ್ದೇವೆ. ಪರಿಶೀಲಿಸಿ ಅದನ್ನೂ ಕೂಡ ನಾವು ಮಾಡುತ್ತೇವೆ.

**ಶ್ರೀ ಗೋ.ಮಧುಸೂಧನ್ (ಪದವೀದರರ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ಮಾನ್ಯ ಸಚಿವರು ಒಂದು ವಿಚಾರವನ್ನು ಗಮನಿಸಬೇಕು. ಇದಕ್ಕೆ ಬೇರೆ ಇನ್ಯಾವುದೋ aid ಕಡೆಗೆ, ಬೇರೆ ಎಲ್ಲೋ ಹಣವನ್ನು ಹುಡುಕದೇ ನಮ್ಮದೇ ಬಜೆಟ್ನಿಂದ ಇದಕ್ಕೆ ಹಣವನ್ನು ಕೊಟ್ಟುಬಿಡಿ. ನೀವು. ಅತಿ ಶೀಘ್ರವಾಗಿ ಈ ಕಲಸವನ್ನು ಮಾಡಿ. ಏಕೆಂದರೆ, ಮತ್ತೆ ಇನ್ಯಾವುದೋ ಕಾರಣಕ್ಕೋಸ್ಕರವಾಗಿ ಆ ತಮಿಳುನಾಡಿನ ತಾಯಿ ಮತ್ತೆ ಜಗಳ ತೆಗೆದು ಈ ನೀರಿಗೂ ಕಂಟಕ ಉಂಟು ಮಾಡಿಯಾಳು ಎನ್ನುವ ಹೆದರಿಕ ನಮ್ಮೆಲ್ಲರಿಗೂ ಇದೆ.

**ಶ್ರೀ ಸಿ. ಹೆಚ್. ವಿಜಯಶಂಕರ (ವಿಧಾನಸಭಾ ಕ್ಷೇತ್ರ:-** ಮಾನ್ಯ ಸಭಾಪತಿಯವರೆ,

**ಉಪ ಸಭಾಪತಿಯವರು:–** ಸಾಕು ಕುಳಿತುಕೊಳ್ಳಿ.

**ಶ್ರೀ ಸಿ.ಹೆಚ್.ವಿಜಯಶಂಕರ:–** ಮಾನ್ಯ ಸಭಾಪತಿಯವರೆ, ಕಾವೇರಿ ವಿಚಾರ ಬಂದಾಗ ನಮ್ಮನ್ನು ಈ ರೀತಿ ಕುಳ್ಳಿರಿಸಿದರೆ ಕಷ್ಟವಾಗುತ್ತದೆ.

**ಉಪ ಸಭಾಪತಿಯವರು:–** ಬೇಕಾದರೆ, ಇದನ್ನು ಬೇರೆ ನಿಯಮದಲ್ಲಿ ಹಾಕಿಕೊಂಡು ಸುಧೀರ್ಘವಾಗಿ ಚರ್ಚೆ. ಮಾಡೋಣ... ಈ ರೀತಿ. ಆದರೆ. ಬೇರೆಯವರ ಪ್ರಶ್ನೆಯನ್ನು ತಡೆಹಿಡಿಯಬೇಕಾಗುತ್ತದೆ.

**ಶ್ರೀ ಸಿ.ಹಚ್.ವಿಜಯಶಂಕರ:–** ಮಾನ್ಯ ಸಭಾಪತಿಯವರೆ, ನಾನು ಹೆಚ್ಚಿಗೆ. ಸಮಯವನ್ನು ತೆಗೆದುಕೊಳ್ಳುವುದಿಲ್ಲ. ಮಾನ್ಯ ಸಚಿವರು ಬಹಳ ದೊಡ್ಡ ಜವಾಬ್ದಾರಿಯನ್ನು ತೆಗೆದುಕೊಂಡಿದ್ದಾರೆ. ಭಾರಿ ನೀರಾವರಿ ಎಂದರೆ ಇಡಿ ರಾಜ್ಯದ ಹಿತವನ್ನು ಕಾಪಾಡುವಂತಹ ಏಚಾರದಲ್ಲ ಪ್ರಮುಖ ಪಾತ್ರವನ್ನು ವಹಿಸುವಂತಹ ವಿಚಾರ ಇದಾಗಿದೆ. ಅದರಲ್ಲೂ ಕೂಡ ಕಾವೇರಿ ವಿಚಾರ ಎಂದರೆ ಎಷ್ಟೊಂದು ಸೂಕ್ಷ್ಮವಾದ ವಿಚಾರವೆಂದು ತಮಗೆ ಗೊತ್ತಿದೆ. ಈ ಬಾರಿ ನಮ್ಮ ಕಟ್ಟೆ 60 ಅಡಿಗೆ ಬಂದು ನಿಂತಿದೆ. ಇನ್ನು 12 ದಿವಸಗಳ ಕಾಲ ಮಳೆ ಬೀಳಲಿಲ್ಲವೆಂದರೆ. ಬೆಂಗಳೂರು ನಗರಕ್ಕೂ ಕೂಡ ಕುಡಿಯುವುದಕ್ಕೆ ನೀರು ಕೊಡಲಿಕ್ಕೆ ಆಗದಂತಹ ಸ್ಥಿತಿ ನಿರ್ಮಾಣವಾಗಿತ್ತು. ನಮ್ಮ ಮೈಸೂರು ಭಾಗದಲ್ಲಿ ಈಗಾಗಲೇ ಹೆಚ್ಚು–ಕಡಿಮೆ ನೀರಿಗಾಗಿ ಹಾಹ್ರಕಾರ ಪ್ರಾರಂಭವಾಗಿ ಸಂಘರ್ಷ ಪ್ರಾರಂಭವಾಗಿತ್ತು. ಆ ರೀತಿಯ ವಾತಾವರಣವನ್ನು ನಾವು ನಮ್ಮ ಕಣ್ಣಿನಿಂದ ಕಂಡಿದ್ದೇವೆ. ಆದ್ದರಿಂದ, ಬಹಳ ಸ್ಪಷ್ಟವಾಗಿ ತಮ್ಮ ಗಮನಕ್ಕೆ ತರುವ ವಿಚಾರ ವೇನೆಂದರೆ, ಒಂದು ಕಟ್ಟ ಎಂದು ತಾವು ಏನು ಹೇಳುತ್ತೀರಿ, ಆ ಕಟ್ಟೆಯಲ್ಲಿ ಎರಡು ಭಾಗವಿದೆ. ಅದು ಹಾರಂಗಿ ಕಟ್ಟೆ ಇರಲಿ, ಕಬಿನಿ ಕಟ್ಟೆ ಇರಲಿ ಅಥವಾ ಕೆ.ಆರ್.ಎಸ್. ಇರಲಿ, ಹೇಮಾವತಿ ಇರಲಿ. ಇವುಗಳಲ್ಲಿ ಎರಡು ಭಾಗವಿದೆ. ಒಂದು ಅಚ್ಚುಕಟ್ಟು ಭಾಗ ಇನ್ನೊಂದು ಕೆರೆ ಭಾಗ. ಕೆರೆ ಭಾಗ ಎಂದರೆ ಅಚ್ಚುಕಟ್ಟು ವ್ಯಾಪ್ತಿಗೆ ಒಳಪಟ್ಟ ಕೆರೆಗಳು. ನಿಮ್ಮ ಅಧಿಕಾರಿಗಳು ಕಟ್ಟ ತುಂಬಿ ದರೂ ಕೂಡ ಹೊಳೆಗೆ ನೀರು ಬಿಡುತ್ತಾರೆ ಹೊರತು ಅಚ್ಚುಕಟ್ಟು ವ್ಯಾಪ್ತಿಯ ಕೆರೆಗಳಿಗೆ ನೀರು ಬಿಡುವುದಿಲ್ಲ. ಏಕೆ ಬಿಡುವುದಿಲ್ಲವೆಂದು ಕೇಳಿದಾಗ, ಅವರ

ಬಾಯಿಯಲ್ಲಿ ಬರುವುದು ಏನೆಂದರೆ I.C.C. (Irrigation Consultative Committee) meeting ಆಗಿಲ್ಲ, ನೀರಾವರಿ ಸಲಹಾ ಸಮಿತಿ ಸಭೆ ಆಗುವವರೆಗೂ ಕೂಡ ನಾವು ಯಾವುದೇ ಕಾರಣಕ್ಕೂ ಕೂಡ ಅಚ್ಚುಕಟ್ಟು ಕೆರೆಗಳಿಗೆ ನೀರು ಕೊಡುವುದಿಲ್ಲವೆಂದು ಹೇಳುತ್ತಾರೆ. ನೀರಾವರಿ ಸಲಹಾ ಸಮಿತಿ ಸಭೆ ನಡೆಯುವುದು ಏತಕ್ಕೆ? ಅಚ್ಚುಕಟ್ಟು ವ್ಯಾಪ್ತಿಯಲ್ಲಿರುವ ಕೆರೆಗಳಿಗೆ ಅಚ್ಚುಕಟ್ಟು ನೀರು ಕೂಡುವುದಕ್ಕೆ ಸಭೆ ನಡೆಯುತದೆ. ಯಾವ್ಯಾವ ನಾಲೆ ಎಷ್ಟೆಷ್ಟು ಪ್ರಮಾಣದಲ್ಲಿ ನೀರು ಕೊಡಬೇಕು, ಯಾವ್ಯಾವ ಕಾಲಕ್ಕೆ ನೀರು ಕೊಡಬೇಕೆಂದು ಹೇಳಿ, ಜನಪ್ರತಿನಿಧಿಗಳು ಮತ್ತು ಅಧಿಕಾರಿಗಳು ಸೇರಿ ತೀರ್ಮಾನ ಮಾಡಬೇಕಾಗಿರುತ್ತದೆ. ಒಂದು ಬಾರಿ ಕಟ್ಟೆ ತುಂಬಿದ ಮೇಲೆ ಕಟ್ಟೆ ವ್ಯಾಪ್ತಿಯಲ್ಲರುವಂತಹ ಕೆರೆಗಳಿಗೆ ನೀರು ಕೊಡಲಿಕ್ಕೆ ಏನು ಸಮಸ್ಯೆ ಇದೆ?

ಆದ್ದರಿಂದ, ತಮಗೆ ನಾನು ಸ್ಪಷ್ಟವಾಗಿ ಒಂದು ವಿಚಾರವನ್ನು ಹೇಳಲಿಕ್ಕೆ ಬಯಸುತ್ತೇನೆ... ಈಗ ಹಾರಂಗಿ ಜಲಾಶಯ ತುಂಬಿ ಒಂದು ತಿ0ಗಳು ಆಯಿತು. ಈ ಬಗ್ಗೆ ನಾನು ಹತ್ತು ಬಾರಿ phone ಮಾಡಿ ನಿಮ್ಮ ಅಧಿಕಾರಿಗಳಿಗೆ ಹೇಳಿದ್ದೇನೆ. ಬೇಕಾದರೆ ಅವರನ್ನು ಕೇಳಿ. ನಿಮ್ಮ ಮುಖ್ಯ ಇಂಜಿನಿಯರ್ ಮತ್ತು Superintendent Engineer ರವರಿಗೂ ಕೂಡ ಹೇಳಿದ್ದೇನೆ. ಇಲ್ಲಿಯವರೆಗೂ ಕೂಡ ನೀರನ್ನು ತುಂಬಲಿಲ್ಲ... ಆದ್ದರಿಂದ, ತಾವು ಈ ವಿಚಾರದಲ್ಲಿ ಬಹಳ ಸ್ಪಷ್ಟವಾಗಿ ಹೇಳಬೇಕಾಗಿದ್ದು ಏನೆಂದರೆ, ಅಚ್ಚುಕಟ್ಟು ನೀರು ಕೊಡಲಿಕ್ಕೆ I.C.C. meeting ಆಗಬೇಕಾಗಿರುವುದು. ಕಟ್ಟೆ ತುಂಬಿದ ಮರುಗಳಿಗೆಯಲ್ಲಿಯೇ ಇಡಿ ರಾಜ್ಯದಲ್ಲಿ ಯಾವುದೇ ಕಟ್ಟೆ ಇರಲಿ, ಆ ಕಟ್ಟೆಗಳ ವ್ಯಾಪ್ತಿಯಲ್ಲಿ ಬರುವಂತಹ ಕೆರೆಗಳಿಗೆ ನೀರನ್ನು ತುಂಬಿಕೊಳ್ಳಲಿಕ್ಕೆ ನೀವು ಒಂದು standing instructions ಕೊಡಬೇಕು. ದಯವಿಟ್ಟು ಆ ರೀತಿಯಲ್ಲಿ ಒಂದು ಸರ್ಕಾರಿ ಆದೇಶವನ್ನು ಹೊರಡಿಸಿ. ಇದರಿಂದಾಗಿ, ನಿಮಗೆ ಒಳ್ಳೆಯ ಹೆಸರು ಬರುತ್ತದೆ. ಜೊತೆಗೆ ಕಟ್ಟೆಯ ಅಚ್ಚುಕಟ್ಟು ಏನಿದೆ, ಅದೂ ಸಹ safe ಆಗುತ್ತದೆ. I.C.C. meeting ಆದಮೇಲೆ ನೀರಾವರಿ ಅಚ್ಚುಕಟ್ಟು ಸಹ safe ಆಗುತ್ತದೆ.

**ಶ್ರೀ ಎಂ.ಬಿ.ಪಾಟೀಲ್:–** ಮಾನ್ಯ ಸಭಾಪತಿಯವರೆ, ಮಾನ್ಯ ಸದಸ್ಯರು ಏನು ಸಲಹೆಯನ್ನು ಕೊಟ್ಟಿದ್ದಾರೆ, ಅದನ್ನು ನಾವು ಪರಿಶೀಲಿಸಿ, ನಾನು ಸೂಕ್ತ ನಿರ್ದೇಶನಗಳನ್ನು ನೀಡುತ್ತೇನೆ. ಮತ್ತೆ ಕಬಿನಿ ಮತ್ತು ಹಾರಂಗಿ ಜಲಾಶಯ ಗಳೆರಡರ ಬಗ್ಗೆ ಮತ್ತು ಕೆರೆಗಳ ಬಗ್ಗೆ ಹೇಳಿದ್ದಾರೆ. Command area ವ್ಯಾಪ್ತಿ ಯಲ್ಲಿ ಬರುವಂತಹದ್ದರ ಬಗ್ಗೆ ತಾವು ಏನು ಸೂಚನೆಯನ್ನು ಕಾಟ್ಟಿದ್ದೀರಿ, ಅದನ್ನೂ ಕೂಡ ನಾನು ಗಮನಿಸುತ್ತೇನೆ.

**ಸಾಮಿಲ್‌ಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಕಾರ್ಮಿಕರ ಬಗ್ಗೆ**

**541; ಡಿ. ಎಸ್. ವೀರಯ್ಯ ( ವಿಧಾನಸಭೆಯಿಂದ ಚುನಾಯಿತರಾದವರು)**

ಅ) ಕರ್ನಾಟಕ ರಾಜ್ಯದಲ್ಲಿ ನೊಂದಾಯಿತ ಸಾಮಿಲ್‌ಗಳ ಸಂಖ್ಯೆ ಎಷ್ಟು ? ಜಿಲ್ಲಾವಾರು ಮಾಹಿತಿ ಒದಗಿಸುವುದು;

ಆ) ಹಾಗಿದ್ದಲ್ಲಿ ಸಾಮಿಲ್‌ಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಕಾರ್ಮಿಕರಿಗೆ ನೀಡುವ ಸೇವಾ ಭದ್ರತೆಗಳೇನು;

ಇ) ಸರ್ಕಾರ ಈ ಕಾರ್ಮಿಕರಿಗೆ ಸೇವಾ ಭದ್ರತೆಗಳನ್ನು ಒದಗಿಸಲು ತೆಗೆದುಕೊಂಡ ಕ್ರಮಗಳೇನು ;

**ಉತ್ತರಿಸುವವರು : ಶ್ರೀ ಬಿ. ರಮಾನಾಥ ರೈ (ಅರಣ್ಯ ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು)**

ಅ) ಕರ್ನಾಟಕ ರಾಜ್ಯದಲ್ಲಿ ಒಟ್ಟಾರೆ 3465 ಸಾಮಿಲ್‌ಗಳು ಇರುತ್ತವೆ. ಜಿಲ್ಲಾವಾರು ಮಾಹಿತಿ ಈ ಕೆಳಕಂಡತಿದೆ.

| ಕ್ರ.ಸಂಖ್ಯೆ | ಜಿಲ್ಲೆಯ ಹೆಸರು | ನೊಂದಾಯಿತ ಸಾಮಿಲ್‌ಗಳ ಸಂಖ್ಯೆ |
|---|---|---|
| 1 | ಬೆಂಗಳೂರು ನಗರ | 557 |
| 2 | ಬೆಂಗಳೂರು ಗ್ರಾಮಾಂತರ | 57 |
| 3 | ರಾಮನಗರ | 65 |

| | | |
|---|---|---|
| 4 | ಕೋಲಾರ | 53 |
| 5 | ಚಿಕ್ಕಬಳ್ಳಾಪುರ | 43 |
| 6 | ಬೆಳಗಾವಿ | 317 |
| 7 | ಬಾಗಲಕೋಟೆ | 129 |
| 8 | ಬಿಜಾಪುರ | 155 |
| 9 | ಬಳ್ಳಾರಿ | 84 |
| 10 | ಚಿತ್ರದುರ್ಗ | 71 |
| 11 | ದಾವಣಗೆರೆ | 73 |
| 12 | ಕೊಪ್ಪಳ | 48 |
| 13 | ಚಿಕ್ಕಮಗಳೂರು | 64 |
| 14 | ಚಾಮರಾಜನಗರ | 16 |
| 15 | ಧಾರವಾಡ | 113 |
| 16 | ಗದಗ | 65 |
| 17 | ಹಾವೇರಿ | 70 |
| 18 | ಗುಲ್ಬರ್ಗಾ | 142 |
| 19 | ಬೀದರ್ | 157 |
| 20 | ರಾಯಚೂರು | 58 |
| 21 | ಯಾದಗಿರಿ | 55 |
| 22 | ಹಾಸನ | 125 |
| 23 | ತುಮಕೂರು | 166 |
| 24 | ಉತ್ತರಕನ್ನಡ | 80 |

| | | |
|---|---|---|
| 25 | ದಕ್ಷಿಣಕನ್ನಡ | 127 |
| 26 | ಉಡುಪಿ | 78 |
| 27 | ಕೊಡಗು | 24 |
| 28 | ಮೈಸೂರು | 238 |
| 29 | ಮಂಡ್ಯ | 141 |
| 30 | ಶಿವಮೊಗ್ಗ | 94 |
| | **ಒಟ್ಟು** | **3465** |

ಆ) ಯಾವುದೇ ನೊಂದಾಯಿತ ಸಾಮಿಲ್‌ಗಳಲ್ಲಿ 50 ಅಥವಾ 50 ಕ್ಕಿಂತ ಹೆಚ್ಚು ಕಾರ್ಮಿಕರು ಇದ್ದಲ್ಲಿ ಅಂತಹ ಸಂಸ್ಥೆಗಳಿಗೆ ಸೇವಾ ಭದ್ರತೆಯನ್ನು ಒದಗಿಸಲು ಕೈಗಾರಿಕಾ ಉದ್ಯೋಗ (ಸ್ಥಾಯಿ ಆದೇಶಗಳು) ಕಾಯ್ದೆ 1946 ಅನ್ನು ಜಾರಿ ಮಾಡಲಾಗುತ್ತದೆ.

10 ಕ್ಕಿಂತ ಮೇಲ್ಪಟ್ಟು ಕಾರ್ಮಿಕರಿದ್ದಲ್ಲಿ ಅಂತಹ ಸಂಸ್ಥೆಗಳಿಗೆ ಕಾರ್ಖಾನೆ ಗಳ ಕಾಯ್ದೆ 1948 ಅನ್ವಯವಾಗುತ್ತಿದ್ದು, ಅದರಡಿಯಲ್ಲಿ ಸೇವಾ ಭದ್ರತೆಯನ್ನು ಒದಗಿಸಲಾಗುತ್ತದೆ.

10ಕ್ಕಿಂತ ಕಡಿಮೆ ಕಾರ್ಮಿಕರಿದ್ದು, ಅಧಿಸೂಚಿತ ಪ್ರದೇಶಗಳಲ್ಲಿರುವ ಸಂಸ್ಥೆಗಳಿಗೆ ಕರ್ನಾಟಕ ಅಂಗಡಿ ಮತ್ತು ವಾಣಿಜ್ಯ ಸಂಸ್ಥೆ ಕಾಯ್ದೆ 1961 ಅನ್ವಯವಾಗುತ್ತಿದೆ. ಅದರಡಿಯಲ್ಲಿ ಸೇವಾ ಭದ್ರತೆಯನ್ನು ಒದಗಿಸ ಲಾಗುತ್ತಿದೆ.

ಕಾರ್ಮಿಕರ ಲೇಆಫ್, ರಿಟ್ರೆಂಚ್‌ಮೆಂಟ್, ವಜಾ, ಕೆಲಸದಿಂದ ತೆಗೆ ಯುವುದು ಮತ್ತು ಸಂಸ್ಥೆಗಳು ಮುಚ್ಚಿದ್ದಲ್ಲಿ ಕೈಗಾರಿಕಾ ವಿವಾದಗಳ ಕಾಯ್ದೆ 1947 ರಡಿಯಲ್ಲಿ ಸೇವಾ ರಕ್ಷಣೆ ದೊರಕುತ್ತದೆ.

ಇ) ಕಾರ್ಮಿಕ ಇಲಾಖೆ ಮೇಲೆ ಹೇಳಿರುವ ಕಾಯ್ದೆಗಳನ್ನು ಅನುಷ್ಠಾನ ಗೊಳಿಸುವ ಮೂಲಕ ಸೇವಾ ಭದ್ರತೆಗಳನ್ನು ಒದಗಿಸುತ್ತದೆ.

**ಶ್ರೀ ಡಿ.ಎಸ್.ವೀರಯ್ಯ:-** ಮಾನ್ಯ ಸಭಾಪತಿಯವರೆ, ಮಾನ್ಯ ಸಚಿವರು ಉತ್ತರವನ್ನು ಒದಗಿಸಿದ್ದಾರೆ. ಕರ್ನಾಟಕ ರಾಜ್ಯದಲ್ಲ ನೋಂದಾಯಿತ ಸಾಮಿಲ್‌ಗಳ ಸಂಖ್ಯೆ ಎಷ್ಟು ಇವೆ ಎನ್ನುವ ನನ್ನ ಮೊದಲನೆ ಪ್ರಶ್ನೆಗೆ ಮಾನ್ಯ ಸಚಿವರು 3405 ಸಾಮಿಲ್‌ಗಳಿವೆ ಎಂದು ಉತ್ತರವನ್ನು ಕೊಟ್ಟಿದ್ದಾರೆ. ಹಾಗಾದರೆ, ನೋಂದಾಯಿತವಲ್ಲದ ಸಾಮಿಲ್‌ಗಳು ಎಷ್ಟಿವೆ ಎನ್ನುವ ಮಾಹಿತಿ ಬೇಕಾಗಿದೆ. ಜೊತೆಗೆ ಇದು ಒಂದು ಅಸಂಘಟಿತ ಕಾರ್ಮಿಕರು ಕೆಲಸ ಮಾಡು ವಂತಹ ಮಿಲ್‌ಗಳಾಗಿವೆ. ಅಲ್ಲಿ ಯಾವುದೇ ಸಂಘಟನೆಗಳು ಇರುವುದಿಲ್ಲ. ಅಲ್ಲಿ Industrial Disputes Act, 1947 apply ಆಗಬೇಕು. ಅದು ಆಗುತ್ತಿಲ್ಲ. ಇದು ಎಷ್ಟು ಕಟ್ಟ ಸ್ಥಳವೆಂದರೆ ಅಲ್ಲಿ ಕೆಲಸ ಮಾಡುವವರಿಗೆ mask ಇರುವು ದಿಲ್ಲ. ಅವರುಗಳಿಗೆ shoe ಗಳನ್ನು ಕೊಟ್ಟಿರುವುದಿಲ್ಲ. ಅವರುಗಳಿಗೆ ಯಾವುದೇ ಒಂದು protective devices ಸರಬರಾಜು ಮಾಡಿರುವುದಿಲ್ಲ ಮತ್ತೆ ಅವರಿಗೆ provident fund ಇರುವುದಿಲ್ಲ. E.S.I. ಸೌಲಭ್ಯ ಕೂಡ ಇರುವುದಿಲ್ಲ. ವಿಮೆ ಕೂಡ ಮಾಡಿಸಿರುವುದಿಲ್ಲ. ಜೊತೆಗೆ ಅತಿ ಹೆಚ್ಚು ಪ್ರಾಣಾಪಾಯ ಇರತಕ್ಕಂತಹ ಕೆಲಸ ಮಾಡುವಂತಹ ಜನರಿಗೆ ಸೇವಾ ಭದ್ರತೆಯನ್ನು ಒದಗಿಸಿಕೊಡದಿದ್ದ ಸಾಮಿಲ್‌ಗಳಿಗೆ ನೋಟಿಸ್ ಕೊಟ್ಟು ಅವುಗಳನ್ನು close ಮಾಡಿ. ಆ ಕಾರ್ಮಿಕ ರನ್ನೂ ಕೂಡ ಈ Industrial Disputes Act, 1947 ಕಡೆ ತರಬೇಕು. ಅವರಿಗೆ ಸೇವಾ ಭದ್ರತೆಯನ್ನು ಒದಗಿಸಬೇಕು. ಮತ್ತೆ ಹಾಗೆ ಇದನ್ನು ಪಾಲಿಸದಿದ್ದ ಸಾಮಿಲ್‌ಗಳಿಗೆ ಶಿಕ್ಷೆ ನೀಡುವಂತಹ ಕಠಿಣ ಕ್ರಮ ಜರುಗಿಸಬೇಕೆಂದು ಸಚಿವರಲ್ಲಿ ಕೇಳಿಕೊಳ್ಳುತ್ತೇನೆ.

**ಶ್ರೀ ಬಿ.ರಮನಾಥ್ ರೈ:-** ಮಾನ್ಯ ಸಭಾಪತಿಯವರೆ, ಕರ್ನಾಟಕ ರಾಜ್ಯದಲ್ಲಿ ಒಟ್ಟಾರೆ 3465 ಸಾಮಿಲ್‌ಗಳು ನೋಂದಣಿಯಾಗಿವೆ. ಇದೆಲ್ಲವೂ ಖಾಸಗಿ ಒಡೆತನಕ್ಕೆ ಒಳಪಟ್ಟಿರತಕ್ಕಂತಹ ಸಾಮಿಲ್‌ಗಳಾಗಿವೆ. 50 ಅಥವಾ 30 ಕ್ಕಿಂತ ಹೆಚ್ಚು ಕಾರ್ಮಿಕರಿದ್ದಲ್ಲಿ ಅಂತಹ ಸಂಸ್ಥೆಗೆ ಸೇವಾ ಭದ್ರತೆಯನ್ನು ಒದಗಿ ಸಲು ಕೈಗಾರಿಕಾ ಉದ್ಯೋಗ ಕಾಯಿದೆ 1946 ಅನ್ನು ಜಾರಿ ಮಾಡಲಾಗುತ್ತಿದೆ. 10ಕ್ಕಿಂತ ಮೇಲ್ಪಟ್ಟು ಕಾರ್ಮಿಕರಿದ್ದಲ್ಲಿ ಅಂತಹ ಸಂಸ್ಥೆಗಳಿಗೆ ಕಾರ್ಖಾನೆಗಳ ಕಾಯಿದೆ 1948 ಅನ್ವಯವಾಗುತ್ತಿದ್ದು, ಅದರಡಿಯಲ್ಲಿ ಸೇವಾ ಭದ್ರತೆಯನ್ನು

ಒದಗಿಸಲಾಗುತ್ತಿದೆ. 10ಕ್ಕಿಂತ ಕಡಿಮೆ ಕಾರ್ಮಿಕರಿದ್ದು, ಅಧಿಸೂಚಿತ ಅದೇಶ ಗಳಲ್ಲಿರುವ ಸಂಸ್ಥೆಗಳಿಗೆ. ಕರ್ನಾಟಕ ಅಂಗಡಿ ಮತ್ತು ವಾಣಿಜ್ಯ ಸಂಸ್ಥೆ ಕಾಯಿದೆ. 1961 ಅನ್ವಯವಾಗುತ್ತಿದೆ. ಅದರಡಿಯಲ್ಲಿ ಸೇವಾ ಭದ್ರತೆಯನ್ನು ಒದಗಿಸಲಾಗುತ್ತಿದೆ. ಕಾರ್ಮಿಕರ lay off ವಜಾ, ಕೆಲಸದಿಂದ ತೆಗೆಯುವುದು ಮತ್ತು ಸಂಸ್ಥೆಗಳನ್ನು ಮುಚ್ಚಿದಲ್ಲಿ ಕೈಗಾರಿಕೆಗಳ ವಿವಾದಗಳ ಕಾಯಿದೆ 1947 ರಡಿಯಲ್ಲಿ ಸೇವಾ ರಕ್ಷಣೆ ದೊರಕುತ್ತದೆ.

ಇದರಲ್ಲಿ ಗೌರವಾನ್ವಿತ ಸದಸ್ಯರು ಹೇಳಿರುವಂತಹದ್ದು ಏನೆಂದರೆ ಕಲವು ಅನಧಿಕೃತವಾಗಿ ನೋಂದಣಿ ಆಗದೇ ಇರತಕ್ಕಂತಹ ಸಾಮಿಲ್‌ಗಳಿವೆ ಎನ್ನುವ ಮಾತನ್ನು ಹೇಳಿದ್ದಾರೆ. ಮತ್ತೆ ಅಲ್ಲಿ ಅವರಿಗೆ ಸೇವಾ ಭದ್ರತೆ ಇಲ್ಲ ಮತ್ತು ಆರೋಗ್ಯದ ದೃಷ್ಟಿಯಲ್ಲಿ ಅಲ್ಲಿ mask ಹಾಕದೇ ಇರುವಂತಹದ್ದರ ಬಗ್ಗೆ ಹೇಳಿ ದ್ದಾರೆ, ಜೊತೆಗೆ ಪರಿಸರದ ಮೇಲೆ ಪರಿಣಾಮ ಆಗತಕ್ಕಂತಹ ವ್ಯವಸ್ಥೆಗಳಿವೆ, ಅದನ್ನು ಸರಿಪಡಿಸಲಿಕ್ಕೆ ತಾವು ಏನು ಮಾಡುತ್ತೀರಿ, ಮತ್ತು ಅಂತಹದ್ದನ್ನು ಉಲ್ಲಂಘನೆ ಮಾಡಿದವರ ಮೇಲೆ. ಏನು ಕ್ರಮ ಕೈಗೊಳ್ಳುತ್ತೀರಿ ಎನ್ನುವ. ಬಗ್ಗೆ ಮಾನ್ಯ ಸದಸ್ಯರು ಪ್ರಶ್ನೆ ಕೇಳಿದ್ದಾರೆ.. ಮಾನ್ಯ ಸದಸ್ಯರ ಆತಂಕ ನಮಗೆ ಗೊತ್ತಾಗಿದೆ. ನಾನು ಖಂಡಿತವಾಗಿ ಅನಧಿಕೃತವಾಗಿ ಇರತಕ್ಕಂತಹ ಸಾಮಿಲ್ ಗಳಲ್ಲಿ ಇಂತಹ ಸೇವಾ ಭದ್ರತೆ ಇಲ್ಲದೆ ಇರತಕ್ಕಂತಹದ್ದು ಗಮನಕ್ಕೆ ಬಂದರೆ ಅದರ ಬಗ್ಗೆ ಗಮನಹರಿಸುತ್ತೇವೆ. ಜೊತೆಗೆ ನೋಂದಣಿಕೆಯಾಗಿ ಸೇವಾ ಭದ್ರತೆಯನ್ನು ಯಾರು ಅನುಸರಿಸುತ್ತಿಲ್ಲ, ಅವರ ಬಗ್ಗೆ ಸೂಕ್ತವಾದ, ಕಠಿಣ ವಾದ ಕ್ರಮಗಳನ್ನು ಕೈಗೊಳ್ಳುತ್ತೇವೆ ಮತ್ತೆ ಆ ಒಂದು ಸಾಮಿಲ್‌ಗಳು ಏನಿವೆ, ಅಲ್ಲಿ ಆರೋಗ್ಯದ ದೃಷ್ಟಿಯಿಂದ mask ಹಾಕುವಂತಹದ್ದು ಇರಬಹುದು, ಪರಿಸರಕ್ಕೆ ಹಾನಿಯಾಗುವಂತಹದ್ದು ಕಂಡುಬಂದಲ್ಲಿ ಅಂತಹವರ ಮೇಲೆ ಕಠಿಣವಾದ ಕ್ರಮ ಕೈಗೊಳ್ಳುವಲ್ಲಿ ನಾನು ಭರವಸೆಯನ್ನು ಕೊಡುತ್ತೇನೆ.

**ಕೊಪ್ಪಳ ಜಿಲ್ಲೆಯಲ್ಲಿ ಜಿಂಕೆಗಳ ಹಾವಳಿ ಬಗ್ಗೆ**

**554; ಶ್ರೀ ಆಚಾರ್ ಹಾಲಪ್ಪ ಬಸಪ್ಪ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)**

ಅ) ಕೊಪ್ಪಳ ಜಿಲ್ಲೆಯಲ್ಲಿ ಜಿಂಕೆ ಹಾವಳಿಯಿಂದ ತತ್ತರಿಸಿರುವ ರೈತರ ಸಮಸ್ಯೆ ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ ಇಲಾಖೆ ಸಮೀಕ್ಷೆ ಪ್ರಕಾರ ಕೊಪ್ಪಳ ಜಿಲ್ಲೆಯೊಂದರಲ್ಲಿಯೇ ಎಷ್ಟು ರೈತರು ಜಿಂಕೆ ಹಾವಳಿಗೆ ತಮ್ಮ ಫಸಲನ್ನು ಕಳೆದುಕೊಂಡಿರುತ್ತಾರೆ (ವಿವರಗಳನ್ನು ನೀಡುವುದು);

ಇ) ಈ ಕುರಿತು ಸರ್ಕಾರ ವಿತರಿಸಿದ ಪರಿಹಾರ ಧನದ ಮೊತ್ತ ಎಷ್ಟು (ತಾಲ್ಲೂಕುವಾರು ವಿವರ ನೀಡುವುದು);

ಈ) ಕೊಪ್ಪಳ ಜಿಲ್ಲೆಯಲ್ಲಿ ಜಿಂಕೆ ವನ ನಿರ್ಮಾಣದ ಪ್ರಸ್ತಾವನೆ ಸರ್ಕಾರದಲ್ಲಿ ಸ್ವೀಕೃತವಾಗಿದೆಯೇ ಹಾಗಿದ್ದಲ್ಲಿ, ಈ ಕುರಿತು ಸರ್ಕಾರ ಯಾವ ಕ್ರಮ ಕೈಗೊಳ್ಳುವುದು;

ಉ) ಕೊಪ್ಪಳ ಜಿಲ್ಲೆಯ ಬಯಲು ಪ್ರದೇಶದ ರೈತರಿಗೆ ಜಿಂಕೆಗಳಿಂದ ಆಗುತ್ತಿರುವ ತೊಂದರೆಯನ್ನು ನಿವಾರಿಸಲು ಆ ಜಿಂಕೆಗಳನ್ನು ಬಯಲು ಪ್ರದೇಶದಿಂದ ಅರಣ್ಯ ಪ್ರದೇಶಕ್ಕೆ ಸ್ಥಳಾಂತರಿಸಲು ಸರ್ಕಾರ ಕ್ರಮ ಕೈಗೊಳ್ಳುವುದೇ;

**ಶ್ರೀ ಬಿ. ರಮಾನಾಥ ರೈ ( ಅರಣ್ಯ ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು)**

ಅ) ಹೌದು.

ಆ) 2012–13 ಸಾಲಿನಲ್ಲಿ ಜಿಂಕೆ ಹಾವಳಿಯಿಂದ 9136 ಬೆಳೆನಾಶ ಪ್ರಕರಣಗಳು ದಾಖಲಾಗಿದ್ದು, ವಿವರ ಕೆಳಗಿನಂತಿದೆ.

ಕೊಪ್ಪಳ ತಾಲ್ಲೂಕಿನಲ್ಲಿ 1549 ಪ್ರಕರಣಗಳು

ಯಲಬುರ್ಗಾ ತಾಲ್ಲೂಕಿನಲ್ಲಿ 7587 ಪ್ರಕರಣಗಳು

ಇ) ಜಿಂಕೆ ಹಾವಳಿಯಿಂದ ಆದ ಬೆಳನಾಶ ಪ್ರಕರಣಗಳಲ್ಲ ಈ ಕೆಳಗಿನಂತೆ ದಯಾತ್ಮಕಧನವನ್ನು ಪಾವತಿಸಲಾಗಿರುತ್ತದೆ.

| ತಾಲ್ಲೂಕು | ಪ್ರಕರಣ | ಮೊತ್ತ |
|---|---|---|
| ಕೊಪ್ಪಳ | 1549 | ರೂ. 28,90,125–00 |
| ಯಲಬುರ್ಗಾ | 7587 | ರೂ. 1,07,34,075–00 |

ಈ) ಮಾನ್ಯ ಮುಖ್ಯಮಂತ್ರಿಗಳು 2010–11 ನೇ ಸಾಲಿನ ಆಯವ್ಯಯ ಭಾಷಣದಲ್ಲಿ. ಕೊಪ್ಪಳ ಜಿಲ್ಲೆಯ ಯಲಬುರ್ಗಾ ತಾಲ್ಲೂಕಿನಲ್ಲಿ ಜಿಂಕೆ ಹಾವಳಿ ತಡೆಗಟ್ಟಲು ಜಿಂಕೆವನ ನಿರ್ಮಿಸಲು ಪ್ರಸ್ತಾಪಿಸಿದರು. ಆದರೆ, ಕೃಷ್ಣ ಮೃಗಗಳು ಅತ್ಯಂತ ಸೂಕ್ಷ್ಮ ಪ್ರಾಣಿಗಳಾಗಿದ್ದು, ಇವುಗಳ ಹಾವಳಿ ನಿಯಂತ್ರಿಸುವ ಉದ್ದೇಶದಿಂದ ಇವುಗಳನ್ನು ಹಿಡಿದು ಜಿಂಕೆ ವನಕ್ಕೆ ಸ್ಥಳಾಂತರಿಸುವ ಪ್ರಕ್ರಿಯೆಯಲ್ಲಿ ಹೆಚ್ಚಿನ ಸಂಖ್ಯೆಯ ಪ್ರಾಣಿಗಳು ಸಾವನ್ನಪ್ಪುವ ಸಾಧ್ಯತೆ ಇರುವುದರಿಂದ ಜಿಂಕೆವನ ನಿರ್ಮಿಸುವ ಪ್ರಸ್ತಾವನೆಯನ್ನು ಕೈಬಿಡಲಾಗಿರುತ್ತದೆ.

ಉ) ಜಿಂಕೆಗಳು ಸ್ವಾಭಾವಿಕವಾಗಿ ಅರಣ್ಯ ಪ್ರದೇಶ ಮತ್ತು ಅರಣ್ಯೇತರ ಪ್ರದೇಶಗಳಲ್ಲಿ ವಾಸಿಸುವುದರಿಂದ ಅವುಗಳನ್ನು ಸ್ಥಳಾಂತರಿಸಲು ಸದ್ಯದಲ್ಲಿ ಸರ್ಕಾರದ ಮುಂದೆ ಯಾವುದೇ ಪ್ರಸ್ತಾವನೆ ಇರುವುದಿಲ್ಲ.

**ಶ್ರೀ ಆಚಾರ್ ಹಾಲಪ್ಪ ಬಸಪ್ಪ:–** ಮಾನ್ಯ ಸಭಾಪತಿಯವರೆ, ರೈತರ ಸಮಸ್ಯೆ ಸರ್ಕಾರದ ಗಮನಕ್ಕೆ ಬಂದಿದೆಯೇ ಎನ್ನುವ ಪ್ರಶ್ನೆಗೆ ಮಾನ್ಯ ಸಚಿವರು ಹೌದು ಎಂದು ಹೇಳಿದ್ದಾರೆ, ಸಂತೋಷ ಇವತ್ತು ಅಲ್ಲಿನ ಪರಿಸ್ಥಿತಿಯನ್ನು ಮಾನ್ಯ ಸಚಿವರಿಗೆ ಹೇಳಲೇ ಬೇಕಾಗುತ್ತದೆ. ಇವತ್ತು ಅಲ್ಲಿ 1 ಕೋಟಿ 36 ಲಕ್ಷ ರೂಪಾಯಿಗಳ ಪರಿಹಾರವನ್ನು ಕೊಟ್ಟಿದ್ದೇವೆಂದು ಹೇಳುತ್ತಾರೆ. ಆದರೆ, ಒಬ್ಬ ರೈತನಿಗೆ ಕೊಟ್ಟಿರುವ ಪರಿಹಾರ 300 ರೂಪಾಯಿಗಳು. ಮಾತ್ರ. ಒಬ್ಬ ರೈತನಿಗೆ 300 ರೂಪಾಯಿಗಳ ಪರಿಹಾರವನ್ನು ಕೊಟ್ಟರೆ, ಬ್ಯಾಂಕಿಗೆ ಒಬ್ಬ ರೈತ ಹೋಗಿ

ಅಲ್ಲ ಅವನು ಏನಾದರೂ ಒಂದು account ತೆರೆಯಬೇಕಾದರೆ ಬ್ಯಾಂಕಿನವರು ಕೇಳುವುದು 200 ರೂಪಾಯಿಗಳು. ಇವತ್ತು 1 ಕೋಟ 36 ಲಕ್ಷ ರೂಪಾಯಿಗಳನ್ನು ಖರ್ಚು ಮಾಡುತ್ತಿರುವ ಸರ್ಕಾರ, ರೈತರ ಕಾಳಜಿಯಿಲ್ಲದೆ, ಇವರ ಸಮಸ್ಯೆ ಪರಿಹಾರವಾಗುತ್ತದೆ ಎಂದರೆ, ಇದರ ಬಗ್ಗೆ ಯಾವ ರೀತಿ ಆಲೋಚನೆ ಮಾಡಬೇಕೆನ್ನುವ ಬಗ್ಗೆ ದಯವಿಟ್ಟು ಮಾನ್ಯ ಅರಣ್ಯ ಸಚಿವರಿಗೆ ಮನದಟ್ಟು ಮಾಡಿಕೊಡಲೇ ಬೇಕಾದಂತಹ ಪರಿಸ್ಥಿತಿ ಬಂದಿದೆ. ಅಲ್ಲಿ ಒಟ್ಟಾರೆ ಬಯಲು ಪ್ರದೇಶ. ಅಲ್ಲಿ ಯಾವುದೇ ಅರಣ್ಯ ಇಲ್ಲ. ಇವತ್ತು ಇದು ವನ್ಯ ಜೀವಿ ಅರಣ್ಯ ಕಾಯಿದೆಯಡಿಯಲ್ಲಿ ಬರತಕ್ಕ ಪ್ರಾಣಿ ಇದಾಗಿರುವುದರಿಂದ ಅಲ್ಲಿ ಅದನ್ನು ಯಾರೂ ಸಹ ಮುಟ್ಟಲಿಕ್ಕೆ ಆಗುತ್ತಿಲ್ಲ. ಇದರಿಂದ ಏನೂ ಮಾಡುವುದಕ್ಕಾಗುತ್ತಿಲ್ಲ. ಆದರೆ, ಬಯಲು ಪ್ರದೇಶದಲ್ಲಿ ಬಿತ್ತಿದಂತಹ ಮುಂಗಾರು ಬೆಳೆಯನ್ನು ಯಾವ ರೈತರು ಮನೆಗೆ ತರಲಿಕ್ಕೆ ಆಗುತ್ತಿಲ್ಲ. ಬಿತ್ತಿದ ಒಂದು ತಿಂಗಳೊಳಗೆ ಬರತಕ್ಕಂತಹ ಮೊಳಕೆ ಮತ್ತು ಸಸಿಗಳೆಲ್ಲವನ್ನೂ ನಾಶ ಮಾಡುತ್ತಿವೆ. ಸುಮಾರು 55 ಹಳ್ಳಿಗಳು ಈ ಒಂದು ಜಿಂಕೆ ಹಾವಳಿಗೆ ಬಲಿಯಾಗುತ್ತಿವೆ.

**ಉಪ ಸಭಾಪತಿಯವರು:–** ಶ್ರೀಯುತ ಆಚಾರ್ ಹಾಲಪ್ಪನವರ, ತಾವು ಉಪ ಪ್ರಶ್ನೆಯನ್ನು ಕೇಳಿ. ಏಕೆಂದರೆ, ಇಲ್ಲಿ ಸಮಯ ಇಲ್ಲ. ಪ್ರಶ್ನೋತ್ತರ ಅವಧಿಯಲ್ಲಿ ನೀವು ಭಾಷಣ ಮಾಡಲಿಕ್ಕೆ ಅವಕಾಶವಿಲ್ಲ.

**ಶ್ರೀ ಆಚಾರ್ ಹಾಲಪ್ಪ ಬಸಪ್ಪ:–** ಮಾನ್ಯ ಸಭಾಪತಿಯವರೆ, ಅವರು ಕೊಟ್ಟಿರತಕ್ಕಂತಹ ಪರಿಹಾರದ ಬಗ್ಗೆ ಮಾತನಾಡುತ್ತಿದ್ದೇನೆ. ಸಮಯ ಇಲ್ಲವೆಂದರೆ, ನಾನು ಮಂತ್ರಿಗಳಿಗೆ ಹೇಳುವುದೇನು, ನಾನು ಅವರಿಂದ ನಾನು ಏನು ಉತ್ತರ ಕೇಳಬೇಕು? ಈಗ ನಾನು ಕೇಳುತ್ತಿರುವುದು ಸಹ ಪ್ರಶ್ನೆಯೇ ಆಗಿದೆ. ನಾನು ಅಲ್ಲಿ ಇರತಕ್ಕಂತಹ ಪರಿಸ್ಥಿತಿಯ ಬಗ್ಗೆ ಮಾನ್ಯ ಸಚಿವರನ್ನು ಕೇಳುತ್ತಿದ್ದೇನೆ. ಈಗ ಕೊಟ್ಟಿರುವ ಪರಿಹಾರದ ಬಗ್ಗೆ ಮಾನ್ಯ ಸಚಿವರು ಹೇಳುತ್ತಿದ್ದಾರೆ. 1 ಕೋಟಿ 36 ಲಕ್ಷ ರೂಪಾಯಿಗಳು ಎಂದು ಹೇಳುತ್ತಿದ್ದಾರೆ. ಆದರೆ, ಒಬ್ಬ ರೈತನಿಗೆ ಕೊಟ್ಟಿರುವಂತಹದ್ದು. ಕೇವಲ 300 ರೂಪಾಯಿಗಳು 300 ರೂಪಾಯಿಗಳನ್ನು ಕೊಟ್ಟಿದ್ದಾರೆಂದರೆ, ಒಬ್ಬ ರೈತ ಬ್ಯಾಂಕಿಗೆ ಹೋದರೆ

ಅಲ್ಲಿ 500 ರೂಪಾಯಿಗಳು ಇಲ್ಲದಿದ್ದರೆ, ಅವನು account ತೆಗೆಯಲಿಕ್ಕೆ ಆಗುವುದಿಲ್ಲ.

**ಉಪ ಸಭಾಪತಿಯವರು:–** ಮಾನ್ಯ ಸಚಿವರು ಅದಕ್ಕೆ ಸಮಂಜಸವಾದಂತಹ ಉತ್ತರವನ್ನು ಕೊಡುತ್ತಾರೆ.

**ಶ್ರೀ ಆಚಾರ್ ಹಾಲಪ್ಪ ಬಸಪ್ಪ:–**ಈ ಪರಿಸ್ಥಿತಿಯನ್ನು ಮಾನ್ಯ ಸಚಿವರಿಗೆ ಹೇಳದಿದ್ದರೆ ಹೇಗೆ? ಅದಕ್ಕೆ ಸರ್ಕಾರ ಏನಾದರೂ ಒಂದು ಪರಿಹಾರವನ್ನು ಕಂಡುಕೊಳ್ಳಬೇಕು. ಆದ್ದರಿಂದ, ಅಲ್ಲಿ ಇರುವಂತಹ ಜಿಂಕೆಗಳನ್ನು ತೆಗೆಯ ಬೇಕು. ಇಲ್ಲದಿದ್ದರೆ, ಅಲ್ಲಿನ ಜನರಿಗೆ ಆಗುವಂತಹ ನಷ್ಟಕ್ಕೆ ಪರಿಹಾರವನ್ನು ಕೊಡಬೇಕು. ಜಿಂಕೆಗಳನ್ನು ತೆಗೆಯುವುದಿಲ್ಲವೆಂದು ಸಚಿವರು ತಮ್ಮ ಉತ್ತರದಲ್ಲಿ ಉತ್ತರದಲ್ಲಿ ಸಷ್ಟವಾಗಿ ಹೇಳಿದ್ದಾರೆ. ಈಗ ನಾನು ಕೇಳುವುದಿಷ್ಟೆ.

ಆ ಜಿಂಕೆಗಳನ್ನು ಅಲ್ಲಿಂದ ತೆಗೆಯುವುದಾದರೆ ತೆಗೆಯಿರಿ. ಅದೇ ರೀತಿಯಲ್ಲಿ ಆ ಜಿಂಕೆಗಳಿಂದ ಹಾನಿಗೊಳಗಾಗಿರುವ ಜನರಿಗೆ ಹಚ್ಚಿನ ಪರಿಹಾರ ವನ್ನು ಕೊಡಬೇಕಾಗುತ್ತದೆ. ತಮ್ಮ ಉತ್ತರದಲ್ಲಿ ಜಿಂಕೆವನವನ್ನು ನಿರ್ಮಿಸುವ ಪ್ರಸ್ತಾವನೆಯನ್ನು ಕೈ ಬಿಡಲಾಗಿದೆ ಎಂದು ಸ್ಪಷ್ಟವಾಗಿ ಹೇಳಿದ್ದೀರಿ. ಅಲ್ಲಿ ಜಿಂಕೆವನವನ್ನು ತೆಗೆಯುವ ಪ್ರಸ್ತಾವನೆ ಸರ್ಕಾರದ ಮುಂದೆ ಇಲ್ಲವೆಂದಾದರೆ, ಆ ಭಾಗದಲ್ಲಿರುವ ಜಿಂಕೆಗಳನ್ನು ಅಲ್ಲಿಂದ ತೆಗೆಯಬೇಕಾಗುತ್ತದೆ. ಅವು. ಸಾಧು ವನ್ಯಜೀವಿಯಾಗಿರುವುದರಿಂದ ಯಾರಿಗೂ ಏನೂ ಮಾಡುವುದಕ್ಕಾಗುವುದಿಲ್ಲ. ದಯವಿಟ್ಟು ಈ ರೈತರಿಗೆ ಹಚ್ಚಿನ ಪರಿಹಾರವನ್ನು ಏನು ಕೊಡುತ್ತೀರೋ ಅದನ್ನು ಕೊಡಿ.

**ಶ್ರೀ ಬಿ. ರಮಾನಾಥ ರೈ:–** ಮಾನ್ಯ ಸಭಾಪತಿಯವರೆ, ಮಾನ್ಕ ಸದಸ್ಯರ ಆತಂಕ ನನಗೆ ಅರ್ಥವಾಗುತ್ತದೆ. ಇಷ್ಟರವರೆಗೆ ಅಂದರೆ ಕಳೆದ ಸಾಲಿನಲ್ಲಿ ಆ ರೈತರಿಗೆ ಏನು ಪರಿಹಾರವನ್ನು ಕೊಟ್ಟಿದ್ದೇವೆ ಎಂಬುದನ್ನು ಇಲ್ಲಿ ನೀಡಿದ್ದೇನೆ. ಕಳೆದ ಸಾಲಿನಲ್ಲಿ ಕೂಟ್ಟಿರತಕ್ಕಂತಹ ಪರಿಹಾರ ಏನು ಇದೆ ಅದು ಕಡಿಮೆಯಾಗಿದೆ ಎನ್ನುವ ನೋವು ತಮಗೆ ಇದೆ ಈ ಬೆಳೆ ನಾಶವಾದರೆ ಎಷ್ಟು ಪರಿಹಾರವನ್ನು ಕೊಡಲಾಗುತ್ತದೆ ಎಂಬುದು ತಮಗೆಲ್ಲರಿಗೂ ಗೊತ್ತಿದೆ. ಅದೇ

ರೀತಿ ಪ್ರಕೃತಿ ವಿಕೋಪದಿಂದ ನಷ್ಟವಾದಲ್ಲಿ ಮತ್ತು ಈ ಪ್ರಾಣಿಗಳ ಹಾವಳಿಯಿಂದ ರೈತರಿಗೆ ಬೆಳೆ ಹಾನಿಯಾದಲ್ಲಿ ಎಷ್ಟು ಪರಿಹಾರದ ಹಣವನ್ನು ಸರ್ಕಾರ ಕೊಡುತ್ತದೆ ಎಂಬುದು ತಮಗೆ ಗೊತ್ತಿದೆ. ಇಷ್ಟರವರೆಗೆ ಎಷ್ಟು ಹಣವನ್ನು ಸರ್ಕಾರ ಕೊಟ್ಟಿದೆ ಎಂದು ಹೇಳಿದ್ದೇನೆ. ಈ ಬಯಲುಸೀಮೆ ಪ್ರದೇಶದಲ್ಲಿ ಈ ತೊಂದರೆ ಏನು ಆಗಿದೆ ಅದನ್ನು ಸರ್ವೇ ಸಾಮಾನ್ಯವಾಗಿ ಎಲ್ಲರೂ ಒಪ್ಪುತ್ತಾರೆ. ಯಾರೂ ಇಲ್ಲವೆಂದು ಹೇಳುವುದಿಲ್ಲ. ಪ್ರಕೃತಿ ವಿಕೋಪದ ನಷ್ಟಕ್ಕೂ ಅದೇ ರೀತಿಯ ಪರಿಹಾರ ನೀಡುವುದು ಇರುತ್ತದೆ. ಆನೆಗಳ ಹಾವಳಿ ಯಿಂದ ಜನರು ಸತ್ತರೆ ಅವರ ಕುಟುಂಬ ವರ್ಗದವರಿಗೆ 5 ಲಕ್ಷ ಪರಿಹಾರ ವನ್ನು ಕೊಡುತ್ತೇವೆ. ಆದರೆ ಬೆಳೆ ನಷ್ಟವಾದರೆ ಮತ್ತು ಗಾಯಗೊಂಡವರಿಗೆ ಅಷ್ಟು ಪೂರ್ತಿ ಪರಿಹಾರ ಸಿಗುವುದಿಲ್ಲ. ಇದೆಲ್ಲವನ್ನೂ ಪರಿಶೀಲಿಸಿ ನಮ್ಮಿಂದ ಏನು ಸಾಧ್ಯವಿದೆ ಅದನ್ನು ಮಾಡುವುದಕ್ಕೆ ಪ್ರಯತ್ನ ಮಾಡುತ್ತೇವೆ. ಆ ಭಾಗದಲ್ಲಿರತಕ್ಕಂತಹ ಕೃಷ್ಣಮೃಗ ಏನು ಇದೆ ಅದು ಸಾಧು ಪ್ರಾಣಿಯಾಗಿದೆ. ಈಗಿನ ವನ್ಯಜೀವಿ ಸಂರಕ್ಷಣಾ ಹತದೃಷ್ಟಿಯಿಂದ ಅವುಗಳನ್ನು ಕಾಪಾಡಬೇಕಾ ಗುತ್ತದೆ. ಅವುಗಳನ್ನು ಮೃಗಾಲಯದಲ್ಲ ಇಡುವುದಕ್ಕೆ ಹೆಚ್ಚಿನ ಪ್ರೋತ್ಸಾಹ ಕೊಡುತ್ತಿಲ್ಲ. ಅವುಗಳನ್ನು ಇನ್ನೊಂದು ಬಯಲುಸೀಮೆಗೆ ಅಥವಾ ಮತ್ತೊಂದು ಕಡೆಗೆ ಸ್ಥಳಾಂತರ ಮಾಡುವ ಬಗ್ಗೆ ತಾವು ಹೇಳಿದಿರಿ ಎಂದು ಮಾಡುವುದಕ್ಕಾ ಗುವುದಿಲ್ಲ. ಆ ಪ್ರಾಣಿ ಎಲ್ಲ ಇರಬೇಕೋ ಆ ಪ್ರದೇಶದಲ್ಲಿ ಮಾತ್ರ ಇರುತ್ತವೆ. ಅವುಗಳನ್ನು ಇನ್ನೊಂದು ಕಡೆಗೆ ತೆಗೆದುಕೊಂಡು ಹೋಗಿ ಬಿಡುವುದಕ್ಕಾಗು ವುದಿಲ್ಲ. ವನ್ಯ ಜೀವಿ ಸಂರಕ್ಷಣೆಯ ಕಾನೂನಿನ ಅಡಿಯಲ್ಲಿ ಅದರ ರಕ್ಷಣೆಯ ಹಿತದೃಷ್ಟಿಯ ಕಾಳಜಿ ಕೂಡ ನಮ್ಮಗೆ ಇರಬೇಕಾಗುತ್ತದೆ. ಆದರೆ ಇದರಿಂದಾಗಿ ಹಾನಿಗೊಳಗಾದ ರೈತರಿಗೆ ಹೆಚ್ಚಿನ ಪರಿಹಾರವನ್ನು ಸೊಡಬೇಕೆಂದು ತಾವು ಏನು ಹೇಳುತ್ತಿದ್ದೀರಿ ಅದಕ್ಕೆ ನನ್ನ ಅಭಿಮತ ಮತ್ತು ಅಪೇಕ್ಷ ಕೂಡ ಇದೆ... ಆದರೆ ನನ್ನ ಕಾರ್ಯವ್ಯಾಪ್ತಿಯ ಅಡಿಯಲ್ಲ ಅವರಿಗೆ ಏನು ಪರಿಹಾರವನ್ನು ಎಷ್ಟು ಕೊಡುವುದಕ್ಕೆ ಸಾಧ್ಯವಿದೆ ಅದನ್ನು ಮಾಡುವುದಕ್ಕೆ ನಾನು ಪ್ರಾಮಾಣಿಕ ಪ್ರಯತ್ನವನ್ನು ಮಾಡುತ್ತೇನೆ.

**ಶ್ರೀ ಆಚಾರ್ ಹಾಲಪ್ಪ ಬಸಪ್ಪ–** ಅ ಭಾಗದಲ್ಲಿ ಯಾವುದೇ ಒಂದು ಎಕರೆ ಅರಣ್ಯ ಪ್ರದೇಶವೂ ಇಲ್ಲ. ಈ ವನ್ಯಜೀವಿ ಸಂರಕ್ಷಣಾ ಕಾಯಿದೆ ಅಡಿಯಲ್ಲ ಬರತಕ್ಕಂತಹ ಈ ಪ್ರಾಣಿ ಅಲ್ಲಿ ಇರಬೇಕೆಂದು ಹೇಳುವುದಾದರೆ, ಅಲ್ಲ ಅರಣ್ಯವಾದರೂ ಇರಬೇಕು. ಅಲ್ಲ ಅರಣ್ಯವಿಲ್ಲದೇ ರೈತಾಪಿ ವರ್ಗದವರು ಇರುವ ಪ್ರದೇಶದಲ್ಲಿ ಈ ವನ್ಯಜೀವಿಯನ್ನು ಅಲ್ಲೇ ಇರಲು ಬಿಡುತ್ತೇವೆಂದು ಹೇಳಿದರೆ ಆ ಭಾಗದ ರೈತ ಬದುಕುವುದಾದರೂ ಹೇಗೆ? ಅದು ಅಲ್ಲಿ ಬಾಳಿ ಬದುಕಿ ಬಂದಿರತಕ್ಕಂತದ್ದು ಅಲ್ಲ. ಅದು ಬೇರೆ ಕಡೆಯಿಂದ ವಲಸೆ ಬಂದಿದೆ.

**ಶ್ರೀ ಬಿ. ರಮಾನಾಥ ರೈ:–** ಇರಬಹುದು ಪ್ರಾಕೃತಿಕವಾದಂತಹ ಈ ವನ್ಯ ಪ್ರಾಣಿಗಳು ಬೇರೆ ಕಡೆಗಳಿಂದ ವಲಸೆ. ಬಂದಿರಬಹುದು. ಆದರೆ ಅದನ್ನು ನಾವು ತಡೆಗಟ್ಟುವುದಕ್ಕೆ ಆಗುತ್ತದೆಯೇ? ಈ ವನ್ಯಜೀವಿ ಸಂರಕ್ಷಣಾ ಕಾಯಿದೆ ಅಡಿಯಲ್ಲಿ ವನ್ಯಜೀವಿ ಸಂರಕ್ಷಣೆಯನ್ನು ಮಾಡತಕ್ಕಂಥಾದ್ದು ನಮ್ಮ ಹೊಣೆಗಾರಿಕೆಯಾಗಿದೆ. ಆದರೆ ಅವುಗಳನ್ನು ಸಾಯಿಸುವುದಕ್ಕಾಗುತ್ತದೆಯೇ? ಅದಕ್ಕೆ ಅವಕಾಶವಿಲ್ಲ. ತಾವೇ ಹೇಳಿ. ಇದಕ್ಕೆ ಏನು ಮಾಡಬೇಕು ಎಂಬುದರ ಬಗ್ಗೆ ತಾವೇ ಒಂದು ನಿರ್ಧಾರಾತ್ಮಕವಾದಂತಹ ನಿರ್ದಿಷ್ಟವಾದಂತಹ ಸಲಹೆ ಯನ್ನು ನೀಡಿದರೆ ಅದನ್ನು ಪರಿಗಣಿಸಲು ನಾನು ಸಿದ್ಧನಿದ್ದೇನೆ.

**ಶ್ರೀ ಆಚಾರ್ ಹಾಲಪ್ಪ ಬಸಪ್ಪ:–** ನಿಮ್ಮ ಕಳಕಳಿ ನನಗೆ ಅರ್ಥವಾಗು ತ್ತದೆ. ತಾವು ಆ ಇಲಾಖೆಯ ಮಂತ್ರಿಗಳಾಗಿರುವುದರಿಂದ ಈ ವನ್ಯಜೀವಿ ಸಂರಕ್ಷಣಾ ಕಾಯಿದೆ ಅಡಿಯಲ್ಲಿ ಆ ಪ್ರಾಣಿಗಳನ್ನು ಸಂರಕ್ಷಣೆ ಮಾಡತ ಕ್ಕಂಥಾದ್ದು ನಿಮ್ಮ ಜವಾಬ್ದಾರಿಯಾಗಿದೆ. ನೀವು ಮಾಡಿಕೊಳ್ಳಿ. ಇದರಲ್ಲಿ ಯಾರದೂ ಭಿನ್ನಾಭಿಪ್ರಾಯವಿಲ್ಲ. ಆದರೆ ಆ ಭಾಗದಲ್ಲಿನ ರೈತರು ಪ್ರತಿ ವರ್ಷ ಬಿತ್ತಿದಂತಹ ಪೀಕು ಬರುತ್ತಿಲ್ಲ. ನಿಮಗೆ ಜಿಂಕೆಗಳೇ ಮುಖ್ಯವಾಗುವುದಾದರೆ. ಆ ಭಾಗದ ರೈತರ ಬದುಕಿನ ಪರಿಸ್ಥಿತಿ ಏನು ?

**ಉಪ ಸಭಾಪತಿಯವರು:–** ಮಾನ್ಯ ಹಾಲಪ್ಪನವರೆ ತಾವು ಹೇಳಿ ದಂತಹ ವಿಚಾರಗಳು ಮಾನ್ಯ ಸಚಿವರಿಗೆ ಅರ್ಥವಾಗಿದೆ.

**ಶ್ರೀ ಬಿ. ರಮಾನಾಥ ರೈ:–** ಕಳೆದ ಓಂದಿನ ವರ್ಷದಲ್ಲಿ ಇಷ್ಟು ಹಣವನ್ನು ಕೊಟ್ಟಿದ್ದಾರೆಂದು ನಾನು ಇಲ್ಲಿ ನೀಡಿರುವ ಉತ್ತರದಲ್ಲಿ ಹೇಳಿದ್ದೇನೆ.

**ಶ್ರೀ ಆಚಾರ್ ಹಾಲಪ್ಪ ಬಸಪ್ಪ–** ಎಲ್ಲೆಲ್ಲಿ ಅರಣ್ಯ ಪ್ರದೇಶ ಇದೆ ಅಲ್ಲಿಗೆ. ಆ ಜಿಂಕೆಗಳನ್ನು ಹಸ್ತಾಂತರ ಮಾಡಿ ಅರಣ್ಯ ಇಲ್ಲದಿರುವ ಆ ಬಯಲು ಸೀಮೆಯಲ್ಲಿ ಈ ಜಿಂಕೆಗಳು ರೈತರ ಬೆಳೆಗಳನ್ನು ನಾಶ ಮಾಡುತ್ತಿವೆ.

**ಶ್ರೀ ಮತ್ತಿಕಟ್ಟಿ ವೀರಣ್ಣ :** ಗದಗ, ಮುಂಡರಗಿ, ಕುಷ್ಟಗಿ ಈ ಭಾಗಗಳಲ್ಲೂ ಕೂಡ ಈ ಜಿಂಕೆಗಳು ಇವೆ. ಇಲ್ಲೂ ಕೂಡ ರೈತರ ಬೆಳೆಗಳನ್ನು ಹಾನಿ ಮಾಡುತ್ತಿರುವುದು ಕಂಡು ಬರುತ್ತಿದೆ. ಈ ಕುರಿತು ಹಲವಾರು ಸಲ ಈ ಸದನದಲ್ಲಿ ಚರ್ಜೆ ಆಗಿದೆ. ಆ ರೈತರಿಗೆ ಪರಿಹಾರವನ್ನು ಕೊಡಬೇಕು. ಮತ್ತು ಈ ಜಿಂಕೆಗಳನ್ನು ಬೇರೆ ಕಡೆಗೆ ಕಳುಹಿಸುವ ವ್ಯವಸ್ಥೆಯನ್ನು ಮಾಡಬೇಕು.

**ಉಪ ಸಭಾಪತಿಯವರು:–** ಆ ಭಾಗದ ಎಲ್ಲಾ ಸದಸ್ಯರೂ ಮಾನ್ಯ ಸಚಿವರನ್ನು ಭೇಟಿ ಮಾಡಿ ಮಾತನಾಡಿ.

**ಶ್ರೀ. ಬಿ. ರಮಾನಾಥ ರೈ:–** ಆ ಜಿಂಕೆಗಳನ್ನು ಮಲೆನಾಡಿಗೆ ತೆಗೆದು ಕೊಂಡು ಹೋಗುವುದಕ್ಕಾಗುವುದಿಲ್ಲ. ಅಲ್ಲಿ ಕಾಡು ಹಂದಿಗಳು ಇವೆ. ಮಂಗ ಗಳು ಹಚ್ಚಾಗಿ ಇವೆ. ಅದನ್ನು ತೆಗೆದುಕೊಂಡು ಹೋಗಿ ಕೊಪ್ಪಳಕ್ಕೆ ಬಿಡುವುದ ಕ್ಕಾಗುತ್ತದೆಯೇ? ಇದೆಲ್ಲವೂ ಪ್ರಾಕೃತಿಕವಾದಂತಹ ವಿಚಾರವಾಗಿದೆ. ನೀವು ಪ್ರಶ್ನೆಯನ್ನು ಕೇಳುವಾಗ ಉತ್ತರ ಹೇಳುವ ರೀತಿಯಲ್ಲಿ ಕೇಳಿದರೆ ಉತ್ತರ ಕೊಡುವುದಕ್ಕೆ ಸಾಧ್ಯವಾಗುತ್ತದೆ. ಈ ರೀತಿ ಕೇಳಿದರೆ ನಾನು ಅದಕ್ಕೆ ಏನು ಉತ್ತರವನ್ನು ಕೂಡಲಿ.

**ಉಪ ಸಭಾಪತಿಯವರು:–** ಮಾನ್ಯ ಮೋನಪ್ಪ ಭಂಡಾರಿಯವರೆ ಮಾನ್ಯ ಸಚಿವರು ತಮ್ಮ ಪ್ರಶ್ನೆಗೆ ಕಾಲಾವಕಾಶವನ್ನು ಕೇಳಿದ್ದಾರೆ.

**ಶ್ರೀ ಇ. ಕೃಷ್ಣಪ್ಪ–** ಇಲ್ಲಿ ಹೊಸದಾಗಿ ಮಂತ್ರಿಗಳಾಗಿ ಬಂದಿದ್ದಾರೆ. ಅವರು . . . .

**ಶ್ರೀ. ಬಿ. ರಮಾನಾಥ ರೈ:–** ಹೊಸದಾಗಿ ಮಂತ್ರಿಗಳಾಗಿರುವವರು ಅದ್ಭುತವನ್ನು ಮಾಡುವುದಕ್ಕಾಗುವುದಿಲ್ಲ. ಇಲ್ಲಿ ಅದ್ಭುತ ದೀಪ ಏನೂ ಇಲ್ಲ. ನಾನು ಪರಿಶೀಲನೆ ಮಾಡುತ್ತೇನೆ ಎಂದು ಹೇಳಿದ್ದೇನೆ.

(ಗೊಂದಲ)

**ಉಪ ಸಭಾಪತಿಯವರು:–** ಮಾನ್ಯ ಕೃಷ್ಣಪ್ಪನವರೇ ತಾವು ಎಲ್ಲಕ್ಕೂ ಎದ್ದು ನಿಲ್ಲುವುದು ಸರಿಯಲ್ಲ. ತಾವು ಕುಳಿತುಕೊಳ್ಳಿ. ಮಾನ್ಯ ಮಂತ್ರಿಗಳೇ ತಾವೂ ಕುಳಿತುಕೂಳ್ಳಿ

**ಶ್ರೀ ಅರುಣ್ ಶಹಾಪುರ್:–** ಇಲ್ಲಿಯವರೆಗೆ ಆ ರೈತರಿಗೆ ಪರಿಹಾರ ವನ್ನು ಕೊಟ್ಟಿಲ್ಲವೆಂದು ಮಾನ್ಯ ಸದಸ್ಯರು ಹೇಳುತ್ತಿದ್ದಾರೆ.

**ಉಪ ಸಭಾಪತಿಯವರು:–** ಮುಂದಿನ ಪ್ರಶ್ನೆಗೆ ಕಾಲಾವಕಾಶವಿಲ್ಲ.

**ಶ್ರೀ ಬಿ. ರಮಾನಾಥ್ ರೈ:–** ಈ ಬೆಳೆ ನಾಶವಾಗಿರುವುದಕ್ಕೆ ಏನು ಪರಿ ಹಾರವನ್ನು ಕೊಡುವುದಕ್ಕೆ ಅವಕಾಶ ಇದೆ ಅದನ್ನು ಹೇಳಬಹುದು. ಅದ ಕ್ಕಿಂತ ಹೊರತಾಗಿ ನಾವು ಏನು ಹೇಳುವುದಕ್ಕಾಗುತ್ತದೆ. ತಾವೆಲ್ಲರೂ ತಿಳಿದು ಕೊಂಡವರಿದ್ದೀರಿ. ಇದಕ್ಕೆ ಏನು ಉತ್ತರ ಕೊಡಬಹುದೋ ಅದನ್ನು ನೀಡಿದ್ದೇನೆ.

**ಶ್ರೀ ಯಂ.ಸಿ. ನಾಣಯ್ಯ:–** ಮಾನ್ಯ ಸಭಾಪತಿಯವರೆ, ಈ ಜಿಂಕೆಗಳು ಆ ಭಾಗದಲ್ಲಿ ಹಾವಳಿ ಮಾಡುತ್ತಿರುವುದರ ಬಗ್ಗೆ ಮಾನ್ಯ ಹಾಲಪ್ಪ ಬಸಪ್ಪ ಅವರು ಪ್ರಸ್ತಾಪ ಮಾಡಿದ್ದಾರೆ. The Spotted deer, Sambar, they are al lvery mild animals ಅವರು ಹೇಳುತ್ತಿರುವುದು ಸತ್ಯ ಇದೆ. ಏಕೆಂದರೆ. ಆ ಭಾಗದಲ್ಲಿ ಯಾವುದೇ ಅರಣ್ಯ ಪ್ರದೇಶ ಇಲ್ಲ. ಇವುಗಳು ಬಯಲು ಸೀಮೆ ಯಲ್ಲಿ ಇರುವಂತಹ ಪ್ರಾಣಿಗಳಾಗಿವೆ ಮತ್ತು ಆ ಭಾಗದಲ್ಲಿ ಸುಮಾರು 10,000 ಜಿಂಕೆಗಳು ಇವೆ ಎಂದು ಮಾನ್ಯ ಸದಸ್ಯರು ಹೇಳುತ್ತಿದ್ದಾರೆ. ಇವು ಗಳನ್ನು ಬೇರೆಡೆಗೆ ಸ್ಥಳಾಂತರ ಮಾಡುವ ಬಗ್ಗೆ ಮತ್ತು ಈ ಸಮಸ್ಯ ಬಗ್ಗೆ ತಾವು ತಮ್ಮ ಅಧಿಕಾರಿಗಳ ಜೊತೆಯಲ್ಲಿ ಚರ್ಚೆ ಮಾಡಿ. This is a matter

worth discussing because unlike other animals, they are not aggressive animals. They are not aggressive animals at all ಹಿಂದೆ. ಇದರ ಬಗ್ಗೆ ಚರ್ಚೆಗೆ ಬಂದಂತಹ ಸಂದರ್ಭದಲ್ಲಿ ಅಂದರೆ, ಕಳೆದ 2 ವರ್ಷಗಳ ಹಿಂದೆ ಇದಕ್ಕೆ ಆಯವ್ಯಯದಲ್ಲಿ ಒಂದು ಪರಿಹಾರವನ್ನು ಹುಡುಕುವುದಕ್ಕೆ ಯೋಚನೆ ಮಾಡಿದರು. ಜಿಂಕೆ ವನ The area should be large enough for a Deer Park ಆ ಭಾಗದಲ್ಲಿ ಎಲ್ಲಿಯಾದರೂ 50 ರಿಂದ 100–150 ಎಕರೆ ಸರ್ಕಾರಿ ಭೂಮಿ ಸಿಕ್ಕಿದರೆ. ಅದಕ್ಕೆ ಅಗತ್ಯವಾದ ಹಣವನ್ನು ಒದಗಿಸಿ ಅಲ್ಲ ಒಂದು ಜಿಂಕೆವನ ಎಂದು ಮಾಡಿ. ಅದಕ್ಕೆ ಅಗತ್ಯವಾದ ಹಣವನ್ನು ಒದಗಿಸಿ. ಬೇಕಾದಷ್ಟು ಕಡೆಗಳಲ್ಲಿ ಈ ಜಿಂಕೆ ವನಗಳು ಇವೆ. ಅದನ್ನು ನೋಡುವುದಕ್ಕೆ ಪ್ರವಾಸಿಗರು ಬರುತ್ತಾರೆ. ಹಿಂದೆ ಆಯವ್ಯಯದಲ್ಲಿ ಈ ಜಿಂಕೆವನವನ್ನು ಮಾಡಬೇಕೆಂದು ಘೋಷಣೆ ಮಾಡಿದ್ದಾರೆ. ಇಂಥಾದ್ದರ ಬಗ್ಗೆ ಈ ಸರ್ಕಾರ ಗಮನಹರಿಸಬೇಕು. ಈ animals ಯಾವುದು ಇದೆ ಅವುಗಳನ್ನು ಒಳಗೊಂಡಂತೆ ಈ ಜಿಂಕೆವನವನ್ನು ಮಾಡಿ. ಇದನ್ನು ಮಾಡುವುದಕ್ಕೆ ಒಂದು Fence ಹಾಕಿ ಅವುಗಳಿಗೆ ಆಹಾರ ಮತ್ತು ನೀರಿನ ಅನುಕೂಲವನ್ನು ಮಾಡಿಕೂಡಿ. ಅವುಗಳು ಉಪ್ಪನ್ನು ಹೆಚ್ಚಾಗಿ ತಿನ್ನುತ್ತವೆ.

**ಶ್ರೀ ಗೋ ಮಧುಸೂದನ್:–** ಅದರ ಬದಲಿಗೆ ಆ ಜಿಂಕೆಗಳನ್ನು ತೆಗೆದುಕೊಂಡು ಬಂದು ನಮ್ಮ ನಾಗರಹೊಳೆ ಬಂಡೀಪುರದ ಅರಣ್ಯ ಪ್ರದೇಶಕ್ಕಾದರೂ ಬಿಡಿ. ಅಲ್ಲಿ ಆಹಾರ ಸಿಗುತ್ತಿಲ್ಲವೆಂದು ಬೇರೆ ಪ್ರಾಣಿಗಳು ಅರಣ್ಯ ಬಿಟ್ಟು ಹೊರ ಭಾಗಗಳಿಗೆ ಬರುತ್ತಿವೆ.

**ಶ್ರೀ ಮತ್ತಿಕಟ್ಟಿ ವೀರಣ್ಣ :–** ಆ ಜಿಂಕೆಗಳನ್ನು ಅಲ್ಲಿ ಬಿಟ್ಟರೆ ನೀವು ಎಲ್ಲಿ ಅಲ್ಲಿಗೆ ಹೋಗುತ್ತೀರೋ ಎಂಬ ಹೆದರಿಕೆ ನಮಗೆ ಇದೆ.

**ಶ್ರೀ ಯಂ.ಸಿ. ನಾಣಯ್ಯ:–** ಎರಡು ವಿಚಾರವನ್ನು ಇಲ್ಲಿ ಮಾಡಲಿ. One is whether translocation of these animals is possible let the department look into it. ಅದಲ್ಲೆ ಬೇಕಾದ ತಜ್ಞರಿದ್ದಾರೆ Let them look whether translocation of these deers from that area to a forest area is

possible ಅದು ಆಗುವುದಕ್ಕೆ ಸಾಧ್ಯವಿಲ್ಲವೆಂದಾದರೆ ಆ ಭಾಗದಲ್ಲಿ ಜಿಂಕೆವನವನ್ನು ಮಾಡಿದರೆ I think this can be controlled.

**ಉಪ ಸಭಾಪತಿಯವರು:–** ಈ ವಿಷಯ ಇಲ್ಲಿಗೆ ಮುಗಿದಿದೆ ಸಾಕು.

**ಶ್ರೀ ಬಿ. ರಮಾನಾಥ ರೈ:–** ಮಾನ್ಯ ಸಭಾಪತಿಯವರೆ, ಹಿರಿಯ ಸದಸ್ಯ ರಾಗಿರತಕ್ಕಂತಹ ಶ್ರೀ ಯಂ.ಸಿ.ನಾಣಯ್ಯನವರು ಒಂದು ಒಳ್ಳೆಯ ಸಲಹೆ ಯನ್ನು ಮಾಡಿದ್ದಾರೆ. ಇದೊಂದು ಸೂಕ್ಷ್ಮವಾದಂತಹ ಪ್ರಾಣಿ. ಈ ಸೂಕ್ಷ್ಮವಾ ದಂತಹ ಪ್ರಾಣಿಯನ್ನು ಸ್ಥಳಾಂತರ ಮಾಡಿದಾಗ ಅದು ಸಾವನ್ನು ಅಪ್ಪುವಂತಹ ಸಮಸ್ಯೆ ಕೂಡ ಇದೆ. ಆದರೂ ಕೂಡ ಮಾನ್ಯ ಸದಸ್ಯರು ಏನು ಸಲಹೆ ಮಾಡಿ ದ್ದಾರೆ. ಅದನ್ನು ಗಮನದಲ್ಲಟ್ಟು ಪ್ರಾಣಿ ಸಂಕುಲಕ್ಕೆ ತೊಂದರೆ ಯಾಗದಂತೆ ಏನಾದರು ಮಾಡಬೇಕಾಗಿದೆ. ಅದನ್ನು ನಾವು ಮಾಡುವುದಕ್ಕೆ ಪ್ರಯತ್ನ ಮಾಡುತ್ತೇವೆ.

**ಶ್ರೀ ಹಾಲಪ್ಪ ಬಸವಪ್ಪ ಆಚಾರ್:–** ಮಾನ್ನ ಸಭಾಪತಿಯವರೆ, ಅಲ್ಲಿ ಸರ್ಕಾರದ ವತಿಯಿಂದ ಜಿಂಕೆ ವನವನ್ನು ಮಾಡಲಿ.

**ಶ್ರೀ ಬಿ. ರಮಾನಾಥ ರೈ:–** ಮಾನ್ಯ ಸಭಾಪತಿಯವರೆ, ಒಂದು ಕಾಲದಲ್ಲಿ ನವಿಲುಗಳೇ ಇರಲಿಲ್ಲ. ಈಗ ಇಡೀ ಕಾಡಿನಲ್ಲಿ ನವಿಲುಗಳಿವೆ. ನಮ್ಮ ಕಡೆಯಲ್ಲಿ ಕಾಡು ಹಂದಿಗಳ ಸಮಸ್ಯೆ ಇದೆ. ಈ ರೀತಿಯಾಗಿ ಸಮಸ್ಯೆಗಳಿ ರುತ್ತದೆ. ಈಗ ಏನು ಸದಸ್ಯರುಗಳು ಸಲಹೆಯನ್ನು ಮಾಡಿದ್ದಾರೆ ಅದು ಬಹಳ ಸೂಕ್ಷ್ಮವಾದಂತಹ ಪ್ರಾಣಿಯಾಗಿರುವುದರಿಂದ ಅದನ್ನು ಸ್ಥಳಾಂತರ ಮಾಡು ವುದು ಸುಲಭವಲ್ಲ. ಅಲ್ಲಿ 10,000ಕ್ಕೂ ಹೆಚ್ಚು ಜಿಂಕೆಗಳಿವೆ, ಅದನ್ನು ಸ್ಥಳಾಂತರ ಮಾಡುವುದು ಕಷ್ಟ ಇದೆ.

**ಉಪ ಸಭಾಪತಿಯವರು:–** ಶ್ರೀ ಮೋನಪ್ಪ ಭಂಡಾರಿಯವರೆ ನಿಮ್ಮ ಪಶ್ನೆಗೆ ಕಾಲವಕಾಶವನ್ನು ಕೇಳಿದ್ದಾರೆ. ಈಗ ತಡೆ ಹಿಡಿಯಲಾದ ಪ್ರಶ್ನೆಗಳು

**ಕೆ. ಆರ್. ಎಸ್ ಆಣೆಕಟ್ಟು ಬಳಿ ತೆರಳುವ ವಾಹನಗಳ ಟೋಲ್ ಸಂಗ್ರಹಣೆ ಬಗ್ಗೆ**

**389; ಶ್ರೀ ಗೋ. ಮಧುಸೂದನ (ಪದವೀಧರರ ಕ್ಷೇತ್ರ)**

ಅ) ಮಂಡ್ಯಜಿಲ್ಲೆ ಶ್ರೀರಂಗಪಟ್ಟಣ ತಾಲ್ಲೂಕಿನ ಪ್ರಸಿದ್ಧ ಕೃಷ್ಣರಾಜ ಸಾಗರ ಆಣೆಕಟ್ಟಿನ ಹತ್ತಿರ ನಿರ್ಮಿಸಲಾಗಿರುವ ಹಳೇ ಕನ್ನಂಬಾಡಿ ಗ್ರಾಮಕ್ಕೆ ಹೋಗುವ ಸೇತುವೆಯನ್ನು ಎಂದು ನಿರ್ಮಿಸಲಾಯಿತು. ಇದಕ್ಕೆ ತಗುಲಿದ ಖರ್ಚು ಎಷ್ಟು

ಆ) ಸೇತುವೆಯನ್ನು ಉಪಯೋಗಿಸುವ ದ್ವಿಚಕ್ರ, ತ್ರಿಚಕ್ರ ಮತ್ತು ನಾಲ್ಕು ಚಕ್ರ ಹಾಗೂ ಬಾರಿ ವಾಹನಗಳಿಗೆ ಎಷ್ಟು ಶುಲ್ಕ ವಿಧಿಸಲಾಗುತ್ತಿದೆ (ಟೋಲ್ ನಿಗದಿಯಾದ ದಿನದಿಂದ ಇಲ್ಲಿಯವರೆಗೆ ಟೋಲ್ ಹರಾಜಿನ ಪ್ರತಿ ವರ್ಷದ ಮೊತ್ತದ ವಿವರ ನೀಡುವುದು.

ಇ) ಈ ಟೋಲ್ ಸಂಗ್ರಹವನ್ನು ಇನ್ನು ಎಷ್ಟು ವರ್ಷ ಮುಂದುವರೆಸಲು ಸರ್ಕಾರ ಯೋಚಿಸಿದೆ?

**ಉತ್ತರಿಸುವವರು : ಶ್ರೀ ಎಂ.ಬಿ.ಪಾಟೀಲ್ ( ಜಲಸಂಪನ್ಮೂಲ ಸಚಿವರು)**

ಅ) ಕೃಷ್ಣರಾಜ ಸಾಗರ ಆಣೆಕಟ್ಟೆ ಹತ್ತಿರ ಹಳೇ ಕನ್ನಂಬಾಡಿ ಗ್ರಾಮಕ್ಕೆ ಹೋಗುವ ಸೇತುವೆಯ ಕಾಮಗಾರಿಯನ್ನು 2002 ರಲ್ಲಿ ನಿರ್ಮಿಸಿ ಪೂರ್ಣಗೊಳಿಸಲಾಯಿತು. ಸೇತುವೆ ನಿರ್ಮಾಣಕ್ಕೆ ತಗುಲಿದ ವೆಚ್ಚ ಒಟ್ಟು ₹ 1148.15 ಲಕ್ಷಗಳು.

ಆ) ಸೇತುವೆಯನ್ನು ಉಪಯೋಗಿಸುವ ದ್ವಿಚಕ್ರ, ತ್ರಿಚಕ್ರ, ನಾಲ್ಕು ಚಕ್ರ ಹಾಗೂ ಭಾರಿ ವಾಹನಗಳಿಗೆ ವಿಧಿಸಲಾಗುತ್ತಿರುವ ಶುಲ್ಕ ಕೆಳಕಂಡಂತೆ ಇರುತ್ತದೆ.

| **ವಾಹನಗಳ ವರ್ಗೀಕರಣ** | **ವಾಹನವು ಹೋಗಲು** | **ವಾಹನವು ಹೋಗಿ ಬರಲು** |
|---|---|---|
| ತ್ರಿಚಕ್ರ ಹಾಗೂ ಹತ್ತು ಆಸನಗಳ ಒಳ ಪಟ್ಟ ಪ್ರಯಾಣಿಕರ ವಾಹನಗಳಿಗೆ | 10.00 | 15.00 |

| | | |
|---|---|---|
| ನಾಲ್ಕು ಚಕ್ರ ಹಾಗೂ ಹತ್ತರಿಂದ ಇಪ್ಪತ್ತರವರೆಗೆ ಆಸನಗಳ ಒಳಪಟ್ಟ ಪ್ರಯಾಣಿಕರ ವಾಹನಗಳಿಗೆ | 20.00 | 30.00 |
| ಬಸ್, ಲಾರಿ ಮತ್ತು ಭಾರಿ ವಾಹನ ಗಳಿಗೆ | 50.00 | 75.000 |
| ಸ್ಥಳೀಯ ವಾಹನಗಳಿಗೆ (ದ್ವಿಚಕ್ರ ಹೊರತುಪಡಿಸಿ) | 30.00 ದಿನವೊಂದಕ್ಕೆ | |

**ಟೋಲ್ ನಿಗದಿಯಾದ ದಿನಾಂಕದಿಂದ ಇಲ್ಲಿಯವರೆಗಿನ ಪ್ರತಿವರ್ಷದ ಟೋಲ್ ಸಂಗ್ರಹಣಾ ವಿವರ ಈ ಕೆಳಕಂಡಂತಿವೆ.**

| **ವರ್ಷ** | **ಟೆಂಡರ್/ ಇಲಾಖೆ** | **ಟೋಲ್ ಶುಲ್ಕ** |
|---|---|---|
| 2005–06 | ಇಲಾಖೆ ವತಿಯಿಂದ | 52.47 |
| 2006–07 | ಇಲಾಖೆ ವತಿಯಿಂದ | 47.50 |
| 2007–08 | ಕೆ.ಪಿ.ಐ.ಸಿ. ಲಿಮೆಟೆಡ್ ಬೆಂಗಳೂರು ಗುತ್ತಿಗೆದಾರರು | 56.10 |
| 2008–09 | ಕೆ. ಎಸ್. ಟಿ.ಡಿ.ಸಿ. (ಪ್ರವಾಸೋದ್ಯಮ ಇಲಾಖೆ) ಬೆಂಗಳೂರು | 62.16 |
| 2009–10 | ಟಿ. ಎನ್. ಪರಮೇಶ, ಗುತ್ತಿಗೆದಾರರು | 67.97 |

ಇ) ಈ ಸೇತುವೆ ನಿರ್ಮಾಣಕ್ಕೆ ₹1148.15 ಲಕ್ಷ ವೆಚ್ಚವಾಗಿರುತ್ತದೆ. ಈವರೆಗೆ ₹521.65 ಲಕ್ಷ ಟೋಲ್ ಸಂಗ್ರಹವಾಗಿದ್ದು, ಈ ಸೇತುವೆ ನಿರ್ಮಾಣಕ್ಕೆ ವೆಚ್ಚವಾಗಿರುವ ಇನ್ನು ಉಳಿಕೆ ಮೊತ್ತ ಸಂಗ್ರಹವಾಗು ವವರೆಗೆ ಈ ಟೋಲ್ ಸಂಗ್ರಹವನ್ನು ಮುಂದುವರೆಸಲಾಗುವುದು.

**ಶ್ರೀ ಗೋ. ಮಧುಸೂಧನ್:–** ಮಾನ್ಯ ಸಭಾಪತಿಯವರೆ, ಇಲ್ಲಿ ಅತ್ಯಂತ ಪ್ರಸಿದ್ದವಾದಂತಹ ಪ್ರವಾಸಿತಾಣವಾಗಿರುವಂತಹ ನಮ್ಮ ಮೈಸೂರಿನ

ಬೃಂದಾವನ್ ಗಾರ್ಡನ್ ಏನಿದೆ ಅದಕ್ಕೆ ಹೋಗುವುದಕ್ಕೆ ಬೇಕಾಗಿರುವಂತಹ ಸೇತುವಯನ್ನು ಕಟ್ಟಲಾಗಿದೆ. ಆ ಸೇತುವೆ ಮೇಲೆ ಕಳೆದ 2005–06 ನೇ ಸಾಲಿನಿಂದ ಟೋಲ್ ಸಂಗ್ರಹ ಈಗಲೂ ಕೂಡ ನಡೆಯುತ್ತಿದೆ. ಅಲ್ಲ ಅತ್ಯಂತ ದೊಡ ಪ್ರಮಾಣದಲ್ಲಿ ಎಲ್ಲಾ ವಾಹನಗಳು ಬರುತ್ತಿದೆ. ಆದರೆ ಅಲ್ಲಿ ಎಷ್ಟು ಟೋಲ್ ಸಂಗ್ರಹವಾಗಿದೆಂದು ಕೇಳಿರುವುದಕ್ಕೆ ಸರ್ಕಾರದಿಂದ ಕೊಟ್ಟಿರುವಂತಹ ಉತ್ತರದಲ್ಲಿ ಬಹಳ ಕಡಿಮೆ ಹಣವನ್ನು ತೋರಿಸುತ್ತಿದ್ದಾರೆ. ಆದರೆ. ಕಳೆದ 2009–10ನೇ ಇಸವಿಯಲ್ಲಿ 67 ಲಕ್ಷ ರೂಪಾಯಿಗಳಿಗ ಈ ಟೋಲ್ ಹಣವನ್ನು ಕಲೆಕ್ಟ್ ಮಾಡುವುದಕ್ಕೆ ಗುತ್ತಿಗೆಯನ್ನು ನೀಡಲಾಗಿತ್ತು ಆದಾದ ನಂತರದಲ್ಲಿ 2010–11, 2011–12 ಮತ್ತು 2012–13ನೇ 2013–14ನೇ ಸಾಲನಲ್ಲಿ ಈ ಎಲ್ಲಾ ಸಮಯದಲ್ಲಿಯೂ ಕೂಡ ಅತ್ಯಂತ ಕಡಿಮ ಹಣ ಇಲಾಖೆಯವರಿಂದ ಸಂಗ್ರಹವಾಗುತ್ತಿದೆ. ಏಕೆ. ಇಷ್ಟು ಕಡಿಮೆ ಹಣ ಸಂಗ್ರಹ ವಾಗುತ್ತಿದೆ ಎಂದರೆ ಆ ಭಾಗದಲ್ಲಿ ಪ್ರಭಾವಿ ರಾಜಕಾರಣಿಯೊಬ್ಬರು ಪ್ಯಾರ ಲಲ್ ಟೋಲ್ ಸಂಗ್ರಹ ಮಾಡುತ್ತಿದ್ದಾರೆ. ಅವರು ತಮ್ಮದೇ ಆದಂತಹ ಟೋಲ್ ರಶೀದಿಗಳನ್ನು ಪ್ರಿಂಟ್ ಮಾಡಿಸಿ ಆ ಟೋಲ್‌ಗಿಂತಲೂ ಮುಂಚಿತ ವಾಗಿಯೇ ಇವರು ರಶೀದಿಗಳನ್ನು ಕೊಟ್ಟು ಇಲ್ಲಿಂದ ಒಂದು ಚೀಟಿಯನ್ನು ಕೊಟ್ಟರೆ ಸಾಕು ಅಲ್ಲಿ ಗೇಟ್  ಓಪನ್ ಅಗುತ್ತದೆ ಅಲ್ಲಿ ಇವರನ್ನು ಕೇಳುವ ವರೇ ಇಲ್ಲ. ಹಾಗಾಗಿ ಪ್ಲಾರಲಲ್ ಟೋಲ್ ಸಂಗ್ರಹ ನಡೆಯುತ್ತಿದೆ. ಸರ್ಕಾರ ಇದೀ ರೀತಿಯಾಗಿ ಬಿಟ್ಟುಕೊಂಡು ಹೋದರೆ ಇನ್ನು ಐದು ವರ್ಷವಾಗಲಿ. ಹತ್ತು ವರ್ಷಗಳಾಗಲಿ ಸರ್ಕಾರ ಹಾಕಿರುವಂತಹ ಬಂಡವಾಳ ಅಲ್ಲ ವಾಪಸು ಬರುವುದಕ್ಕೆ ಸಾಧ್ಯವೇ ಇಲ್ಲ. ಅಲ್ಲಿ ಆ ರಾಜಕಾರಣ ತನ್ನ ತಿಜೋರಿಯನ್ನು ತುಂಬಿಕೊಳ್ಳುವಂತಹ ಕೆಲಸವನ್ನು, ಪ್ರತಿನಿತ್ಯ ಮಾಡುತ್ತಿರುತ್ತಾರೆ. ಈ ಕಾರಣ ಕ್ಕೋಸ್ಕರವಾಗಿ ಅಲ್ಲ ಟೋಲ್ ಹಣ ಕಡಿಮೆ ಸಂಗ್ರಹವಾಗುತ್ತಿದೆ ಎನ್ನುವುದರ ಬಗ್ಗ ಕೂಲಂಕುಷವಾದ ತನಿಖೆಯನ್ನು ಮಾಡಬೇಕು. ಅಲ್ಲಿ ಸರಿಯಾಗಿ ಟೋಲ್ ಸಂಗ್ರಹವಾಗಬೇಕು ಮತ್ತು ಅಲ್ಲಿ ಯಾರು ಈ ರೀತಿ ಡ್ಯೂಪ್ಲಿಕೇಟ್ ಟೋಲ್‌ನ್ನು ಇದ್ದುಕೊಂಡು ಹಣ ಸಂಗ್ರಹ ಮಾಡುತ್ತಿದ್ದಾರೆ. ಅವರ ಮೇಲೆ ಕ್ರಿಮಿನಲ್ ಮೊಕದ್ದಮೆಯನ್ನು ಹೂಡಬೇಕು ಅಥವಾ ಅವರು ಇಲ್ಲಿವರೆಗೆ

ಏನು ಹಣವನ್ನು ವಸೂಲು ಮಾಡಿದ್ದಾರೆ ಅದನ್ನು ಅವರ ಕಡೆಯಿದ ವಾಪಸ್ಸು ತೆಗೆದುಕೊಳ್ಳುವಂತಹ ಪ್ರಯತ್ನವನ್ನು ಮಾಡಬೇಕು. ಇದರ ಬಗ್ಗೆ ಕೂಡಲೆ ತನಿಖೆಯಾಗಬೇಕು. ಇದು ಅತ್ಯಂತ ದೊಡ್ಡದಾದಂತಹ ಹಗರಣ. ಪ್ರತಿವರ್ಷ ಸಹಂ ಕೋಟ್ಯಾಂತರ ರೂಪಾಯಿಗಳನ್ನು ನಮ್ಮ ಸರ್ಕಾರಕ್ಕೆ ಟೋಲ್‌ನಲ್ಲಿ ಸೋರಿಕೆಯಾಗುತ್ತಿರುವುದನ್ನು ಗಮನಿಸಿದ್ದೀರಿ. ಇದರ ಬಗ್ಗೆ ತನಿಖೆ ಮಾಡಬೇಕೆಂದು ತಮ್ಮ ಮುಖಾಂತರ ಸರ್ಕಾರವನ್ನು ಕೇಳಿಕೊಳ್ಳುತ್ತಿದ್ದೇನೆ.

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್:–** ಮಾನ್ಯ ಸಭಾಪತಿಯವರೆ, ರಾಜ್ಯದ ಇನ್ನು ಕಡೆಗಳಲ್ಲಿ ಈ ಸಮಸ್ಯೆ ಇದ. ಸ್ಥಳೀಯರಿಗೆ ಗುತ್ತಿಗೆಯನ್ನು ಕೊಟ್ಟು ಬಿಡುತ್ತಾರೆ. ಆಗ ಅವರು ಬೇಕಾದಂಥವರನ್ನು ಹಣ ತೆಗೆದುಕೊಳ್ಳದೇ ಬಿಟ್ಟು ಬಿಡುತ್ತಾರೆ.

ಮಾನ್ಯ ಸಭಾಪತಿಯವರೆ, ಇಲ್ಲಿ ಯಾರು ರಾಜಕಾರಣಿ ಆ ರೀತಿಯಾಗಿ ಮಾಡುತ್ತಿದ್ದಾರೆ ಅವರ ಹೆಸರನ್ನು ಕೂಡ ಪ್ರಸ್ತಾಪ ಮಾಡುವುದು. ಒಳ್ಳೆಯದು. ಕಡತಗಳಲ್ಲಿ ಅದು ದಾಖಲಾಗಬೇಕು.

**ಉಪ ಸಭಾಪತಿಯವರು:–** ಆ ರೀತಿಯಾಗಿ ಎಲ್ಲಾ ಪ್ರಸ್ತಾಪ ಮಾಡುವುದಕ್ಕಾಗುವುದಿಲ್ಲ.

**ಶ್ರೀ ಎಂ.ಬಿ.ಪಾಟೀಲ್:–** ಮಾನ್ಯ ಸಭಾಪತಿಯವರೆ, ನಮಗೆ ಇಲ್ಲ ಇರುವಂತಹ ಮಾಹಿತಿಯ ಪ್ರಕಾರವಾಗಿ ಒಟ್ಟು 1.148 ಲಕ್ಷ ರೂಪಾಯಿಗಳು ಈ ಸೇತುವೆಯನ್ನು ನಿರ್ಮಾಣವನ್ನು ಮಾಡುವುದಕ್ಕೆ ಹಣ ಖರ್ಚಾಗಿದೆ. ಇಲ್ಲಿಯವರೆಗೆ ಟೋಲ್‌ನಿಂದ ಹಣ ಸಂಗ್ರಹವಾಗಿರುವಂಥದ್ದು 521 ಲಕ್ಷ ರೂಪಾಯಿಗಳು ಮಾತ್ರ. ಇದನ್ನು ನೋಡಿದರೆ ಪ್ರತಿ ವರ್ಷ 70 ಲಕ್ಷ ರೂಪಾಯಿಗಳು ಅವರೇಜ್ ಟೋಲ್ ಸಂಗ್ರಹವಾಗುತ್ತಿದೆ. ನಾವು ಹಾಕಿರುವಂತಹ

ಬಂಡವಾಳ ವಾಪಸ್ಸು ಬರಲು ಇನ್ನು 8 ರಿಂದ 10 ವರ್ಷಗಳು ಬೇಕಾಗುತ್ತದೆ. ಮಾನ್ಯ ಸರ್ಕಾರದ ಗಮನಕ್ಕೆ ತೆಗೆದುಕೊಂಡು ಬಂದಿದ್ದಾರೆ. ಇದನ್ನು ನಾನು ಕೂಲಂಕುಷವಾಗಿ ಅದರ ಬಗ್ಗೆ ಮಾಹಿತಿಯನ್ನು ತರಿಸಿಕೊಳ್ಳುತ್ತೇನೆ.

**ಶ್ರೀ ಗೋ.ಮಧುಸೂಧನ್:–** ಮಾನ್ಯ ಸಭಾಪತಿಯವರೆ. ಇದರಲ್ಲ ಸರ್ಕಾರದ ಅಧಿಕಾರಿಗಳು ಶಾಮೀಲಾಗಿದ್ದಾರೆ.

**ಶ್ರೀ ಎಂ.ಬಿ.ಪಾಟೀಲ್:–** ಮಾನ್ಯ ಸಭಾಪತಿಯವರೆ, ಇದರ ಬಗ್ಗೆ ಸಂಪೂರ್ಣವಾದಂತಹ ಮಾಹಿತಿಯನ್ನು ತರಿಸಿಕೊಂಡು ಮತ್ತು ಸೂಕ್ತವಾದ ಕ್ರಮವನ್ನು ತೆಗೆದುಕೊಂಡು ಇದಕ್ಕೆ ಏನಾದರು ತನಿಖೆಯ ಅವಶ್ಯಕತೆ ಇದರೆ ತನಿಖೆಯನ್ನು ಮಾಡುವುದಕ್ಕೆ ಆದೇಶವನ್ನು ಮಾಡುತ್ತೇನೆ. ನಾನು ಇಲಾಖೆಯವರಿಂದ ತಿಳಿದುಕೊಂಡಂತೆ ಹಿಂದೆ ಎಲ್ಲಾ ಟೋಲ್ ಸಂಗ್ರಹವನ್ನು ಮಾಡಲು ಗುತ್ತಿಗೆಯನ್ನು ನೀಡಲಾಗುತ್ತಿತ್ತು. ನಾನು ಲಿಖಿತವಾಗಿ ಕೊಟ್ಟಿರು ವಂತಹ ಉತ್ತರದಲ್ಲಿಯೂ ಕೂಡ ಯಾವ್ಯಾವ ವರ್ಷ ಗುತ್ತಿಗೆಯನ್ನು ನೀಡಲಾ ಗಿದೆ ಮತ್ತು ಯಾವ್ಯಾವ  ವರ್ಷ ಸರ್ಕಾರದಿಂದಲೇ ಟೋಲ್ ಕಲೆಕ್ಟ್ ಮಾಡ ಲಾಗಿದೆ ಎನ್ನುವಂತಹ ಮಾಹಿತಿಯನ್ನು ಕೂಡ ಕೊಟ್ಟಿದ್ದೇನೆ. ಮಾನ್ಯ ಸದಸ್ಯರು ಸೋರಿಕೆಯನ್ನು ತಪ್ಪಿಸಲು ಏನಾದರೂ ಸಲಹೆ ಸೂಚನೆಗಳನ್ನು ಕೊಟ್ಟರೆ ಪರಿಗಣಿಸುತ್ತೇವೆ ಮತ್ತು ನಾವು ಕೂಡ ಅದರ ಬಗ್ಗೆ explode ಮಾಡುತ್ತೇವೆ.

**ಶ್ರೀ ಗೋ.ಮಧುಸೂಧನ್:–** ಮಾನ್ಯ ಸಭಾಪತಿಯವರೆ, ಪ್ರಭಾವಿ ರಾಜಕಾರಣಿ ಅವರು ಸರ್ಕಾರದಿಂದ ಬೇರೆಯವರಿಗೆ ಗುತ್ತಿಗೆಯನ್ನು ಕೊಡದೇ ಇರುವಂತಹ ರೀತಿಯಲ್ಲಿ ನೋಡಿಕೊಂಡಿದ್ದಾರೆ.

**ಶ್ರೀ ಎಂ.ಬಿ.ಪಾಟೀಲ್;–** ಹಾದೇ? ಇದರ ಬಗ್ಗೆ ಸಂಪೂರ್ಣ ಮಾಹಿತಿ ಯನ್ನು ತರಿಸಿಕೊಂಡು ತನಿಖೆಯನ್ನು ಮಾಡಿ ಸೂಕ್ತ ಕ್ರಮವನ್ನು ತೆಗೆದು ಕೊಳ್ಳುತ್ತೇನೆ.

**ಶ್ರೀ ಗೋ.ಮಧುಸೂಧನ್:–** ಮಾನ್ಯ ಸಭಾಪತಿಯವರೆ. ಇಲಾಖೆಯ ಚೀಫ್ ಇಂಜಿನಿಯರ್ ಒಬ್ಬರನ್ನು ಕಳುಹಿಸಿ ಒಂದು ತನಿಖೆಯನು, ಮಾಡಿಸಿ.

**ಶ್ರೀ ಎಂ.ಬಿ.ಪಾಟೀಲ್:–** ಮಾನ್ಯ ಸಭಾಪತಿಯವರೆ. ಇದರ ಬಗ್ಗೆ ಈ ಅಧಿವೇಶನ ಮುಗಿಯುವುದರೊಳಗೆ ಸಂಪೂರ್ಣ ಮಾಹಿತಿಯನ್ನು ತರಿಸಿ ತಮ್ಮ ಮುಂದೆ ಇಡುತ್ತೇನೆ.

## ಆ) ಚುಕ್ಕೆ ಗುರ್ತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು

**ಶ್ರೀ ಎಸ್.ಆರ್.ಪಾಟೀಲ್(ಸಭಾನಾಯಕರು):-** ಮಾನ್ಯ ಸಭಾಪತಿಯವರೆ, ಚುಕ್ಕೆ ಗುರ್ತಿಲ್ಲದ ಪ್ರಶ್ನೆಗಳ ಸಮೂಹ 3ರಲ್ಲಿರುವ ಒಟ್ಟು 59 ಪ್ರಶ್ನೆಗಳ ಪೈಕಿ ಒಟ್ಟು 54 ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡುವ ಉತ್ತರಗಳನ್ನು ಮಂಡಿಸುತ್ತೇನೆ.

### ಅರಣ್ಯ ಒತ್ತುವರಿಯನ್ನು ತೆರವುಗೊಳಿಸುವ ಕುರಿತು

### 14; ಶ್ರೀ ಬಸವರಾಜ ಹೊರಟ್ಟಿ (ಶಿಕ್ಷಕರ ಕ್ಷೇತ್ರ)

ಅ) ರಾಜ್ಯದಲ್ಲಿ ಇಲ್ಲಿವರೆಗೆ ಒತ್ತುವರಿಯಾಗಿರುವ ಅರಣ್ಯ ಜಮೀನೆಷ್ಟು (ಜಿಲ್ಲಾವಾರು ಮಾಹಿತಿ ನೀಡುವುದು)

ಆ) ಈ ಒತ್ತುವರಿಯನ್ನು ತೆರವುಗೊಳಿಸಲು ಸರ್ಕಾರ ಕೈಗೊಂಡ ಕ್ರಮಗಳೇನು

ಇ) ಅರಣ್ಯ ಒತ್ತುವರಿ ಮಾಡಿದ ವ್ಯಕ್ತಿಗಳು ಯಾರ್‍ಯಾರು

ಈ) ಒತ್ತುವರಿಯಾದ ಎಷ್ಟು ಅರಣ್ಯ ಪ್ರದೇಶವನ್ನು ವಾಪಸ್ಸು ಪಡೆಯಲಾಗಿದೆ.

### ಶ್ರೀ ಬಿ. ರಮಾನಾಥ ರೈ (ಅರಣ್ಯ ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು)

ಅ) ರಾಜ್ಯದಲ್ಲಿ ಈವರೆಗೆ 1,34,847, ಪ್ರಕರಣಗಳಲ್ಲಿ 1,09,964 ಹೆಕ್ಟೇರ್ ಅರಣ್ಯ ಪ್ರದೇಶ ಒತ್ತುವರಿಯಾಗಿರುವುದು ಕಂಡು ಬಂದಿರುತ್ತದೆ. ಜಿಲ್ಲಾವಾರು ಮಾಹಿತಿಯ ತಖ್ತೆಯನ್ನು ಲಗತ್ತಿಸಿದೆ.

ಆ) ಅರಣ್ಯ ಜಮೀನಿನ ಅತಿಕ್ರಮಣವನ್ನು ತೆರವುಗೂಳಿಸಲು ಕರ್ನಾಟಕ ಅರಣ್ಯ ಕಾಯ್ದೆ 1963 ಸೆಕ್ಷನ್. 64(ಎ) ಪ್ರಕಾರ ಕ್ರಮ ಕೈಗೊಳ್ಳಲಾಗುತ್ತಿದೆ. ಪ್ರತಿ ತಿಂಗಳು ಜರುಗುವ ರಾಜ್ಯದ ಎಲ್ಲಾ ವೃತ್ತಗಳ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳ ಸಭೆಯಲ್ಲಿ ಒತ್ತುವರಿ ತೆರವಿನ ಪ್ರಗತಿಯನ್ನು ಪರಾಮರ್ಶಿಸಲಾಗುತ್ತಿದೆ.

ಮಾನ್ಯ ಸರ್ವೋಚ್ಛ ನ್ಯಾಯಾಲಯವು ನೀಡುವ ಆದೇಶಗಳನ್ನು ಪಾಲಿಸ ಬೇಕಾಗಿರುವುದರಿಂದ, ಅರಣ್ಯ ಸಂರಕ್ಷಣೆಯ ಹಿತದೃಷ್ಠಿಯಿಂದ ಹಾಗೂ ಪರಿಸರವನ್ನು ಕಾಪಾಡಿಕೊಂಡು ಬರಲು ಒತ್ತುವರಿಗಳನ್ನು ತೆರವುಗೊಳಿಸುವುದು ಅನಿವಾರ್ಯವಾಗಿರುತ್ತದೆ. ಘೋಷಿತ ಅರಣ್ಯ ಪ್ರದೇಶದಲ್ಲಿ ಒತ್ತುವರಿಗಳನ್ನು ತೆರವುಗೊಳಿಸುವುದು ಅನಿವಾರ್ಯ ವಾಗಿದೆ.

ಇ) ಪಿಟಿಸಿಎಲ್ ಪ್ರಕರಣಗಳಲ್ಲಿ ಜಮೀನುಗಳನ್ನು ಮಾರಾಟಕ್ಕೆ ಅನುಮತಿ ನೀಡಲು ಅನುಸರಿಸುತ್ತಿರುವ ಮಾನದಂಡಗಳೇನು ? (ಈ ಬಗ್ಗೆ ವಿವರ ನೀಡುವುದು ಹಾಗೂ ಆದೇಶ ಪ್ರತಿಗಳನ್ನು ಒದಗಿಸುವುದು)

**ಶ್ರೀ ವಿ. ಶ್ರೀನಿವಾಸ ಪ್ರಸಾದ (ಕಂದಾಯ ಸಚಿವರು)**

ಅ) ಕೆರೆ. ಜಮೀನು ಹೊರತುಪಡಿಸಿ ಎಲ್ಲಾ ರೀತಿಯ ಸರ್ಕಾರಿ ಜಮೀನು ಗಳನ್ನು ಸರ್ಕಾರದ ಸುತ್ತೋಲೆ ಸಂ: ಆರ್‌ಡಿ 70 ಎಲ್‌ಜೆಪಿ 2008, ದಿನಾಂಕ: 8–8–2008 ರಂತೆ ಕರ್ನಾಟಕ ಭೂ ಕಂದಾಯ ಕಾಯ್ದೆ ಕಲಂ 71 ರಡಿಯಲ್ಲಿ ಸಾರ್ವಜನಿಕ ವಿಶೇಷ ಉದ್ದೇಶಗಳಿಗಾಗಿ ಜಮೀ ನನ್ನು ಕಾಯ್ದಿರಿಸಲು ಆಯಾ ಜಿಲ್ಲಾಧಿಕಾರಿಗಳಿಗೆ ಅವಕಾಶ. ಕಲ್ಪಿಸಲಾಗಿ ರುತ್ತದೆ. ಈ ಸುತ್ತೋಲೆಯನ್ವಯ ಕನಿಷ್ಟ 4 ಹೆಕ್ಟರೆಗೆ ಜಮೀನು ಮಂಜೂರು ಮಾಡಲು ಮಾತ್ರ ಅನ್ವಯವಾಗುತ್ತದೆ. ಗೋಮಾಳ ಜಮೀನನ್ನು ಮಂಜೂರು ಮಾಡಲು ಅವಕಾಶವಿರುವುದಿಲ್ಲ. ಆದರೆ ಗೋಮಾಳ ಜಮೀನುಗಳನ್ನು ಕರ್ನಾಟಕ ಭೂ ಕಂದಾಯ ಕಾಯ್ದೆ 1964 ಕಲಂ 97(4) ರಡಿಯಲ್ಲಿ ಗೋಮಾಳಕ್ಕಾಗಿ ಅವಶ್ಯವಿರುವ ಜಾಗವನ್ನು ಗ್ರಾಮದಲ್ಲಿ ಇರುವ ಜಾನುವಾರು ಸಂಖ್ಯೆಗೆ ಆಧಾರದ ಮೇಲೆ ಕಾಯ್ದಿರಿಸಿ, ಉಳಿದಲ್ಲಿ ಸರ್ಕಾರದ ಅನುಮೋದನೆ ಪಡದು ಮಂಜೂರು ಮಾಡಲು ಅವಕಾಶವಿರುತ್ತದೆ.

ಆದರೆ ಕರ್ನಾಟಕ ಭೂ ಸುಧಾರಣೆ ಕಾಯ್ದೆ 1961ರ ಕಲಂ 77 (ಎ) ರನ್ವಯ ಸರ್ಕಾರದ ವಶದಲ್ಲಿ ಇರುವ ಹೆಚ್ಚುವರಿ ಜಮೀನನ್ನು ವ್ಯವ

ಸಾಯಕ್ಕಾಗಿ 1 ಯೂನಿಟ್‌ಗೆ ಮೀರದಂತೆ (5.4 ಎಕರೆ) ಮಂಜೂರು ಮಾಡಲು ಅವಕಾಶವಿರುತ್ತದೆ.

'ಡಿ' ವರ್ಗದ ಜಮೀನನ್ನು ಮಂಜೂರು ಮಾಡುವಾಗ ಆ ವ್ಯಕ್ತಿಯ ಹೆಸರಿನಲ್ಲಿರುವ ಜಮೀನು ಸೇರಿ ಒಟ್ಟು 2 ಹೆಕ್ಟೇರ್ (4.38 ಎಕರೆ) ವಿಸ್ತೀರ್ಣದ ಜಮೀನು ಮೀರುವಂತಿಲ್ಲ.

ಕೆರೆ ಅಂಗಳವನ್ನು ಮಂಜೂರು ಮಾಡಬಾರದೆಂಬ ಮಾನ್ಯ ಉಚ್ಚ ನ್ಯಾಯಾಲಯ ಹಾಗೂ ಸರ್ವೋಚ್ಚ ನ್ಯಾಯಾಲಯಗಳ ತೀರ್ಪುಗಳು ಬಂದಿರುವ ಹಿನ್ನೆಲೆಯಲ್ಲಿ ಮಂಜೂರು ಮಾಡಲು ಅವಕಾಶವಿರುವುದಿಲ್ಲ. ಕರ್ನಾಟಕ ಭೂ ಕಂದಾಯ ನಿಯಮಗಳು 1966ರ ನಿಯಮ 21(2)ರಲ್ಲಿ ನಿಗಧಿಪಡಿಸಿರುವ ಫೂಟ್ ಖರಾಬು 'ಬಿ' ಜಮೀನುಗಳು ಸಾರ್ವಜನಿಕರ ನಿರ್ದಿಷ್ಟ ಉದ್ದೇಶಕ್ಕಾಗಿ ಮೀಸಲಿರಿಸಿದ ಸರ್ಕಾರಿ ಜಮೀನುಗಳಾಗಿವ. ಆದಾಗ್ಯೂ ಈ ಜಮೀನುಗಳು ಹಿಡುವಳಿದಾರರ ಅನುಭವದಲ್ಲಿರುವ 'ಬಿ" ಖರಾಬು ಜಮೀನಾಗಿದ್ದಲ್ಲಿ ಖರಾಬು ಲಕ್ಷಣಗಳನ್ನು ಕಳೆದುಕೊಂಡಿದ್ದ ಪ್ರಕರಣದಲ್ಲಿ ಅವುಗಳು ಸಾರ್ವಜನಿಕ ಉಪಯೋಗಕ್ಕೆ ಬಳಸಲ್ಪಡದೇ ಇರುವ ಸಂದರ್ಭಗಳಲ್ಲಿ ಅವುಗಳನ್ನು ಸಾರ್ವಜನಿಕ ಹಕ್ಕುಗಳಿಂದ ವಿಹಿತಗೊಳಿಸಲು ಸರ್ಕಾರದಿಂದ ಅನುಮತಿ ಪಡೆದ ನಂತರ ಕರ್ನಾಟಕ ಭೂ ಕಂದಾಯ ಕಾಯ್ದೆ 1964ರ ಕಲಂ 68(1) ಮತ್ತು 68(5)ರಡಿ ಅವಕಾಶ ಕಲಿಸಲಾಗಿರುತ್ತದೆ.

ಇ) 1) ಪರಿಶಿಷ್ಟ ಜಾತಿ ಮತ್ತು. ಪರಿಶಿಷ್ಟ ಪಂಗಡದವರಗೆ ಮಂಜೂರಾದ ಜಮೀನುಗಳನ್ನು. ಮಾರಾಟ ಮಾಡಲು ಮಂಜೂರಾದ ದಿನಾಂಕದಿಂದ 5 ವರ್ಷದ ಅವಧಿಯ ಒಳಗೆ ಇರುವ ಜಮೀನನ್ನು ಯಾವುದೇ ರೀತಿಯಲ್ಲಿ ಯಾವುದೇ ವ್ಯಕ್ತಿಗೆ ಪರಭಾರೆ ಮಾಡಲು ಅವಕಾಶವಿಲ್ಲದೇ ಇರುವುದರಿಂದ ಅಂತಹ ಪ್ರಕರಣಗಳನ್ನು ಪಿ.ಟಿ.ಸಿ.ಎಲ್ ಆಕ್ಸ್ 1978ರ ಕಲಂ 40 (1) ರ ಪ್ರಕಾರ ಸಾರಾಸಗಟಾಗಿ ತಿರಸ್ಕರಿಸಲಾಗುವುದು.

2) 5 ವರ್ಷ ಮೀರಿ 10,.15, 20, 25 ಇತ್ಯಾದಿ ವರ್ಷಗಳ ಷರತ್ತಿನ ಅವಧಿಯೊಳಗೆ. ಮಾರಾಟ. ಮಾಢಲು ವಿನಂತಿಸಿಕೊಂಡಿರುವ ಪ್ರಕರಣಗಳಲ್ಲಿ ಪ್ರತಿಯೊಂದು ಪ್ರಕರಣದ ಕೌಟುಂಬಿಕ ಪರಿಸ್ಥಿತಿ ಯನ್ನುಗಣನೆಗೆ ತೆಗೆದುಕೊಂಡು ಸದರಿ ಜಮೀನನ್ನು ಪರಭಾರೆ ಮಾಡಲು ಸರ್ಕಾರ ಒಪ್ಪಿಗೆ ನಿರ್ಣಯಕ್ಕೆ ಬಂದರೆ ಹಾಗೆ ಪರ ಬಾರೆ ಮಾಡಿದ ಜಮೀನಿನ ಒಟ್ಟು ಮೌಲ್ಯದ ಪ್ರತಿಶತ ಶೇಕಡ 50 ರಷ್ಟು ಹಣವನ್ನು ಕರ್ನಾಟಕ ಭೂ ಮಂಜೂರಾತಿ ನಿಯ ಮಾವಳಿಗಳು 1969ರ ನಿಯಮ 9 (1) (i) ರನ್ವಯ ಸರ್ಕಾರಕ್ಕೆ ಮಂಜೂರಾತಿದಾರರಿಂದ ಕಟ್ಟಿಸಲಾಗುವುದು.

3) ಅವಧಿ ಪೂರ್ಣಗೊಂಡ ಪ್ರಕರಣಗಳಲ್ಲಿ ಕುಟುಂಬದ ಪರಿಸ್ಥಿತಿ ಯನ್ನು ಗಣನೆಗೆ ತೆಗೆದುಕೊಂಡು ಸದರಿ ಜಮೀನನ್ನು ಪರಭಾರೆ ಮಾಡಲು ಪಿ.ಟಿ.ಸಿ.ಎಲ್ ಆಕ್ಟ್ 1918ರ ಕಲಂ 4 (2)ರ ಪ್ರಕಾರ ಸರ್ಕಾರದ ಪೂರ್ವಾನುಮೋದನೆ ನೀಡಬಹುದಾಗಿದ್ದು, ಹಾಗೇ ಒಪ್ಪಿಗೆ ನೀಡಿದ ಪ್ರಕರಣಗಳಲ್ಲಿ ಜಮೀನು ಪರಭಾರೆಯಿಂದ ಬಂದ ಹಣವನ್ನು ಉಪಯೋಗಿಸಿ ಬೇರೆ ಜಮೀನನ್ನು ಕೊಂಡು ಕೊಳ್ಳಬೇಕು ಎಂಬ ನಿಯಮವಿದ್ದು, ಸದರಿ ನಿಯಮವನ್ನು ಪಾಲಿಸಲು ಮಂಜೂರಿದಾರರಿಗೆ ತಿಳಿಸಲಾಗುವುದು.

**ಹಾಸನ ನಗರದಲ್ಲಿ ಕುಡಿಯುವ ನೀರಿನ ಸಮಸ್ಯೆ ಬಗ್ಗೆ**

**169; ಶ್ರೀ ಪಟೇಲ್ ಶಿವರಾಂ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)**

1. ಹಾಸನ ನಗರ ಮತ್ತು ಸುತ್ತಮುತ್ತಲಿನ ಹಳ್ಳಿಗಳಲ್ಲಿ ಕುಡಿಯುವ ನೀರಿ ಸಮಸ್ಯೆ ಪರಿಹಾರಕ್ಕೆ ಹೇಮಾವತಿ ನೀರನ್ನು ಒದಗಿಸಲು ಯೋಜನೆ ರೂಪಿಸಲಾಗಿದೆಯೆ ?
2. ಈ ನಿಟ್ಟಿನಲ್ಲಿ ಕೈಗೊಂಡಿರುವ ಕ್ರಮಗಳೇನು?

**ಶ್ರೀ ವಿನಯಕುಮಾರ ಸೋರಕೆ (ನಗರಾಭಿವೃದ್ಧಿ ಸಚಿವರು)**

1. ಹೌದು ಯೋಜನೆಯನ್ನು ರೂಪಿಸಲಾಗಿದೆ.
2. ಹಾಸನ. ನಗರ ಮತ್ತು ನಗರ ವ್ಯಾಪ್ತಿ ಬರುವ ಸುತ್ತಮುತ್ತಲಿನ ಹಳ್ಳಿಗಳು ಮತ್ತು 7 ಮಾರ್ಗ ಮಧ್ಯದ ಹಳ್ಳಿಗಳಿಗೆ ಕುಡಿಯುವ ನೀರು ಸರಬರಾಜು ಮಾಡಲು 3ನೇ : ಹಂತದ ಕುಡಿಯುವ ನೀರು ಸರಬರಾಜು ಯೋಜನೆಯನ್ನು ಹೇಮಾವತಿ ನದಿ ಮೂಲದಿಂದ ರೂ.409 ಕೋಟಿಗಳ ಅಂದಾಜನ್ನು ತಯಾರಿಸಲಾಗಿದೆ. ಸದರಿ ಯೋಜನೆಯನ್ನು ಪೌರಾಡಳಿತ ನಿರ್ದೇಶನಾಲಯಕ್ಕೆ ಕರ್ನಾಟಕ ನೀರು ಸರಬರಾಜು ಮತ್ತು ಒಳ ಚರಂಡಿ ಮಂಡಳಿಯ ಪತ್ರ ಸಂಖ್ಯೆ 608 ದಿನಾಂಕ 01–06–2013ರಲ್ಲಿ ಯು.ಐ.ಡಿ.ಎಸ್.ಎಸ್.ಎಂ.ಟಿ.. ಯೋಜನೆಯಡಿಯಲ್ಲಿ ಸಲ್ಲಿಸಲಾಗಿದೆ. ಕೇಂದ್ರ ಹಾಗೂ ರಾಜ್ಯ ಸರ್ಕಾರಗಳಿಂದ ಯೋಜನೆಯು ಅನುಮೋದನೆಗೊಂಡ ನಂತರ ಯೋಜನೆಯನ್ನು ಅನುಷ್ಠಾನಗೊಳಿಸಲಾಗುವುದು.

ಹೊಳವನಹಳ್ಳಿಯಲ್ಲಿರುವ ಹೊನ್ನಾದೇವಿ ದೇವಸ್ಥಾನ

**270; ಶ್ರೀ ಅಲ್ಲಮಪ್ರಭು ಪಾಟೀಲ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)**

ಅ) ತುಮಕೂರು ಜಿಲ್ಲೆ, ಕೊರಟಗೆರೆ ತಾಲ್ಲೂಕು ಹೊಳವನಹಳ್ಳಿ ಗ್ರಾಮದಲ್ಲಿ ಹೊನ್ನಾದೇವಿ ದೇವಸ್ಥಾನವಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಆ) ಸದರಿ ದೇವಸ್ಥಾನವು ಮುಜರಾಯಿ ಇಲಾಖೆಗೆ ಸೇರಿದೆಯೇ (ಸೇರಿದ್ದರೆ ದಿನಾಂಕದೊಂದಿಗೆ ವಿವರ ನೀಡುವುದು)

ಇ) ಸದರಿ ದೇವಸ್ಥಾನಕ್ಕೆ ಸರ್ಕಾರದಿಂದ ಅನುದಾನ ನೀಡಲಾಗಿದೆಯೇ ?

ಈ) ನೀಡಿದ್ದಲ್ಲಿ ಎಷ್ಟು ಮೊತ್ತ ನೀಡಲಾಗಿದೆ ?

**ಶ್ರೀ ಪ್ರಕಾಶ ಬಾಬಣ್ಣ ಹುಕ್ಕೇರಿ (ಸಣ್ಣ ಕೈಗಾರಿಕೆ, ಸಕ್ಕರೆ ಮತ್ತು ಮುಜರಾಯಿ ಸಚಿವರು)**

ಅ) ಬಂದಿದೆ

ಆ) ಸೇರಿದೆ,

ಸದರಿ ದೇವಾಲಯವು ಮುಜರಾಯಿ ಇಲಾಖೆಗೆ ಸೇರಿದ ಸಿ ವರ್ಗದ ದೇವಾಲಯವಾಗಿರುತ್ತದೆ. (ಕರ್ನಾಟಕ ರಾಜ್ಯ ಪತ್ರದ ಅಧಿಸೂಚನೆ ಸಂಖ್ಯೆ ಕಂಇ 87 ಮುಆಬಿ 2012 ದಿನಾಂಕ 29–9–2012 ಅಧಿಸೂಚಿತ ಪಟ್ಟಿಯ ಪುಟ ಸಂಖ್ಯೆ 704 ಕ್ರಮ ಸಂಖ್ಯೆ 78)

ಇ) ಆಯವ್ಯಯದಲ್ಲಿ ಲಭ್ಯತೆಗನುಸಾರವಾಗಿ ಮುಂಬರುವ ಆರ್ಥಿಕ ವರ್ಷದಲ್ಲಿ ಅನುದಾನ ಒದಗಿಸಲು ಪರಿಶೀಲಿಸಲಾಗುವುದು.

ಈ) ಪ್ರಶ್ನೆ ಉದ್ಭವಿಸುವುದಿಲ್ಲ.

**ಅರಣ್ಯ ಭೂಮಿ ಒತ್ತುವರಿ ತಡೆಗೆ ಕಾರ್ಯಾಚರಣೆ ನಡೆಸುವ ಬಗ್ಗೆ**

**259; ಶ್ರೀ ಕೆ. ಮೋನಪ್ಪ ಭಂಡಾರಿ (ವಿಧಾನಸಭೆಯಿಂದ ಚುನಾಯಿತರಾದವರು)**

ಅ) ಸಾರ್ವಜನಿಕ ಭೂಮಿಯನ್ನು ಹಿಂದಕ್ಕೆ ಪಡೆಯುವ ಮತ್ತು ಸಂರಕ್ಷಿಸುವ ಕಾರ್ಯಪಡೆಯ ಮಾಹಿತಿಯಂತೆ ರಾಜ್ಯದಲ್ಲಿ ಒಟ್ಟಾರೆ ಒತ್ತುವರಿಯಾಗಿರುವ ಅರಣ್ಯ ಭೂಮಿ ಎಷ್ಟು; (ಜಿಲ್ಲಾವಾರು ವಿವರಗಳನ್ನು ಒದಗಿಸುವುದು);

ಆ) ಒತ್ತುವರಿಯಾಗಿರುವ ಜಾಗವನ್ನು ಇಲಾಖೆಯು ಪುನ: ಸ್ವಾಧೀನಕ್ಕೆ ಪಡೆದು. ಅರಣ್ಯ ಅಭಿವೃದ್ಧಿಪಡಿಸುವ ನಿಟ್ಟಿನಲ್ಲಿ ಸರ್ಕಾರ ಯಾವ ಯೋಜನೆ ರೂಪಿಸಿ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದೆ (ವಿವರ ಒದಗಿಸುವುದು);

ಇ) ಅರಣ್ಯ ಒತ್ತುವರಿ ತಡೆಗಟ್ಟುವ ಕೆಲಸ ಸರ್ಕಾಕ್ಕೆ ಸವಾಲಾಗಿ ಪರಿಣಮಿಸಿರುವುದು ನಿಜವೇ;

ಈ) ಅರಣ್ಯವಾಸಿಗಳ ಬದುಕು ರೈತರ ಸಂಕಷ್ಟ ಒಂದು ಕಡೆಯಾದರೆ ತೆರವು ಕಾರ್ಯಾಚರಣೆ ಮಾಡದಿದ್ದಲ್ಲಿ ಮತ್ತೊಂದು ಸಂಕಷ್ಟಕ್ಕೆ ಸಿಲುಕುವ ಪರಿಸ್ಥಿತಿಯ ಕುರಿತು ಸರ್ಕಾರದ ನಿಲುವೇನು (ವಿವರಿಸುವುದು);

**ಶ್ರೀ ಬಿ. ರಮಾನಾಥ ರೈ (ಅರಣ್ಯ ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು)**

ಅ) ಸಾರ್ವಜನಿಕ ಭೂಮಿಯನ್ನು ಹಿಂದಕ್ಕೆ ಪಡೆಯುವ ಮತ್ತು ಸಂರಕ್ಷಿಸುವ ಕಾರ್ಯಪಡೆಯು ನೀಡಿರುವ ಮಾಹಿತಿಯಂತೆ ರಾಜ್ಯದಲ್ಲಿ ಒಟ್ಟಾರೆ ಒತ್ತುವರಿಯಾಗಿರುವ ಅರಣ್ಯ ಭೂಮಿಯ ವಿಸ್ತೀರ್ಣ 165,796 ಎಕರೆ ಆಗಿರುತ್ತದೆ. ಕಾರ್ಯಪಡೆಯು ಅನುಬಂಧ–1 ರಲ್ಲಿ ನೀಡಿರುವ ಜಿಲ್ಲಾ ವಾರು ವಿವರಗಳನ್ನು ಈ ಕೂಡ ಲಗತ್ತಿಸಿದೆ.

ಆ) ಅರಣ್ಯ ಇಲಾಖೆಯು ಒತ್ತುವರಿಯಾಗಿರುವ ಅರಣ್ಯ ಜಮೀನನ್ನು ತೆರವು ಗೊಳಿಸಿ ಇಲಾಖೆಯ ಸ್ವಾಧೀನಕ್ಕೆ ಪಡೆಯಲು 1963ರ ಅರಣ್ಯ ಕಾಯ್ದೆ ಸೆಕ್ಷನ್ 64(ಎ) ಪ್ರಕಾರ ಕ್ರಮ ಕೈಗೊಳ್ಳಲಾಗುತ್ತಿದೆ. ಸರ್ಕಾರಿ ಜಮೀನು ಸಂರಕ್ಷಣಾ ಕಾರ್ಯಪಡೆಯ ಜೂನ್ 2012 ರಂದು ನೀಡಿದ ವರದಿ ಯಲ್ಲಿ 1,65,796 ಎಕರೆ ಅರಣ್ಯ ಪ್ರದೇಶ ಒತ್ತುವರಿಯಾಗಿರುತ್ತದೆ ಎಂದು ಉಲ್ಲೇಖಿಸಲಾಗಿದೆ. ಕಾರ್ಯಪಡೆಯ ವರದಿ ನೀಡಿದಾಗಿನಿಂದ ಈವರೆಗೆ 5516 ಎಕರೆ ಅರಣ್ಯ ಪ್ರದೇಶವನ್ನು ಒತ್ತುವರಿಯಿಂದ ತೆರವುಗೊಳಿಸಲಾಗಿದೆ. ಬಾಕಿ ಉಳಿದಿರುವ 1,60,280 ಎಕರೆ ಅರಣ್ಯ ಪ್ರದೇಶವನ್ನು ಒತ್ತುವರಿಯಿಂದ ತೆರವುಗೊಳಿಸಲು ಬಾಕಿ ಇರುತ್ತದೆ.

ಇ) ಹೌದು

ಈ) ಮಾನ್ಯ ಸರ್ವೋಚ್ಛ ನ್ಯಾಯಾಲಯವು ನೀಡುವ ಆದೇಶಗಳನ್ನು ಪಾಲಿಸಬೇಕಾಗಿರುವುದರಿಂದ ಅರಣ್ಯ ಸಂರಕ್ಷಣೆಯ ಹಿತದೃಷ್ಟಿಯಿಂದ ಹಾಗೂ ಪರಿಸರವನ್ನು ಕಾಪಾಡಿಕೊಂಡು ಬರಲು ಒತ್ತುವರಿಗಳನ್ನು ತೆರವುಗೊಳಿಸುವುದು ಅನಿವಾರ್ಯವಾಗಿರುತ್ತದೆ. ಘೋಷಿತ ಅರಣ್ಯ ಪ್ರದೇಶದಲ್ಲಿ ಒತ್ತುವರಿಗಳನ್ನು ತೆರವುಗೊಳಿಸುವುದು ಅನಿವಾರ್ಯ ವಾಗಿದೆ.

Statement showing Details of Government lands, encroachment details and removal of encroachments

| Sl.No | Name of the District | Geographical area | Revenue land (Gomal etc) | Forest Land | Other Department land | Total Government Land | Encroachment of Revenue land | Encroachment in Forest land | Encroachment in other department | Total Encroachment | Encrochment removed (Revenue land) |
|---|---|---|---|---|---|---|---|---|---|---|---|
| 1 | Bangalore Urban | 5,37,003 | 1,22,918 | 33,874 | | 1,56,792 | 25,994 | | | | 9,033 |
| 2 | Bangalore Rural | 5,66,912 | 89,370 | 41,227 | | 1,30,597 | 35,342 | 14,518 | | | 3,394 |
| 3 | Ramnagara | 879103 | 180125 | 253711 | | 433836 | 26752 | | | | 405 |
| 4 | Chikkaballapura | 999117 | 263858 | 121374 | | 385232 | 37457 | | | | 438 |
| 5 | Tumkur | 2629945 | 543062 | 224935 | | 767997 | 25275 | | | | 661 |
| 6 | Kolar | 926166 | 203819 | 84408 | | 288227 | 25058 | | | | 268 |
| 7 | Shimoga | 2094026 | 1061864 | 958019 | | 2019883 | 71316 | 40178 | | | 407 |
| 8 | Davanagere | 1476065 | 200104 | 184874 | | 384978 | 22087 | | | | 2163 |
| 9 | Chitradurga | 1903634 | 515998 | 191924 | | 707922 | 32427 | | | | 5379 |
| | | 12011971 | 3181118 | 2094346 | | 5275464 | 301708 | 54696 | | | 22150 |
| **Mysore Division** | | | | | | | | | | | |
| 10 | Mysore | 1670664 | 166145 | 97413 | | 263558 | 65383 | 1510 | | | 900 |
| 11 | Hassan | 1636627 | 172333 | 129136 | | 301469 | 92773 | 3319 | | | |
| 12 | Mandya | 1230663 | 144274 | 157448 | | 301722 | 36586 | | | | 396 |
| 13 | Chickmagalur | 1783525 | 489195 | 454073 | | 943268 | 106249 | 35946 | | | |
| 14 | D.K. (Mangalore) | 1178558 | 364843 | 278768 | | 643611 | 7506 | 6504 | | | 75 |
| 15 | Kodagu | 1014614 | 142416 | 344186 | | 486602 | 16308 | 6448 | | | |

| | | | | | | | | | | | |
|---|---|---|---|---|---|---|---|---|---|---|---|
| 16 | Chamarajnagar | 1407655 | 169225 | 575121 | | 744346 | 34707 | 2305 | | | 335 |
| 17 | Udupi | 880422 | 249207 | 389682 | | 638889 | 87840 | | | | 91 |
| | | **10802728** | **1897638** | **2425827** | | **4323465** | **447352** | **56032** | | | **1799** |
| 18 | Belgaum | 3320624 | 98958 | 476181 | | 575139 | 10812 | 5451 | | | 708 |
| | | 1055503 | 57577 | 88557 | | 146134 | 2148 | 7042 | | | 289 |
| | | 2602073 | 27579 | 4255 | | 31834 | 12055 | | | | 499 |
| | | 2530957 | 6892 | 2049951 | | 2056843 | 3263 | 28373 | | | 7 |
| | | 1627426 | 18869 | 195379 | | 214248 | 340 | | | | 127 |

Statement showing Details of Government lands, encroachment details and removal of encroachments

| Sl.No | Name of the District | Geographical area | Revenue land (Gomal etc) | Forest Land | Other Department land | Total Government Land | Encroachment of Revenue land | Encroachment in Forest land | Encroachment in other department | Total Encroachment | Encrochment removed (Revenue land) |
|---|---|---|---|---|---|---|---|---|---|---|---|
| 23 | Gadag | 1150316 | 947476 | | 174928 | 8142 | | | | | |
| 24 | | 1198335 | 47121 | | 178234 | 13075 | | | | | 4734 |
| | | 13485234 | 351742 | | 3377362 | 49835 | 40866 | | | | 6364 |
| 25 | Gulbarga | 3977214 | 77908 | | 227956 | 33737 | 12940 | | | | 490 |
| 26 | Yadgir | | 103981 | | 103981 | 4341 | | | | | 782 |
| 27 | Bellary | 2008594 | 555020 | | 869871 | 65408 | 1262 | | | | 15210 |
| 28 | Raichur | 2064532 | 86476 | | 171611 | 3379 | | | | | |
| 29 | Bidar | 1338160 | 107356 | | 139031 | 11695 | | | | | |
| 30 | Koppal | 1364663 | 110360 | | 159807 | 6326 | | | | | 514 |
| | | **10753163** | **965420** | | **706837** | **124886** | **14202** | | | | **16996** |

## ಕಬ್ಬು ಬೆಳೆಗಾರರ ಸಮಸ್ಯಗಳ ಬಗ್ಗೆ

## 140(379); ಶ್ರೀ ಕೆ.ವೋನಪ್ಪ ಭಂಡಾರಿ (ವಿಧಾನಸಭೆಯಿಂದ ಚುನಾಯಿತರಾದವರು)

ಅ. ರಾಜ್ಯದಲ್ಲಿ ಕಬ್ಬು ಬೆಳೆಯುವ ಪ್ರದೇಶದ ವ್ಯಾಪ್ತಿ ಎಷ್ಟು ಅತಿ ಹೆಚ್ಚಾಗಿ ಬೆಳೆಯುವ ಸ್ಥಳಗಳಾವುವು? (ಜಿಲ್ಲಾವಾರು ವಿವರ ಒದಗಿಸುವುದು);

ಆ. ಕಬ್ಬು ಬೆಳೆಯ ಉತ್ಪನಕ್ಕೆ ಅನುಸಾರವಾಗಿ ಸಮರ್ಪಕವಾಗಿ ವೈಜ್ಞಾನಿಕ ವಾಗಿ ಬೆಲೆ ನಿಗದಿಯಾಗದಿರುವುದರಿಂದ ಕಬ್ಬು ಬೆಳೆಯುವ ರೈತರು ತೀವ್ರ ಸಂಕಷ್ಟದಲ್ಲಿರುವುದು ನಿಜವೇ;

ಇ. ಇಂತಹ ಸಂಕಷ್ಟ ಪರಿಸ್ಥಿತಿಯಲ್ಲಿರುವ ಕಬ್ಬು ಬೆಳೆಯುವ ರೈತರಿಗೆ ಉತ್ತೇಜ ನಕರವಾದ ವೈಜ್ಞಾನಿಕ ಬೆಲೆ ನಿಗದಿಪಡಿಸಲು ಸರ್ಕಾರಿ ಉದ್ದೇಶಿಸಿ ದೆಯೇ; ಈ ನಿಟ್ಟಿನಲ್ಲಿ ಡಾ:ಸಿ.ರಂಗರಾಜನ್ ಸಮಿತಿಯ ವರದಿಯ ಬಗ್ಗೆ ಸರ್ಕಾರದ ನಿಲುವೇನು;

ಈ. ಉದ್ದೇಶಿಸಿದ್ದಲ್ಲಿ, ಇದಕ್ಕಾಗಿ ಪ್ರತ್ಯೇಕ ವಾದಂತಹ ಕಬ್ಬು ಬೆಳೆ ರಕ್ಷಣೆಗೆ ಬೆಂಬಲ ಬೆಲೆ ಮಾದರಿಯಲ್ಲಿ ಉತ್ಯೇಜಕ ಮಂಡಳಿಯಲ್ಲಿ ಸ್ಥಾಪಿಸುವ ಚಿಂತನೆ ಸರ್ಕಾರದ ಮುಂದಿದೆಯೇ;

ಉ. ಸ್ಥಾಪಿಸಲಿರುವ ಈ ಮಂಡಳಿಯ ಸಾಧಕ–ಭಾಧಕಗಳೇನು? ಯಾವಾಗಿ ನಿಂದ ಇದು ಅಸ್ತಿತ್ವಕ್ಕೆ ಬರಲಿದೆ ಇಂದರಿಂದಾಗಿ ರೈತರಿಗೆ ಸಿಗಬಹು ದಾದ ಭೌತಿಕ ಅನುಕೂಲ ಸೌಲಭ್ಯ ಹಾಗೂ ಲಾಭಗಳೇನು (ವಿವರ ಒದಗಿಸುವುದು);

## ಶ್ರೀ ಪ್ರಕಾಶ ಬಾಬಣ್ಣ ಹುಕ್ಕೇರಿ.(ಸಣ್ಣ ಕೈಗಾರಿಕೆ, ಮುಜರಾಯಿ ಮತ್ತು ಸಕ್ಕರೆ ಸಚಿವರು)

ಅ. ರಾಜ್ಯದಲ್ಲಿ 2013–14ನೇ ಸಾಲಿನಲ್ಲಿ 4.29 ಲಕ್ಷ ಹೆಕ್ಟೇರ್ ವ್ಯಾಪ್ತಿ ಪ್ರದೇಶ ದಲ್ಲಿ ಕಬ್ಬು ಬೆಳೆಯಲಾಗಿದ್ದು. ರಾಜ್ಯದಲ್ಲಿ ಬೆಳಗಾವಿ, ಬಾಗಲಕೋಟೆ,

ಬಿಜಾಪುರ, ಬೀದರ್ ಮತ್ತು ಮಂಡ್ಯ ಜಿಲ್ಲೆಗಳು ಅತಿ ಹೆಚ್ಚಾಗಿ ಕಬ್ಬನ್ನು ಬೆಳೆಯುವ ಸ್ಥಳಗಳಾವೆ. ಜಿಲ್ಲಾವಾರು ವಿವರ ಈ ಕೆಳಗಿನಂತಿದೆ:–

| ಕ್ರ.ಸಂ | ಜಿಲ್ಲೆ | ಕಬ್ಬು ಬೆಳೆ ವಿಸ್ತೀರ್ಣ (ಲಕ್ಷ ಹೆಕ್ಟೇರ್‌ಗಳಲ್ಲಿ) |
|---|---|---|
| 1 | ಬೆಳಗಾವಿ | 1.58 |
| 2 | ಬಾಗಲಕೋಟೆ | 0.81 |
| 3 | ಬಿಜಾಪುರ | 0.41 |
| 4 | ಬೀದರ್ | 0.21 |
| 5 | ಬಳ್ಳಾರಿ | 0.07 |
| 6 | ಚಾಮರಾಜನಗರ | 0.06 |
| 7 | ದಾವಣಗೆರೆ | 0.03 |
| 8 | ಗುಲ್ಬರ್ಗಾ | 0.25 |
| 9 | ಯಾದಗಿರಿ | 0.02 |
| 10 | ಗದಗ್ | 0.07 |
| 11 | ಹಾಸನ | 0.03 |
| 12 | ಮಂಡ್ಯ | 0.34 |
| 13 | ಮೈಸೂರು | 0.15 |
| 14 | ಶಿವಮೊಗ್ಗ | 0.02 |
| 15 | ಹಾವೇರಿ | 0.06 |
| 16 | ಉತ್ತರ ಕನ್ನಡ | 0.18 |
| | **ಒಟ್ಟು** | **4.29** |

ಆ. ಪ್ರತಿ ವರ್ಷ ಕೇಂದ್ರ ಸರ್ಕಾರವು ಸಕ್ಕರೆ ಇಳುವರಿ ಆಧಾರದ ಮೇಲೆ ಕಾರ್ಖಾನೆವಾರು ಕಬ್ಬು ಬೆಲೆ ನಿಗದ ಮಾಡುತ್ತದೆ. ಸಕ್ಕರೆ ಉದ್ಯಮವನ್ನು ನಿಯಂತ್ರಣ ಮುಕ್ತಗೊಳಿಸುವ ಇತ್ಯಾದಿಗಳ ಬಗ್ಗೆ ಅಧ್ಯಯನ ನಡೆಸಲು ಕೇಂದ್ರ ಸರ್ಕಾರವು ರಚಿಸಿದ್ದ ಡಾ:ಸಿ.ರಂಗರಾಜನ್ ಸಮಿತಿಯು ತನ್ನ ವರದಿಯನ್ನು ಸಲ್ಲಿಸಿದ್ದು, ಈ ಕುರಿತಂತೆ ಕೇಂದ್ರ ಸರ್ಕಾರವು ಎಲ್ಲಾ ರಾಜ್ಯಗಳ ಅಭಿಪ್ರಾಯವನ್ನು ಪಡೆದು ವರದಿಯಲ್ಲಿನ ಶಿಫಾರಸ್ಸುಗಳನ್ನು ಪರಿಶೀಲಿಸುತ್ತಿದೆ. ಈ ಕುರಿತು ಕರ್ನಾಟಕ ರಾಜ್ಯವು ಈಗಾಗಲೇ ತನ್ನ ಅಭಿಪ್ರಾಯವನ್ನು ಕೇಂದ್ರ ಸರ್ಕಾರಕ್ಕೆ ನೀಡಿದೆ.

ಡಾ:ಸಿ.ರಂಗರಾಜನ್ ಸಮಿತಿಯ ವರದಿಯಲ್ಲಿ ಆದಾಯ ಹಂಚಿಕೆ ಮಾದರಿಯಲ್ಲಿ ಕಬ್ಬಿಗೆ ಬೆಲೆ ನಿಗದಿಪಡಿಸಲು ಶಿಫಾರಸ್ಸು ಮಾಡಿದ್ದು. ಇದನ್ನು ಗಮನದಲ್ಲಿಟ್ಟುಕೊಂಡು ರಾಜ್ಯ ಸರ್ಕಾರವು ಕೂಡಾ ಕಬ್ಬು ಬೆಳೆಯುವ ರೈತರಿಗೆ ಉತ್ತೇಜನಕರವಾದ ವೈಜ್ಞಾನಿಕ ಬೆಲೆ ನಿಗದಿ ಪಡಿಸಲು ಕರ್ನಾಟಕ ಕಬ್ಬು (ಖರೀದಿ ಮತ್ತು ಸರಬರಾಜು ನಿಯಂತ್ರಣ) ಅಧಿನಿಯಮ-2013ನ್ನು ಜಾರಿಗೊಳಿಸಿ ದಿನಾಂಕ:12-03-2013ರಲ್ಲಿ ಅಧಿಕೃತವಾಗಿ ಪ್ರಕಟಿಸಲಾಗಿದೆ. ಈ ಅಧಿನಿಯಮದ ಅಡಿ ಯಲ್ಲಿ ಕಬ್ಬು ನಿಯಂತ್ರಣಾ ಮಂಡಳಿಯನ್ನು ಮಾನ್ಯ ಸಕ್ಕರೆ ಸಚಿವರ ಅಧ್ಯಕ್ಷತೆಯಲ್ಲಿ ರಚಿಸಲು ಅವಕಾಶ ಕಲ್ಪಿಸಲಾಗಿದೆ. ಈ ಮಂಡಳಿಯಲ್ಲಿ ರೈತ ಪ್ರತಿನಿಧಿಗಳು ಹಾಗೂ ಸಕ್ಕರೆ ಕಾರ್ಖಾನೆಗಳ ಪ್ರತಿನಿಧಿಗಳು ಇರುವುದರಿಂದ ರೈತರಿಗೆ ಲಾಭದಾಯಕ ವೈಜ್ಞಾನಿಕ ಬೆಲೆ ನಿಗದಿ ಪಡಿಸಲು ಸಾಧ್ಯವಾಗುತ್ತದೆ.

ಈ. ಮಂಡಳಿಯ ರಚನೆಯ ಪ್ರಸ್ತಾವನೆ ಸರ್ಕಾರದ ಪರಿಶೀಲನೆಯಲ್ಲಿದ್ದು, ಅದರ ಉದ್ದೇಶಗಳನ್ನು ಈ ಕೆಳಗಿನಂತೆ ನಿಗದಿಪಡಿಸಲು ಪ್ರಸ್ತಾಪಿಸ ಲಾಗಿದೆ:-

ಎ) ಕಾರ್ಖಾನೆಗಳು ಹಾಗೂ ಕಬ್ಬು ಬೆಳೆಗಾರರ ನಡುವೆ ಆರೋಗ್ಯಕರ ಸಂಬಂಧಗಳನ್ನು ಕಾಪಾಡಿಕೊಂಡು ಬರುವ ಮಾರ್ಗೋಪಯಗಳನ್ನು ಶಿಫಾರಸ್ಸು ಮಾಡುವುದು;

ಬಿ) ಸರ್ಕಾರ ಅಥವಾ ಆಯುಕ್ತರು, ಕಬ್ಬು ಅಭಿವೃದ್ದಿ ನಿರ್ದೇಶಕರು, ಮಂಡಳಿಗೆ ಕಳುಹಿಸಿಕೊಟ್ಟಿರುವ ಯಾವುದೇ ವಿಷಯದ ಬಗ್ಗೆ ಅದರಲ್ಲೂ ವಿಶೇಷವಾಗಿ ಕಬ್ಬು ಖರೀದಿಯ ಸಂಬಂಧದಲ್ಲಿ ಸಲಹೆಗಳನ್ನು ನೀಡುವುದು;

ಸಿ) ಅಧಿನಿಯಮದ ಹಾಗೂ ಅದರ ಮೇರೆಗೆ ರಚಿಸಲಾದ ನಿಯಮಗಳ ಯಾವುದೇ ಉಪಬಂಧಗಳನ್ನು ಉಲ್ಲಂಘಿಸಿದ ಪ್ರಕರಣಗಳನ್ನು ಆಯುಕ್ತರು ಕಬ್ಬು ಅಭಿವೃದ್ದಿ ಹಾಗೂ ಸಕ್ಕರೆ ನಿರ್ದೇಶಕರ ಗಮನಕ್ಕೆ ತರುವುದು ಹಾಗೂ ಅದನ್ನು ತಡೆಗಟ್ಟಲು ಸಲಹೆ ಗಳನ್ನು ಮಾಡುವುದು;

ಡಿ) ವಿವಿಧ ಪ್ರದೇಶಗಳಲ್ಲಿ ಕಬ್ಬಿನ ತಳಿಗಳನ್ನು ಬೆಳೆಯಲು ಸೂಕ್ತವಾಗಿದೆಯೇ ಅಥವಾ ಇಲ್ಲವೇ ಎಂಬ ಬಗ್ಗೆ ಸರ್ಕಾರಕ್ಕೆ ಸಲಹೆ ನೀಡುವುದು;

ಇ) ಕಬ್ಬು ಅಭಿವೃದ್ಧಿ ಕಾರ್ಯದಲ್ಲಿ ಆಯುಕ್ತರು ಕಬ್ಬು ಅಭಿವೃದ್ಧಿ ಮತ್ತು ಸಕ್ಕರೆ ನಿರ್ದೇಶಕರಿಗೆ ಸಲಹೆ ನೀಡುವುದು;

ಎಫ್) ಸಕ್ಕರೆ, ಕಬ್ಬಿನ ಸಿಪ್ಪೆ, ಕಾಕಂಬಿ ಮತ್ತು ಫ್ರೆಸ್‌ಮಡ್‌ಗಳಿಂದ ಬರುವ ಆದಾಯವನ್ನು ಪರಿಗಣನೆಗೆ ತೆಗೆದುಕೊಂಡು ಆದಾಯ ಹಂಚಿಕೆ ಸೂತ್ರದ ಆಧಾರದ ಮೇಲೆ ಕಬ್ಬಿನ ಬೆಲೆಯನ್ನು ನಿರ್ಧರಿಸುವುದು.

## ಮೇಲುಕೋಟೆ ಪಂಚ ಕಲ್ಯಾಣಿ ಮತ್ತು ಯೋಗಾನರಸಿಂಹ ಸ್ವಾಮಿ ಬೆಟ್ಟಕ್ಕೆ ಹೋಗುವ ಮೆಟ್ಟಿಲುಗಳ ಕಾಮಗಾರಿ

**544; ಶ್ರೀ ಬಿ.ರಾಮಕೃಷ್ಣ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)**

ಅ) ಪಾಂಡವಪುರ ತಾಲ್ಲೂಕಿನ ಮೆಲುಕೋಟೆ ಪಂಚಕಲ್ಯಾಣಿ ಹಾಗೂ ಶ್ರೀ ಯೋಗಾನರಸಿಂಹ ಸ್ವಾಮಿಯ ಬೆಟ್ಟಕ್ಕೆ ಹೋಗುವ ಮೆಟ್ಟಿಲುಗಳ ಕಾಮ ಗಾರಿಯು ಕಳಪೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ ಈ ಕಾಮಗಾರಿಗಳ ಗುಣಮಟ್ಟವನ್ನು ಕಾಯ್ದುಕೊಳ್ಳಲು ಸರ್ಕಾರದ ಕ್ರಮ ಕೈಗೊಳ್ಳುವುದೇ;

ಇ) ಹಾಗಿದ್ದಲ್ಲಿ ಕಳಪೆ ಕಾಮಗಾರಿಯನ್ನು ನಿರ್ವಹಿಸುತ್ತಿರುವ ಅಧಿಕಾರಿಗಳು ಮತ್ತು ಗುತ್ತಿಗೆದಾರರ ಮೇಲೆ ಸರ್ಕಾರ ಇದುವರೆವಿಗೂ ಕ್ರಮ ಜರುಗಿಸದೇ ಇರಲು ಕಾರಣವೇನು?

**ಶ್ರೀ ಪ್ರಕಾಶ್ ಬಾಬಣ್ಣ ಹುಕ್ಕೇರಿ (ಸಣ್ಣ ಕೈಗಾರಿಕಾ, ಸಕ್ಕರೆ ಮತ್ತು ಮುಜರಾಯಿ ಸಚಿವರು**

ಅ) ಬಂದಿಲ್ಲ

ಆ) ಶ್ರೀ ಯೋಗಾನರಸಿಂಹ ಸ್ವಾಮಿ ಬೆಟ್ಟಕ್ಕೆ ಹೋಗುವ ಮೆಟ್ಟಿಲುಗಳ ನವೀ ಕರಣ ಕಾಮಗಾರಿಯ ಗುಣಮಟ್ಟ ಕಾಯ್ದುಕೊಳ್ಳಲು ಬೆಂಗಳೂರಿನ INTACH (Indian National Trust for Art and Cultural Heritage) ಸಂಸ್ಥೆಗೆ ವಹಿಸಿದ್ದು ಅವರು ಕಾಲಕಾಲಕ್ಕೆ ಬಂದು ಪರಿಶೀಲಿಸುತ್ತಿದ್ದಾರೆ.

ಇ) ಪ್ರಶ್ನೆ ಉದ್ಭವಿಸುವುದಿಲ್ಲ.

## ಗಂಜಾಂ ಶ್ರೀ ನಿಮಿಷಾಂಬ ದೇವಾಲಯಕ್ಕೆ ಮೂಲಭೂತ ಸೌಕರ್ಯ

## 280; ಶ್ರೀ ಬಿ.ರಾಕೃಷ್ಣ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)

ಅ) ಮಂಡ್ಯ ಜಿಲ್ಲೆಯ ಶ್ರೀರಂಗಪಟ್ಟಣ ತಾಲ್ಲೂಕಿನ ಗಂಜಾಂ ಗ್ರಾಮದಲ್ಲಿರುವ ಶ್ರೀ ನಿಮಿಷಾಂಬ ದೇವಾಲಯಕ್ಕೆ ಹೋಗುವ ರಸ್ತೆಗಳು ತುಂಬಾ ಶಿಥಿಲ ವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಬಂದಿದಲ್ಲಿ, ರಸ್ತೆಗಳನ್ನು ಅಭಿವೃದ್ಧಿಪಡಿಸಲು ಸರ್ಕಾರ ಕೈಗೊಂಡ ಕ್ರಮ ವೇನು;

ಇ) ಸದರಿ ದೇವಾಲಯಕ್ಕೆ ಬರುವ ಭಕ್ತಾದಿಗಳಿಗೆ ಮೂಲಭೂತ ಸೌಕರ್ಯ ಗಳು ಇಲ್ಲದೆ ಭಕ್ತಾಧಿಗಳಿಗೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಈ) ಹಾಗಿದ್ದಲ್ಲಿ ಸರ್ಕಾರ ಈ ಬಗ್ಗೆ ಕೈಗೊಂಡ ಕ್ರಮಗಳೇನು;

**ಶ್ರೀ ಪ್ರಕಾಶ್ ಬಾಬಣ್ಣ ಹುಕ್ಕೇರಿ. (ಸಣ್ಣ ಕೈಗಾರಿಕಾ, ಸಕ್ಕರೆ ಮತ್ತು ಮುಜರಾಯಿ ಸಚಿವರು)**

ಅ) ಹೌದು.

ಆ) ಪ್ರಸ್ಥಾಪಿತ ರಸ್ತೆಗಳು ಲೋಕೋಪಯೋಗಿ ಇಲಾಖೆ ಮತ್ತು ಪುರಸಭೆಗೆ ಸೇರಿದ್ದು, ಈ ರಸ್ತೆಗಳ ಅಭಿವೃದ್ದಿಗೆ ತ್ವರಿತ ಕ್ರಮ ವಹಿಸುವಂತೆ ಕೋರಿ ಸದರಿ ಇಲಾಖೆಗಳಿಗೆ ಪತ್ರ ವ್ಯವಹಾರ ನಡೆಸಲಾಗುವುದು.

ಇ) ಮೂಲಭೂತ ಸೌಕರ್ಯಗಳನ್ನು ಒದಗಿಸಲಾಗಿದೆ.

ಈ) ಸದರಿ ದೇವಾಲಯಕ್ಕೆ ಬರುವ ಭಕ್ತಾದಿಗಳಿಗೆ ಮೂಲಭೂತ ಸೌಕರ್ಯ ಒದಗಿಸುವ ನಿಟ್ಟಿನಲ್ಲಿ ಆಧುನಿಕ ಶೌಚಾಲಯಗಳ ನಿರ್ಮಾಣ ಕುಡಿ ಯುವ ನೀರಿನ ವ್ಯವಸ್ಥೆ ನದಿ ತೀರದಲ್ಲಿ ಬಟ್ಟೆ ಬದಲಾಯಿಸುವ ಕೊಠಡಿ ಗಳು, ದೇವಾಲಯದಲ್ಲಿ ದರ್ಶನಕ್ಕೆ ಸರದಿ ಸಾಲಿನಲ್ಲಿ ನಿಲ್ಲುವ ಭಕ್ತಾಧಿ

ಗಳಿಗೆ ನೆರಳಿನ ವ್ಯವಸ್ಥೆ, ಭಕ್ತಾದಿಗಳಿಗೆ ಸೇವೆಗಳ ಮಾಹಿತಿ ನೀಡಲು ಸೇವಾ ಕೌಂಟರ್‌ನಲ್ಲಿ ಗಣಕಯಂತ್ರದ ವ್ಯವಸ್ಥೆ ಮಾಡಲಾಗಿದೆ.

**ಏತ ನೀರಾವರಿ ಯೋಜನೆಗಳ ಬಗ್ಗೆ**

**546; ಶ್ರೀ ಬಿ.ರಾಮಕೃಷ್ಣ(ಸ್ಥಳೀಯ ಸಂಸ್ಥೆಗಳ ಕ್ಷೇತ್ರ)**

ಅ. ಮದ್ದೂರು ತಾಲ್ಲೂಕಿನ ಶಿಂಷಾ ನದಿಗೆ ಒಳಪಡುವ ಗ್ರಾಮಗಳಿಗೆ ಏತ ನೀರಾವರಿ ಯೋಜನೆಗಳನ್ನು ಅನುಷ್ಠಾನಗೊಳಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ;

ಆ. ಹಾಗಿದ್ದಲ್ಲಿ ಮದ್ದೂರು ತಾಲ್ಲೂಕಿನ ಯಾವ ಯಾವ ಗ್ರಾಮಗಳನ್ನು ಗುರುತಿಸಲಾಗಿದೆ;

ಇ. ಶಿಂಷಾ ನದಿಯ ವ್ಯಾಪ್ತಿಯಲ್ಲಿ ಅನುಷ್ಠಾನಗೊಳಿಸುತ್ತಿರುವ ಯೋಜನೆಗಳು ಯಾವುವು;

ಈ. ಈ ಯೋಜನೆಗಳಲ್ಲಿ ಪೂರ್ಣಗೊಂಡಿರುವ ಮತ್ತು ಅಪೂರ್ಣಗೊಂಡಿರುವ ಯೋಜನೆಗಳು ಯಾವುವು? (ವಿವರಗಳನ್ನು ನೀಡುವುದು);

ಉ. ಮದ್ದೂರು ತಾಲ್ಲೂಕಿನ ಸೋಮನಹಳ್ಳಿ ತೈಲೂರು ಕೆ.ಹೊನ್ನಲಗೆರೆ, ತೊಪ್ಪನಹಳ್ಳಿ, ಕೆ.ಬೆಳ್ಳೂರು, ಅಣ್ಣಹಳ್ಳಿದೊಡ್ಡಿ, ಕೂಳಗೆರೆ ಹಾಗೂ ಇತರೆ ಗ್ರಾಮಗಳ ಕೆರೆಗಳಿಗೆ ಶಿಂಷಾ ನದಿಯಿಂದ ನೀರು ತುಂಬಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ;

ಊ. ಹಾಗಿದ್ದಲ್ಲಿ, ಮದ್ದೂರು ತಾಲ್ಲೂಕಿನ ಯಾವ ಯಾವ ಗ್ರಾಮಗಳನ್ನು ಈ ಯೋಜನೆಗೆ ಗುರುತಿಸಲಾಗಿದೆ? (ವಿವರಗಳನ್ನು ನೀಡುವುದು);

**ಶ್ರೀ ಎಂ.ಬಿ.ಪಾಟೀಲ್(ಜಲಸಂಪನ್ಮೂಲ ಸಚಿವರು)**

ಅ. ಮದ್ದೂರು ತಾಲ್ಲೂಕಿನ ಶಿಂಷಾ ನದಿಯ ಅಕ್ಕಪಕ್ಕದ ಹಲವು ಗ್ರಾಮಗಳಿಗೆ ಅನುಕೂಲವಾಗುವಂತೆ ಹಲವು ಏತ ನೀರಾವರಿ ಯೋಜನೆಗಳನ್ನು ಕಾವೇರಿ ನೀರಾವರಿ ನಿಗಮದಿಂದ ಅನುಷ್ಠಾನಗೊಳಿಸಲಾಗಿದ್ದು

/ ಅನುಷ್ಠಾನಗೊಳಿಸಲಾಗುತ್ತಿದ್ದು, ಅವುಗಳ ವಿವರ ವನ್ನು ಅನುಬಂಧ ದಲ್ಲಿ ಒದಗಿಸಿದೆ.

ಆ. ಕಾವೇರಿ ನೀರಾವರಿ ನಿಗಮದ ವ್ಯಾಪ್ತಿಯಲ್ಲಿ ಬರುವ ಈ ಏತ ನೀರಾವರಿ ಯೋಜನೆಗಳಿಂದ ಸೌಲಭ್ಯ ಪಡೆಯುವ ಮದ್ದೂರು ತಾಲ್ಲೂಕಿನ ಗ್ರಾಮಗಳನ್ನು ಅನುಬಂಧದಲ್ಲಿ ಒದಗಿಸಲಾಗಿದೆ.

ಇ. ಶಿಂಷಾ ನದಿ ವ್ಯಾಪ್ತಿಯಲ್ಲಿ 20 ಏತ ನೀರಾವರಿ ಯೋಜನೆಗಳು ಕಾವೇರಿ ನೀರಾವರಿ ನಿಗಮದ ಅಡಿಯಲ್ಲಿ ಬರುತ್ತಿದ್ದು, ಅನುಷ್ಠಾನದ ವಿವರಗಳನ್ನು ಅನುಬಂಧದಲ್ಲಿ ಒದಗಿಸಲಾಗಿದೆ.

ಈ. ಶಿಂಷಾ ನದಿ ಪಾತ್ರದಲ್ಲಿ ಬರುವ 20 ಏತ ನೀರಾವರಿ ಯೋಜನೆಗಳ ಪೈಕಿ 18 ಯೋಜನೆಗಳು ಪೂರ್ಣಗೊಂಡಿದ್ದು, 1 ಯೋಜನೆಯು ಸ್ಥಗಿತಗೊಂಡಿದ್ದು ಹಾಗೂ ಮತ್ತೊಂದು ಯೋಜನೆಯನ್ನು ಕೈಗೆತ್ತಿ ಕೊಂಡಿರುವುದಿಲ್ಲ. ಪೂರ್ಣಗೊಂಡಿರುವ 18 ಯೋಜನೆಗಳ ಪೈಕಿ 11 ಯೋಜನೆಗಳು ಕಾರ್ಯನಿರ್ವಹಿಸುತ್ತಿವೆ. ಉಳಿದ 7 ಯೋಜನೆಗಳು ಸ್ಥಗಿತಗೊಂಡಿವೆ. ವಿವರಗಳನ್ನು ಅನುಬಂಧದಲ್ಲಿ ಒದಗಿಸಲಾಗಿದೆ.

ಉ. ಮದ್ದೂರು ತಾಲ್ಲೂಕಿನ ಸೋಮನಹಳ್ಳಿ ತೈಲೂರು ಕೆರೆಗಳಿಗೆ ಶಿಂಷಾ ಎಡದಂಡೆ ನಾಲೆಯಿಂದ ನೀರನ್ನು ಹರಿಸಿ, ಕೆರೆಗಳನ್ನು ತುಂಬಿಸಲಾಗುತ್ತಿದೆ.

ಊ. ಸೋಮನಹಳ್ಳಿ ಕೆರೆಯಿಂದ ಸೋಮನಹಳ್ಳಿ ಗ್ರಾಮ ಹಾಗೂ ತೈಲೂರು ಕೆರೆಯಿಂದ ತೈಲೂರು, ಕೋಡಿಹಳ್ಳಿ ಮತ್ತು ಬೂಡುಗುಪ್ಪೆ ಗ್ರಾಮಗಳು ಉಪಯೋಗ ಪಡೆಯುತ್ತಿವೆ.

## ಶಿಂಷಾ ನದಿ ಪಾತ್ರದಲ್ಲಿ ಬರುವ ಏತ ನೀರಾವರಿ ಯೋಜನೆಗಳ ವಿವರಗಳು

| ಕ್ರ. ಸಂ. | ಏತ ನೀರಾವರಿ ಯೋಜನೆಯ ಹೆಸರು | ಪ್ರಸ್ತುತ ಹಂತ | ಅಚ್ಚುಕಟ್ಟು (ಎಕರೆಗಳಲ್ಲಿ) | ತಾಲ್ಲೂಕು | ಪ್ರಯೋಜನ ಪಡೆಯುವ ಗ್ರಾಮಗಳು | ಷರಾ |
|---|---|---|---|---|---|---|
| 1 | ಹೆಮ್ಮನಹಳ್ಳಿ ಏತ ನೀರಾವರಿ ಯೋಜನೆ | ಪೂರ್ಣಗೊಂಡಿದೆ | 840 | ಮದ್ದೂರು | ಹೆಮ್ಮನಹಳ್ಳಿ ಮತ್ತು ಕಗ್ಗಲಿಪುರ | ಚಾಲನೆಯಲ್ಲಿರುತ್ತದೆ |
| 2 | ಬೂದಗೂಪ್ಪೆ ಏತ ನೀರಾವರಿ ಯೋಜನೆ | ಪೂರ್ಣಗೊಂಡಿದೆ | 865 | ಮದ್ದೂರು | ಬೂದಗೂಪ್ಪೆ | ಚಾಲನೆಯಲ್ಲಿರುತ್ತದೆ |
| 3 | ಕಬ್ಬಾರೆ ಏತ ನೀರಾವರಿ ಯೋಜನೆ | ಪೂರ್ಣಗೊಂಡಿದೆ | 350 | ಮದ್ದೂರು | ಕಬ್ಬಾರೆ | ಚಾಲನೆಯಲ್ಲಿರುತ್ತದೆ |
| 4 | ಬಾಣೋಜಿಪಂಥ್ ಏತ ನೀರಾವರಿ ಯೋಜನೆ | ಪೂರ್ಣಗೊಂಡಿದೆ | 631 | ಮದ್ದೂರು | ನೀಲಕಂಠನಹಳ್ಳಿ, ಕೆ.ಹೊನ್ನಲಗೆರೆ, ರಾಜೇಗೌಡನದೊಡ್ಡಿ | ಚಾಲನೆಯಲ್ಲಿರುತ್ತದೆ |
| 5 | ಇಗ್ಗಲೂರು 'ಎ' ಬಿಂದು ಏತ ನೀರಾವರಿ ಯೋಜನೆ | ಪೂರ್ಣಗೊಂಡಿದೆ | 2204 | ಮದ್ದೂರು | ಬನ್ನಹಳ್ಳಿ, ಕೆ.ಬೆಳ್ಳೂರು, ಕೂಳಗೆರೆ, ಅರಿವಿನಹಳ್ಳಿ, ಕೋತಿಪುರ, ಅನ್ನಹಳ್ಳಿದೊಡ್ಡಿ | ಚಾಲನೆಯಲ್ಲಿರುತ್ತದೆ |

| | | | | | | |
|---|---|---|---|---|---|---|
| 6 | ಹಳೇಹಳ್ಳಿ ಏತ ನೀರಾವರಿ ಯೋಜನೆ | ಪೂರ್ಣಗೊಂಡಿದೆ | 309 | ಮದ್ದೂರು | ಹಳೇಹಳ್ಳಿ | ನದಿಯ ಪಾತ್ರದಲ್ಲಿ ನಿರಂತರವಾಗಿ ನಡೆಯುತ್ತಿರುವ ಮರುಳು ಗಣಿಗಾರಿಕೆಯಿಂದ ಮತ್ತು ಏರು ಕೊಳವೆ ಮಾರ್ಗದಲ್ಲಿ ನ್ಯೂನ್ಯತೆ ಕಂಡುಬಂದ ಹಿನ್ನೆಲೆಯಲ್ಲಿ ಯೋಜನಾ ಘಟಕಕ್ಕೆ ನೀರು ಸಮರ್ಪಕವಾಗಿ ದೊರಕುತ್ತಿರುವುದಿಲ್ಲ ಇದರಿಂದಾಗಿ ಯೋಜನೆಯು ಚಾಲನೆಯಲ್ಲಿರುವುದಿಲ್ಲ. |
| 7 | ಮೂಡ್ಯ ಏತ ನೀರಾವರಿ ಯೋಜನೆ | ಪೂರ್ಣಗೊಂಡಿದೆ | 498 | ಮದ್ದೂರು | ಮೂಡ್ಯ | ನದಿಯ ಪಾತ್ರದಲ್ಲಿ ನಿರಂತರವಾಗಿ ನಡೆಯುತ್ತಿರುವ ಮರುಳು ಗಣಿಗಾರಿಕೆಯಿಂದ ಮತ್ತು ಏರು ಕೊಳವೆ ಮಾರ್ಗದಲ್ಲಿ ನ್ಯೂನ್ಯತೆ ಕಂಡುಬಂದ ಹಿನ್ನೆಲೆಯಲ್ಲಿ ಯೋಜನಾ ಘಟಕಕ್ಕೆ ನೀರು ಸಮರ್ಪಕವಾಗಿ ದೊರಕುತ್ತಿರುವುದಿಲ್ಲ ಇದರಿಂದಾಗಿ ಯೋಜನೆಯು ಚಾಲನೆಯಲ್ಲಿರುವುದಿಲ್ಲ. |
| 8 | ಬೆಕ್ಕಳಲೆ ಏತ | ಪೂರ್ಣಗೊಂಡಿದ್ದು | 506 | ಮದ್ದೂರು | ಬೆಕ್ಕಳಲೆ | ನದಿಯ ಪಾತ್ರದಲ್ಲಿ |

| | | | | | | |
|---|---|---|---|---|---|---|
| | ನೀರಾವರಿ ಯೋಜನೆ | ಸ್ಥಗಿತಗೊಂಡಿರುತ್ತದೆ | | | | ನಿರಂತರವಾಗಿ ನಡೆಯುತ್ತಿರುವ ಮರುಳು ಗಣಿಗಾರಿಕೆಯಿಂದ ಮತ್ತು ಏರು ಕೊಳವೆ ಮಾರ್ಗದಲ್ಲಿ ನ್ಯೂನ್ಯತೆ ಕಂಡುಬಂದ ಹಿನ್ನೆಲೆಯಲ್ಲಿ ಯೋಜನಾ ಘಟಕಕ್ಕೆ ನೀರು ಸಮರ್ಪಕವಾಗಿ ದೊರಕುತ್ತಿರುವುದಿಲ್ಲ ಇದರಿಂದಾಗಿ ಯೋಜನೆಯು ಚಾಲನೆಯಲ್ಲಿರುವುದಿಲ್ಲ. |
| 9 | ಯಡವನಹಳ್ಳಿ ಏತ ನೀರಾವರಿ ಯೋಜನೆ | ಪೂರ್ಣಗೊಂಡಿದ್ದು ಸ್ಥಗಿತಗೊಂಡಿರುತ್ತದೆ | 532 | ಮದ್ದೂರು | ಯಡವನಹಳ್ಳಿ, ಕೌಡ್ಲೆ ಮತ್ತು ನಾಗನಹಳ್ಳಿ | ನದಿಯ ಪಾತ್ರದಲ್ಲಿ ನಿರಂತರವಾಗಿ ನಡೆಯುತ್ತಿರುವ ಮರುಳು ಗಣಿಗಾರಿಕೆಯಿಂದ ಮತ್ತು ಏರು ಕೊಳವೆ ಮಾರ್ಗದಲ್ಲಿ ನ್ಯೂನ್ಯತೆ ಕಂಡುಬಂದ ಹಿನ್ನೆಲೆಯಲ್ಲಿ ಯೋಜನಾ ಘಟಕಕ್ಕೆ ನೀರು ಸಮರ್ಪಕವಾಗಿ ದೊರಕುತ್ತಿರುವುದಿಲ್ಲ ಇದರಿಂದಾಗಿ ಯೋಜನೆಯು ಚಾಲನೆಯಲ್ಲಿರುವುದಿಲ್ಲ. |
| 10 | ಸೋಮನಹಳ್ಳಿ ಏತ ನೀರಾವರಿ | ಪೂರ್ಣಗೊಂಡಿದ್ದು ಸ್ಥಗಿತಗೊಂಡಿರುತ್ತದೆ | 650 | ಮದ್ದೂರು | ಸೋಮನಹಳ್ಳಿ | ಬೆಂಗಳೂರು – ಮೈಸೂರು ಹೆದ್ದಾರಿಯನ್ನು |

| | | | | | | |
|---|---|---|---|---|---|---|
| | ಯೋಜನೆ | | | | | ಮೇಲ್ದರ್ಜೆಗೇರಿಸುವ ಸಮಯದಲ್ಲಿ ಈ ಯೋಜನೆಯ ಏರುಕೊಳವೆ ಮಾರ್ಗವು ಹಾನಿಗೊಂಡಿರುತ್ತದೆ. ಪ್ರಸ್ತುತ ಈ ಯೋಜನೆಯಡಿಯಲ್ಲಿ ಬರುವ ಅಚ್ಚುಕಟ್ಟಿಗೆ ಶಿಂಷಾ ಎಡದಂಡೆ ನಾಲೆಯಿಂದ ನೀರೊದಗಿಸಲಾಗುತ್ತಿದೆ. |
| 11 | ಕೆ. ಕೋಡಿಹಳ್ಳಿ ಏತ ನೀರಾವರಿ ಯೋಜನೆ | ಪೂರ್ಣಗೊಂಡಿದ್ದು ಸ್ಥಗಿತಗೊಂಡಿರುತ್ತದೆ | 1359 | ಮದ್ದೂರು | ಕೆ. ಕೋಡಿಹಳ್ಳಿ | ಈ ಯೋಜನೆಯಡಿಯಲ್ಲಿ ಬರುವ ಅಚ್ಚುಕಟ್ಟಿಗೆ ಶಿಂಷಾ ಎಡದಂಡೆ ನಾಲೆಯಿಂದ ನೀರೊದಗಿಸಲಾಗುತ್ತಿದೆ. ಆದುದರಿಂದ ಈ ಯೋಜನೆಯ ಅವಶ್ಯಕತೆ ಇರುವುದಿಲ್ಲ. |
| 12 | ಹುಲಿಕೆರೆ ಏತ ನೀರಾವರಿ ಯೋಜನೆ | ಪೂರ್ಣಗೊಂಡಿದ್ದು ಸ್ಥಗಿತಗೊಂಡಿರುತ್ತದೆ | 120 | ಮದ್ದೂರು | ಹುಲಿಕೆರೆ, ಹಳ್ಳಿಕೆರೆ ಮತ್ತು ಚುಂಚುಗಾನಹಳ್ಳಿ | ನದಿಯ ಪಾತ್ರದಲ್ಲಿ ನಿರಂತರವಾಗಿ ನಡೆಯುತ್ತಿರುವ ಮರುಳು ಗಣಿಗಾರಿಕೆಯಿಂದ ಮತ್ತು ಏರು ಕೊಳವೆ ಮಾರ್ಗದಲ್ಲಿ ನ್ಯೂನ್ಯತೆ ಕಂಡುಬಂದ ಹಿನ್ನೆಲೆಯಲ್ಲಿ ಯೋಜನಾ ಘಟಕಕ್ಕೆ ನೀರು ಸಮರ್ಪಕವಾಗಿ ದೊರಕುತ್ತಿರುವುದಿಲ್ಲ |

| | | | | | | |
|---|---|---|---|---|---|---|
| | | | | | | ಇದರಿಂದಾಗಿ ಯೋಜನೆಯು ಚಾಲನೆಯಲ್ಲಿರುವುದಿಲ್ಲ. |
| 13 | ಆಲೂರು ದೊಡ್ಡಿ ಏತ ನೀರಾವರಿ ಯೋಜನೆ | ಸ್ಥಗಿತಗೊಂಡಿರುತ್ತದೆ (ಪೂರ್ಣಗೊಂಡಿರುವುದಿಲ್ಲ) | 370 | ಮದ್ದೂರು | ಆಲೂರು, ಆಲೂರು ದೊಡ್ಡಿ ಮತ್ತು ಬೂದುಗುಪ್ಪೆ | ಶೀಟ್‌ರಾಕ್ ಇರುವ ಕಾರಣದಿಂದಾಗಿ ಜಾಕ್‌ವೆಲ್‌ನ ಮಟ್ಟವನ್ನು ವಿನ್ಯಾಸಿತ ಮಟ್ಟಕ್ಕೆ ಇಳಿಸಲು ಸಾಧ್ಯವಾಗಿರುವುದಿಲ್ಲ. |
| 14 | ಕೆಸ್ತೂರು ಏತ ನೀರಾವರಿ ಯೋಜನೆ | – | 442 | ಮದ್ದೂರು | ಕೆಸ್ತೂರು | ಸ್ಥಳೀಯ ಸಮಸ್ಯೆಯಿಂದಾಗಿ ಈ ಯೋಜನೆಯನ್ನು ಕೈಗೆತ್ತಿಕೊಂಡಿರುವುದಿಲ್ಲ |
| 15 | ಇಗ್ಗಲೂರು 'ಬಿ' ಬಿಂದು ಏತ ನೀರಾವರಿ ಯೋಜನೆ | ಪೂರ್ಣಗೊಂಡಿದೆ | 1350 | ಮಳವಳ್ಳಿ | ಬನ್ನಹಳ್ಳಿ, ಕೆ.ಬೆಳ್ಳೂರು, ಕೂಳಗೆರೆ, ಅರಿವಿನಹಳ್ಳಿ, ಕೋತಿಪುರ, ಅನ್ನಹಳ್ಳಿದೊಡ್ಡಿ ಮತ್ತು ಇಗ್ಗಲೂರು | ಚಾಲನೆಯಲ್ಲಿರುತ್ತದೆ |
| 16 | ಇಗ್ಗಲೂರು 'ಸಿ' ಬಿಂದು ಏತ ನೀರಾವರಿ ಯೋಜನೆ | ಪೂರ್ಣಗೊಂಡಿದೆ | 1255 | ಚನ್ನಪಟ್ಟಣ | ಇಗ್ಗಲೂರು, ಸರಗೂರು ಮತ್ತು ನೇರಳೂರು | ಚಾಲನೆಯಲ್ಲಿರುತ್ತದೆ |
| 17 | ಇಗ್ಗಲೂರು 'ಸಿ–??' ಬಿಂದು ಏತ ನೀರಾವರಿ ಯೋಜನೆ | ಪೂರ್ಣಗೊಂಡಿದೆ | 1000 | ಚನ್ನಪಟ್ಟಣ | ಇಗ್ಗಲೂರು ಮತ್ತು ನೇರಳೂರು | ಚಾಲನೆಯಲ್ಲಿರುತ್ತದೆ |

| | | | | | | |
|---|---|---|---|---|---|---|
| 18 | ಇಗ್ಗಲೂರು 'ಡಿ' ಬಿಂದು ಏತ ನೀರಾವರಿ ಯೋಜನೆ | ಪೂರ್ಣಗೊಂಡಿದೆ | 1890 | ಚನ್ನಪಟ್ಟಣ ಮಳವಳ್ಳಿ | ನಿಡಗೋಡಿ, ಸಾವಂಡಿಪುರ, ಗೋವಾಪುರ, ವೈ.ಟಿ.ಹಳ್ಳಿ, ಸರಗೂರು, ಸಾಗ್ಯ | ಚಾಲನೆಗೊಳಿಸಲಾಗಿದೆ. |
| 19 | ನಿಟ್ಟೂರು ಏತ ನೀರಾವರಿ ಯೋಜನೆ | ಪೂರ್ಣಗೊಂಡಿದೆ | 164 | ಮಳವಳ್ಳಿ | ನಿಟ್ಟೂರು ಮತ್ತು ಎನ್.ಕೋಡಿಹಳ್ಳಿ | ಚಾಲನೆಯಲ್ಲಿರುತ್ತದೆ |
| 20 | ಗರಕಹಳ್ಳಿ ಏತ ನೀರಾವರಿ ಯೋಜನೆ | ಪೂರ್ಣಗೊಂಡಿದೆ | 1861 | ಚನ್ನಪಟ್ಟಣ | ನೇರಳೂರು, ನುಣ್ಣೂರು, ಪುಟ್ಟಪ್ಪನದೊಡ್ಡಿ, ಗರಕಹಳ್ಳಿ, ಮೆಂಗಳ್ಳಿ, ಸುಳ್ಳೇರಿ, ಎ.ವಿ.ಹಳ್ಳಿ, ಕೃಷ್ಣಾಪುರ, ಹಾರೋಹಳ್ಳಿ, ಸೋಗಾಲ, ಸೋಗಾಲಪಾಳ್ಯ, ಹಾರೊಕುಪ್ಪ, ಸಾದಹಳ್ಳಿ, ನಾರಾಯಣ, ತಿಮ್ಮನದೊಡ್ಡಿ, ಅಂಕುಶನಹಳ್ಳಿ, ಗಿಜ್ಜಗದಾಸನಹಳ್ಳಿ, ಖಾಲಿಕೆರೆ, ಮಾದಾಪುರ, ಬಾಣಂತನಹಳ್ಳಿ | ಚಾಲನೆಗೊಳಿಸಲಾಗಿದೆ. |

## ವೈದ್ಯನಾಥಪುರ ದೇವಸ್ಥಾನಕ್ಕೆ ಶಿಂಷಾನದಿಯ ಕಲುಷಿತ ನೀರು ಹೋಗುತ್ತಿರುವ ಬಗ್ಗೆ

### 557; ಶ್ರೀ ಬಿ.ರಾಮಕೃಷ್ಣ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)

ಅ. ಮದ್ದೂರು ತಾಲ್ಲೂಕು ವೈದ್ಯನಾಥಪುರ ದೇವಸ್ಥಾನದ ಬಳಿ ಹರಿಯುವ ಶಿಂಷಾ ನದಿಯ ನೀರು ತ್ಯಾಜ್ಯ ವಸ್ತುಗಳಿಂದ ಕಲುಷಿತಗೊಳ್ಳುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ. ಹಾಗಿದ್ದಲ್ಲಿ, ಶಿಂಷಾ ನದಿಗೆ ಸೇರುವ ವಸ್ತು ಹಾಗೂ ಕಲುಷಿತ ನೀರನ್ನು ತಡೆಯಲು ಸರ್ಕಾರ ಕ್ರಮ ಕೈಗೊಳ್ಳುವುದೇ;

ಇ. ಈ ಕಲುಷಿತ ನೀರಿನಿಂದ ದೇವಸ್ಥಾನಕ್ಕೆ ಬರುವ ಭಕ್ತಾಧಿಗಳಿಗೆ ತೊಂದರೆಯಾಗುತ್ತಿದ್ದು, ಇದನ್ನು ಸರಿಪಡಿಸಲು ಸರ್ಕಾರ ಕ್ರಮ ಕೈಗೊಳ್ಳುವುದೇ;

### ಶ್ರೀ ಎಂ.ಬಿ.ಪಾಟೀಲ್(ಜಲಸಂಪನ್ಮೂಲ ಸಚಿವರು)

ಅ. ಮದ್ದೂರು ತಾಲ್ಲೂಕಿನಲ್ಲಿ ಹರಿಯುವ ಶಿಂಷಾ ನದಿಯ ನೀರು ತ್ಯಾಜ್ಯ ವಸ್ತುಗಳಿಂದ ಕಲುಷಿತಗೊಳ್ಳುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆ.

ಆ. ಕಾವೇರಿ ನೀರಾವರಿ ನಿಗಮದ ಅಡಿಯಲ್ಲಿ ಬರುವ ಕೆಮ್ಮಣ್ಣು ನಾಲೆ, ಬೈರನ್ ನಾಲೆ ಮತ್ತು ವೈದ್ಯನಾಥಪುರ ನಾಲೆಗಳು ಶಿಂಷಾ ನದಿಗೆ ಸೇರುತ್ತಿದ್ದು, ಈ ನಾಲೆಗಳಿಗೆ ಮದ್ದೂರು ಪಟ್ಟಣದ ಕಲುಷಿತ ನೀರು ಹಾಗು ಘನ ತ್ಯಾಜ್ಯಗಳನ್ನು ಬಿಡುತ್ತಿರುತ್ತಾರೆ. ಇದನ್ನು ತಡೆಗಟ್ಟಲು ಸಹಾಯಕ ಕಾರ್ಯಪಾಲಕ ಇಂಜಿನಿಯರ್, ನಂ.3, ವಿಶ್ವೇಶ್ವರಯ್ಯ ನಾಲಾ ಉಪವಿಭಾಗ, ಮಂಡ್ಯ, ಇವರು ಪರಿಸರ ಮತ್ತು ಮಾಲಿನ್ಯ ನಿಯಂತ್ರಣ ಮಂಡಳಿಗೆ ಪತ್ರ ಬರೆದಿದ್ದು, ಕಂದಾಯ ಇಲಾಖೆಯ ಅಧಿಕಾರಿಗಳಿಗೆ ಹಾಗೂ ಮದ್ದೂರು ಪುರಸಭೆಗೂ ಸಹ ತಿಳಿಸಿರುತ್ತಾರೆ.

ಇ. ಈ ಬಗ್ಗೆ ಮದ್ದೂರು ಪುರಸಭೆಯ ವತಿಯಿಂದ ಕ್ರಮ ಕೈಗೊಳ್ಳಬೇಕಾಗಿರುತ್ತದೆ. ಜಿಲ್ಲಾಡಳಿತಕ್ಕೆ ಈ ಕುರಿತಂತೆ ಸೂಕ್ತ ಕ್ರಮ ಕೈಗೊಳ್ಳಲು ಸೂಚಿಸಲಾಗುವುದು.

**ಹಿಂದಿನ ಆಯವ್ಯಯದಲ್ಲಿ ಹಿಂದುಳಿದ ಮಠಗಳಿಗೆ ಬಿಡುಗಡೆ ಮಾಡಿದ ಹಣ**

**346; ಶ್ರೀ ಎಂ.ಡಿ.ಲಕ್ಷ್ಮೀನಾರಾಯಣ(ನಾಮನಿರ್ದೇಶನ ಹೊಂದಿದವರು)**

ಅ. ರಾಜ್ಯದಲ್ಲಿರುವ ಹಿಂದುಳಿದ ಮಠಗಳಿಗೆ ಕಳೆದ ಆಯವ್ಯಯದಲ್ಲಿ ಭರವಸೆ ನೀಡಲಾಗಿದ್ದ ಮಠಗಳು ಯಾವುವು? ಎಷ್ಟು ಅನುದಾನ ನೀಡುವುದಾಗಿ ಭರವಸೆ ನೀಡಲಾಗಿತ್ತು.

ಆ. ಎಷ್ಟು ಮಠಗಳಿಗೆ ಅನುದಾನ ಬಿಡುಗಡೆಯಾಗಿದೆ;

ಇ. ಉಳಿದ ಮಠಗಳಿಗೆ ಯಾವಾಗ ಅನುದಾನ ಬಿಡುಗಡೆ ಮಾಡಲಾಗುವುದು;

ಈ. ಈ ವರ್ಷದ ಆಯವ್ಯಯದಲ್ಲಿ ಎಷ್ಟು ಮಠಗಳಿಗೆ ಅನುದಾನ ನೀಡಲಾಗುವುದು ಅವು ಯಾವುವು;

**ಶ್ರೀ ಪ್ರಕಾಶ್ ಬಾಬಣ್ಣ ಹುಕ್ಕೇರಿ (ಸಣ್ಣ ಕೈಗಾರಿಕೆ, ಸಕ್ಕರೆ ಮತ್ತು ಮುಜರಾಯಿ ಸಚಿವರು)**

ಅ. 2012–13ನೇ ಸಾಲಿನ ಆಯವ್ಯಯದಲ್ಲಿ ಈ ಕೆಳಕಂಡ ನಾಲ್ಕು ಮಠಗಳಿಗೆ ಅವುಗಳ ಮುಂದೆ ನಮೂದಿಸಿರುವ ಮೊತ್ತವನ್ನು ಅನುದಾನವನ್ನಾಗಿ ನೀಡುವ ಬಗ್ಗೆ ಘೋಷಣೆ ಮಾಡಲಾಗಿತ್ತು.

| ಮುಂಗಡ ಪತ್ರದ ಕ್ರ.ಸಂ. | ಘೋಷಣೆಯಾದ ಮಠದ ಹೆಸರು | ಘೋಷಣೆ ಮೊತ್ತ (ರೂ.ಲಕ್ಷಗಳಲ್ಲಿ) |
|---|---|---|
| 225 | ಕೊಪ್ಪಳ ನಗರದ ಗವಿಸಿದ್ದೇಶ್ವರ ಮಠಕ್ಕೆ ₹ 50.000ಲಕ್ಷಗಳ ಅನುದಾನ ಒದಗಿಸಲಾಗುವುದು | 50.00 |

| | | |
|---|---|---|
| 226 | ಕೂಡಲ ಸಂಗಮ ಲಿಂಗಾಯಿತ ಪಂಚಮಸಾಲಿ ಪೀಠಕ್ಕೆ ₹ 2.00 ಕೋಟಿ ಅನುದಾನ ನೀಡಲಾಗುವುದು. | 200.00 |
| 226 | ತಿಪಟೂರು ತಾಲ್ಲೂಕಿನ ಶ್ರೀ ಕಾಡಸಿದ್ದೇಶ್ವರ ಮಠಕ್ಕೆ ₹1.00ಕೋಟಿಗಳ ಅನುದಾನವನ್ನು ನಿಡುವ ಬಗ್ಗೆ | 100.00 |
| 227 | ಬೆಂಗಳೂರು ಕಂಗೇರಿ ಬಳಿ ಇರುವ ರಾಮೋಹಳ್ಳಿಯಲ್ಲಿ ಸ್ಥಾಪಿಸಲಿರುವ ತರಬೇತಿ ಹಾಗೂ ಸಂಶೋಧನಾ ಕೇಂದ್ರಕ್ಕಾಗಿ ಸಿದಾರೂಡ ಮಿಷನ್‌ಗೆ ₹ 1.00 ಅನುದಾನ ನೀಡುವ ಬಗ್ಗೆ | 100.00 |
| | **ಒಟ್ಟು** | **450.00** |

ಆ. 2013–13ನೇ ಸಾಲಿನ ಆಯವ್ಯಯದಲ್ಲಿ ಅನುದಾನ ಬಿಡುಗಡೆ ಮಾಡುವ ಬಗ್ಗೆ ಘೋಷಣೆಯಾಗಿರುವ ಎಲ್ಲಾ ಸಾಲ್ಕು ಮಠಗಳಿಗೆ ಈ ಕೆಳಕಂಡಂತೆ ಅನುದಾನ ಬಿಡುಗಡೆ ಮಾಡಲಾಗಿದೆ.

| **ಮುಂಗಡ ಪತ್ರದ ಕ್ರ.ಸಂ.** | **ಘೋಷಣೆಯಾದ ಮಠದ ಹೆಸರು** | **ಬಿಡುಗಡೆ ಮಾಡಿರುವ ಅನುದಾನ (ರೂ.ಲಕ್ಷಗಳಲ್ಲಿ)** |
|---|---|---|
| 225 | ಕೊಪ್ಪಳ ನಗರದ ಗವಿಸಿದ್ದೇಶ್ವರ ಮಠ | 50.00 |
| 226 | ಕೂಡಲ ಸಂಗಮ ಲಿಂಗಾಯಿತ ಪಂಚಮಸಾಲಿ ಪೀಠ | 50.00 |
| 226 | ತಿಪಟೂರು ತಾಲ್ಲೂಕಿನ ಶ್ರೀ | 50.00 |

| | | |
|---|---|---|
| | ಕಾಡಸಿದ್ಧೇಶ್ವರ ಮಠ | |
| 227 | ಬೆಂಗಳೂರು ಕಂಗೇರಿ ಬಳಿ ಇರುವ ರಾಮೋಹಳ್ಳಿಯಲ್ಲಿ ಸ್ಥಾಪಿಸಲಿರುವ ತರಬೇತಿ ಹಾಗೂ ಸಂಶೋಧನಾ ಕೇಂದ್ರಕ್ಕಾಗಿ ಸಿದಾರೂಡ ಮಿಷನ್ | 50.00 |
| | **ಒಟ್ಟು** | **200.00** |

ಇ. ಪ್ರಶ್ನೆ ಉದ್ಭವಿಸುವುದಿಲ್ಲ.

ಈ. ಜುಲೈ 2013ರಲ್ಲಿ ಮಂಡಿಸಲಾದ ಆಯವ್ಯಯದ ಭಾಷಣದಲ್ಲಿ ಮಠಗಳಿಗೆ ಅನುದಾನ ಘೋಷಣೆ ಮಾಡಿರುವುದಿಲ್ಲ.

**ನೇಕಾರರ ಅಭಿವೃದ್ಧಿ ಯೋಜನೆಯ ಮುಂದುವರಿಕೆ ಬಗ್ಗೆ**

**347; ಶ್ರೀ ಎಂ.ಡಿ.ಲಕ್ಷ್ಮೀನಾರಾಯಣ (ಅಣ್ಣಯ್ಯ) (ನಾಮನಿರ್ದೇಶನ ಹೊಂದಿದವರು)**

ಅ. ನೇಕಾರರ ಅಭಿವೃದ್ಧಿ ಯೋಜನೆ ಜಾರಿಗೆ ಬಂದದ್ದು ಯಾವಾಗ;

ಆ. ರಾಜ್ಯದ ನೇಕಾರರ ವಿದ್ಯಾರ್ಥಿ ನಿಲಯ, ನೇಕಾರರ ಸಮುದಾಯ ಭವನ ಮತ್ತು ನೇಕಾರರ ಸಮಜದ ಪತಗಳ ಅಭಿವೃದ್ದಿಗೆ ಸರ್ಕಾರಕ್ಕೆ ಎಷ್ಟು ಬೇಡಿಕೆ ಬಂದಿತ್ತು;

ಇ. ಈ ಯೋಜನೆಗೆ ಆಡಳಿತಾತ್ಮಕ ಮಂಜೂರಾತಿ ನೀಡಿದ್ದು ಎಷ್ಟು; ಯಾವಾಗ;

ಈ. ನೇಕಾರರ ಅಭಿವೃದ್ದಿ ಯೋಜನೆಗೆ ಸರ್ಕಾರ ಬಿಡುಗಡೆ ಮಾಡಿರು ಹಣವೆಷ್ಟು (ಜಿಲ್ಲಾವಾರು ಮಹಿತಿ ನೀಡುವುದು);

ಉ. ಉಳಿಕೆ ಹಣವನ್ನು ಈ ಯೋಜನೆಗೆ ಯಾವಾಗ ಬಿಡುಗೆ ಮಾಡ ಲಾಗುವುದು;

ಊ. ಈ ವರ್ಷದ ಆಯವ್ಯಯದಲ್ಲಿ ನೇಕಾರರ ಈ ಯೋಜನೆಯನ್ನು ಮುಂದುವರೆಸಲಾಗುವುದೇ; ಹಿಂದುಳಿದವರ್ಗದ ನೇಕಾರರನ್ನು ರಕ್ಷಿಸಲಾಗುವುದೇ?

**ಶ್ರೀ ಬಾಬುರಾವ್ ಚಿಂಚನಸೂರ್ (ಜವಳಿ, ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವರು)**

ಅ. ನೇಕಾರರ ಅಭಿವೃದ್ಧಿಗಾಗಿ ಕೈಮಗ್ಗ ಮತ್ತು ಜವಳಿ ಇಲಾಖೆಯು 1992-93 ಸಾಲಿನಿಂದ ವಿವಿಧ ಯೋಜನೆಗಳನ್ನು ಅನುಷ್ಠಾನಗೊಳಿಸುತ್ತಿದೆ.

ಆ. 2012-13ನೇ ಸಾಲಿನಲ್ಲಿ ನೇಕಾರರ ಮತ್ತು ಅವರ ಮಕ್ಕಳ ಅನುಕೂಲಕ್ಕಾಗಿ ವಸತಿ ನಿಲಯ/ಸಮುದಾಯ ಭವನಗಳಂತಹ ಕಲ್ಯಾಣ ಕಾರ್ಯಕ್ರಮಗಳಿಗೆ ₹63.40 ಕೋಟಿಗಳ ಬೇಡಿಕೆ ಬಂದಿರುತ್ತದೆ.

ಇ. ಈ ಯೋಜನೆಯನ್ನು ಸಮಾಜ ಕಲ್ಯಾಣ ಇಲಾಖೆಯ ಕಾರ್ಯ ವ್ಯಾಪ್ತಿಯಲ್ಲಿ ಅನುಷ್ಠಾನಗೊಳಿಸುತ್ತಿದೆ.

ಸರ್ಕಾರದ ಆದೇಶ ಸಂಖ್ಯೆ: ಹಿಂವಕ 155 ಬಿಎಂಎಸ್ 2011 ದಿನಾಂಕ:15-09-2012ರ ಆದೇಶದಂತೆ ರೂ.30.00 ಕೋಟಿಗಳಿಗೆ ಆಡಳಿತಾತ್ಮಕ ಮಂಜೂರಾತಿ ನೀಡಲಾಗಿರುತ್ತದೆ.

ಈ. ಸಮುದಾಯ ಭವನ/ವಿದ್ಯಾರ್ಥಿ ನಿಲಯಗಳ ನಿರ್ಮಾಣಕ್ಕಾಗಿ 2012-13ನೇ ಸಾಲಿನಲ್ಲಿ ₹15.00 ಕೋಟಿಗಳನ್ನು ಆಯುಕ್ತರು ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ವಶಕ್ಕೆ ನೀಡಲಾಗಿದೆ. ವಿವರ ಅನುಬಂಧ-1ರಲ್ಲಿ ಲಗತ್ತಿಸಿದೆ.

ಉ. ಸಮಾಜ ಕಲ್ಯಾಣ ಇಲಾಖೆಯ ಈ ಯೋಜನೆಯನ್ನು ಆಯವ್ಯಯದ ಅವಕಾಶದ ಅಡಿಯಲ್ಲಿ ಅನುಷ್ಠಾನಗೊಳಿಸುತ್ತಿದೆ.

ಊ. ಸದರಿ ಯೋಜನೆಯು ಸಮಾಜ ಕಲ್ಯಾಣ ಇಲಾಖೆಯದಾಗಿರುತ್ತದೆ.

## ಅನುಬಂಧ–1

## 2012–13ನೇ ಸಾಲಿನಲ್ಲಿ ನೇಕಾರರ ಮತ್ತು ಅವರ ಮಕ್ಕಳ ಅನುಕೂಲಕ್ಕಾಗಿ ವಸತಿ ನಿಲಯಗಳ ನಿರ್ಮಾಣ ಸಮುದಾಯ ಭವನಗಳ ನಿರ್ಮಾಣದಂತಹ ಕಲ್ಯಾಣ ಕಾರ್ಯಕ್ರಮಗಳಿಗೆ ಸರ್ಕಾರ ಬಿಡುಗಡೆ ಮಾಡಿರುವ ಅನುದಾನದ ಜಿಲ್ಲಾವಾರು ವಿವರ.

(ರೂ.ಲಕ್ಷಗಳಲ್ಲಿ)

| ಕ್ರ. ಸಂ. | ಜಿಲ್ಲೆ | ಸಮುದಾಯ ಭವನ ಸಂಖ್ಯೆ | ಕೋರಿರುವ ಮೊತ್ತ | ಆಡಳಿತಾತ್ಮಕ ಮಂಜೂರಾತಿ ನೀಡಿದ ಮೊತ್ತ | ಬಿಡುಗಡೆ ಮಾಡಿದ ಮೊತ್ತ |
|---|---|---|---|---|---|
| 1 | ಬೆಂಗಳೂರು ನಗರ | 13 | 415.00 | 207.50 | 103.75 |
| 2 | ಬೆಂಗಳೂರು ಗ್ರಾ | 13 | 850.00 | 255.00 | 127.50 |
| 3 | ರಾಮನಗರ | 4 | 40.00 | 20.00 | 10.00 |
| 4 | ತುಮಕೂರು | 23 | 310.00 | 155.00 | 77.50 |
| 5 | ಚಿಕ್ಕಮಗಳೂರು | 35 | 420.00 | 210.00 | 105.00 |
| 6 | ಹಾಸನ | 28 | 325.00 | 162.50 | 81.25 |
| 7 | ಶಿವಮೊಗ್ಗ | 17 | 210.00 | 105.00 | 52.50 |
| 8 | ಚಿತ್ರದುರ್ಗ | 20 | 490.00 | 245.00 | 122.50 |
| 9 | ಧಾರವಾಡ | 12 | 155.00 | 77.50 | 38.75 |
| 10 | ದಾವಣಗೆರೆ | 25 | 305.00 | 152.50 | 76.25 |
| 11 | ಉಡುಪಿ | 8 | 130.00 | 65.00 | 32.50 |
| 12 | ಬಳ್ಳಾರಿ | 11 | 150.00 | 75.00 | 37.50 |

| | | | | | |
|---|---|---|---|---|---|
| 13 | ಬಾಗಲಕೋಟೆ | 34 | 490.00 | 245.00 | 122.50 |
| 14 | ಬೆಳಗಾಂ | 19 | 270.00 | 135.00 | 67.50 |
| 15 | ಕೊಪ್ಪಳ | 20 | 235.00 | 117.50 | 58.75 |
| 16 | ಯಾದಗಿರಿ | 19 | 225.00 | 112.50 | 56.25 |
| 17 | ಗುಲ್ಬರ್ಗಾ | 29 | 325.00 | 162.50 | 81.25 |
| 18 | ಗದಗ | 8 | 130.00 | 65.00 | 32.50 |
| 19 | ಬಿಜಾಪುರ | 12 | 155.00 | 77.50 | 38.75 |
| 20 | ಹಾವೇರಿ | 11 | 165.00 | 82.50 | 41.25 |
| 21 | ಬೀದರ್ | 6 | 85.00 | 42.50 | 21.25 |
| 22 | ರಾಯಚೂರು | 5 | 65.00 | 32.50 | 16.25 |
| 23 | ಮೈಸೂರು | 7 | 90.00 | 45.00 | 22.50 |
| 24 | ಚಾಮರಾಜನಗರ | 3 | 55.00 | 27.50 | 13.75 |
| 25 | ಮಂಡ್ಯ | 7 | 90.00 | 45.00 | 22.50 |
| 26 | ಕೊಡಗು | 6 | 75.00 | 37.50 | 18.75 |
| 27 | ಕೋಲಾರ | 7 | 75.00 | 37.50 | 18.75 |
| 28 | ಚಿಕ್ಕಬಳ್ಳಾಪುರ | 1 | 10.00 | 5.00 | 2.50 |
| | **ಒಟ್ಟು** | **403** | **6340.00** | **3000.00** | **1500.00** |

**ರಾಜ್ಯದಲ್ಲಿ ಪಾರಂಪರಿಕ ನೇಕಾರಿಕೆಯನ್ನು ಉಳಿಸಿ ಬೆಳೆಸುವ ಕುರಿತಾದ ಸರ್ಕಾರದ ಕ್ರಮಗಳ ಬಗ್ಗೆ**

**491; ಶ್ರೀ ಎಂ.ಡಿ.ಲಕ್ಷ್ಮೀನಾರಾಯಣ (ಅಣ್ಣಯ್ಯ) (ನಾಮನಿರ್ದೇಶನ ಹೊಂದಿದವರು)**

ಅ. ರಾಜ್ಯದಲ್ಲಿ ವಿವಿಧ ಪ್ರದೇಶಗಳಲ್ಲಿ ಪಾರಂಪರಿಕ ನೇಕಾರಿಕೆಯ ಮೂಲಕ ಹೆಸರಾದ ರಾಜ್ಯ ನೇಕಾರಿಕೆಯನ್ನು ಉಳಿಸಿ ಬೆಳೆಸಲು ಸರ್ಕಾರ ಹಮ್ಮಿ ಕೊಂಡ ಕ್ರಮಗಳೇನು :

ಆ. ಭಾರತ ದೇಶದ ವಸ್ತ್ರ ಪರಂಪರೆಯಲ್ಲಿ ರಾಜ್ಯ ನೇಕಾರರೂ ಕೂಡ ವಾರಸುದಾರರಾಗಿದ್ದು, ಸರ್ಕಾರದ ಸೂಕ್ತ ಮತ್ತು ಸರ್ಮಪಕ ಪ್ರೋತ್ಸಾಹವಿಲ್ಲದ ಕಾರಣ, ತನ್ನ ಪಾರಂಪರಿಕ ನೇಕಾರಿಕಾ ವೃತ್ತಿಯನ್ನು ತೊರೆಯುತ್ತಿರುವುದನ್ನು ಸರ್ಕಾರ ಗಮನಿಸಿದೆಯೇ; ರಾಜ್ಯದ ವಸ್ತ್ರ ಪರಂಪರೆಯ ಭವ್ಯ ಇತಿಹಾಸವನ್ನು ಮುನ್ನಡೆಸಿಕೊಂಡು ಹೋಗುವಲ್ಲಿ ಸರ್ಕಾರದ ಯೋಜನೆಗಳೇನು;

ಇ. ಪಾರಂಪರಿಕ ನೇಕಾರಿಕೆಗೆ ಆಧುನಿಕ ವಸ್ತ್ರ ವಿನ್ಯಾಸದ ಮೆರುಗು ಕೊಡುವ ದಿಶೆಯಲ್ಲಿ ಜವಳಿ ತಂತ್ರಜ್ಞಾನದ ಸೌಲಭ್ಯವನ್ನು ಪ್ರತಿಯೊಬ್ಬ ನೇಕಾರರಿಗೂ ತುಪಿಸಲು ಸರ್ಕಾರ ಮುಂದಾಗುವುದೇ?

**ಶ್ರೀ ಬಾಬುರಾವ್ ಚಿಂಚನಸೂರ್ (ಜವಳಿ, ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವರು)**

ಅ. ರಾಜ್ಯದ ಪಾರಂಪರಿಕ ನೇಕಾರಿಕೆಯನ್ನು ಉಳಿಸಿ ಬೆಳೆಸಲು ಸರ್ಕಾರವು ಕೆಳಕಂಡ ಪಾರಂಪರಿಕ 'ಕೈಮಗ್ಗ ಉತ್ಪನ್ನಗಳನ್ನು ಜಿಯಾಗ್ರಫಿಕಲ್ ಇಂಡಿಕೇಶನ್ ಆಫ್ ಗೂಡ್ಸ್ ಆಕ್ಟ್‌ನಡಿ ನೊಂದಾಯಿಸಿರುತ್ತದೆ.

1. ಇಳಕಲ್ ಸೀರೆ
2. ಮೊಳಕಾಲ್ಮೂರು ಸೀರೆ

ಕಳಕಂಡ ಪಾರಂಪರಿಕ ಕೈಮಗ್ಗ ಉತ್ಪನ್ನಗಳನ್ನು ಜಿಯಾಗ್ರಫಿಕಲ್ ಇಂಡಿಕೇಶನ್ ಆಫ್ ಗೂಡ್ಸ್ ಆಕ್ಟ್‌ನಡಿ ನೊಂದಾಯಿಸುವ ಪ್ರಕ್ರಿಯೆಯು ಪ್ರಗತಿಯಲ್ಲಿರುತ್ತದೆ.

1. ಗುಳೇದಗುಡ್ಡ ಖಣ
2. ಉಡುಪಿ ಸೀರೆ

ಪಾರಂಪರಿಕ ನೇಕಾರಿಕೆ ಕ್ಷೇತ್ರವನ್ನು ಬೆಳೆಸಲು ಪೂರಕವಾಗಿ ಸರ್ಕಾರವು ಕೆಳಕಂಡ ವಿವಿಧ ಯೋಜನೆಗಳನ್ನು ಅನುಷ್ಠಾನ ಗೊಳಿಸುತ್ತಿದೆ.

1) ವಸತಿ ಕಾರ್ಯಾಗಾರ
2) ಕೈಮಗ್ಗ ಉತ್ಪನ್ನಗಳಿಗೆ ಮಾರುಕಟ್ಟೆ – ಶೇ.20 ರಿಬೇಟ್ ಯೋಜನೆ
3) ಆರೋಗ್ಯ ವಿಮಾ ಯೋಜನೆ
4) ಸಾಮಾಜಿಕ ಭದ್ರತೆ (ಗುಂಪು ವಿಮಾ ಯೋಜನೆ) ಯೋಜನೆ
5) ತರಬೇತಿ, ಮಗ್ಗ/ ಸಲಕರಣೆ ಪೂರೈಕೆ
6) ನೇಕಾರರ ಅಧ್ಯಯನ ಪ್ರವಾಸ
7) ಕೈಮಗ್ಗ ಕ್ಲಸ್ಟರ್‌ಗಳ ಅಭಿವೃದ್ಧಿ.
8) ಕೈಮಗ್ಗ ಸಹಕಾರ ಸಂಘಗಳಿಗೆ ಸಹಾಯ.
9) ಕಚ್ಚಾಮಾಲು ಖರೀದಿ ಸಹಾಯಧನ
10) ಶೇ.3ರ ಬಡ್ಡಿ ದರದಲ್ಲಿ ನೇಕಾರರಿಗೆ ಸಾಲ ಯೋಜನೆ
11) ನೇಕಾರರಿಗೆ ಕ್ರೆಡಿಟ್ ಕಾರ್ಡ್ ಯೋಜನೆ
12) ಮಿತವ್ಯಯ ನಿಧಿ ಯೋಜನೆ
13) ಕೇಂದ್ರ ವಲಯದ ಎಂಇಪಿಎಸ್ ಯೋಜನೆಯಡಿ ಕೈಮಗ್ಗ ಮೇಳಗಳ ಆಯೋಜನೆ

ಆ. ರಾಜ್ಯದ ನೇಕಾರರು ಪಾರಂಪರಿಕ ನೇಕಾರಿಕೆ ವೃತ್ತಿಯನ್ನು ತೊರೆಯದೆ ರಾಜ್ಯದ ವಸ್ತ್ರ ಪರಂಪರೆಯನ್ನು ಮುನ್ನಡೆಸಿಯೊಂಡು ಹೋಗುವಂತೆ

ಅಗತ್ಯ ಸೌಕರ್ಯಗಳನ್ನು ನೀಡಲು ಕಳಕಂಡ ಯೋಜನೆಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ.

1) ವಸತಿ ಕಾರ್ಯಾಗಾರ
2) ಕೈಮಗ್ಗ ಉತ್ಪನ್ನಗಳಿಗೆ ಮಾರುಕಟ್ಟೆ – ಶೇ.20 ರಿಬೇಟ್ ಯೋಜನೆ
3) ಆರೋಗ್ಯ ವಿಮಾ ಯೋಜನೆ
4) ಸಾಮಾಜಿಕ ಭದ್ರತೆ (ಗುಂಪು ವಿಮಾ ಯೋಜನೆ) ಯೋಜನೆ
5) ತರಬೇತಿ, ಮಗ್ಗ/ ಸಲಕರಣೆ ಪೂರೈಕೆ
6) ನೇಕಾರರ ಅಧ್ಯಯನ ಪ್ರವಾಸ
7) ಕೈಮಗ್ಗ ಕ್ಲಸ್ಟರ್‌ಗಳ ಅಭಿವೃದ್ಧಿ.
8) ಕೈಮಗ್ಗ ಸಹಕಾರ ಸಂಘಗಳಿಗೆ ಸಹಾಯ.
9) ಕಚ್ಚಾಮಾಲು ಖರೀದಿ ಸಹಾಯಧನ
10) ಶೇ.3ರ ಬಡ್ಡಿ ದರದಲ್ಲಿ ನೇಕಾರರಿಗೆ ಸಾಲ ಯೋಜನೆ
11) ನೇಕಾರರಿಗೆ ಕ್ರೆಡಿಟ್ ಕಾರ್ಡ್ ಯೋಜನೆ
12) ಮಿತವ್ಯಯ ನಿಧಿ ಯೋಜನೆ
13) ಕೇಂದ್ರ ವಲಯದ ಎಂಇಪಿಎಸ್ ಯೋಜನೆಯಡಿ ಕೈಮಗ್ಗ ಮೇಳಗಳ ಆಯೋಜನೆ

ಇ. ಪಾರಂಪರಿಕ ನೇಕಾರರಿಗೆ ಜವಳಿ ತಂತ್ರಜ್ಞಾನ ಸೌಲಭ್ಯವನ್ನು ತಲುಪಿಸಲು ಸರ್ಕಾರವು ಕೆಳಕಂಡ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸುತ್ತಿದೆ.

1) ಕೈಮಗ್ಗ ನೇಕಾರರಿಗೆ ಡಾಬಿ/ಜಕಾರ್ಡ್ ಒದಗಿಸುವುದು
2) ಆಧುನಿಕ ಕೈಮಗ್ಗಗಳು/ಕೈಮಗ್ಗ ಸಲಕರಣೆಗಳು ಒದಗಿಸುವುದು.
3) ಕಂಪ್ಯೂಟರ್ ಎಡೆಡ್ ಟೆಕ್ಸ್‌ಟೈಲ್ ಡಿಸೈನಿಂಗ್ ಸೌಲಭ್ಯ ಒದಗಿಸುವುದು.

**ಸುವರ್ಣ ವಸ್ತ್ರ ನೀತಿ (2008–2013) ಕುರಿತಾದ ವಿವರಗಳ ಬಗ್ಗೆ**

**489; ಶ್ರೀ ಎಂ.ಡಿ.ಲಕ್ಷ್ಮೀನಾರಾಯಣ (ನಾಮನಿರ್ದೇಶನ ಹೊಂದಿದವರು)**

ಅ. 2008–2013ರ ಸುವರ್ಣ ವಸ್ತ್ರ ನೀತಿಗಾಗಿ ಮೀಸಲಿಟ್ಟ ಅನುದಾನದ ಮೊತ್ತ ಮತ್ತು ಯೋಜನೆಯ ಅನುಷ್ಠಾನಕ್ಕೆ ಮಾಡಿದ ವೆಚ್ಚವೆಷ್ಟು : (ಪೂರ್ಣ ವಿವರ)

ಆ. ಸದರಿ ಯೋಹನೆಯು ನಿಗದಿತ ಕಾಲಮಿತಿಯೊಳಗೆ ಪೂರ್ಣ ಪ್ರಮಾಣ ದಲ್ಲಿ ಅನುಷ್ಠಾನಗೊಳ್ಳದಿರಲು ಕಾರಣವೇನು : ಅಳಕೆಯಾಗದ ಮೊತ್ತದ ಮರುಬಳಕೆ ಕುರಿತಾಗಿ ಸರ್ಕಾರ ಕ್ರಿಯಾ ಯೋಜನೆ ರೂಪಿಸಿದೆಯೇ : (ಆ ಕುರಿತ ವಿವರಗಳೇನು)

ಇ. ಹೊಸ ಜವಳಿ ನೀತಿಯನ್ನು ನೋತನ ಸರ್ಕಾರ ಪರಿಪೂರ್ಣ ರೀತಿ ನೀತಿಗಳೊಂದಿಗೆ ಜಾರಿಗೆ ತರುವ ನಿಟ್ಟಿನಲ್ಲಿ ಸಾಕಷ್ಟು ಅನುದಾನವನ್ನು ಕೊಟ್ಟು ದುಷ್ಥಿತಿಯಲ್ಲಿರುವ ನೇಕಾರರಿಗೆ ಸಮರ್ಪಕವಾಗಿ ತಲುಪಿಸಲು ಸರ್ಕಾರ ಕ್ರಮ ಜರುಗಿಸುವುದೇ?

**ಶ್ರೀ ಬಾಬುರಾವ್ ಚಿಂಚನಸೂರ್ (ಜವಳಿ, ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವರು)**

ಅ. ರಾಜ್ಯ ಸರ್ಕಾರವು ನೀತಿಯ ಅವಧಿಯಲ್ಲಿ ನೀತಿಯ ಪರಿಣಾಮಕಾರಿ ಅನುಷ್ಠಾನಕ್ಕಾಗಿ ₹ 500 ಕೋಟಿಗಳವರೆಗಿನ ಹಣಕಾಸಿನ ನೆರವನ್ನು ಬದಗಿಸುವ ಪ್ರಸ್ತಾವ ಹೊಂದಿತ್ತು. ನೀತಿಯ ಅವಧಿಯಲ್ಲಿ ಒಟ್ಟು. ₹ 147.09 ಕೋಟಿ ಅನುದಾನವನ್ನು ಸರ್ಕಾರವು ಬಿಡುಗಡೆ ಮಾಡಿ ರುತ್ತದೆ. ಬಿಡುಗಡೆಯಾದ ಪೂರ್ಣ ಅನುದಾನವನ್ನು ನೀತಿಯ ಅನುಷ್ಠಾನಕ್ಕಾಗಿ ವಿನಿಯೋಗಿಸಲಾಗಿದೆ.

ಆ. ಸರ್ಕಾರವು ಬಿಡುಗಡೆ ಮಾಢಿದ ₹ 147.09 ಕೋಟಿ ಅನುದಾವನ್ನು ನೀತಿಯ ವಿವಿಧ ಕಾರ್ಯಕ್ರಮಗಳಿಗೆ ನಿಗದಿತ ಕಾಲಮಿತಿಯೊಳಗೆ ಪೂರ್ಣ ಪ್ರಮಾಣದಲ್ಲಿ ವಿನಿಯೋಗಿಸಲಾಗಿರುತ್ತದೆ.

ಇ. ಹೊಸ ಜವಳ ನೀತಿ 2013–18 ಪ್ರಕಟಣೆಗಾಗಿ ಸರ್ಕಾರದ ಪರಿಶೀಲನೆಯಲ್ಲಿರುತ್ತದೆ. ನೇಕಾರಿಕೆಯು ಜವಳಿ ನೀತಿಯ ಒಂದು ಭಾಗವಾಗಿದ್ದು ನೇಕಾರರಿಗೆ ಇದರ ಪ್ರಯೋಜನಗಳನ್ನು ತಲುಪಿಸಲು ಸರ್ಕಾರ ಬದ್ಧವಾಗಿದೆ.

**ಕೆರೆ ಒತ್ತುವರಿ/ ಅತಿಕ್ರಮಣನ್ನು ತೆರೆವುಗೊಳಿಸುವ ಬಗ್ಗೆ**

**352; ಶ್ರೀ ಬಿ.ಜೆ.ಪುಟ್ಟಸ್ವಾಮಿ (ವಿದಾನಸಭೆಯಿಂದ ಚುನಾಯಿತರಾದವರು)**

ಅ. ಮಂಡ್ಯ ಜಿಲ್ಲೆ, ಮದ್ದೂರು ತಾಲ್ಲೂಕು, ಕೊಪ್ಪ ಹೋಬಳಿ ಬೆಕ್ಕಳಲೆ ಗ್ರಾಮದ ಹಿರಿಕೆರೆ ಕೆರೆಯ್ನನು ಒತ್ತುವರಿ ಮಾಡಿ ಕೆರೆ ಅಂಗಳದಲ್ಲಿ ಅನಧಿಕೃತವಾಗಿ ವ್ಯವಸಾಯ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ. ಹಾಗಿದ್ದರೆ, ಅನಧಿಕೃತ ಅತಿಕ್ರಮಣ ಒತ್ತುವರಿಯನ್ನು ತೆರವುಗೊಳಿಸಲು ಸರ್ಕಾರ ತೆಗೆದುಕೊಳ್ಳುವ ಕ್ರಮವೇನು;

**ಶ್ರೀ ವಿ.ಶ್ರೀನಿವಾಸಪ್ರಸಾದ್ (ಕಂದಾಯ ಸಚಿವರು)**

ಅ. ಬಂದಿದೆ.

ಆ. ಈಗಾಗಲೇ ಕ್ರಮ ತೆಗೆದುಕೊಳ್ಳಲಾಗಿದೆ. ಬೆಕ್ಕಳಲೆ ಹಿರಿಕೆರೆ ಒತ್ತುವರೆಯನ್ನು ದಿನಾಂಕ: 18–3–2013 ರಂದು ಸಹಾಯಕ ಇಂಜಿನಿಯರ್, ಕಾವೇರಿ ನೀರಾವರಿ ನಿಗಮ ನಿಯಮಿತ ಕೊಪ್ಪ ಹಾಗೂ ಕಂದಾಯ ಇಲಾಖೆ, ಪೋಲೀಸ್ ಅಧಿಕಾರಿಗಳ ಸಹಯೋಗದೊಂದಿಗೆ ಒತ್ತುವರಿ ತೆರವುಗೊಳಿಸಿ ಸಹಾಯಕ ಕಾರ್ಯಪಾಲಕ ಇಂಜಿನಿಯರ್ ಕೊಪ್ಪರವರಿಗೆ ಕೆರೆ ಅಭಿವೃದ್ಧಿ ಸುಪರ್ದಿಗೆ ವಹಿಸಲಾಗಿದೆ.

**ಹೊಸಪೇಟೆಯಲ್ಲಿರುವ ತುಂಗಭದ್ರಾ ಜಲಾಶಯದ ಬಗ್ಗೆ**

**472; ಡಾ॥ ಎ.ಹೆಚ್.ಶಿವಯೋಗಿಸ್ವಾಮಿ (ಪದವೀಧರರ ಕ್ಷೇತ್ರ)**

ಅ. ಬಳ್ಳಾರಿ ಜಿಲ್ಲೆ ಹೊಸಪೇಟೆಯಲ್ಲಿರುವ ತುಂಗಭದ್ರಾ ಜಲಾಶಯ (ಡ್ಯಾಂ) ಯಾವಗ ಕಟ್ಟಲಾಯಿತು ಎಷ್ಟು ಹಣ ವೆಚ್ಚವಾಗಿದೆ.

ಆ. ಆರಂಭದಲ್ಲಿ ಈ ಜಲಾಶಯದಲ್ಲಿ ಸಂಗ್ರಹವಾಗುತ್ತಿದ್ದ ನೀರಿನ ಪ್ರಮಾಣ ಎಷ್ಟು

ಇ. ಎಷ್ಟು ಎಕರೆ ಭೂಮಿಗೆ ನೀರಾವರಿ ಸೌಲಭ್ಯ ಕಲ್ಪಿಸಲು ಯೋಜಿಸಲಾಗಿತ್ತು:

ಈ. ಈ ಜಲಾಶಯದಲ್ಲಿ ಸಂಗ್ರಹವಾಗುತ್ತಿರುವ (ಪ್ರಸ್ತುತ) ನೀರಿನ ಪ್ರಮಾಣವೆಷ್ಟು

ಉ. ಜಲಾಶಯದಲ್ಲಿ ದಶಕಗಳಿಂದ ಸಂಗ್ರಹವಾಗುತ್ತಿರುವ ಹೂಳು ತೆಗೆಯುವ ಬಗ್ಗೆ ಸರ್ಕಾರ ಯೋಜಿಸಿದೆಯೇ

ಊ. ನೀರಿನ ಸಂಗ್ರಹ ಪ್ರಮಾಣ ಹೆಚ್ಚಿಸಲು ಏನು ಕ್ರಮ ಕೈಗೊಳ್ಳಲಾಗುತ್ತಿದೆ?

**ಶ್ರೀ ಎಂ.ಬಿ.ಪಾಟೀಲ್ (ಜಲ ಸಂಪನ್ಮೂಲ ಸಚಿವರು)**

ಅ. 1953 ರಲ್ಲಿ ತುಂಗಭದ್ರಾ ಜಲಾಶಯವನ್ನು ನಿರ್ಮಿಸಲಾಗಿರುತ್ತದೆ. ಸದರಿ ತುಂಗಭದ್ರಾ ಜಲಾಶಯದ ನಿರ್ಮಾಣಕ್ಕೆ ತಗುಲಿದ ವೆಚ್ಚವು 17.98 ಕೋಟಿಗಳಾಗಿರುತ್ತದೆ.

ಆ. ಆರಂಭದಲ್ಲಿ ಈ ಜಲಾಶಯದಲ್ಲಿ 132.471 ಟಿ.ಎಂ.ಸಿ.ಯಷ್ಟು ನೀರು ಸಂಗ್ರಹವಾಗುತ್ತಿತ್ತು.

ಇ. ಕರ್ನಾಟಕ ರಾಜ್ಯದಲ್ಲಿ 8.97 ಲಕ್ಷ ಎಕರೆ ಭೂಮಿಗೆ ನೀರಾವರಿ ಸೌಲಭ್ಯ ಕಲ್ಪಿಸಲು ಯೋಜಿಸಲಾಗಿತ್ತು.

ಈ 2008 ರ ಹೈಡ್ರೋಗ್ರಾಫಿಕ್ ಸರ್ವೆ ಪ್ರಕಾರ ತುಂಗಭದ್ರಾ ಜಲಾಶಯದ ನೀರಿನ ಪ್ರಮಾಣ 100.855 ಟಿ.ಎಂ.ಸಿ.ಯಷ್ಟು ಇರುತ್ತದೆ.

ಉ. ಹೌದು.

ಊ. ತುಂಗಭದ್ರಾ ಜಲಾಶಯದಲ್ಲಿ ಸಂಗ್ರಹಣೆಯಾಗಿರುವ ಹೂಳಿನ ಪ್ರಮಾಣ (31.616 ಟಿ.ಎಂ.ಸಿ.ಎಫ್.ಟಿ) ಗಣನೀಯವಾಗಿದ್ದು, ಇದನನು ಸಂಪೂರ್ಣವಾಗಿ ತೆಗೆಯುವ ಕ್ರಮ ಅನೇಕ ಆಯಾಮಗಳಿಂದ

ಕೂಡಿದ್ದು, ತುಂಬಾ ಜಟಿಲವಾದ ಸಮಸ್ಯೆಯಾಗಿದೆ. ಹೂಳು ನಿರ್ಮೂಲನೆ ಕಾರ್ಯಕ್ರಮವು ಇನ್ನೂ ಪ್ರಾಥಮಿಕ ಹಂತದಲ್ಲಿದ್ದು, ಯೋಜನೆಯ ಸಾಧ್ಯಾ ಸಾಧ್ಯತಾ ವರದಿ/ವಿವರವಾದ ಯೋಜನಾ ವರದಿ ಸಿದ್ಧಪಡಿಸಿ ಕ್ರಮ ಕೈಗೊಳ್ಳಲಾಗುವುದು.

**ಯಡಿಯೂರು ಶ್ರೀ ಸಿದ್ಧೇಶ್ವರ ದೇವಸ್ಥಾನದ ಜೀರ್ಣೋದ್ಧಾರ**

**365; ಡಾ॥ ಎ.ಹೆಚ್.ಶಿವಯೋಗಿಸ್ವಾಮಿ (ಪದವೀಧರರ ಕ್ಷೇತ್ರ)**

ಅ. ತುಮಕೂರು ಜಿಲ್ಲೆಯ ಕುಣಿಗಲ್ ತಾಲ್ಲೂಕು, ಎಡಿಯೂರು ಶ್ರೀ ಸಿದ್ಧೇಶ್ವರಸ್ವಾಮಿ ದೇವಸ್ಥಾನದ ಜೀರ್ಣೋದ್ಧಾರ ಯಾವಾಗ ಆರಂಭಿಸಲಾಯಿತು;

ಆ. ಇದಕ್ಕೆ ಎಷ್ಟು ಹಣ ಮಂಜೂರು ಮಾಡಲಾಗಿದೆ; ಇದುವರೆಗೆ ಎಷ್ಟು ಹಣ ಬಿಡುಗಡೆಯಾಗಿರುತ್ತದೆ;

ಇ. ದೇವಸ್ಥಾನದ ಕಟ್ಟಡ ಕಾರ್ಯ ವಿಳಂಬವಾಗುತ್ತಿದ್ದು. ಭಕ್ತಾಧಿಗಳಿಗೆ ತೊಂದರೆಯಾಗುತ್ತಿರುವುದು, ಸರ್ಕಾರದ ಗಮನಕ್ಕೆ ಬಂದಿದೆಯೇ;

ಈ. ಕಾಲಮಿತಿಯಲ್ಲಿ ಕಾಮಗಾರಿ ಪೂರ್ಣಗೊಳಿಸಲು ಏನು ಕ್ರಮ ತೆಗೆದುಕೊಳ್ಳಲಾಗುವುದು;

ಉ. ದೇವಸ್ಥಾನದ ಆಡಲಿತ ಮಂಡಳಿಯ ಕಾರ್ಯದರ್ಶಿಗಳ ಹುದ್ದೆಯಲ್ಲಿರುವ ಅಧಿಕಾರಿಗಳು ಸ್ಥಳದಲ್ಲಿಯೇ ವಾಸ ಮಾಡದೇ ದೇವಸ್ಥಾನದ ಅಭಿವೃದ್ಧಿ ಬಗ್ಗೆ ಗಮನ ಹರಿಸದೆಯೇ ಹಾಗೂ ಭಕ್ತಾದಿಗಳ ಅವಶ್ಯಕತೆಗಳ ಬಗ್ಗೆ ಅಲಕ್ಷ್ಯ ಮಾಡುತ್ತಿರುವುದನ್ನು ತಪ್ಪಿಸಲು ಸರ್ಕಾದ ಏನು ಕ್ರಮ ಕೈಗೊಳ್ಳುವುದು;

ಅ. ಶ್ರೀ ಸಿದ್ಧೇಶ್ವರಸ್ವಾಮಿ ದೇವಸ್ಥಾನದ ನವೀಕರಣ ಕಾಮಗಾರಿಯ 1 ನೇ ಹಂತವನ್ನು ದಿನಾಂಕ:21.10.2019 ರಲ್ಲಿ ಪ್ರಾರಂಭಿಸಲಾಗಿದೆ.

2ನೇ ಹಂತದ ಕಾಮಗಾರಿಯನ್ನು ದಿನಾಂಕ:11.03.2011 ರಲ್ಲಿ ಪ್ರಾರಂಭಿಸಲಾಗಿದೆ.

ಆ. ಒಟ್ಟು ₹15.50 ಕೋಟಿ ಮಂಜೂರು ಮಾಡಿ, ಬಿಡುಗಡೆ ಮಾಡಲಾಗಿ ರುತ್ತದೆ.

ಇ. ಬಂದಿದೆ.

ಈ. ಈಗಾಗಲೇ ಜಿಲ್ಲಾಧಿಕಾರಿಗಳ ಮುಖಾಂತರ ದಿನಾಂಕ:03.01.2013 ರಂದು ಮುಖ್ಯ ಅಭಿಯಂತರರಿಗೆ ಕಾಮಗಾರಿ ವಿಳಂಬದ ಬಗ್ಗೆ ಪತ್ರ ಬರೆಯಲಾಗಿತುತ್ತದೆ. ಲೋಕೋಪಯೋಗಿ ಇಲಾಖೆಯಿಂದಲೂ ಗುತ್ತಿಗೆ ದಾರರಿಗೆ ತಿಳುವಳಿಕೆ ಪತ್ರ ನೀಡಿರುತ್ತಾರೆ. ಮಾನ್ಯ ಉಚ್ಚನ್ಯಾಯಾಲಯದ ಆದೇಶದ ಪ್ರಕಾರ ಪ್ರಾಚ್ಯವಸ್ತು ಇಲಾಖೆ ನಿರ್ದೇಶನದಂತೆ ಕಾಮಗಾರಿ ಯನ್ನು ತ್ವರಿತವಾಗಿ ಮುಗಿಸಲು ಕ್ರಮ ಕೈಗೊಳ್ಳುವಂತೆ ಗುತ್ತಿಗೆದಾರರಿಗೆ ತಿಳಿಸಲಾಗಿದೆ.

ಉ. ಪ್ರಸ್ತುತ ದೇವಾಲಯದ ಕಾರ್ಯನಿರ್ವಾಹಕ ಅಧಿಕಾರಿಗಳು ಅಭಿಯಂತ ರರು, ಮ್ಯಾನೇಜರ್, ಲೆಕ್ಕಿಗರು ದೇವಾಲಯದ ವಸತಿ ಗೃಹಗಳಲ್ಲಿಯೇ ವಾಸವಾಗಿದ್ದು, ಉಳಿದ ಸಿಬ್ಬಂದಿಯವರು ಸಹ ಸ್ಥಳದಲ್ಲೇ ವಾಸವಾ ಗಿದ್ದು, ಭಕ್ತಾಧಿಗಳ ಅವಶ್ಯಕತೆ ಬಗ್ಗೆ ಪೂರ್ಣ ಜವಾಬ್ದಾರಿಯಿಂದ ಕರ್ತವ್ಯ ನಿರ್ವಹಿಸಿರುತ್ತಾರೆ.

**ಹೈದ್ರಾಬಾದ್-ಕರ್ನಾಟಕ ಪ್ರದೇಶದ ಮುಖ್ಯ ನೀರಾವರಿ ಯೋಜನೆಗಳ ಬಗ್ಗೆ**

**364; ಶ್ರೀ ಅಮರನಾಥ ಪಾಟೀಲ್ (ಪದವೀಧರರ ಕ್ಷೇತ್ರ)**

ಅ. ಹೈದ್ರಾಬಾದ್ ಕರ್ನಾಟಕದ ಮುಖ್ಯ ನೀರಾವರಿ ಯೋಜನೆಗಳು ಯಾವುವು: ಪ್ರತಿಯೊಂದು ಯೋಜನೆ ಜಾರಿಗೆ ತಂದಾಗ ಎಷ್ಟು ಎಕರೆ ಭೂಮಿಗೆ ನೀರಾವರಿ ಸೌಲಭ್ಯ ನೀಡುವ ಯೋಜನೆ ಹಮ್ಮಿಕೊಳ್ಳ ಲಾಗಿತ್ತು; ಈಗ ಎಷ್ಟು ಎಕರೆಗೆ ನೀರಾವರಿ ಸೌಲಭ್ಯ ಲಭಿಸುತ್ತದೆ (ಯೋಜನಾವಾರು ವಿವರ ಒದಗಿಸುವುದು);

ಆ. ಇನ್ನೂ ಎಷ್ಟು ಎಕರೆ ಭೂವಿಗೆ ನೀರಿನ ಸೌಲಭ್ಯ ಕಲ್ಪಿಸುವ ಯೋಜನೆ ಸರ್ಕಾದ ಮುಂದಿದೆ: ಇದನ್ನು ಎಷ್ಟು ಅವಧಿಯಲ್ಲಿ ಪೂರ್ಣಗೊಳಿಸ ಲಾಗುವುದು. ಬಾಕಿ ಇರುವ ಎಲ್ಲಾ ಯೋಜನೆಗಳು 4–5 ದಶಕಗ ಳಿಂದಲೂ ಕುಂಠಿತಗೊಂಡಿದ್ದು, ರೈತರು ಕಂಗಾಲಾಗಿದ್ದು ಈಗಲಾದರೂ ಸರ್ಕಾರ ಈ ಭಾದ ಜನರ ಕಷ್ಟಕ್ಕೆ ಸ್ಪಂದಿಸಿ ಬೇಕಾಗುವ ಸಂಪೂರ್ಣ ಅನುದಾನ ಒದಗಿಸಲು ಕ್ರಮ ಜರುಗಿಸುವುದೇ: ನೀರಿನ ಸಂಪೂರ್ಣ ಸದ್ಭಳಕೆ ಬಗ್ಗೆ ಚಿಂತಿಸುವುದೇ;

ಇ. ಶಿಗ್ಗಾವಿ ಕ್ಷೇತ್ರದಲ್ಲಿ ಕೇವಲ 5 ವರ್ಷದಲ್ಲಿ 26 ಸಾವಿರ ಹೆಕ್ಟೇರ್ ಪ್ರದೇಶ ತುಂತುರು ಹಾಗೂ ಹನಿ ನೀರಾವರಿ ಯೋಜನೆ ಜಾರಿಗೆ ತರಲಾಗಿದ್ದು, ತುಮಕೂರು, ಹಾಸನ ಜಿಲ್ಲೆ ಎರಡು ನೀರಾವರಿ ಯೋಜನೆ ಕಾಲ ಮಿತಿಯಲ್ಲಿ ಮಾಡಿದ ರೀತಿಯಲ್ಲೇ ಹೈದರಾಬಾದ್ ಕರ್ನಾಟಕದಲ್ಲಿ ಈ ಯೋಜನೆ ಜಾರಿಗೆ ತರಲು ಸರ್ಕಾರ ಮುಂದಾಗುವುದೇ;

ಈ. ಎರೆ ಮಣ್ಣಿನ ಕಾರಣ ಮಣ್ಣಿನ ಗುಣ, ಕಾಲುವೆಯಲ್ಲಿ ಹರಿಯುವ ನೀರು ಹೆಚ್ಚಿನ ಪ್ರಮಾಣದಲ್ಲಿ ಸೋರಿ ಹೋಗುತ್ತಿದ್ದು, ಕಾಲುವೆಯು ಬಾಳಿಕೆ ಬಾರದೆ ಇರುವುದರಿಂದ ಪ್ರೊಟೆಕ್ಟೆಡ್ ಪೈಪ್ ಲೈನ್ ಮೂಲಕ ಹನಿ ನಿರಾವರಿ ಯೋಜನೆ ಮಾಡಿದಲ್ಲಿ ರೈತರಿಗೆ ಅನುಕೂಲವಾಗಲಿದ್ದು, ಸರ್ಕಾರ ಇದರತ್ತ ಗಮನ ಹರಿಸುವುದೇ;

**ಶ್ರೀ ಎಂ.ಬಿ.ಪಾಟೀಲ್ (ಜಲ ಸಂಪನ್ಮೂಲ ಸಚಿವರು)**

ಅ. ವಿವರಗಳನ್ನು ಅನುಬಂಧ–1 ರಲ್ಲಿ ನೀಡಲಾಗಿದೆ.

ಆ. ವಿವರಗಳನ್ನು ಅನುಬಂಧ–1 ರಲ್ಲಿ ನೀಡಲಾಗಿದೆ. ಬಾಕಿ ಇರುವ ಎಲ್ಲಾ ಯೋಜನಾ ಕಾಮಗಾರಿಗಳನ್ನು 4–5 ವರ್ಷಗಳ ಕಾಲಮಿತಿಯಲ್ಲಿ ಅಗತ್ಯ ಅನುದಾನ ಒದಗಿಸುವುದರೊಂದಿಗೆ ಪೂರ್ಣಗೊಳಸಲು ಹಾಗೂ ನೀರಿನ ಸಂಪೂರ್ಣ ಸದ್ಬಳಕೆ ಮಾಡಿಕೊಳ್ಳಲು ಕಾರ್ಯ ಯೋಜನೆ ರೂಪಿಸಲಾಗುತ್ತಿದೆ.

ಇ. ಕೃಷ್ಣಾ ಮೇಲ್ದಂಡೆ ಯೋಜನೆಯ ನಾರಾಯಣಪುರ ಎಡದಂಡೆ ಕಾಲುವೆ ಜಾಲದಡಿಯ ಅಚ್ಚುಕಟ್ಟು ಕ್ಷೇತ್ರವು ಎರೆ ಮಣ್ಣಿನ ಗುಣ ಹೊಂದಿದ್ದು, ಸದರಿ ಕಾಲುವೆ ಜಾಲಗಳಡಿ ನೀರಿನ ಬಳಕೆಯ ಸಾಮರ್ಥ್ಯವನ್ನು ಹೆಚ್ಚಿಸುವ ನಿಟ್ಟಿನಲ್ಲಿ ಮತ್ತು ಸಧ್ಯದ ಅಚ್ಚುಕಟ್ಟು ಕ್ಷೇತ್ರ ದಲ್ಲಿ ಸುಮಾರು1,00,000 ಹೆಕ್ಟೇರ್ (2,47,000 ಎಕರೆ) ಕ್ಷೇತ್ರವನ್ನು ಹನಿ ನೀರಾವರಿ ವ್ಯವಸ್ಥೆಗೆ ಒಳಪಡಿಸಲು ವಿವರವಾದ ಯೋಜನಾ ವರದಿಯನ್ನು ಸಹ ತಯಾರಿಸಲಾಗಿದ್ದು ಕೇಂದ್ರ ಸಹಾಯ ಧನ ಪಡಿ ಯುವುದಕ್ಕಾಗಿ ಯೋಜನಾವರದಿಯನ್ನು ಕೇಂದ್ರ ಸರ್ಕಾರಕ್ಕೆ ಸಲ್ಲಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.

ಈ. ಕೃಷ್ಣಾ ಮೇಲ್ದಂಡೆ ಯೋಜನೆ ಹಂತ–3 ರಡಿ ಬರುವ ಕೊಪ್ಪಳ ಏತ ನೀರಾವರಿ ಯೋಜನೆ ಹಾಗೂ ಸಿಂಗಟಲೂರು ಏತ ನೀರಾವರಿ ಯೋಜನೆ ಅಡಿಯಲ್ಲಿ ಸಾಂಪ್ರದಾಯಿಕ ಹರಿ ನೀರಾವರಿ ಪದ್ಧತಿಗೆ ಬದಲಾಗಿ ಹನಿ ನೀರಾವರಿ ಪದ್ಧತಿ ಅಳವಡಿಸಿ ನೀರಾವರಿ ಸೌಲಭ್ಯ ಕಲ್ಪಿಸಲು ಉದ್ದೇಶಿಸಲಾಗಿದೆ. ಸದರಿ ಯೋಜನಾ ಕಾಮಗಾರಿಗಳನ್ನು 4–5 ವರ್ಷಗಳ ಕಾಲಮಿತಿಯಲ್ಲಿ ಪೂರ್ಣಗೊಳಸಲು ಯೋಜಿಸಲಾ ಗಿದೆ.

# ಅನುಬಂಧ–1

## ಹೈದ್ರಾಬಾದ್–ಕರ್ನಾಟಕ ಪ್ರದೇಶದ ಮುಖ್ಯ ನೀರಾವರಿ ಯೋಜನೆಗಳ ನೀರಾವರಿ ಕ್ಷೇತ್ರದ ವಿವರಗಳು:

| ಕ್ರ.ಸಂ. | ಹೈದ್ರಾಬಾದ್–ಕರ್ನಾಟಕದಲ್ಲಿನ ನೀರಾವರಿ ಯೋಜನೆಗಳು | ನಿಗಧಿತ ನೀರಾವರಿ ಕ್ಷೇತ್ರ (ಎಕರೆಗಳಲ್ಲಿ) | ಸೃಜಿಸಲಾದ ನೀರಾವರಿ ಕ್ಷೇತ್ರ (ಎಕರೆಗಳಲ್ಲಿ) | ಇನ್ನೂ ಸೃಜಿಸಬೇಕಾದ ಕ್ಷೇತ್ರ (ಎಕರೆಗಳಲ್ಲಿ) |
|---|---|---|---|---|
| 1 | ಕೃಷ್ಣಾ ಮೇಲ್ದಂಡೆ ಯೋಜನೆ ಹಂತ–1 ಮತ್ತು 2. | 1042449 | 972040 | 70409 |
| 2 | ಕೃಷ್ಣಾ ಮೇಲ್ದಂಡೆ ಯೋಜನೆ ಹಂತ–3 | 399000 | – | 399000 |
| ಅ) | ಮಲ್ಲಾಬಾದ್ ಏನೀಯೋ | | | |
| ಆ) | ಕೊಪ್ಪಳ ಏನೀಯೋ | | | |
| ಇ) | ರಾಪುರ ಏನೀಯೋ (ಮುಂದುವರೆದು) | | | |
| ಈ) | ಎನ್.ಆರ್.ಬಿ.ಸಿ (ಮುಂದುವರೆದು) | | | |
| ಉ) | ಭೀಮಾ ಪ್ಲಾಂಕ್ | | | |
| 2 | ರಾಜನ್‌ಕೊಳ್ಳೂರು ಏತ ನೀರಾವರಿ ಯೋಜನೆ | 2717 | 2097 | 630 |
| 3 | ಭೀಮಾ ನದಿಗೆ ಅಡ್ಡಲಾಗಿ 4 ಸರಣಿ | 20464 | 20464 | – |

| | | | | |
|---|---|---|---|---|
| | ಬ್ರಿಡ್ಜ್ ಕಂ–ಬ್ಯಾರೇಜುಗಳು | | | |
| 4 | ಸನ್ನತಿ ಏತ ನೀರಾವರಿ ಯೋಜನೆ | 39520 | –– | 39520 |
| 5 | ನಾರಾಯಣಪುರ ಬಲದಂಡೆ ಕಾಲುವೆ ವಿತರಣಾ ಕಾಲುವೆ ಸಂ.9(ಎ) | 37668 | –– | 37668 |
| 6 | ಬೀದರ್ ಜಿಲ್ಲೆಯ ಮಾಂಜ್ರಾ ನದಿಗೆ ಅಡ್ಡಲಾಗಿ 4 ಸರಣಿ ಬ್ರಿಡ್ಜ್ ಕಂ–ಬ್ಯಾರೇಜುಗಳು | 31300 | 31300 | – |
| 7 | ಬೆಣ್ಣೆತೊರಾ | 49998 | 46402 | 3596 |
| 8 | ಅಮರ್ಜಾ | 21999 | 10649 | 11351 |
| 9 | ಗಂಡೋರಿನಾಲಾ | 20000 | 19414 | 586 |
| 10 | ಕೆಳದಂಡೆ ಮುಲ್ಲಾಮಾರಿ | 24001 | 23227 | 773 |
| 11 | ಭೀಮಾ ಏ.ನೀ.ಯೋ. | 60026 | – | 60026 |
| 12 | ಸಿಂಗಟಾಲೂರು ಏ.ನೀ.ಯೋ. | 170237 | 28404 | 141833 |
| 13 | ತುಂಗಾಭದ್ರಾ ಯೋಜನೆ | 894917 | 894917 | – |

| | | | | |
|---|---|---|---|---|
| 14 | ನಾರೀಹಳ್ಳ ಯೋಜನೆ | 3500 | 3500 | – |
| 15 | ಹಗರಿಬೊಮ್ಮನಹಳ್ಳಿ ಯೋಜನೆ | 7500 | 7500 | – |
| 16 | ಹಿರೇಹಳ್ಳ ಯೋಜನೆ | 8330 | 8206 | 124 |
| 17 | ಮಸ್ಕಿನಾಲಾ ಯೋಜನೆ | 7416 | 7416 | – |
| 18 | ಕನಕನಾಲಾ | 3800 | 3800 | – |
| 19 | ಚುಳುಕಿನಾಲಾ | 10000 | 9355 | 645 |
| 20 | ಕಾರಂಜಾ | 72220 | 54641 | 17579 |
| 21 | ಚಂದ್ರಂಪಳ್ಳಿ | 12906 | 12906 | – |
| 22 | ಸೌದಾಗರ್ | 3501 | 3501 | – |
| 23 | ಹತ್ತಿಕುಣಿ | 5300 | 5300 | – |
| 24 | ಮೇಲ್ದಂಡೆ ಮುಲ್ಲಾಮಾರಿ | 8120 | 8102 | – |
| | **ಒಟ್ಟು** | **2956873** | **2173133** | **783740** |

**ಏತ ನೀರಾವರಿ ಯೋಜನೆಗಳ ಬಗ್ಗೆ**

**ಪ್ರಶ್ನೆ : 425; ಶ್ರೀ ವೀರಕುಮಾರ್ ಅಪಾಸೋ ಪಾಟೀಲ್**

ಅ. ಬೆಳಗಾವಿ ಜಿಲ್ಲೆಗೆ ಸಣ್ಣ ನೀರಾವರಿ ಇಲಾಖೆಯಿಂದ ಮಂಜೂರಾದ ಏತ ನೀರಾವರಿ ಯೋಜನೆಗಳ ಸಂಖ್ಯೆ ಎಷ್ಟು ಮತ್ತು ಯಾವುದು (ತಾಲ್ಲೂಕವಾರು ವಿವರ ನೀಡುವುದು)

ಆ. ಈ ಯೋಜನೆಗೆ ಬರುವ ಪಿಕೆಟ್ ನಾಲೆಗಳ ಸಂಖ್ಯ ಎಷ್ಟು

ಇ. ಪ್ರಸ್ತುತ ಏತ ನೀರಾವರಿ ಯೋಜನೆಗಯ ಪಿಕಪ್ ನಾಲೆಗಳ ಕಾಮಗಾರಿ ಯಾವ ಹಂತದಲ್ಲಿದೆ

ಈ. ಈ ಕಾಮಗಾರಿ ವಿಳಂಬವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ಬಂದಿದ್ದಲ್ಲಿ ಕಾಮಗಾರಿಗಳ ವಿಳಂಬಕ್ಕೆ ಕಾರಣವೇನು ?

**ಶ್ರೀ ಶಿವರಾಜ ಎಸ್. ತಂಗಡಗಿ**

ಅ. ಬೆಳಗಾವಿ ಜಿಲ್ಲೆಗೆ ಒಟ್ಟು 13 ಏತ ನೀರಾವರಿ ಯೋಜನೆಗಳು ಮಂಜೂ ರಾಗಿವೆ. ತಾಲ್ಲೂಕುವಾರು ವಿವರಗಳನ್ನು ಅನುಬಂಧದಲ್ಲಿ ಒದಗಿಸ ಲಾಗಿದೆ.

ಆ. 01.

ಇ. ಏತ ನೀರಾವರಿ ಯೋಜನೆಯ ಪಿಕಪ್ ನಾಲೆ ಕಾಮಗಾರಿ ಪೂರ್ಣ ಗೊಂಡಿರುತ್ತದೆ.

ಈ. ಇಲ್ಲ.

# ಅನುಬಂಧ

| ಕ್ರ.ಸಂ | ಜಿಲ್ಲೆ | ತಾಲ್ಲೂಕು | ಲೆಕ್ಕ ಶೀರ್ಷಿಕೆ | ಏ.ನೀ.ಯೋ ಹೆಸರು | ಅಚ್ಚುಕಟ್ಟು | ಆಡಳಿತಾತ್ಮಕ ಅನುಮೋದನೆಯ ದಿನಾಂಕ | ಅಂದಾಜು ಮೊತ್ತ | ಇಲ್ಲಿಯವರೆಗಿನ ವೆಚ್ಚ | ಕಾಮಗಾರಿಯ ಪ್ರಸ್ತುತ ಹಂತ | ಪಿಕಪ್ ನಾಲೆಗಳ ಸಂಖ್ಯೆ | ಪಿಕ್‌ಪಗಳ ಅಂದಾಜು ಮೊತ್ತ | ಇಲ್ಲಿಯ ವರೆಗಿನ ವೆಚ್ಚ | ಕಾಮಗಾರಿಯ ಪ್ರಸ್ತುತ ಹಂತ |
|---|---|---|---|---|---|---|---|---|---|---|---|---|---|
| 1 | ಬೆಳಗಾವಿ | ಚಿಕ್ಕೋಡಿ | ನಬಾರ್ಡ | ಬೋರಗಾಂವ ಗ್ರಾಮದ ಹತ್ತಿರ ಏತ ನೀರಾವರಿ ಯೋಜನೆ ನಿರ್ಮಾಣ | 520.00 | ಸರ್ಕಾರದ ಆದೇಶ ಸಂ ಸನೀಇ/10/ನಯೋಕಾ/2007 ಬೆಂಗಳೂರು ದಿನಾಂಕ 13–5–2008 | 469.00 | 566.81 | ವಿದ್ಯುತ್ ಸಂಪರ್ಕದ ಕಾಮಗಾರಿ ಪ್ರಗತಿಯಲ್ಲಿದೆ | -- | -- | -- | -- |
| 2 | ಬೆಳಗಾವಿ | ಚಿಕ್ಕೋಡಿ | ಪ್ರಧಾನ ಕಾಮಗಾರಿಗಳು | ವಡ್ರಾಳ ಗ್ರಾಮದ ಹತ್ತಿರ ಏತ ನೀರಾವರಿ ಯೋಜನೆ ನಿರ್ಮಾಣ | 16.19 | ಮು.ಇಂ. ಆದೇಶ ಸಂ 1534/ ದಿ 27–2–2009 | 30.00 | 15.34 | ಕಾಮಗಾರಿ ಪೂರ್ಣಗೊಂಡಿದೆ | | | | |
| 3 | ಬೆಳಗಾವಿ | ಚಿಕ್ಕೋಡಿ | ನಬಾರ್ಡ | ಮುಗಳಿ ಗ್ರಾಮದ ಹತ್ತಿರ ಏತ ನೀರಾವರಿ ಯೋಜನೆ ನಿರ್ಮಾಣ | 16.32 | ಸರ್ಕಾರದ ಆದೇಶ ಸಂ ಸನೀಇ/02/ ನಯೋಕಾ/2009 ಬೆಂಗಳೂರು ದಿನಾಂಕ 5–2–2009 | 27.20 | 13.52 | ಕಾಮಗಾರಿ ಪೂರ್ಣಗೊಂಡಿದೆ | | | | |
| 4 | ಬೆಳಗಾವಿ | ರಾಯಭಾಗ | ಎಸ್.ಸಿ.ಪಿ. | ಬೆಂಡವಾಡ ಗ್ರಾಮದ ಹತ್ತಿರ ಏತ ನೀರಾವರಿ ಯೋಜನೆ ನಿರ್ಮಾಣ | 228.34 | ಸರ್ಕಾರದ ಆದೇಶ ಸಂಖ್ಯೆ ಸನೀಇ/15/ಮಸಾವಿ/2009 ಬೆಂಗಳೂರು ದಿನಾಂಕ 26–2–2009 | 295.00 | 322.28 | ವಿದ್ಯುತ್ ಸಂಪರ್ಕದ ಕಾಮಗಾರಿ ಪ್ರಗತಿಯಲ್ಲಿದೆ | | | | |
| 5 | ಬೆಳಗಾವಿ | ರಾಮದುರ್ಗ | ಎ.ಐ.ಬಿ.ಪಿ. | ಕಲ್ಲಾಳ ಗ್ರಾಮದ ಹತ್ತಿರ ಬಿಸಿಬಿ & ಏತ ನೀರಾವರಿ ಯೋಜನೆ ನಿರ್ಮಾಣ | 99.00 | ಸರ್ಕಾರದ ಆಧೇಶ ಸಂಖ್ಯೆ ಸನೀಇ/236/ಮಸಾವಿ/2009 (4) ಬೆಂಗಳೂರು ದಿನಾಂಕ 09–7–2010 | 66.75 | 129.47 | ಕಾಮಗಾರಿ ಪೂರ್ಣಗೊಂಡಿದೆ | 1 | 118.90 | 72.28 | ಬ್ಯಾರೇಜ್ ಪೂರ್ಣಗೊಂಡಿದೆ |
| 6 | ಬೆಳಗಾವಿ | ಅಥಣಿ | ಎ.ಐ.ಬಿ.ಪಿ. | ಹೊಸಟ್ಟಿ ಗ್ರಾಮದ ಹತ್ತಿರ ಏತ ನೀರಾವರಿ ಯೋಜನೆ ನಿರ್ಮಾಣ | 113.10 | ಸರ್ಕಾರದ ಆಧೇಶ ಸಂಖ್ಯೆ ಸನೀಇ/12/ಮಸಾವಿ/2011 (17) (ಟೆಕ್) ಬೆಂಗಳೂರು ದಿನಾಂಕ 13–6–2011 | 178.67 | 165.93 | ಪ್ರಗತಿಯಲ್ಲಿದೆ | | | | |
| 7 | ಬೆಳಗಾವಿ | ಅಥಣಿ | ಎ.ಐ.ಬಿ.ಪಿ | ಲೋಕುರ (ಸೈಟ್–1) ಗ್ರಾಮದ ಹತ್ತಿರ ಏತ ನೀರಾವರಿ ಯೋಜನೆ ನಿರ್ಮಾಣ | 84.00 | ಸರ್ಕಾರದ ಆದೇಶ ಸಂಖ್ಯೆ ಸನೀಇ/12/ಮಸಾವಿ/2011 (3) ಬೆಂಗಳೂರು ದಿನಾಂಕ 27–06–2011 | 150.00 | 111.96 | ಪ್ರಗತಿಯಲ್ಲಿದೆ | | | | |
| 8 | ಬೆಳಗಾವಿ | ಅಥಣಿ | ಎ.ಐ.ಬಿ.ಪಿ | ಲೋಕುರ (ಸೈಟ್–2) ಗ್ರಾಮದ ಹತ್ತಿರ ಏತ ನೀರಾವರಿ ಯೋಜನೆ ನಿರ್ಮಾಣ | 84.00 | ಸರ್ಕಾರದ ಆದೇಶ ಸಂಖ್ಯೆ ಸನೀಇ/12/ಮಸಾವಿ/2011 (3) ಬೆಂಗಳೂರು ದಿನಾಂಕ 27–06–2011 | 150.00 | 117.11 | ಪ್ರಗತಿಯಲ್ಲಿದೆ | | | | |

| | | | | | | | | | | | | |
|---|---|---|---|---|---|---|---|---|---|---|---|---|
| 9 | ಬೆಳಗಾವಿ | ಅಥಣಿ | ಎ.ಐ.ಬಿ.ಪಿ. | ಲೋಕುರ (ಸೈಟ್ 4) ಗ್ರಾಮದ ಹತ್ತಿರ ಏತ ನೀರಾವರಿ ಯೋಜನೆ ನಿರ್ಮಾಣ | 74.00 | ಸರ್ಕಾರದ ಆದೇಶ ಸಂಖ್ಯೆ ಸನೀಇ/12/ಮಸಾವಿ/2011 (4) ಬೆಂಗಳೂರು ದಿನಾಂಕ 27-06-2011 | 148.00 | 109.62 | ಪ್ರಗತಿಯಲ್ಲಿದೆ | | | |
| 10 | ಬೆಳಗಾವಿ | ಅಥಣಿ | ಎ.ಐ.ಬಿ.ಪಿ. | ಲೋಕುರ (ಸೈಟ್ – 3) ಗ್ರಾಮದ ಹತ್ತಿರ ಏತ ನೀರಾವರಿ ಯೋಜನೆ ನಿರ್ಮಾಣ | 61.00 | ಸರ್ಕಾರದ ಆದೇಶ ಸಂಖ್ಯೆ ಸನೀಇ/12/ಮಸಾವಿ/2011 (4) ಬೆಂಗಳೂರು ದಿನಾಂಕ 27-06-2011 | 121.00 | 85.34 | ಪ್ರಗತಿಯಲ್ಲಿದೆ | | | |
| 11 | ಬೆಳಗಾವಿ | ಚಿಕ್ಕೋಡಿ | ನಬಾರ್ಡ್ | ಖಡಕಲಾಟ ಗ್ರಾಮದ ಹತ್ತಿರ ಏತ ನೀರಾವರಿ ಯೋಜನೆ ನಿರ್ಮಾಣ ಕಾಮಗಾರಿ | 66.00 | ಸರ್ಕಾರದ ಆದೇಶ ಸಂಖ್ಯೆ ಸನೀಇ/14/ನಯೋಕಾ/2012 (ತಾಂತ್ರಿಕ) ಬೆಂಗಳೂರು ದಿನಾಂಕ 23-01-2013 | 95.00 | 0.00 | ಕಾರ್ಯಾದೇಶ ನೀಡಲಾಗಿದೆ | | | |
| 12 | ಬೆಳಗಾವಿ | ಚಿಕ್ಕೋಡಿ | ನಬಾರ್ಡ್ | ಕೆರೂರ ಗ್ರಾಮದ ಹತ್ತಿರ ಏತ ನೀರಾವರಿ ಯೋಜನೆ ನಿರ್ಮಾಣ | 50.00 | ಸರ್ಕಾರದ ಆದೇಶ ಸಂಖ್ಯೆ ಸನೀಇ/01/ನಯೋಕಾ/2013 (ತಾಂತ್ರಿಕ) ಬೆಂಗಳೂರು ದಿನಾಂಕ 27-06-2011 | 70.00 | 0.00 | ಕಾರ್ಯಾದೇಶ ನೀಡಲಾಗಿದೆ | | | |
| 13 | ಬೆಳಗಾವಿ | ಚಿಕ್ಕೋಡಿ | ನಬಾರ್ಡ್ | ನನದಿ ಗ್ರಾಮದ ಸವೇ ನಂ 216/2ಎ, 216/ಬಿ, 195,194/1, 194/2, 135/5ಎ, 191/2, 130/3, 130/4, 136/6, 190/5, 191/3, 137 ಮತ್ತು 140 ಗಳಿಗೆ ಏತ ನೀರಾವರಿ ಯೋಜನೆ | 53.00 | ಸರ್ಕಾರದ ಆದೇಶ ಸಂಖ್ಯೆ ಸನೀಇ/01/ನಯೋಕಾ/2013 (ತಾಂತ್ರಿಕ) ಬೆಂಗಳೂರು ದಿನಾಂಕ 23-01-2013 | 70.00 | 0.00 | ಕಾರ್ಯಾದೇಶ ನೀಡಲಾಗಿದೆ | | | |

## ಸನ್‌ಪೀಸ್ಟ್ 10 ಕ್ಕೆ ಮ್ಯಾರಥಾನ್ ಓಟದ ಉದ್ದೇಶ ಮತ್ತು ಫಲಶೃತಿ ಬಗ್ಗೆ

## 574; ಶ್ರೀ ವೈ.ಎ. ನಾರಾಯಣಸ್ವಾಮಿ

ಅ) ಬೆಂಗಳೂರು ನಗರವೂ ಸೇರಿದಂತೆ ರಾಜ್ಯದ ಯಾವ ಯಾವ ಭಾಗ ಗಳಲ್ಲಿ ಖಾಸಗಿಯವರಿಂದ ಮ್ಯಾರಥಾನ್ ಓಟಗಳನ್ನು ಆಯೋಜಿಸ ಲಾಗುತ್ತಿದೆ ಕಳೆದ 5 ವರ್ಷಗಳ ಅವಧಿಯಲ್ಲಿ ಎಲ್ಲೇಲ್ಲಿ ಇಂತಹ ಓಟ ಗಳನ್ನು ಯಾವ ಉದ್ಧೇಶವಿರಿಸಿಕೊಂಡು ಆಯೋಜಿಸಲಾಗಿದೆ; (ಪ್ರತ್ಯೇಕ ಮಾಹಿತಿ ಒದಗಿಸುವ್ರದು).

ಆ) ಕಳೆದ ಐದು ವರ್ಷಗಳಲ್ಲಿ ಬೆಂಗಳೂರು ನಗರದಲ್ಲಿ ಸನ್‌ಪೀಸ್ಟ್ ಬೆಂಗ ಳೂರು ನಗರದಲ್ಲಿ ಸನ್‌ಫೀಸ್ಟ್ 10 ಕೆ ಮ್ಯಾರಥಾನ್ ಓಟಗಳನ್ನು ಎಷ್ಟು ಬಾರಿ ಆಯೋಜಿಸಲಾಗಿದೆ ಯಾವ ಖಾಸಗೀ ಸಂಸ್ಥೆ ಈ ಓಟಗಳನ್ನು ಆಯೋಜಿಸುತ್ತಿದೆ. ಈ ಓಟನಗಳನ್ನು ನಡೆಸುವ ಉದ್ಧೇಶ ಮತ್ತು ಆಗುವ ಪ್ರಯೋಜನಗಳೇನು

ಇ) ಈ ಓಟಗಳ ಪ್ರಾಯೋಜಕರಿಗೆ ಸರ್ಕಾರದ ವತಿಯಿಂದ ದೊರಕಿಸಿ ಕೊಡುವ ಸೌಕರ್ಯಗಳೇನು ( ವಿವರಗಳನ್ನು ಒದಗಿಸುವುದು)

ಈ) ಈ ಮ್ಯಾರಥಾನ್ ಓಟಗಳನ್ನು ಆಯೋಜಿಸುವ ಸಂಸ್ಥೆಯ ಆದಾಯ ವೆಚ್ಚದ ಆಡಿಟ್ ವರದಿಗಳನ್ನು ಸರ್ಕಾರವು ಗಮನಿಸಿದೆಯೆ ? (ಹಾಗಿದ್ದಲ್ಲಿ ವಿವರ ನೀಡುವುದು)

### ಶ್ರೀ ಕೆ. ಅಭಯಚಂದ್ರ (ಯುವಜನ ಸೇವಾ ಮತ್ತು ಕ್ರೀಡಾ ಹಾಗೂ ಮೀನುಗಾರಿಕೆ ಸಚಿವರು)

ಅ) ಬೆಂಗಳೂರು ನಗರ ಹೊರತುಪಡಿಸಿ ರಾಜ್ಯದ ಇನ್ನಿತರೆ ಭಾಗಗಳಲ್ಲಿ ಖಾಸಗಿಯವರಿಂದ ಸನ್‌ಫೀಸ್ಟ್ 10 ಕೆ ಮ್ಯಾರಥಾನ್ ಓಟಗಳನ್ನು ಅಯೋಜಿಸಿರುವುದಿಲ್ಲ.

ಕಳೆದ ಐದು ವರ್ಷಗಳಲ್ಲಿ ಬೆಂಗಳೂರಿನಲ್ಲಿ ಮ್ಯಾರಥಾನ್ ಕ್ರೀಡೆಯನ್ನು ಉತ್ತಜಿಸಲು 2008, 2009 ಮತ್ತು 2010 ರಲ್ಲಿ (ಮೂರು ಬಾರಿ)

ಸನ್‌ಫೀಸ್ಟ್ ವರ್ಲ್ಡ್ 10 ಕೆ ಮ್ಯಾರಥಾನ್ ಓಟವನ್ನು 2011 ಮತ್ತು 2012 ರಲ್ಲಿ (ಎರಡು ಬಾರಿ) ಟಿಸಿಎಸ್ ವರ್ಲ್ಡ್ 10 ಕೆ ಮ್ಯಾರಥಾನ್ ಓಟವನ್ನು ಆಯೋಜಿಸಲಾಗಿದೆ. ಇದು ಆಟೋಟದ / ಅಥ್ಲೆಟಿಕ್ ಕ್ರೀಡೆಯ ಒಂದು ಭಾಗವಾಗಿರುತ್ತದೆ.

ಆ) ಕಳೆದ ಐದು ವರ್ಷಗಳಲ್ಲಿ ಬೆಂಗಳೂರು ನಗರದಲ್ಲಿ ಸನ್‌ಪೀಸ್ಟ್ 10 ಕೆ ಮ್ಯಾರಥಾನ್ ಓಟಗಳನ್ನು 2008, 2009 ಮತ್ತು 2010 ನೇ ಸಾಲಿನಲ್ಲಿ ಸಂಘಟಿಸಲಾಗಿರುತ್ತದೆ.

ಈ ಓಟಗಳನ್ನು ಮೆ ಪ್ರೋಕ್ಯಾಮ್ ಇಂಟರ್ ನ್ಯಾಷನಲ್ ಪ್ರೈ ಲಿಮೆಟೆಡ್ ಸಂಸ್ಥೆ ಸಂಖ್ಯೆ 489/28 ಎಸ್ 3 ಮೂರನೇ ಮಹಡಿ, 13 ನೇ ತಿರುವು, ವಿಲ್ಸನ್ ಗಾರ್ಡನ್, ಬೆಂಗಳೂರು 27 ಇವರು ಕರ್ನಾಟಕ ಅಥ್ಲೆಟಿಕ್ ಸಂಸ್ಥೆ ಮತ್ತು ಸರ್ಕಾರದ ವಿವಿಧ ಇಲಾಖೆಗಳ ಸಹಯೋಗದೊಂದಿಗೆ ಆಯೋಜಿಸುತ್ತಿದೆ.

ಸನ್‌ಫೀಸ್ಟ್ 10 ಕೆ ಮ್ಯಾರಥಾನ್ ಓಟಕ್ಕೆ ಭಾರತದ ಅಥ್ಲೆಟಿಕ್ ಫೆಡರೇಷನ್ ಸಂಸ್ಥೆಯವರು ಮತ್ತು ಅಂತರರಾಷ್ಟ್ರೀಯ ಅಥ್ಲೆಟಿಕ್ ಸಂಸ್ಥೆಯವರು ಅನುಮತಿಯನ್ನು ನೀಡಿರುತ್ತಾರೆ. ಸನ್‌ಫೀಸ್ಟ್ 10 ಕೆ ಮ್ಯಾರಥಾನ್ ಓಟದಲ್ಲಿ ಒಲಂಪಿಕ್ಸ್ ಕ್ರೀಡಾಕೂಟದಲ್ಲಿ ಭಾಗವಹಿಸಿದ ಅಂತರರಾಷ್ಟ್ರೀಯ ಕ್ರೀಡಾಪಟುಗಳು ಭಾಗವಹಿಸುವರು. ಇದರಿಂದಾಗಿ ರಾಜ್ಯದ ಕ್ರೀಡಾಪಟುಗಳಿಗೆ, ಐಟಿ ಬಿಟಿ ಸಿಬ್ಬಂದಿಗಳಿಗೆ, ಹಿರಿಯ ಕ್ರೀಡಾಪಟುಗಳಿಗೆ ಮತ್ತು ಸಾರ್ವಜನಿಕರಿಗೆ ಒಲಂಪಿಕ್ಸ್ ಕ್ರೀಡಾಕೂಟದಲ್ಲಿ ಭಾಗವಹಿಸುವ ಕ್ರೀಡಾಪಟುಗಳೊಂದಿಗೆ ಸ್ಪರ್ಧಿಸಲು ಅವಕಾಶ ದೊರಕಿದಂತಾಗಿದೆ. ಅಲ್ಲದೇ ಸಾರ್ವಜನಿಕರಲ್ಲಿ ಕ್ರೀಡೆಗಳಲ್ಲಿ ಭಾಗವಹಿಸಲು ಉತ್ತೇಜನ ನೀಡುವ ಮೂಲಕ ಕ್ರೀಡಾ ಮನೋಭಾವ ವೃದ್ಧಿಗೆ ಕಾರಣವಾಗಿದೆ.

ಈ ಸಂದರ್ಭದಲ್ಲಿ ಸಸಿ ನೆಡುವ ಕಾರ್ಯಕ್ರಮದ ಬಗ್ಗೆ ಜಾಗೃತಿಯನ್ನು ಸಹ ಮೂಡಿಸಲಾಗುತ್ತಿದೆ.

ಅಲ್ಲದೇ ಸನ್‌ಫೀಸ್ಟ್ 10 ಕೆ ಮ್ಯಾರಥಾನ್ ಕ್ರೀಡಾ ಕಾರ್ಯಕ್ರಮದ ಅಂಗವಾಗಿ ಯುವಜನ ಸೇವಾ ಮತ್ತು ಕ್ರೀಡಾ ಇಲಾಖೆಗೆ ಕ್ರೀಡೆಗಳ /ಕ್ರೀಡಾಂಗಣಗಳ ಅಭಿವೃದ್ಧಿಗಾಗಿ ಸಂಘಟಕರು ದೇಣಿಗೆಯನ್ನು ನೀಡುತ್ತಿದ್ದಾರೆ. ದೇಣಿಗೆಯ ವಿವರ ಈ ಕೆಳಕಂಡಂತಿದೆ.

2008 ನೇ ಸಾಲಿನಲ್ಲಿ ₹ 5.00 ಲಕ್ಷ

2009 ನೇ ಸಾಲಿನಲ್ಲಿ ₹ 5.00 ಲಕ್ಷ

2010 ನೇ ಸಾಲಿನಲ್ಲಿ ₹ 10.00 ಲಕ್ಷ

ಈ ಕ್ರೀಡಾ ಕಾರ್ಯಕ್ರಮದಲ್ಲಿ ವಿವಿಧ ದೇಶಗಳಿಂದ, ರಾಜ್ಯಗಳಿಂದ ಕ್ರೀಡಾಪಟುಗಳು ಭಾಗವಹಿಸುವುದರಿಂದ ಮತ್ತು ಈ ಕಾರ್ಯಕ್ರಮನ್ನು ಹೊರ ದೇಶಗಳಲ್ಲಿ ಟೆಲಿವಿಷನ್ ಮೂಲಕ ನೇರ ಪ್ರಸಾರ ಮಾಡುವುದರಿಂದ ಬೆಂಗಳೂರು ನಗರದ ಪ್ರಸಿದ್ಧಿಗೆ ಕೊಡುಗೆ ನೀಡಿದೆ.

ಇ) ಸನ್‌ಫೀಸ್ಟ್ 10 ಕೆ ಮ್ಯಾರಥಾನ್ ಕ್ರೀಡಾ ಕಾರ್ಯಕ್ರಮವನ್ನು ಸಂಘಟಿ ಸಲು ಕ್ರೀಡಾಂಗಣದ ಸೌಲಭ್ಯವನ್ನು ಒದಗಿಸಲಾಗುತ್ತಿದೆ.

ಈ) ಕ್ರೀಡೆಯನ್ನು ಉತ್ತೇಜಿಸುವ ಸಲುವಾಗಿ ಸನ್‌ಫೀಸ್ಟ್ ವರ್ಲ್ಡ್ 10 ಕೆ ಮ್ಯಾರಥಾನ್ ಕ್ರೀಡಾ ಕಾರ್ಯಕ್ರಮವನನ್ನು ನಡೆಸಲು ಕ್ರೀಡಾಂಗಣವನ್ನು ಒದಗಿಸಲಾಗುತ್ತಿದೆ. ಆದರೆ, ಇಲಾಖೆಯಿಂದ ಕಾರ್ಯಕ್ರಮಕ್ಕೆ ಯಾವುದೇ ರೀತಿಯ ಅನುದಾನ/ಧನಸಹಾಯ ಒದಗಿಸುತ್ತಿಲ್ಲ. ಆದ್ದ ರಿಂದ ಸನ್‌ಫೀಸ್ಟ್ 10 ಕೆ ಮ್ಯಾರಥಾನ್ ಕ್ರೀಡಾ ಕಾರ್ಯಕ್ರಮ ಆಯೋ ಜಿಸುವ ಸಂಸ್ಥೆಯ ಆದಾಯ ವೆಚ್ಚದ ಆಡಿಟ್ ವರದಿಗಳನ್ನು ಪರಿಶೀಲಿ ಸಿರುವುದಿಲ್ಲ.

## ಕಾವೇರಿ ನೀರಿನ ವಿವಾದಕ್ಕೆ ಸಂಬಂಧಿಸಿದಂತೆ ನೇಮಿಸಲಾಗಿರುವ ವಕೀಲರಗಳ ಸೇವೆ ಬಗ್ಗೆ

**428; ವೈ ಎ. ನಾರಾಯಣಸ್ವಾಮಿ ( ಶಿಕ್ಷಕರ ಕ್ಷೇತ್ರ)**

ಅ) ಕಾವೇರಿ ನದಿಯ ನೀರಿನ ವಿವಾದದಲ್ಲಿ ರಾಜ್ಯದ ಪರವಾಗಿ ವಾದ ವಿವಾದ ಮಂಡಿಸಲು ಇದೂವರೆಗೆ ನೇಮಿಸಲಾಗಿರುವ ವಕೀಲರೆಷ್ಟು (ಹೆಸರು ಹಾಗೂ ತತ್ಸಬಂಧ ವಿವರಗಳನ್ನು ನೀಡುವುದು);

ಆ) ಈ ವಕೀಲರಿಗೆ ಸರ್ಕಾರ ಪಾವತಿಸಿರುವ ಸಂಭಾವನೆ ಮೊತ್ತವೆಷ್ಟು (ವಿವರಗಳನ್ನು ವಕೀಲವಾರು ನೀಡುವುದು);

ಇ) ಇದೂವರೆಗೆ ಈ ಸಂಬಂಧ ಮಾಡಿರುವ ಒಟ್ಟು ವೆಚ್ಚವೆಷ್ಟು;

ಈ) ವಿವಾದದಲ್ಲಿ ಕರ್ನಾಟಕ ಸರ್ಕಾರದ ಪರ ಬಂದಿರುವ ತೀರ್ಪುಗಳೆಷ್ಟು;

**ಶ್ರೀ ಎಂ.ಬಿ. ಪಾಟೀಲ್ (ಜಲ ಸಂಪನ್ಮೂಲ ಸಚಿವರು)**

ಅ) ಕಾವೇರಿ ನದಿಯ ನೀರಿನ ವಿವಾದದಲ್ಲಿ ರಾಜ್ಯದ ಪರವಾಗಿ ವಾದ ವಿವಾದ ಮಂಡಿಸಲು ಇದೂವರೆಗೆ ನೇಮಿಸಲಾಗಿರುವ ವಕೀಲರೆಷ್ಟು (ಹೆಸರು ಹಾಗೂ ತತ್ಸಬಂಧ ವಿವರಗಳನ್ನು ನೀಡುವುದು)

ಆ) ಅಡ್ವೋಕೆಟ್ ಜನರಲ್ ಮತ್ತು ವಕೀಲುರಗಳಿಗೆ ಪಾವತಿಸಿರುವ ಸಂಭಾವನೆಯ (ವೃತ್ತಿ ಶುಲ್ಕ) ಒಟ್ಟು ಮೊತ್ತ 32.00 ಕೋಟಿ (ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ)

ಇ) ಅಡ್ವೋಕೇಟ್ ಜನರಲ್ ಮತ್ತು ವಕೀಲುರಗಳಿಗೆ ಜೂನ್ 2013 ರ ಅಂತ್ಯದವರೆಗೆ ನೀಡಿರುವ ಸಂಭಾವನೆ (ವೃತ್ತಿ ಶುಲ್ಕ) ಪ್ರಯಾಣ ವೆಚ್ಚ ಹಾಗೂ ವಾಸ್ತವ್ಯ ವೆಚ್ಚ ಸೇರಿ ಒಟ್ಟು ₹ 32.91 ಕೋಟಿ ಆಗಿದೆ.

ಈ) ಕಾವೇರಿ ನ್ಯಾಯಮಂಡಳಿಯು ಕರ್ನಾಟಕ, ತಮಿಳುನಾಡು ಮತ್ತು ಪಾಂಡಿಚೇರಿಯ ವಾದಗಳನ್ನು ಆಲಿಸಿ, ಸುದೀರ್ಘ ವಿಚಾರಣೆ ನಡೆಸಿದ ನಂತರ ದಿನಾಂಕ 5.2.2007 ರಲ್ಲಿ ತನ್ನ ಅಂತಿಮ

ಆದೇಶವನ್ನು ನೀಡಿದೆ. ಅದರಂತೆ ಕರ್ನಾಟಕಕ್ಕೆ 270 ಟಿಎಂಸಿ ನೀರನ್ನು ಹಂಚಿಕೆ ಮಾಡಿದೆ ಮತ್ತು ಬಿಳಿಗುಂಡ್ಲು ಸಮೀಪ 192 ಟಿಎಂಸಿ ನೀರನ್ನು ಸಾಮಾನ್ಯ ವರ್ಷದಲ್ಲಿ ಖಚಿತಪಡಿಸಲು ಸೂಚಿಸಿದೆ.

ಸದರಿ ಆದೇಶವನ್ನು ಪ್ರಶ್ನಿಸಿ ಕರ್ನಾಟಕ, ತಮಿಳುನಾಟು ಮತ್ತು ಕೇರಳ ರಾಜ್ಯಗಳು ಸರ್ವೋಚ್ಛ ನ್ಯಾಯಾಲಯದ ಮುಂದೆ ಸಿವಿಲ್ ಅಪೀಲ್ ಗಳನ್ನು ಸಲ್ಲಿಸಿದ್ದು ವಿಚಾರಣೆಗಾಗಿ ಬಾಕಿ ಇವೆ. ಎಲ್ಲಾ ಕಣಿವೆ ರಾಜ್ಯಗಳು ನ್ಯಾಯಾಧಿಕರಣದ ಮುಂದೆ ಸ್ಪಷ್ಟಿಕರಣಗಳನ್ನು ಕೋರಿ ಪುನರ್ ಪರಿಶೀಲನಾ ಅರ್ಜಿಗಳನ್ನು ಸಲ್ಲಿಸಿದ್ದು ಇವುಗಳೂ ಸಹ ಬಾಕಿ ಇವೆ.

**ಕಾವೇರಿ ಜಲ ವಿವಾದದಲ್ಲಿ ನೇಮಿಸಲಾಗಿರುವ ವಕೀಲರ ವಿವರ ಹಾಗೂ ಪಾವತಿಸಿರುವು ಸಂಭಾವನೆಯ ವಿವರಗಳು (ಜೂನ್ 2013 ರ ಅಂತ್ಯದವರೆಗೆ)**

| **ಕ್ರ.ಸಂಖ್ಯೆ** | **ವಕೀಲರು** | **ಸಂಭಾವನೆ ಮೊತ್ತ (ರೂ.ಗಳಲ್ಲಿ)** |
|---|---|---|
| | **ಅಡ್ವೋಕೆಟ್ ಜನರಲ್‌ಗಳು** | |
| 1 | ಬಿ.ವಿ.ಆಚಾರ್ಯ | 8.88.000 |
| 2 | ಶಿವಪ್ಪ | 2,66,000 |
| 3 | ಪಿ.ಪಿ.ಮುತ್ತಣ್ಣ | 3,08,000 |
| 4 | ಎಮ್ ಆರ್. ಜನಾರ್ಧನ | 5,82,000 |
| 5 | ಎಸ್. ವಿಜಯ್‌ಶಂಕರ | 44,98,500 |
| 6 | ಎ. ಎನ್. ಜಯರಾಂ | 76,05,000 |
| 7 | ಬಿ. ಟಿ. ಪಾರ್ಥಸಾರಥಿ | 8,55,000 |
| 8 | ಉದಯಹೊಳ್ಳ | 4,35,000 |
| 9 | ಅಶೋಕ ಹಾರನಳ್ಳಿ | 000 |
| 10 | ರವಿವರ್ಮ ಕುಮಾರ್ | 000 |
| | ಹಿರಿಯ ವಕೀಲರು | |

| | | |
|---|---|---|
| 11 | ಎಫ್.ಎಸ್. ನಾರಿಮನ್ | 4,57,83,000 |
| 12 | ಅನಿಲ್ ಬಿ. ದಿವಾನ್ | 12,77,55,913 |
| 13 | ಎಸ್ ಎಸ್. ಜವಳಿ | 4,26,00,500 |
| ವಕೀಲರುಗಳು | | |
| 14 | ಮೋಹನ್ ವಿ. ಕಾತರ್ಕಿ | 3,96,41,750 |
| 15 | ವೈ ಎಸ್. ಚಿತಾಲೆ | 18,93,100 |
| 16 | ಎ.ವೈ. ಚಿತಾಲೆ | 2,61,600 |
| 17 | ಎಸ್.ಸಿ ಶರ್ಮ | 51,20,450 |
| 18 | ಟಿ. ಆರ್. ಅಂಧ್ಯಾರ್ಜುನ | 12,06,000 |
| 19 | ಬಿ. ಎಂ. ನರಗೋಲ್ಕರ್ | 2,27,000 |
| 20 | ಸೈಯದ್ ನಕ್ವಿ | 19,51,250 |
| 21 | ಎಂ. ವೀರಪ್ಪ | 1,16,000 |
| 22 | ಎಸ್.ಪಿ.ಸಿಂಗ್ | 2,53,58,550 |
| 23 | ಅಶೋಖ ಮಾಥೂರ್ | 3,000 |
| 24 | ಪದ್ಮನಾಬ ಮಹಾಲೆ | 58,700 |
| 25 | ನಂಜಪ್ಪ ಗಣಪತಿ | 65,000 |
| 26 | ಸಂಜಯ್ ಆರ್. ಹೆಗಡೆ | 21,85,000 |
| 27 | ರಣವೀರ್‌ಸಿಂಗ್ | 28,94,875 |
| 28 | ಬ್ರಿಜೇಶ ಕಾಳಪ್ಪ | 66,97,500 |
| 29 | ವಿ. ಎನ್. ರಘುಪತಿ | 18,75,000 |
| 30 | ಆರ್. ಎಸ್. ರವಿ | 0.000 |
| 31 | ಜೆ. ಎಮ್. ಗಂಗಾಧರ್ | 0.000 |
| | **ಒಟ್ಟು ಮೊತ್ತ ರೂ (ಕೋಟಿಗಳಲ್ಲಿ)** | **32.00** |

**ಕಬ್ಬು ಬೆಳೆಗಾರರಿಗೆ ಪಾವತಿಯಾಗಬೇಕಿರುವ ಬಾಕಿ ಹಣದ ಬಗ್ಗೆ**

**450; ಶ್ರೀ ಕೆ.ಬಿ. ಶಾಣಪ್ಪ ( ನಾಮನಿರ್ದೇಶನ ಹೊಂದಿದವರು)**

ಅ) ಗುಲ್ಬರ್ಗಾ ಜಿಲ್ಲೆಯ ಆಳಂದ ತಾಲ್ಲೂಕಿನ ಭೂಸಮಾರು ಗ್ರಾಮ ದಲ್ಲಿರುವ ಸಕ್ಕರೆ ಕಾರ್ಖಾನೆಗೆ ಕಳೆದ ಹಂಗಾಮಿನಲ್ಲಿ ಕಬ್ಬು ಪೂರೈಸಿದ ರೈತರಿಗೆ ಬರಬೇಕಾದ ಬಾಕಿ ಹಣವನ್ನು ಕಾರ್ಖಾನೆಯವರು ಬಿಡುಗಡೆ ಮಾಡದೆ ಇರುವುದರಿಂದ ರೈತರು ತೊಂದರೆ ಅನುಭವಿಸುತ್ತಿರುವ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಎಷ್ಟು ಜನ ರೈತರಿಗೆ ಏಷ್ಟಷ್ಟು ಬಾಕಿ ಹಣ ಪಾವತಿಸಬೇಕಾಗಿದೆ? ಯಾವಾಗ ಪಾವತಿಸಲಾಗುವುದು ಈ ಬಗ್ಗೆ ಯಾವ ಕ್ರಮ ಕೈಗೊಳ್ಳ ಲಾಗಿದೆ (ವಿವರಿಸುವುದು)

ಇ) ಸದರಿ ಕಾರ್ಖಾನೆಯಲ್ಲಿ ಸೇವೆ ಸಲ್ಲಿಸುತ್ತಿರುವ ಸಿಬ್ಬಂದಿ /ಕಾರ್ಮಿಕ ವರ್ಗದವರ ಸಂಖ್ಯೆ ಎಷ್ಟು? ಇವರೆಲ್ಲರಿಗೂ ಸರಿಯಾದ ಸಮಯಕ್ಕೆ ವೇತನ/ ಭತ್ಯೆಗಳನ್ನು ಸರ್ಕಾರ ಪಾವತಿಸುತ್ತಿದೆಯೆ? (ವಿವರ ನೀಡುವುದು)

**ಶ್ರೀ ಪ್ರಕಾಶ ಬಾಬಣ್ಣ ಹುಕ್ಕೇರಿ ( ಸಣ್ಣ ಕೈಗಾರಿಕೆ, ಮುಜರಾಯಿ ಮತ್ತು ಸಕ್ಕರೆ ಸಚಿವರು)**

ಅ) ಗುಲ್ಬರ್ಗಾ ಜಿಲ್ಲೆಯ ಆಳಂದ ತಾಲ್ಲೂಕಿನ ಭೂಸಮಾರು ಗ್ರಾಮದಲ್ಲಿ ರುವ ಸಹಕಾರ ಸಕ್ಕರೆ ಕಾರ್ಖಾನೆಯನ್ನು ಎನ್‌ಎಸ್‌ಎಲ್ ಶುಗರ್ಸ್ ಇವರಿಗೆ ಗುತ್ತಿಗೆ ನೀಡಲಾಗಿದ್ದು, ಈ ಕಾರ್ಖಾನೆಯು 2012–13 ನೇ ಸಾಲಿನ ಹಂಗಾಮಿನಲ್ಲಿ ಒಟ್ಟು 6.51 ಲಕ್ಷ ಟನ್ ಕಬ್ಬು ಅರೆದಿರುತ್ತದೆ. ಈ ಕಾರ್ಖಾನೆಯು ಪ್ರತಿ ಟನ್ ಗೆ ₹ 2200/ ರಂತೆ ಎಕ್ಸ್ ಫೀಲ್ಡ್ ದರದಲ್ಲಿ ರೈತರಿಗೆ ಪಾವತಿಸಬೇಕಾದ ಮೊತ್ತ ₹ 14322 ಲಕ್ಷಗಳನ್ನು ಸಂಪೂರ್ಣವಾಗಿ ಪಾವತಿ ಮಾಡಿದ್ದು ಈ ಬಾಬ್ತು ಬಾಕಿ ಇರುವುದಿಲ್ಲವೆಂದು ತಿಳಿಸಿದೆ.

ಈ ಕಾರ್ಖಾನೆ 2012–13 ನೇ ಸಾಲಿನಲ್ಲಿ ಹೆಚ್ಚುವರಿಯಾಗಿ ಪ್ರತಿ ಟನ್‌ಗೆ ₹ 100 ರಂತೆ ಕಬ್ಬಿನ ದರವನರ್ನು ಪಾವತಿಸಲು ಒಪ್ಪಿದ್ದು ಸದರಿ ಮೊತ್ತ ₹ 6.51 ಕೋಟಿಗಳನ್ನು 2013–14 ನೇ ಸಾಲಿನ ಹಂಗಾಮು ಪ್ರಾರಂಭವಾಗುವುದಕ್ಕೆ ಮೊದಲು ಪಾವತಿಸುವುದಾಗಿ ತಿಳಿಸಿದೆ.

ಆ) ಕಾರ್ಖಾನೆಯಲ್ಲಿ ಪ್ರಸ್ತುತ 678 ಸಿಬ್ಬಂದಿ/ಕಾರ್ಮಿಕ ವರ್ಗದವರು ಇದ್ದಾರೆ. ಇವರಿಗೆ ವೇತನ ಭತ್ಯೆಗಳನ್ನು ಸರ್ಕಾರ ಪಾವತಿಸುತ್ತಿಲ್ಲ. ಇವರ ವೇತನ ಭತ್ಯೆಗಳನ್ನು ಸದರಿ ಕಾರ್ಖಾನೆಯೇ ಸಂಪೂರ್ಣವಾಗಿ ಪಾವತಿಸಿದ್ದು ಪ್ರತಿ ತಿಂಗಳು 5/6 ನೇ ತಾರೀಖಿನ ಒಳಗಾಗಿ ಪ್ರತಿಯೊಬ್ಬರಿಗೂ ಸಂಬಳ ಪಾವತಿಸುತ್ತಿರುವದಾಗಿ ಕಾರ್ಖಾನೆ ತಿಳಿಸಿದೆ.

**ಹೊಸ ತಾಲ್ಲೂಕುಗಳ ರಚನೆ**

**504; ಶ್ರೀ ಕೆ.ಬಿ.ಶಾಣಪ್ಪ**

ಅ) ಹೊಸ ತಾಲ್ಲೂಕುಗಳಿಗೆ ಮೂಲಭೂತ ಸೌಕರ್ಯ ಒದಗಿಸಲು ಈ ವರ್ಷದ ಆಯವ್ಯಯದಲ್ಲಿ ಎಷ್ಟು ಹಣ ಕಾಯ್ದಿರಿಸಲಾಗಿದೆ;

ಆ) ಎಲ್ಲಾ ಹೊಸ ತಾಲ್ಲೂಕುಗಳಿಗೆ ಎಷ್ಟು ವರ್ಷಗಳಲ್ಲಿ ಮೂಲಭೂತ ಸೌಕರ್ಯ ಒದಗಿಸಲಾಗುವುದು;

**ಶ್ರೀ ವಿ. ಶ್ರೀನಿವಾಸ ಪ್ರಸಾದ್ ( ಕಂದಾಯ ಸಚಿವರು)**

ಅ) ದಿನಾಂಕ 12–7–2013 ರಂದು ಮಂಡಿಸಲಾದ 2013–14 ನೇ ಸಾಲಿನ ಆಯವ್ಯಯ ಭಾಷಣದಲ್ಲಿ ಯಾವುದೇ ಅನುದಾನವನ್ನು ಕಾಯ್ದಿರಿಸಿ ರುವುದಿಲ್ಲ.

ಆ) ಎಲ್ಲಾ ದೃಷ್ಟಿ ಕೋನಗಳಿಂದ ಪರಾಮರ್ಶಿಸಿ ಹಂತ ಹಂತವಾಗಿ ಹೊಸ ತಾಲ್ಲೂಕುಗಳನ್ನು ರಚಿಸುವ ಬಗ್ಗೆ ಕ್ರಮ ಕೈಗೊಳ್ಳಲಾಗುವುದು. ತದ

ನಂತರ ಮೂಲಭೂತ ಸೌಕರ್ಯ ಒದಗಿಸಲು ಅಗತ್ಯ ಕ್ರಮ ವಹಿಸಲಾಗುವುದು.

**ಗುಲ್ಬರ್ಗಾದಲ್ಲಿ ಜವಳಿ ಪಾರ್ಕ್ ಸ್ಥಾಪನೆ ಮಾಡುವ ಬಗ್ಗೆ**

**440; ಶ್ರೀ ಕೆ.ಬಿ.ಶಾಣಪ್ಪ (ನಾಮನಿರ್ದೇಶನ ಹೊಂದಿದವರು)**

ಅ) ಗುಲ್ಬರ್ಗಾದಲ್ಲಿ ಜವಳಿ ಪಾರ್ಕ ಸ್ಥಾಪಿಸುವ ಬಗ್ಗೆ ಸರ್ಕಾರದ ನಿಲುವು ಏನು.

ಆ) ಜವಳಿ ಪಾರ್ಕ ಯಾವಾಗ ಸ್ಥಾಪಿಸಲಾಗುವುದು.

ಇ) ಈ ವರ್ಷ ಇದಕ್ಕಾಗಿ ಆಯವ್ಯಯದಲ್ಲಿ ಕಾಯ್ದಿರಿಸಿರುವ ಹಣ ಎಷ್ಟು ?

**ಶ್ರೀ ಬಾಬುರಾವ ಚಿಂಚನಸೂರ್ (ಜವಳಿ, ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವರು)**

ಅ) ಗುಲ್ಬರ್ಗಾದಲ್ಲಿ ಜವಳಿ ಪಾರ್ಕ ಸ್ಥಾಪಿಸುವುದು ಸರ್ಕಾರದ ನಿಲುವಾಗಿರು ತ್ತದೆ.

ಆ) ಕೇಂದ್ರ ಸರ್ಕಾರದ ಸಂಯೋಜಿತ ಟೆಕ್ಸ್‌ಟೈಲ್ಸ್ ಪಾರ್ಕಗಳ ಯೋಜನೆ (ಎಸ್.ಐ.ಟಿ.ಪಿ) ಯಲ್ಲಿ ಗುಲ್ಬರ್ಗಾ ಜವಳಿ ಪಾರ್ಕ ಸ್ಥಾಪಿಸಲು ಅನು ಮೋದನೆ ನೀಡಲಾಗಿದ್ದು, ಪಾರ್ಕ್ ಸ್ಥಾಪನೆ ಸಂಬಂಧ ಟೆಕ್ನಿಕಲ್ ಕನ್ಸಲ್ಟೆಂಟ್ ನೇಮಕಾತಿ ಆಗಿದ್ದು, ಪಾರ್ಕ ಸ್ಥಾಪನೆ ಕಾರ್ಯ ಪ್ರಗತಿಯಲ್ಲಿದೆ.

ಇ) ಪ್ರಸಕ್ತ ಸಾಲಿನ ಆಯವ್ಯಯದಲ್ಲಿ ಪಾರ್ಕಗಳ ಸ್ಥಾಪನೆಗೆ ₹ 8.00 ಕೋಟಿಗಳನ್ನು ನಿಗಡಿಪಡಿಸಲಾಗಿದೆ.

ಗುಲ್ಬರ್ಗಾ ಜವಳಿ ಪಾರ್ಕಗೆ ಜವಳಿ ನೀತಿಯಡಿ ರೂ. 2.00 ಕೋಟಿ ಅನುದಾನ ನೀಡಲಾಗಿದೆ.

## ವರಾಹಿ ಯೋಜನೆಯಲ್ಲಾದ ಅವ್ಯವಹಾರಗಳ ಬಗ್ಗೆ

**455; ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ( ಸ್ಥಳೀಯ ಸಂಸ್ಥೆಗಳ ಕ್ಷೇತ್ರ )**

1. ಸರ್ಕಾರವು ಮೂವತ್ತಮೂರು ವರ್ಷಗಳಿಂದ ನೆನೆಗುದಿಗೆ ಬಿದ್ದ ಕೋಟ್ಯಾಂತರ ರೂಪಾಯಿ ವೆಚ್ಚ ಮಾಡಿದ ವರಾಹಿ ಯೋಜನೆಯ ಪರಿ ಣಾಮಕಾರಿ ಅನುಷ್ಠಾನಕ್ಕೆ ಸದನ ಸಮಿತಿಯನ್ನು ರಚಿಸಿ ವರಾಹಿ ಯೋಜನೆಯಲ್ಲಾಗಿರತಕ್ಕಂತಹ ಅವ್ಯವಹಾರಗಳನ್ನು ತನಿಖೆ ಮಾಡಿ, ಸರ್ಕಾರದ ಬೊಕ್ಕಸಕ್ಕೆ ಆಗಿರತಕ್ಕಂತಹ ನಷ್ಟವನ್ನು ವಸೂಲಿ ಮಾಡು ವುದರೊಂದಿಗೆ, ರೈತರಿಗೆ ಆದ ಅನ್ಯಾಯವನ್ನು ಸರಿಪಡಿಸಲು ಕ್ರಮ ಕೈಗೊಳ್ಳಲಾಗುವುದೇ?
2. ಹಿಂದಿನ ಸರ್ಕಾರಗಳು ವರಾಹಿ ಯೋಜನೆಯಲ್ಲಾಗಿರುವ ಅವ್ಯ ವಹಾರಗಳ ತನಿಖೆಗೆ ಆದೇಶ ಮಾಡಿದ ಪ್ರಕರಣಗಳಾವುವು: ಮತ್ತು ತನಿಖೆ ಯಾವ ಹಂತದಲ್ಲಿದೆ (ಪ್ರತಿಯೊಂದು ತನಿಖೆ ಮಾಡಿದ ವರದಿ ಯನ್ನು ನೀಡುವುದು)?

**ಶ್ರೀ ಎಂ.ಬಿ. ಪಾಟೀಲ್ (ಜಲಸಂಪನ್ಮೂಲ ಸಚಿವರು)**

1. ವರಾಹಿ ನೀರಾವರಿ ಯೋಜನೆಯಲ್ಲಿ ನಡೆದಿರುವ ಅವ್ಯವಹಾರ ಹಾಗೂ ಕಳಪೆ ಕಾಮಗಾರಿ ಕುರಿತು ಸರ್ಕಾರದ ಗಮನಕ್ಕೆ ಬಂದಿದ್ದು, ಈ ಬಗ್ಗೆ ತನಿಖೆ ನಡೆಸಿ ವರದಿ ಸಲ್ಲಿಸಲು ದಿನಾಂಕ: 24/11/2006ರಂದು ಜಲ ಸಂಪನ್ಮೂಲ ಇಲಾಖೆಯ ವಿಚಕ್ಷಣಾ ದಳಕ್ಕ ವಹಿಸಲಾಗಿತ್ತು. ವಿಚಕ್ಷಣಾ ದಳವು ಈ ಪ್ರಕರಣದಲ್ಲಿ ತನಿಖೆ ನಡೆಸಿ ದಿನಾಂಕ: 06/01/2007 ರಂದು ವರದಿ ನೀಡಿರುತ್ತದೆ.. ವರದಿಯಲ್ಲಿ ಈ ಯೋಜನೆಯ ಅಂದಾಜು ವೆಚ್ಚದಲ್ಲಾಗಿರುವ ಹೆಚ್ಚುವರಿ ಬಗ್ಗೆ ಮಾತ್ರ ಅಭಿಪ್ರಾಯ ವ್ಯಕ್ತ ಪಡಿಸಿದೆ. ವಿಚಕ್ಷಣಾ ದಳದ ಶಿಫಾರಸ್ಸಿನ ಮೇರೆಗೆ. ಅಗತ್ಯ ಕ್ರಮ ಕೈಗೊಳ್ಳುವಂತ ವ್ಯವಸ್ಥಾಪಕ ನಿರ್ದೇಶಕರು. ಕರ್ನಾಟಕ ನೀರಾವರಿ ನಿಗಮ ನಿಯಮಿತ ಇವರಿಗೆ ನಿರ್ದೇಶನ ನೀಡಲಾಗಿದ.

2. 1. ಮೇಲೆ ತಿಳಿಸಿದ ವಿಚಕ್ಷಣಾ ದಳದ ವರದಿ ದಿನಾಂಕ 06/01/2001

2. ದಿನಾಂಕ 05–06–2012ರಂದು ವಿಚಕ್ಶಣಾ ದಳಕ್ಕೆ ನೀಡಲಾದ ನಿರ್ದೇಶನದಂತೆ ವಿಚಕ್ಷಣಾ ದಳದ ಪರಿಶೀಲನೆಯಲ್ಲಿದೆ.

## ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳಲ್ಲಿ ಭೂಮಾಪನಕ್ಕೆ ಕೋರಿ ಬಂದ ಅರ್ಜಿಗಳು

## 454; ಶ್ರೀ ಕೆ. ಪ್ರತಾಪ ಚಂದ್ರ ಶೆಟ್ಟಿ

ಅ ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳಲ್ಲಿ ಕಳೆದ ಮೂರು ವರ್ಷ ಗಳಲ್ಲಿ ಭೂಮಾಪನಕ್ಕೆ ಕೋರಿ ಬಂದ ಅರ್ಜಿಗಳ ಸಂಖ್ಯೆ ಎಷ್ಟು ಅವು ಗಳಲ್ಲಿ ವಿಲೇವಾರಿ ಮಾಡಿದ ಅರ್ಜಿಗಳೆಷ್ಟು (ತಾಲ್ಲೂಕುವಾರು, ವರ್ಷಾ ವಾರು ವಿವರ ನೀಡುವುದು);

ಆ) ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಒಟ್ಟು ಭೂಮಾಪಕರ ಸಂಖ್ಯೆ ಎಷ್ಟು (ಪರವಾನಗಿ ಹೊಂದಿದ ಭೂಮಾ ಪಕರು ಸೇರಿ ತಾಲ್ಲೂಕುವಾರು ವಿವರ ನೀಡುವುದು);

## ಶ್ರೀ ವಿ. ಶ್ರೀನಿವಾಸ ಪ್ರಸಾದ್ ( ಕಂದಾಯ ಸಚಿವರು)

ಅ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿರುವ ಪೋಡಿ ಮತ್ತು ಹದ್ದುಬಸ್ತು 11 ಇ ನಕ್ಷೆ ಹಾಗೂ ತಾತ್ಕಾಲ್ ಪೋಡಿಗೆ ಕೋರಿದ ಬಂದ ಅರ್ಜಿಗಳು;

| ತಾಲ್ಲೂಕು | ಭೂಮಾಪನಕ್ಕೆ ಕೋರಿ | | | ವಿಲೇವಾರಿ | | | ಬಾಕಿ | | |
|---|---|---|---|---|---|---|---|---|---|
| | **2010–11** | **2011–12** | **2012–13** | **2010–11** | **2011–12** | **2012–13** | **2010–11** | **2011–12** | **2012–13** |
| ಮಂಗಳೂರು | 11909 | 8905 | 7456 | 11905 | 8709 | 6360 | 4 | 196 | 1096 |
| ಮೂಡಬಿದ್ರೆ | 1877 | 2422 | 2001 | 1855 | 2305 | 1775 | 22 | 117 | 226 |
| ಭಂಟ್ವಾಳ | 4548 | 6690 | 6794 | 4506 | 6488 | 5524 | 42 | 202 | 1270 |
| ಪುತ್ತೂರು | 4335 | 4882 | 3714 | 4313 | 4802 | 3560 | 22 | 80 | 154 |
| ಕಡಬ | 1099 | 1748 | 1548 | 1075 | 1658 | 1283 | 24 | 90 | 301 |
| ಸುಳ್ಯ | 2348 | 1733 | 2384 | 2306 | 2660 | 2170 | 42 | 73 | 214 |
| ಬೆಳ್ತಂಗಡಿ | 2394 | 3502 | 2630 | 2366 | 3397 | 2487 | 28 | 105 | 143 |
| **ಒಟ್ಟು** | **28568** | **30912** | **26563** | **28384** | **30049** | **23159** | **184** | **863** | **3404** |

## ಉಡುಪಿ ಜಿಲ್ಲೆ

| ತಾಲ್ಲೂಕು | ಕಳೆದ 3 ವರ್ಷಗಳ ವಿವರ ವರ್ಷವಾರು | ಭೂಮಾಪನಕ್ಕೆ ಕೋರಿ ಬಂದ ಅರ್ಜಿಗಳ ವಿವರ | | | | | | | | |
|---|---|---|---|---|---|---|---|---|---|---|
| | | ಪೋಡಿ ಮತ್ತು ಹದ್ದುಬಸ್ತು ಪ್ರಕರಣಗಳು ಮತ್ತು ಇತರೆ | | | 11 ಇ ನಕ್ಷೆ ಕೋರಿ ಬಂದ ಅರ್ಜಿಗಳು | | | ತತ್ಕಾಲ್ ಪೋಡಿ ಅರ್ಜಿಗಳು | | |
| | | ಸ್ವೀಕೃತಿ | ವಿಲೇವಾರಿ | ಬಾಕಿ | ಸ್ವೀಕೃತಿ | ವಿಲೇವಾರಿ | ಬಾಕಿ | ಸ್ವೀಕೃತಿ | ವಿಲೇವಾರಿ | ಬಾಕಿ |
| ಉಡುಪಿ | 7/10 ರಿಂದ 6/11 | 4836 | 6367 | 7239 | 7499 | 7423 | 2807 | 294 | 283 | 45 |
| | 7/11 ರಿಂದ 6/12 | 4523 | 8100 | 3662 | 7253 | 6695 | 3355 | 375 | 377 | 43 |
| | 7/12 ರಿಂದ 6/13 | 4555 | 4529 | 3688 | 6311 | 5660 | 4006 | 263 | 251 | 55 |
| | ಒಟ್ಟು | 13914 | 18996 | 3688 | 21063 | 19778 | 4006 | 932 | 911 | 55 |
| ಕುಂದಾಪುರ | 7/10 ರಿಂದ 6/11 | 4745 | 5139 | 1416 | 5255 | 4740 | 1717 | 529 | 534 | 45 |
| | 7/11 ರಿಂದ 6/12 | 5199 | 4693 | 1922 | 5286 | 4484 | 2519 | 521 | 547 | 19 |
| | 7/12 ರಿಂದ 6/13 | 3352 | 3624 | 1650 | 5537 | 4314 | 3742 | 549 | 540 | 28 |
| ಕಾರ್ಕಳ | 7/10 ರಿಂದ 6/11 | 1692 | 1770 | 1316 | 3670 | 3855 | 853 | 129 | 134 | 28 |
| | 7/11 ರಿಂದ 6/12 | 2271 | 1864 | 1723 | 3770 | 3526 | 1097 | 155 | 155 | 28 |

| | | | | | | | | | | |
|---|---|---|---|---|---|---|---|---|---|---|
| | 7/12 ರಿಂದ 6/13 | 2425 | 2523 | 1625 | 3467 | 3609 | 955 | 125 | 147 | 6 |
| | **ಒಟ್ಟು** | **6388** | **6157** | **1625** | **10907** | **10990** | **955** | **409** | **436** | **6** |
| **ಉಡುಪಿ ಜಿಲ್ಲೆ ಒಟ್ಟು** | | **33598** | **38609** | **6943** | **48048** | **44306** | **8703** | **2940** | **2968** | **89** |

ಆ)

**ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕೆಲಸ ನಿರ್ವಹಿಸುತ್ತಿರುವ ಪರವಾನಗಿ ಭೂಮಾಪಕರು ಮತ್ತು ಇಲಾಖಾ ಭೂಮಾಪಕರ ವಿವರ**

| **ತಾಲ್ಲೂಕು** | **ಪರವಾನಗಿ ಭೂಮಾಪಕರು** | **ಸರ್ಕಾರಿ ಭೂಮಾಪಕರು** |
|---|---|---|
| ಮಂಗಳೂರು | 13 | 11 |
| ಮೂಡಬಿದ್ರೆ | 6 | 4 |
| ಬೆಳ್ತಂಗಡಿ | 9 | 8 |
| ಪುತ್ತೂರು | 12 | 11 |
| ಕಡಬ | 4 | 3 |
| ಬಂಟ್ವಾಳ | 18 | 13 |
| ಸುಳ್ಯ | 7 | 7 |
| ಒಟ್ಟು | 69 | 57 |
| **ಉಡುಪಿ ಜಿಲ್ಲೆಯಲ್ಲಿ ಕೆಲಸ ನಿರ್ವಹಿಸುತ್ತಿರುವ ಪರವಾನಗಿ ಭೂಮಾಪಕರು ಮತ್ತು ಇಲಾಖಾ ಭೂಮಾಪಕರ ವಿವರ** | | |
| ಉಡುಪಿ | 22 | 21 |
| ಕುಂದಾಪುರ | 12 | 220 |
| ಕಾರ್ಕಳ | 10 | 13 |
| ಒಟ್ಟು | 44 | 54 |

## ವರಾಹಿ ಯೋಜನೆಗೆ ಕೇಂದ್ರ ಸರ್ಕಾರದಿಂದ ಅನುಮತಿ ಪಡೆದ ಅರಣ್ಯ ಭೂಮಿ ಬಗ್ಗೆ

**456; ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)**

ಅ) ವರಾಹಿ ನೀರಾವರಿ ಯೋಜನೆಗಾಗಿ ಕೇಂದ್ರ ಸರ್ಕಾರದಿಂದ ಅನುಮತಿ ಕೋರಿ ಒಪ್ಪಿಗೆ ಪಡೆದ ಒಟ್ಟು ಅರಣ್ಯ ಭೂಮಿಯ ವಿಸ್ತೀರ್ಣವೆಷ್ಟು (ಅನುಮತಿಯ ಪ್ರತಿಯನ್ನು ಒದಗಿಸುವುದು)

ಆ) ಕೇಂದ್ರ ಸರ್ಕಾರದಿಂದ ಅನುಮತಿ ಪಡೆದ ಅರಣ್ಯ ಭೂಮಿಯಲ್ಲಿ ಬಳಕೆಯಾದ ಮತ್ತು ಬಳಸಲು ಬಾಕಿ ಇರುವ ಅರಣ್ಯ ಭೂಮಿ ಎಷ್ಟು (ಕಿ.ಮೀ. ವಾರು ವಿವರ ನೀಡುವುದು)

ಇ) ಮೂವತ್ಮೂರು ವರ್ಷಗಳಿಂದ ನೆನೆಗುದಿಗೆ ಬಿದ್ದ ಕೋಟ್ಯಾಂತರ ರೂಪಾಯಿ ವೆಚ್ಚ ಮಾಡಿದ ವರಾಹಿ ನೀರಾವರಿ ಯೋಜನೆಯನ್ನು ಯಾವಾಗ ಪೂರ್ಣಗೊಳಿಸಲಾಗುವುದು. ಇಲ್ಲವಾದಲ್ಲಿ ಕೃಷಿ ಉತ್ಪಾದನೆ ಯಲ್ಲಿ ಆಗುತ್ತಿರುವ ನಷ್ಟಕ್ಕೆ ಹೊಣೆ ಯಾರು ?

**ಶ್ರೀ ಎಂ.ಬಿ.ಪಾಟೀಲ್ (ಜಲ ಸಂಪನ್ಮೂಲ ಸಚಿವರು)**

ಅ) ವರಾಹಿ ನೀರಾವರಿ ಯೋಜನೆಗಾಗಿ ಕೇಂದ್ರ ಸರ್ಕಾರದ ಪತ್ರ ಸಂ F ( C) M 16.1/KAR/341P, dtd : 06-06-1995 ರಲ್ಲಿ 15.40 ಹೆ. ಅರಣ್ಯ ಭೂಮಿ ಮತ್ತು ಪತ್ರ ಸಂ : 8–107/84 FC dtd : 15-3-2004 ರಲ್ಲಿ 129.60 ಹೆ ಅರಣ್ಯ ಭೂಮಿ (ಒಟ್ಟು 145.00 ಹೆ) ಯನ್ನು ವಾರಾಹಿ ನೀರಾವರಿ ಯೋಜನೆಗೆ ಡೈವರ್ಟ್ ಮಾಡಿ ಅನುಮತಿ ನೀಡಲಾಗಿರುತ್ತದೆ. ಅನುಮತಿ ಪತ್ರದ ಪ್ರತಿಯನ್ನು ಅನುಬಂಧ (1) (a) ಹಾಗೂ (1) (b) ರಲ್ಲಿ ನೀಡಲಾಗಿದೆ.

ಆ) ಕೇಂದ್ರ ಸರ್ಕಾರದಿಂದ ಅನುಮತಿ ಪಡೆದ ಅರಣ್ಯ ಭೂಮಿಯಲ್ಲಿ ಬಳಕೆ ಯಾದ ಮತ್ತು ಬಳಸಲು ಬಾಕಿ ಇರುವ ಅರಣ್ಯ ಭೂಮಿಯ ಕಿ.ಮೀ. ವಾರು ವಿವರಗಳನ್ನು ಅನುಬಂಧ (2) ರಲ್ಲಿ ನೀಡಲಾಗಿದೆ.

ಇ) ವರಾಹಿ ನೀರಾವರಿ ಯೋಜನೆಯನ್ನು 2015–16 ನೇ ಸಾಲಿನೊಳಗೆ ಪೂರ್ಣಗೊಳಿಸಲು ಯೋಜಿಸಲಾಗಿದೆ.

## ಅನುಬಂಧ –1

No. F(C)M16.1/Kar/341P
Government of India
try of Environment and Forests

Paryavaran Bhavan, C.G.O. Complex,
Lodi Road, New Delhi-110003.
Dated 6.6.95

The Secretary
Department of Forests
Government of Karnataka
Bangalore.

Subject: Diversion of 15.4 ha. of reserve forest land for Varahi Lift Irrigation Scheme in Dakshin Kannada district.

*******

Sir,

I am directed to refer to your letter no.FEE 228 FGL 94 dated 05-11-1995 on the above mentioned subject seeking prior approval of the Central Government in accordance with Section 2 of the Forest (Conservation) Act, 1980.

After careful consideration of the proposal of the State Government, the Central Government hereby agrees in principle for approval for diversion of 15.4 ha. of reserve forest land for Varahi Lift Irrigation Scheme in Dakshin Kannada district, subject to the fulfilment of following condition:

1 i) Immediate action should be taken for transfer and mutation of equivalent non-forest land in favour of the State Forest Department.

ii) The user agency will transfer the funds for compensatory afforestation (reserved as on date to incorporate existing wage structure) in favour of the State Forest Department.

After receipt of compliance report on the fulfilment of the above mentioned conditions from the State Government, formal approval will be issued in this regard under Section 2 of the Forest (Conservation) Act, 1980. Transfer of forest land to user agency will not be effected by the State Government till formal order approving diversion of forest land are issued by the Central Government.

Yours faithfully,

(R.K. CHAUDHRY)
Asstt. Inspector General of Forests.

Copy to,

1. The principal chief Conservator of Forests, Government of Karntaka, Bangalore.
2. The nodal officer, office of the principal chief conservator of Forests, Govt. of Karnataka, Bangalore
3. The officer Regional office, Bangalore..
4. RO(hq). New Delhi
5. Guard file.

(R.K.CHAUDHRY)
Asstt. Inspector General of Forests.

No.8-107/84- FC
Government of India
Ministry of Environment and Forests
F.C. Division

Paryavaran Bhawan,
CGO Complex, Lodhi Road,
New Delhi - 110 003.
Dated: 12-03-2004
15

To,
The Principal Secretary (Forests)
Govt. of Karnataka
Bangalore

Sub: Diversion of 259.60 ha forest land for construction of Varahi Irrigation Project in Dakshina Kannada District, Karnataka.

Ref: Compliance reports of Govt. of Karnataka vide letter No. FEE 114 FGL 89 dated 18.5.2002 & vide letter No. FEE 114 FGL 89 dated 06-02-2004.

Sir,

I am directed to refer to your letter No. FEE 114 FGL 89 dated 19.2.2001 on the above mentioned subject, seeking prior approval of the Central Govt. in accordance with Section-2 of Forest (Conservation) Act, 1980 and to say that the proposal has been examined by the Advisory Committee constituted by the Central Government under Section 3 of the aforesaid Act.

After careful consideration of the proposal of the State Government and on the basis of the recommendation of the above mentioned Advisory Committee, the Central Government hereby conveys its **approval** under Section 2 of Forest (Conservation) Act, 1980 for diversion of 129.60 hectare forest land for construction of Varahi Irrigation Project in Dakshina Kannada District, Karnataka subject to fulfillment of following conditions:-

1. Legal status of the forest shall remain unchanged.
2. Compensatory afforestation shall be raised over equivalent non forest land and shall be maintained at the project cost. In this regard, the funds transferred to the State Forest Department shall be placed at the disposal of the concerned DCF/DFO.
3. The non-forest land for compensatory afforestation shall be notified by the State Government as RF under section – 4 or PF under section – 29 of the Indian Forest Act, 1927 or the State Forest Act within a period of 6 months and Nodal Officer (Forest Conservation) shall report the compliance.
4. Demarcation of the area will be done on ground at project cost using four feet high RCC pillars with serial numbers, forward and back bearings and distance from pillar to pillar.
5. Trees shall be felled only when it becomes necessary and under strict supervision of State Forest Department.
6. Reservoir so created shall be declared as 'Reserved Forest' under Indian Forest Act, 1927 with regulated fishing rights.
7. Canal bank plantation shall be raised and maintained by the State Forest Department at the project cost.
8. No tree felling in the area between FRL and 4 m below FRL shall be carried out.

Kind Attn - R. Shivashankar
Under Secretary

9. Water will be provided free of cost to the Forest Department for raising nursery/plantations in nearby areas.
10. Catchment area treatment plan shall be implemented under the supervision of State Forest Department.
11. Resettlement and rehabilitation plan for the displaced people shall be implemented immediately by the State Government.
12. No labour camps shall be established on the forest land.
13. Sufficient firewood depot should be opened after procuring firewood from Karnataka Forest Development Corporation (KFDC).
14. The User Agency shall ensure that there should be no damage to the available wildlife.
15. The approval under the Forest (Conservation) Act, 1980 is subject to the clearance under the Environment (Protection) Act, 1986, if required.
16. The forest land shall not be used for any purpose other than that specified in the proposal.
17. Any other condition that the State Government as well as CCF (Central), Regional Office, Bangalore, may impose from time to time for the protection and improvement of flora and fauna in the forest area.

Yours faithfully,

(ANURAG BAJPAI)
Asst. Inspector General of Forests

Copy to:
1. The Principal Chief Conservator of Forests, Government of Karnataka, Bangalore.
2. The ~~Nodal Officer, Office of the Principal~~ Chief Conservator of Forests, Government of Karnataka, Bangalore.
3. The Chief Conservator of Forest (Central), Regional Office, Bangalore.
4. Executive Engineer, Varahi Project Division, Siddapura, Distt. Udupi, Karnataka.
5. RO(HQ.), New Delhi.
6. PS to IGF(FC)
7. Monitoring Cell, FC Division
8. Guard File.

15/3/04

(ANURAG BAJPAI)
Asst. Inspector General of Forests

**ಅನುಬಂಧ 2**

ವರಾಹಿ ಯೋಜನೆಗೆ ಕೇಂದ್ರ ಸರ್ಕಾರದಿಂದ ಅನುಮತಿ ಪಡೆದ ಅರಣ್ಯ ಭೂಮಿಯಲ್ಲಿ ಬಳಕೆಯಾದ ಮತ್ತು ಬಳಸಲು ಬಾಕಿ ಇರುವ ಅರಣ್ಯ ಭೂಮಿಯ ಕಿ.ಮೀ. ವಾರು ವಿವರಗಳು

| ಕ್ರ.ಸಂ | ಕಾಮಗಾರಿ /ಕಿ.ಮೀ | ಬಳಕೆಯಾದ ಅರಣ್ಯ ಭೂಮಿ (ಹೆ) | ಬಾಕಿಯಿರುವ ಅರಣ್ಯ ಭೂಮಿ (ಹೆ) | ಷರಾ |
|---|---|---|---|---|
| 1 | ವಾರಾಹಿ ಡೈವರ್ಷನ್ ವಿಯರ | 30.52 | | |
| 2 | ವಾರಾಹಿ ಬಲದಂಡೆ ನಾಲೆ | | | |
| | 0.00 ರಿಂದ 1.00 ಕಿ.ಮೀ | 7.53 | | |
| | 1.00 ರಿಂದ 2.00 ಕಿ.ಮೀ | 2.55 | | |
| | 2.00 ರಿಂದ 3.00 ಕಿ.ಮೀ | 1.78 | | |
| | 3.00 ರಿಂದ 4.00 ಕಿ.ಮೀ | 1.53 | | |
| | 4.00 ರಿಂದ 5.00 ಕಿ.ಮೀ | 2.98 | | |
| | 5.00 ರಿಂದ 6.00 ಕಿ.ಮೀ | 00 | | |

| | | | | |
|---|---|---|---|---|
| | 6.00 ರಿಂದ 7.00 ಕಿ.ಮೀ | 00 | | |
| | 7.00 ರಿಂದ 8.00 ಕಿ.ಮೀ | 0.55 | | |
| | 8.00 ರಿಂದ 9.00 ಕಿ.ಮೀ | 00 | | |
| | 9.00 ರಿಂದ 10.00 ಕಿ.ಮೀ | 00 | | |
| | 10.00 ರಿಂದ 11.00 ಕಿ.ಮೀ | 1.52 | | |
| | 11.00 ರಿಂದ 12.00 ಕಿ.ಮೀ | 4.25 | | |
| | 12.00 ರಿಂದ 13.00 ಕಿ.ಮೀ | 1.16 | | |
| | 13.00 ರಿಂದ 14.00 ಕಿ.ಮೀ | 1.82 | | |
| | 14.00 ರಿಂದ 15.00 ಕಿ.ಮೀ | 7.06 | | |
| | 15.00 ರಿಂದ 16.00 ಕಿ.ಮೀ | 00 | | |
| | 16.00 ರಿಂದ 17.00 ಕಿ.ಮೀ | 3.00 | | |
| | 17.00 ರಿಂದ 18.00 ಕಿ.ಮೀ | 3.74 | | |

| | | | | |
|---|---|---|---|---|
| | 18.00 ರಿಂದ 19.00 ಕಿ.ಮೀ | 1.48 | | |
| | 19.00 ರಿಂದ 20.00 ಕಿ.ಮೀ | | 6.04 | |
| | 20.00 ರಿಂದ 21.00 ಕಿ.ಮೀ | | | |
| | 21.00 ರಿಂದ 22.00 ಕಿ.ಮೀ | | | |
| | 22.00 ರಿಂದ 23.00 ಕಿ.ಮೀ | | | |
| | 23.00 ರಿಂದ 24.00 ಕಿ.ಮೀ | | | |
| | 24.00 ರಿಂದ 25.00 ಕಿ.ಮೀ | | | |
| | 25.00 ರಿಂದ 26.00 ಕಿ.ಮೀ | | | |
| | 26.00 ರಿಂದ 27.00 ಕಿ.ಮೀ | | | |
| | 27.00 ರಿಂದ | | | |

| | | | | |
|---|---|---|---|---|
| | 28.00 ಕಿ.ಮೀ | | | |
| | 28.00 ರಿಂದ 29.00 ಕಿ.ಮೀ | | | |
| | 29.00 ರಿಂದ 30.00 ಕಿ.ಮೀ | | | |
| | 30.00 ರಿಂದ 31.00 ಕಿ.ಮೀ | | | |
| | 31.00 ರಿಂದ 32.00 ಕಿ.ಮೀ | | 5.28 | |
| | 32.00 ರಿಂದ 33.00 ಕಿ.ಮೀ | | 1.47 | |
| | 33.00 ರಿಂದ 34.00 ಕಿ.ಮೀ | | | |
| | 34.00 ರಿಂದ 35.00 ಕಿ.ಮೀ | | | |
| | 35.00 ರಿಂದ 36.00 ಕಿ.ಮೀ | | | |
| | 36.00 ರಿಂದ | | | |

| | | | | |
|---|---|---|---|---|
| | 37.00 ಕಿ.ಮೀ | | | |
| | 37.00 ರಿಂದ 38.00 ಕಿ.ಮೀ | | | |
| | 38.00 ರಿಂದ 39.00 ಕಿ.ಮೀ | | | |
| | 39.00 ರಿಂದ 40.00 ಕಿ.ಮೀ | | | |
| | 40.00 ರಿಂದ 41.00 ಕಿ.ಮೀ | | | |
| | 41.00 ರಿಂದ 42.00 ಕಿ.ಮೀ | | 1.66 | |
| | 42.00 ರಿಂದ 42.7300 ಕಿ.ಮೀ | | 1.75 | |
| 3 | ವಾರಾಹಿ ಎಡದಂಡೆ ನಾಲೆ | | | |
| | 0.00 ರಿಂದ 1.00 ಕಿ.ಮೀ | 5.22 | | |
| | 1.00 ರಿಂದ 2.00 ಕಿ.ಮೀ | 1.36 | | |

| | | | | |
|---|---|---|---|---|
| | 2.00 ರಿಂದ 3.00 ಕಿ.ಮೀ | | | |
| | 3.00 ರಿಂದ 4.00 ಕಿ.ಮೀ | 4.76 | | |
| | 4.00 ರಿಂದ 5.00 ಕಿ.ಮೀ | | | |
| | 5.00 ರಿಂದ 6.00 ಕಿ.ಮೀ | | | |
| | 6.00 ರಿಂದ 7.00 ಕಿ.ಮೀ | | | |
| | 7.00 ರಿಂದ 8.00 ಕಿ.ಮೀ | | | |
| | 8.00 ರಿಂದ 9.00 ಕಿ.ಮೀ | | | |
| | 9.00 ರಿಂದ 10.00 ಕಿ.ಮೀ | 1.95 | | |
| | 10.00 ರಿಂದ 11.00 ಕಿ.ಮೀ | 0.89 | | |
| | 11.00 ರಿಂದ 12.00 ಕಿ.ಮೀ | | | |
| | 12.00 ರಿಂದ 13.00 ಕಿ.ಮೀ | | | |
| | 13.00 ರಿಂದ 14.00 ಕಿ.ಮೀ | | | |

| | | | | |
|---|---|---|---|---|
| | 14.00 ರಿಂದ 15.00 ಕಿ.ಮೀ | | | |
| | 15.00 ರಿಂದ 16.00 ಕಿ.ಮೀ | | | |
| | 16.00 ರಿಂದ 17.00 ಕಿ.ಮೀ | 0.94 | | |
| | 17.00 ರಿಂದ 18.00 ಕಿ.ಮೀ | 0.27 | | |
| | 18.00 ರಿಂದ 44.35ಕಿ.ಮೀ | | | |
| | ವಿತರಣಾ ನಾಲೆ | | | |
| | 0.00 ರಿಂದ 5.00 ಕಿ.ಮೀ | | | |
| | 5.00 ರಿಂದ 6.00 ಕಿ.ಮೀ | | 0.19 | |
| | 6.00 ರಿಂದ 9.00 ಕಿ.ಮೀ | | | |
| | 9.00 ರಿಂದ 13.00 ಕಿ.ಮೀ | | 17.6 | |
| | 13.00 ರಿಂದ 14.00 ಕಿ.ಮೀ | | | |
| 4 | ವಾರಾಹಿ ಲಿಫ್ಟ್ ಕಾಲುವೆ | | | |

| | | | | |
|---|---|---|---|---|
| | 0.00 ರಿಂದ 33.00 ಕಿ.ಮೀ | | 24.15 | ಲಿಫ್ಟ್ ಕಾಲುವೆ ಬರುವ ಕಾಯ್ದಿರಿಸಿದ ಅರಣ್ಯ ಪ್ರದೇಶದ ನಿಖರವಾದ ಕಿ.ಮೀ. ವಾರು ಸರ್ವೆ ಕಾರ್ಯ ಆಗಬೇಕಿದೆ. |
| **ಒಟ್ಟು ಅರಣ್ಯ ಭೂಮಿ (ಹೆ)** | | **86.86** | **58.14** | |

**ದಕ್ಷಿಣ ಕನ್ನಡ ಜಿಲ್ಲಾ ಸಹಕಾರಿ ಸಕ್ಕರೆ ಕಾರ್ಖಾನೆಯ ಪುನಶ್ಚೇತನಗೊಳಿಸುವ ಬಗ್ಗೆ**

**457; ಕೆ. ಪ್ರತಾಪಚಂದ್ರ ಶೆಟ್ಟಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)**

ಅ) ದಕ್ಷಿಣ ಕನ್ನಡ ಜಿಲ್ಲಾ ಸಹಕಾರಿ ಸಕ್ಕರೆ ಕಾರ್ಖಾನೆ ಎಂದು ಪ್ರಾರಂಭ ವಾಯಿತು ಮತ್ತು ಸಕ್ಕರೆ ಕಾರ್ಖಾನೆಯನ್ನು ಎಂದು ಮುಚ್ಚಲಾಯಿತು ( ಪ್ರಾರಂಭವಾದಂದಿನಿಂದ ಮುಚ್ಚುವ ತನಕ ಉತ್ಪಾದನೆ ಮತ್ತು ವೆಚ್ಚದ ವಿವರ ನೀಡುವುದು)

ಆ) ದಕ್ಷಿಣ ಕನ್ನಡ ಜಿಲ್ಲಾ ಸಹಕಾರಿ ಸಕ್ಕರೆ ಕಾರ್ಖಾನೆಯು ರೈತರಿಗೆ, ಕಾರ್ಮಿಕರಿಗೆ ಮತ್ತು ಸಹಕಾರಿ ಸಂಘಗಳಿಗೆ ನೀಡಲು ಬಾಕಿ ಇರುವ ಮೊತ್ತ ಮತ್ತು ಬಡ್ಡಿ ಎಷ್ಟೆಷ್ಟು (ಪ್ರತ್ಯೇಕವಾಗಿ ಬಾಕಿ ಮೊತ್ತ ಹಾಗೂ ಬಡ್ಡಿ ತಿಳಿಸುವುದು)

ಇ) ರೈತರ ಹಣ, ಕಾರ್ಮಿಕರ ವೇತನ, ಸಹಕಾರಿ ಸಂಘಗಳ ಸಾಲ ಎಲ್ಲ ವನ್ನೂಪಾವತಿಸುವುದರೊಂದಿಗೆ ದಕ್ಷಿಣ ಕನ್ನಡ ಜಿಲ್ಲಾ ಸಹಕಾರಿ ಸಕ್ಕರೆ ಕಾರ್ಖಾನೆಯ ಪುನಃಶ್ಚೇತನಕ್ಕೆ ಸರ್ಕಾರ ತೆಗೆದುಕೊಂಡ ಕ್ರಮವೇನು?

**ಪ್ರಕಾಶ ಬಾಬಣ್ಣ ಹುಕ್ಕೇರಿ (ಸಣ್ಣ ಕೈಗಾರಿಕೆ ಮುಜರಾಯಿ ಮತ್ತು ಸಕ್ಕರೆ ಸಚಿವರು)**

ಅ) ದಕ್ಷಿಣ ಕನ್ನಡ ಜಿಲ್ಲಾ ಸಹಕಾರಿ ಸಕ್ಕರೆ ಕಾರ್ಖಾನೆ ನಿ. ಬ್ರಹ್ಮಾವರ ಇದು ದಿನಾಂಕ 22–1–1985 ರಂದು ಪ್ರಾರಂಭವಾಯಿತು. ಹಾಗೂ ದಿನಾಂಕ 16–4–2006 ರಿಂದ ಅನ್ವಯವಾಗುವಂತೆ ಮುಚ್ಚಲಾಯಿತು. ಈ ಕಾರ್ಖಾನೆಯು ಪ್ರಾರಂಭವಾದ ದಿನದಿಂದ ಮುಚ್ಚುವರೆಗಿನ ಅವಧಿ ಯಾದ 1984–85 ರಿಂದ 2005–06 ನೇ ಸಾಲಿನವರೆಗಿನ ಉತ್ಪಾದನೆ ಮತ್ತು ವೆಚ್ಚದ ವಿವರಗಳನ್ನು ಅನುಬಂಧದಲ್ಲಿ ಒದಗಿಸಿದೆ.

ಆ) ದಕ್ಷಿಣ ಕನ್ನಡ ಜಿಲ್ಲಾ ಸಹಕಾರಿ ಸಕ್ಕರೆ ಕಾರ್ಖಾನೆ ನಿಯಮಿತದಿಂದ ರೈತರಿಗೆ, ಕಾರ್ಮಿಕರಿಗೆ ಮತ್ತು ಸಹಕಾರಿ ಸಂಘಗಳಿಗೆ ನೀಡಲು ಬಾಕಿ ಯಿರುವ ಮೊತ್ತ ಮತ್ತು ಬಡ್ಡಿಯ ವಿವರಗಳು ಈ ಕೆಳಗಿನಂತಿವೆ.

| ಕ.ಸಂ | ವಿವರ | ಅಸಲು | ಬಡ್ಡಿ | ಒಟ್ಟು ಮೊತ್ತ |
|---|---|---|---|---|
| 1 | ರೈತರ ಬಾಕಿ | 192.58 | -- | 192.58 |
| 2 | ಕಾರ್ಮಿಕರ ಬಾಕಿ | 548.72 | 101.04 | 650.12 |
| 3 | ಸಹಕಾರ ಸಂಘಗಳ ಬಾಕಿ | 550.35 | 820.71 | 1371.06 |
| | **ಒಟ್ಟು** | **1291.65** | **922.11** | **2213.76** |

ದಕ್ಷಿಣ ಕನ್ನಡ ಜಿಲ್ಲಾ ಸಹಕಾರಿ ಸಕ್ಕರೆ ಕಾರ್ಖಾನೆಯಿಂದ ರೈತರಿಗೆ, ಕಾರ್ಮಿಕರಿಗೆ ಹಾಗೂ ಸಹಕಾರಿ ಬ್ಯಾಂಕ್/ ಸಂಸ್ಥೆಗಳಿಗೆ ಪಾವತಿಸಲು ಬಾಕಿ ಇರುವ ಮೊತ್ತಗಳನ್ನು ಇತ್ಯರ್ಥಪಡಿಸಲು ಬೇಕಾದ ಆರ್ಥಿಕ ಸಂಪನ್ಮೂಲ ಕಾರ್ಖಾನೆಯಲ್ಲಿ ಲಭ್ಯವಿಲ್ಲದೆ ಇರುವ ಕಾರಣ ಕಾರ್ಖಾ ನೆಯ ಸ್ಥಿರಾಸ್ತಿಯಲ್ಲಿ 10.00 ಎಕರೆ ಜಮೀನನ್ನು ಮಾರಾಟ ಮಾಡಿ ಈ ಎಲ್ಲ ಬಾಕಿ ಮೊತ್ತಗಳನ್ನು ಪಾವತಿಸಲು ಉದ್ದೇಶಿಸಲಾಗಿತ್ತು, ಆದರೆ, ಈ ಕಾರ್ಖಾನೆಯನ್ನು ಈ ಹಿಂದೆ ಗುತ್ತಿಗೆಗೆ ನೀಡಿದಾಗ ಕಾರ್ಖಾನೆಯ ಷೆಡ್ಯೂಲ್ ಪ್ರಾಪರ್ಟಿಯನ್ನು ಗುತ್ತಿಗೆದಾರರಿಗೆ "As is

where is basis" ಆಧಾರದ ಮೇಲೆ ವರ್ಗಾವಣೆ ಮಾಡಲಾಗಿದ್ದು, ಗುತ್ತಿಗೆ ಒಪ್ಪಂದ ಅಂತಿಮಗೊಳ್ಳುವವರೆಗೆ ಅಥವಾ ಷರತ್ತುಗಳ ಉಲ್ಲಂಘನೆಗಾಗಿ ಗುತ್ತಿಗೆ ಒಪ್ಪಂದ ರದ್ದುಗೊಳ್ಳುವವರೆಗೆ ಸದರಿ 10–00 ಎಕರೆ ಜಮೀನನ್ನು ಮಾರಾಟ ಮಾಡುವುದು ಸಾಧ್ಯವಾಗುದಿಲ್ಲ ಎಂದು ಕಾನೂನು ಇಲಾಖೆ ಅಭಿಪ್ರಾಯ ನೀಡಿರುತ್ತದೆ.

ಗುತ್ತಿಗೆದಾರರಾದ ಮೆ ರಾಮಿ ಶುಗರ್ಸ್ ಅಂಡ್ ಇನ್ಫ್ರಾಸ್ಟ್ರಕ್ಚರ್ಸ್ ಪ್ರೈ ಲಿ ಮುಂಬೈ ಇವರೊಂದಿಗೆ ದಕ್ಷಿಣ ಕನ್ನಡ ಸಹಕಾರಿ ಸಕ್ಕರೆ ಕಾರ್ಖಾನೆಯ ಹೊಂದಿರುವ ಸಮಸ್ಯೆಗಳನ್ನು ಬಗೆಹರಿಸುವ ಬಗ್ಗೆ ರಾಜ್ಯ ಉಚ್ಛ ನ್ಯಾಯಾಲಯದ ನಿವೃತ್ತ ನ್ಯಾಯಾಧೀಶರಾದ ಶ್ರೀ ಜಯರಾಮ ಚೌಟ ಇವರನ್ನು ಮಾನ್ಯ ಉಚ್ಛ ನ್ಯಾಯಾಲಯವು ಮಧ್ಯಸ್ಥಿಕೆದಾರರನ್ನಾಗಿ ನೇಮಕ ಮಾಡಿತ್ತು. ಮಧ್ಯಸ್ಥಿಕೆದಾರರು ನೀಡಿರುವ ತೀರ್ಪಿನ ವಿರುದ್ಧ ಸದರಿ ಸಹಕಾರಿ ಸಕ್ಕರೆ ಕಾರ್ಖಾನೆಯು ಬೆಂಗಳೂರು ಸಿವಿಲ್ ನ್ಯಾಯಾಲಯದಲ್ಲಿ ಮೇಲ್ಮನವಿ ಸಂಖ್ಯೆ ಎ.ಎಸ್ 79/2012 ಅನ್ನು ದಿನಾಂಕ 9–11–2012 ರಂದು ದಾಖಲಿಸಿದ್ದು ಪ್ರಕರಣ ವಿಚಾರಣಾ ಹಂತದಲ್ಲಿ ಇತ್ಯರ್ಥಕ್ಕೆ ಬಾಕಿ ಇರುತ್ತದೆ. ಹಾಗಾಗಿ ಗುತ್ತಿಗೆದಾರರೊಂದಿಗಿನ ಗುತ್ತಿಗೆ ಒಪ್ಪಂದವನ್ನು ರದ್ದುಗೊಳಿಸಲು ಇನ್ನೂ ಸಾಧ್ಯವಾಗಿರುವುದಿಲ್ಲ.

ಪ್ರಕರಣ ನ್ಯಾಯಾಲಯದಲ್ಲಿ ಇತ್ಯರ್ಥವಾದ ನಂತರ ಗುತ್ತಿಗೆ ಒಪ್ಪಂದವನ್ನು ರದ್ದುಪಡಿಸಿ ಕಾರ್ಖಾನೆಯ ಸ್ಥಿರಾಸ್ತಿಯನ್ನು ಮಾರಾಟ ಮಾಡಿ ಬಂದ ಹಣದಿಂದ ಮೇಲ್ಕಂಡ ಬಾಕಿಗಳನ್ನು ತೀರಿಸಲಾಗುವುದು.

# ಅನುಬಂಧ

| ಕ್ರ.ಸಂ | ವರ್ಷ | ಸಕ್ಕರೆ ಉತ್ಪಾದನೆ (ಕ್ವಿಂಟಲ್‌ಗಳಲ್ಲಿ) | ಆದಾಯ (ರೂ. ಲಕ್ಷಗಳಲ್ಲಿ) | ವೆಚ್ಚ (ರೂ. ಲಕ್ಷಗಳಲ್ಲಿ) |
|---|---|---|---|---|
| 1 | 1984–85 | 431 | 0.38 | 111.15 |
| 2 | 1985–86 | 6719 | 17.34 | 213.29 |
| 3 | 1986–87 | 25271 | 116.48 | 273.17 |
| 4 | 1987–88 | 38779 | 135.56 | 336.00 |
| 5 | 1988–89 | 52581 | 297.45 | 452.62 |
| 6 | 1989–90 | 21555 | 168.85 | 284.55 |
| 7 | 1990–91 | 24818 | 194.62 | 415.30 |
| 8 | 1991–92 | 41300 | 146.01 | 368.93 |
| 9 | 1992–93 | 37071 | 169.67 | 285.37 |
| 10 | 1993–94 | 50450 | 645.38 | 711.56 |
| 11 | 1994–95 | 81466 | 504.92 | 434.91 |
| 12 | 1995–96 | 120120 | 888.63 | 986.98 |
| 13 | 1996–97 | 69015 | 1531.74 | 1595.33 |
| 14 | 1997–98 | 50586 | 1283.95 | 1788.26 |
| 15 | 1998–99 | 75232 | 804.01 | 955.10 |
| 16 | 1999–2000 | 71970 | 1044.19 | 1430.65 |
| 17 | 2000–01 | 53050 | 898.89 | 1228.29 |

| | | | | |
|---|---|---|---|---|
| 18 | 2001–02 | 49300 | 711.37 | 1062.92 |
| 19 | 2002–03 | 39250 | 476.05 | 988.02 |
| 20 | 2003–04 | ಸ್ಥಗಿತಗೊಂಡಿದೆ | 481.01 | 1011.29 |
| 21 | 2004–05 | ಸ್ಥಗಿತಗೊಂಡಿದೆ | 400.04 | 639.94 |
| 22 | 2005–06 | ಸ್ಥಗಿತಗೊಂಡಿದೆ | 282.74 | 485.82 |
| | **ಒಟ್ಟು** | | **11199.28** | **16059.45** |

ವಿ.ಸೂ : ಕಾರ್ಖಾನೆಯು 2003–04 ನೇ ಸಾಲಿನಿಂದ ಸ್ಥಗಿತಗೊಂಡಿದ್ದು, ಕಾರ್ಖಾನೆಯಲ್ಲಿದ್ದ ಸಕ್ಕರೆ ದಾಸ್ತಾನನ್ನು 2005–06 ನೇ ಸಾಲಿನವರೆಗೆ ಮಾರಾಟ ಮಾಡಲಾಗಿದೆ.

**ನೆಮ್ಮದಿ ಕೇಂದ್ರಗಳಲ್ಲಿ ಹೆಚ್ಚುವರಿ ಕೌಂಟರ್‌ಗಳ ಸ್ಥಾಪನೆ**

**505; ಶ್ರೀ ಡಾ ದೊಡ್ಡರಂಗೇಗೌಡ (ನಾಮ ನಿರ್ದೇಶನ ಹೊಂದಿದವರು)**

ಅ. ರಾಜ್ಯದಲ್ಲಿ. ಇರುವ ನೆಮ್ಮದಿ ಕೇಂದ್ರಗಳೆಷ್ಟು. ಈ ಕೇಂದ್ರಗಳಿಗ ಹೆಚ್ಚು ವರಿ ಕಂಪ್ಯೂಟರ್ ನೀಡಿ ಕೌಂಟರ್‌ಗಳನ್ನು್ನ ಏರ್ಪಡಿಸಿ ರೈತರಿಗೆ, ವಿಧ್ಯಾರ್ಥಿಗಳಿಗೆ, ಜನ ಸಾಮಾನ್ಯರಿಗೆ ಅಗತ್ಯವಾದ ದಾಖಲೆಗಳನ್ನು. ತ್ವರಿತಗತಿಯಲ್ಲಿ ಒದಗಿಸಲು ಕ್ರಮ ತೆಗೆದುಕೊಳ್ಳಲಾಗುವುದೇ.

ಆ. ನೆಮ್ಮದಿ ಕೇಂದ್ರದಿಂದ ಪಡೆಯುವ ದಾಖಲೆಗಳು ಅಧಿಕೃತ ದಾಖಲೆಗಳು ಎಂದು ಘೋಷಿಸಿ, ಇಲ್ಲಿಂದ ಪಡೆದ ದಾಖಲೆಗಳಿಗೆ ಮತ್ತೆ ಗ್ರಾಮ ಲೆಕ್ಕಿ ಗರು, ರೆವಿನ್ಯೂ ಇನ್ಸ್‌ಪೆಕ್ಟರ್ ಅಥವಾ ಸಂಬಂಧಿಸಿದ ಅಧಿಕಾರಿಗಳ ಸಹಿ ಪಡೆಯದಂತೆ ಕ್ರಮ ತೆಗೆದುಕೊಳ್ಳಲಾಗುವುದೇ.

**ಶ್ರೀ ವಿ. ಶ್ರೀನಿವಾಸ ಪ್ರಸಾದ (ಕಂದಾಯ ಸಚಿವರು)**

ಅ. ರಾಜ್ಯದಲ್ಲಿ ಹೋಬಳಿ ಕೇಂದ್ರಗಳ ನಾಡಕಛೇರಿಗಳು ಸೇರಿದಂತೆ ಒಟ್ಟು. 777 ಅಟಲ್ ಜೀ ಜನಸ್ನೇಹಿ ಕೇಂದ್ರಗಳು ಹಾಗೂ 105 ಹೆಚ್ಚುವರಿ

ಫ್ರಂಟ್ ಆಫೀಸಗಳನ್ನು ಈ ಯೋಜನೆಯಲ್ಲಿ ಪ್ರಾರಂಭಿಸಿ ಸಾರ್ವಜನಿಕರ ಸೇವೆಗೆ ಒದಗಿಸಲಾಗಿದೆ. ಜನಸಾಂದ್ರತೆಯಲ್ಲಿ ಹೆಚ್ಚಿನ ಪ್ರಮಾಣದ ಪ್ರದೇಶಗಳಾದ ಬೆಂಗಳೂರು ನಗರ ಹಾಗೂ ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ ಹಾಲಿ ಅಸ್ತಿತ್ವದಲ್ಲಿರುವಂತಹ ಬೆಂಗಳೂರು–1 ಮತ್ತು ಕರ್ನಾಟಕ–1 ಕೇಂದ್ರಗಳಲ್ಲಿ ಅಟಲ್ ಜೀ. ಜನಸ್ನೇಹಿ ಯೋಜನೆಯ ವಿವಿಧ 36 ಸೇವೆಗಳ ಅರ್ಜಿಗಳನ್ನು ಸ್ವೀಕರಿಸಿ. ಸಾರ್ವಜನಿಕರಿಗೆ ಸೇವೆ ಒದಗಿಸುವ ಬಗ್ಗೆ ಕ್ರಮ ಕೈಗೊಳ್ಳಲಾಗಿದೆ. ಪ್ರತಿ ಕೇಂದ್ರದಲ್ಲೂ ದಿನಕ್ಕೆ ಸರಾಸರಿ 100 ಅರ್ಜಿಗಳನ್ನು ಸ್ವೀಕರಿಸಲು ಅವಕಾಶವಿದ್ದು, ಅರ್ಜಿ ಸ್ವೀಕೃತ ಸಂಖ್ಯೆ ಹೆಚ್ಚಾದಲ್ಲಿ ಹೆಚ್ಚುವರಿ ಲಾಗಿನ್ ಹಾಗೂ ಕಂಪ್ಯೂಟರ್‌ಗಳನ್ನು ನೀಡಲು ಕ್ರಮ ವಹಿಸಲಾಗುತ್ತದೆ.

ಆ. ಅಟಲ್ ಜೀ ಜನಸ್ನೇಹಿ ಕೇಂದ್ರದಿಂದ ಪಡೆಯುವಂತಹ 36 ಸೇವೆಗಳ ದಾಖಲೆಗಳು ಡಿಜಿಟಲ್ ಸಿಗ್ನೇಚರ್ ಇರುವಂತಹ ದಾಖಲೆಗಳಾಗಿದ್ದು, ಇವುಗಳಿಗೆ ಮತ್ತೆ ಯಾವುದೇ ಅಧಿಕಾರಿಗಳ ಸಹಿ ಅಗತ್ಯವಾಗಿರುವುದಿಲ್ಲ. ಹಾಗೂ ಈ ದಾಖಲೆಗಳು ಅಧಿಕೃತ ದಾಖಲೆಗಳಾಗಿರುತ್ತದೆ.

**ಜುಟ್ಟನಹಳ್ಳಿ ಹಿರಿ ಸಾವೆ ಏತ ನೀರಾವರಿ ಯೋಜನೆ ಬಗ್ಗೆ**

**506; ಡಾ. ದೊಡ್ಡರಂಗೇಗೌಡ ( ನಾಮ ನಿರ್ದೇಶನ ಹೊಂದಿದವರು)**

ಅ. ಜುಟ್ಟನಹಳ್ಳಿ ಹಿರಿಸಾವೆ ಹೇಮಾವತಿ ಏತ ನೀರಾವರಿ ಯೋಜನೆಯನ್ನು ಅನುಷ್ಠಾನಗೊಳಿಸಿ ಬರಡು ಪ್ರದೇಶವಾದ ಚನ್ನರಾಯಪಟ್ಟಣ ತಾಲ್ಲೂಕಿನ ಕುಂಬೇನಹಳ್ಳಿ ಪ್ರದೇಶ, ಕೃಷ್ಣರಾಜಪೇಟೆ ತಾಲ್ಲೂಕಿನ ಸಂತೇಬಾಚಹಳ್ಳಿ ಹೋಬಳಿಯ ಹಳ್ಳಿಗಳು ಮತ್ತು ಬಿಂತಿಗನವಿಲೆ ಹೋಬಳಿಯ ಹಳ್ಳಿಯ ಕೆರೆಗಳಿಗೆ ಹೇಮಾವತಿ ನಾಲೆಯ ನೀರನ್ನು ಹರಿಸಲು ಕ್ರಮ ತೆಗೆದುಕೊಳ್ಳಲಾಗುವುದೇ.

ಆ. ಈ ಬಗ್ಗೆ ಒಂದು ಸರ್ವೇಕಾರ್ಯ ನಡೆಸಿ ಕಾರ್ಯ ಯೋಜನೆಯನ್ನು ರೂಪಿಸಿ ಅನುಮೋದನೆ ನೀಡಿ ಈ ಯೋಜನೆಯನ್ನು ಅನುಷ್ಠಾನಗೊಳಿಸಲು ಕ್ರಮ ತೆಗೆದುಕೊಳ್ಳಲಾಗುವುದೇ ?

**ಶ್ರೀ ಎಂ.ಬಿ. ಪಾಟೀಲ್ (ಜಲ ಸಂಪನ್ಮೂಲ ಸಚಿವರು)**

ಅ. ಹಾಸನ ಜಿಲ್ಲೆ ಚನ್ನರಾಯಪಟ್ಟಣ ತಾಲ್ಲೂಕಿನ ಹಿರೆಸಾವೆ ಮತ್ತು ಶ್ರವಣಬೆಳಗೊಳ ಹೋಬಳಿಯ 16 ಕೆರೆಗಳು ಹಾಗೂ ಮಂಡ್ಯ ಜಿಲ್ಲೆ ಕೆ. ಆರ್. ಪೇಟೆ ತಾಲ್ಲೂಕಿನ ಸಂತೆಬಾಂಚಹಳ್ಳಿ ಹೋಬಳಿಯ 8 ಕೆರೆ ಗಳನ್ನು ಚನ್ನರಾಯಪಟ್ಟಣ ತಾಲ್ಲೂಕಿನಲ್ಲಿರುವ ಜನಿವಾರ ಕೆರೆಯಲ್ಲಿನ ನೀರನ್ನು ಉಪಯೋಗಿಸಿ ಕುಡಿಯುವ ನೀರಿಗಾಗಿ ₹ 51.00 ಕೋಟಿ ಮೊತ್ತದ ಯೋಜನೆ ಕಾವೇರಿ ನೀರಾವರಿ ನಿಗಮದ ಮಂಡಳಿಯಿಂದ ಅನುಮೋದನೆಗೊಂಡಿರುತ್ತದೆ.

ಬಿಂತಿಗನವಿಲೆ ಹೋಬಳಿಯ ಕೆರೆಗಳು ಈ ಯೋಜನೆಯ ವ್ಯಾಪ್ತಿಯಲ್ಲಿರುವುದಿಲ್ಲ.

ಆ. ಮೇಲೆ ವಿವರಿಸಿದಂತೆ ₹ 51.00 ಕೋಟಿಗಳ ವಿವರವಾದ ಯೋಜನಾ ವರದಿಯನ್ನು ಕಾವೇರಿ ನೀರಾವರಿ ನಿಗಮದ ಮಂಡಳಿಯು ಅನುಮೋದನೆ ನೀಡಿರುತ್ತದೆ. ಸರ್ಕಾರದಲ್ಲಿ ಪ್ರಸ್ತಾವನೆಯು ಸ್ವೀಕೃತವಾದ ನಂತರ ಮುಂದಿನ ಸೂಕ್ತ ಕ್ರಮ ಕೈಗೊಳ್ಳಲಾಗುವುದು.

**ಸರ್ಕಾರ ಮತ್ತು ಅರಣ್ಯ ಇಲಾಖೆಗೆ ಸೇರಿದ ಸ್ವತ್ತುಗಳ ಒತ್ತುವರಿ ಬಗ್ಗೆ**

**527; ಡಾ: ಎಂ.ಆರ್.ದೊರೆಸ್ವಾಮಿ (ನಾಮ ನಿರ್ದೇಶನ ಹೊಂದಿದವರು)**

ಅ. ಸರ್ಕಾರದ ಮತ್ತು ಅರಣ್ಯ ಇಲಾಖೆಗಳಿಗೆ ಸೇರಿದ ಸ್ವತ್ತುಗಳನ್ನು ಒತ್ತುವರಿ (Encroachment) ಮಾಡಿರುವ ಬಗ್ಗೆ ಶ್ರೀ ಎ.ಟಿ.ರಾಮಸ್ವಾಮಿ ಸಮಿತಿ ನೀಡಿರುವ ವರದಿಯ ಮೇಲೆ ಸರ್ಕಾರ ಕೈಗೊಂಡಿರು ಕ್ರಮಗಳೇನು (ಪ್ರಕರಣವಾರು ವಿವರ ಒದಗಿಸುವುದು)

ಆ. ಇಂತಹ ಎಷ್ಟು ಒತ್ತುವರಿ ಜಮೀನನ್ನು ಸರ್ಕಾರವು ತನ್ನ ವಶಕ್ಕೆ ಹಿಂಪಡೆದುಕೊಂಡಿದೆ. (ವಿವರವಾದ ಮಾಹಿತಿ ನೀಡುವುದು)

ಇ. ಈ ವರದಿಯಲ್ಲಿನ ಶಿಫಾರಸ್ಸುಗಳನ್ನು ಜಾರಿಗೊಳಸಲು ಸರ್ಕಾರವು ನಿರ್ದಿಷ್ಟ ಕಾಲಾವಧಿಯನ್ನೇನಾದರೂ ನಿಗದಿಪಡಿಸಿದೆಯೇ, ಹಾಗಿದ್ದಲ್ಲಿ, ನಿಗದಿಪಡಿಸಲಾಗಿರುವ ಕಾಲಾವಧಿ ಎಷ್ಟು?

**ಶ್ರೀ ವಿ.ಶ್ರೀನಿವಾಸ ಪ್ರಸಾದ್ (ಕಂದಾಯ ಸಚಿವರು)**

ಅ. ಶ್ರೀ ಎ.ಟಿ.ರಾಮಸ್ವಾಮಿ ರವರ ವರದಿಯಂತೆ ಬೆಂಗಳೂರು ನಗರ ಜಿಲ್ಲೆಯಲ್ಲಿ ಒತ್ತುವರಿಯಾದ 8301 ಪ್ರಕರಣಗಳಲ್ಲಿ 33877–00 ಎಕರೆ ಸರ್ಕಾರಿ ಜಮೀನುಗಳ ಒತ್ತುವರಿ ಎಂದು ಗುರುತಿಸಲಾಗಿದೆ ಹಾಗೂ ಈ ಪೈಕಿ 4285 ಪ್ರಕರಣಗಳಲ್ಲಿ 9192–00 ಎಕರೆ ಜಮೀನನ್ನು ಒತ್ತುವರಿಯಿಂದ ಖುಲ್ಲಾ ಪಡಿಸಲಾಗಿದೆ.

ಜಂಟಿ ಸದನ ಸಮಿತಿಯ ವರದಿಯನ್ವಯ ಸರ್ಕಾರಿ ಜಮೀನುಗಳ ಮೇಲ್ವಿಚಾರಣಾ ಕಾರ್ಯಕ್ಕಾಗಿ ಸರ್ಕಾರದ ಆದೇಶ ಸಂಖ್ಯೆ:ಆರ್‌ಡಿ 388 ಎಲ್‌ಜಿಬಿ 2008 ದಿನಾಂಕ: 28–08–2008 ರಲ್ಲಿ ಕರ್ನಾಟಕ ಸಾರ್ವ ಜನಿಕ ನಿಗಮ ನಿಯಮಿತವನ್ನು ಸ್ಥಾಪಿಸಲಾಗಿದೆ. ಈ ನಿಗಮವು ರಾಜ್ಯಾ ದ್ಯಾಂತ ಸರ್ಕಾರಿ ಜಮೀನುಗಳು ಮತ್ತು ಸಾರ್ವಜನಿಕ ಜಮೀನುಗಳ ಒತ್ತುವರಿ ಹಾಗೂ ಸಂರಕ್ಷಣಾ ಮೇಲ್ವಿಚಾರಣಾ ಕಾರ್ಯ ನಿರ್ವಹಿಸು ತ್ತಿದೆ. ಅಲ್ಲದೆ ಸರ್ಕಾರಿ ಆದೇಶ ಸಂಖ್ಯೆ:ಆರ್‌ಡಿ 556 ಎಲ್‌ಜಿಬಿ 2009 ದಿನಾಂಕ:19–09–2009 ರಲ್ಲಿ ಶ್ರೀ ವಿ.ಬಾಲಸುಬ್ರಮಣಿಯನ್, ನಿವೃತ್ತ ಐ.ಎ.ಎಸ್., ಅಧಿಕಾರಿಯವರ ಅಧ್ಯಕ್ಷತೆಯಲ್ಲಿ ಸರ್ಕಾರಿ ಜಮೀನುಗಳ ಸಂರಕ್ಷಣಾ ಕಾರ್ಯಪಡೆಯನ್ನು ರಚಿಸಲಾಗಿತ್ತು.

ಸರ್ಕಾರಿ ಜಮೀನುಗಳ ಸಂರಕ್ಷಣಾ ಕಾರ್ಯಪಡೆ ಅಧ್ಯಕ್ಷರು ಜೂನ್ 2011 ರಲ್ಲಿ ನೀಡಿರುವ ವರದಿ ಆಧರಿಸಿ ಸರ್ಕಾರಿ ಜಮೀನುಗಳ ರಕ್ಷಣೆ ಮಾಡುವ ಬಗ್ಗೆ ಪರಾಮರ್ಶಿಸಿ ಸೂಕ್ತ ಸಲಹೆ ನೀಡಲು ಕಂದಾಯ ಇಲಾಖೆ/ಅರಣ್ಯ ಇಲಾಖೆ/ನಗರಾಭಿವೃದ್ಧಿ ಇಲಾಖೆ ಇವುಗಳಿಗೆ ಸಂಬಂಧಿಸಿದಂತೆ ಇಲಾಖಾವಾರು ಉಪ ಸಮಿತಿಗಳನ್ನು ರಚನೆ ಮಾಡಿ ಸರ್ಕಾರದ ಆದೇಶ ಸಂಖ್ಯೆ:ಆರ್‌ಡಿ 188 ಎಲ್‌ಜಿಪಿ 2011 ದಿನಾಂಕ:

19-09-2011 ರಲ್ಲಿ ಆದೇಶ ಹೊರಡಿಸಿದೆ. ಈ ಆದೇಶದನ್ವಯ ಸದರಿ ಸಮಿತಿಗಳಿಗೆ Curative action, Preventive action, Disciplinary action ಕ್ರಮಗಳ ಬಗ್ಗೆ ಸಲಹೆ ಸೂಚನೆಗಳನ್ನು ನೀಡಲು ಆದೇಶಿಸಲಾಗಿ ರುತ್ತದೆ.

ಕಂದಾಯ ಇಲಾಖೆಗೆ ಸಂಬಂಧಪಟ್ಟಂತೆ ರಚಿಸಿರುವ ಸಮಿತಿಯಲ್ಲಿ ಕಂದಾಯ ಇಲಾಖೆಯ ಕಾರ್ಯದರ್ಶಿಗಳನ್ನು ಅಧ್ಯಕ್ಷರನ್ನಾಗಿಯೂ, ಆಯುಕ್ತರು, ಭೂ ದಾಖಲೆಗಳು ಮತ್ತು ಭೂ ಮಾಪನ ಇಲಾಖೆ ಹಾಗೂ ಪ್ರಾದೇಶಿಕ ಆಯುಕ್ತರು, ಬೆಂಗಳೂರು ವಿಭಾಗ ಇವರುಗಳನ್ನು ಸದಸ್ಯರನ್ನಾಗಿಯೂ ಮತ್ತು ಜಿಲ್ಲಾಧಿಕಾರಿಗಳು, ಬೆಂಗಳೂರು ನಗರ ಜಿಲ್ಲೆರವರನ್ನು ಸದಸ್ಯ ಸಮನ್ವಯಧಿಕಾರಿಯನ್ನಾಗಿ ನೇಮಕ ಮಾಡ ಲಾಗಿರುತ್ತದೆ. ಸದರಿ ಸಮಿತಿಯು ದಿನಾಂಕ 24-01-2011, 26-10-2011, 09-11-2011, 24-11-2011 ಮತ್ತು 14-08-2012 ರಂದು ಸಭೆ ನಡೆಸಿ, ಕಂದಾಯ ಇಲಾಖೆಗೆ ಸಂಬಂಧಪಟ್ಟಂತೆ ತೆಗೆದುಕೊಳ್ಳ ಬೇಕಾದ ಕ್ರಮಗಳ ಬಗ್ಗೆ ಕಾರ್ಯ ಸೂಚಿಯನ್ನು ಹಾಕಿಕೊಳ್ಳಲಾಗಿದೆ.

ಅಲ್ಲದೆ ಸರ್ಕಾರಿ ಆದೇಶ ಸಂಖ್ಯೆ:ಆರ್‌ಡಿ 82 ಎಲ್‌ಜಿಕ್ಯೂ 99(ಪಿ1), ದಿನಾಂಕ:13-11-2008 ರಲ್ಲಿ ಜಿಲ್ಲಾ ಮಟ್ಟ ಮತ್ತು ತಾಲ್ಲೂಕು ಮಟ್ಟದಲ್ಲಿ ಜಿಲ್ಲಾಧಿಕಾರಿಗಳು ಮತ್ತು ತಹಶೀಲ್ದಾರ್ ರವರ ಅಧ್ಯಕ್ಷತೆಯಲ್ಲಿ ಜಿಲ್ಲಾ ಮತ್ತು ತಾಲ್ಲೂಕು ಮಟ್ಟದ ಸರ್ಕಾರಿ ಜಮೀನುಗಳ ಸಂರಕ್ಷಣಾ ಸಮಿತಿಗಳನ್ನು ಸಯ ರಚಿಸಲಾಗಿದೆ.

ಕರ್ನಾಟಕ ಭೂ ಕಂದಾಯ ಅಧಿನಿಯಮ 1964ರ ನಿಯಮ 192 ಗೆ ತಿದ್ದುಪಡಿ ತಂದು ಉಪ ನಿಯಮ 192(ಎ) ಮತ್ತು 192(ಬಿ) ಅನ್ನು ಸೇರಿಸಿದ್ದು, ಸರ್ಕಾರಿ ಜಮೀನು ಒತ್ತುವರಿಯನ್ನು ಶಿಕ್ಷಾರ್ಹ ಅಪರಾಧ ವೆಂದು ಪರಿಗಣಿಸಿದೆ. ಈ ಕಲಂ ಪ್ರಕಾರ ಸರ್ಕಾರಿ ಜಮೀನು ಒತ್ತುವರಿ ಮಾಡುವುದು ಶಿಕ್ಷಾರ್ಹ ಅಪರಾಧವಾಗಿದ್ದು, ಸದರ ಕಲಂ ಅಡಿಯಲ್ಲಿ ಕ್ರಮ ಜರುಗಿಸಲಾಗಿದೆ. 192(ಎ) ರಡಿ 640 ಪ್ರಕರಣಗಳು ಮತ್ತು

192(ಬಿ) ಪ್ರಕಾರ 09 ಪ್ರಕರಣಗಳನ್ನು ದಾಖಲಿಸಲಾಗಿದ್ದು, ವಿವಿಧ ಪೊಲೀಸ್ ಠಾಣೆಗಳಲ್ಲಿ ದೂರುಗಳು ದಾಖಲಾಗಿದ್ದು, ಪ್ರಕರಣಗಳು ವಿವಿಧ ಹಂತದಲ್ಲಿ ವಿಚಾರಣೆಯಲ್ಲಿವೆ.

ಕರ್ನಾಟಕ ಭೂ ಕಬಳಿಕೆ (ನಿಷೇಧ) ಕಾಯ್ದೆಯನ್ನು ಜಾರಿಗೆ ತರುವ ಸಲುವಾಗಿ ಕರಡು ಮಸೂದೆಯನ್ನು ಅನುಮೋದಿಸಿ ಘನತೆವೆತ್ತ ರಾಷ್ಟ್ರಪತಿಯವರ ಅಂಗೀಕಾರಕ್ಕಾಗಿ ಸಲ್ಲಿಸಲಾಗಿದ್ದು, ಅಂಗೀಕಾರ ನಿರೀಕ್ಷಿಸಲಾಗಿದೆ.

ಸರ್ಕಾರಿ ಜಮೀ ಸಂರಕ್ಷಣಾ ಕಾರ್ಯವು ನಿರಂತರ ಪ್ರಕ್ರಿಯೆ ಆಗಿದ್ದು, ಈ ಹಿಂದೆ ಜಂಟಿ ಸದನ ಸಮಿತಿಗೆ ಸಿದ್ದಪಡಿಸಿದ ವರದಿಯನ್ನೊಳಗೊಂಡು ಒಟ್ಟು 14683 ಒತ್ತುವರಿ ಪ್ರಕರಣಗಳಲ್ಲಿ 341900–00 ಎಕರೆ ಒತ್ತುವರಿ ಪ್ರದೇಶವನ್ನು ಪತ್ತೆ ಹಚ್ಚಲಾಗಿದೆ. ಇದುವರೆವಿಗೂ 7494 ಒತ್ತುವರಿ ಪ್ರಕರಣಗಳಲ್ಲಿ 10739–00 ಎಕರೆ ಖುಲ್ಲಾ ಪಡಿಸಲಾಗಿದೆ.

## ಅರಣ್ಯ

## ಬೆಂಗಳೂರು ನಗರ ವಿಭಾಗ

1. ಶ್ರೀ ಎ.ಟಿ.ರಾಮಸ್ವಾಮಿ ಅಧ್ಯಕ್ಷತೆಯ ಜಂಟಿ ಸದನ ಸಮಿತಿ ನೀಡಿರುವ ವರದಿಯ ವಾಲ್ಯೂಮ್–2ರ ಪ್ರಕಾರ ಬೆಂಗಳೂರು ನಗರ ವಿಭಾಗದಲ್ಲಿ 1099 ಎಕರೆ ಅರಣ್ಯ ಪ್ರದೇಶವನ್ನು 312 ಜನ ಒತ್ತುವರಿದಾರರು ಆಕ್ರಮಿಸಿರುವುದಾಗಿ ವರದಿಸಲಾಗಿದೆ. ಪ್ರಸ್ತುತ ಹೆಚ್ಚುವರಿಯಾಗಿ 277 ಎಕರೆ ಅರಣ್ಯ ಪ್ರದೇಶವನ್ನು 143 ಒತ್ತುವರಿದಾರರು ಆಕ್ರಮಿಸಿರುವುದು ಕಂಡು ಬಂದಿದೆ, ಮಾರ್ಚ್ 2013ರ ಅಂತ್ಯದ ವೇಳೆಗೆ ಒಟ್ಟು 455 ಪ್ರಕರಣಗಳಲ್ಲಿ 1376 ಅರಣ್ಯ ಪ್ರದೇಶವನ್ನು ಒತ್ತುವರಿ ಮಾಡಿರುವುದು ಕಂಡು ಬಂದಿರುತ್ತದೆ. ಈ ಪೈಕಿ 33 ಪ್ರಕರಣಗಳಲ್ಲಿ 144 ಎಕರೆ 20ಗುಂಟೆ ಅರಣ್ಯ ಪ್ರದೇಶವನ್ನು ಒತ್ತುವರಿಯಿಂದ ತೆರವುಗೊಳಿಸಲಾಗಿದೆ. 422 ಪ್ರಕರಣಗಳಲ್ಲಿ 1232 ಎಕರೆ ಅರಣ್ಯ ಪ್ರದೇಶವನ್ನು ಒತ್ತುವರಿಯಿಂದ ತೆರವುಗೊಳಿಸಲು ಬಾಕಿ ಇರುತ್ತದೆ ಬಾಕಿ ಇರುವ

ಪ್ರಕರಣಗಳ ಪೈಕಿ 174 ಪ್ರಕರಣಗಳಲ್ಲಿ (663–14 ಎಕರೆ) 1963ರ ಕರ್ನಾಟಕ ಅರಣ್ಯ ಕಾಯ್ದೆಯ ಸೆಕ್ಷನ್ 64(ಎ) ಪ್ರಕಾರ ನೋಟೀಸ್ ಜಾರಿ ಮಾಡಲಾಗಿರುತ್ತದೆ. 170 ಪ್ರಕರಣಗಳಲ್ಲಿ (658 ಎಕರೆ) ಅಂತಿಮ ಆದೇಶವನ್ನು ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳು ಹೊರಡಿಸಿ ರುತ್ತಾರೆ. (ಅನುಬಂಧ–1 ಮತ್ತು 2ರಲ್ಲಿ ವಿವರಗಳನ್ನು ಲಗತ್ತಿಸಿದೆ)

2. ಉತ್ತರಹಳ್ಳಿ ಮನವರ್ತೆ ಕಾವಲ್(ತುರಹಳ್ಳಿ ಎಸ್‌ಎಫ್) ಸರ್ವೆ ನಂ.5, 41, 42ರಲ್ಲಿ ಒಟ್ಟು 597 ಎಕರೆ 19 ಗುಂಟೆ ವಿಸ್ತೀರ್ಣದ ಅರಣ್ಯ ಪ್ರದೇಶ ಇರುತ್ತದೆ. ಈ ಪೈಕಿ 23 ಪ್ರಕರಣಗಳಲ್ಲಿ 84.5 ಎಕರೆ ಅರಣ್ಯ ಪ್ರದೇಶವನ್ನು ಒತ್ತುವರಿ ಮಾಡಲಾಗಿದೆ. ಈವರೆಗೆ 14 ಪ್ರಕರಣಗಳಲ್ಲಿ 48–30.43 ಎಕರೆ ಅರಣ್ಯ ಪ್ರದೇಶವನ್ನು ಒತ್ತುವರಿಯಿಂದ ತೆರೆವುಗೊಳಿಸಲಾಗಿದೆ. 9 ಪ್ರಕರಣಗಳಲ್ಲಿ 35–14.57ಎಕರೆ ಅರಣ್ಯ ಪ್ರದೇಶವನ್ನು ಒತ್ತುವರಿಯಿಂದ ತೆರವುಗೊಳಿಸಲು ಬಾಕಿ ಇರುತ್ತದೆ (ವಿವರಗಳನ್ನು ಅನುಬಂಧ–3ರಲ್ಲಿ ಲಗತ್ತಿಸಿದೆ)

**ಬನ್ನೇರುಘಟ್ಟ ರಾಷ್ಟ್ರೀಯ ಉದ್ಯಾನವನ**

ಬನ್ನೇರುಘಟ್ಟ ರಾಷ್ಟ್ರೀಯ ಉದ್ಯಾನವನದಲ್ಲಿ 813 ಪ್ರಕರಣಗಳಲ್ಲಿ 767 ಎಕರೆ ಅರಣ್ಯ ಪ್ರದೇಶವನ್ನು ಒತ್ತುವರಿ ಮಾಡಲಾಗಿದೆ ಎಂದು ವರದಿ ಯಲ್ಲಿ ಉಲ್ಲೇಖಿಸಲಾಗಿದೆ.

ಪ್ರಸ್ತುತ ಲಭ್ಯವಿರುವ ದಾಖಲಾತಿಗಳ ಪ್ರಕಾರ 1578 ಪ್ರಕರಣಗಳಲ್ಲಿ 2735 ಎಕರೆ ಅರಣ್ಯ ಪ್ರದೇಶವನ್ನು ಒತ್ತುವರಿ ಮಾಡಲಾಗಿದೆ. ಈ ಪೈಕಿ 87 ಪ್ರಕರಣಗಳಲ್ಲಿ 164 ಎಕರೆ 39 ಗುಂಟೆ ಅರಣ್ಯ ಪ್ರದೇಶವನ್ನು ಒತ್ತುವರಿಯಿಂದ ತೆರವುಗೊಳಿಸಲಾಗಿದೆ. 1491 ಪ್ರಕರಣಗಳಲ್ಲಿ 2571 ಎಕರೆ ಅರಣ್ಯ ಪ್ರದೇಶವನ್ನು ಒತ್ತುವರಿಯಿಂದ ತೆರವುಗೊಳಿಸಲು ಬಾಕಿ ಇರುತ್ತದೆ. ಅದರಲ್ಲಿ 619 ಪ್ರಕರಣಗಳಲ್ಲಿ 930 ಎಕರೆ ಒತ್ತುವರಿಯನ್ನು ತೆರವುಗೊಳಿಸಲು ಕರ್ನಾಟಕ ಅರಣ್ಯ ಕಾಯ್ದೆ 1963 ಸೆಕ್ಷನ್ 64(ಎ) ಪ್ರಕಾರ ಕ್ರಮ ಜರುಗಿಸಲಾಗಿದೆ. 242 ಪ್ರಕರಣಗಳಲ್ಲಿ (280 ಎಕರೆ)

ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳು ಒತ್ತುವರಿಯನ್ನು ತೆರವುಗೊಳಿಸಲು ಅಂತಿಮ ಆದೇಶವನ್ನು ಹೊರಡಿಸಿರುತ್ತಾರೆ. (ವಿವರಗಳನ್ನು ಅನುಬಂಧ–4ರಲ್ಲಿ ಲಗತ್ತಿಸಿದೆ)

ಕೆರೆಗಳು

ಅರಣ್ಯ ಇಲಾಖೆ ವಶದಲ್ಲಿ ಪ್ರಸ್ತುತ 5 ಕೆರೆಗಳು ಮಾತ್ರ ಇದ್ದು 163.03 ಹೆಕ್ಟೇರ್ ವಿಸ್ತೀರ್ಣವನ್ನು ಹೊಂದಿರುತ್ತವೆ. (ಮಡಿವಾಳ, ಮೈಲಸಂದ್ರ, ಪುಟ್ಟೇನಹಳ್ಳಿ, ಹೆಣ್ಣೂರು, ಜಾರಕ್‌ಬಂಡೆ ಕಾವಲ್) ಈ ಪೈಕಿ ಮಡಿ ವಾಳ ಕೆರೆಯಲ್ಲಿ 63 ಜನರು 1 ಎಕರೆ 28 ಗುಂಟೆಯನ್ನು ಒತ್ತುವರಿ ಮಾಡಿರುತ್ತಾರೆ. 5 ಜನರು ಒತ್ತುವರಿ ಮಾಢಿದ್ದ 30 ಗುಂಟೆ ಪ್ರದೇಶ ವನ್ನು ಒತ್ತುವರಿಯಿಂದ ತೆರವುಗೊಳಿಸಲಾಗಿದೆ. ಬಾಕಿ ಇರುವ 38 ಗುಂಟೆ ಅರಣ್ಯ ಪ್ರದೇಶವನ್ನು ಒತ್ತುವರಿಯಿಂದ ತೆರವುಗೊಳಿಸಲು ಬಾಕಿ ಇರುತ್ತದೆ. (ವಿವರಗಳನ್ನು ಅನುಬಂಧ–5ರಲ್ಲಿ ಲಗತ್ತಿಸಿದೆ)

ಆ. 10739–00 ಎಕರೆ ಸರ್ಕಾರಿ ಜಮೀನನ್ನು ಒತ್ತುವರಿಯಿಂದ ಖುಲ್ಲಾ ಪಡಿಸಿ ಹಿಂಪಡೆದಿದೆ. (ಪಟ್ಟಿ ಲಗತ್ತಿಸಿದೆ)

ಅರಣ್ಯ ಇಲಾಖೆಗೆ ಸಂಬಂಧಿಸಿದ ವಿವರಗಳನ್ನು ಮೇಲೆ ನೀಡಿರುವ ಉತ್ತರದಲ್ಲಿ ವಿವರಿಸಲಾಗಿದೆ.

ಇ. ಇದು ನಿರಂತರ ಪ್ರಕ್ರಿಯಿ ಆಗಿದ್ದು, ಕಾಲಾವಧಿ ನಿಗಧಿಪಡಿಸಿರುವುದಿಲ್ಲ.

# ಅನುಬಂಧ–1

## Details of Encroachment of Forest land in Bangalore Urban Division

| Sl. No. | Range | Name of the Forest | Extent as per Notification | | No. of Encroachers | Extent of Encroachment | | No. of cases evicted up to end of 31.08.12 | Extent | |
|---|---|---|---|---|---|---|---|---|---|---|
| | | | Acres | Guntas | | Acres | Guntas | | Acres | Guntas |
| 1 | Bangalore | Jarakabande B Block RF | 123 | 0 | 11 | 37 | 33 | 10 | 25 | 13 |
| 2 | Yelahanka | Marasandra SF | 855 | 10 | 7 | 6 | 12 | 0 | 0 | 0 |
| 3 | Anekal | Bhuthanahalli MF | 539 | 27 | 76 | 322 | 18 | 1 | 12 | |
| 4 | K.R.Pura | Kadugodi RF | 711 | 0 | 248 | 569 | 28.2 | 1 | 0 | 22 |
| 5 | Kaggalipura | Turahalli MF | 597 | 19 | 27 | 73 | 25 | 8 | 38 | 3 |
| | | Tuhalli SF | 514 | 29 | 18 | 73 | 10 | 2 | 32 | 12 |
| | | B.M.Kaval SF | 1382 | 18 | 37 | 205 | 34.1 | 4 | 16 | 10 |
| | | Basavanatara SF | 1417 | 0 | 14 | 26 | 1.1 | | | |

| | | | | | | | | | | |
|---|---|---|---|---|---|---|---|---|---|---|
| | | Sulikere SF | 525 | 02 | 7 | 20 | 0 | 7 | 20 | 0 |
| | | Gollahalli Gudda | | 22 | 3 | 13 | 22 | | | |
| | | Doresanipalya Lac Reserve | 414 | 22 | 2 | 0 | 1.5 | | | |
| | | Taralu (C&D) | 348 | 14 | 5 | 28 | 20 | | | |
| | | **GRAND TOTAL** | | | **455** | **1376** | **34.9** | **33** | **144** | **20** |

## Abstract

| | | | |
|---|---|---|---|
| No. of Cases booked | 455 | 1376 | 34.9 |
| No. of Cases evicate | 33 | 144 | 20 |
| | 422 | 1232 | 14.9 |

ಅನುಬಂಧ–2

Annexure:- Bangalore Urban Division

Total Notified Forest Area in Bangalore Urban Division: 12433 acres

Reasons for pendency of eviction of encroachment after 27-04-1978

Reserve Forest and Minor Forests & Sec-4 Notified area

| **Sl. No** | **Particulars** | **No. of Cases** | **Area in** | | **Remarks** |
|---|---|---|---|---|---|
| | | | **Acres** | **Gu** | |
| Reserve Forest and MF. Sec-4 Notified area Encroachment yet to be evicted | | 422 | 1232 | 14 | |
| 1 | 64A Process initiated by ACF | 174 | 663 | 14 | |
| | Cases where 64A process not initiated | 248 | 569 | 22 | |
| | **Total:** | **422** | **1232** | **36** | |
| 2 | 64A Process initiated by ACF | 174 | 663 | 04 | |
| | 64A Final Orders by ACF | 170 | 658 | - | Balance 4 cases-5A- |

| | | | | | |
|---|---|---|---|---|---|
| | | | | | 04g under proceedings |
| | Appeal under 64A with CCF | 67 | 176 | - | |
| | Orders Passed by CCF | 43 | 384 | - | |
| 3 | Pending in various High courts & OS CIM Court | 60 | 270 | 10 | |

NOTE: In 248 cases Proceedings under Karnataka Forest Act sec-64(A) could not be initiated due to the following reasons:

i) In Kadugodi survey No.1, during the year, the KIADB in its order No.CI-194-SPQ-80 dated: 19.05.1981 and 21.06.1981 has acquired, formed layout and allotted an area of 417-05 acres to 26 industries. In addition to this 222 private individuals have also encroached an area of 152-17 acres of Reserve Forest Area in the same forest block. In All the above ???? This Hon'ble High Court has held that the entire area in Sy.No.1 of Kadugodi Plantation is not a forest area in W.P.No. 7200/2008. Further, the Government have preferred a Writ Appeal against the orders of the Hon'ble Single Judge vide Writ Appeal No. 4283/2012 and it is pending. Hence, no action is being initiated pertaining to these cases.

## ಅನುಬಂಧ–3

Name of the Forest: Thurahalli M.F.

G.O.No. G-10407-FT-F-153-95 dtd:29-05-1896

**Details of Encroachment Uttarahalli Manavarte kaval (Turahlli SF)**

| ಕ್ರ. ಸಂ. | ಅರಣ್ಯ ಪ್ರದೇಶ | ಸರ್ವೆ ನಂ. | ವಿಸ್ತೀರ್ಣ | ಒತ್ತುವರಿದಾರರ ಸಂಖ್ಯೆ | ಒತ್ತುವರಿ ವಿಸ್ತೀರ್ಣ (ಎ–ಗು) | ಒತ್ತುವರಿ ತೆರೆವುಗೊಳಿಸಿರುವ ಪ್ರಕರಣಗಳ ಸಂಖ್ಯೆ | ತೆರವುಗೊಳಿಸುರುವ ವಿಸ್ತೀರ್ಣ (ಎ–ಗು) | ಬಾಕಿ ಉಳಿದಿರುವ ಒತ್ತುವರಿ ತೆರೆವುಗೊಳಿಸಿರುವ ಪ್ರಕರಣಗಳ ಸಂಖ್ಯೆ | ಬಾಕಿ ಉಳಿದಿರುವ ತೆರೆವುಗೊಳಿಸಿರುವ ವಿಸ್ತೀರ್ಣ (ಎ–ಗು) |
|---|---|---|---|---|---|---|---|---|---|
| 1 | ಉತ್ತರಹಳ್ಳಿ ಮನವರ್ತೆ ಕಾವಲ್ | 5 | 242–38 | 14 | 49–23 | 11 | 46–25 | 3 | 2–38 |
| 2 | ತುರಹಳ್ಳಿ | 41 | 94–08 | 5 | 0–35 | 2 | 0–5.43 | 1 | 0–29.57 |
| 3 | ತುರಹಳ್ಳಿ | 42 | 159–13 | 6 | 33–27 | 1 | 2–0 | 9 | 31–14.57 |
| | | ಒಟ್ಟು | 597–19 | 23 | 84–5 | 14 | 48–30.43 | 9 | 35–14.57 |

ಅನುಬಂಧ–4

# Details of Encroachment after 27.04.1978 upto end of 31.03.2013

| Sl. No. | Name of the Circle | Name of the Division | Name of the Wildlife Range | Name of the RF/SF | Initial Encroachment cases | | Encroachment evicted | | Remaining encroachment cases | | In case of remaining encroachment cases | | | | | |
|---|---|---|---|---|---|---|---|---|---|---|---|---|---|---|---|---|
| | | | | | No. of cases | Extent (ha.) | No. of cases | Extent (ha.) | No. of cases | Extent (ha.) | No. of cases | Extent (ha.) | No. of cases | Extent (ha.) | No. of cases | Extent (ha.) |
| 1 | 2 | 3 | 4 | 5 | 6 | 7 | 8 | 9 | 10 | 11 | 12 | 13 | 14 | 15 | 16 | 17 |
| 1 | Bangalore | Bannerghatta National Park | Anekal | Madeshwara SF | 141 | 112.99 | - | - | 141 | 112.99 | 141 | 112.99 | 103 | 83.13 | 38 | 29.86 |
| | | | Bannerghatta | Kalkere SF | 229 | 89.57 | 87 | 66.46 | 142 | 23.11 | 142 | 23.11 | 90 | 0.25 | 52 | 22.86 |
| | | | | Ragihally Sy No. 17 | 228 | 161.87 | - | - | 228 | 161.87 | 228 | 161.87 | 0 | 0 | 228 | 161.87 |
| | | | Harohalli | Bantanala SF | 91 | 56.96 | - | - | 91 | 56.96 | 91 | 56.96 | 32 | 8.72 | 59 | 48.24 |
| | | | | Gullahatti SF | 28 | 25.30 | - | - | 28 | 25.3 | 17 | 21.47 | 17 | 21.47 | - | - |
| | | | | Kardikal SF | 32 | 18.01 | - | - | 32 | 18.01 | - | - | - | - | - | - |
| | | | Kodihalli | Bilikal SF | 189 | 102.06 | | | 189 | 102.06 | - | - | - | - | - | - |
| | | | | Manjunath SF | 96 | 71 | | | 96 | 71 | - | - | - | - | - | - |
| | | | | Ramadevarabetta SF | 544 | 470.19 | | | 544 | 470.19 | - | - | - | - | - | - |
| | | | **Total** | | **1578** | **1107.950** | **87** | **66.460** | **1491** | **1041.490** | **619** | **376.400** | **242** | **113.570** | **377** | **262.830** |

# ಅನುಬಂಧ–4

## Details of Tanks in Bangalore Urban Forest Division

## Date-18/5/13

| Sl. No. | Name of the tank | Extent in Ha. | No. of cases | Encroached extent (A-g) | No. of cases evicted | Evicted extent | Remark |
|---|---|---|---|---|---|---|---|
| 1 | Madival Tank | 114.16 | 63 | 1A-28g | 5 | | Balance 58 |
| 2 | Mylasandra 1&2 tanks | 11.31 | - | - | - | - | - |
| 3 | Puttenahalli tank (Yelahanka) | 8.87 | - | - | - | - | - |
| 4 | Hennur Tank | 23.69 | - | - | - | - | - |
| 5 | Jarakabande Kaval tank (Sandal Reserve) | 2.00 | - | - | - | - | - |
| | **Total** | **160.03** | **63** | **1A-28g** | **-** | **-** | **-** |

# ಸರ್ಕಾರಿ ಜಮೀನುಗಳ ಒತ್ತುವರಿ ತೆರವುಗೊಳಿಸಿರುವ ಪ್ರಕರಣಗಳು (ತಾಲ್ಲೂಕುವಾರು)

## (ಜೂನ್ 2013 ರ ಅಂತ್ಯಕ್ಕೆ)

| ಕ್ರ.ಸಂ | ತಾಲ್ಲೂಕು | ಪತ್ತೆಹಚ್ಚಿದ ಪ್ರಕರಣಗಳು | | ಹಿಂದಿನ ಮಾಹೆಯವರೆಗೆ ತೆರವುಗೊಳಿಸಿದ ಪ್ರಕರಣಗಳು | | ಪ್ರಸ್ತುತ ಮಾಹೆಯಲ್ಲಿ ತೆರವುಗೊಳಿಸಿದ ಪ್ರಕರಣಗಳು | | ಬಾಕಿ | | ತೆರವುಗೊಳಿಸದಿರುವುದಕ್ಕೆ ಕಾರಣ |
|---|---|---|---|---|---|---|---|---|---|---|
| | | ಸಂಖ್ಯೆ | ವಿಸ್ತೀರ್ಣ ಎ/ಗು | ಸಂಖ್ಯೆ | ವಿಸ್ತೀರ್ಣ ಎ/ಗು | ಸಂಖ್ಯೆ | ವಿಸ್ತೀರ್ಣ ಎ/ಗು | ಸಂಖ್ಯೆ | ವಿಸ್ತೀರ್ಣ ಎ/ಗು | |
| 1 | ಬೆಂಗಳೂರು ಉತ್ತರ | 2267 | 2758–28 | 2042 | 2349–37.00 | | | 225 | 408–31.00 | ಕರ್ನಾಟಕ ಭೂ ಕಂದಾಯ ಕಾಯ್ದೆ ಕಲಂ 136 (3) ರಡಿ ದಾಖಲಾಗಿರುವ ಪ್ರಕರಣಗಳು ನಮೂನೆ 50 ಮತ್ತು 53 ರಡಿಯ ಪ್ರಕರಣಗಳು ಮತ್ತು ನ್ಯಾಯಾಲಯದಲ್ಲಿ ದಾಖಲಾಗಿರುವ ತಕರಾರು ಪ್ರಕರಣಗಳು ಮತ್ತು ಇತರೆ |
| 2 | ಬೆಂಗಳೂರು ಉತ್ತರ (ಅ) | 1253 | 12021–00 | 988 | 2247–28.08 | | | 265 | 9773–11.08 | |
| 3 | ಬೆಂಗಳೂರು ಪೂರ್ವ | 1307 | 3089–00 | 1119 | 1403–11.08 | 3 | 1–21.22 | 191 | 1684–06.12 | |
| 4 | ಬೆಂಗಳೂರು | 6755 | 6882–00 | 1773 | 1981– | | | 4982 | 4900– | |

| | | | | | | | | | | |
|---|---|---|---|---|---|---|---|---|---|---|
| | ದಕ್ಷಿಣ | | | | 19.00 | | | | 21.00 | ಪ್ರಕರಣಗಳು ಇತ್ಯರ್ಥಕ್ಕೆ ಬಾಕಿ ಇರುವುದರಿಂದ ತೆರವುಗೊಳಿಸಲು ಸಾಧ್ಯವಾಗಿರುವುದಿಲ್ಲ. ಇದರ ಪೈಕಿ ಸಾರ್ವಜನಿಕ ಒತ್ತುವರಿ 7881–00 ಎಕರೆ ಇದ್ದು ಇದನ್ನು ದಾಖಲೆಗಳಲ್ಲಿ ತರಲು ಕ್ರಮ ಜರುಗಿಸಿದೆ. |
| 5 | ಆನೇಕಲ್ | 3101 | 9359–00 | 1575 | 2755–11.00 | | | 1526 | 6603–29.00 | |
| | **ಒಟ್ಟು** | **14683** | **31109–28** | **7494** | **10739–0000** | **3** | **1–21.12** | **7189** | **23370–1904** | |

## ಕೆರೆ ಒತ್ತುವರಿ ಬಗ್ಗೆ

**548; ಶ್ರೀ ಭಾನುಪ್ರಕಾಶ ( ವಿಧಾನಸಭೆಯಿಂದ ಚುನಾಯಿತರಾದವರು)**

ಅ) ರಾಜ್ಯದಲ್ಲಿರುವ ಕೆರೆಗಳ ಸಂಖ್ಯೆ ಎಷ್ಟು (ಜಿಲ್ಲಾವಾರು ಮಾಹಿತಿ ನೀಡುವುದು);

ಆ) ಇದರಲ್ಲಿ ಎಷ್ಟು ಕೆರೆಗಳು ಒತ್ತುವರಿಯಾಗಿದೆ;

ಇ) ಕೆರೆಯ ವಿಸ್ತೀರ್ಣ ಹಾಗೂ ಒತ್ತುವರಿಯಾದ ಪ್ರಮಾಣ ಎಷ್ಟು ;

ಈ) ಒತ್ತುವರಿಯನ್ನು ತೆರವುಗೊಳಿಸುವ ಬಗ್ಗೆ ಸರ್ಕಾರ ಯಾವ ಕ್ರಮಗಳನ್ನು ಕೈಗೊಂಡಿದೆ;

**ಶ್ರೀ ಶಿವರಾಜ ತಂಗಡಗಿ ( ಸಣ್ಣ ನೀರಾವರಿ ಸಚಿವರು)**

ಅ) ರಾಜ್ಯದಲ್ಲಿ ಒಟ್ಟು 3579 ಸಣ್ಣ ನೀರಾವರಿ ಕೆರೆಗಳಿವೆ ಜಿಲ್ಲಾವಾರು ಮಾಹಿತಿಯನ್ನು ಅನುಬಂಧ 1 ರಲ್ಲಿ ನೀಡಲಾಗಿದೆ.

ಆ,ಇ) ವಿವರಗಳನ್ನು ಅನುಬಂಧ 1 ಮತ್ತು 2 ರಲ್ಲಿ ನೀಡಲಾಗಿದೆ.

ಈ) ಕೆರೆಗಳ ಸರ್ವೆ ಕಾರ್ಯ ಕೈಗೊಂಡು ಒತ್ತುವರಿಯನ್ನು ಗುರುತಿಸಿ ಕಂದಾಯ ಇಲಾಖೆಯ ಸಹಯೋಗದೊಂದಿಗೆ ಒತ್ತುವರಿಯನ್ನು ತೆರವು ಗೊಳಿಸಲಾಗುತ್ತಿದೆ. ನಂತರ ಅವಶ್ಯವಿರುವಲ್ಲಿ ಒತ್ತುವರಿಯನ್ನು ತಡೆ ಗಟ್ಟಲು ಕೆರೆಗಳ ಗಡಿಯಂಚಿನಲ್ಲಿ ಬೌಂಡ್ರಿ ಟ್ರೆಂಚ್ ತೆಗೆದು, ಕಲ್ಲುಗಳನ್ನು ನೆಡಲಾಗುತ್ತದೆ.

# ಅನಬಂಧ 1

| ಕ್ರ.ಸಂ | ಜಿಲ್ಲೆ | ಕೆರೆಗಳ ಸಂಖ್ಯೆ ದಿನಾಂಕ 1–4–2013 ರಲ್ಲಿದ್ದಂತೆ) | ಸರ್ವೆ ಕಾರ್ಯ ಕೈಗೊಂಡ ಕೆರೆಗಳ ಸಂಖ್ಯೆ | ಒತ್ತುವರಿ ಯಾದ ಕೆರೆಗಳು | | | ಒತ್ತುವರಿ ತೆರವುಗೊಳಿಸಲಾದ | | ತೆರವುಗೊಳಿಸಬೇಕಾದ ವಿಸ್ತೀರ್ಣ ( ಹೆ.ಗಳಲ್ಲಿ) | ಬೌಂಡ್ರಿ ಟ್ರೆಂಚ್ ಸೀಮೆಕಲ್ಲು ಹಾಕಿದ ಕೆರೆಗಳ ಸಂಖ್ಯೆ |
|---|---|---|---|---|---|---|---|---|---|---|
| | | | | ಒತ್ತುವರಿಯಾದ ಕೆರೆಗಳ ಸಂಖ್ಯೆ | ಕೆರೆಗಳ ಒಟ್ಟು ವಿಸ್ತೀರ್ಣ ( ಹೆ.ಗಳಲ್ಲಿ) | ಒತ್ತುವರಿಯಾದ ವಿಸ್ತೀರ್ಣ ( ಹೆ.ಗಳಲ್ಲಿ) | ಕೆರೆಗಳ ಸಂಖ್ಯೆ | ವಿಸ್ತೀರ್ಣ (ಹೆ.ಗಳಲ್ಲಿ) | | |
| 1 | ಬೆಂಗಳೂರು ನಗರ | 47 | 46 | 39 | 2155.31 | 148.49 | 20 | 110.78 | 37.71 | 20 |
| 2 | ಬೆಂಗಳೂರು (ಗ್ರಾ) | 98 | 94 | 82 | 6298.32 | 849.41 | 75 | 606.37 | 243.04 | 73 |
| 3 | ರಾಮನಗರ | 103 | 96 | 82 | 4853.01 | 412.79 | 82 | 412.79 | | 75 |
| 4 | ಕೋಲಾರ | 143 | 63 | 63 | 6684.71 | 954.15 | 60 | 928.55 | 25.60 | 35 |
| 5 | ಚಿಕ್ಕಬಳ್ಳಾಪುರ | 202 | 81 | 81 | 5845.63 | 763.69 | 76 | 724.30 | 39.39 | 76 |
| 6 | ತುಮಕೂರು | 400 | 226 | 216 | 14630.00 | 912.24 | 199 | 833.42 | 78.82 | 199 |
| 7 | ಚಿತ್ರದುರ್ಗ | 149 | 48 | 25 | 6481.58 | 192.69 | 18 | 43.88 | 48.81 | 18 |
| 8 | ದಾವಣಗೆರೆ | 102 | 44 | 19 | 2767.35 | 97.82 | 19 | 97.70 | 0.12 | 19 |
| 9 | ಶಿವಮೊಗ್ಗ | 303 | 163 | 89 | 2600.79 | 74.94 | 89 | 58.73 | 16.21 | 88 |

| | | | | | | | | | | |
|---|---|---|---|---|---|---|---|---|---|---|
| 10 | ಚಿಕ್ಕಮಗಳೂರು | 121 | 71 | 52 | 3134.22 | 125.14 | 51 | 124.14 | 1.00 | 34 |
| 11 | ಹಾಸನ | 163 | 121 | 98 | 6413.41 | 426.51 | 97 | 425.51 | 1.00 | 44 |
| 12 | ಮೈಸೂರು | 51 | 41 | 31 | 1100.82 | 141.56 | 31 | 141.56 | | 31 |
| 13 | ಚಾಮರಾಜನಗರ | 64 | 47 | 46 | 2731.74 | 420.73 | 46 | 325.21 | 95.52 | 17 |
| 14 | ಮಂಡ್ಯ | 48 | 38 | 38 | 1517.28 | 150.29 | 38 | 150.29 | | 25 |
| 15 | ದಕ್ಷಿಣ ಕನ್ನಡ | 2 | 2 | 1 | 3.34 | 0.83 | 1 | 0.83 | | 1 |
| 16 | ಉಡುಪಿ | 4 | 4 | 3 | 24.42 | 1.04 | 3 | 1.04 | | 3 |
| 17 | ಕೊಡಗು | 29 | 24 | 13 | 26.75 | 4.45 | 13 | 4.45 | | 13 |
| 18 | ಬೆಳಗಾವಿ | 257 | 129 | 8 | 66.42 | 6.51 | 4 | 2.11 | 4.40 | 38 |
| 19 | ಧಾರವಾಡ | 111 | 64 | 9 | 115.66 | 6.24 | 9 | 6.24 | | 25 |
| 20 | ಗದಗ | 29 | 4 | | | | | | | 14 |
| 21 | ಹಾವೇರಿ | 259 | 62 | 62 | 2397.77 | 40.05 | 62 | 40.05 | | 48 |
| 22 | ಬಿಜಾಪುರ | 147 | 35 | 1 | 11.06 | 6.50 | 1 | 6.50 | | 35 |
| 23 | ಬಾಗಲಕೋಟ | 61 | | | | | | | | |
| 24 | ಉತ್ತರಕನ್ನಡ | 90 | 63 | | | | | | | 14 |
| 25 | ಗುಲಬರ್ಗಾ | 150 | 73 | 1 | 8.38 | 0.90 | | | 0.90 | 73 |

| | | | | | | | | | | |
|---|---|---|---|---|---|---|---|---|---|---|
| 26 | ಯಾದಗಿರಿ | 71 | 1 | | | | | | | 1 |
| 27 | ಬೀದರ | 117 | 56 | 11 | 438.49 | 71.35 | 10 | 69.58 | 1.77 | 55 |
| 28 | ಕೊಪ್ಪಳ | 106 | 54 | | | | | | | 54 |
| 29 | ರಾಯಚೂರು | 68 | 25 | | | | | | | 25 |
| 30 | ಬಳ್ಳಾರಿ | 81 | 24 | | | | | | | 21 |
| | | **3579** | **1799** | **1070** | **70306.46** | **5808.32** | **1004** | **5214.03** | **594.29** | **1174** |

# ಅನುಬಂಧ –2

| ಕ್ರ.ಸ ಂ | ಜಿಲ್ಲೆ | ತೆಗೆದುಕೊಂಡಿರುವ ಕೆರೆಗಳ ಸಂಖ್ಯೆ | | | ಒತ್ತುವರಿ ಗುರುತಿಸಲಾದ ಕೆರೆಗಳ ಸಂಖ್ಯೆ | | | ಒತ್ತುವರಿಯಾದ ಕೆರೆಗಳ ಒಟ್ಟು ಜಲಾವೃತ ಪ್ರದೇಶ (ಹೆಕ್ಟೇರಗಳಲ್ಲಿ) | | | ಒತ್ತುವರಿ ತೆರವುಗೊಳಿಸಲಾದ ಕೆರೆಗಳ ಸಂಖ್ಯೆ | | | ಒತ್ತುವರಿಯಾದ ಪ್ರದೇಶ (ಹೆಕ್ಟೇರಗಳಲ್ಲಿ) | | | ಒತ್ತುವರಿ ತೆರವುಗೊಳಿಸಲು ಪ್ರದೇಶ ( ಹೆಕ್ಟೇರಗಳಲ್ಲಿ) | | |
|---|---|---|---|---|---|---|---|---|---|---|---|---|---|---|---|---|---|---|---|
| | | ಸ.ನಿ | ಜಿ.ಪಂ | ಒಟ್ಟು | ಸ.ನಿ | ಜಿ.ಪಂ | ಒಟ್ಟು | ಸ.ನೀ | ಜಿ.ಪಂ | ಒಟ್ಟು | ಸ.ನಿ | ಜಿ.ಪಂ | ಒಟ್ಟು | ಸ.ನೀ | ಜಿ.ಪಂ | ಒಟ್ಟು | ಸ.ನೀ | ಜಿ.ಪಂ | ಒಟ್ಟು |
| 1 | ಬಾಗಲಕೋಟೆ | 35 | 16 | 51 | 1 | 2 | 3 | 270.00 | 9.71 | 279.71 | 1 | 2 | 3 | 19.82 | 2.18 | 22.00 | 19.82 | 2.18 | 22.00 |
| 2 | ಬೀದರ್ | 56 | 9 | 65 | 6 | 3 | 9 | 375.00 | 75.00 | 450.00 | 6 | 3 | 9 | 4.64 | 3.84 | 8.48 | 4.64 | 3.84 | 8.48 |
| 3 | ಚಿಕ್ಕಬಳ್ಳಾಪುರ | 131 | 436 | 567 | 80 | 231 | 311 | 4132.28 | 3153.28 | 7285.56 | 70 | 207 | 277 | 269.07 | 252.88 | 521.95 | 210.64 | 211.43 | 422.07 |
| 4 | ಚಿತ್ರದುರ್ಗ | 93 | 61 | 154 | 58 | 42 | 100 | 3690.18 | 1972.58 | 5662.76 | 48 | 35 | 83 | 83.79 | 99.24 | 183.03 | 64.03 | 72.35 | 136.38 |
| 5 | ಹಾವೇರಿ | 148 | 244 | 392 | 26 | 27 | 53 | 371.36 | 170.50 | 541.86 | 26 | 27 | 53 | 27.07 | 25.72 | 52.79 | 27.07 | 25.72 | 52.79 |
| 6 | ಬಳ್ಳಾರಿ | 41 | 55 | 96 | 21 | 21 | 42 | 1845.10 | 828.73 | 2673.83 | 21 | 21 | 42 | 47.49 | 69.54 | 117.03 | 47.49 | 69.54 | 117.03 |
| 7 | ಕೊಪ್ಪಳ | 11 | 11 | 22 | 0 | 5 | 5 | 0.00 | 87.19 | 87.19 | 0 | 5 | 5 | 0 | 13.42 | 13.42 | 0 | 13.42 | 13.42 |
| 8 | ಕೋಲಾರ | 79 | 619 | 698 | 57 | 320 | 377 | 2322.06 | 4197.39 | 6519.45 | 43 | 295 | 338 | 239.90 | 374.76 | 614.66 | 191.77 | 318.65 | 510.42 |
| 9 | ರಾಯಚೂರು | 36 | 106 | 142 | 0 | 1 | 1 | 0 | 8.00 | 8 | 0 | 1 | 1 | 0 | 0.92 | 0.92 | 0 | 0.92 | 0.92 |
| 10 | ತುಮಕೂರು | 146 | 330 | 476 | 58 | 121 | 179 | 3198.23 | 7062.53 | 10260.76 | 58 | 121 | 179 | 128.45 | 183.93 | 312.38 | 128.45 | 183.93 | 312.38 |
| 11 | ಬೆಳಗಾವಿ | 58 | 76 | 134 | 0 | 0 | 0 | 0 | 0 | 0 | 0 | 0 | 0 | 0 | 0 | 0 | 0 | 0 | 0 |
| 12 | ಬಿಜಾಪುರ | 47 | 1 | 48 | 0 | 0 | 0 | 0 | 0 | 0 | 0 | 0 | 0 | 0 | 0 | 0 | 0 | 0 | 0 |
| 13 | ಚಿಕ್ಕಮಗಳೂರು | 22 | 89 | 111 | 9 | 35 | 44 | 315.29 | 659.16 | 974.45 | 9 | 35 | 44 | 4.71 | 28.05 | 32.76 | 4.71 | 28.05 | 32.76 |
| 14 | ದಾವಣಗೆರೆ | 34 | 52 | 86 | 26 | 40 | 66 | 1841.65 | 1172.92 | 3014.57 | 26 | 40 | 66 | 133.44 | 160.70 | 294.14 | 133.44 | 160.70 | 294.14 |

| | | | | | | | | | | | | | | | | | |
|---|---|---|---|---|---|---|---|---|---|---|---|---|---|---|---|---|---|
| 15 | ಧಾರವಾಡ | 51 | 52 | 103 | 1 | 2 | 3 | 21.92 | 8.14 | 30.06 | 1 | 2 | 3 | 1.27 | 0.53 | 1.80 | 1.27 | 0.53 | 1.80 |
| 16 | ಹಾಸನ | 22 | 29 | 51 | 12 | 20 | 32 | 685.31 | 183.06 | 868.37 | 12 | 20 | 32 | 10.33 | 33.17 | 43.50 | 10.33 | 33.17 | 43.50 |
| 17 | ಶಿವಮೊಗ್ಗ | 100 | 324 | 424 | 41 | 131 | 172 | 449.72 | 476.37 | 926.09 | 41 | 131 | 172 | 21.48 | 46.85 | 68.33 | 21.48 | 46.85 | 68.33 |
| 18 | ಉತ್ತರಕನ್ನಡ | 31 | 59 | 90 | 4 | 13 | 17 | 22.94 | 47.56 | 70.50 | 4 | 13 | 17 | 0.29 | 1.30 | 1.59 | 0.29 | 1.30 | 1.59 |
| | | 1141 | 2569 | 3710 | 400 | 1014 | 1414 | 19541.04 | 20112.12 | 39653.16 | 366 | 958 | 1324 | 991.75 | 1297.03 | 2288.78 | 865.43 | 1172.58 | 2038.01 |

## ಕೃಷ್ಣಾ ಜಲವಿವಾದ ನ್ಯಾಯಾಧೀಕರಣ

## 559; ಶ್ರೀ ಆಚಾರ್ ಹಾಲಪ್ಪ ಬಸಪ್ಪ

ಅ) ಕೃಷ್ಣಾ ಜಲ ವಿವಾದ ನ್ಯಾಯಾಧೀಕರಣ 2ರ ತೀರ್ಪಿನ ಅನುಸಾರ ರಾಜ್ಯಕ್ಕೆ ದೊರೆತ ನೀರಿನ ಪಾಲೆಷ್ಟು ಮತ್ತು ಆ ನೀರನ್ನು ಯಾವ ಯೋಜನೆಗಳಿಗೆ ಬಳಸಿಕೊಳ್ಳಲಾಗುತ್ತಿದೆ.

ಆ) ಸದರಿ ತೀರ್ಪಿನ ಅನುಸಾರ 40 ಟಿ.ಎಂಸಿ ನೀರನ್ನು ತುಂಗಾ ಮತ್ತು ಭದ್ರಾ ಮೇಲ್ದಂಡೆ ಹಾಗೂ ಸಿಂಗಟಾಲೂರು ಏತ ನೀರಾವರಿ ಯೋಜನೆಗಳಿಗೆ ಸ್ಕಿಂ ಎ ನಲ್ಲಿ ಈಗಾಗಲೇ ನೀರಿನ ಹಂಚಿಕೆಯಾಗಿರು ವುದರಿಂದ ಉಳಿತಾಯವಾಗುವ ಇದರಲ್ಲಿನ 10 ಟಿಎಂಸಿ ನೀರನ್ನು ಬರಪೀಡಿತ ಕೊಪ್ಪಳ ಜಿಲ್ಲೆಗೆ ನೀರಾವರಿ ಸೌಲಭ್ಯ ಒದಗಿಸಲು ಸರಕಾರ ಏಕೆ ಮನಸ್ಸು ಮಾಡುತ್ತಿಲ್ಲ.

ಇ) ಕೃಷ್ಣಾ ಜಲ ವಿವಾದ ನ್ಯಾಯಾಧೀಕರಣ 1 ಮತ್ತು 2 ರ ತೀರ್ಪಿನ ಅನುಸಾರ ಹಾಗೂ ಪೋಲ್ಲಾವರಂ ಯೋಜನೆಯಡಿ ರಾಜ್ಯಕ್ಕೆ ದೊರಕಿ ರುವ ನೀರಿನ ಒಟ್ಟಾರೆ ಪ್ರಮಾಣವನ್ನು ರಾಜ್ಯದ ಎಲ್ಲಾ ನೀರಾವರಿ ಯೋಜನೆಗಳಿಗೆ ಮರುಹಂಚಿಕೆ ಮಾಡಲು ಸರಕಾರ ಪರಿಷ್ಕೃತ ಮಾಸ್ಟರ್ ಪ್ಲಾನ್ ಕಮಿಟಿ ರಚನೆಯಾಗಿದೆಯೇ ಹಾಗಿದ್ದರೆ ಅದರ ಶಿಫಾರಸ್ಸು ಗಳೇನು, ಅದನ್ನು ಸರ್ಕಾರ ಅದನ್ನು ಸರ್ಕಾರ ಅಂಗೀಕರಿಸಿದೆಯೇ

ಈ) ಇದರಲ್ಲಿ ಸರ್ಕಾರ ಈಗಾಗಲೇ ಹೆಚ್ಚಿನ ನೀರಾವರಿಗೆ ಒಳಪಟ್ಟ ಜಿಲ್ಲೆ ಗಳಲ್ಲೇ ಮತ್ತೆ ಹೊಸದಾಗಿ ನೀರಾವರಿ ಸೌಲಭ್ಯ ಒದಗಿಸಲು ಹೊಸ ಯೋಜನೆಗಳಿಗೆ ನೀರು ಹಂಚಿಕೆ ಮಾಡುತ್ತಿರುವುದು ನ್ಯಾಯ ಸಮ್ಮತವೇ

### ಶ್ರೀ ಎಂ.ಬಿ. ಪಾಟೀಲ್ ( ಜಲಸಂಪನ್ಮೂಲ ಸಚಿವರು)

ಅ) ಕೃಷ್ಣಾ ಜಲ ವಿವಾದ ನ್ಯಾಯಾಧೀಕರಣ 11 ರ ತೀರ್ಪಿನ ಅನುಸಾರ ರಾಜ್ಯದ ಪಾಲಿಗೆ ಒಟ್ಟು 177 ಟಿ.ಎಂ.ಸಿ. ನೀರು ದೊರೆತಿದ್ದು ಈ ಕೆಳಕಂಡ ಯೋಜನೆಗಳಿಗೆ ಹಂಚಿಕೆ ಮಾಡಿದೆ.

| | |
|---|---|
| 1. ಕೃಷ್ಣಾ ಮೇಲ್ದಂಡೆ ಯೋಜನೆ 3 ನೇ ಹಂತ | 130 ಟಿಎಂಸಿ |
| 2. ತುಂಗಾ ಮೇಲ್ದಂಡೆ ಯೋಜನೆ | 12 ಟಿಎಂಸಿ |
| 3. ಭದ್ರಾ ಮೇಲ್ದಂಡೆ ಯೋಜನೆ | 10 ಟಿಎಂಸಿ |
| 4. ಸಿಂಗಟಾಲೂರು ಏತ ನೀರಾವರಿ ಯೋಜನೆ | 18 ಟಿಎಂಸಿ |
| 5. ನದಿಯಲ್ಲಿನ ಕನಿಷ್ಟ ಹರಿವಿಗಾಗಿ | 7 ಟಿಎಂಸಿ |

ಆ) ತುಂಗಾ ಮೇಲ್ದಂಡೆ ಭದ್ರಾ ಮೇಲ್ದಂಡೆ ಮತ್ತು ಸಿಂಗಟಾಲೂರು ಏತ ನೀರಾವರಿ ಯೋಜನೆಗಳನ್ನು ಸ್ಕಿಂ ಎ ಅಡಿಯಲ್ಲಿ ರಾಜ್ಯವು ಪ್ರಸ್ತಾಪಿಸಿದ್ದ ಉಳಿತಾಯವು ಇನ್ನೂ ಚಾಲ್ತಿಯಲ್ಲಿ ಬಾರದಿರುವ ಕಾರಣ ಉಳಿತಾಯ ದಲ್ಲಿ ತೆಗೆದುಕೊಳ್ಳಲು ಕೃಷ್ಣಾ ಜಲ ವಿವಾದ ನ್ಯಾಯಾಧೀಕರಣ 11 ಅನು ಮತಿಸಿರುವುದಿಲ್ಲ. ರಾಜ್ಯಕ್ಕೆ ಹೆಚ್ಚುವರಿಯಾಗಿ ಹಂಚಿಕೆಯಾಗಿರುವ ನೀರಿನ ಪ್ರಮಾಣದಲ್ಲಿ ಒಟ್ಟು 40 ಟಿಎಂಸಿ ನೀರನ್ನು ಸದರಿ ಯೋಜನೆ ಗಳಿಗೆ ಹಂಚಿಕೆ ಮಾಡಿರುತ್ತದೆ.

ಕೃಷ್ಣಾ ಜಲ ವಿವಾದ ನ್ಯಾಯಾಧಿಕರಣ 11 ಈಗಾಗಲೇ 130 ಟಿಎಂಸಿ ಹಂಚಿಕೆ ಮಾಡಿರುವ ಕೃಷ್ಣಾ ಮೇಲ್ದಂಡೆ ಯೋಜನೆ 3 ನೇ ಹಂತದ ಯೋಜನೆಯಲ್ಲಿ ಕೊಪ್ಪಳ ಜಿಲ್ಲೆಗೆ ನೀರಾವರಿ ಸೌಲಭ್ಯ ಒದಗಿಸಲು 11.565 ಟಿಎಂಸಿ ನೀರನ್ನು ಹಂಚಿಕೆ ಮಾಡಲಾಗಿದೆ.

ಇ) ಪೋಲ್ಲಾವರಂ ಯೋಜನೆಯ ತಿರುವಿನಿಂದ ರಾಜ್ಯಕ್ಕೆ ಲಭ್ಯವಾಗಿರುವ ನೀರಿನ ಪ್ರಮಾಣವನ್ನು ಬಳಸಿಕೊಳ್ಳಲು ಯೋಜನೆಗಳನ್ನು ಗುರುತಿಸ ಲಾಗಿದೆ.

ಕೃಷ್ಣಾ ಜಲ ವಿವಾದ ನ್ಯಾಯಾಧೀಕರಣ 1 ಮತ್ತು 2 ರಡಿಯಲ್ಲಿ ರಾಜ್ಯಕ್ಕೆ ಹಂಚಿಕೆಯಾಗಿರುವ ನೀರಿನ ಪ್ರಮಾಣದ ಸಮರ್ಪಕ ಬಳಕೆ ಗಾಗಿ ಪರಿಷ್ಕೃತ ಮಾಸ್ಟರ್‌ಪ್ಲಾನ್ ತಯಾರಿಸಲು ದಿನಾಂಕ 13.8.2012 ರ ಆದೇಶದಲ್ಲಿ ಶ್ರೀ ಡಿ.ಎನ್. ದೇಸಾಯಿ, ಪ್ರಧಾನ ಸಲಹೆಗಾರರು ಇವರ ಅಧ್ಯಕ್ಷತೆಯಲ್ಲಿ ಸಮಿತಿಯನ್ನು ರಚಿಸಲಾಗಿದೆ. ಕೃಷ್ಣಾ ಜಲ

ವಿವಾದ ನ್ಯಾಯಾಧೀಕರಣದ ಅಂತಿಮ ಆದೇಶದ ಮೇಲೆ ಕರ್ನಾಟಕ ಮತ್ತು ಇತರೆ ಕಣಿವೆ ರಾಜ್ಯಗಳು ನ್ಯಾಯಾಧೀಕರಣದ ಮುಂದೆ ಸಲ್ಲಿಸಿರುವ ಪುನರ್ ಪರಿಶೀಲನಾ ಅರ್ಜಿಗಳು ಪ್ರಗತಿಯಲ್ಲಿರುವ ಹಾಗೂ ಆಂಧ್ರಪ್ರದೇಶ ರಾಜ್ಯವು ಸರ್ವೋಚ್ಚ ನ್ಯಾಯಾಲಯದಲ್ಲಿ ಸಲ್ಲಿಸಿರುವ ಸ್ಪೆಷಲ್ ಲೀವ್ ಪೆಟಿಷನ್ ಬಾಕಿ ಇರುತ್ತದೆ. ಇವುಗಳು ಅಂತಿಮವಾಗಿ ಇತ್ಯರ್ಥವಾದ ನಂತರ ಸದರಿ ವಿಚಾರದ ಕುರಿತು ಸರ್ಕಾರವು ನಿರ್ಧಾರ ತೆಗೆದುಕೊಳ್ಳುವುದು.

**ತುಂಗಭದ್ರಾ ಜಲಾಶಯದಲ್ಲಿ ತುಂಬಿರುವ ಹೂಳಿನ ಬಗ್ಗೆ**

**560; ಶ್ರೀ ಆಚಾರ್ ಹಾಲಪ್ಪ ಬಸಪ್ಪ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)**

ಅ) ತುಂಗಭದ್ರಾ ಜಲಾಶಯ ಹೂಳು ತುಂಬಿ ನೀರಿನ ಸಂಗ್ರಹಣಾ ಸಾಮರ್ಥ್ಯ ಕುಸಿದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ

ಆ) ಹಾಗಿದ್ದರೆ ಈ ಹೂಳನ್ನು ತೆಗೆಯಲು ಸರ್ಕಾರ ಇದುವರೆಗೂ ಕೈಗೊಂಡಿರುವ ಕ್ರಮಗಳೇನು ( ವಿವರಗಳನ್ನು ಒದಗಿಸುವುದು);

ಇ) ಹೂಳಿನಿಂದಾಗಿ ಜಲಾಶಯದಲ್ಲಿ ಸಂಗ್ರಹಣೆ ಸಾಮರ್ಥ್ಯ ಕಡಿಮೆಯಾಗಿ ಸುಮಾರು 33 ಟಿಎಂಸಿ ನೀರು ರಾಜ್ಯದ ಉಪಯೋಗಕ್ಕೆ ಸಿಗದೇ ಆಂಧ್ರಕ್ಕೆ ಹೋಗುತ್ತಿರುವುದನ್ನು ತಡೆಗಟ್ಟಿ ಈ ನೀರನ್ನು ರಾಜ್ಯಕ್ಕೆ ಬಳಸಿಕೊಳ್ಳಲು ಸರ್ಕಾರ ಯೋಜಿಸಿದೆಯೇ (ಹಾಗಿದ್ದರೆ ವಿವರಗಳನ್ನು ನೀಡುವುದು)

ಈ) ಈ ದಿಸೆಯಲ್ಲಿ ಸಮಾನಾಂತರ ಜಲಾಶಯಗಳ ನಿರ್ಮಾಣ ಮತ್ತು ಪ್ರವಾಹ ಹರಿವು ಕಾಲುವೆಗಳ ಕುರಿತು ಸರ್ಕಾರದ ಚಿಂತನೆ ಏನು ಇವು ಗಳ ಅನುಷ್ಠಾನಕ್ಕೆ ಸರ್ಕಾರ ಇದುವರೆಗೆ ತೆಗೆದುಕೊಂಡ ಕ್ರಮಗಳೇನು;

**ಶ್ರೀ ಎಂ.ಬಿ.ಪಾಟೀಲ್ (ಜಲ ಸಂಪನ್ಮೂಲ ಸಚಿವರು)**

ಅ) ಬಂದಿದೆ

ಆ) ತುಂಗಭದ್ರಾ ಜಲಾಶಯದಲ್ಲಿ ಸುಮಾರು 31.616 ಟಿಎಂಸಿ. ಅಡಿರಷ್ಟು ಹೂಳು ಇರುವುದನ್ನು 2008 ನೇ ವರ್ಷದಲ್ಲಿ ಅಂದಾಜಿಸಲಾಗಿದೆ. "ಸದರಿ ಹೂಳಿನಲ್ಲಿರುವ ಮಣ್ಣು, ಮರಳು ಹಾಗೂ ಇನ್ನಿತರೇ ಪದಾರ್ಥ ಗಳ ಪ್ರಮಾಣವನ್ನು ಗುರುತಿಸಿ ಆರ್ಥಿಕ/ವಾಣಿಜ್ಯ ಮೌಲ್ಯವನ್ನು ಕಂಡು ಹಿಡಿಯುವುದಕ್ಕಾಗಿ ಹೂಳನ್ನು ಪ್ರಾಯೋಗಿಕವಾಗಿ ತೆಗೆಯಲು, ಒಂದು ಖಾಸಗಿ ಕಂಪನಿಯು ಆಸಕ್ತಿ ತೋರಿಸಿದ್ದರೂ ಈ ಸಂಬಂಧ ಸರ್ಕಾರದ ಆದೇಶ ಹೊರಡಿಸಿದ ನಂತರ, ಸದರಿ ಕಂಪನಿಯು ಒಡಂಬಡಿಕೆ ಮಾಡಿಕೊಳ್ಳಲು ಮುಂದೆ ಬಂದಿರುವುದಿಲ್ಲ.

ಆ) ಆಂಧ್ರಕ್ಕೆ ಹರಿಯುತ್ತಿರುವ ನೀರನ್ನು ಬಳಸಿಕೊಳ್ಳಲು ಜಲಾಶಯದ ಕೆಳಭಾಗದಲ್ಲಿ ತುಂಗಭದ್ರಾ ನದಿಗೆ ಅಡ್ಡಲಾಗಿ ಸಮತೋಲನಾ ಜಲಾ ಶಯಗಳನ್ನು ನಿರ್ಮಿಸಲು ಚಿಂತಿಸಲಾಗುತ್ತಿದೆ.

ಇ) ಈ ದಿಸೆಯಲ್ಲಿ ಸಮಾನಾಂತರ ಜಲಾಶಯಗಳು ಹಾಗೂ ಪ್ರವಾಹ ಹರಿವು. ಕಾಲುವ ನಿರ್ಮಾಣ ಕೈಗೆತ್ತಿಕೊಳ್ಳಲು ಚಿಂತನೆ ನಡೆದಿದ್ದು ಕೃಷ್ಣಾ ನ್ಯಾಯಾಧೀಕರಣದ ಪುನರ್ ಪರಿಶೀಲನಾ ಅರ್ಜಿಯ ಬಗ್ಗೆ ಅಂತಿಮ ತೀರ್ಪು ಹೊರಬಂದ ನಂತರ ಸೂಕ್ತ ಸಮಯದಲ್ಲಿ ನಿರ್ಣಯ ತಗೆದು ಕೊಳ್ಳಲಾಗುವುದು.

**ಕೊಪ್ಪಳ ಏತ ನೀರಾವರಿ ಯೋಜನೆ**

**577; ಶ್ರೀ ಆಚಾರ್ ಹಾಲಪ್ಪ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)**

ಅ) ಕೊಪ್ಪಳ ಏತ ನೀರಾವರಿ ಯೋಜನೆ ಅನುಷ್ಠಾನಕ್ಕಾಗಿ ಸರಕಾರದ ಕಾರ್ಯ ಯೋಜನೆ ಮತ್ತು ಕಾರ್ಯ ಮಿತಿ ಏನು .

ಆ) ಈಗಾಗಲೇ ಟೆಂಡರ್ ಪ್ರಕ್ರಿಯೆ ಜಾರಿಯಲ್ಲಿರುವ ಎರಡು ಏತ ನೀರಾ ವರಿ ಕಾಮಗಾರಿಗಳ ಆರಂಭದಲ್ಲಿ ವಿಳಂಬವಾಗುತ್ತಿರುವುದಕ್ಕೆ ಕಾರಣ ಗಳೇನು

ಇ) ಯೋಜನೆಯ ಕಾಲುವೆ ಜಾಲ ಮತ್ತು ಸೂಕ್ಷ್ಮ ನೀರಾವರಿ ವ್ಯವಸ್ಥೆಯ ಕಾಮಗಾರಿಗಳ ವಿಸ್ತೃತ ಯೋಜನಾ ವರದಿ ತಯಾರಿಕೆ ನಿಧಾನಗತಿ ಯಲ್ಲಿ ಸಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ಹಾಗಿದ್ದರೆ ಇದರ ಕುರಿತು ಸರ್ಕಾರ ತೆಗೆದುಕೊಳ್ಳುತ್ತಿರುವ ಕ್ರಮಗಳೇನು?

ಈ) ಈಗಾಗಲೇ ಯೋಜನೆಯ ಏತ ನೀರಾವರಿಗಳಿಗೆ ಶಂಕುಸ್ಥಾಪನೆಯಾಗಿದ್ದರೂ ಇದುವರೆಗೂ ಯಾವುದೇ ಪ್ರಗತಿಯಾಗದೇ ಆಮೆಗತಿಯಲ್ಲಿ ಯೋಜನೆ ಸಾಗುತ್ತಿರುವುದಕ್ಕೆ ಕಾರಣಗಳೇನು?

ಅ) ಸರ್ಕಾರವು ದಿನಾಂಕ 9–1–2013 ರ ಆದೇಶದಡಿ ಕೊಪ್ಪಳ ಏತ ನೀರಾವರಿ ಯೋಜನೆಯಡಿ ಒಟ್ಟು 12.815 ಟಿಎಂಸಿ ನೀರಿನ ಬಳಕೆ ಯೊಂದಿಗೆ ತುಂತುರು ನೀರಾವರಿ ಪದ್ಧತಿ ಅಳವಡಿಸಿ ಕೊಪ್ಪಳ ಜಿಲ್ಲೆಂದು ಕುಷ್ಟಗಿ, ಯಲಬುರ್ಗಾ ಮತ್ತು ಕೊಪ್ಪಳ ತಾಲ್ಲೂಕುಗಳು, ಬಾಗಲಕೋಟ ಜಿಲ್ಲೆಯ ಹುನಗುಂದ ಮತ್ತು ಬದಾಮಿ ತಾಲ್ಲೂಕುಗಳು, ಗದಗ ಜಿಲ್ಲೆಯ ರೋಣ ತಾಲ್ಲೂಕು ಹಾಗೂ ಗಂಗಾವತಿ ತಾಲ್ಲೂಕಿನಡಿ ಕನಕಗಿರಿ ಪ್ರದೇಶ ಒಳಪಟ್ಟು ಸುಮಾರು 1,12,000 ಹೆಕ್ಟೇರ್ ಕ್ಷೇತ್ರಕ್ಕೆ ತುಂತುರು ನೀರಾವರಿ ಅಳವಡಿಸಲು ಅನುಮೋದನೆ ನೀಡಿದೆ.

ಪ್ರಸ್ತಾಪಿತ ಯೋಜನೆಯನ್ನು ಬರುವ 5 ವರ್ಷಗಳ ಕಾಲಮಿತಿಯಲ್ಲಿ ಪೂರ್ಣಗೊಳಿಸಿ ಅನುಷ್ಠಾನಗೊಳಿಸಲು. ಯೋಜಿಸಲಾಗಿದೆ.

ಆ) ಕೊಪ್ಪಳ ಏತ ನೀರಾವರಿ ಯೋಜನೆಯಡಿ (1) ಆರ್.ಎಲ್.486.00 ಮೀ. ನಿಂದ 580.00 ಮೀ. : ವರೆಗಿನ ₹660.43 ಕೋಟಿ ಕೋಟಿ ಅಂದಾಜು ಮೊತ್ತದ ಮೊದಲನೇ ಲಿಫ್ಟ್ ಮುಖ್ಯ ಸ್ಥಾವರ. ಹಾಗೂ (2) ಆರ್.ಎಲ್. 560.00 ಮೀ. ನಿಂದ 660.00. ಮೀ. ವರೆಗಿನ ₹ 380.66 ಕೋಟಿ ಅಂದಾಜು ಮೊತ್ತದ 2ನೇ ಲಿಫ್ಟ್ ಮುಖ್ಯ ಸ್ಥಾವರದ ಟರ್ನ್ ಕೀ ಆಧಾರಿತ ಕಾಮಗಾರಿಗಳಿಗೆ ಟೆಂಡರುಗಳನ್ನು ಸ್ವೀಕರಿಸಲಾಗಿದ್ದು, ಟೆಂಡರ್ ಮೌಲ್ಯಮಾಪನಾ ಹಂತದಲ್ಲಿರುತ್ತದೆ.

ಕೊಪ್ಪಳ ಏತ ನೀರಾವರಿ ಯೋಜನೆಯಡಿ ಸಾಂಪ್ರದಾಯಿಕ ನೀರಾವರಿ ಪದ್ಧತಿ ಬದಲಾಗಿ ಸುಮಾರು 1,12,000 ಹೆಕ್ಟೇರ್ ಕ್ಷೇತ್ರದಲ್ಲಿ ತುಂತುರು ನೀರಾವರಿ ವ್ಯವಸ್ಥೆ ಕಲ್ಪಿಸುವ ವಿವರವಾದ ಸರ್ವೆ ತನಿಖೆ ಕಾರ್ಯ, ವಿನ್ಯಾಸ, ನಕ್ಷೆ ಮತ್ತು ಅಂದಾಜು ಪತ್ರಿಕೆ ತಯಾರಿಸುವ ಕನ್‌ಸಲ್‌ಟೆನ್ಸಿ ಕೆಲಸಕ್ಕೆ ಟೆಂಡರ್ ಕರೆಯಲಾಗುತ್ತಿದ್ದು ಶೀಘ್ರದಲ್ಲಿ ಕನ್‌ಸಲ್‌ಟನ್ಸಿ ಕಾರ್ಯ ಪ್ರಾರಂಭಿಸಲಾಗುವುದು.

ಈ) ಯೋಜನೆಯ ಎರಡು ಹಂತದ ಮುಖ್ಯ ಸ್ಥಾವರದ ಕಾಮಗಾರಿಗಳ ನಿರ್ಮಾಣ ಅವಧಿಗೆ ಸಮಕಾಲೀನವಾಗಿ ಏಕಕಾಲಕ್ಕೆ ತುಂತುರು ನೀರಾ ವರಿ ವ್ಯವಸ್ಥೆ ಕಾಮಗಾರಿಗಳನ್ನು ಸಹ ಅನುಷ್ಠಾನಗೊಳಿಸಲು ಯೋಜನೆ/ ಕಾರ್ಯಕ್ರಮ ರೂಪಿಸಲಾಗಿದೆ.

**ಮಂಡ್ಯ ಜಿಲ್ಲೆಯ ಸಕ್ಕರೆ ಯೋಜನೆಗಳ ಬಗ್ಗೆ**

**558; ಮರಿತಿಬ್ಬೇಗೌಡ (ಶಿಕ್ಷಕರ ಕ್ಷೇತ್ರ)**

ಅ) ಮಂಡ್ಯ ಜಿಲ್ಲೆಯಲ್ಲಿರುವ ಒಟ್ಟು ಸಕ್ಕರೆ ಕಾರ್ಖಾನೆಗಳ ಸಂಖ್ಯೆ ಎಷ್ಟು ? (ಪ್ರತ್ಯೇಕ ವಿವರಗಳೊಡನೆ);

ಆ) ಕಳೆದ ಸಾಲಿನಲ್ಲಿ ಸದರಿ ಸಕ್ಕರೆ ಕಾರ್ಖಾನೆಗಳಿಗೆ ರೈತರು ಸರಬರಾಜು ಮಾಡಿರುವ ಕಬ್ಬಿನ ಪ್ರಮಾಣವೆಷ್ಟು (ಪ್ರತ್ಯೇಕ ವಿವರಗಳೊಡನೆ);

ಇ) ಕಳೆದ ಸಾಲಿನಲ್ಲಿ ರೈತರು ಸರಬರಾಜು ಮಾಡಿದ ಕಬ್ಬಿಗೆ ಪಾವತಿ ಮಾಡಬೇಕಾದ ಒಟ್ಟು ಮೊತ್ತವೆಷ್ಟು ? (ಪ್ರತ್ಯೇಕ ವಿವರಗಳೊಡನೆ);

ಈ) ಇದುವರೆವಿಗೂ ಈ ಸಂಬಂಧ ರೈತರಿಗೆ ಪಾವತಿ ಮಾಡಿರುವ ಮೊತ್ತವೆಷ್ಟು ? ಪ್ರತ್ಯೇಕ ವಿವರಗಳೊಡನೆ);

ಉ) ಈ ಸಂಬಂಧ ಪಾವತಿ ಮಾಡಬೇಕಾದ ಬಾಕಿ ಮೊತ್ತವೆಷ್ಟು;

ಊ) ಇದುವರೆವಿಗೂ ಬಾಕಿ ಮೊತ್ತ ಪಾವತಿಸದೆ ಇರಲು ಕಾರಣಗಳೇನು ಯಾವ ಕಾಲಮಿತಿಯಲ್ಲಿ ಬಾಕಿ ಮೊತ್ತವನ್ನು ರೈತರಿಗೆ ಪಾವತಿಸಲಾಗು ವುದು;

**ಶ್ರೀ ಪ್ರಕಾಶ ಬಾಬಣ್ಣ ಹುಕ್ಕೇರಿ (ಸಣ್ಣ ಕೈಗಾರಿಕೆ, ಮುಜರಾಯಿ ಮತ್ತು ಸಕ್ಕರೆ ಸಚಿವರು)**

ಅ) ಮಂಡ್ಯ ಜಿಲ್ಲೆಯಲ್ಲಿ ಒಟ್ಟು 5 ಸಕ್ಕರೆ ಕಾರ್ಖಾನೆಗಳಿವೆ ವಿವರ ಈ ಕೆಳಗಿನಂತಿದೆ.

| ಕ್ರ.ಸಂ | ಕಾರ್ಖಾನೆಯ ಹೆಸರು | ವಲಯ |
|---|---|---|
| 1 | ಮೈಸೂರು ಸಕ್ಕರೆ ಕಾರ್ಖಾನೆ, ಮಂಡ್ಯ | ಸಾರ್ವಜನಿಕ |
| 2 | ಪಾಂಡವಪುರ ಸಹಕಾರ ಸಕ್ಕರೆ ಕಾರ್ಖಾನೆ, ನಿ | ಸಹಕಾರಿ |
| 3 | ಚಾಮುಂಡೇಶ್ವರಿ ಶುಗರ್ಸ್ ಕೆ. ಎಂ. ದೊಡ್ಡಿ | ಖಾಸಗಿ |
| 4 | ಕೋರಮಂಡಲ್ ಶುಗರ್ಸ್ ಲಿ ಕೆ. ಆರ್. ಪೇಟೆ | ಖಾಸಗಿ |
| 5 | ಎನ್ಎಸ್ಎಲ್ ಶುಗರ್ಸ್ ಲಿ ಕೊಪ್ಪ | ಖಾಸಗಿ |

ಆ) ಕಳೆದ ಸಾಲಿನಲ್ಲಿ ಅಂದರೆ 2012-13 ನೇ ಸಾಲಿನಲ್ಲಿ ಮಂಡ್ಯ ಜಿಲ್ಲೆಯ ಸಕ್ಕರೆ ಕಾರ್ಖಾನೆಗಳಿಗೆ ರೈತರು ಸರಬರಾಜು ಮಾಡಿರುವ ಕಬ್ಬಿನ ವಿವರ ಈ ಕೆಳಕಂಡಂತೆ ಇರುತ್ತದೆ.

| ಕ್ರ.ಸಂ | ಕಾರ್ಖಾನೆಯ ಹೆಸರು | ಕಬ್ಬು ಟನ್‌ಗಳಲ್ಲಿ |
|---|---|---|
| 1 | ಮೈಸೂರು ಸಕ್ಕರೆ ಕಾರ್ಖಾನೆ, ಮಂಡ್ಯ | 283511 |
| 2 | ಪಾಂಡವಪುರ ಸಹಕಾರ ಸಕ್ಕರೆ ಕಾರ್ಖಾನೆ, ನಿ | 219103 |
| 3 | ಚಾಮುಂಡೇಶ್ವರಿ ಶುಗರ್ಸ್ ಕೆ. ಎಂ. ದೊಡ್ಡಿ | 791152 |

| | | |
|---|---|---|
| 4 | ಕೋರಮಂಡಲ್ ಶುಗರ್ಸ್ ಲಿ ಕೆ. ಆರ್. ಪೇಟೆ | 684518 |
| 5 | ಎನ್‌ಎಸ್‌ಎಲ್ ಶುಗರ್ಸ್ ಲಿ ಕೊಪ್ಪ | 999454 |

ಇ) 2012–13 ನೇ ಸಾಲಿನಲ್ಲಿ ನುರಿಸಿದ ಕಬ್ಬಿಗೆ ಪಾವತಿಸಬೇಕಾದ ಪಾವತಿಸಿದ ಬಾಕಿ ಮೊತ್ತದ ವಿವರ

| ಕ್ರ.ಸಂ | ಕಾರ್ಖಾನೆಯ ಹೆಸರು | ನುರಿಸಿದ ಕಬ್ಬು (ಟನ್‌ಗಳಲ್ಲಿ | ಪಾವತಿಸಬೇಕಾದ ಮೊತ್ತ | ಪಾವತಿಸಿದ ಮೊತ್ತ | ಬಾಕಿ ಮೊತ್ತ |
|---|---|---|---|---|---|
| 1 | ಮೈಸೂರು ಸಕ್ಕರೆ ಕಾರ್ಖಾನೆ, ಮಂಡ್ಯ | 283511 | 6804 | 6203 | 601 |
| 2 | ಪಾಂಡವಪುರ ಸಹಕಾರ ಸಕ್ಕರೆ ಕಾರ್ಖಾನೆ, ನಿ | 219103 | 5258 | 5258 | -- |
| 3 | ಚಾಮುಂಡೇಶ್ವರಿ ಶುಗರ್ಸ್ ಕೆ. ಎಂ. ದೊಡ್ಡಿ | 791152 | 18987 | 18987 | -- |
| 4 | ಕೋರಮಂಡಲ್ ಶುಗರ್ಸ್ ಲಿ ಕೆ. ಆರ್. ಪೇಟೆ | 684518 | 16428 | 16428 | |
| 5 | ಎನ್‌ಎಸ್‌ಎಲ್ ಶುಗರ್ಸ್ ಲಿ ಕೊಪ್ಪ | 999454 | 23987 | 22510 | 1477 |
| | **ಒಟ್ಟು** | **2977738** | **71464** | **69386** | **2078** |

ಊ) ಮೈಸೂರು ಸಕ್ಕರೆ ಕಾರ್ಖಾನೆ ಹಾಗೂ ಎನ್‌ಎಸ್‌ಎಲ್ ಸಕ್ಕರೆ ಕಾರ್ಖಾನೆಯವರು ನಿಗದಿತ ಸಮಯಕ್ಕೆ ಸಕ್ಕರೆ ಮಾರಾಟ ಆಗದೆ

ಇರುವ ಕಾರಣದಿಂದ ರೈತರಿಗೆ ಪಾವತಿಸಬೇಕಾದ ಮೊತ್ತವನ್ನು ಪಾವತಿಸಲು ಸಾಧ್ಯವಾಗಿರುವುದಿಲ್ಲ ಎಂದು ತಿಳಿಸಿದೆ.

ಮೈಸೂರು ಸಕ್ಕರೆ ಕಾರ್ಖಾನೆಯಲ್ಲಿ ರೂ. 18.14 ಕೋಟಿ ಮೌಲ್ಯದ ಸುಮಾರು 6049 ಟನ್ ಸಕ್ಕರೆ ದಾಸ್ತಾನವಿದ್ದು ಸಕ್ಕರೆ ಮಾರಾಟ ಮಾಡಿದ ಕಬ್ಬು ಬಿಲ್ ಬಾಕಿಯನ್ನು ತೀರುವಳಿ ಮಾಡಲಾಗುವುದು ಎಂದು ಕಾರ್ಖಾನೆ ತಿಳಿಸಿದೆ.

ಎನ್‌ಎಸ್‌ಎಲ್ ಶುಗರ್ಸ್ ಕೊಪ್ಪ ಈ ಕಾರ್ಖಾನೆಯಲ್ಲಿ ರೂ. 17.86 ಕೋಟಿ ಮೌಲ್ಯದ ಸುಮಾರು 5954 ಟನ್ ಸಕ್ಕರೆ ದಾಸ್ತಾನಿದ್ದು ಸಕ್ಕರೆ ಮಾರಾಟ ಮಾಡಿ ಕಬ್ಬು ಬಿಲ್ ಬಾಕಿಯನ್ನು ತೀರುವಳಿ ಮಾಡಲಾಗುವುದು ಎಂದು ಸದರಿ ಕಾರ್ಖಾನೆ ತಿಳಿಸಿದೆ.

**ಮಂಡ್ಯ ಜಿಲ್ಲೆಯ ಸಣ್ಣ ನೀರಾವರಿ ಕೆರೆಗಳ ಬಗ್ಗೆ**

**580; ಶ್ರೀ ಮರಿತಿಬ್ಬೆ ಗೌಡ (ಶಿಕ್ಷಕರ ಕ್ಷೇತ್ರ)**

ಅ) ಮಂಡ್ಯ ಜಿಲ್ಲೆಯ ಎಷ್ಟು ಸಣ್ಣ ನೀರಾವರಿ ಕೆರೆಗಳಿವೆ (ತಾಲ್ಲೂಕುವಾರು ವಿವರ ನೀಡುವುದು);

ಆ) ಈ ಕೆರೆಗಳನ್ನು ಅಭಿವೃದ್ಧಿ ಪಡಿಸಲು ಸರ್ಕಾರದಿಂದ 2012–13, 2013–14 ಸಾಲಿನಲ್ಲಿ ಎಷ್ಟು ಅನುದಾನ ಬಿಡುಗಡೆ ಮಾಡಲಾಗಿದೆ (ವಿವರಗಳೊಡನೆ);

ಇ) ಈಗ ಬಿಡುಗಡೆ ಮಾಡಿರುವ ಅನುದಾನದಲ್ಲಿ ಎಷ್ಟು ಕೆರೆಗಳು ಅಭಿವೃದ್ಧಿ ಪಡಿಸಲಾಗಿದೆ. ಬಾಕಿ ಎಷ್ಟು ಕೆರೆಗಳನ್ನು ಅಭಿವೃದ್ಧಿ ಪಡಿಸಬೇಕಾಗಿದೆ ಇದರ ಅಂದಾಜು ಮೊತ್ತವೆಷ್ಟು ಯಾವ ಕಾಲಮಿತಿಯಲ್ಲಿ ಪೂರ್ಣ ಗೊಳಿಸಲಾಗುವುದು;

ಈ) ಪೂರ್ಣ ಪ್ರಮಾಣದಲ್ಲಿ ಎಲ್ಲಾ ಕೆರೆಗಳನ್ನು ಅಭಿವೃದ್ಧಿ ಪಡಿಸಲು ಸರ್ಕಾರ ಅನುದಾನ ಬಿಡುಗಡೆ ಮಾಡಲು ಕೂಡಲೇ ಕ್ರಮಕೈಗೊಳ್ಳುವುದೇ ? ವಿವರಗಳೊಡನೆ;

**ಶ್ರೀ ಶಿವರಾಜ್ ಎಸ್. ತಂಗಡಗಿ (ಸಣ್ಣ ನೀರಾವರಿ ಸಚಿವರು)**

ಅ) ಮಂಡ್ಯ ಜಿಲ್ಲೆಯಲ್ಲಿ ಸಣ್ಣ ನೀರಾವರಿ ಇಲಾಖೆಯ ವ್ಯಾಪ್ತಿಯಲ್ಲಿ ಒಟ್ಟು 48 ರ ಕೆರೆಗಳಿವೆ.

ತಾಲ್ಲೂಕುವಾರು ವಿವರ ಕೆಳಕಂಡಂತಿದೆ.

| | |
|---|---|
| ಮದ್ದೂರು ತಾಲ್ಲೂಕು | 10 ಕೆರೆಗಳು |
| ಮಳವಳ್ಳಿ ತಾಲ್ಲೂಕು | 7 ಕೆರೆಗಳು |
| ಪಾಂಡವಪುರ ತಾಲ್ಲೂಕು | 3 ಕೆರೆಗಳು |
| ಕೆ.ಆರ್.ಪೇಟೆ ತಾಲ್ಲೂಕು | 8 ಕೆರೆಗಳು |
| ನಾಗಮಂಗಲ ತಾಲ್ಲೂಕು | 20 ಕೆರೆಗಳು |

ಆ) 2012-13 ನೇ ಸಾಲಿನಲ್ಲಿ ಲೆಕ್ಕಶೀರ್ಷಿಕೆ 13 ನೇ ಹಣಕಾಸು ಆಯೋಗ ಅನುದಾನದ ಯೋಜನೆಯಡಿ 35 ಕೆರೆಗಳನ್ನು ಹಾಗೂ ಕೆರೆಗಳ ದುರಸ್ತಿ ಮತ್ತು ಪುನಃಶ್ಚೇತನ ಯೋಜನೆಯಡಿ ಕೆರೆಗಳನ್ನು ಅಭಿವೃದ್ಧಿಪಡಿಸ ಲಾಗಿದ್ದು 3 ಕೆರೆಗಳನ್ನು. ಎರಡೂ ಲೆಕ್ಕಶೀರ್ಷಿಕೆಗಳಡಿ ಅಭಿವೃದ್ಧಿಪಡಿಸ ಲಾಗಿದೆ.

2013-14ನೇ ಸಾಲಿನಲ್ಲಿ. 13ನೇ ಹಣಕಾಸು ಆಯೋಗ ಅನುದಾನದ ಯೋಜನೆಯಡಿ ಜೂನ್ 2013ನೇ ಅಂತ್ಯದವರೆಗೆ 4 ಕೆರೆಗಳನ್ನು ಅಭಿವೃದ್ಧಿಪಡಿಸಲಾಗಿದೆ. ಬಿಡುಗಡೆಯಾದ ಅನುದಾನದ ವಿವರಗಳನ್ನು ಅನುಬಂಧ-1 ರಲ್ಲಿ ನೀಡಲಾಗಿದೆ.

2012-13 ನೇ ಸಾಲಿನಲ್ಲಿ ಒಟ್ಟು 42 ಕೆರೆಗಳನ್ನು ಅಭಿವೃದ್ಧಿಪಡಿಸಲಾ ಗಿದೆ. ಈ ಪೈಕಿ ಮದ್ದೂರು ತಾಲ್ಲೂಕಿನ 10 ಕೆರೆಗಳು, ಮಳವಳ್ಳಿ ತಾಲ್ಲೂಕಿನ 5 ಕೆರೆಗಳು, ಕೆ.ಆರ್. ಪೇಟೆ ತಾಲ್ಲೂಕಿನ 7 ಕೆರೆಗಳು ಹಾಗೂ ಪಾಂಡವಪುರ ತಾಲ್ಲೂಕಿನ 3 ಕೆರೆಗಳನ್ನು ಅಭಿವೃದ್ಧಿಪಡಿಸ ಲಾಗಿದೆ. ಮಂಡ್ಯ ಜಿಲ್ಲೆಯ ಒಟ್ಟು 48 ಕೆರೆಗಳಲ್ಲಿ 42 ಕೆರೆಗಳನ್ನು

ಕೈಗೊಳ್ಳಲಾಗಿದೆ. ಉಳಿದ 6 ಕೆರೆಗಳನ್ನು ಅನುದಾನದ ಲಭ್ಯತೆಯ ಅನುಸಾರ ಅಭಿವೃದ್ಧಿಪಡಿಸಲು ಪರಿಶೀಲಾಗುವುದು ವಿವರಗಳನ್ನು ಅನುಬಂಧ 2 ರಲ್ಲಿ ನೀಡಲಾಗಿದೆ.

# ಅನುಬಂಧ 1

| ಕ್ರ ಸಂ | ಜಿಲ್ಲೆ | ತಾಲ್ಲೂಕು | ಕಾಮಗಾರಿಯ ಹೆಸರು | ಅಂದಾಜು ಮೊತ್ತ | ಅನುದಾನ | 2012–13 ನೇ ಸಾಲಿನ ವೆಚ್ಚ | 2013–14 ನೇ ವೆಚ್ಚ (ಜೂನ್ 2013 ರ ಅಂತ್ಯಕ್ಕೆ) |
|---|---|---|---|---|---|---|---|
| 1 | ಮಂಡ್ಯ | ಮದ್ದೂರು | ಕೆಸ್ತೂರು ಕೆರೆ ಅಭಿವೃದ್ಧಿ ಕಾಮಗಾರಿ | 76.00 | 32.07 | 32.07 | 00.00 |
| 2 | ಮಂಡ್ಯ | ಮದ್ದೂರು | ದುಂಡನಹಳ್ಳಿ ಕೆರೆ ಅಭಿವೃದ್ಧಿ ಕಾಮಗಾರಿ | 55.00 | 20.25 | 20.25 | 4.55 |
| 3 | ಮಂಡ್ಯ | ಮದ್ದೂರು | ಕೆ. ಬೆಳ್ಳೂರು ಕೆರೆ ಅಭಿವೃದ್ಧಿ ಕಾಮಗಾರಿ | 5.00 | 0.00 | 0.00 | 0.00 |
| 4 | ಮಂಡ್ಯ | ಮದ್ದೂರು | ಮಾಚಹಳ್ಳಿ ಕೆರೆ ಅಭಿವೃದ್ಧಿ ಕಾಮಗಾರಿ | 33.00 | 0.00 | 0.00 | 0.00 |
| 5 | ಮಂಡ್ಯ | ಮದ್ದೂರು | ಮಾದನಾಯಕನಹಳ್ಳಿ ಕೆರೆ ಅಭಿವೃದ್ಧಿ ಕಾಮಗಾರಿ | 28.00 | 0.00 | 0.00 | 17.46 |
| 6 | ಮಂಡ್ಯ | ಮದ್ದೂರು | ಕೂಳಗೆರೆ ಕೆರೆ ಅಭಿವೃದ್ಧಿ ಕಾಮಗಾರಿ | 32.00 | 0.00 | 0.00 | 0.00 |
| 7 | ಮಂಡ್ಯ | ಮದ್ದೂರು | ಆತಗೂರು ಕೆರೆ ಅಭಿವೃದ್ಧಿ ಕಾಮಗಾರಿ | 40.00 | 7.18 | 7.18 | 0.00 |

| | | | | | | | |
|---|---|---|---|---|---|---|---|
| 8 | ಮಂಡ್ಯ | ಮಳವಳ್ಳಿ | ಭೀಮಾ ಜಲಾಶಯ ಕೆರೆ ಅಭಿವೃದ್ಧಿ ಕಾಮಗಾರಿ | 121.00 | 94.15 | 94.15 | 0.00 |
| 9 | ಮಂಡ್ಯ | ಮಳವಳ್ಳಿ | ಹಂದಿಹಳ್ಳ ಕೆರೆ ಅಭಿವೃದ್ಧಿ ಕಾಮಗಾರಿ | 40.00 | 32.15 | 32.15 | 0.00 |
| 10 | ಮಂಡ್ಯ | ಮಳವಳ್ಳಿ | ನಿಟ್ಟೂರು ಕೆರೆ ಅಭಿವೃದ್ಧಿ ಕಾಮಗಾರಿ | 80.00 | 85.79 | 85.79 | 0.00 |
| 11 | ಮಂಡ್ಯ | ನಾಗಮಂಗಲ | ಹೊನ್ನಾವರ ಹಿರೇಕರೆ ಕೆರೆ ಅಭಿವೃದ್ಧಿ ಕಾಮಗಾರಿ | 67.00 | 32.38 | 32.38 | 0.00 |
| 12 | ಮಂಡ್ಯ | ನಾಗಮಂಗಲ | ಮಂಚಿಪಟ್ಟಣ ಹುಚ್ಚಿ ಕೆರೆ ಅಭಿವೃದ್ಧಿ ಕಾಮಗಾರಿ | 66.00 | 40.00 | 40.00 | 0.00 |
| 13 | ಮಂಡ್ಯ | ನಾಗಮಂಗಲ | ಎಸ್.ಎಂ. ಮುತ್ಸಂದ್ರ ಕೆರೆ ಅಭಿವೃದ್ಧಿ ಕಾಮಗಾರಿ | 52.00 | 21.09 | 21.09 | 0.00 |
| 14 | ಮಂಡ್ಯ | ನಾಗಮಂಗಲ | ಬಿಂಡಿಗನವಿಲೆ ಕೆರೆ ಅಭಿವೃದ್ಧಿ ಕಾಮಗಾರಿ | 136.00 | 117.89 | 117.89 | 0.00 |
| 15 | ಮಂಡ್ಯ | ನಾಗಮಂಗಲ | ಬೇಗಮಂಗಲ ಕೆರೆ ಅಭಿವೃದ್ಧಿ ಕಾಮಗಾರಿ | 33.00 | 18.09 | 18.09 | 0.00 |
| 16 | ಮಂಡ್ಯ | ನಾಗಮಂಗಲ | ಬಿದರೆಕೆರೆ ಹಿರೇಕೆರೆ ಕೆರೆ ಅಭಿವೃದ್ಧಿ ಕಾಮಗಾರಿ | 41.00 | 20.00 | 20.00 | 1.20 |

| | | | | | | | |
|---|---|---|---|---|---|---|---|
| 17 | ಮಂಡ್ಯ | ನಾಗಮಂಗಲ | ದೊಡ್ಡಜಟಕಾ ಕೆರೆ ಅಭಿವೃದ್ಧಿ ಕಾಮಗಾರಿ | 36.00 | 19.66 | 19.66 | 0.00 |
| 18 | ಮಂಡ್ಯ | ನಾಗಮಂಗಲ | ಕಾಳಿಂಗನಹಳ್ಳಿ ಕೆರೆ ಅಭಿವೃದ್ಧಿ ಕಾಮಗಾರಿ | 31.00 | 7.80 | 7.80 | 0.00 |
| 19 | ಮಂಡ್ಯ | ನಾಗಮಂಗಲ | ಅಂಚೆಚಿಟ್ಟನಹಳ್ಳಿ ಕೆರೆ ಅಭಿವೃದ್ಧಿ ಕಾಮಗಾರಿ | 33.00 | 16.27 | 16.27 | 0.00 |
| 20 | ಮಂಡ್ಯ | ನಾಗಮಂಗಲ | ಕಟಗಹಳ್ಳಿ ಕೆರೆ ಅಭಿವೃದ್ಧಿ ಕಾಮಗಾರಿ | 28.00 | 12.87 | 12.87 | 0.00 |
| 21 | ಮಂಡ್ಯ | ನಾಗಮಂಗಲ | ರಘುರಾಂಪುರ ಕೆರೆ ಅಭಿವೃದ್ಧಿ ಕಾಮಗಾರಿ | 41.00 | 31.52 | 31.52 | 0.00 |
| 22 | ಮಂಡ್ಯ | ನಾಗಮಂಗಲ | ರಾಮಚಂದ್ರ ಅಗ್ರಹಾರ ಕೆರೆ ಅಭಿವೃದ್ಧಿ ಕಾಮಗಾರಿ | 39.00 | 27.69 | 27.69 | 0.00 |
| 23 | ಮಂಡ್ಯ | ನಾಗಮಂಗಲ | ಹರಳಹಳ್ಳಿ ಕೆರೆ ಅಭಿವೃದ್ಧಿ ಕಾಮಗಾರಿ | 30.00 | 7.70 | 7.70 | 0.00 |
| 24 | ಮಂಡ್ಯ | ನಾಗಮಂಗಲ | ಆಣೆಚನ್ನಾಪುರ ಕೆರೆ ಅಭಿವೃದ್ಧಿ ಕಾಮಗಾರಿ | 30.00 | 0.00 | 0.00 | 0.00 |
| 25 | ಮಂಡ್ಯ | ನಾಗಮಂಗಲ | ಹೊನ್ನಾವರ ಹುಲಿಕೆರೆ ಕೆರೆ ಅಭಿವೃದ್ಧಿ ಕಾಮಗಾರಿ | 30.00 | 24.90 | 24.90 | 0.00 |

| | | | | | | | |
|---|---|---|---|---|---|---|---|
| 26 | ಮಂಡ್ಯ | ನಾಗಮಂಗಲ | ಗುಡಿಕಲ್‌ಹಳ್ಳ ಕೆರೆ ಅಭಿವೃದ್ಧಿ ಕಾಮಗಾರಿ | 30.00 | 21.53 | 21.53 | 0.00 |
| 27 | ಮಂಡ್ಯ | ನಾಗಮಂಗಲ | ಕೆಲಗೆರೆ ಕೆರೆ ಅಭಿವೃದ್ಧಿ ಕಾಮಗಾರಿ | 33.00 | 0.00 | 0.00 | 0.00 |
| 28 | ಮಂಡ್ಯ | ಕೆ. ಆರ್.ಪೇಟೆ | ಜೇನುಕ್ಲುಗುಡ್ಡ ಕೆರೆ ಅಭಿವೃದ್ಧಿ ಕಾಮಗಾರಿ | 98.00 | 90.34 | 90.34 | 0.00 |
| 29 | ಮಂಡ್ಯ | ಕೆ. ಆರ್.ಪೇಟೆ | ರಾಯಸಮುದ್ರ ತೊರೆಹಳ್ಳಿ ಕೆರೆ ಅಭಿವೃದ್ಧಿ ಕಾಮಗಾರಿ | 140.00 | 121.95 | 121.95 | 0.00 |
| 30 | ಮಂಡ್ಯ | ಕೆ. ಆರ್.ಪೇಟೆ | ಆಘಾಲಯ ಕೆರೆ ಅಭಿವೃದ್ಧಿ ಕಾಮಗಾರಿ | 145.00 | 115.63 | 115.63 | 0.00 |
| 31 | ಮಂಡ್ಯ | ಕೆ. ಆರ್.ಪೇಟೆ | ವಸಂತಪುರ ದಾಸನ ಕೆರೆ ಅಭಿವೃದ್ಧಿ ಕಾಮಗಾರಿ | 50.00 | 43.45 | 43.45 | 0.00 |
| 32 | ಮಂಡ್ಯ | ಕೆ. ಆರ್.ಪೇಟೆ | ಸಾರಂಗಿಕೆರೆ ಅಭಿವೃದ್ಧಿ ಕಾಮಗಾರಿ | 35.00 | 28.44 | 28.44 | 0.00 |
| 33 | ಮಂಡ್ಯ | ಕೆ. ಆರ್.ಪೇಟೆ | ಕೊಟ್ಟಿಗೆಹಳ್ಳಿ ಕೆರೆ ಅಭಿವೃದ್ಧಿ ಕಾಮಗಾರಿ | 35.00 | 33.000 | 33.000 | 0.00 |
| 34 | ಮಂಡ್ಯ | ಪಾಂಡವಪುರ | ಮೊಸಹಳ್ಳಿ ಬೇಬಿ ಕೆರೆ ಅಭಿವೃದ್ಧಿ ಕಾಮಗಾರಿ | 60.00 | 42.47 | 42.47 | 0.00 |

| | | | | | | | |
|---|---|---|---|---|---|---|---|
| 35 | ಮಂಡ್ಯ | ಪಾಂಡವಪುರ | ಹುಳಿಗೆರೆ ಕೆರೆ ಅಭಿವೃದ್ಧಿ ಕಾಮಗಾರಿ | 48.00 | 10.00 | 10.00 | 0.00 |
| | | | **ಒಟ್ಟು** | **1797.00** | **1090.47** | **1090.47** | **29.90** |

ಲೆಕ್ಕ ಶೀರ್ಷಿಕೆ : ಕೆರೆಗಳ ದುರಸ್ತಿ ಮತ್ತು ಪುನಶ್ಚೇತನ

| **ಕ್ರ.ಸಂ** | **ಜಿಲ್ಲೆ** | **ತಾಲ್ಲೂಕು** | **ಕಾಮಗಾರಿಯ ಹೆಸರು** | **ಅಂದಾಜು ಮೊತ್ತ** | **ಅನುದಾನ** | **2012–13 ನೇ ಸಾಲಿನ ವೆಚ್ಚ** | **2013–14 ನೇ ವೆಚ್ಚ (ಜೂನ್ 2013 ರ ಅಂತ್ಯಕ್ಕೆ)** |
|---|---|---|---|---|---|---|---|
| 1 | ಮಂಡ್ಯ | ಮದ್ದೂರು | ಚಾಕನಕೆರೆ ಪುನರುಜ್ಜೀವನ ಕಾಮಗಾರಿ | 10.00 | 4.04 | 4.04 | 0.00 |
| 2 | ಮಂಡ್ಯ | ಮದ್ದೂರು | ಬಾಣೋಜಿಪಂತ್ ಪುನರುಜ್ಜೀವನ ಕಾಮಗಾರಿ | 15.00 | 3.32 | 3.32 | 0.00 |
| 3 | ಮಂಡ್ಯ | ಮದ್ದೂರು | ಮಾರದೇವನಹಳ್ಳಿ ಪುನರುಜ್ಜೀವನ ಕಾಮಗಾರಿ | 20.00 | 8.00 | 8.00 | 0.00 |
| 4 | ಮಂಡ್ಯ | ಮಳವಳ್ಳಿ | ಬ್ಯಾಡರಹಳ್ಳಿ ಪುನರುಜ್ಜೀವನ ಕಾಮಗಾರಿ | 20.00 | 0.58 | 0.58 | 0.00 |
| 5 | ಮಂಡ್ಯ | ಮಳವಳ್ಳಿ | ನಂದಿಪುರ ಪುನರುಜ್ಜೀವನ ಕಾಮಗಾರಿ | 20.00 | 1.49 | 1.49 | 0.00 |

| | | | | | | | |
|---|---|---|---|---|---|---|---|
| 6 | ಮಂಡ್ಯ | ನಾಗಮಂಗಲ | ಹರಳಹಳ್ಳಿ ಪುನರುಜ್ಜೀವನ ಕಾಮಗಾರಿ | 15.00 | 0.06 | 0.06 | 0.00 |
| 7 | ಮಂಡ್ಯ | ನಾಗಮಂಗಲ | ಆಣೆಚನ್ನಾಪುರ ಪುನರುಜ್ಜೀವನ ಕಾಮಗಾರಿ | 15.00 | 3.07 | 3.07 | 0.00 |
| 8 | ಮಂಡ್ಯ | ನಾಗಮಂಗಲ | ಗುಡಿಕಲ್ ಪುನರುಜ್ಜೀವನ ಕಾಮಗಾರಿ | 10.00 | 0.31 | 0.31 | 0.00 |
| 9 | ಮಂಡ್ಯ | ಕೆ.ಆರ್.ಪೇಟೆ | ರಾಜಘಟ್ಟ ಪುನರುಜ್ಜೀವನ ಕಾಮಗಾರಿ | 30.00 | 3.86 | 3.86 | 0.00 |
| 10 | ಮಂಡ್ಯ | ಪಾಂಡವಪುರ | ದೊಡ್ಡಬ್ಯಾಡರಹಳ್ಳಿ ಪುನರುಜ್ಜೀವನ ಕಾಮಗಾರಿ | 10.00 | 0.08 | 0.08 | 0.00 |
| | | | **ಒಟ್ಟು** | **165.00** | **24.81** | **24.81** | **0.00** |

## ಅನುಬಂಧ 2

## ಅಭಿವೃದ್ಧಿ ಪಡಿಸಬೇಕಾಗಿರುವ ಕೆರೆಗಳ ವಿವರ

| ಕ್ರ.ಸಂಖ್ಯೆ | ಜಿಲ್ಲೆ | ತಾಲ್ಲೂಕು | ಕೆರೆಯ ಹೆಸರು |
|---|---|---|---|
| 1 | ಮಂಡ್ಯ | ಮಳವಳ್ಳಿ | ಕದಬಳ್ಳಿ ಕೆರೆ |
| 2 | ಮಂಡ್ಯ | ಮಳವಳ್ಳಿ | ಕಗ್ಗಳ ಕೆರೆ |
| 3 | ಮಂಡ್ಯ | ನಾಗಮಂಗಲ | ಪಡುವಲಪಟ್ಟಣ ಊರಮುಂದಿನ ಕೆರೆ |
| 4 | ಮಂಡ್ಯ | ನಾಗಮಂಗಲ | ಜೋಡಿ ಅಲ್ಪಹಳ್ಳಿ ಕೆರೆ |
| 5 | ಮಂಡ್ಯ | ನಾಗಮಂಗಲ | ಬಿಂಡೇನಹಳ್ಳಿ ಕೆರೆ |
| 6 | ಮಂಡ್ಯ | ಕೆ.ಆರ್. ಪೇಟೆ | ಮಾರ್ಗೋನಹಳ್ಳಿ ಕೆರೆ |

## ಲೆವೆನ್ ಇನ್ ಸ್ಕೆಚ್ ನ ಉಪಯೋಗ

## 579; ಶ್ರೀ ಮರಿತಿಬ್ಬೆ ಗೌಡ (ಶಿಕ್ಷಕರ ಕ್ಷೇತ್ರ)

ಅ) ಲೆವೆನ್ ಇ ಸ್ಕೆಚ್ ನಿಂದ ಜಮೀನುದಾರರಿಗೆ ಆಗುವ ಉಪಯೋಗಗಳೇನು;

ಆ) ಲೆವೆನ್ ಇನ್ ಸ್ಕೆಚ್ ನೀಡುವಲ್ಲಿ ವಿಳಂಬ ಉಂಟಾಗುತ್ತಿರುವುದ ಸರ್ಕಾರದ ಗಮನಕ್ಕೆ ಬಂದಿದೆಯೇ ಬಂದಿದ್ದಲ್ಲಿ ಈ ರೀತಿ ವಿಳಂಬವಾಗುತ್ತಿರುವುದಕ್ಕೆ ಕಾರಣಗಳೇನು ವಿಳಂಬ ತಪ್ಪಿಸಲು ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು;

ಇ) ಲೆವೆನ್ ಇ ಸ್ಕೆಚ್ ಉಪಯೋಗಕ್ಕೆ ನಿಗದಿತ ಸಮಯವನ್ನು ನಿಗದಿಗೊಳಿಸಲಾಗಿದೆಯೇ;

ಈ) ಈ ನಿಗದಿತ ಸಮಯ ನಿಗದಿಪಡಿಸಲು ಕಾರಣಗಳೇನು ನಿಗದಿತ ಸಮಯ ಎಷ್ಟು;

ಉ) ಲೆವೆನ್ ಇ ಸ್ಕೆಚ್ ಗೆ ಸಮಯವನ್ನು ನಿಗದಿಪಡಿಸಿರುವುದರಿಂದ ತೊಂದರೆ ಉಂಟಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಊ) ನಿಗದಿತ ಸಮಯದ ಅವಧಿಯನ್ನು ಕೈಬಿಡುವುದರಿಂದ ಆಗುವ ತೊಂದರೆಗಳೇನು;

**ಶ್ರೀ ವಿ. ಶ್ರೀನಿವಾಸ ಪ್ರಸಾದ (ಕಂದಾಯ ಸಚಿವರು)**

ಅ) 11 ಇ ಸ್ಕೆಚ್ ಅನ್ನು ಜಮೀನಿನ ಖರೀದಿ ವಿಭಾಗ ಇತ್ಯಾದಿಗಳಲ್ಲಿ ನೋಂದಣಿ ಪೂರ್ವದಲ್ಲೇ ಅಳತೆಯಿಂದ ತಯಾರಿಸುವುದರಿಂದ ಖರೀದಿ/ ವಿಭಾಗದ ವಿಸ್ತೀರ್ಣ ದಾಖಲೆಯೊಂದು ತಯಾರಾದಂತಾಗಿ ಅದರಂತೆ ನೋಂದಣಿಯಾಗಿ, ಮ್ಯುಟೇಷನ್ ಆಗಿ ಸರ್ವೆ ದಾಖಲೆ ಗಳಲ್ಲಿ ದಾಖಲೆಯಾಗಿ, ಪಹಣಿಯಲ್ಲಿ ಇಂಡೀಕರಣವಾಗುವುದರಿಂದ ವಿಸ್ತೀರ್ಣದ ಬಗ್ಗೆ ಜಮೀನುದಾರರಿಗೆ ಖಾತ್ರಿಯಾಗುತ್ತದೆ.

11 ಇ ಸ್ಕೇಚ್ ವಹಿವಾಟಿಗನುಗುಣವಾಗಿ ಜಮೀನಿನ ಮೇಲೆ ಅಳತೆಯಿಂದ ಹದ್ದು ನಿಗದಿಸಿ ತಯಾರಿಸಿರುವುದರಿಂದ ವಿವಾದಗಳಿಗೆ ಕಾರಣ ಇಲ್ಲದಂತಾಗಿ ವಿವಾದರಹಿತ ಭೂಮಿಯಾಗುತ್ತದೆ.

ಆ) ಪಹಣಿ ಮತ್ತು ಸರ್ವೆ ದಾಖಲೆಗಳು ಹೊಂದಾಣಿಕೆಯಿದ್ದರೆ 30 ದಿವಸ ಗಳಲ್ಲಿ 11 ಇ ಸ್ಕೆಚ್ ಮತ್ತು ಪಹಣಿ ತಿದ್ದುಪಡಿ ಹಾಗೂ ಪುನರ್ ನಿರ್ಮಾಣ ಮಾಡಬೇಕಾದ ಅರ್ಜಿಗಳನ್ನು 60 ದಿವಸಗಳಲ್ಲಿ ಇತ್ಯರ್ಥ ಪಡಿಸಲು ಸೂಚನೆಗಳನ್ನು ನೀಡಲಾಗಿದೆ.

ಸಾಮಾನ್ಯವಾಗಿ ಪಹಣಿ ತಿದ್ದುಪಡಿ ಇದ್ದಲ್ಲಿ ಮತ್ತು ಸರ್ವೆ ದಾಖಲೆಗಳು ನಶಿಸಿದ್ದು ಪುನರ್ ತಯಾರಿಸಬೇಕಾದ ಸಂದರ್ಭಗಳಲ್ಲಿ ವಿಳಂಬವಾಗು ತ್ತಿದೆ. ಇದನ್ನು ಸರಿಪಡಿಸಲು ಕಂದಾಯ ಇಲಾಖೆಯ ಭೂಮಿ ಕೋಶವು ವಿಶೇಷ ಆಂದೋಲನದ ಮೂಲಕ ಪಹಣಿ ಹಾಗೂ ಆಕಾರ ಬಂದ ದಾಖಲೆಗಳ ಹೊಂದಾಣಿಕೆ ಕ್ರಮ ಜರುಗಿಸುತ್ತಿದೆ ಮತ್ತು ಸರ್ವೆ

ಸಿಬ್ಬಂದಿಯು ನಶಿಸಿರುವ ದಾಖಲೆಗಳ ಪುನರ್ ನಿರ್ಮಾಣ ಕಾರ್ಯ ವನ್ನು ತ್ವರಿತ ಗತಿಯಲ್ಲಿ ಜರುಗಿಸುವಂತೆ ಕ್ರಮ ವಹಿಸಲಾಗುತ್ತಿದೆ.

ಇ) ನಿಗದಿಗೊಳಿಸಲಾಗಿದೆ

11ಇ ಸ್ಕೆಚ್ ಅನ್ನು ಬಳಸಲು ಮೊದಲು 60 ದಿನ ಅವಧಿ ನಿಗದಿಪಡಿಸಿದ್ದು ಇದನ್ನು ಕೋರಿಕೆಯ ಮೇರೆಗೆ 180 ದಿನಗಳವರೆವಿಗೆ ವಿಸ್ತರಿಸಿ ಅವಕಾಶ ನೀಡಲಾಗಿದೆ.

ಈ) ಸಾಮಾನ್ಯವಾಗಿ ಒಂದು ಕ್ರಯದ ವಹಿವಾಟು ಪೂರ್ಣಗೊಳ್ಳಲು 3 ರಿಂದ 6 ತಿಂಗಳ ಕಾಲಾವಕಾಶ ಬೇಕಾಗುತ್ತದೆ. ಇದನ್ನು ಗಣನೆಗೆ ತೆಗೆದುಕೊಂಡು 11ಇ ಸ್ಕೆಚ್‌ನ ಸಮಯ ನಿಗದಿಪಡಿಸಲಾಗಿದೆ.

ಉ) 11ಇ ಸ್ಕೆಚ್‌ನ ಸಮಯವನ್ನು 1 ವಹಿವಾಟಿಗೆ ಬೇಕಾಗುವ ಸಾಕಷ್ಟು ಸಮಯ ಅನುಸರಿಸಿ ನಿಗದಿಪಡಿಸಿರುವುದರಿಂದ ತೊಂದರೆ ಉಂಟಾ ಗುವ ಪ್ರಮೇಯವಿರುವುದಿಲ್ಲ.

ಊ) ಒಂದು ವಹಿವಾಟಿಗೋಸ್ಕರ ತಯಾರಿಸಿದ ನಕ್ಷೆಯನ್ನು ಮತ್ತೊಬ್ಬ ರೊಂದಿಗೆ ವಹಿವಾಟು ಮಾಡಲು, ಬಳಸಲು ಅವಕಾಶವಿರುವುದಿಲ್ಲ. ಅಲ್ಲದೇ ಒಂದು ವಹಿವಾಟಿಗೆ ಸಾಮಾನ್ಯವಾಗಿ 3 ರಿಂದ 6 ತಿಂಗಳ ಅವಧಿಯಿರುತ್ತದೆ. ಈ ಅವಧಿಯಲ್ಲಿ ವಹಿವಾಟಾಗದೇ ಇದ್ದರೆ ಅಥವಾ ಮತ್ತೊಬ್ಬರೊಂದಿಗೆ ವಹಿವಾಟು ಮಾಡಬೇಕಿದ್ದರೆ ಹೊಸ ನಕ್ಷೆಯ ಅವಶ್ಯಕತೆ ಇರುತ್ತದೆ. ಆದುದರಿಂದ ನಕ್ಷೆಗೆ ಅವಧಿ ನಿಗದಿಪಡಿಸುವುದು ಸಮಂಜಸವಾಗಿರುತ್ತದೆ.

**ಮಂಡ್ಯ ಜಿಲ್ಲೆಯ ಕಾವೇರಿ ಅಚ್ಚುಕಟ್ಟು ಪ್ರದೇಶದ ಬಗ್ಗೆ**

**581; ಶ್ರೀ ಮರಿತಿಬ್ಬೆಗೌಡ (ಶಿಕ್ಷಕರ ಕ್ಷೇತ್ರ)**

ಅ) ಮಂಡ್ಯ ಜಿಲ್ಲೆಯ ಮಳವಳ್ಳಿ ಹಾಗೂ ಮದ್ದೂರು ತಾಲ್ಲೂಕಿನ ವಿಶ್ವೇ ಶ್ವರಯ್ಯ ನಾಲೆಯ ಕೊನೆಯ ಅಚ್ಚುಕಟ್ಟು ಪ್ರದೇಶದ ನಾಲೆಗಳ ಲೈನಿಂಗ್ ಕಾಮಗಾರಿ ಆಗದೆ ಇರುವುದರಿಂದ ಕೊನೆ. ಭಾಗದ ರೈತರ ಜಮೀನಿಗೆ

ನಿಗದಿತ ಸಮಯಕ್ಕೆ ನೀರು ಸರಬರಾಜು ಆಗದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಸದರಿ ಭಾಗದಲ್ಲಿರುವ ಕೊನೆಯ ಅಚ್ಚುಕಟ್ಟು ಪ್ರದೇಶದ ನಾಲೆ ಅಭಿವೃದ್ಧಿ ಸಂಬಂಧ ಯಾವ ಯೋಜನೆಯನ್ನು ರೂಪಿಸಲಾಗಿದೆ; ಯೋಜನೆಯ ಒಟ್ಟು ಅಂದಾಜು ಮಾತ್ತವೆಷ್ಟು (ವಿವರಗಳೂಡೆನೆ);

ಇ) ಯೋಜನೆಯಲ್ಲಿ ತೆಗೆದುಕೊಂಡಿರುವ ಕಾಮಗಾರಿಗಳಾವವು (ವಿವರಗಳೊಡನೆ);

ಈ) ಯೋಜನೆಯ ಕಾಮಗಾರಿಗಳ ಅನುಷ್ಠಾನ ಯಾವ ಹಂತದಲ್ಲಿದೆ (ವಿವರಗಳೊಡನೆ) ಯಾವ ಕಾಲಮಿತಿಯಲ್ಲಿ ಪೂರ್ಣಗೊಳಿಸಲಾಗುವುದು;

ಉ) ಮದ್ದೂರು ತಾಲ್ಲೂಕಿನ ಕೊನೆ ಭಾಗವಾದ ಕೊಪ್ಪ ಹೋಬಳಿ ಕೌಡ್ಲೆ ದೊಡ್ಡಹೊಸಗಾವಿ ಪ್ರದೇಶದಲ್ಲಿ ಬರುವ ನಾಲೆಗಳ ಲೈನಿಂಗ್ ಕಾರ್ಯ ನಡೆಯುತ್ತಿದ್ದು ಈ ಭಾಗದ ನಾಲೆಗಳಿಗೆ ಎಷ್ಟು ಹಣ ಬಿಡುಗಡೆ ಮಾಡಲಾಗಿದೆ? ಈ ಕಾಮಗಾರಿಯು ಯಾವ ಹಂತದಲ್ಲಿದೆ? ಈ ಕಾಮಗಾರಿಯ ಗುತ್ತಿಗೆಯನ್ನು ಯಾರು ತೆಗೆದುಕೊಂಡಿದ್ದಾರೆ (ವಿವರಗಳೊಡನೆ);

**ಶ್ರೀ ಎಂ.ಬಿ.ಪಾಟೀಲ್ (ಜಲಸಂಪನ್ಮೂಲ ಸಚಿವರು)**

ಅ) ವಿಶ್ವೇಶ್ವರಯ್ಯ ನಾಲಾ ಜಾಲದ ಕೆಲವು ಶಾಖಾ ಕಾಲುವೆಗಳಲ್ಲಿ ಮತ್ತು ವಿತರಣಾ ನಾಲೆಗಳಲ್ಲಿ ಹಲವಾರು ವರ್ಷಗಳಿಂದ ಕೇವಲ ನಿರ್ವಹಣಾ ಕಾಮಗಾರಿಗಳನ್ನು ಮಾತ್ರ ಅಗತ್ಯತೆಗೆ ಅನುಗುಣವಾಗಿ: ಕೈಗೊಂಡಿದ್ದು, ಶಾಖಾ ನಾಲೆ ಮತ್ತು ವಿತರಣಾ ನಾಲೆಗಳು ಆಕಾರ ಕಳೆದು ಕೊಂಡು ಅದರ ಕ್ಷಮತೆ ಕಡಿಮೆಗೊಂಡಿದ್ದರಿಂದ ತುದಿಹಂತದ ಅಚ್ಚುಕಟ್ಟಿಗೆ ಸಮರ್ಪಕವಾಗಿ ನೀರನ್ನು ಹರಿಸಲು ತೊಂದರೆ ಉಂಟಾಗಿರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆ. ಆದರೂ ಸಹ, ತುದಿಹಂತದ

ಅಚ್ಚುಕಟ್ಟು ಪ್ರದೇಶಕ್ಕೆ ಯಾವುದೇ ತೊಂದರೆಯಾಗದಂತೆ ನೀರನ್ನು ಹರಿಸಲು ಕ್ರಮ ತಗೆದುಕೊಳ್ಳಲಾಗಿರುತ್ತದೆ.

ಆ) ವಿಶ್ವೇಶ್ವರಯ್ಯ ನಾಲಾ ಜಾಲಾದ ವಿತರಣಾ ನಾಲೆ ಹಾಗೂ ಇತರೆ ಸಣ್ಣ ಕಾಲುವೆಗಳನ್ನು ಒಳಗೊಂಡಂತೆ ಮೊದಲ ಹಂತದಲ್ಲಿ ₹ 330.0 ಕೋಟಿ ಅಂದಾಜು ಮೊತ್ತದಲ್ಲಿ ಒಟ್ಟಾರೆಯಾಗಿ 525.00 ಕಿ.ಮೀ ಉದ್ದದ ನಾಲೆಗಳನ್ನು ಅಭಿವೃದ್ಧಿಗಾಗಿ ಕೃಗೆತ್ತಿಕೊಳ್ಳಲಾಗಿದ್ದು, ಇದರಲ್ಲಿ ಮದ್ದೂರು ತಾಲ್ಲೂಕಿನಲ್ಲಿ ಬರುವ ಕೆಳಕಂಡ ಶಾಖಾ ಕಾಲುವೆ ಹಾಗೂ ವಿತರಣಾ ನಾಲೆಗಳು ಸೇರಿರುತ್ತವೆ.

ಹೊಸ ಮದ್ದೂರು ಶಾಖಾ ನಾಲೆ (ಸರಪಳಿ 42.00 ರಿಂದ 55.407) ಕಿ.ಮೀ) ಹಾಗೂ ಇದರಡಿಯಲ್ಲಿ ಬರುವ ವಿತರಣಾ ನಾಲೆ ಸಂಖ್ಯೆ 20, 23. ಅಂದಾಜು ಮೊತ್ತ ₹ 1355.31 ಲಕ್ಷಗಳು.

ಕೆರೆಗೋಡು ಶಾಖಾ ನಾಲೆ (ಸರಪಳಿ 22.00 ರಿಂದ 35.953 ಕಿ.ಮೀ) ಹಾಗೂ ಇದರಡಿಯಲ್ಲಿ ಬರುವ ವಿತರಣಾ ನಾಲೆ ಸಂಖ್ಯೆ 19, 21, 24) ಅಂದಾಜು ಮೂತ್ತ ₹ 1973.63 ಲಕ್ಷಗಳು

ಲೋಕಸರ ಶಾಖಾ ನಾಲೆ (ಸರಪಳಿ 6.00 ರಿಂದ 15.579 ಕಿಮೀ) ಹಾಗೂ ಇದರಡಿಯಲ್ಲಿ ಬರುವ ವಿತರಣಾ ನಾಲೆ ಸಂಖ್ಯೆ 14 ಸಿ, 1, 5, 6 ಅಂದಾಜು ಮೊತ್ತ ₹ 699.3840 ಲಕ್ಷಗಳು

ಕೌಡ್ಲೆ ಉಪನಾಲೆ (ಸರಪಳಿ 7.00 ರಿಂದ 17.280 ಕಿ.ಮೀ) ಹಾಗೂ ಇದರಡಿಯಲ್ಲಿ ಬರುವ ವಿತರಣಾ ನಾಲೆ ಸಂಖ್ಯ 4 'ಎ' 6, 16 ಹಾಗೂ 17. ಅಂದಾಜು ಮೊತ್ತ ₹ 2332.96 ಲಕ್ಷಗಳು

ಇದರೊಂದಿಗೆ, ಮಳವಳ್ಳಿ ತಾಲ್ಲೂಕಿನಲ್ಲಿ ಬರುವ ಕೆಳಕಂಡ ಶಾಖಾ ಕಾಲುವೆ ಹಾಗೂ ವಿತರಣಾ ನಾಲೆಗಳು ಸೇರಿರುತ್ತವೆ. ನಿಡಘಟ್ಟ ಶಾಖಾ ಕಾಲುವೆ (ಸರಪಳಿ 11.000 ರಿಂದ 14,705 ಕಿಮೀ) ಹಾಗೂ ಹಬ್ಬಕ ವಾಡಿ ಶಾಖಾ ಕಾಲುವೆಯ ವಿತರಣಾ ನಾಲೆ ಸಂಖ್ಯೆ 10 (ಸರಪಳಿ

0.000 ರಿಂದ 2.256 ಕಿಮೀ) ಮತ್ತು ವಿತರಣಾ ನಾಲೆ ಸಂಖ್ಯೆ 17ಸರಪಳಿ 0.000 ರಿಂದ 2.670 ಕಿ.ಮೀ). ಅಂದಾಜು ₹ 245.00 ಲಕ್ಷಗಳು.

ಹೆಬ್ಬಳ್ಳ ಚನ್ನಯ್ಯ ಶಾಖಾ ಕಾಲುವೆಯ ವಿತರಣಾ ನಾಲೆ ಸಂಖ್ಯೆ 20 (ಸರಪಳಿ, 0.000 ರಿಂದ 8.297 ಕಿ.ಮೀ) ಮತ್ತು ವಿತರಣಾ ನಾಲೆ ಸಂಖ್ಯೆ 24 ಸರಪಳಿ 0.000 ರಿಂದ 8.128 ಕಿ.ಮೀ). ಅಂದಾಜು ಮೊತ್ತ ₹ 1024.00 ಲಕ್ಷಗಳು.

ಇ) ಅಭಿವೃದ್ಧಿಪಡಿಸುತ್ತಿರುವ ಮದ್ದೂರು ಹಾಗೂ ಮಳವಳ್ಳಿ ತಾಲ್ಲೂಕಿನ ಶಾಖಾ ನಾಲೆ. ಹಾಗೂ ವಿತರಣಾ ನಾಲೆಗಳಲ್ಲಿ ಕೆಳಕಂಡ ಕಾಮಗಾರಿ ಗಳನ್ನು ಕೈಗೆತ್ತಿಕೊಳ್ಳಲಾಗಿದೆ ಹಾಗೂ ಇದರ ಅಂದಾಜು ಮೊ. ಸುಸ್ಥಿತಿಯಲ್ಲಿರುವ ಭಾಗಗಳನ್ನು ಹೊರತುಪಡಿಸಿ ಉಳಿದ ನಾಲೆಯ ತಳಭಾಗಕ್ಕೆ ಹಾಗೂ ಪಾರ್ಶ್ವಗಳಿಗೆ ಮೆಕಾನಿಕಲ್ ಪೇವರ್ ಬಳಸಿ ಸಿಮೆಂಟ್ ಕಾಂಕ್ರೀಟ್ ಲೈನಿಂಗ್ ಮಾಡುವುದು.

ಡೀಪ್‌ಕಟ್ ಸರಪಳಿಗಳಲ್ಲಿ ಹಾಗೂ ಗಟ್ಟಿ ಕಲ್ಲುಗಳು ಇರುವ ಸರಪಳಿಗಳಲ್ಲಿ ಮ್ಯಾನುಯಲ್ ಆಗಿ ಸಿಮೆಂಟ್ ಕಾಂಕ್ರೀಟ್ ಲೈನಿಂಗ್ ಮಾಡುವುದು ಮತ್ತು ಇತರೆ ಸರಪಳಿಗಳಲ್ಲಿ ಮೇಸನರಿ ಲೈನಿಂಗ್ ಮಾಡುವುದು.

ಹಾಲಿ... ಇರುವ ಇನ್‌ಲೆಟ್‌ಗಳು, ಸೋಪಾನಗಳು, ಸೂಪರ್ ಪ್ಯಾಸೇಜ್ ಗಳು, ಸೇತುವೆಗಳು ಇತ್ಯಾದಿಗಳನ್ನು ಅಭಿವೃದ್ಧಿಪಡಿಸುವುದು. ದುಸ್ಥಿತಿ ಯಲ್ಲಿರುವಂತಹ ಅಡ್ಡಮೋರಿಗಳನ್ನು ಪುನರ್ ನಿರ್ಮಿಸುವುದು. ಸೇವಾ ರಸ್ತೆಯನ್ನು ಅಭಿವೃದ್ಧಿಪಡಿಸುವುದು.

ತೂಬುಗಳಲ್ಲಿ ಹಾನಿಗೊಳಗಾಗಿರುವ ಗೇಟ್‌ಗಳನ್ನು ದುರಸ್ಥಿಪಡಿಸುವುದು/ ಬದಲಾಯಿಸುವುದು.

ಈ) ಕಾಮಗಾರಿಗಳು ದಿನಾಂಕ 19–03–2013 ರಂದು ಪ್ರಾರಂಭಗೊಂಡಿದ್ದು ಪ್ರಗತಿಯಲ್ಲಿರುತ್ತದೆ. ಗುತ್ತಿಗೆ ಕರಾರಿನಂತೆ. ಈ ಕಾಮಗಾರಿಗಳನ್ನು ನಿರ್ವಹಿಸಲು 5 ತಿಂಗಳ ಕಾಲಮಿತಿಯನ್ನು ನಿಗಧಿಪಡಿಸಲಾಗಿದೆ. ಜೂನ್ 2013 ರ ಅಂತ್ಯದವರೆಗೆ 3519 ಕಿ.ಮೀ ಭೌತಿಕ ಹಾಗೂ ₹183.69 ಲಕ್ಷಗಳ ಆರ್ಥಿಕ ಪ್ರಗತಿಯನ್ನು ಸಾಧಿಸಲಾಗಿರುತ್ತದೆ.

ಉ) ಮದ್ದೂರು ತಾಲ್ಲೂಕಿನ ಕೊನೆ ಭಾಗದ ಕೂಪ್ರ ಹೋಬಳಿ ಕೌಡ್ಲೇ ದೊಡ್ಡ ಹೊಸಗಾವಿ ಪ್ರದೇಶದಲ್ಲಿ ಬರುವ ನಾಲೆಗಳ ಅಭಿವೃದ್ಧಿಗಾಗಿ ಲಕ್ಷಗಳ ಮೊತ್ತವನ್ನು ಬಿಡುಗಡೆ ಮಾಡಲಾಗಿರುತ್ತದೆ.

ಈ ನಾಲೆಗಳ ಅಭಿವೃದ್ದಿ ಕಾಮಗಾರಿಯನ್ನು ಮೆ ಅಮೃತ ಕನ್‌ಸ್ಟಕ್ಷನ್ಸ್ ಪ್ರೈ. ಲಿ. ಇವರಿಗೆ ವಹಿಸಲಾಗಿದ್ದು, ಕಾಮಗಾರಿಯು ಪ್ರಗತಿಯಲ್ಲಿರುತ್ತದೆ.

**ಹಿಂದುಳಿದ ಚಿಕ್ಕಬಳ್ಳಾಪುರ ಜಿಲ್ಲೆಯನ್ನು ಅಭಿವೃದ್ಧಿ ಪಡಿಸುವ ಬಗ್ಗೆ**

**235; ಡಾ. ಮುಮ್ತಾಜ್ ಅಲಿ ಖಾನ್ (ನಾಮ ನಿರ್ದೇಶನ ಹೊಂದಿರುವವರು)**

ಅ) ಹಿಂದುಳಿದ ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿ ಬಡತನ ನಿವಾರಿಸುವ ದಿಕ್ಕಿನಲ್ಲಿ ಸರ್ಕಾರ ಸಣ್ಣ ಕೈಗಾರಿಕೆಗಳಿಗೆ ಉತ್ತೇಜನ ನೀಡುವುದೇ ? ಇಲ್ಲಿಯರೆಗೆ ನಿರ್ಲಕ್ಷ್ಯ ಮಾಡಲು ಕಾರಣವೇನು;

ಆ) ಸರ್ ಎಂ. ವಿಶ್ವೇಶ್ವರಯ್ಯ ರವರು ಮತ್ತು ಇನ್ನಿತರೆ ಹಿರಿಯ ಅಧಿಕಾರಿ ಗಳು ಜನಿಸಿದ ಈ ಜಿಲ್ಲೆಯಲ್ಲಿ ಸಣ್ಣ ಕೈಗಾರಿಕೆಗಳ ಪ್ರಗತಿ ಸಾಕಷ್ಟು ಆಗದಿರುವುದಕ್ಕೆ ಕಾರಣಗಳೇನು;

**ಶ್ರೀ ಪ್ರಕಾಶ ಬಾಬಣ್ಣ ಹುಕ್ಕೇರಿ (ಸಣ್ಣ ಕೈಗಾರಿಕೆ ಮುಜರಾಯಿ ಮತ್ತು ಸಕ್ಕರೆ ಸಚಿವರು)**

ಅ) ಹೌದು

ಜಿಲ್ಲೆಯಲ್ಲಿ ಸ್ಥಾಪಿಸಲ್ಪಡುವ ಕೈಗಾರಿಕೆಗಳಿಗೆ ವಿವಿಧ ರಿಯಾಯತಿ ಪ್ರೋತ್ಸಾಹಗಳನ್ನೊಳಗೊಂಡ ಕೈಗಾರಿಕಾ ನೀತಿ 2009–14 ನ್ನೆಲು

ಈಗಾಗಲೇ ಅನುಷ್ಠಾನಗೊಳಿಸುತ್ತಿದ್ದು ಇತರೆ ಕೈಗಾರಿಕಾಭಿವೃದ್ಧಿ ಕಾರ್ಯ ಕ್ರಮಗಳನ್ನು ಸಹಾ ಹಮ್ಮಿಕೊಂಡಿದ್ದು ಜಿಲ್ಲೆಯನ್ನು ನಿರ್ಲಕ್ಷ್ಯ ಮಾಡಿ ರುವುದಿಲ್ಲ.

ಆ) ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿ ಇರುವ ಕೈಗಾರಿಕೆಗಳ ವಿವರಗಳು ಹಾಗೂ ಅಭಿವೃದ್ಧಿಪಡಿಸುತ್ತಿರುವ ಕೈಗಾರಿಕಾ ಮೂಲಭೂತ ಸೌಕರ್ಯಗಳ ವಿವರ ಗಳನ್ನು ಕೆಳಗೆ ನೀಡಲಾಗಿದೆ.

ಜಿಲ್ಲೆಯಲ್ಲಿ 7646 ಸಣ್ಣ ಕೈಗಾರಿಕೆಗಳು ₹ 25.66 ಕೋಟಿ ಬಂಡವಾಳ ಹೂಡಿಕೆಯೊಂದಿಗೆ ಸ್ಥಾಪಿತವಾಗಿದ್ದು, ಈ ಕೈಗಾರಿಕೆಗಳಿಂದ 44153 ಜನರಿಗೆ ಉದ್ಯೋಗಾವಕಾಶಗಳನ್ನು ಕಲ್ಪಿಸಲಾಗಿದೆ.

ಜಿಲ್ಲೆಯಲ್ಲಿ 6 ಬೃಹತ್ ಮತ್ತು ಮಧ್ಯಮ ಪ್ರಮಾಣದ ಕೈಗಾರಿಕೆಗಳು ಕಾರ್ಯ ನಿರ್ವಹಿಸುತ್ತಿವೆ. ಜಿಲ್ಲೆಯ ಸರ್ವಾಂಗೀಣ ಕೈಗಾರಿಕಾಭಿವೃದ್ಧಿಗೆ ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿಯು ಗೌರಿಬಿದನೂರು ತಾಲ್ಲೂಕಿನ ಕುಡುಮಲಕುಂಟೆಯಲ್ಲಿ 239 ಎಕರೆ ಭೂಮಿಯಲ್ಲಿ ಕೈಗಾರಿಕಾ ಪ್ರದೇಶವನ್ನು ಅಭಿವೃದ್ಧಿಪಡಿಸಿದೆ. 2 ನೇ ಹಂತದಲ್ಲಿ 493 ಎಕರೆ ಕೈಗಾರಿಕಾ ಪ್ರದೇಶದ ಕಾಮಗಾರಿಯು ಪ್ರಾರಂಭವಾಗಿದೆ.

ಮುಂದುವರೆದಂತೆ ಕೆಐಎಡಿಬಿ ಯು ಬಾಗೇಪಲ್ಲಿ ತಾಲ್ಲೂಕಿನ ಕೊಂಡ ರೆಡ್ಡಿಪಲ್ಲಿಯಲ್ಲಿ 192 ಎಕರೆ ಪ್ರದೇಶದಲ್ಲಿ ಮತ್ತು ಚಿಂತಾಮಣಿ ತಾಲ್ಲೂಕಿನ ಮಸ್ತೇನಹಳ್ಳಿಯಲ್ಲಿ 593 ಎಕರೆ ಪ್ರದೇಶದಲ್ಲಿ ಕೈಗಾರಿಕಾ ಪ್ರದೇಶವನ್ನು ಅಭಿವೃದ್ಧಿಪಡಿಸಲು ಉದ್ದೇಶಿಸಿದೆ.

ವಿಶೇಷ ಅಭಿವೃದ್ದಿ ಯೋಜನೆಯಡಿ ಗೌರಿಬಿದನೂರು ತಾಲ್ಲೂಕಿನ ಕುಡುಮಲಕುಂಟೆಯಲ್ಲಿನ ಕೆಎಸ್ಎಸ್ಐಡಿಸಿ ವತಿಯಿಂದ 48 ಎಕರೆ ಪ್ರದೇಶದಲ್ಲಿ ಸಣ್ಣ ಕೈಗಾರಿಕೆಗಳಿಗೆ 170 ವಿವಿಧ ಅಳತೆಯ ಪ್ಲಾಟ್‌ಗಳನ್ನು ಅಭಿವೃದ್ಧಿಪಡಿಸಲು ಕಾಮಗಾರಿ ಪ್ರಗತಿಯಲ್ಲಿದೆ.

**ಚಿಕ್ಕಬಳ್ಳಾಪುರದಲ್ಲಿ ಪುಟ್‌ಬಾಲ್ ಆಟಕ್ಕೆ ಉತ್ತೇಜನ ನೀಡುವ ಬಗ್ಗೆ**

**234; ಡಾ. ಮುಮ್ತಾಜ್ ಅಲಿಖಾನ್ (ನಾಮನಿರ್ದೇಶನ ಹೊಂದಿದವರು)**

ಅ) ಹಿಂದಿನ ಮೈಸೂರು ಸಂಸ್ಥಾನದಲ್ಲಿ ಪುಟ್‌ಬಾಲ್ ಆಟಕ್ಕೆ ಚಿಕ್ಕಬಳ್ಳಾಪುರ ಇಡೀ ಭಾರತದಲ್ಲಿ ಪ್ರಸಿದ್ಧಿಯಾಗಿರುವ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಬಂದಿದ್ದಲ್ಲಿ ಸುಪ್ರಸಿದ್ಧ ಪುಟ್‌ಬಾಲ್ ಮಟ್ಟಗಳಲ್ಲಿ ದಿವಂಗತ ಲಕ್ಷ್ಮೀ ನಾರಾಯಣಪ್ಪರವರು ಪ್ರಚಂಡ ಪ್ರಭಾವವನ್ನು ಬೀರಿದ್ದುದು ಸರ್ಕಾರ ಗಮನದಲ್ಲಿದೆಯೇ ?

ಇ) ದಿವಂಗತ ಲಕ್ಷ್ಮೀ ನಾರಾಯಣಪ್ಪ ಕರೀಂವರನ್ನು ಯುವ ಪೀಳಿಗೆಯ ಗಮನಹರಿಸಲು ಏನಾದರೂ ಒಂದು ಸ್ಮಾರಕಗಳನ್ನು ಸ್ಥಾಪಿಸಲು ಸರ್ಕಾರ ಗಮನಹರಿಸುವುದೇ

ಈ) ಚಿಕ್ಕಬಳ್ಳಾಪುರದಲ್ಲಿ ಅಖಿಲ ಕರ್ನಾಟಕ ಪುಟ್‌ಬಾಲ್ ಪಟುಗಳಿಗೆ, ಯುವಕರಿಗೆ ತರಬೇತಿ ಕೊಡಲು ಕೂಡಲೇ ಸರ್ಕಾರ ಸೂಕ್ತ ಯೋಜನೆ ಹಮ್ಮಿಕೊಳ್ಳುವುದೇ ?

**ಶ್ರೀ ಕೆ. ಅಭಯ ಚಂದ್ರ (ಯುವಜನ ಸೇವಾ ಮತ್ತು ಕ್ರೀಡಾ ಹಾಗೂ ಮೀನುಗಾರಿಕೆ ಸಚಿವರು)**

ಅ) ಬಂದಿದೆ

ಆ) ಹೌದು

ಇ) ದಿವಂಗತ ಲಕ್ಷ್ಮೀನಾರಾಯಣಪ್ಪ ಕರೀಂರವರ ಸ್ಮಾರಕ ಸ್ಥಾಪನೆ ಪ್ರಸ್ತಾವನೆ ಸರ್ಕಾರದ ಮುಂದಿರುವುದಿಲ್ಲ.

ಈ) ಚಿಕ್ಕಬಳ್ಳಾಪುರದಲ್ಲಿ ಪುಟ್‌ಬಾಲ್ ಮತ್ತು ಅಥ್ಲೇಟಿಕ್ ಆಟಗಳಲ್ಲಿ ತರಬೇತಿ ನೀಡಲು ಕ್ರೀಡಾ ಶಾಲೆ/ ವಸತಿ ನಿಲಯ ಸ್ಥಾಪನೆಗೆ ಪ್ರಸ್ತಾವನೆ ಸರ್ಕಾರದ ಪರಿಶೀಲನೆಯಲ್ಲಿದೆ. ಚಿಕ್ಕಬಳ್ಳಾಪುರವು ಈ ಹಿಂದೆ

ಕೋಲಾರ ಜಿಲ್ಲೆಯ ಭಾಗವಾಗಿದ್ದು, ಕೋಲಾರ ಜಿಲ್ಲಾ ಕ್ರೀಡಾ ಶಾಲೆಯಲ್ಲಿ ಪುಟ್‌ಬಾಲ್ ಕ್ರೀಡಾಪಟುಗಳಿಗೆ ಅವಕಾಶ ಕಲ್ಪಿಸಲಾಗಿದೆ. ಬೆಂಗಳೂರು ಉತ್ತರ ತಾಲ್ಲೂಕಿನ ವಿದ್ಯಾನಗರ ಕ್ರೀಡಾ ಶಾಲೆಯಲ್ಲಿ ಮತ್ತು ಬೆಂಗಳೂರಿನ ಕಸ್ತೂರ ಬಾ ರಸ್ತೆಯ ಕ್ರೀಡಾ ನಿಲಯದಲ್ಲಿ ಚಿಕ್ಕಬಳ್ಳಾಪುರದ ಕ್ರೀಡಾಪಟುಗಳೂ ಸೇರಿದಂತೆ ರಾಜ್ಯದ ಪ್ರತಿಭಾವಂತ ಪುಟ್‌ಬಾಲ್ ಕ್ರೀಡಾಪಟುಗಳಿಗೆ ಪ್ರವೇಶಾವಕಾಶ ನೀಡಲಾಗುತ್ತಿದೆ.

**ಇಮಾಮ್ ಮೌಜನ್‌ರಿಗೆ ಮಾಸಿಕ ಸಂಭಾವನೆ**

**233; ಡಾ. ಮುಮ್ತಾಜ್ ಅಲಿಖಾನ್ (ನಾಮನಿರ್ದೇಶನ ಹೊಂದಿದವರು)**

ಅ) ಸರ್ಕಾರ ಮುಜರಾಯಿ ಇಲಾಖೆಯಿಂದ ಅರ್ಚಕರಿಗೆ ಮಾಸಿಕ ವೇತನವನ್ನು ಒದಗಿಸುವ ಆದೇಶ ಹೊರಡಿಸಿರುವುದು ನಿಜವೇ;

ಆ) ಹೊರಡಿಸಿದ್ದಲ್ಲಿ ಇದು ಒಂದು ಹಿತಕರ ಪ್ರಯತ್ನವಲ್ಲವೆ;

ಇ) ಇದೇ ರೀತಿ ಪಟ್ಟಣ ಮತ್ತು ಗ್ರಾಮೀಣ ಪ್ರದೇಶಗಳ ಮಸೀದಿಗಳಲ್ಲಿ ಧಾರ್ಮಿಕ ಸೇವೆಯನ್ನು ಸಲ್ಲಿಸುತ್ತಿರುವ ಇಮಾಮ್, ಮೌಜನ್‌ರಿಗೆ ಮಾಸಿಕ ಸಂಭಾವನೆಗೆ ಸರ್ಕಾರ ಕೂಡಲೇ ಹಣ ಬಿಡುಗಡೆ ಮಾಡುವುದೆ;

ಈ) ಮಾಜಿ ಮುಖ್ಯಮಂತ್ರಿಯವರು ವರ್ಷಕ್ಕೆ ಐದು ಕೋಟಿಯನ್ನು ಮಂಜೂರು ಮಾಡಿದ್ದು ಇಂದಿನ ಮುಖ್ಯಮಂತ್ರಿಯವರೂ ಸಹ ಈ ಯೋಜನೆಯನ್ನು ಮುಂದುವರೆಸಲು ಭರವಸೆಯನ್ನು ನೀಡುವರೇ;

**ಶ್ರೀ ಪ್ರಕಾಶ ಬಾಬಣ್ಣ ಹುಕ್ಕೇರಿ (ಸಣ್ಣ ಕೈಗಾರಿಕೆ ಸಕ್ಕರೆ ಮತ್ತು ಮುಜರಾಯಿ ಸಚಿವರು)**

ಅ) ಸರ್ಕಾರವು ಅರ್ಚಕರಿಗೆ ಮಾಸಿಕ ವೇತನ ಹೆಚ್ಚಿಸಿರುವುದಿಲ್ಲ ಆದರೆ, ದೇವಾಲಯದ ದೈನಂದಿನ ಪೂಜಾ ಕೈಂಕರ್ಯಗಳನ್ನು ನಡೆಸಲು ಅನುವಾಗುವಂತೆ, 2013–14ನೇ ಆರ್ಥಿಕ ವರ್ಷದಿಂದ ಜಾರಿಗೆ ಬರುವಂತೆ ಸರ್ಕಾರದ ಆದೇಶ ಸಂಖ್ಯೆ ಕಂಇ 10 ಮುತಬ 2012 ದಿನಾಂಕ

:21–06–2013 ರನ್ವಯ ವಾರ್ಷಿಕ ₹ 24000/– ದಂತೆ ತಸ್ತೀಕ್ ಮೊತ್ತವನ್ನು ಹೆಚ್ಚಿಸಲಾಗಿರುತ್ತದೆ.

ಆ) ಹೌದು.

ಇ) ಈ ವಿಷಯವು ಅಲ್ಪಸಂಖ್ಯಾತರ ಕಲ್ಯಾಣ ಇಲಾಖಾ ವ್ಯಾಪ್ತಿಯಲ್ಲಿ ಬರುವುದು. ಸದರಿ ಇಲಾಖೆಗೆ ಪ್ರಸ್ತಕ್ತ ಸಾಲಿನ ಆಯವ್ಯಯದಲ್ಲಿ ₹ 500.00 ಲಕ್ಷಗಳನ್ನು ನಿಗದಿಪಡಿಸಲಾಗಿದ್ದು ಮೊದಲನೇ ತ್ರೈಮಾಸಿಕ ಕಂತಿನಲ್ಲಿ ಶೇ 25 ರಷ್ಟು ಅನುದಾನ ₹ 125.00 ಲಕ್ಷ ದಿನಾಂಕ 30.4.2013 ರ ಸರ್ಕಾರಿ ಆದೇಶದಲ್ಲಿ ಬಿಡುಗಡೆಗೊಳಿಸಲಾಗಿದೆ.

ರಾಜ್ಯ ಉಲೆಮಗಳಲ್ಲಿ ಸಂಬಂಧ ಭಿನ್ನಾಭಿಪ್ರಾಯ ಇರುವ ಹಿನ್ನೆಲೆಯಲ್ಲಿ ಇಮಾಮ್ ಮೌಜನ್‌ರವರಿಗೆ ಮಾಸಿಕ ಸಂಭಾವನೆ ಪಾವತಿಸುವುದನ್ನು ಸದ್ಯಕ್ಕೆ ತಡೆಹಿಡಿಯಲಾಗಿದೆ.

ಈ) ಪ್ರಸಕ್ತ ಸಾಲಿನಲ್ಲೂ ಸಹ ಯೋಜನೆಯನ್ನು ಮುಂದುವರೆಸಲಾಗಿದೆ.

## 3. ಸಭಾಪತಿಯವರ ಅಪ್ಪಣೆ ಮೇರೆಗೆ ಪ್ರಸ್ತಾಪ ಮಾಡಲ್ಪಟ್ಟ ವಿಷಯ

**ಅ) ವಿಷಯ : ಸಿ.ಇ.ಟಿ. ಗೊಂದಲಗಳ ಬಗ್ಗೆ**

**ಶ್ರೀ ಡಿ.ವಿ.ಸದಾನಂದಗೌಡ(ವಿರೋಧ ಪಕ್ಷದ ನಾಯಕರು):–** ಮಾನ್ಯ ಸಭಾಪತಿಯವರೆ, ಇದೊಂದು ಬಹಳ ಗಂಭೀರವಾದಂತಹ ವಿಚಾರ ನಾನು ಇದನ್ನು ಪ್ರಸ್ತಾಪ ಮಾಡುವುದಕ್ಕಿಂತಲೂ ಜಾಸ್ತಿ ಕನ್ನಡ ಪ್ರಭಾ ಪತ್ರಿಕೆಯಲ್ಲಿ ಈ ವಿಷಯ ನಿರಂತರವಾಗಿ ಪ್ರಸ್ತಾಪವಾಗಲೇ ಇದೆ. ಮತ್ತು ಇದೊಂದು ಜ್ವಲಂತ ಸಮಸ್ಯೆ. ಸುಮಾರು 62,000 ವಿದ್ಯಾರ್ಥಿಗಳು ಇದ್ದಾರೆ. ಈ 62,000 ಕುಟುಂಬಗಳ ನೆಮ್ಮದಿ ಪ್ರಶ್ನೆಯಾಗಿದೆ. ನಾನು ಈ ಸಂದರ್ಭದಲ್ಲಿ ಕನ್ನಡ ಪ್ರಭಾಪ್ರತಿಕೆಯನ್ನು ನಿಜವಾಗಿಯೂ ಅಭಿನಂದಿಸುತ್ತೇನೆ ಏಕೆಂದರೆ. ಯಾವುದೋ ಒಂದು ಇಶ್ಯೂವನ್ನು ಮಾಡಿದ್ದು ಅಲ್ಲ. ಈ ಸಿಇಟಿ ಬಗ್ಗೆ ಮಾಹಿತಿಗಳನ್ನು ಮತ್ತೊಂದನ್ನು ಮತ್ತು ಎಚ್ಚರಿಕೆಯನ್ನು ನಿರಂತರವಾಗಿ ಕೊಡುತ್ತಾ ಬಂದಿದೆ. ಈ ಎಚ್ಚರಿಕೆ ಕೇವಲ ವಿದ್ಯಾರ್ಥಿಗಳಿಗೆ ಮತ್ತು ವಿದ್ಯಾರ್ಥಿ

ಗಳ ಪೋಷಕರಿಗೆ ಮಾತ್ರವಲ್ಲ. ಯಾರು ರಾಜ್ಯದಲ್ಲಿ ಅಧಿಕಾರವನ್ನು ಮಾಡುವವರಿಗೆ ಮತ್ತು ಅಧಿಕಾರಿಗಳಿಗೆ ಎಲ್ಲರೂ ಕೂಡ ಸಮರ್ಪಕವಾಗಿ ನಡೆದುಕೊಳ್ಳಿ ಮಕ್ಕಳ ಭವಿಷ್ಯದ ಬಗ್ಗೆ ಚೆಲ್ಲಾಟವಾಡಬೇಡಿ ಎನ್ನುವಂತಹ ದೃಷ್ಟಿಯಿಂದ ಇದನ್ನು ಅವರು ಮಾಡಿದ್ದಾರೆಂದು ನಾನು ಭಾವಿಸುತ್ತಿದ್ದೇನೆ. ನಾನು ಅವರಿಗೆ ಅಭಿನಂದನೆಗಳನ್ನು ಸಲ್ಲಿಸುತಿದ್ದೇನೆ. ನಾನು ಹೆಚ್ಚು ಮಾತನಾಡುವುದಕ್ಕೆ ಇಷ್ಟಪಡುವುದಿಲ್ಲ. ಅವರು ಏನು ಪತ್ರಿಕೆಯಲ್ಲಿ ವರದಿ ಮಾಡಿದ್ದಾರೆ ಅದನ್ನು ಮಾತ್ರ ನಿಮ್ಮ ಮುಂದಿ ಓದುವುದಕ್ಕೆ ಇಚ್ಚೆಪಡುತ್ತಿದ್ದೇನೆ. ಇವತ್ತು ಈ ಪರಿಸ್ಥಿತಿಯೇ ಮುಂದುವರೆದರೆ ಏನಾಗಬಹುದು ಎಂದರೆ ನಮ್ಮ ಊರಿನಲ್ಲಿ ಒಂದು ಗಾದೆ. ಮಾತು ಇದೆ ಕೆಸರಿನಲ್ಲಿ ಬಿದ್ದಂತಹ ಕೋಣ. ಅದು ಭಾರೀ ಎನ್‌ಜಾಯ್ ಮಾಡುತ್ತದೆಯಂತೆ. ಆ ಸಮಯದಲ್ಲಿ ಎಷ್ಟು ಬಾರಿಸಿದರೂ ಎಚ್ಚರಿಕೆಯಾಗುವುದಿಲ್ಲವಂತೆ. ಒಂದೆರಡು ಬಿದ್ದಾಗ ಎಲ್ಲಿಯೋ ಬೀಳುತ್ತದೆ, ಮತ್ತೊಂದು ಬಿದ್ದಾಗಲೂ ಸುಮ್ಮನೆ ಇರುತ್ತದೆ. ಪ್ರಾಯಶಃ ಈ ಸರ್ಕಾರದ ಪರಿಸ್ಥಿತಿಯೂ ಕೂಡ ಇದೇ ರೀತಿಯಾಗಿದೆ. ಏಕೆಂದರೆ ರಾಜಕಾರಣಿಗಳಾಗಲಿ. ವಿರೋಧ ಪಕ್ಷದವರು ಹೇಳಿದಲ್ಲ. ಯಾವುದೋ ಮಾಧ್ಯಮಗಳು ಅತ್ಯಂತ ಯಶಸ್ವಿಯಾಗಿ ಪ್ರತಿ ಹಂತದಲಿಯೂ ಕೂಡ ಎಚ್ಚರಿಕೆಯನ್ನು ಕೊಟ್ಟಾಗಲೂ ಕೂಡ ಅದನ್ನು ಸರ್ಕಾರ ಗಂಭೀರವಾಗಿ ಪರಿಗಣಿಸಿಲ್ಲ. ಮಾನ್ನ ಸಭಾ ನಾಯಕರು ಹಿಂದೆ ವಿರೋಧ ಪಕ್ಷದಲ್ಲಿ ಕುಳಿತುಕೊಂಡಿದ್ದರು ಅವರಿಗೆ ಗೊತ್ತಿದೆ. ಕಳೆದ ಮೂರು ನಾಲ್ಕು ವರ್ಷಗಳಲ್ಲ ಈ ಸಿಇಟಿ ಯ ಸಮಸ್ಯಗಳು ಬಂದಾಗ ಪತಿಭಾರಿ ಕೂಡ ಸರ್ಕಾರ suo motto ಒಂದು ಸ್ಟೇಟ್‌ಮೆಂಟ್ ಮಾಡುತ್ತಿತ್ತು. ಆ ಸಂದರ್ಭದಲ್ಲಿ ಪತ್ರಿಕಗಳಲ್ಲಿ ಸಿಇಟಿ ಬಗ್ಗೆ ಬಂದಾಗ ತಕ್ಷಣ ಸಂಬಂಧಪಟ್ಟಂತಹ ಮಂತ್ರಿಗಳು ಅಥವಾ ಮುಖ್ಯಮಂತ್ರಿಗಳು ಸದನದಲ್ಲಿ. ಒಂದು ಸಾರ್ವಜನಿಕರಿಗೆ ಮಾಹಿತಿಯನ್ನು ಕೊಡುವಂತಹ ಒಂದು ಹೇಳಿಕೆಯನ್ನು ಕೊಡುವಂಥದು. ನಾವು ಈ ಸಾರಿ ಈ ರೀತಿಯಾಗಿ ಮಾಡಿದ್ದೇವೆ. ಖಾಸಗಿ ಮ್ಯಾನೇಜ್‌ಮೆಂಟ್‌ನಲ್ಲಿ ನಮ್ಮ ಅಲಾಟ್‌ಮೆಂಟ್‌ಗಳು ಇಷ್ಟು fee structure ಈ ರೀತಿಯಾಗಿದೆ ಎನ್ನುವಂತಹ ಮಾಹಿತಿಯನ್ನು ನಮಗೆ ಕೊಡುವಂತಹ ಕೆಲಸ ಕಾರ್ಯಗಳನ್ನು ಮಾಡಿದ್ದೋ ಇದನ್ನು ಓದುವುದಕ್ಕೆ ಮೊದಲು ಮಾನ್ಯ ಸಭಾ

ನಾಯಕರಲ್ಲಿ ತಮ್ಮ ಮುಖಾಂತರ ಮನವಿಯನ್ನು ಮಾಡುವುದೇನೆಂದರೆ, ಇಡೀ ರಾಜ್ಯದ ಹಿತದೃಷ್ಟಿಯಿಂದ ಸುಮಾರು 62,000 ವಿದ್ಯಾರ್ಥಿಗಳ ಭವಿಷ್ಯದ ದೃಷ್ಟಿಯಿಂದ ದಯವಿಟ್ಟು ಸರ್ಕಾರದ ಪರವಾಗಿ ತಾವು ಒಂದು ಸೇಟ್ಮೆಂಟ್ ಮಾಡಬೇಕು. ಇದರ ಬಗ್ಗೆ ಸ್ವಲ್ಪ ಚರ್ಚೆ ಅವಕಾಶ ಕೊಟ್ಟರೂ ಕೂಡ ಒಳ್ಳೆಯದಾಗುತ್ತದೆಂದು ಹೇಳುತ್ತಿದ್ದೇನೆ. ನಾನು ಇದರ ಬಗ್ಗೆ ಹಚ್ಚು ಮಾತನಾಡುವುದಕ್ಕೆ ಇಷ್ಟಪಡುವುದಿಲ್ಲ... ಏಕೆಂದರೆ ಈ ವಿಷಯ ಎಲ್ಲರಿಗೂ ಕೂಡ ಗೊತ್ತಿರುವಂಥದ್ದು. ಕನ್ನಡ ಪ್ರಭಾ ಪತ್ರಿಕೆಯಲ್ಲಿ ವರದಿಯಾಗಿರುವಂತಹ ವಿಚಾರವನ್ನು ಮಾತ್ರ ಓದುತ್ತೇನೆ. ಈಗಾಗಲೇ ಇರುವಂತಹ ಗೊಂದಲಗಳಿಗೆ ಮತ್ತ ಉತ್ತರಿಸಲೇ ಬೇಕಾದಂತಹ ಪ್ರಶ್ನೆಗಳನ್ನೂ ಕೂಡ ಇದನ್ನು ಫ್ಲೇಸ್ ಮಾಡುವಂತಹ ಕೆಲಸ ಕಾರ್ಯಗಳನ್ನು ಪತ್ರಿಕೆಯವರೆ ಮಾಡಿದ್ದಾರೆ. ಇವತ್ತಿನ ಪತ್ರಿಕೆಯ ಮುಖ ಪುಟದಲ್ಲಿಯೇ ಬಂದಿರುವಂಥದ್ದು.

"ಯಾವುದೇ ಶುಲ್ಕವನ್ನು ಹಚ್ಚು ಮಾಡುವುದಿಲ್ಲವೆಂದು ರಾಜಕೀಯ ಹೇಳಿಕೆಯನ್ನು ನೀಡಿದಂತಹ ರಾಜ ಸರ್ಕಾರ ಈಗ ಅಧಿಕೃತವಾಗಿ ಹೆಚ್ಚು ಶುಲ್ಕವನ್ನು ವಸೂಲು ಮಾಡುವಂತಹ ಟಿಪ್ಪಣಿಯನ್ನು ತಯಾರಿಸುತಿದೆ.

ಇದು ಪತ್ರಿಕೆಯಲ್ಲಿ ಬಂದಿರುವಂತಹ ವಿಚಾರವೇ ಹೊರತು ನಾನು ಹೇಳಿರುವಂಥದ್ದಲ್ಲ. ವಿಚಿತ್ರವೆಂದರೆ ಮೊದಲ ಹಂತದ ಪ್ರವೇಶ ಪ್ರಕ್ರಿಯೆ ಮುಗಿಯುವವರೆಗೂ ಉನ್ನತ ಶಿಕ್ಷಣ ಇಲಾಖೆ ಈ ಬಗ್ಗೆ ತಲೆ ಕೆಡಿಸಿಕೊಳ್ಳದೆ ಕುಂಭಕರ್ಣ ನಿದ್ರೆಯಲ್ಲಿದೆ. ರಾಜ್ಯ ಸರ್ಕಾರದ ಇಬ್ಬಗೆಯ ನೀತಿ ವ್ಯಾಪಕ ಟೀಕೆಗೆ ಕಾರಣವಾಗಿದೆ. ಒಂದೆಡೆ ಶುಲ್ಕ ಹೆಚ್ಚಳವಿಲ್ಲವೆಂದು ಮುಖ್ಯಮಂತ್ರಿಗಳು ಹಾಗೂ ಉನ್ನತ ಶಿಕ್ಷಣ ಸಚಿವರು ಸರ್ಕಾರಕ್ಕೆ ಶಹಭಾಷಗಿರಿ ಪಡೆದುಕೊಳ್ಳಲು ಹೇಳಿಕೆ ನೀಡುತ್ತಿದ್ದಾರೆ. ಮತ್ತೊಂದೆಡೆ ನಿಮ್ಮಿಷ್ಟದ ಶುಲ್ಕ ಭರಿಸಿಕೊಳ್ಳಿ ಎಂದು ಸರ್ಕಾರ ಮಾನ ಸಮ್ಮತಿಯನ್ನು ನೀಡುತ್ತದೆ. ಈ ಸಂಬಂಧ ವಿಧಾನ ಪರಿಷತ್ ಸದಸ್ಯರೂಬ್ಬರು ಶಿಕ್ಷಣ ಇಲಾಖೆಯನ್ನು ಸಂಪರ್ಕಿಸಿದಾಗ ಹೀಗೆ ಉತ್ತರಿಸಿ ದ್ದಾರೆ. ರಾಜ್ಯದಲ್ಲಿ ಇಂಜಿನಿಯರಿಂಗ್ ಕಾಲೇಜಗಳನ್ನು ನಡೆಸುವುದು ಕಷ್ಟವಾ ಗಿದೆ. ಹೆಚ್ಚುವರಿ ಶುಲ್ಕ ತೆಗೆದುಕೊಳ್ಳುವುದು ಅನಿವಾರ್ಯ, ಮುಖ್ಯಮಂತ್ರಿಗಳು ಮತ್ತು ಮಂತ್ರಿಗಳು ಏನು ಹೇಳಿದ್ದಾರೆ ಎಂಬ ಬಗ್ಗೆ ಇನ್ನೊಂದು ಕಡೆಯಲ್ಲಿ

ಹೇಳಲಾಗಿದೆ. ಮತ್ತೊಂದು ಕಡೆ ಒಬ್ಬ ವಿಧಾನ ಪರಿಷತ್ ಸದಸ್ಯರು ಹೇಳಿರುವಂಥದ್ದರ ಬಗ್ಗೆ ಮಾಧ್ಯಮದಲ್ಲಿ ಬಂದಿರುವಂಥದ್ದನ್ನು ನಾನು ಉಲ್ಲೇಖಿಸುತ್ತಿದ್ದೇನೆ. ಶಿಕ್ಷಣ ಇಲಾಖೆಯನ್ನು ಸಂಪರ್ಕಿಸಿದಾಗ ರಾಜ್ಯದಲ್ಲಿ ಇಂಜಿನಿಯರಿಂಗ್ ಕಾಲೇಜ್‍ಗಳನ್ನು ನಡೆಸುವುದು ಕಷ್ಟವಾಗಿದೆ. ಹೆಚ್ಚುವರಿ ಶುಲ್ಕ ತೆಗೆದುಕೊಳ್ಳುವುದು ಅನಿವಾರ್ಯ. ಈ ವಿಚಾರ ಸಚಿವರಿಗೆ ಹಾಗೂ ಸರ್ಕಾರಕ್ಕೆ ತಿಳಿದಿದ್ದರೆ ಒಂದೂವರೆ ತಿಂಗಳ ಹಿಂದೆ ಶುಲ್ಕ ಹೆಚ್ಚಳವಿಲ್ಲ ಎಂದು ಪತ್ರಿಕಾ ಗೋಷ್ಠಿ ಕರೆದು ಹೇಳಿಕೆ ನೀಡುವ ಅಗತ್ಯವೇನಿತ್ತು? ಸರ್ಕಾರ ಈ ನಿರ್ಧಾರವನ್ನು ಸ್ಪಷ್ಟಪಡಿಸಲು ಅವಕಾಶವಿತ್ತು' ಎನ್ನುವಂತಹ ಮಾತನ್ನು ಹೇಳಿದ್ದಾರೆ. ಇದರ ಜೊತೆಗೆ ನಡೆಯುತ್ತಿರುವಂತಹ ಮತ್ತೊಂದು. ಸಂಗತಿಯ ಬಗ್ಗೆ ನಾನು ಸಂಕ್ಷಿಪ್ತವಾಗಿ ತಿಳಿಸಬಯಸುತ್ತೇನೆ. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಕ್ಕೆ ಮೀಸಲಾದ ಸ್ಥಾನಗಳನ್ನು ಸರ್ಕಾರ ಭರ್ತಿ ಮಾಡುತ್ತದೆ. ಆದರೆ ಇವೊತ್ತು ಎಲ್ಲಿಯವರೆಗೆ ಎಂದರೆ ಖಾಸಗಿ ಕಾಲೇಜ್‍ಗಳವರು ಆ ವಿದ್ಯಾರ್ಥಿಗಳಿಂದ ಹೆಚ್ಚಿನ ಶುಲ್ಕವನ್ನು ವಸೂಲು ಮಾಡುವುದಲ್ಲದೆ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಇಲ್ಲಿ ಆಯ್ಕೆಯಾದಂತಹ ವಿದ್ಯಾರ್ಥಿಗಳಿಗೆ ಹೇಳಿರುವುದೇನೆಂದರೆ, ನೀವೀಗ ಶುಲ್ಕವನ್ನು ಪಾವತಿಸಿ, ಸರ್ಕಾರದಿಂದ reimburse ಮಾಡಿದ ಮೇಲೆ ನಿಮಗೆ ಆ ಹಣವನ್ನು ವಾಪಸ್ ಕೊಡುತ್ತೇವೆ ಎನ್ನುವಂತಹ ಬೆದರಿಕೆಯನ್ನು ಸಹ ಹಾಕುತ್ತಿರುವುದಾಗಿ ತಿಳಿದುಬಂದಿದೆ. ಅದರ ಬಗ್ಗೆ ಪತ್ರಿಕೆಯಲ್ಲಿ ಸುಮಾರು ಒಂದೂವರೆ ಪ್ಯಾರಾದಷ್ಟು ಮಾಹಿತಿ ಇದೆ, ಅದನ್ನೆಲ್ಲಾ ನಾನು ಈ ಸಂದರ್ಭದಲ್ಲಿ ಓದುವುದಕ್ಕೆ ಇಷ್ಟಪಡುವುದಿಲ್ಲ... ಹೀಗಾಗಿ ಅವರಲ್ಲಿ ಒಂದಷ್ಟು ಗೊಂದಲಗಳನ್ನು ಸೃಷ್ಟಿಸಿ, ಉತ್ತರಿಸಬೇಕಾದ ಪ್ರಶ್ನೆಗಳಾಗಿ ಪರಿಸ್ಥಿತಿಯನ್ನು ನಿರ್ಮಾಣ ಮಾಡಿದ್ದಾರೆ. ಇದಕ್ಕೆ ಮಾನ್ಯ ಸಚಿವರು ಸದನದಲ್ಲಿ ಉತ್ತರ ಹೇಳಿದರೆ. ಈ ಗೊಂದಲಗಳೆಲ್ಲವೂ ನಿವಾರಣೆಯಾಗಬಹುದು. ಕೌನ್ಸಿಲಿಂಗ್ನ ವೇಳಾಪಟ್ಟಿ 3 ಬಾರಿ ಬದಲಾವಣೆಯಾಗಿರುವುದಕ್ಕೆ ಕಾರಣವೇನು?

**ಡಾ ಎ.ಹಚ್.ಶಿವಯೋಗಿಸ್ವಾಮಿ:–** ಮಾನ್ಯ ಸಭಾಪತಿಯವರೇ, ಇದು ಬಹಳ ಗಂಭೀರವಾದಂತಹ ವಿಚಾರವಾಗಿರುವುದರಿಂದ ದಯಮಾಡಿ

ನಮಗೂ ಸಹ ತಾವು ಈ ವಿಚಾರದಲ್ಲಿ ಬೆಳಕನ್ನು ಚಲ್ಲುವುದಕ್ಕೆ ಅವಕಾಶ ಮಾಡಿಕೊಡಬೇಕಾಗುತ್ತದೆ. ಆದ್ದರಿಂದ ತಾವು ಈ ವಿಚಾರದ ಬಗ್ಗೆ ನಾಳೆ ಅರ್ಧ ಗಂಟೆ ಕಾಲಾವಧಿ ಚರ್ಚೆಗೆ ಅವಕಾಶ ಮಾಡಿಕೊಟ್ಟರೆ ಒಳ್ಳೆಯದು.

ಶ್ರೀ **ಎಸ್.ಆರ್.ಪಾಟೀಲ್(ಸಭಾನಾಯಕರು):–**ಮಾನ್ಯ ಸಭಾಪತಿ ಯವರೇ, ಮಾನ್ಯ ವಿರೋಧ ಪಕ್ಷದ ನಾಯಕರು ಶೂನ್ಯ ವೇಳಯಲ್ಲಿ ಈ ವಿಚಾರವನ್ನೇನು ಪ್ರಸ್ತಾಪ ಮಾಡುತ್ತಿದ್ದಾರೆ ಅದಕ್ಕೆ ಮೊದಲು ಸರ್ಕಾರದಿಂದ ಉತ್ತರ ಪಡೆದುಕೊಳ್ಳಲಿ.. ಅನಂತರ ಆ ವಿಚಾರದ ಬಗ್ಗೆ ಮಾನ್ಯ ಸದಸ್ಯರು ಬೇರೆ ನಿಯಮಗಳ ಅಡಿಯಲ್ಲಿ ಚರ್ಚೆಗೆ ಅವಕಾಶವನ್ನು ಪಡೆದುಕೂಳ್ಳಬಹು ದಾಗಿದೆ. ಈಗ ಮಧ್ಯದಲ್ಲಿ ಮಾನ್ಯ ವಿರೋಧ ಪಕ್ಷದ ನಾಯಕರು ಈ ವಿಚಾರ ವನ್ನು ವಿತ್‌ಡ್ರಾ ಮಾಡಿಕೂಳ್ಳುತ್ತಾರೆಯೇ? ಬೇರೆ. ನಿಯಮದ ಅಡಿಯಲ್ಲಿ ಅವರು ಚರ್ಚೆಗೆ ಅವಕಾಶ ಕೋರುವುದಾದರೆ ನಮ್ಮದೇನೂ ಅಭ್ಯಂತರವಿಲ್ಲ.

ಶ್ರೀ **ಯಂ.ಸಿ.ನಾಣಯ್ಯ:–** ಮಾನ್ಯ ಸಭಾಪತಿಯವರೇ, ನಾವೆಲ್ಲಾ ಈ ವಿಚಾರವನ್ನು ಪ್ರಸ್ತಾಪ ಮಾಡಬಯಸಿದ್ದೇವೆ. ಕೆಲವು ಸದಸ್ಯರು ಈಗಾಗಲೇ ನೋಟೀಸ್‌ನ್ನು ಕೊಟ್ಟಿರುವಂಥದ್ದಿದೆ. ಈಗ ಮಾನ್ಯ ವಿರೋಧ ಪಕ್ಷದ ನಾಯಕರು ಈ ಏಚಾರವನ್ನು ಶೂನ್ಯವೇಳೆಯಲ್ಲಿ ಪ್ರಸ್ತಾಪ ಮಾಡುತ್ತಿದ್ದಾರೆ. ನಾಳೆ ಅಥವಾ ನಾಡಿದ್ದು ನಿಯಮ 68ರ ಅಡಿಯಲ್ಲಿ ಈ ವಿಚಾರವನ್ನು ಪ್ರಸ್ತಾಪಿಸಲು ಅವರು ಅವಕಾಶ ಕೋರುವುದು ಒಳ್ಳೆಯದು.

ಶ್ರೀ **ಎಸ್.ಆರ್.ಪಾಟೀಲ್(ಸಭಾನಾಯಕರು):–** ಮಾನ್ಯ ಸಭಾಪತಿಯ ವರೇ, ನಿಯಮ 68ರ ಅಡಿಯಲ್ಲಿ ತಾವು ಚರ್ಚೆಗೆ ಅವಕಾಶ ಮಾಡಿ ಕೊಡು ವುದಾದರೆ ನಮ್ಮದೇನೂ ಅಭ್ಯಂತರವಿಲ್ಲ. ಆದರೆ ಶೂನ್ಯವೇಳಯಲ್ಲಿ ಪ್ರಸ್ತಾಪ ಮಾಡಿರುವ ಏಚಾರವನ್ನು ಮಾನ್ಯ ವಿರೋಧ ಪಕ್ಷದ ನಾಯಕರು withdraw ಮಾಡುತ್ತಾರೆಯೇ?

ಶ್ರೀ **ಡಿ.ವಿ.ಸದಾನಂದಗೌಡ:–** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಸಭಾನಾಯಕರು ಹೇಳಿದ್ದನ್ನು ನಾನು ಒಪ್ಪಿಕೊಳ್ಳುತ್ತೇನೆ. ಏಕೆಂದರೆ ಸದನದ ಕಾರ್ಯಕಲಾಪಗಳು ನಿಯಮಾವಳಿಗಳ ಚೌಕಟ್ಟಿನಲ್ಲಿಯೇ ಚರ್ಚೆಯಾಗಲಿ

ಎನ್ನುವುದು ಅವರ ಅಪೇಕ್ಷೆಯಾಗಿದೆ. ನಾಳೆ ಈ ವಿಷಯದ ಬಗ್ಗೆ ಅರ್ಧ ಗಂಟೆ ಕಾಲಾವಧಿ ಚರ್ಚೆಗೆ ಅಥವಾ ನಿಯಮ 68ರ ಅಡಿಯಲ್ಲಿ ಚರ್ಚೆ ಮಾಡಲು ತಾವು ಅದೇಶ ಮಾಡಿ, ಈ ವಿಷಯವನ್ನು ನಾಳೆ ಕೈಗೆತ್ತಿಕೊಳ್ಳಲಾಗುತ್ತದೆ ಎನ್ನುವುದಾದರೆ ನಾನು ಇವತ್ತು ಈ ವಿಷಯವನ್ನು withdraw ಮಾಡುವುದಕ್ಕೆ ತಯಾರಿದ್ದೇನೆ. ನಿಯಮ 68ರ ಅಡಿಯಲ್ಲಿ ಪ್ರಸ್ತಾಪ ಮಾಡಲು ನಾವು ತಮಗೆ ನೋಟೀಸ್ ಕೊಡುತ್ತೇವೆ. ಪ್ರಶ್ನೋತ್ತರ ಅವಧಿ ಪೂರ್ಣಗೊಂಡ ತಕ್ಷಣ ನಿಯಮ 68ರ ಅಡಿಯಲ್ಲಿ ಈ ವಿಚಾರದ ಬಗ್ಗೆ ಸುದೀರ್ಘವಾದ ಚರ್ಚೆಗೆ ಅವಕಾಶ ಮಾಡಿಕೂಡಬೇಕೆಂಬುದು ನಮ್ಮ ವಿನಂತಿಯಾಗಿದೆ.

**ಉಪ ಸಭಾಪತಿಯವರು:-** ಇದನ್ನು ವಿತ್‌ಡ್ರಾ ಮಾಡಿ ನೋಟೀಸ್ ಕೊಡಿ. ಪ್ರಶ್ನೋತ್ತರ ಅವಧಿ ಮುಗಿದ ನಂತರ ನಿಯಮ 68ರ ಅಡಿಯಲ್ಲಿ ಈ ವಿಷಯದ ಬಗ್ಗೆ ಚರ್ಚಿಸಲು ನಾಳೆಗೆ ಅವಕಾಶ ಮಾಡಿಕೊಡಲಾಗುತ್ತದೆ.

ಶ್ರೀ **ಯಂ.ಸಿ.ನಾಣಯ್ಯ:-** ಮಾನ್ಯ ಸಭಾಪತಿಯವರೇ, ಈ ಸಂದರ್ಭದಲ್ಲಿ ನಾನು ಒಂದು ಮಾತನ್ನು ಹೇಳಬಯಸುತ್ತೇನೆ. Now, this it the prerogative of the chairman ತಮ್ಮ prerogative ಇದೆ. ಈ ವಿಚಾರವನ್ನು ಸನ್ಮಾನ್ಯ ವಿರೋಧ ಪಕ್ಷದ ನಾಯಕರು ಶೂನ್ಯ ವೇಳೆಯಲ್ಲಿ ಪ್ರಸ್ತಾಪ ಮಾಡಿದ್ದಾರೆ. ಆದರೆ ಈ ವಿಷಯದ ಮೇಲಿನ ಚರ್ಚೆಯಲ್ಲಿ ಹೆಚ್ಚಿನ ಸದಸ್ಯರು ಭಾಗವಹಿಸಲು ಅವಕಾಶ ಬೇಕಾಗಿರುವುದರಿಂದ ಈ ವಿಷಯವನ್ನು ನಿಯಮ 68ರ ಅಡಿಯಲ್ಲಿ ಪ್ರಸ್ತಾಪ ಮಾಡಲು ಅವಕಾಶ ನೀಡಿ ತಾವೇ ಒಂದು ಆದೇಶವನ್ನು ಮಾಡಿಬಿಡಿ. ನಾವೆಲ್ಲರೂ ಆ ಚರ್ಚೆಯಲ್ಲ ಭಾಗವಹಿಸುತ್ತೇವೆ.

ಶ್ರೀ **ಎಸ್.ಆರ್.ಪಾಟೀಲ್(ಸಭಾನಾಯಕರು):-** ಮಾನ್ಯ ನಾಣಯ್ಯನವರೇ, ಈಗಾಗಲೇ ಸನ್ಮಾನ್ಯ ಉಪ ಸಭಾಪತಿಯವರು ತಮ್ಮ ಪೀಠದಿಂದ ಆ ಬಗ್ಗೆ ಆದೇಶವನ್ನು ಮಾಡಿಬಿಟ್ಟಿದ್ದಾರೆ.

ಶ್ರೀ **ಯಂ.ಸಿ.ನಾಣಯ್ಯ:-** ಹಾಗಿದ್ದರೆ ಪುನಃ ಅವರ ನೋಟೀಸ್ ಬೇಕಾಗಿಲ್ಲ.

**ಶ್ರೀ ಡಿ.ವಿ.ಸದಾನಂದಗೌಡ:-** ಸನ್ಮಾನ್ಯ ಸಭಾಪತಿಯವರೇ, ಮತ್ತೆ ನೋಟೀಸ್ ಕೊಡುವಂತಹ ಅವಶ್ಯಕತೆ ಇಲ್ಲವೆನ್ನುವಂತಹ ವಿಚಾರವನ್ನು ಮಾನ್ಯ ಸಭಾನಾಯಕರು ಒಪ್ಪಿದ್ದಾರೆ. ನಮ್ಮ ವಿರೋಧ ಪಕ್ಷದ ಸದಸ್ಯರು ಸಹ ಒಪ್ಪಿ ಕೊಂಡಿದ್ದಾರೆ. ನಾಳಿನ ಕಾರ್ಯಕಲಾಪಗಳ ಪಟ್ಟಿಯಲ್ಲಿ ಅದನ್ನು ಸೇರಿಸಿ ಕೊಂಡರೆ ಪ್ರಶ್ನೋತ್ತರ ಅವಧಿ ಪೂರ್ಣಗೊಂಡ ನಂತರ ನಾವು ಈ ಚರ್ಚೆ ಯನ್ನು ಪ್ರಾರಂಭ ಮಾಡುತ್ತೇವೆ.

**ಉಪ ಸಭಾಪತಿಯವರು:-**ಈಗ ಶೂನ್ಯವೇಳೆಯ ಮುಂದಿನ ವಿಷಯಕ್ಕೆ ಹೋಗೋಣ.

**ಆ) ವಿಷಯ: ಧ್ವನಿವರ್ಧಕದ ಮೂಲಕ ರಾಷ್ಟ್ರಗೀತೆ ಹಾಗೂ ನಾಡಗೀತೆಯನ್ನು ಕೇಳಿಸುತ್ತಿರುವ ಆಂಗ್ಲ ಮಾಧ್ಯಮ ಶಾಲೆಯಲ್ಲಿ ಅಪ್ಪಿತಪ್ಪಿ ಅದನ್ನನುಸರಿಸಿ ಉಚ್ಚರಿಸಿದ ವಿದ್ಯಾರ್ಥಿಗಳಿಗೆ ಶಿಕ್ಷಕರು ಬೆತ್ತದ ರುಚಿ ತೋರಿಸುತ್ತಿರುವ ಬಗ್ಗೆ.**

**ಶ್ರೀ ಸೋಮಣ್ಣ ಮ. ಬೇವಿನಮರದ(ವಿಧಾನಸಭಾ ಕ್ಷೇತ್ರ:-** ಸನ್ಮಾನ್ಯ ಸಭಾಪತಿಯವರೇ, ಶೂನ್ಯವೇಳೆಯಲ್ಲಿ ಅವಕಾಶ ಕೋರಿ ಕಳುಹಿಸಿಕೊಟ್ಟಿದ್ದ ವಿಷಯವನ್ನು ಪ್ರಸ್ತಾಪಿಸಲು ನನಗೆ ಅವಕಾಶ ಮಾಡಿಕೊಟ್ಟಿದ್ದಕ್ಕಾಗಿ ಮೊದಲು ತಮಗೆ ಧನ್ಯವಾದಗಳನ್ನು ಸಲ್ಲಿಸುತ್ತೇನೆ. ಹಾವೇರಿ ಜಿಲ್ಲೆ ಬ್ಯಾಡಗಿ ಪಟ್ಟಣದ ಸೆಂಟ್ ವಿಯನ್ನಾ ಆಂಗ್ಲ ಮಾಧ್ಯಮ ಶಾಲೆಯಲ್ಲಿ ವಿದ್ಯಾರ್ಥಿಗಳಿಂದ ರಾಷ್ಟ್ರ ಗೀತೆ ಹಾಗೂ ನಾಡಗೀತೆ ಹೇಳಿಸುವುದನ್ನು ಸ್ಥಗಿತಗೊಳಿಸಿ, ಧ್ವನಿವರ್ಧಕದ ಮೂಲಕ ರಾಷ್ಟ್ರಗೀತೆ ಹಾಗೂ ನಾಡಗೀತೆಯನ್ನು ಮಕ್ಕಳಿಗೆ ಕೇಳಿಸಲಾಗುತ್ತಿದೆ. ಅಪ್ಪಿತಪ್ಪಿ ವಿದ್ಯಾರ್ಥಿಗಳು ರಾಷ್ಟ್ರಗೀತೆಯನ್ನು ಅನುಸರಿಸಿ ಉಚ್ಚರಿಸಿದರೆ ಆ ರೀತಿ ಉಚ್ಚರಿಸುವ ವಿದ್ಯಾರ್ಥಿಗಳಿಗೆ ಅಲ್ಲಿನ ಶಿಕ್ಷಕಿಯವರು ಬೆತ್ತದ ರುಚಿಯನ್ನು ತೋರಿಸುತ್ತಿದ್ದಾರೆ. ವಿದ್ಯಾರ್ಥಿಗಳಲ್ಲಿ ರಾಷ್ಟಾಭಿಮಾನ ಜಾಗೃತಗೊಳಿಸುವ ಶಿಕ್ಷಣದ ಉದ್ದೇಶವನ್ನೇ ವಿಫಲಗೊಳಿಸಲು ಈ ಖಾಸಗಿ ಶಿಕ್ಷಣ ಸಂಸ್ಥೆಗಳು ಸರ್ಕಾರದ ಆದೇಶವನ್ನು ಸಹ ಉಲ್ಲಂಘಿಸುತ್ತಿವೆ. ಇದೇ ರೀತಿ ಹಿರೇಕರೂರು ತಾಲ್ಲೂಕಿನ ಶಾಲೆಯೊಂದರಲ್ಲಿ ವಿದ್ಯಾರ್ಥಿನಿಯರಿಗೆ ಹಣೆಗೆ ಕುಂಕುಮ ಹಚ್ಚ

ದಂತೆ ಹಾಗೂ ಬಳೆಗಳನ್ನು ತೊಡದಂತೆ ನಿರ್ಬಂಧವನ್ನು ವಿಧಿಸಿದ್ದಾರೆ. ಅನೇಕ ಕಡೆಗಳಲ್ಲಿ ಇಂತಹ ಪ್ರಕರಣಗಳು ನಡೆಯುತ್ತಿವೆ.

ರಾಷ್ಟ್ರಾಭಿಮಾನ ಜಾಗೃತಗೊಳಿಸಬೇಕಾದಂತಹ ಶಾಲೆಗಳಲ್ಲಿ ಈ ರೀತಿ ರಾಷ್ಟ್ರ ವಿರೋಧಿ. ಸಂಸ್ಕಾರ ವಿರೋಧಿ ನಡವಳಿಕೆಗಳಿಂದ ನಮ್ಮ ಸಂಸ್ಕೃತಿಯನ್ನು ಹಾಳು ಮಾಡುವಂತಹ ಶಾಲೆಗಳ ಮುಖ್ಯಸ್ಥರಿಗೆ ಹಾಗೂ ಆಡಳಿತ ವರ್ಗಕ್ಕೆ ಕಡಿವಾಣ ಹಾಕಬೇಕೆಂದು ನಾನು ತಮ್ಮ ಮೂಲಕ ಸರ್ಕಾರವನ್ನು ವಿನಂತಿಸುತ್ತಿದ್ದು. ಸಾರ್ವಜನಿಕ ಮಹತ್ವವುಳ್ಳ ಈ ವಿಷಯದ ಬಗ್ಗ ನಾನು ಸರ್ಕಾರದಿಂದ ಉತ್ತರವನ್ನು ಬಯಸುತ್ತೇನೆ.

**ಶ್ರೀ ಎಸ್.ಆರ್.ಪಾಟೀಲ್(ಸಭಾನಾಯಕರು):–** ಮಾನ್ಯ ಸಭಾಪತಿಯವರೇ, ಸಂಬಂಧಪಟ್ಟ ಸಚಿವರಿಂದ ಈ ವಿಷಯದ ಬಗ್ಗೆ ಉತ್ತರವನ್ನು ಕೊಡಿಸಲಾಗುತ್ತದೆ.

**ಇ) ವಿಷಯ: ಬಿಜಾಪುರ ಜಿಲ್ಲೆಯ ಸಿಂದಗಿ ನಗರದಲ್ಲಿ / ನಿರ್ಮಾಣವಾಗುತ್ತಿರುವ ತಾಲ್ಲೂಕು ಕ್ರೀಡಾಂಗಣ ಕಾಮಗಾರಿ ನೆನೆಗುದಿಗೆ ಬಿದ್ದಿರುವ ಬಗ್ಗೆ.**

**ಶ್ರೀ ಅರಣ ಶಹಾಪುರ(ಶಿಕ್ಷಕರ ಕ್ಷೇತ್ರ):–** ಸನ್ಮಾನ್ಯ ಸಭಾಪತಿಯವರೇ, ಬಿಜಾಪುರ ಜಿಲ್ಲೆಯ ಸಿಂದಗಿ ನಗರದಲ್ಲಿ ನಿರ್ಮಾಣವಾಗುತ್ತಿರುವ ತಾಲ್ಲೂಕು ಕ್ರೀಡಾಂಗಣ ಕಾಮಗಾರಿ ನೆನೆಗುದಿಗೆ ಬಿದ್ದಿರುವುದು ಇಂದಿನ ಬಿಜಾಪುರ ವಿಜಯ ಕರ್ನಾಟಕ ಆವೃತ್ತಿಯಲ್ಲಿ ಪ್ರಕಟವಾಗಿದೆ. ಹತ್ತಾರು ವರ್ಷಗಳ ಮೊದಲೇ ಕ್ರೀಡಾಂಗಣಕ್ಕಾಗಿ ಮಂಜೂರಾಗಿದ್ದ ಸ್ಥಳದಲ್ಲಿ ಇರುವ ಅತಿಕ್ರಮಣ ತೆರವುಗೊಳಿಸುವ ಕುರಿತು ವಿಧಾನ ಪರಿಷತ್‌ನಲ್ಲಿ ಚರ್ಚೆಯಾದ ಪರಿಣಾಮ ಅಲ್ಲಿರುವ ಅತಿಕ್ರಮಣ ತೆರವುಗೊಳಿಸಿ ಕ್ರೀಡಾಂಗಣಕ್ಕಾಗಿ ಒದಗಿಸಿದ ಸ್ಥಳವನ್ನು ಯುವಜನ ಸೇವಾ ಕ್ರೀಡಾ ಮತ್ತು ಇಲಾಖೆ ಸುಪರ್ದಿಗೆ ತೆಗೆದುಕೊಂಡು ಕ್ರೀಡಾಂಗಣದ ಕಾಮಗಾರಿಗಳನ್ನು ಆರಂಭಿಸಿತ್ತು. ಕಳದ ಜನವರಿ 26ರ ತಾಲ್ಲೂಕು ಆಡಳಿತದ ಕಾರ್ಯಕ್ರಮವು ಸಮತಟ್ಟುಗೊಳಿಸಿದ ಕ್ರೀಡಾಂಗಣದಲ್ಲಿಯೇ ನಡೆದಿತ್ತು. ಈಗ ಕಾಮಗಾರಿ ಕಾರ್ಯ ನೆನೆಗುದಿಗೆ ಬಿದ್ದಿದ್ದು ಕ್ರೀಡಾಭಿಮಾನಿಗಳನ್ನು ಆತಂಕಕ್ಕೀಡು ಮಾಡಿದೆ. ಆದ್ದರಿಂದ ಕಾಮಗಾರಿ ನಡೆಸಲು

ಇರುವ ತೊಂದರೆಗಳನ್ನು ನಿವಾರಿಸಿ, ಶೀಘ್ರವಾಗಿ ಕ್ರೀಡಾಂಗಣ ನಿರ್ಮಾಣ ಕಾರ್ಯ ಕೈಗೊಳ್ಳಬೇಕೆಂದು ನಾನು ತಮ್ಮ ಮೂಲಕ ಸರ್ಕಾರವನ್ನು ಒತ್ತಾಯಿಸುತ್ತಿದ್ದೇನೆ.

**ಶ್ರೀ ಎಸ್.ಆರ್.ಪಾಟೀಲ್:(ಸಭಾನಾಯಕರು):–** ಮಾನ್ಯ ಅರುಣ ಶಹಾಪುರ ಅವರು ಬಿಜಾಪುರ ಜಿಲ್ಲೆಯ ಸಿಂದಗಿ ನಗರದವರಾಗಿದ್ದು ಅಲ್ಲಿನ ಕ್ರೀಡಾಂಗಣದ ಬಗ್ಗೆ ವಿಷಯವನ್ನು ಪ್ರಸ್ಥಾಪಿಸಿದ್ದಾರೆ. ಸಂಬಂಧಪಟ್ಟ ಸಚಿವರಿಂದ ನಾಳ ಉತ್ತರವನ್ನು ಕೊಡಿಸಲಾಗುತ್ತದೆ.

**ಈ) ವಿಷಯ: ಶಿಂಷಾ ನದಿಗೆ ಅಡ್ಡಲಾಗಿ ನಿರ್ಮಾಣ ಮಾಡಿರುವ ಸೇತುವೆಯು ಶಿಥಿಲಗೊಂಡು ದಿನಾಂಕ:09–11–2011. ರಂದು ನದಿಯಲ್ಲಿ ಕೊಚ್ಚಿ ಹೋಗಿರುವ ಬಗ್ಗೆ.**

**ಶ್ರೀ ಬಿ.ರಾಮಕೃಷ್ಣ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–** ಸನ್ಮಾನ್ಯ ಸಭಾಪತಿಯವರೇ, ಮಂಡ್ಯ ಜಿಲ್ಲೆ ಮದ್ದೂರು ತಾಲ್ಲೂಕು ವೈದ್ಯನಾಥಪುರ ಹಾಗೂ ಕೆ.ಹೊನ್ನಲಗೆರೆ ಮತ್ತು ಇತರೆ 75 ಗ್ರಾಮಗಳಿಗೆ ಸಂಪರ್ಕ ಕಲ್ಪಿಸುವುದಕ್ಕಾಗಿ ಶಿಂಷಾ ನದಿಗೆ ಅಡ್ಡಲಾಗಿ ಸೇತುವೆ ನಿರ್ಮಾಣ ಮಾಡಿದ್ದು, ಸದರಿ ಸೇತುವೆಯು ಶಿಥಿಲಗೊಂಡು ದಿನಾಂಕ: 09–11–2011 ರಂದು ನದಿಯಲ್ಲಿ ಕೊಚ್ಚಿ ಹೋಗಿರುತ್ತದೆ. ಸದರಿ ಸೇತುವೆಯನ್ನು ನಿರ್ಮಿಸಿ ಸಾರ್ವಜನಿಕರಿಗೆ ಅನುಕೂಲ ಮಾಡಿಕೊಡುವಂತೆ ಹಿಂದಿನ ಮಾನ್ಯ ಮುಖ್ಯಮಂತ್ರಿಗಳನ್ನು ಹಾಗೂ ಮಾನ್ಯ ಲೋಕೋಪಯೋಗಿ ಸಚಿವರಿಗೆ ಹಲವಾರು ಬಾರಿ ಪತ್ರ ಮುಖಾಂತರ ಮತ್ತು 3 ವರ್ಷಗಳಿಂದ ಸದನದಲ್ಲಿ ಪ್ರಸ್ತಾಪಿಸಿರುವ ಮೇರೆಗೆ ಕಳೆದ ವರ್ಷದ ಆಯವ್ಯಯದಲ್ಲಿ ₹ 17.55 ಕೋಟಿಗಳನ್ನು ನೀಡಿ ಅನುಷ್ಠಾನಗೊಳಿಸಲು ಸಚಿವ ಸಂಪುಟದಲ್ಲಿ ಅನುಮೋದಿಸಿಕೊಂಡು ಟೆಂಡರ್ ಪ್ರಕ್ರಿಯೆಯಲ್ಲಿದ್ದು, ಟೆಂಡರ್‌ನಲ್ಲಿ ಯಾವ ಗುತ್ತಿಗೆದಾರರು ಭಾಗವಹಿಸಿಲ್ಲವಾದ್ದರಿಂದ ಮರು ಟೆಂಡರ್ ಕರೆದು ಕಾಮಗಾರಿಯನ್ನು ಅನುಷ್ಠಾನಗೊಳಿಸಲಾಗುವುದೆಂದು ಕಳದ ಸದನದಲ್ಲಿ ಮಾನ್ಯ ಲೋಕೋಪಯೋಗಿ ಸಚಿವರು ತಿಳಿಸಿದರು. ಆದಾಗ್ಯೂ ಇದುವರೆವಿಗೂ ಕಾಮಗಾರಿಯನ್ನು ಪ್ರಾರಂಭಿಸಿರುವುದಿಲ್ಲ. ಆದ್ದ

ರಿಂದ ಇಲ್ಲಿನ ಸಾರ್ವಜನಿಕರಿಗೆ. ಮದ್ದೂರು ತಾಲ್ಲೂಕು ಕೇಂದ್ರಕ್ಕೆ ಹೋಗಿ ಬರಲು ತೊಂದರೆಯಾಗಿರುವುದರಿಂದ ಕಾಮಗಾರಿಯನ್ನು ತುರ್ತಾಗಿ ಪ್ರಾರಂಭಿಸಲು ಕ್ರಮ ಕೈಗೊಳ್ಳುವಂತೆ ತಮ್ಮ ಮೂಲಕ ಸರ್ಕಾರವನ್ನು ಒತ್ತಾಯಪಡಿಸುತ್ತಿದ್ದೇನೆ.

**ಶ್ರೀ ಎಸ್.ಆರ್.ಪಾಟೀಲ್:(ಸಭಾನಾಯಕರು):–** ಲೋಕೋಪಯೋಗಿ ಸಚಿವರಿಂದ ನಂತರ ಉತ್ತರವನ್ನು ಕೊಡಿಸಲಾಗುತ್ತದೆ.

**ಶ್ರೀ ಎಸ್.ಆರ್.ಪಾಟೀಲ್(ಸಭಾ ನಾಯಕರು):–** ಮಾನ್ಯ ಸಭಾಪತಿಯವರೇ, ಇದಕ್ಕೆ ಮಾನ್ಯ ಲೋಕೋಪಯೋಗಿ ಸಚಿವರಿಂದ ಉತ್ತರ ಕೊಡಿಸುತ್ತೇನೆ.

**ಶ್ರೀ ಬಿ.ರಾಮಕೃಷ್ಣ–** ಮಾನ್ಯ ಸಭಾಪತಿಯವರೇ, ಶೂನ್ಯ ವೇಳೆಯಲ್ಲಿ ಪ್ರಸ್ತಾಪ ಮಾಡಿರುವಂತಹ ವಿಷಯಗಳಿಗೆ ಸರ್ಕಾರ ಈ ರೀತಿ ಉತ್ತರ ಕೊಡಿಸುತ್ತೇನೆಂದು ಹೇಳುವುದಾದರೆ ಶೂನ್ಯ ವೇಳೆ ಏಕೆ ಬೇಕು?

**ಶ್ರೀ ಎಸ್.ಆರ್.ಪಾಟೀಲ್:–** ಮಾನ್ಯ ಸಭಾಪತಿಯವರೇ, ಶೂನ್ಯವೇಳೆಯಲ್ಲಿ ಪ್ರಸ್ತಾಪ ಮಾಡಿದಂತಹ ಎಷಯಕ್ಕೆ ಸರ್ಕಾರಕ್ಕೆ ಉತ್ತರ ಕೊಡಲು ಮೂರು ದಿವಸಗಳವರೆಗೆ ಕಾಲಾವಕಾಶವಿದೆ. ಈ ರೀತಿ ಇರುವಾಗ ಮಾನ್ಯ ಸದಸ್ಯರು ಶೂನ್ಯವೇಳ ಏಕೆ ಬೇಕು ಎಂದು ಕೇಳಿದರೆ ಹೇಗೆ?

**ಶ್ರೀ ಬಿ.ರಾಮಕೃಷ್ಣ:–** ಮಾನ್ಯ ಸಭಾಪತಿಯವರೇ, ನಾನು ಈ ಪ್ರಶ್ನೆಯನ್ನು ಕಳೆದ ಮೂರು ವರ್ಷದಿಂದಲೂ ಕೇಳುತ್ತಿದ್ದೇನೆ.

**ಶ್ರೀ ಎಸ್.ಆರ್.ಪಾಟೀಲ್:–** ಮಾನ್ಯ ಸಭಾಪತಿಯವರೇ, ನಾವೇ ರಚಿಸಿರುವಂತಹ ನಿಯಮಾವಳಿ ಪಕಾರ ನಡೆದುಕೊಳ್ಳಬೇಕೆಂದು ಮಾನ್ಯ ಸದಸ್ಯರಿಗೆ ಆದೇಶ ಮಾಡಿ. ಶೂನ್ಯ ವೇಳೆಯಲ್ಲಿ ಪ್ರಸ್ತಾಪ ಮಾಡುವುದರ ಬಗ್ಗೆ ಮಾನ್ಯ ಸದಸ್ಯರಿಗೆ ತಿಳಿದಿಲ್ಲವೆಂದರೆ ನಾನೇನು ಮಾಡಲಿ? ಇದು ದುರಂತದ ಸಂಗತಿ.

**ಉಪ ಸಭಾಪತಿಯವರು:–** ವಿಷಯ ಇಲ್ಲಿಗೆ ಸಾಕು ಮಾಡಿ. ಈಗ ಶೂನ್ಯವೇಳೆಯಲ್ಲಿ ಒಂದೇ ವಿಷಯಕ್ಕೆ ಮಾನ್ಯ ಆರ್.ವಿ.ವೆಂಕಟೇಶ್ ಮತ್ತು ಕ್ಯಾಪ್ಟನ್ ಗಣೇಶ ಕಾರ್ಣಿಕ್ ಇಬ್ಬರೂ ನೋಟೀಸ್ ನೀಡಿದ್ದಾರೆ.

**ಉ) ವಿಷಯ;– ಬೆಂಗಳೂರು ನಗರದ ಪರಪ್ಪನ ಅಗ್ರಹಾರ ಸಮೀಪದ ಹೊಸ ರೋಡ್ ಜಂಕ್ಷನ್‌ಲ್ಲಿ ಸೋಮವಾರ ರಾತ್ರಿ ಚಾಲಕನ ನಿರ್ಲಕ್ಷ್ಯತನದಿಂದ ಪಾದಚಾರಿಗಳ ಮಾರ್ಗಕ್ಕೆ ವಾಹನವನ್ನು ನುಗ್ಗಿಸಿರುವುದರ ಪರಿಣಾಮವಾಗಿ ನಾಲ್ಕು ಜನಪಾದಚಾರಿಗಳು ಬಲಿಯಾಗಿರುವ ಘಟನೆಯ ಬಗ್ಗೆ.**

**ಶ್ರೀ ಆರ್.ವಿ.ವೆಂಕಟೇಶ್ (ಸರ್ಕಾರಿ ಮುಖ್ಯ ಸಚೇತಕರು):–** ಸನ್ಮಾನ್ಯ ಸಭಾಪತಿಯವರೇ, ಬೆಂಗಳೂರು ನಗರದ ಪರಪ್ಪನ ಅಗ್ರಹಾರ ಸಮೀಪದ ಹೊಸ ರೋಡ್ ಜಂಕ್ಷನ್‌ನಲ್ಲಿ ಸೋಮವಾರ ರಾತ್ರಿ ಚಾಲಕನ ನಿರ್ಲಕ್ಷ್ಯತನ ದಿಂದ ಪಾದಚಾರಿಗಳ ಮಾರ್ಗಕ್ಕೆ ವಾಹನವನ್ನು ನುಗ್ಗಿಸಿರುವುದರ ಪರಿಣಾಮ ವಾಗಿ ನಾಲ್ಕು ಜನ ಪಾದಚಾರಿಗಳು ಬಲಿಯಾಗಿರುವ ಘಟನೆಯ ವಿಚಾರವು ಸಾರ್ವಜನಿಕ ಮಹತ್ವದ ವಿಷಯವಾಗಿದ್ದು, ಈ ವಿಷಯವನ್ನು ಶೂನ್ಯವೇಳೆ ಯಲ್ಲಿ ಪ್ರಸ್ತಾಪಿಸಲು ನಾನು ಕೋರುತ್ತೇನೆ.

ಬೊಮ್ಮನಹಳ್ಳಿ ನಗರ ಸಭೆ ಮಾಜಿ ಅಧ್ಯಕ್ಷ ಕೃಷ್ಣಪ್ಪ ಉರುಫ್ ಬಾರ್ ಕೃಷ್ಣಪ್ಪ ಅವರು ಕಂಠಪೂರ್ತಿಯಾಗಿ ಕುಡಿದು ಅವರಿಗೆ ಸೇರಿದ ಎಸ್‌ಯುವಿ ಲ್ಯಾಂಡ್ ರೋವರ್ ವಾಹನವನ್ನು ವಾಹನವನ್ನು ಅಡ್ಡಾದಿಡ್ಡಿಯಾಗಿ ಅತಿವೇಗ ವಾಗಿ ಚಲಿಸಿದರ ಪರಿಣಾಮವಾಗಿ ಪಾದಚಾರಿಯ ಮಾರ್ಗಕ್ಕೆ ನುಗ್ಗಿ ಸಂಭವಿ ಸಿದ ಅಪಘಾತದಲ್ಲಿ ಮಹಿಳೆಯರು ಸೇರಿದಂತೆ ನಾಲ್ಕು ಮಂದಿ ಮೃತಪಟ್ಟು ಇನ್ನು ಆರು ಮಂದಿಗೆ ತೀವ್ರತರನಾದ ಗಾಯವಾಗಿರುತ್ತದೆ. ಇವರನ್ನು ಸಮೀ ಪದ ಆಸ್ಪತ್ರೆಗೆ ಸೇರಿಸಿ ಚಿಕಿತ್ಸೆಯನ್ನು ನೀಡಲಾಗುತ್ತಿರುತ್ತದೆ ಎಂದು ಪತ್ರಿಕಾ ವರದಿಯಿಂದ ತಿಳಿದುಬಂದಿರುತ್ತದೆ. ಚಿಕ್ಕ ಚಿಕ್ಕ ರಸ್ತೆಯಲ್ಲಿರುವ ಪಾದಚಾರಿ ಮಾರ್ಗದಲ್ಲಿ ಅತೀ ದೊಡ್ಡ ವಾಹನವಾದ ಲ್ಯಾಂಡ್ ರೋವರ್ ವಾಹನವನ್ನು ಅಡ್ಡಾದಿಡ್ಡಿ ಚಾಲನೆಯನ್ನು ಮಾಡಿದಾಗ ಅವರ ನಿಯಂತ್ರಣಕ್ಕೆ ಸಿಗದಿರುವ ಕಾರಣ ಪಾದಚಾರಿ ಮಾರ್ಗದಲ್ಲಿ ತರಕಾರಿ ವ್ಯಾಪಾರಿಗಳು ಹಾಗೂ ತರಕಾರಿ

ಕೊಳ್ಳಲು ನಿಂತಿದ್ದ ಗಾಹಕರು ಸಾರ್ವಜನಿಕರುಗಳಿಗೆ ಗುದ್ದಿದ ಪರಿಣಾಮದಿಂದ ಈ ಅವಘಡವು ಸಂಭವಿಸಿದೆ.

ಈ ರೀತಿಯ ಚಾಲಕರುಗಳ ನಿರ್ಲಕ್ಷತನದಿಂದ ಯಾವುದೇ ತಪ್ಪನ್ನು ಮಾಡದ ಅಮಾಯಕರು ಬಲಿಯಾಗುತ್ತಿರುವುದು ದುಃಖಕರವಾದ ವಿಚಾರವಾಗಿದೆ. ಈ ರೀತಿಯ ದುರ್ಘಟನೆಗಳು ಪುನರಾವರ್ತನೆಯಾಗದಂತೆ ತಡೆಯಲು ತಪ್ಪಿತಸ್ಥ ಚಾಲಕರ ವಿರುದ್ಧ ತೀವ್ರಕರನಾದ ಕಾನೂನಿನ ಕ್ರಮವನ್ನು ತೆಗೆದುಕೊಂಡು ಈ ದುರ್ಘಟನೆಯಿಂದ ಬಲಿಯಾದ ಮತ್ತು ಗಾಯಗೊಂಡಿರುವ ಪಾದಚಾರಿಗಳು ಹಾಗು ಸಾರ್ವಜನಿಕರಿಗೆ ಸೂಕ್ತ ಪರಿಹಾರವನ್ನು ನೀಡಬೇಕೆಂದು ತಮ್ಮ ಮೂಲಕ ಸರ್ಕಾರವನ್ನು ಒತ್ತಾಯಿಸುತ್ತೇನೆ.

**ಶ್ರೀ ಯಂ.ಸಿ.ನಾಣಯ್ಯ:-** ಮಾನ್ಯ ಸಭಾಪತಿಯವರೇ. ನೀವು ಈ ವಿಷಯದ ಬಗ್ಗೆ ಅರ್ಥ ಮಾಡಿಸಬೇಕು. ಮಾನ್ಯ ಆರ್.ವಿ.ವೆಂಕಟೇಶ್ ಅವರು ಸರ್ಕಾರಿ ಮುಖ್ಯ ಸಚೇತಕರು. In the first place Sri RV Venkatesh is the Chief Whip. Heis enjoying the Caninet Minister status. He is part of the Government. ಈಗ ಅವರು ಪ್ರಸ್ತಾಪ ಮಾಡಿರುವಂತಹ ವಿಷಯ ಏನಿದೆ ಅದು ಈ ದಿನದ ಪತ್ರಿಕೆಯಲ್ಲಿ ಬಂದಿದೆ. ಪೊಲೀಸಿನವರಿಗೆ ಈಗಾಗಲೆ ಪುಕಾರ್ ಆಗಿದೆ. ಅವನು ತಲೆತಪ್ಪಿಸಿಕೊಂಡಿದ್ದಾನೆಂದು ಪೊಲೀಸಿನವರು ಈಗಾಗಲೇ ಅವನನ್ನು ಬಂಧನ ಮಾಡಲು ಕ್ರಮಕ್ಕೆಗೊಂಡಿದ್ದಾರೆ. ನಾಳೆ ಎಲ್ಲಾದರು, in the first place, the prerogative of the Chief Whip to raise this issued being enjoying the Cabinet Minister status.

**ಶ್ರೀ ಆರ್.ವಿ.ವೆಂಕಟೇಶ್:-** ಮಾನ್ಯ ಸಭಾಪತಿಯವರೇ. ನಾನು ಬೆಂಗಳೂರು ನಗರಕ್ಕೆ ಸೇರಿದವನು, ನಾನು ಸದನಕ್ಕೆ ಬಂದಾಗಿನಿಂದಲೂ ಸಕ್ರೀಯವಾಗಿ ವಿಷಯಗಳನ್ನು ಪ್ರಸ್ತಾಪ ಮಾಡುತ್ತಾ ಬಂದಿದ್ದೇನೆ. ನಾನು ಈ ವಿಷಯದ ಬಗ್ಗೆ ಮಾನ್ಯ ಸಭಾಪತಿಯವರೊಂದಿಗೂ ಸಹ ಚರ್ಚೆ ಮಾಡಿದ್ದೇನೆ.

**ಶ್ರೀ ಯಂ.ಸಿ.ನಾಣಯ್ಯ:-** ನಿಮಗೆ ಕೇಳುವುದಕ್ಕೆ ಹಕ್ಕಿದೆ ಇಲ್ಲವೆಂದು ನಾನು ಹೇಳುತ್ತಿಲ್ಲ. ಮಾನ್ಯ ಸಭಾಪತಿಯವರೇ, ಈ ಘಟನೆ ಆಗಿರುವುದು ನಿನ್ನೆಯ ದಿವಸ. ಈಗಾಗಲೇ ಪೊಲೀಸಿನವರು ಇದರ ಬಗ್ಗೆ ತನಿಖೆ ಮಾಡುತ್ತಿದ್ದಾರೆ. ಬಹುಶಃ ನಿಮ್ಮ ಮನಸ್ಸಿನಲ್ಲಿ ಪೊಲೀಸಿನವರು ಇದರ ಬಗ್ಗೆ ತನಿಖೆ ಮಾಡುತ್ತಿಲ್ಲ. ಅವರನ್ನು ಬಂದಿಸುವುದಿಲ್ಲ ಎನ್ನುವುದಾದರೆ ಪ್ರಸ್ಥಾಪ ಮಾಡಿ.

**ಶ್ರೀ ಆರ್.ವಿ.ವೆಂಕಟೇಶ್:-** ಮಾನ್ಯ ಸಭಾಪತಿಯವರೇ, ನಾನು ಈ ವಿಷಯವನ್ನು ಪ್ರಸ್ತಾಪ ಮಾಡಿದ ಉದ್ದೇಶವೇನೆಂದರೆ, ಅಮಾಯಕರಾದಂತಹ ಪಾದಚಾರಿಗಳು ಯಾರಿದ್ದರು ಅವರಿಗೆ ಏನಾದರು ಪರಿಹಾರವನ್ನು ಕೊಡಿಸೋಣವೆಂಬ ಉದ್ದೇಶದಿಂದ ತಾನು ಈ ವಿಚಾರವನ್ನು ಪ್ರಸ್ತಾಪ ಮಾಡಿದ್ದು.

**ಶ್ರೀ ಯಂ.ಸಿ.ನಾಣಯ್ಯ:-** ಮಾನ್ಯ ಸಭಾಪತಿಯವರೇ, ಇದಕ್ಕೆ ಏನಾದರು ಅರ್ಥವಿದೆಯೇ? What is all this.

**ಶ್ರೀ ಡಿ.ವಿ. ಸದಾನಂದಗೌಡ(ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ. ನನಗೆ ತಿಳಿದಮಟ್ಟಿಗೆ ಈಗಾಗಲೆ ತುರ್ತಾಗಿ ಇಪ್ಪತ್ತೈದು ಸಾವಿರ ರೂಪಾಯಿಗಳನ್ನು ಕೊಟ್ಟಿರುವುದು ನನ್ನ ಗಮನಕ್ಕೆ ಬಂದಿದೆ. ಅದನ್ನು ನಾನು ಪತ್ರಿಕೆಯಲ್ಲಿ ಓದಿದ್ದೇನೆ. ಎರಡನೆಯದಾಗಿ, ತಾವು ಆಡಳಿತ ಪಕ್ಷದವರು ನಿಮ್ಮ ಸರ್ಕಾರದ ವಿಫಲತೆಯನ್ನು ನೀವೇ ಪ್ರಸ್ತಾಪ ಮಾಡಿರುವಂಥದ್ದು ನಿಮ್ಮ ಸರ್ಕಾರದ ಕಾರ್ಯಾಚರಣೆಯನ್ನು ಎತ್ತಿ ತೋರಿಸುತ್ತದೆ. ನೀವು ಸರ್ಕಾರದ ಮುಖ್ಯ ಸಚೇತಕರಾಗಿದ್ದೀರಿ.

**ಶ್ರೀ ಆರ್.ವಿ.ವೆಂಕಟೇಶ್:-** ಮಾನ್ಯ ಸಭಾಪತಿಯವರೇ, ಇಂತಹ ದುರ್ಘಟನೆಗಳಿಂದ ಅಮಾಯಕರು ಬಲಿಯಾಗುತ್ತಿದ್ದಾರೆ. ಈ ರೀತಿ ಆಗಬಾರದು ಎಂದು ನಾನು ಹೇಳುತ್ತಿರುವುದು.

**ಶ್ರೀ ಡಿ.ವಿ.ಸದಾನಂದಗೌಡ:-** ಹಾಗಾದರೆ. ಪರಿಹಾರ ಕೊಡುವರು ಯಾರು? ಸಭಾಪತಿಯವರು ಪರಿಹಾರ ಕೊಡಬೇಕೆ? ಮಾನ್ಯ ಸಭಾಪತಿಯವರೇ, ಮಾನ್ಯ ಆರ್.ವಿ.ವೆಂಕಟೇಶ್ ಅವರು ಆಡಳಿತ ಪಕ್ಷದ ಮುಖ್ಯ ಸಚೇತಕರು. ಇವರಿಗೆ ಇವರ ಸರ್ಕಾರದ ಕಾರ್ಯವೈಖರಿಯ ಬಗ್ಗೆ ದೂರು

ಕೊಡುವುದಕ್ಕೋಸ್ಕರ ಈ ಸದನವನ್ನು ವೇದಿಕೆ ಮಾಡಿಕೊಳ್ಳುವುದು ಅಷ್ಟು ಸೂಕ್ತವಲ್ಲ. ಈ ರೀತಿ ದಿನನಿತ್ಯ ಅಪಘಾತ ಆಗುವಂತದ್ದರ ಬಗ್ಗೆ ನಾವು ದಿನನಿತ್ಯ ಶೂನ್ಯವೇಳೆಯಲ್ಲಿ ಪ್ರಸ್ತಾಪ ಮಾಡುತ್ತಾ ಹೋದರೆ ಸಾರ್ವಜನಿಕ ಮಹತ್ವದ ವಿಚಾರಕ್ಕೆ ಅರ್ಥವಿರುವುದಿಲ್ಲ.

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, ಇಲ್ಲಿ ಏನಾಗಿದೆ. ಎಂದರೆ ಶೂನ್ಯವೇಳೆಯಲ್ಲಿ ಯಾರೇ ನೋಟೀಸ್ ಕೊಟ್ಟರು ಅದಕ್ಕೆ. ಅನುಮತಿ ಕೊಡುವುದು ಅಥವಾ ಬಿಡುವುದು ಮಾನ್ಯ ಸಭಾಪತಿಯವರಿಗೆ ಬಿಟ್ಟಂತಹ ವಿಷಯ. ತಾವು ಹೇಳಿದ್ದರ ಬಗ್ಗೆ ಚಿಂತನೆ ಇದೆ... ಮಾನ್ಯ ಸಭಾಪತಿಯವರೇ, ನಾಳೆ ಮಾನ್ಯ ಸದಸ್ಯರು ಕೇಳಿದಂತಹ ಪ್ರಶ್ನೆಗೆ ಉತ್ತರ ಕೊಡಿಸುತ್ತೇನೆ.

**ಶ್ರೀ ಬಸವರಾಜ ಹೊರಟ್ಟಿ-** ಮಾನ್ಯ ಸಭಾ ನಾಯಕರೆ, ಇಲ್ಲಿ ಸಭಾಪತಿಯವರ ಪ್ರಶ್ನೆ ಬರುವುದಿಲ್ಲ. ಮಾನ್ಯ ಆರ್.ವಿ.ವೆಂಕಟೇಶ್ ಅವರು ಸಹ ಕೆಂಪು ದೀಪ ಇರುವಂತಹ ಕಾರಿನಲ್ಲಿ ಓಡಾಡುವಂಥವರು ಆದುದರಿಂದ ಈ ರೀತಿ ಕೇಳುವುದು ಸರಿ ಅಲ್ಲವೆಂದು ಹೇಳುತ್ತಿದ್ದಾರೆ ಅಷ್ಟೆ ವಿನಃ ಬೇರೇನು ಇಲ್ಲ. ಇಲ್ಲವೆಂದರೆ ಸರ್ಕಾರದ inefficiency ತೋರಿಸಿದಂತೆ ಆಗುತ್ತದೆ.

**Sri. S.R.Patil :** You don't think in that sense. ಡಾ. ಶಿವಯೋಗಿ ಸ್ವಾಮಿಯವರು ಈ ಕಡೆ ಇದ್ದಾಗ ಅಂದರೆ ಸರ್ಕಾರದ ಮುಖ್ಯ ಸಚೇತಕ ರಾಗಿದ್ದಾಗ ಅವರೂ ಸಹ ಕೇಳಿದ್ದಾರೆ.

**ಶ್ರೀ ಬಸವರಾಜ ಹೊರಟ್ಟಿ:-** ಸರ್ಕಾರದಲ್ಲಿ ಇದ್ದಂತವರು ಈ ರೀತಿ ಮಾಡಿದರೆ ಹೇಗೆ?

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ನೀಡಿರುವಂತಹ ಸಲಹೆಗಳನ್ನು ಪರಿಗಣಿಸಲಾಗಿದೆ. ಈಗ ಈ ವಿಷಯದ ಬಗ್ಗೆ ಚರ್ಚೆ ಮಾಡುವುದು ಬೇಡ. ಮಾನ್ಯ ಸಭಾಪತಿಯವರೇ, ಈ ವಿಷಯಕ್ಕೆ ಸಂಬಂಧಪಟ್ಟಂತೆ ಸಂಬಂಧಪಟ್ಟ ಸಚಿವರಿಂದ ಉತ್ತರ ಕೊಡಿಸುತ್ತೇನೆ.

**ಡಾ.ಎ.ಹೆಚ್.ಶಿವಯೋಗಿಸ್ವಾಮಿ:–** ಮಾನ್ಯ ಸಭಾಪತಿಯವರೇ. ನಾನು ಸರ್ಕಾರದ ಮುಖ್ಯಸಚೇತಕನಾಗಿದ್ದಾಗ ಒಂದು ಪ್ರಶ್ನೋತ್ತರ ವೇಳೆಯಲ್ಲಾಗಲಿ ಅಥವಾ ಶೂನ್ಯ ವೇಳೆಯಲ್ಲಾಗಲಿ ಒಂದು ವಿಷಯವನ್ನು ಪ್ರಸ್ತಾಪ ಮಾಡಿಲ್ಲ.

**ಸಭಾಪತಿಯವರು:–** ಈಗ ಚರ್ಚೆ ಮುಗಿದಿದೆ ಕುಳಿತುಕೊಳ್ಳಿ.

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್:–** ಮಾನ್ಯ ಸಭಾಪತಿಯವರೇ, ನಾನು ಸಹ ಶೂನ್ಯವೇಳೆಯಲ್ಲಿ ಕೊಟ್ಟಿರುವಂತಹ ವಿಷಯವನ್ನು ಓದಲು ಅವಕಾಶ ನೀಡಬೇಕೆಂದು ಕೋರುತ್ತೇನೆ.

**ಉಪ ಸಭಾಪತಿಯವರು;–** ಮಾನ್ಯ ಆರ್.ಎ.ವೆಂಕಟೇಶರವರು ಓದಿದ್ದಾರಲ್ಲಪ್ಪ ಈಗ ಮಾನ್ಯ ಮರಿತಿಬ್ಬೇಗೌಡರು.

**೩ು) ವಿಷಯ:– ಉತ್ತರಾಂಚಲ ರಾಜ್ಯದ ಕೇದಾರನಾಥ ಮತ್ತು ಬದರಿನಾಥ ಪ್ರದೇಶದಲ್ಲಿ ಇತ್ತೀಚೆಗೆ ಬಾರಿ ಪ್ರವಾಹ ಉಂಟಾಗಿ ಸಾವಿರಾರು ಮಂದಿಯ ಪ್ರಾಣ ಹಾನಿ ಉಂಟಾಗಿರುವ ಬಗ್ಗೆ.**

**ಶ್ರೀ ಮರಿತಿಬ್ಬೇಗೌಡ (ಶಿಕ್ಷಕರ ಕ್ಷೇತ್ರ):–** ಸನ್ಮಾನ್ಯ ಸಭಾಪತಿಯವರೇ, ಉತ್ತರಾಂಚಲ ರಾಜ್ಯದ ಕೇದಾರನಾಥ ಮತ್ತು ಬದರಿನಾಥ ಪ್ರದೇಶದಲ್ಲಿ ಇತ್ತೀ ಚೆಗೆ ಬಾರಿ ಪ್ರವಾಹ ಉಂಟಾಗಿ ಸಾವಿರಾರು ಮಂದಿಯ ಪ್ರಾಣ ಹಾನಿ ಉಂಟಾಗಿರುವುದು ದುರದೃಷ್ಟಕರ ಸಂಗತಿಯಾಗಿದೆ.

ಕರ್ನಾಟಕ ರಾಜ್ಯದಿಂದ ಕೇದಾರನಾಥ ಮತ್ತು ಬದರಿನಾಥ ದೇವಾ ಲಯಗಳಿಗೆ ಬಹಳಷ್ಟು ಭಕ್ತಾದಿಗಳು ಯಾತ್ರೆಗಾಗಿ ಹೋಗಿ ಈ ಭೀಕರ ಪ್ರವಾಹದಲ್ಲಿ ಬಹಳಷ್ಟು ಮಂದಿ ಸಿಲುಕಿಕೊಂಡಿದ್ದರು. ಪ್ರವಾಹದಲ್ಲಿ ಸಿಲುಕಿ ಕೊಂಡಿರುವವರ ರಕ್ಷಣಗಾಗಿ ಮೂಲಭೂತ ಸೌಲಭ್ಯ ಸಚಿವರಾದ ಶ್ರೀ ಸಂತೋಷ ಲಾಡ್ ಹಾಗು ತಂಡವನ್ನು ಕಳುಹಿಸಿಕೊಟ್ಟಿದ್ದು ಶ್ಲಾಘನೀಯ ವಿಚಾರ ರಾಜ್ಯದಿಂದ ಎಷ್ಟು ಮಂದಿ ಯಾತ್ರಿಕರು ಈ ಪ್ರವಾಹದಲ್ಲಿ ಸಿಲುಕಿಕೊಂಡಿದ್ದಾರೆ, ಎಷ್ಟು ಮಂದಿ ಪ್ರವಾಹದಿಂದ ಸುರಕ್ಷಿತಗೊಂಡಿದ್ದಾರೆ ಹಾಗು ಮಂಡ್ಯ ಜಿಲ್ಲೆ ಮದ್ದೂರು ನಗರದ ಒಂದೇ ಕುಟುಂಬದ 13 ಮಂದಿ

ಕಾಣೆಯಾಗಿದ್ದಾರೆ ಎಂಬ ಸಂಗತಿ ಮಾಧ್ಯಮ ಮತ್ತು ಪತ್ರಿಕೆಗಳಲ್ಲ ವರದಿ ಯಾಗಿದೆ. ಭೀಕರ ಪ್ರವಾಹದಲ್ಲಿ ಕರ್ನಾಟಕದ ಯಾತ್ರಾರ್ಥಿಗಳು ಎಷ್ಟು ಮಂದಿ ಸಿಲುಕಿಕೊಂಡಿದ್ದರು. ಎಷ್ಟು ಮಂದಿಯನ್ನು ರಕ್ಷಿಸಲಾಗಿದೆ, ಎಷ್ಟು ಮಂದಿ ಕಾಣೆಯಾಗಿದ್ದಾರೆ? ಕಾಣೆಯಾಗಿರುವವರ ಪತ್ತೆಗೆ ಸರ್ಕಾರ ಯಾವ ಕ್ರಮ ಕೈಗೊಂಡಿದೆ ಹಾಗು ಕುಟುಂಬದ ಸದಸ್ಯರನ್ನು ಕಳೆದುಕೊಂಡಿರುವ ನಿರಾಶ್ರಿತ ರಿಗೆ ಯಾವ ಪರಿಹಾರ ನೀಡಲಾಗಿದೆ ಎಂಬುದನ್ನು ಸವಿಸ್ತಾರವಾಗಿ ನಾಡಿನ ಜನತೆಗೆ ತಿಳಿಸಲು ಸದನದಲ್ಲಿ ಒಂದು ಹೇಳಿಕೆ ಮಾಡಬೇಕಂದು ಈ ಮೂಲಕ ಸದನದ ಶೂನ್ಯ ವೇಳೆಯಲ್ಲಿ ಮಾನ್ಯ ಮುಖ್ಯಮಂತ್ರಿಯವರಲ್ಲಿ ಒತ್ತಾಯಿ ಸುತ್ತೇನೆ.

**ಶ್ರೀ ಎಸ್.ಆರ್.ಪಾಟೀಲ್ (ಸಭಾ ನಾಯಕರು):-** ಮಾನ್ಯ ಸಭಾಪತಿ ಯವರೇ, ಉತ್ತರವನ್ನು ಒದಗಿಸಲಾಗುವುದು.

**ಖ) ವಿಷಯ: ಭಾರತ ಸರ್ಕಾರದ ರಾಷ್ಟ್ರೀಯ ಗ್ರಾಮೀಣ ಕುಡಿಯುವ ನೀರು ಯೋಜನೆ ಅಡಿಯಲ್ಲಿ ನೇಮಕಗೊಂಡ ತಾಲ್ಲೂಕು ಸಂಯೋಜಕರ ಸೇವೆ ಯನ್ನು ಮೇ 2012ಕ್ಕೆ ಮುಕ್ತಾಯಗೊಳಿಸಿದ್ದು, ನ್ಯಾಯಲಯದ ಉದ್ದೇಶ ವಿದ್ದರೂ ಅವರುಗಳ ಸೇವೆಯನ್ನು ಮುಂದುವರೆಸದಿರುವುದರ ಬಗ್ಗೆ.**

**ಶ್ರೀ ಬಸವರಾಜ ಹೊರಟ್ಟಿ ( ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಗಳೇ, ಕರ್ನಾಟಕ ರಾಜ್ಯದ ವಿವಿಧ ಜಿಲ್ಲೆಗಳಲ್ಲಿ, ತಾಲ್ಲೂಕುಗಳಲ್ಲಿ ತಾಲ್ಲೂಕು ಸಂಯೋ ಜಕರಾಗಿ ಕೆಲಸ ನಿರ್ವಹಿಸುತ್ತಿರುವ 976(ಸಿ.ಆರ್.ಸಿ) ಒಟ್ಟು 1152 ಸಂಯೋ ಜಕರು ಆದ ಇವರುಗಳು ಪದವೀಧರರಾಗಿದ್ದು, ಗ್ರಾಮೀಣ ಪ್ರದೇಶದ ಕೂಲಿ ಕಾರ್ಮಿಕರ ಹಾಗೂ ರೈತರ ಮಕ್ಕಳಾಗಿರುತ್ತಾರೆ, ಇವರುಗಳು ವಿನಂತಿಸಿಕೊಳ್ಳು ವುದೇನೆಂದರೆ ಕರ್ನಾಟಕ ಸರ್ಕಾರವು ಭಾರತ ಸರ್ಕಾರವು ಭಾರತ ಸರ್ಕಾರದ ರಾಷ್ಟ್ರೀಯ ಗ್ರಾಮೀಣ ಕುಡಿಯುವ ನೀರು ಯೋಜನೆ (ಎನ್.ಆರ್. ಡಿ.ಡಬ್ಲ್ಯೂ.ಪಿ) ಯೋಜನೆಯಡಿ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಅಧೀನದಲ್ಲಿ ಬರುವ ಕರ್ನಾಟಕ ರಾಜ್ಯ ನೀರು ಮತ್ತು ನೈರ್ಮಲ್ಯ ಮಿಷನ್ ಸಂಸ್ಥೆಯಡಿ ಇವರುಗಳನ್ನು ಸರ್ಕಾರವೇ ನೇರವಾಗಿ

ಪತ್ರಿಕೆಗಳಲ್ಲಿ ಅರ್ಜಿ ಆಹ್ವಾನಿಸಿ ಸ್ಪರ್ಧಾತ್ಮಕ ಪರೀಕ್ಷೆ ನಡೆಸಿ ಮೆರಿಟ್ ಆಧಾರ ದಲ್ಲಿ ಮತ್ತು ಮೀಸಲಾತಿಯನ್ನಯ ಆಯ್ಕೆ ಮಾಡಿಕೊಂಡಿರುತ್ತದೆ. ಆಯ್ಕೆಯು ಒಂದು ವರ್ಷದ ಅವಧಿಯಾಗಿದ್ದು, ಅವಶ್ಯಕತೆ ಬಂದಲ್ಲಿ ಯೋಜನೆ ಇರುವ ವರೆಗೂ ಮುಂದುವರಿಸಬಹುದಾಗಿರುತ್ತದೆ. ನಂತರ ಇವರಿಗೆ ತರಬೇತಿ ನೀಡಿ ಸಂಬಂಧಪಟ್ಟ ಜಿಲ್ಲಾ ಪಂಚಾಯಿತಿ ಮತ್ತು ತಾಲ್ಲೂಕು ಪಂಚಾಯಿತಿ ಮತ್ತು ಹೋಬಳಿ ಮಟ್ಟದಲ್ಲಿ ದಿನಾಂಕ 2–5–2011 ರಿಂದ ಕೆಲಸ ನಿರ್ವಹಿಸಲು ಆದೇಶಿಸಿರುತ್ತಾರೆ. ಸರ್ಕಾರವು ಇವರನ್ನು ಮುಂದುವರೆಸಲು ಕಾರ್ಯಕ್ಷಮತೆ ವರದಿ ಕೇಳಿದ್ದು, ಅದರಂತೆ ಸಂಬಂಧಪಟ್ಟ ಎಲ್ಲಾ ತಾಲ್ಲೂಕು ಪಂಚಾಯಿತಿ ಕಾರ್ಯನಿರ್ವಾಹಣಾಧಿಕಾರಿಗಳು ಇವರನ್ನು ಮುಂದಿನ ಅವಧಿಗೆ ಮುಂದು ವರಿಸುವಂತೆ ಕಾರ್ಯಕ್ಷಮತೆ ವರದಿ ನೀಡಿರುತ್ತಾರೆ ಎಂದು ತಿಳಿದುಬಂದಿ ರುತ್ತದೆ. ಇವರು ದಿನಾಂಕ 2/5/2011 ರಿಂದ 2/5/2012 ವರಗೆ ಉತ್ತಮ ವಾಗಿ ಕಾರ್ಯನಿರ್ವಹಿಸುತ್ತಿದ್ದರು ಎಂದು ನಾನು ಭಾವಿಸಿರುತ್ತೇನೆ. ಆದರೆ ಸರ್ಕಾರವು ಇವರ ಸೇವೆಯನ್ನು ಮೇ 2012 ಕ್ಕೆ ಮುಕ್ತಾಯಗೊಳಿಸಿ ಆದೇಶಿಸಿ ರುತ್ತದೆ. ಆದರೆ ಇವರುಗಳು ಆದೇಶದ ವಿರುದ್ಧ ಮಾನ್ಯ ಉಚ್ಚ ನ್ಯಾಯಾಲ ಯದಲ್ಲಿ ದಾವೆ ಹೂಡಿದ್ದು ಮಾನ್ಯ ಉಚ್ಛನ್ಯಾಯಾಲಯವು ಕೂಡ ಇವರನ್ನು. ರಾಷ್ಟ್ರೀಯ ಗ್ರಾಮೀಣ ಕುಡಿಯುವ ನೀರು ಯೋಜನೆ (ಎನ್.ಆರ್.ಡಿ. ಡಬ್ಲ್ಯೂ.ಪಿ) ಇವರವರೆಗೂ ಮುಂದುವರೆಸಲು ಆದೇಶ ನೀಡಿರುತ್ತದೆ. ಆದರೆ ಸರ್ಕಾರವು ನ್ಯಾಯಾಲಯದ ಆದೇಶವಿದ್ದರೂ ಇವರುಗಳ ಸೇವೆಯನ್ನು ಮುಕ್ತಾಯಗೊಳಿಸಿ ಹೊರಗುತ್ತಿಗೆ ಆಧಾರದ ಮೇಲೆ ಬೇರೆಯವರನ್ನು ನೇಮಕ ಮಾಡಲು ಸಂಬಂಧಪಟ್ಟ ಎಲ್ಲಾ ಜಿಲ್ಲಾ ಪಂಚಾಯಿತಿಗಳಿಗೆ ನಿರ್ದೇಶನ ನೀಡಿರುತ್ತದೆ. ಈ ಮೇಲಿನ ಅಂಶಗಳನ್ನು ಪರಿಶೀಲಿಸಿದಾಗ ಇವರುಗಳಿಗೆ ಅನ್ಯಾಯವಾಗಿರುವುದು ಸ್ಪಷ್ಟವಾಗಿ ಮೇಲ್ನೋಟಕ್ಕೆ ಕಂಡುಬರುತ್ತದೆ... ಅಲ್ಲದೇ ಇವರುಗಳು ದಿನಾಂಕ 11/5/2013 ರಂದು ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖಾ ಸಚಿವರನ್ನು ಭೇಟಿ ಮಾಡಿ ತಮ್ಮ ಅಹವಾಲನ್ನು ಸಚಿವರ ಬಳಿ ವಿನಮ್ರವಾಗಿ ನಿವೇದಿಸಿಕೊಂಡಿರುತ್ತಾರೆ. ಮಾನ್ಯ ಸಚಿವರು ಕೂಡ ಸಾಧ್ಯವಾದ ಎಲ್ಲ ರೀತಿಯಿಂದಲೂ ನ್ಯಾಯಾಲಯದ

ಆದೇಶವನ್ನು ಮಾನ್ಯ ಮಾಡುತ್ತೇವೆ ಎಂದು ಇವರಿಗೆ ಭರವಸೆ ನೀಡಿರುತ್ತಾರೆ. ಇವರೆಲ್ಲರೂ ನನಗೆ ಸಚಿವರ ಮುಂದೆ ಚರ್ಚಿಸಿದ ಎಲ್ಲಾ ವಿವರಗಳನ್ನು ಹೇಳಿರುತ್ತಾರೆ. ಆದ್ದರಿಂದ ಸರ್ಕಾರವು ರಾಜ್ಯಾದ್ಯಂತ ಕೆಲಸ ನಿರ್ವಹಿಸುತ್ತಿರುವ ಇವರನ್ನು ಅಂದರೆ 1152 ಸಂಯೋಜಕರನ್ನು ಸದರಿ ಸೇವೆಯಲ್ಲಿ ಮುಂದುವರೆಸಿ ಅವರ ಸೇವೆಯನ್ನು ನ್ಯಾಯಾಲಯದ ಆದೇಶದಂತೆ ರಾಷ್ಟ್ರೀಯ ಗ್ರಾಮೀಣ ಕುಡಿಯುವ ನೀರು ಯೋಜನೆ (ಎನ್.ಆರ್.ಡಿ. ಡಬ್ಲ್ಯೂ.ಪಿ) ಯೋಜನೆ ಇರುವವರೆಗೂ ಮುಂದುವರೆಸಬೇಕೆಂದು ಈ ಮೂಲಕ ಒತ್ತಾಯಿಸುತ್ತೇನೆ.

**ಶ್ರೀ ಎಸ್.ಆರ್.ಪಾಟೀಲ್(ಸಭಾನಾಯಕರು):–** ಮಾನ್ಯ ಸಭಾಪತಿಗಳೇ, ಶೂನ್ಯವೇಳೆಯಲ್ಲಿ . . . ಇರಲಿ, ಇದಕ್ಕೆ ಉತ್ತರವನ್ನು ಕೊಡಿಸಲಾಗುವುದು. ಶೂನ್ಯವೇಳೆಯಲ್ಲಿ ಯಾವುದನ್ನೂ ಕೊಡಬಹುದು ಎನ್ನುವುದೇ ತಿಳಿಯುತ್ತಿಲ್ಲ, ನನಗೆ ಸಖೇದಾಶ್ಚರ್ಯವಾಗುತ್ತಿದೆ.

**ಶ್ರೀ ಬಸವರಾಜ ಹೊರಟ್ಟಿ:–** ಮಾನ್ಯ ಸಭಾಪತಿಗಳೇ, ಶೂನ್ಯ ವೇಳೆಯಲ್ಲಿ ಆಕ್ಸಿಡೆಂಟ್ ಆಗಿರುವುದರ ಬಗ್ಗೆ ಪ್ರಸ್ತಾಪಿಸಲು ಅವಕಾಶವಿದೆ. ಇಂತಹವು ಬೇಡವೇ?ಸರ್ಕಾರ ಕೋರ್ಟಿನ ಆದೇಶವನ್ನು ಉಲ್ಲಂಘನೆ ಮಾಡಿದೆ, ಅಂತಹ ವಿಚಾರವನ್ನು ಪ್ರಸ್ತಾಪ ಮಾಡುವುದು ಬೇಡವೇ ಶೂನ್ಯವೇಳೆ ಎಂದರೆ ಏನು ಎಂದು ಸಭಾನಾಯಕರು ಹೇಳಬೇಕು, ನನಗೆ ಇದರ ಬಗ್ಗೆ ತಿಳಿಯುವುದಿಲ್ಲ. ಕೋರ್ಟಿನ ಆದೇಶವನ್ನು ಉಲ್ಲಂಘನೆ ಮಾಡಿದೆ. ಅಂತಹ ವಿಚಾರವನ್ನು ಪ್ರಸ್ತಾಪ ಮಾಡುವುದು ತಪ್ಪಾಗುವುದೇ?

(ಗೊಂದಲ)

**ಶ್ರೀ ಯಂ.ಸಿನಾಣಯ್ಯ(ವಿಧಾನಸಭಾ ಕ್ಷೇತ್ರ):–** ಮಾನ್ಯ ಸಭಾಪತಿಗಳೇ, ಶೂನ್ಯವೇಳಯ ಬಗ್ಗೆ ನಮ್ಮ ನಿಯಮಗಳಲ್ಲಿ ಪಸ್ತಾಪವಿಲ್ಲ.. ಆದರೂ ಸಹ ಸಂಪ್ರದಾಯವಾಗಿ ಇದನ್ನು ನಡೆಸಿಕೊಂಡು ಬಂದಿದ್ದೇವೆ. ಶೂನ್ಯವೇಳೆಯಲ್ಲಿ ಪ್ರಸ್ಥಾಪಿಸತಕ್ಕ ವಿಚಾರಗಳ ಬಗ್ಗೆ ಸಭಾಪತಿಯವರಿಗೆ ಅರ್ಜಿಗಳನ್ನು ಸಲ್ಲಿಸು ತ್ತೇವೆ, ಅವರಿಗೆ ಇದು ನಿಯಮಗಳಲ್ಲಿ ಅವಕಾಶವಿದೆ ಎನ್ನುವುದಾದರೆ ಅದನ್ನು

slate ಮಾಡಿ ಓದಲಿಕ್ಕೆ ಹೇಳುತ್ತಾರೆ. ಅವರು ಅನುಮತಿ ನೀಡಿರುವುದರ ಬಗ್ಗೆ ಸಭಾಪತಿಯವರನ್ನು ಪ್ರಶ್ನೆ ಮಾಡುವುದಕ್ಕೆ ಸಾಧ್ಯವಾಗುತ್ತದೆಯೇ?

**ಶ್ರೀಎಸ್.ಆರ್.ಪಾಟೀಲ್(ಸಭಾನಾಯಕರು):-** ಮಾನ್ಯ ಸಭಾಪತಿಗಳೇ, ತಮ್ಮ ಪೀಠದ ಬಗ್ಗೆ ನನಗೆ ಅಪಾರವಾದ ಗೌರವವಿದೆ... ನಮ್ಮ ಹಿರಿಯ ಸದಸ್ಯರು ಶೂನ್ಯವೇಳೆಯಲ್ಲಿ ಇಷ್ಟು ಉದ್ದ ಓದಿದಾಗ, ಅದು ಶೂನ್ಯವೇಳೆಯ ವ್ಯಾಪ್ತಿಯಲ್ಲಿ ಬರುತ್ತದೋ ಇಲ್ಲವೋ ಎನ್ನುವ ಜಿಜ್ಞಾಸೆ ನನ್ನಲ್ಲಿ ಮೂಡಿತು. ಆ ಸಂದರ್ಭದಲ್ಲಿ ನನಗನಿಸಿದ ಒಂದು ಅಭಿಪ್ರಾಯವನ್ನು ವ್ಯಕ್ತಪಡಿಸಿದೆನು. ಅದನ್ನು ಬಿಟ್ಟು ಸಭಾಪತಿಯವರು ಏಕೆ ಇದನ್ನು ಒಪ್ಪಿದರು, ಇವತ್ತು ಏಕೆ ಇಷ್ಟೊಂದು ಶೂನ್ಯವೇಳೆಯ ಪ್ರಸ್ತಾಪಗಳಿವ ಎನ್ನುವುದನ್ನು ನಾನೇನು ಕೇಳಿಲ್ಲ.

**ಶ್ರೀ ಯಂ.ಸಿ.ನಾಣಯ್ಯ:-** ಮಾನ್ಯ ಸಭಾಪತಿಗಳೇ, What does it mean? By implication, it amounts to that. ತಾವು ಶೂನ್ಯವೇಳೆಯಲ್ಲಿ ಬರುತ್ತದೆ ಎಂದು ಅನುಮತಿ ನೀಡಿದ ಮೇಲೆ ನಿಮ್ಮನ್ನೇ ಪ್ರಶ್ನೆ ಮಾಡುವುದು ಎಷ್ಟು ಸರಿ?

**Sri. S.R.Patil :** I expressed my feeling

**ಶ್ರೀ ಯಂ.ಸಿನಾಣಯ್ಯ :-** ಸಭಾನಾಯಕರಾಗಿ ಸಭಾಪತಿಯವರನ್ನು ಪ್ರಶ್ನ ಮಾಡಬಾರದು, ಈ ಅಧಿಕಾರ ತೆಗೆದುಕೊಂಡಲ್ಲಿ ಕಷ್ಟ ಆಗುತ್ತದೆ.

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಗಳ ಆದೇಶಕ್ಕೆ ನಾನು ಮನ್ನಣೆ ನೀಡುತ್ತೇನೆ. ಸಭಾಪತಿಗಳ ಬಗ್ಗೆ ಮತ್ತು ಅವರ ಪೀಠದ ಬಗ್ಗೆ ನನಗೆ ಅಪಾರವಾದ ಗೌರವ ಇದೆ ಎನ್ನುವ ಮಾತನ್ನು ಹೇಳಿದ್ದೇನೆ. I expressed my feeling ನನ್ನ ಅನಿಸಿಕೆಗಳನ್ನು ನಾನು ವ್ಯಕ್ತ ಮಾಡಿದ್ದೇನೆ.

**ಶ್ರೀ ಬಸವರಾಜ ಹೊರಟ್ಟಿ:-** ಪೀಠವನ್ನು ಪ್ರಶ್ನೆ ಮಾಡಲು ಸಭಾನಾಯಕರಿಗೆ ಯಾವ ಅಧಿಕಾರವಿದೆ?

**Sri. S.R. Patil :** I have not questioned.

**ಶ್ರೀ ಬಸವರಾಜ ಹೊರಟ್ಟಿ:-** ಸಭಾಪತಿಯವರನ್ನು ಹೇಗೆ ಪ್ರಶ್ನೆ ಮಾಡುತ್ತಾರೆ? Don't question it.

**Sri. S.R.Patil :** Voluntarily I expressed my feeling. I have not questioned the prerogative power of the Chair. I have not questioned it. Don't think in a different way. It should not have been taken to this length. Whatever you are arguing is not in good taste.

**ಶ್ರೀ ಬಸವರಾಜ ಹೊರಟ್ಟಿ :-** ಈ ಸದನದಲ್ಲಿ. ಯಾವುದನ್ನೂ ಕೇಳಬೇಕು, ಯಾವುದನ್ನೂ ಕೇಳಬಾರದೆನ್ನುವುದನ್ನು ನಾನು ನಿಮ್ಮಿಂದ ಕಲಿಯಬೇಕಾಗಿಲ್ಲ.

**ಶ್ರೀ ಡಿ.ವಿ.ಸದಾನಂದಗೌಡ(ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಗಳೇ, . .

**ಶ್ರೀ ವೀರಣ್ಣ ಮತ್ತಿಕಟ್ಟಿ:-** ಇಲ್ಲಿ ಇದೇ ವಿಚಾರದ ಬಗ್ಗೆ ಒಬ್ಬರಿಗೊಬ್ಬರು ಮಾತನಾಡುವುದು ಬೇಡ. ಈ ವಿಷಯವನ್ನು ಬೆಳಸದೇ ಇಲ್ಲಿಗೆ ಮುಗಿಸೋಣ.

**ಶ್ರೀ ಡಿ.ವಿ.ಸದಾನಂದಗೌಡ(ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಗಳೇ, ನಾನಂತೂ ಎಂದಿಗೂ ಬೆಂಕಿ ಹಚ್ಚುವ ಕೆಲಸ ಮಾಡುವ ಮನುಷ್ಯನಲ್ಲ. ಆ ರೀತಿ ನನ್ನ ಬಗ್ಗೆ ಯೋಚನೆ ಮಾಡುವುದು ಬೇಡ. ನನ್ನದು ಪರಿಸ್ಥಿತಿಯನ್ನು ತಣ್ಣಗೆ ಮಾಡುವ ಉದ್ದೇಶ. ನನ್ನ ಅನಿಸಿಕೆ ಏನೆಂದರೆ ಈ ರೀತಿಯ ಚರ್ಚೆಗಳು ಸದನದಲ್ಲಿ ನಡೆಯಬೇಕು. ಇಲ್ಲದಿದ್ದರೆ ಸದನದ ಸದಸ್ಯರಿಗೂ ಬೇಸರ ಆಗುತ್ತದೆ, ಒಂದು ರೀತಿಯ routine ಆಗುತ್ತದೆ. ಈಗ ಇಬ್ಬರೂ ಏರಿಯ ಸದಸ್ಯರು ಬಹಳ ಪ್ರೇಮ, ಪ್ರೀತಿ. ವಾತ್ಸಲ್ಯದಿಂದ ಈ ರೀತಿ ಆಗಿದೆ. ಸಭಾನಾಯಕರು ಇದರ ಬಗ್ಗೆ comment ಮಾಡಿಲ್ಲ. ಇದನ್ನು ತರಬಹುದೇ ಎನ್ನುವ ಅನಿಸಿಕೆಯನ್ನು ಸಭಾಪತಿಗಳಿಗೆ ವ್ಯಕ್ತಪಡಿಸಿರಬಹುದು in a lighter vein ಇದನ್ನು ಬಸವರಾಜ ಹೊರಟ್ಟಿಯವರು ಗಂಭೀರವಾಗಿ ಪರಿಗಣಿಸಬಾರದು. ಹೊರಟ್ಟಿಯವರನ್ನು ಅಷ್ಟು ಸುಲಭವಾಗಿ ಏಳಿಸಲು ಮತ್ತು

ಕೂರಿಸಲು ಸಾಧ್ಯವಿಲ್ಲ. ಸಮಯ ಬಂದಾಗ ಅವರೇ ಏಳುತ್ತಾರೆ, ಅವರೇ ಕೂರುತ್ತಾರೆ.

**ಶ್ರೀ ಎಸ್.ಆರ್.ಪಾಟೀಲ್:–** ಅವರನ್ನು ನಿಯಂತ್ರಣ ಮಾಡಲು ಯಾರಿಗೂ ಸಾಧ್ಯವಿಲ್ಲ.

**ಶ್ರೀ ಡಿ.ವಿಸದಾನಂದಗೌಡ:–** ಪಕ್ಕದಲ್ಲಿರುವ ನಾಣಯ್ಯನವರಿಗೆ ಇದು ಸಾಧ್ಯವಾಗಲಿಲ್ಲ ಎಂದರೆ ಮತ್ಯಾರಿಗೆ ಸಾಧ್ಯವಾಗುತ್ತದೆ. ಇದೆಲ್ಲಾ ಸದನದಲ್ಲಿ ಆಗಾಗ ನಡೆಯಬೇಕು. ಇದು ಬಹಳ ಸಮಯದ ನಂತರ ಆಗಿದೆ. ಆದರೆ ಆಗಾಗ ಆಗಬೇಕೆನ್ನುವುದು ನನ್ನ ಅಪೇಕ್ಷೆ.

**ಶ್ರೀ ಸಿ. ಹೆಚ್.ವಿಜಯ ಶಂಕರ:–** ಮಾನ್ಯ ಸಭಾಪತಿಗಳೇ, ಸದನ ಜಾರಿಯಲ್ಲಿರುವ ಸಮಯದಲ್ಲಿ ಶೂನ್ಯವೇಳೆಯಲ್ಲಿ ತರುವ ವಿಚಾರ ಯಾವು ದೇಂದರೆ ಸದನ ಮುಂದಿನ ದಿನಕ್ಕೆ ಮುಂದೂಡಿದ ಮೇಲೆ ಯಾವುದಾದರೂ ಸಾರ್ವಜನಿಕ ಮಹತ್ವದ ವಿಚಾರದ ಬಗ್ಗೆ ತಕ್ಷಣಕ್ಕೆ ತಮ್ಮ ಸೆಳೆಯ ಬೇಕಾಗಿರುತ್ತದೆ. ಅಂತಹ ವಿಚಾರಗಳನ್ನು ಶೂನ್ಯವೇಳಯಲ್ಲಿ ಪ್ರಸ್ಥಾಪಿಸ ಲಾಗುವುದು.

**ಶ್ರೀ ಮತ್ತಿಕಟ್ಟಿ ವೀರಣ್ಣ :–** ಏರಿಯ ಸದಸ್ಯರು ಹೇಳಿದ ಮೇಲೆ ಅವರಿಗೆ ಸಮಾಧಾನ ಆಗಿದೆ. ಈ ವಿಚಾರ ಇಲ್ಲಿಗೆ ಮುಗಿಯಲಿ.

**ಎ) ವಿಷಯ:ರಾಮನಗರ–ಚನ್ನಪಟ್ಟಣ ಅಭಿವೃದ್ಧಿ ಪ್ರಾಧಿಕಾರದಲ್ಲಿನ ಅಧಿಕಾರಿ ಗಳು ವಿವಿಧ ಬ್ಯಾಂಕುಗಳ ನಕಲಿ ಬಾಂಡುಗಳನ್ನು ನೀಡಿ ಸರ್ಕಾರಕ್ಕೆ ವಂಚನೆ ಮಾಡಿರುವ ಬಗ್ಗೆ.**

**ಶ್ರೀ ಪುಟ್ಟಣ್ಣ (ಶಿಕ್ಷಕರ ಕ್ಷೇತ್ರ):–** ಮಾನ್ಯ ಸಭಾಪತಿಗಳೇ, ರಾಮನಗರ ಚನ್ನಪಟ್ಟಣ ಅಭಿವೃದ್ಧಿ ಪ್ರಾಧಿಕಾರದಲ್ಲಿ ಆಯುಕ್ತರು ಒಳಗೊಂಡಂತೆ ಕೆಲವು ಅಧಿಕಾರಿಗಳು ಸೇರಿಕೊಂಡು ವಿವಿಧ ಬ್ಯಾಂಕುಗಳ ನಕಲಿ ಬಾಂಡಗಳನ್ನು ನೀಡಿ ಸರ್ಕಾರಕ್ಕೆ ವಂಚನೆ ಮಾಡಿ ಸರ್ಕಾರದ 9.99 ಕೋಟಿ ರೂಪಾಯಿಗಳ ಹಣವನ್ನು ಲಪಟಾಯಿಸಿರುವುದು.. ದಿನಾಂಕ. 17–07–2013ರ ಕನ್ನಡಪ್ರಭ

ದಿನಪತ್ರಿಕೆಯಲ್ಲಿ ವರದಿಯಾಗಿರುತ್ತದೆ. ಸಾರ್ವಜನಿಕರ ತೆರಿಗೆ ಇನ್ನಿತರೆ ಬಾಬ್ತು ಗಳಿಂದ ಸರ್ಕಾರಕ್ಕೆ ಬಂದಂತಹ ಹಣವನ್ನು ರಾಮನಗರ ಮತ್ತು ಚನ್ನಪಟ್ಟಣದ ಅಭಿವೃದ್ಧಿ ಕಾರ್ಯಗಳಿಗೆ ಬಳಸದೆ ಬ್ಯಾಂಕುಗಳಲ್ಲಿ ಠೇವಣಿ ಇಡುವುದರ ಮೂಲಕ ಆಯುಕ್ತರು ಮತ್ತು ಕಲವು ಅಧಿಕಾರಿಗಳು ಸೇರಿ ನಕಲಿ ಬಾಂಡುಗಳನ್ನು ನೀಡಿ ಸುಮಾರು 9.98 ಕೋಟಿ ರೂಪಾಯಿಗಳನ್ನು ವಂಚನೆ ಮೂಲಕ ಲಪಟಾಯಿಸಿರುವುದು ಘೋರ ಅಪರಾಧವಾಗಿದೆ. ಈ ಪ್ರಕರಣ ದಲ್ಲಿ ಭಾಗಿಯಾಗಿರುವ ಖದೀಮ ಅಧಿಕಾರಿಗಳನ್ನು ತಕ್ಷಣದಿಂದ ಜಾರಿಗೆ ಬರುವಂತೆ ಅಮಾನತ್ತುಗೊಳಿಸಿ ಉನ್ನತ ಮಟ್ಟದ ತನಿಖೆಗೆ ಒಳಪಡಿಸಿ ಕ್ರಿಮಿ ನಲ್ ಮೊಕದ್ದಮೆ ಹೂಡಬೇಕೆಂದು ಈ ಮೂಲಕ ಸದನದ ಶೂನ್ಯ ವೇಳೆ ಯಲ್ಲಿ ಮಾನ್ಯ ನಗರಾಭಿವೃದ್ಧಿ ಸಚಿವರನ್ನು ಒತ್ತಾಯಿಸುತ್ತೇನೆ.

**ಶ್ರೀ ವಿನಯಕುಮಾರ್ ಸೊರಕೆ(ನಗರಾಭಿವೃದ್ಧಿ ಸಚಿವರು):–** ಮಾನ್ಯ ಸಭಾಪತಿಗಳೇ, ಮಾನ್ಯ ಸದಸ್ಯರು ಬಹಳ ಪ್ರಮುಖವಾದ ವಿಚಾರವನ್ನು ಪ್ರಸ್ತಾ ಪಿಸಿದ್ದಾರೆ. ನಿನ್ನೆಯ ದಿವಸ ಕೂಡ ಕೆಳಮನೆಯಲ್ಲಿ ಮಂಡ್ಯದಲ್ಲಿ ಆದಂತಹ ಹಗರಣದ ಬಗ್ಗೆ ಪ್ರಸ್ತಾಪವನ್ನು ಮಾಡಲಾಗಿತ್ತು. ಈ ಪ್ರಕರಣವನ್ನು ತಕ್ಷಣವೇ ಸಿ.ಐ.ಡಿ ತನಿಖೆಗೆ ರವಾನೆ ಮಾಡುವುದರ ಮೂಲಕ ಅಲ್ಲಿನ ಮಂಡ್ಯ ಜಿಲ್ಲೆ ಅಭಿವೃದ್ಧಿ ಪ್ರಾಧಿಕಾರದ ಆಯುಕ್ತರು ಮತ್ತಿತರ ಸಂಬಂಧಪಟ್ಟ ಅಧಿಕಾರಿಗಳನ್ನು ಅರೆಸ್ಟ್ ಮಾಡಿ, ಅವರನ್ನು ಅಮಾನತ್ತು ಕೂಡ ಮಾಡಲಾಗಿದೆ. ಅದೇ ರೀತಿ ಯಲ್ಲಿ ರಾಮನಗರ–ಚನ್ನಪಟ್ಟಣ ಅಭಿವೃದ್ಧಿ ಪ್ರಾಧಿಕಾರದ ಈ ವಿಚಾರ ಬೆಳಕಿಗೆ ಬಂದಿದೆ. ಇದರ ಬಗ್ಗೆ ನಮಗೆ ತಿಳುವಳಿಕೆ ಆದ ಕೂಡಲೇ ಅಧಿಕಾರಿಗಳ ಮುಖಾಂತರ ವರದಿಯನ್ನು ತರಿಸಿ ಸಂಬಂಧಪಟ್ಟ ಅಧಿಕಾರಿಗಳ ಮೇಲೆ ಎಫ್.ಐ.ಆರ್. ದಾಖಲಿಸುವ ಕೆಲಸ ಕಾರ್ಯಗಳು ನಡೆದಿವೆ. ರಾಮನಗರ, ಚನ್ನಪಟ್ಟಣ ಮತ್ತು ಮಂಡ್ಯ ಪ್ರದೇಶದಲ್ಲಿ ಮೂರು ಬ್ಯಾಂಕುಗಳು ಒಟ್ಟಿಗೆ ಸೇರಿವೆ. ಅವುಗಳ ಹೆಸರು ಕೂಡ ಪ್ರಸ್ತಾಪ ಆಗಿದೆ. ಅಲಹಾಬಾದ ಬ್ಯಾಂಕ್, ವಿಜಯ ಬ್ಯಾಂಕ್ ಮತ್ತು ಇಂಡಿಯನ್ ಬ್ಯಾಂಕಿನ ಹೆಸರು ಕೂಡ ಪ್ರಸ್ತಾಪ ಆಗಿದೆ. ಇದು ಬ್ಯಾಂಕು ಮತ್ತು ಅಭಿವೃದ್ಧಿ ಪ್ರಾಧಿಕಾರಕ್ಕೆ ಸಂಬಂಧಪಟ್ಟ ವಿಚಾರ ಆಗಿರುವ ಹಿನ್ನಲೆಯಲ್ಲಿ ಸಿ.ಐ.ಡಿ. ಯಿಂದ ತನಿಖೆ ಮಾಡಿಸುವ ಅವಕಾಶ ಸ್ವಲ್ಪ

ಮಟ್ಟಿಗೆ ಕಡಿಮೆ ಇದೆ. ಆ ದೃಷ್ಟಿಯಿಂದ ಈ ವಿಚಾರವನ್ನು ಸಿಬಿಐ ತನಿಖೆಗೆ ಅಳವಡಿಸುವ ಬಗ್ಗೆ ಪರಿಶೀಲನೆ ನಡೆಸಲಾಗುತ್ತಿದೆ.

**ಶ್ರೀ ಯಂ.ಸಿ. ನಾಣಯ್ಯ :–** ಮಾನ್ಯ ಸಭಾಪತಿಗಳೇ ಈ ಪ್ರಕರಣದಲ್ಲಿ ಕಮರ್ಷಿಯಲ್ ಬ್ಯಾಂಕಗಳು ಷಾಮೀಲಾಗಿರುವುದರಿಂದ ಕಮರ್ಷಿಯಲ್ ಬ್ಯಾಂಕಗಳಲ್ಲಿ ಒಂದು ಕೋಟಿ ರೂಪಾಯಿಗಿಂತ ಹೆಚ್ಚಿಗೆ ಹಣದ ವಂಚನೆ ಆದರೆ the Government on their own will refer it to CBI.

**ಶ್ರೀ ಯಂಸಿನಾಣಯ್ಯ (ಮುಂದು):–** ತಾವು ಕೂಡ ರೆಫರ್ ಮಾಡಿ.

**ಶ್ರೀ ಎಸ್.ಆರ್.ಪಾಟೀಲ್(ಸಭಾನಾಯಕರು):–** ಅದು ಕೇಂದ್ರಸ್ವಾಮಿತ್ವಕ್ಕೆ ಬರುವುದಿಲ್ಲ.

**ಶ್ರೀ ಯಂ.ಸಿ.ನಾಣಯ್ಯ:–** ಒಂದು ಕೋಟಿ ರೂ.ಗಳಿಂತ ಜಾಸ್ತಿಯಾದರೆ automatically it is referred to the CBI

**ಶ್ರೀ ಪುಟ್ಟಣ್ಣ:–** ಮಾನ್ಯ ಸಭಾಪತಿಗಳೆ, ಮಾನ್ಯ ಸಚಿವರಿಗೆ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ದಯಮಾಡಿ ಅದನ್ನು ಸಿಬಿಐ ಗೆ ಕೊಡಿ.

**ಉಪಸಭಾಪತಿಯವರು:–** ಸದನವನ್ನು ಮಧ್ಯಾಹ್ನ 3 ಗಂಟೆಯವರೆಗೆ ಮುಂದೂಡುತ್ತಿದ್ದೇನೆ.

(ಬೋಜನ ವಿರಾಮಕ್ಕೆಂದು 2 ಗಂಟೆ 01 ನಿಮಿಷಕ್ಕೆ ಮುಂದೂಡಲ್ಪಟ್ಟ ಸದನವು 3 ಗಂಟೆ 32 ನಿಮಿಷಕ್ಕೆ ಮತ್ತೆ ಸಮಾವೇಶಗೊಂಡಿತು) (ಪೀಠದಲ್ಲಿ ಉಪಸಭಾಪತಿಗಳು ಉಪಸ್ಥಿತರಿದ್ದರು)

## 4. ಸಿಇಟಿ ಗೊಂದಲದ ಬಗ್ಗೆ ಮಾನ್ಯ ಉನ್ನತ ಶಿಕ್ಷಣ ಮತ್ತು ಪ್ರವಾಸೋದ್ಯಮ ಸಚಿವರಿಂದ ಸ್ಪಷ್ಟೀಕರಣ

**ಶ್ರೀ ಆರ್.ವಿ.ದೇಶಪಾಂಡೆ (ಉನ್ನತ ಶಿಕ್ಷಣ ಮತ್ತು ಪ್ರವಾಸೋದ್ಯಮ ಸಚಿವರು):–**ಮಾನ್ಯ ಸಭಾಪತಿಗಳೆ ಇವತ್ತು ನಮ್ಮ ಗೌರವಾನ್ವಿತ ವಿರೋಧ ಪಕ್ಷದ ನಾಯಕರು ಶೂನ್ಯವೇಳೆಯಲ್ಲಿ ಒಂದು ವಿಷಯವನ್ನು ಪ್ರಸ್ತಾಪ

ಮಾಡಿದರು. ಆಗ ನಾನು ಕೆಳಮನೆಯ ಪ್ರಶ್ನೋತ್ತರ ಕಲಾಪದಲ್ಲಿದ್ದೆ. ಸದರಿ ವಿಷಯವನ್ನು ನಿಯಮ 68ಕ್ಕೆ convert ಮಾಡಲಾಗಿದೆ ಎಂದು ತಾವು ಹೇಳಿದಿರಿ. ನಾನು ಮಾನ್ಯ ಸಭಾಪತಿಗಳಿಗೆ ಪತ್ರ ಬರೆದಿದ್ದ ನಾಳೆ ಮತ್ತು ನಾಡಿದ್ದು ದೆಹಲಿಯಲ್ಲಿ ಪ್ರವಾಸೋದ್ಯಮ ಸಚಿವರ ಸಮ್ಮೇಳನ ಇರುವುದರಿಂದ ಅಲ್ಲಿಗೆ ಹೋಗಬೇಕಾಗಿದೆ. ಹಾಗಾಗಿ ಈ ವಿಚಾರವನ್ನು ಸದರಿ ದಿನಗಳಲ್ಲ ತೆಗೆದುಕೊಳ್ಳುವುದಕ್ಕೆ ಆಗುವುದಿಲ್ಲ ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ಮಾನ್ಯ ಸಭಾಪತಿಗಳೆ, ಈ ಕುರಿತ ಚರ್ಚೆ ಸಾಕಷ್ಟಾಗಿದೆ. ಒಂದು ಮಾತನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಸಿಇಟಿಯಲ್ಲಿ ಯಾವುದೇ ರೀತಿ ಗೊಂದಲವಿಲ್ಲ. ಇದರ ಬಗ್ಗೆ ಚರ್ಚೆ ಮಾಡುವಂತಹ ಸಂದರ್ಭದಲ್ಲಿ ಹೇಳುತ್ತೇನೆ. ಬಿಜೆಪಿ ಸರ್ಕಾರ ಅಧಿಕಾರದಲ್ಲಿದ್ದಾಗ, 2012ನೇ ಇಸವಿಯಲ್ಲಿ ಶ್ರೀ ವೆಂಕಟರಾಮಯ್ಯ ಸಮಿತಿಯನ್ನು ದೂರುಗಳು ಬಂದ ಹಿನ್ನೆಲೆಯಲ್ಲಿ ರಚನೆ ಆಯಿತು... ಪೋಷಕರು, ವಿದ್ಯಾರ್ಥಿಗಳು, Karnataka Examination Authority, college ನವರು, 8 ರಿಂದ 60 ಸಾವಿರ ರೂಪಾಯಿಗಳ ತನಕ extra ad,ossopm fee. Omtermet Fee. Transport fee ಎಂದು ತೆಗೆದುಕೊಳ್ಳುತ್ತಿದ್ದಾರೆ ಎಂಬ ವಿಚಾರ ಬಂದಾಗ ತಾವೇ One man committee ಯ ರಚನೆ ಮಾಡಿ ಅವರಿಗೆ, ಇದನ್ನು rationalize ಮಾಡಿ ಏನಾಗಿದೆ. ಎಂಬುದರ ಬಗ್ಗೆ ತಿಳಿದುಕೊಂಡು ವರದಿ ಕೊಡಿ ಎಂದು ಆದೇಶ ಕೊಟ್ಟರಿ. ಆ ಸಮಿತಿಯ ವರದಿ ಮಾತ್ರ ನನ್ನ ಹತ್ತಿರ ಬಂದಿದೆ. ಆ ವರದಿ ಮೇಲೆ ಯಾವುದೇ ನಿರ್ಣಯವನ್ನು ಈ ಕ್ಷಣದ ತನಕವೂ ತೆಗೆದುಕೊಂಡಿಲ್ಲ. ಹಾಗಾಗಿ ಗೊಂದಲಗಳಾಗುವುದು ಬೇಡ ಇಂಜಿನಿ ಯರಿಂಗ್ ಆಗಲಿ ಅಥವಾ ಮೆಡಿಕಲ್ ಕಾಲೇಜುಗಳಲ್ಲಿ ಆಗಲಿ ಹಿಂದಿನ ವರ್ಷ ಏನು ಫೀ ಇತ್ತೋ ಅದನ್ನೇ ಇಟ್ಟಿದ್ದೀವೆ. ಅವರೇನು admission fee ತೆಗೆದುಕೊಳ್ಳುತ್ತಿದ್ದರೋ ಅದರ ಪ್ರಶ್ನೆ ಬಂದಾಗ ತಾವು ಸಮಿತಿ ಮಾಡಿದಿರಿ. ಆ ವೆಂಕಟರಾಮಯ್ಯ ಸಮಿತಿಯವರು ಒಂದು ವರದಿಯನ್ನು ಕೊಟ್ಟಿದ್ದಾರೆ. ಆ ವರದಿಯನ್ನು ಪರಿಶೀಲಿಸುತ್ತೇನೆ. ನಿಮಯ 68ರ ಅಡಿ ಚರ್ಚೆ ಆಗುವಾಗ ಆ ವಿಚಾರದ ಬಗ್ಗೆ ತಿಳಿಸುತ್ತೇನೆ. ಗೊಂದಲಗಳಾಗುವುದು ಬೇಡ ಎನ್ನುವ ಕಾರಣಕ್ಕ ಈ ಅಂಶಗಳನ್ನು ತಿಳಿಸುತ್ತಿದ್ದೇನೆ.

**ಶ್ರೀ ಡಿ.ವಿ.ಸದಾನಂದಗೌಡ:-**ಮಾನ್ಯ ಸಭಾಪತಿಗಳ, ಮಾನ್ಯ ಸಚಿವರು ನಾಳೆ ಮತ್ತು ನಾಳಿದ್ದು ಇರುವುದಿಲ್ಲ ಎಂದು ಹೇಳುತ್ತಿದ್ದಾರೆ. ಆದ್ದರಿಂದ ಆ ವಿಚಾರ ವನ್ನು ಸೋಮವಾರ ತೆಗೆದುಕೊಳ್ಳೋಣ. ಏಕೆಂದರೆ. ಅದರ ಬಗ್ಗೆ ತುಂಬಾ ಜನ ಸದಸ್ಯರು ಮಾತನಾಡುವವರಿದ್ದಾರೆ. ಈ ವಿಷಯದಲ್ಲಿ ಗೊಂದ ಲಗಳೇನಿವೆ ಎಂದು ಸರ್ಕಾರಕ್ಕೆ ತಿಳಿಸುವುದು ನಮ್ಮ ಜವಾಬ್ದಾರಿ ಆಗಿರುತ್ತದೆ. ಅದನ್ನು ಹೇಗೆ clarify ಮಾಡುತ್ತೀರಿ ಎಂಬುದನ್ನು ಸದನಕ್ಕೆ ತಿಳಿಸಿ. ಹಿಂದೆ, ಸಿಇಟಿ ಅಂತಹ ವಿಚಾರಗಳ ಬಗ್ಗೆ ಗೊಂದಲ ಮೂಡಿದಾಗ ಸದನದಲ್ಲಿ ಸಂಬಂಧಪಟ್ಟ ಸಚಿವರು will make a statment ಈ ಸಲ ಆ ಕೆಲಸವಾಗಲಿಲ್ಲ. ಆದ್ದರಿಂದ ಸಲ್ಪ ಗೊಂದಲವಾಗಿದೆ.

**ಶ್ರೀ ಆರ್.ವಿ.ದೇಶಪಾಂಡೆ:-** ಸಿಇಟಿಯಲ್ಲಿ ಗೊಂದಲಗಳೇನೂ ಇಲ್ಲ. ಅನುಕೂಲವಾಗುವ ದೃಷ್ಟಿಯಿಂದ ಮೊದಲ ಬಾರಿಗೆ ಆನ್‌ಲೈನ್ ಪೇಮಂಟ್ ವ್ಯವಸ್ಥೆ ಮಾಡಿದೆವು. ಸ್ವಲ್ಪ inconvenience ಆಗಿರಬಹುದು. ಆದ್ದರಿಂದ ಒಂದು ದಿನ, ಅಂದರೆ 16ರ ತನಕ extemd ಮಾಡಿದೆವು. 2 ನೇದಾಗಿ you should appreciate the Government ನಾವು ಜೂನ್ 24ರಿಂದ ಪ್ರಾರಂಭ ಮಾಡಬೇಕಾಗಿತ್ತು. ಆದರೆ for the interest of the students Indian Medical Council ಬರಲಿಲ್ಲ. We started on 2nd July 2013. ಹಿಂದಿನ ಸರ್ಕಾರ ಜುಲೈ 20ರಂದು ಪ್ರಾರಂಭ ಮಾಡಿತ್ತು. The Hon'ble Supreme Court has ordered to finish the admission before 31st July 2013. I assure you before 31st July 2013 we will finish the admission.

**Sri. D.V. Sadananda Gowda :** Ok, we will take this discussion on Monday.

**ಉಪಸಭಾಪತಿಯವರು:-** ಸೋಮವಾರ ಈ ವಿಚಾರವನ್ನು ತೆಗೆದು ಕೊಳ್ಳೋಣ. ಈಗ 2013-14ನೇ ಸಾಲಿನ ಆಯವ್ಯಯದ ಮೇಲಿನ ಮುಂದು ವರೆದ ಚರ್ಚೆ.

**ಶ್ರೀ ಯಂ.ಸಿ.ನಾಣಯ್ಯ:-**ಮಾನ್ಯ ಸಭಾಪತಿಗಳೆ, ಸದನದಲ್ಲಿ ಯಾವ ಮಂತ್ರಿಗಳಿದ್ದಾರೆ ಎಂದು ನಾವು ಮಾತನಾಡಬೇಕು? ಸಭಾನಾಯಕರಿಲ್ಲ.

**ಉಪಸಭಾಪತಿಯವರು:-** ಅವರು ಇನ್ನು 10 ನಿಮಿಷದಲ್ಲಿ ಬರುತ್ತಾರೆ.

**ಶ್ರೀ ಆರ್.ವಿ.ದೇಶಪಾಂಡೆ:-** ಮಾನ್ಯ ನಾಣಯ್ಯನವರು ಬಜೆಟ್ ಮೇಲೆ ಮಾತನಾಡುತ್ತಾರೆ ಎಂದು ನಾನು ಈ ಸದನಕ್ಕೆ ಬಂದೆ. ನಿಮ್ಮ ಮಾತಿನಲ್ಲಿ thought flow ಇರುತ್ತದೆ. ನೀವು ಬ್ಯಾಲೆನ್ಸ್ ಆಗಿ ಮಾತನಾಡುತ್ತೀರಿ.

**ಶ್ರೀ ಯಂ.ಸಿ.ನಾಣಯ್ಯ:-** ಬಿಜೆಪಿ ಸರ್ಕಾರ ಇದ್ದಾಗ ಮಾತನಾಡುವುದಕ್ಕೆ inspiration ಇತ್ತು. ಹುರುಪು ಇತ್ತು ಆದರೆ ನೀವು ಬಂದಮೇಲೆ ಆ inspiration ಮತ್ತು ಹುರುಪು ಹೊರಟು ಹೋಗಿದೆ. ಏಕೆ ಎಂದು ಗೊತ್ತಾಗುತ್ತಿಲ್ಲ.

**ಶ್ರೀ ಡಿ.ವಿ.ಸದಾನಂದಗೌಡ:-** ಮಾನ್ಯ ನಾಣಯ್ಯನವರ ಮಾತಿಗೆ ನನ್ನ ಸಹಮತ ವ್ಯಕ್ತಪಡಿಸುತ್ತೇನೆ. ಕಳೆದ ಸಲ ಮಾನ್ಯ ಸಭಾಪತಿಯವರು ಎಲ್ಲರನ್ನೂ ಕರೆಸಿ, ಸದನದಲ್ಲಿರುತ್ತಿದ್ದ ಕಡಿಮೆ ಹಾಜರಾತಿಯ ಬಗ್ಗೆ ಕಳಕಳಿಯನ್ನು ವ್ಯಕ್ತಪಡಿಸಿ, ಮುಂದಿನ ದಿನಗಳಲ್ಲಿ ಅದಾಗಬಾರದು ಎಂದು ತಿಳಿಸಿದಾಗ ಅದನ್ನು ಎಲ್ಲರೂ ಒಪ್ಪಿಕೊಂಡಿದ್ದರು. ಇವತ್ತಿನ ಪತ್ರಿಕೆಗಳಲ್ಲಿ ಮತ್ತು ಬೇರೆ ಮಾಧ್ಯಮಗಳಲ್ಲಿ, ನಿನ್ನೆ ಕೆಳಮನೆಯಲ್ಲಿ ಸಿಕ್ಕಾಪಟ್ಟೆ ಗಲಾಟೆಯಾಗಿ ವಾಕ್ ಔಟ್ ಆಗಿರುವುದು ಬಂದಿದೆ. ಕಳೆದ ಸಲ ನಾವೂ ಕೂಡ, ನಿಮ್ಮ ಕಡೆಯ ಸದಸ್ಯರೂ ಸದನದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಇರಲಿಲ್ಲ ಎಂದು ಹೊರಗೆ ಹೋಗಿದ್ದೆವು. ನಿಮಗೆ ಪದೇ ಪದೇ ಚಾಟಿ ಏಟು ಕೊಟ್ಟಿದ್ದೇವೆ. ಆದರೆ ನಿಮ್ಮದು ಅಷ್ಟೊಂದು ದಪ್ಪ ಚರ್ಮವಾಗಿ ಬಿಟ್ಟಿದೆಯಲ್ಲ ಎಂದು ಹೇಳಲು ಬೇಸರವಾಗುತ್ತಿದೆ. ಮಾನ್ಯ ಅಭಯಚಂದ್ರರವರು ಮಧ್ಯಾಹ್ನ ಊಟಕ್ಕೂ ಹೋಗದೇ ಇಲ್ಲೇ ಕುಳಿತುಕೊಂಡಿರುತ್ತಾರೆ. ಅವರ ಬಗ್ಗೆ ಏನೂ ಹೇಳುವುದಿಲ್ಲ. ಈ ಸದನಲ್ಲಿ ಯಾವಾಗಲೂ ನೋಡುವಂಥದ್ದು ಅವರನ್ನು ಮಾತ್ರ, ಯುವಜನ ಸೇವೆ ಬಗ್ಗ ಮಾತನಾಡುವಾಗ ನಮ್ಮಲ್ಲಿ ಯಾರೋ, ಅವರು ಯುವಕರ ಹಾಗೆ ಕಾಣಲು ತಲೆಕೂದಲಿಗೆ ಮತ್ತು ಮೀಸೆಗೆ ಸ್ವಲ್ಪ ಪೇಯಿಂಟ್

ಹಾಕಿಕೊಂಡು ಬರಬೇಕೆಂದು ಹೇಳುತ್ತಿದ್ದರು. (ಸದನದಲ್ಲಿ ನಗು) ಮಾನ್ಯ ಸಭಾಪತಿಗಳ, ಬಜೆಟ್ ಮೇಲೆ ಚರ್ಚೆ ಆಗುವಾಗ ಕನಿಷ್ಠ ಫ್ಲೋರ್ ಲೀಡರ್ ಗಳಾದರೂ ಇರಬೇಕು. ನಾನು ನಿನ್ನೆ ಮಾತನಾಡಿದೆ. ಇವತ್ತು ಮಾನ್ಯ ನಾಣಯ್ಯನವರು ಮಾತನಾಡುತ್ತಾರೆ. ಅಧಿಕಾರಿಗಳೂ ಕೂಡ.ಯಾಕೋ ಏನೋ ಗೊತ್ತಿಲ್ಲ. ನಿಮ್ಮಗಳ ಮಧ್ಯೆ ಸಮಯದ adjustment ಆಗಿಲ್ಲ ಎಂದು ಕಾಣು ತ್ತದೆ. ಏಕೆಂದರೆ ಅವರೂ ಕೂಡ ಹನಿಮೂನ್ ಪಿರಿಯಡ್‌ಗೆ ಹೋದದ್ದನ್ನು ನಾನು ಕಂಡಿದ್ದೇನೆ. ನಿಮ್ಮ ಮೇಲೆ ಆರೋಪಗಳನ್ನು ಮಾಡುವುದಕ್ಕೆ ಹೇಳು ತ್ತಿಲ್ಲ. ಹಿಂದೆ ನಮ್ಮ ಸರ್ಕಾರ ಇದ್ದಾಗ ಕೂಡ ನೀವು ನಮಗೆ ಇಂತಹ ಮಾತುಗಳನ್ನು ಹೇಳಿದ್ದಿರಿ. ಆಗ ನಾವು ಎಚ್ಚೆತ್ತುಕೊಂಡು ಕೆಲಸ ಮಾಡು ತ್ತಿದ್ದೆವು. ಇವತ್ತು ಅದು ಆಗುತ್ತಿಲ್ಲ. ಸದನದಲ್ಲಿ ಉಪಸ್ಥಿತಿ ಬಗ್ಗೆ ಹೆಚ್ಚು ಒತ್ತು ಕೊಡುವಂತಹ ಕೆಲಸವಾಗಬೇಕು. ನೀವು ಮಾತ್ರವಲ್ಲ ನಮಗೂ ಅದು ಅನ್ವಯವಾಗುತ್ತದೆ. ನಮ್ಮ ಮುಖ್ಯ ಸಚೇತಕರಿಗೆ, ಸದನಕ್ಕೆ ಬರದವರಿಗೆ ಬೆಳಿಗ್ಗೆ ಮತ್ತು ಮಧ್ಯಾಹ್ನ ದೂರವಾಣಿ ಮಾಡಿ ಬರಲು ತಿಳಿಸಿ ಎಂದು ಪ್ರತಿನಿತ್ಯ ಹೇಳುತ್ತಿರುತ್ತೇನೆ.

**ಶ್ರೀ ಆರ್.ವಿ.ದೇಶಪಾಂಡೆ:-**ಮಾನ್ಯ ಸಭಾಪತಿಗಳೆ, ನಾವು ಇದರ ಬಗ್ಗೆ ಕ್ರಮ ತೆಗೆದುಕೊಳ್ಳುತ್ತೇವೆ ಎಂದು ಭರವಸೆ ಕೊಡುತ್ತೇವೆ.

**ಶ್ರೀ ಡಿ.ವಿ.ಸದಾನಂದಗೌಡ:-** ನಾನಿದನ್ನು ಪದೇ ಪದೇ ಓದಬಾರದು, ಅದು ಒಳ್ಳೆಯದಲ್ಲ. ಅದು ಏನೆಂದರೆ, ಸದನದಲ್ಲಿ ಇವತ್ತು ಕಡ್ಡಾಯವಾಗಿ ಹಾಜರಿರಬೇಕಾದ ಸಚಿವರು ಮಾನ್ಯ ಶರಣಪ್ರಕಾಶ್ ರುದ್ರಪ್ಪ ಪಾಟೀಲ್, ಮಾನ್ಯ ಖಮರುಲ್ ಇಸ್ಲಾಂ. ಮಾನ್ಯ ಖಮರುಲ್ ಇಸ್ಲಾಂರವರ ಮುಖವನ್ನು ಇವತ್ತು ಬೆಳಗಿನಿಂದಲೂ ನಾವು ನೋಡಿಲ್ಲ. ಇವರು ಇವತ್ತು ಕಡ್ಡಾಯವಾಗಿ ಈ ಸದನದಲ್ಲಿ ಇರಬೇಕಾಗಿತ್ತು.

ಮಾನ್ಯ ರಾಮಲಿಂಗಾರೆಡ್ಡಿಯವರು ಸದನದಲ್ಲಿ ಇದ್ದಾರೆ. ಅವರ ಬಗ್ಗೆ ನಾನು ಏನು ಹೇಳುವುದಿಲ್ಲ. ಮಾನ್ಯ ಶಾಮನೂರು ಶಿವಶಂಕರಪ್ಪನವರು ಸ್ವಲ್ಪ ವಯಸ್ಸಾದವರು, ಅವರಿಗೆ ಬಹಳ ಕಷ್ಟವಾಗುತ್ತದೆ. ಒಮ್ಮೊಮ್ಮೆ ಬರುತ್ತಾರೆ.

ಹೋಗುತ್ತಾರೆ. ಮಾನ್ಯ ಕೃಷ್ಣಭೈರೇಗೌಡರು ಹಾಜರಾತಿ ಹಾಕಿದರು ಹೋದರು. ಮಾನ್ಯ ಆಂಜನೇಯರವರು ಹೇಗೆ ಮಾಯವಾಗಿಬಿಟ್ಟರು ಆಂಜನೇಯನಾಗಿ ಲಂಕಾದಹನಕ್ಕೆ ಹೋಗಿದ್ದಾರೆಯೋ ಎಲ್ಲಿಗೆ ಹೋಗಿದ್ದಾರೆಯೋ ನಮಗೆ ಗೊತ್ತಿಲ್ಲ.

**ಶ್ರೀ ಆರ್.ವಿ.ವೆಂಕಟೇಶ್:–** ಆ ರೀತಿ ಎಲ್ಲಾ ಹೇಳಬೇಡಿ.

(ಗೊಂದಲ)

**ಶ್ರೀ ಸದಾನಂದಗೌಡ:–** ವೆಂಕಟೇಶರವರೇ, ತಾವು ಕುಳಿತುಕೊಳ್ಳಿ ತಮ್ಮ ಜವಾಬ್ದಾರಿಯಿಂದ ನುಳಿಚಿಕೊಳ್ಳುವ ಕೆಲಸ ಮಾಡಬೇಡಿ.

**ಶ್ರೀ ಆರ್.ವಿ.ವೆಂಕಟೇಶ್:–** ಏನಾಗಿದೆ ಎಂಬುದನ್ನು ತಿಳಿಸುವುದಕ್ಕೆ ಅವಕಾಶ ಕೊಡಿ.

**ಶ್ರೀ ಡಿ.ವಿ.ಸದಾನಂದಗೌಡ:–** ನೀವು ಹೇಳಿದ್ದಕ್ಕೆ ನಮ್ಮಲ್ಲಿ explanation ನಾವು ಹೇಳಿದ್ದಕ್ಕೆ ನಿಮ್ಮಲ್ಲಿ explanation ಇದು ಎಲ್ಲಾ ಕಡೆ ಇದೆ. ಇಷ್ಟು ಜನ ಮಂತ್ರಿಗಳು ಕಡ್ಡಾಯವಾಗಿ ಇರಬೇಕೆಂದು ಹೇಳಿದ್ದಾರೆ. ಇದನ್ನೇನು ಕೆಲಸ ಇಲ್ಲದೆ ಅಲಾಟ್‌ಮೆಂಟ್ ಮಾಡಿದ್ದಾರೆಯೇ? ನಾನು ಅದನ್ನೇ ಹೇಳಿದೆ, ಶಾಮ ನೂರು ಶಿವಶಂಕರಪನವರು ಒಬ್ಬ ಹಿರಿಯರಿದ್ದಾರೆ. ಅವರ ಮಾತು...

**ಶ್ರೀ ಆರ್.ವಿ.ದೇಶಪಾಂಡೆ:–** ಮಾನ್ಯ ವಿರೋಧ ಪಕ್ಷದ ನಾಯಕರೇ, ನಾನೇ ನಿಮ್ಮ ಸಲಹೆಯನ್ನು ಒಪ್ಪಿಕೊಂಡಿದ್ದೇನೆ. ಆಂಜನೇಯ, ರಾಮ ಎಲ್ಲಾ ಏಕೆ? ಅದನ್ನು ಬಿಟ್ಟುಬಿಡಿ. ತಾವು ಹೇಳಿರುವುದು ಸರಿಯಾಗಿದೆ. It is our duty to here. ನಮ್ಮ treasury benches ಎಲ್ಲಾ chairs occupy ಆಗಬೇಕು, ಅದನ್ನು ನಾನು ಒಪ್ಪಿಕೊಳ್ಳುತ್ತೇನೆ. ಅದರ ಬಗ್ಗೆ ಮುಖ್ಯ ಸಚೇತಕರು ಕ್ರಮ ತೆಗೆದುಕೊಳ್ಳುತ್ತಾರೆ.

**ಶ್ರೀ ಡಿ.ವಿ.ಸದಾನಂದಗೌಡ:–** ಮಾನ್ಯ ಸಭಾಪತಿಯವರೇ, ನಾವು ಅದನ್ನು ಇಲ್ಲಿ ಹೇಳಬಹುದೋ ಏನೋ ಗೊತ್ತಿಲ್ಲ. ನಮ್ಮ ಸದನಕ್ಕೆ ಮುಖ್ಯ ಮಂತ್ರಿಗಳಾಗಲಿ, ಕಾನೂನು ಮತ್ತು ಸಂಸದೀಯ ಸಚಿವರಾಗಲಿ, ಅವರಿಗೆ ಇಲ್ಲಿ

ಸದನ ಉಂಟು ಎನ್ನುವ ಪರಿಜ್ಞಾನ ಇಲ್ಲವೇ ಎಂದು ನನಗನಿಸುತ್ತಿದೆ. ಕನಿಷ್ಟ ಮುಖ್ಯಮಂತ್ರಿಗಳು ಬಂದಾಗ, ಕಾನೂನು ಸಂಸದೀಯ ಮಂತ್ರಿಗಳು ಬರುವುದು ಬೇಡ. ಕನಿಷ್ಟ ಕಾನೂನು ಸಂಸದೀಯ ಮಂತ್ರಿಗಳಾದರೂ ದಿನಕ್ಕೆ ಒಂದು ಗಂಟೆ ಬಂದು ಇಲ್ಲಿ ಕುಳಿತುಕೊಂಡು, ಕಾನೂನು ಮತ್ತು ಸಂಸದೀಯ ವ್ಯವಸ್ಥೆಗೆ ಸರಿಯಾದ ಗೌರವವನ್ನು ತರುವಂತಹ ಕೆಲಸ ಕಾರ್ಯಗಳನ್ನು ಮಾಡಬೇಕು. ಈ ವಾರದಲ್ಲಿ ಇದುವರೆಗೂ ಅವರು ಸದನಕ್ಕೆ ಬಂದಿಲ್ಲ... ಬಂದಿದ್ದಾರೆಯೇ ಎಂದು ಮುಖ್ಯ ಸಚೇತಕರೇ ಹೇಳಲಿ. ಮಾನ್ಯ ದೇಶಪಾಂಡೆಯವರು ಸತ್ಯ ಸಂಗತಿಗಳನ್ನು ಒಪ್ಪಿಕೊಳ್ಳುವಂತಹ ಒಬ್ಬ ಹಿರಿಯ ಸಚಿವರಾಗಿದ್ದಾರೆ. ಅದಕ್ಕಾಗಿ ನಾನು ಹೇಳುತ್ತಿದ್ದೇನೆ. ಮೇಲ್ಮನೆಯ ಸದನ ಎಂದರೆ, ಇದೊಂದು ಬುದ್ಧಿವಂತರ, ಪ್ರಜ್ಞಾವಂತರ ಸದನ ಎನ್ನುವ ಲೆಕ್ಕ, ಅದು ಇರಬಹುದು. ಸ್ವಲ್ಪ political rehabilitation ಗೆ ಎಲ್ಲಾ ಇದೇ ಸೆಂಟರ್.. ನಾನು ಇಲ್ಲ ಎಂದು ಹೇಳುವುದಿಲ್ಲ. ಆದರೆ, ಈ ಸದನ ಕೇವಲ ಅವರಿಗೆ ಮಾತ್ರ ಅಲ್ಲ, ಮಾಧ್ಯಮದವರು, ಎಲ್ಲಾ ಪತ್ರಕರ್ತ ಮಿತ್ರರು ಬರುತ್ತಾರೆ. ಇಲ್ಲಿ ಗಂಭೀರವಾದ ಚರ್ಚೆ ಅಲ್ಲಿಗಿಂತ ಜಾಸ್ತಿ ಚರ್ಚೆಯಾಗುತ್ತದೆ. ಮೇಲ್ಮನೆಯ ಸದನದಲ್ಲಿ. ಆದಂತಹ ಚರ್ಚಾ ವಸ್ತುಗಳು ಕಣ್ಮರೆಯಾಗುತ್ತಿರುವುದನ್ನು ನೋಡುತ್ತಿದ್ದೇವೆ. ಇವತ್ತು ಏನು ಗೌರವಗಳಿರಬೇಕು. ಎಂದು ಹಿಂದೆಲ್ಲಾ ಅಪೇಕ್ಷೆಪಟ್ಟು ವಿಧಾನ ಪರಿಷತ್ತನ್ನು ಮಾಡಿದ್ದಾರೆ, ಆ ಘನತೆ ಗೌರವಗಳು ಇವತ್ತು ಜನಪ್ರತಿನಿಧಿಗಳಿಗೂ ಇಲ್ಲ. ಮಾಧ್ಯಮದವರಿಗೂ ಇಲ್ಲ, ಯಾರಿಗೂ ಇಲ್ಲದಂತಹ ಪರಿಸ್ಥಿತಿಯನ್ನು ನಾನು ಕಂಡಿದ್ದೇನೆ. ನಾನು ಮನನೊಂದು ಈ ಮಾತನ್ನು ಹೇಳುತ್ತಿದ್ದೇನೆ. ಖಂಡಿತವಾಗಿಯೂ ಇದನ್ನು ಸರಿಪಡಿಸುತ್ತೇವೆ ಎಂದು ಅವರು ಹೇಳಿದ್ದಾರೆ. ಇದನ್ನು ಸರಿ ಮಾಡುತ್ತಾರೆ ಎಂದು ನನಗೆ ವಿಶ್ವಾಸ ಇದೆ.

**ಶ್ರೀ ಆರ್.ವಿ.ದೇಶಪಾಂಡೆ:-** ಮಾನ್ಯ ಸಭಾಪತಿಯವರೇ, ನಮಗೆ ವ್ಯಕ್ತಿಗತವಾಗಿ ನಮ್ಮ ಪಕ್ಷಕ್ಕೆ ನಮ್ಮ ಸರ್ಕಾರಕ್ಕೆ ಮೇಲ್ಮನೆ ಬಗ್ಗೆ ಅವರಿಗೆಷ್ಟು ಗೌರವವಿದೆ ಅದಕ್ಕಿಂತ ಕಡಿಮೆ ಗೌರವ ನಮ್ಮಗಿಲ್ಲ. ಇನ್ನೂ ಹೆಚ್ಚಿನ ಗೌರವ ಇದೆ. ಇಲ್ಲಿ ಆಗುವ ಚರ್ಚೆಗಳೂ ಕೂಡ ಪಗ್ರತಿ ಪರ ವಿಚಾರಗಳಾಗಿವೆ.

ಸಾಕಷ್ಟು ಒಳ್ಳೆಯ ಸಲಹೆಗಳು ಇಲ್ಲಿ ಬರುತ್ತವೆ. ಕೆಳಗಿನ ಮನೆಯಲ್ಲೂ ಕೂಡ ಮುಂಗಡ ಪತ್ರದ ಬಗ್ಗೆ ಚರ್ಚೆಗಳು ನಡಯುತ್ತಿವೆ. ಹಾಗಾಗಿ ಮುಖ್ಯಮಂತ್ರಿಗಳು ಇಲ್ಲಿಗೆ ಬರುವುದಕ್ಕೆ ಆಗಿಲ್ಲ. ಮುಖ್ಯಮಂತ್ರಿಗಳಿಗೆ, ಕಾನೂನು ಸಚಿವರಿಗೆ ಈ ಸದನದ ಬಗ್ಗೆ ಸಾಕಷ್ಟು ಗೌರವ ಇದೆ. ಅವರ ಸಲಹೆ ಏನಿದೆ ಅದನ್ನು ಮುಖ್ಯಮಂತ್ರಿಗಳ ಗಮನಕ್ಕೆ ತರುತ್ತೇವೆ. ಇನ್ನು ಮುಂದೆ ಸಂಬಂಧಪಟ್ಟ ಎಲ್ಲಾ ಸಚಿವರು ಸದನದಲ್ಲಿ ಹಾಜರಾಗಿರುತ್ತಾರೆ. ಸದನಕ್ಕೆ ಹಾಜರಾಗುವುದು ಅಧಿಕಾರಿಗಳ ಜವಾಬ್ದಾರಿ. ಅಧಿಕಾರಿಗಳು ಸದನಕ್ಕೆ ಹಾಜರಾಗದಿದ್ದರೆ ಅವರ ಮೇಲೆ ಕ್ರಮ ತೆಗೆದುಕೊಳ್ಳುವ ಶಕ್ತಿ ಸರ್ಕಾರಕ್ಕೆ ಇದೆ. ಅವರ ಮೇಲೆ ಕ್ರಮ ತೆಗೆದುಕೊಳ್ಳುತ್ತೇವೆ.

**ಶ್ರೀ ಸಿ.ಹೆಚ್.ವಿಜಯಶಂಕರ:–** ಮಾನ್ಯ ದೇಶಪಾಂಡೆಯವರೇ, ತಾವು ಮುಂದಿನ ಸಾಲು ನೋಡಿ, ತಮ್ಮ ಹಿಂದಿನ ಸಾಲು ನೋಡಿ. ಮುಖ್ಯಮಂತ್ರಿಗಳು, ಕಾನೂನು ಸಂಸದೀಯ ಸಚಿವರುಗಳಿರಲಿ, ನಿಮ್ಮ ಹಿಂದಿನ ಎಲ್ಲಾ ಚೆರ್‌ಗಳೂ ಕೂಡ ಖಾಲಿ ಇವೆ. ಮೇಲ್ಮನೆ ರೋಸ್ಟರ್ ಬಗ್ಗೆ ಇವತ್ತೇನು ಮಾನ್ಯ ವಿರೋಧ ಪಕ್ಷದ ನಾಯಕರು ಓದಿದರು, ವಿಧಾನ ಪರಿಷತ್ತಿನ ಬಗ್ಗೆ ಏನಾದರೂ ನಿಮ್ಮ ಮನಸ್ಸಿನಲ್ಲಿ ತಾತ್ಸಾರ ಇದೆಯೇ? ತಾತ್ಸಾರ ಇಲ್ಲದಿದ್ದರೆ ದಯವಿಟ್ಟು ರೋಸ್ಟರ್ನಲ್ಲಿರುವ ಮಂತ್ರಿಗಳನ್ನು ಕರೆಸುವಂತಹ ಕೆಲಸ ಮಾಡಿ.

**ಶ್ರೀ ಮತ್ತಿಕಟ್ಟಿ ವೀರಣ್ಣ :–** ಜಯಶಂಕರ್‌ರವರೇ, ನಿಮ್ಮ ಹಿಂದಿನ ಸಾಲಿನಲ್ಲೂ ಇಲ್ಲ. ಆದ್ದರಿಂದ ಒಬ್ಬರ ಬೆನ್ನು ಒಬ್ಬರಿಗೆ ಕಾಣುವುದಿಲ್ಲ. ನಿಮ್ಮ ಬೆನ್ನು ನಿಮಗೆ ಕಾಣುತ್ತಿಲ್ಲ.

**ಶ್ರೀಮತಿ ಮೋಟಮ್ಮ:–** ಮಾನ್ಯ ಸಭಾಪತಿಯವರೇ, ಒಂದು ಮಾತನ್ನು ಹೇಳುತ್ತೇನೆ.

**ಉಪ ಸಭಾಪತಿಯವರು:–** ಬೇಡ, ಒಬ್ಬರಿಗೊಬ್ಬರು ಉತ್ತರ ಕೊಟ್ಟುಕೊಂಡು ನಿಂತುಕೊಳ್ಳುತ್ತೀರಾ?

**ಶ್ರೀ ಯಂ.ಸಿ.ನಾಣಯ್ಯ:-** ಮಾನ್ಯ ಸಭಾಪತಿಯವರೇ, ನಾನು ಮಾತನಾಡುತ್ತೇನೆ. ತಾವು ಎಲ್ಲರಿಗೂ ಕುಳಿತುಕೊಳ್ಳುವುದಕ್ಕೆ ಹೇಳಿ. I don't yield for anybody.

**ಶ್ರೀ ವೈ.ಎ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ಮಾನ್ಯ ನಾಣಯ್ಯನವರು ವಿತ್ತೀಯ ಕಲಾಪದ ಬಗ್ಗೆ ಚರ್ಚೆ ಮಾಡುವುದಕ್ಕೆ ಪ್ರಾರಂಭ ಮಾಡುತ್ತಿದ್ದಾರೆ. ಆರ್ಥಿಕ ಇಲಾಖೆಯಿಂದ ಯಾರು ಕಾರ್ಯದರ್ಶಿಗಳು ಸದನಕ್ಕೆ ಬಂದಿಲ್ಲ... ಆದ್ದರಿಂದ ನನ್ನ ಮನವಿ ಏನೆಂದರೆ, ನಿಯಮ 72 ರಲ್ಲಿ ಒಂದು ವಿಷಯ ಇದೆ. ಮಾನ್ಯ ದೇಶಪಾಂಡೆಯವರು ಇಲ್ಲೇ ಇದ್ದಾರೆ. ಆ ವಿಷಯವನ್ನು ತೆಗೆದುಕೊಂಡು ಮುಗಿಸಿಬಿಡಿ. ಅಷ್ಟೊತ್ತಿಗೆ ಎಲ್ಲರೂ ಬರುತ್ತಾರೆ. ಆಗ ಮುಂಗಡ ಪತ್ರದ ಬಗ್ಗೆ ಚರ್ಚೆ ಮಾಡಬಹುದು.

## 5 ವಿತ್ತೀಯ ಕಾರ್ಯಕಲಾಪ

### 2013-2014ನೇ ಸಾಲಿನ ಪರಿಷ್ಕತ ಆಯವ್ಯಯ ಅಂದಾಜು ಮೇಲಿನ ಮುಂದುವರೆದ ಚರ್ಚೆ

**ಶ್ರೀ ಯಂ.ಸಿ.ನಾಣಯ್ಯ (ವಿಧಾನಸಭಾ ಕ್ಷೇತ್ರ):-** ಮಾನ್ಗ ಸಭಾಪತಿಯವರೇ, ಇವತ್ತು ಸಾಮಾನ್ಯ ಚರ್ಚೆ ಮುಂಗಡ ಪತ್ರದ ಮೇಲೆ ನಮ್ಮ ವಿರೋಧ ಪಕ್ಷದ ನಾಯಕರು ಮಾತನಾಡಿದ ಮೇಲೆ ನನ್ನ ಸರದಿ ಬಂದಿದೆ. ನಾನು ಈ ಸಂದರ್ಭದಲ್ಲಿ ಮಾತನಾಡುವಾಗ ಈ ಮುಂಗಡ ಪತ್ರಗಳನ್ನೆಲ್ಲಾ ತಯಾರು ಮಾಡುವುದು, ವಿಧೇಯಕಗಳನ್ನೆಲ್ಲಾ ತಯಾರು ಮಾಡುವುದು ಯಾರು ಎಂಬುದು. ನಮಗೆಲ್ಲಾ ಗೊತ್ತಿದೆ ಮತ್ತು ರಾಜ್ಯಪಾಲರ ಭಾಷಣವನ್ನು ತಯಾರು ಮಾಡುವುದು ಯಾರು ಎನ್ನುವುದು ನಮಗೂ ಅವರಿಗೂ ಗೊತ್ತಿದೆ. ಮುಖ್ಯಮಂತ್ರಿಗಳು ಕುಳಿತುಕೊಂಡು ಇದನ್ನು ಬರೆಯುತ್ತಾರೆಯೇ ? ಮುಖ್ಯ ಮಂತ್ರಿಗಳು ಇವತ್ತು ಅರ್ಥ ಸಚಿವರಾಗಿದ್ದಾರೆ. ಮುಖ್ಯಮಂತ್ರಿಗಳು ಕುಳಿತು ಕೊಂಡು ಇದನ್ನು ಬರೆದುಕೊಂಡು ಹೀಗೆ ಆಗಬೇಕು ಹಾಗೆ ಆಗಬೇಕು ಎಂದು ಹೇಳುವುದಿಲ್ಲ. ಮನಸ್ಸಿನಲ್ಲಿರತಕ್ಕಂಥ ಕಲವು ಅಚಾರಗಳನ್ನು ಪಕ್ಷವೊಂದು ಹೊಸದಾಗಿ ಅಧಿಕಾರಕ್ಕೆ ಬಂದಿದೆ, ಅಧಿಕಾರಕ್ಕೆ ಬಂದಾದ ಮೇಲೆ

ನಮ್ಮ ಪಕ್ಷ ಮತ್ತು ನಮ್ಮ ಪಕ್ಷದ ಪ್ರಣಾಳಿಕೆ ಮತ್ತು ನನಗೆ ಮತದಾರರು ಕೊಟ್ಟಿರತಕ್ಕಂಥ ಮತ, ನಮ್ಮನ್ನು ಅಧಿಕಾರಕ್ಕೆ ತಂದಿರುವಂತಹ ಹಿನ್ನೆಲೆ, ಚುನಾವಣ ಸಂದರ್ಭದಲ್ಲಿ ಭರವಸೆ ಕೊಟ್ಟಿರತಕ್ಕಂಥದ್ದು ಇದೆಯಲ್ಲಾ ಅದನ್ನು ನಾವು ಯಾವ ರೀತಿ ನಮ್ಮ ಮೊದಲ ಮುಂಗಡ ಪತ್ರದಲ್ಲೇ ಜಾರಿಗೆ ತರಬೇಕೆನ್ನುವ ಕೆಲವು ಮೂಲಭೂತವಾಗಿರುವ ಚಿಂತನೆಗಳನ್ನು ಅಳವಡಿಸಿ ಅದನ್ನು ಮುಂಗಡ ಪತ್ರದಲ್ಲಿ ತರುವಂತಹ ಪ್ರಯತ್ನ ಮಾಡುತ್ತಾರೆ. ಆದರೆ, ಮಾನ್ಯ ಸಿದ್ದರಾಮಯ್ಯನವರಿಗೆ ಕಷ್ಟವಾಗಿರುವುದು ಏಕಂದರೆ, ಮಾನ್ಕ ಜಗದೀಶ್ ಶೆಟ್ಟರ್‌ರವರು 8ನೇ ಫೆಬ್ರವರಿ 2013 ರಂದು ಒಂದು ಮುಂಗಡ ಪತ್ರವನ್ನು ಮಂಡಿಸಿದರು. ಆ ಸಂದರ್ಭದಲ್ಲಿ ಮೇ ತಿಂಗಳಿನಲ್ಲಿ ಚುನಾವಣೆ ಆಗಲೇ ಬೇಕೆಂದು ಮಾನ್ಯ ಜಗದೀಶ್ ಶೆಟ್ಟರ್‌ರವರಿಗೂ ಗೊತ್ತಿತ್ತು. ಮೇ ತಿಂಗಳಿನಲ್ಲಿ ಚುನಾವಣೆಯಾಗಲೇಬೇಕೆಂದು ಗೊತ್ತಿದ್ದ ಮೇಲೆ ಮುಂಗಡ ಪತ್ರದ ಸ್ವರೂಪ ಯಾವ ರೀತಿ ಇರಬೇಕು ಎನ್ನುವುದರ ಬಗ್ಗೆ ಸ್ವಲ ಜಿಜ್ಞಾಸೆ ನಡೆಯುತ್ತಿದೆ. ನಾನು ಜಗದೀಶ್ ಶೆಟ್ಟರ್‌ರವರು ಪತ್ರಿಕಾ ಹೇಳಿಕೆ ಕೊಟ್ಟಿರುವುದನ್ನು ಗಮನಿಸಿದ್ದೇನೆ. ಬಹುಶಃ ಇದು ರಾಜ್ಯಾಂಗ ಬದ್ಧವಾಗಿ ಸರಿಯಾದ ಕ್ರಮವೇ ಎನ್ನುವ ಪ್ರಶ್ನೆ ಮಾಡಿದ್ದಾರೆ. ಎರಡನೇ ಮುಂಗಡ ಪತ್ರವನ್ನು ಮಂಡಿಸುವುದಕ್ಕೆ ಕ್ರಮ ಏಕೆ ಕೈಗೊಂಡರು, ಬೇಕಾದರೆ ಅವರು ಒಂದು supplementary estimates ಮುಖಾಂತರ ಇದನ್ನು ತರುವುದಕ್ಕೆ ಕ್ರಮ ಕೈಗೊಳ್ಳಬಹುದಾಗಿತಲ್ಲವೇ ಎನ್ನುವುದನ್ನು ಹೇಳಿದ್ದಾರೆ. ನಿಜ, ಅದನ್ನು ಕೇಳುವುದು ತಪ್ಪೇನು ಅಲ್ಲ. ಸರ್ಕಾರದಲ್ಲಿದ್ದವರು ಬಿಜೆಪಿಯವರು. ಅವರ ಜಾಗವನ್ನು ಅತಿಕ್ರಮಣ ಮಾಡಿದವರು ಕಾಂಗ್ರೆಸ್‌ನವರು Lawful encroachment ಇದೆ.

**ಶ್ರೀ ಮತ್ತಿಕಟ್ಟಿ ವೀರಣ್ಣ :–** ಮಾನ್ಯ ನಾಣಯ್ಯನವರೇ, ತಾವು ಹಿರಿಯರಿದ್ದೀರಿ. ಅತಿಕ್ರಮಣದ ಬದಲಾಗಿ ಕ್ರಮಬದ್ಧವಾಗಿ ಜನ ಬೆಂಬಲ ಪಡೆದು ಬಂದಿದ್ದೇವೆ.

**ಶ್ರೀ ಯಂ.ಸಿ.ನಾಣಯ್ಯ:–** ಸಾಮಾನ್ಯವಾಗಿ ಏನಾಗುತ್ತದೆ ಎಂದರೆ, ನನ್ನ ಅಕಾರವನ್ನು ಇನ್ನು ಯಾರಾದರೂ ಸ್ವಲ್ಪ ಮಟ್ಟಿಗೆ ಮೊಟಕು ಮಾಡಿ ಆ ಅಧಿಕಾರವನ್ನು ಸ್ವೀಕಾರ ಮಾಡುವಾಗ you are encroaching upon my

rights ಎಂದು ನಾವು ಹೇಳುವುದಿಲ್ಲವೆ? That is the normal word to be used in the normal parlance. ಆದ್ದರಿಂದ ನೀವು ಅತಿಕ್ರಮಣ ಮಾಡಿದ್ದೀರಿ ಎಂದು ಇಟ್ಟುಕೊಳ್ಳಿ. ಆದರೆ, ನಿಮ್ಮಿಬ್ಬರ ಮಧ್ಯದಲ್ಲಿ ನಾವು ಇಲ್ಲ. ನಾವು ಈಗ ಹೇಳಬೇಕಾಗಿರುವುದು ನಿಮ್ಮಿಬ್ಬರ ಮಧ್ಯೆ ಅಧಿಕಾರದಲ್ಲಿದ್ದವರು ಐದು ವರ್ಷ ಅವರು... ಆ ಅಧಿಕಾರವನ್ನು ಅತಿಕ್ರಮಣ ಮಾಡಿಕೊಂಡಿರುವವರು ನೀವು. ಈಗ ನಿಮ್ಮಿಬ್ಬರ ಮಧ್ಯೆದಲ್ಲಿರತಕ್ಕಂಥ ವಿಚಾರವನ್ನು ನಾವು ಹೇಳಬೇಕಾಗುತ್ತದೆ. ಶ್ರೀಯುತ ಜಗದೀಶ್ ಶೆಟ್ಟರ್‌ರವರಿಗಿಂತ ಮುಂಚೆ ಮಾನ್ಯ ವಿರೋಧ ಪಕ್ಷದ ನಾಯಕರು ಸಹ ಹಿಂದೆ ಅವರು ಒಂದು ಮುಂಗಡ ಪತ್ರವನ್ನು ಮಂಡಿಸಿ ದ್ದಾರೆ. ಆ ಮುಂಗಡ ಪತ್ರವೂ ಸಹ ನನ್ನ ಹತ್ತಿರ ಇದೆ. ಆ ಮೂರು ಮುಂಗಡ ಪತ್ರವನ್ನು ನೋಡಿದ್ದೇನೆ. ಆದರೆ, ನಾವು ಒಂದು ವಿಪರ್ಯಾಸ ವನ್ನು ನೋಡುತ್ತಿದ್ದೇವೆ. ಈ ರೀತಿ ಪರಿಸ್ಥಿತಿ ಏನಿದೆ,

ಒಂದೇ ವರ್ಷದಲ್ಲಿ ಎರಡು ಸರ್ಕಾರ ಎರಡು ಮುಂಗಡಪತ್ರಗಳನ್ನು ಮಂಡಿಸಿರತಕ್ಕಂತಹದ್ದು ನಮ್ಮ ಕರ್ನಾಟಕ ರಾಜ್ಯದ ಪ್ರಜಾ ತಂತ್ರ ವ್ಯವಸ್ಥೆಯಲ್ಲಿ ನಡೆದಿದೆ... ಯಾವಾಗ ನಡದಿದೆ ಎಂದರೆ ಶ್ರೀಯುತ ಎಸ್.ಎಂ. ಕೃಷ್ಣರವರು ಮುಖ್ಯಮಂತ್ರಿಗಳಾಗಿದ್ದಾಗ 5ನೇ ಫಬ್ರವರಿ 2004 ಕ್ಕೆ ಒಂದು ಮುಂಗಡ ಪತ್ರ ವನ್ನು ಮಂಡಿಸಿದರು. ಆ ಮುಂಗಡ ಪತ್ರವನ್ನು ಮಂಡಿಸುವಾಗ ಅವರಿಗೆ ಸೆಪ್ಟೆಂಬರ್‌ವರೆಗೆ ಅಧಿಕಾರವಿತ್ತು. ಈ ವಿಚಾರವನ್ನು ಮಾನ್ಯ ದೇಶಪಾಂಡೆ ಯವರು ಗಮನಿಸಬೇಕು. ತಾವು ಸಹ ಕೈಗಾರಿಕಾ ಮಂತ್ರಿಯಾಗಿ ಅವರ ಜೊತೆಯಲ್ಲಿ ಕೆಲಸ ಮಾಡಿದ್ದೀರಿ.

ನಮಗೆ ನಿಮ್ಮ ಮೇಲೆ ಬಹಳ ಪ್ರೀತಿ ಇದೆ. ಏಕೆಂದರೆ ನಾವು ಮತ್ತು ನೀವು ಒಟ್ಟಾಗಿ ಇದ್ದವು. ನಾವು ನೀವು ಒಟ್ಟಿಗೆ ಸರ್ಕಾರವನ್ನು ಮಾಡಿದ್ದೇವೆ. ಕೆಲವು ಸಂದರ್ಭದಲ್ಲಿ ಇದನ್ನು ನಾನು ನೆನಪು ಮಾಡಿಕೊಳ್ಳುತ್ತೇನೆ. 1983 ಮತ್ತು 1989ರ ಕಾಲದಲ್ಲಿ ನಾವು ಒಟ್ಟಿಗೆ ಇದ್ದಾಗ, ಕಾಂಗ್ರೆಸನವರು ಸ್ವಲ್ಪಮಟ್ಟಿಗೆ ಗಟ್ಟಿಯಾಗಿ ಇದ್ದರು. ಆದರೂ ಸಹ ರಾಜ್ಯದ ಜನತೆಯಲ್ಲಿ ಒಂದು ವಿಶ್ವಾಸ ವನ್ನು ಮೂಡಿಸುವಂತಹ ಒಂದು ಪ್ರಯತ್ನವನ್ನು ಮಾಡಿ, ಜನರು ಈ ಸರ್ಕಾರ ಇನ್ನು ಬೇಕೆಂದು ಹೇಳುವಂತಹ ಪರಿಸ್ಥಿತಿಯಲ್ಲಿ 1983 ಮತ್ತು 1989

ರ ಕಾಲದಲ್ಲಿ ಇದ್ದರು. ಶ್ರೀಮಾನ್ ರಾಮಕೃಷ್ಣ ಹೆಗಡೆಯವರು, ಶ್ರೀಮಾನ್ ಜೆ.ಹೆಚ್.ಪಟೇಲ್‌ರವರು, ಶ್ರೀಮಾನ್ ಎಸ್.ಆರ್.ಬೊಮ್ಮಾಯಿಯವರು ಮತ್ತು ಶ್ರೀಮಾನ್ ಹೆಚ್.ಡಿ.ದೇವೇಗೌಡರವರು ಆ ಸಮಯದಲ್ಲಿ ಇದ್ದರು. Sir, let me tell you, as far as the Karnataka Politics is concerned right from 1983 onwards when the first non Congress Government came into power in Karnataka ಆ ಸಂದರ್ಭವನ್ನು ನಾವು ಯೋಚನೆ ಮಾಡಿ ಕೊಂಡಾಗ ಎಲ್ಲವೂ ನೆನಪಿಗೆ ಬರುತ್ತದೆ. ಆ ಸಮಯದಲ್ಲಿ ಶ್ರೀಮಾನ್ ದೇವ ರಾಜ್ ಅರಸ್‌ರವರು ಇರಲಿಲ್ಲ. ಅಷ್ಟು ಹೊತ್ತಿಗೆ ಅವರು ತೀರಿ ಹೋಗಿದ್ದರು. ಅವರು 1972 ರಿಂದ 1980 ಮತ್ತು 1980 ಕಳೆದ ಮೇಲೆ 1982ನೇ ಇಸವಿಯೊಳಗೆ ಕೆಲಸ ಮಾಡುತ್ತಿದ್ದರು. ಏಕೆಂದರೆ, I do consider Devaraj Urs as the biggest political leader in Karnataka even tody\ay. Nobody can deny that. ಅದನ್ನು ನಾವು ಯೋಚನೆ ಮಾಡಿಕೊಳ್ಳಬೇಕಾಗಿದೆ. ಇವತ್ತು ಯ ಪಕ್ಷದ ನಾಯಕರು ಒಂದು ವಿಚಾರವನ್ನು ಹೇಳಿದರು. ಮಾನ್ಯ ಶ್ರೀ ಜಗದೀಶ್ ಶೆಟ್ಟರ್‌ರವರು ಸಹ ಹೇಳಿದರು. ನಾವು ಅಧಿಕಾರವನ್ನು ಕಳೆದು ಕೊಂಡಿದ್ದು ಏತಕ್ಕೆಂದರೆ, ನಮ್ಮ ಒಳಗಡೆಯೇ ಜಗಳವಾಯಿತು. ಈ ಜಗಳ ವಿಪರೀತ ಮಟ್ಟಕ್ಕೆ ಹೋಯಿತು, ನಂತರ ಅದು ಎಲ್ಲೆಲ್ಲಿಗೆ ತಲುಪಿತು ಎಂದರೆ ಪೂನಾ, ಗೋವಾ, ಹೈದ್ರಾಬಾದ್, ದೆಹಲಿ, ಈ ಕಡೆಗಳಿಗೆಲ್ಲಾ ಹೋಗಿ ತಮ್ಮ ತಮ್ಮ ಪ್ರಯತ್ನಗಳನ್ನು ಮಾಡಿದರು. ಕಡೆಗೆ ದೆಹಲಿಯಲ್ಲಿ ನಡೆದಂತಹ ಒಂದು ಹುಟ್ಟು ಹಬ್ಬ, ಆ ಸಂದರ್ಭದಲ್ಲಿ ಒಂದಾಗಿ ಆಗಿರುವಂತಹದ್ದನ್ನು ಮಾಡಿ, ಕಡಗೆ ನಮ್ಮ ಒಳಗೆ ಇರತಕ್ಕಂತಹ ಜಗಳದಿಂದ ನಾವು ಅಧಿಕಾರವನ್ನು ಕಳೆದು ಕೊಂಡಿದ್ದೇವೆಂದು ಹೇಳಿದರು. 1989 ರಲ್ಲಿ ನಮ್ಮ ಪರಿಸ್ಥಿತಿಯೂ ಸಹ ಅದೇ ರೀತಿ ಆಯಿತು. ನಮಗೂ ಸಹ 1983 ಮತ್ತು 1988ನೇ ಇಸವಿ ಬಂದಾಗ ಸಹ ನಾವು ಇದೇ ಪರಿಸ್ಥಿತಿಯನ್ನು ಅನುಭವಿಸಿದ್ದೇವೆ. ಇದನ್ನು ಮಾನ್ಯ ದೇಶಪಾಂಡೆಯವರು ಒಪ್ಪಿಕೊಳ್ಳಬೇಕಾಗುತ್ತದೆ. ಕಡೆಗೆ ಕಾಂಗ್ರೆಸನವರು ಪುನ: ಅಧಿಕಾರಕ್ಕೆ ಬ0ದರು. ಕಾಂಗ್ರೆಸನವರು 1989 ರಿಂದ 1994 ರವರಗೆ ಅಧಿಕಾರ ದಲ್ಲಿದ್ದರು. ನೀವು ಈಗ ಈ ಮನೆಯಲ್ಲಿ ಬಹಳ ಚಿಕ್ಕ ಸಂಖ್ಯೆಯಲ್ಲಿದ್ದರೂ ಸಹ

ಆ ಮನೆಯಲ್ಲಿ ದೊಡ್ಡ ಸಂಖ್ಯೆಯಲ್ಲಿದ್ದೀರಿ ಅಂದರೆ 120 ಸದಸ್ಯರ ಸಂಖ್ಯೆಯಲ್ಲಿದ್ದೀರಿ. ಅದನ್ನು ನೀವು ಸ್ವಲ್ಪ ಯೋಚನೆ ಮಾಡಿಕೊಳ್ಳಬೇಕಾಗಿದೆ. ನೀವು ಇವತ್ತು ಅಧಿಕಾರಕ್ಕೆ ಬಂದಿದ್ದೀರಿ, ಅದರ ಬಗ್ಗೆ ನಮ್ಮ ವಿರೋಧ ಪಕ್ಷದ ನಾಯಕರು ಮಾತನಾಡುತ್ತಾ, ನೀವು ಅಧಿಕಾರಕ್ಕೆ ಬಂದಿರುವಂತಹದ್ದು by default ಎಂದು ಹೇಳಿದರು. ನಮ್ಮ ಜಗಳ ಜನರಿಗೆ ಬೇಡವಾಯಿತು. ಆದರೆ, ನಿಮ್ಮನ್ನೇ ಏತಕ್ಕೆ ಆಯ್ಕೆ ಮಾಡಿದರು? ನಾವು ಇದ್ದೆವಲ್ಲಾ, ನಮ್ಮನ್ನು ಏತಕ್ಕೆ ಆಯ್ಕೆ ಮಾಡಲಿಲ್ಲ? ಅವರು ಬೇಡವೆಂದಾದ ಮೇಲೆ ನಿಮ್ಮ ಮೇಲೆ ಏನು ಅಷ್ಟೊಂದು ವಿಶ್ವಾಸವಿರಲಿಲ್ಲ. ಆದರೆ, ನಮ್ಮಲ್ಲಿ ವಿಶ್ವಾಸವಿತ್ತು. ಏತಕ್ಕೆಂದರೆ. ಜನತಾ ದಳ ಎಂದು ಹೇಳುವಂತಹದ್ದು 1983 1989 ಮತ್ತು 1994 ರಲ್ಲಿ ಅಧಿಕಾರದಲ್ಲಿತ್ತು. 1994 ರಲ್ಲಿ ನಾನು ಮಂತ್ರಿಯಾಗಿ 5 ವರ್ಷಗಳ ಕಾಲ ಸೇವೆ ಸಲ್ಲಿಸಿದ್ದೇನೆ. 1989 ರಿಂದ 1994 ರವರೆಗೆ ಇಲ್ಲ ವಿರೋಧ ಪಕ್ರದ ನಾಯಕ ರಾಗಿ ಕೆಲಸ ಮಾಡಿದ್ದೇನೆ. ನಮ್ಮ ಮೇಲೆ ವಿಶ್ವಾಸವಿತ್ತು. ಜನರು ನಮಗೆ ಮತ ಕೊಡಬೇಕೆಂದು ಹೊರಟಿರೋ, ನಮ್ಮ ಕುಮಾರಸ್ವಾಮಿಯವರ ನಾಯಕತ್ವ ವನ್ನು ಒಪ್ಪಿಕೊಂಡು, ರಾಜ್ಯ ಉದ್ದಗಲಕ್ಕೂ ನಿಮ್ಮ ಮೀಟಿಂಗ್‌ಗಳಿಗೆ ಸೇರಿದ್ದ ಕ್ಕಿಂತಲೂ ಸಹ ದೊಡ್ಡ ದೊಡ್ಡ ಜನರು ನಮ್ಮ ಮೀಟಿಂಗ್‌ನಲ್ಲಿ ಸೇರಿದ್ದಾರೆ. ಇಲ್ಲವೆಂದು ಯಾರೂ ಹೇಳುವುದಿಲ್ಲ. Everbody should accept it now. Let me tell you Kumara Swamy is a youngster ಬಹುಶ: ನಮ್ಮ ವಿರೋಧ ಪಕ್ಷದ ನಾಯಕರಾಗಿರುವಂತಹ ಸನ್ಮಾನ್ಯ ಶ್ರೀ ಸದಾನಂದಗೌಡರು ಸ್ವಲ್ಪ ಹಿರಿಯರಿದ್ದಾರೆ. ಅವರು 11 ತಿಂಗಳು ಅಧಿಕಾರ ಮಾಡಿದರೋ ಅಥವಾ 8 ತಿಂಗಳು ಅಧಿಕಾರ ಮಾಡಿದರೋ ಗೊತ್ತಿಲ್ಲ. ನಾವೆಲ್ಲರೂ ಬಹಳ ಆಸೆ ಪಟ್ಟಿವು. ನನಗೆ ಗೊತ್ತಿಲ್ಲ. ಶ್ರೀಯುತ ಸದಾನಂದಗೌಡರು ಎಲ್ಲಿಯಾದರೂ ಮುಖ್ಯಮಂತ್ರಿ ಯಾಗಿ ಮುಂದುವರಿದಿದ್ದರೆ. ಅ ಅವಕಾಶ ನಿಮಗೆ ಏನಾದರೂ ಸಿಕ್ಕುತ್ತಿತ್ತೋ ಎಂದು ಹೇಳುವಂತಹದ್ದು ಅವರ ಮನಸ್ಸಿನಲ್ಲಿಯೇ ಅವರು ಚರ್ಚೆ ಮಾಡು ತ್ತಿದ್ದಾರೆ. ಅದು ತಪ್ಪಾಯಿತೇನೋ ಏನೋ ಬಿಜೆಪಿಯವರು ಏತಕ್ಕೆ ಈ ತಪ್ಪನ್ನು ಮಾಡಿದರೋ ಎನ್ನುವುದರ ಬಗ್ಗೆ ಅವರು ಚರ್ಚೆ ಮಾಡುತ್ತಿದ್ದಾರೆ. ಬಹುಶ: ಈ ವಿಷಯ ಅವರಿಗೆ ಬಿಟ್ಟ ವಿಷಯ. "ನನಗೆ ಬಯಸದೇ ಬಂದ ಭಾಗ್ಯ"

ಎಂದು ಅವರೇ ಹೇಳಿದರು. ನಾನು ಏನು ಬೆಟ್ಟಕ್ಕಂದೂ ಹಗ್ಗವನ್ನೂ ಕಟ್ಟಲಿಲ್ಲ. ಕೆಲವು ಜನ ಹಗ್ಗವನ್ನು ಕಟ್ಟಿ ಬೆಟ್ಟಕ್ಕೆ ಏಳೆಯುತ್ತಾರೆ. ಆದರೆ, ಅವರು ಆ ಹಗ್ಗವನ್ನೂ ಕಟ್ಟಲಿಕ್ಕೆ ಹೋಗಲಲ್ಲ.

**ಶ್ರೀ ಆರ್.ವಿ.ದೇಶಪಾಂಡೆ(ಉನ್ನತ ಶಿಕ್ಷಣ ಸಚಿವರು):-** ಮಾನ್ಯ ವಿರೋಧ ಪಕ್ಷದ ನಾಯಕರು, ಪ್ರಾಮಾಣಿಕವಾಗಿ ಆ ವಿಷಯವನ್ನು ಹೇಳು ತ್ತಿದ್ದಾರೆ.

**ಶ್ರೀ ಯಂ.ಸಿ.ನಾಣಯ್ಯ:-** ಶ್ರೀಯುತ ಸದಾನಂದಗೌಡರವರು ಬಹಳ ಚೆನ್ನಾಗಿ ಹೇಳುತ್ತಿದ್ದಾರೆ. ಅವರು ಹೇಳಬೇಕಾಗುತ್ತದೆ. ಇಷ್ಟಾದರೂ ಕೂಡ ಅವರು ಒಂದು ವಿಚಾರವನ್ನು ಯಾವಾಗಲೂ ಹೇಳುತ್ತಿರುತ್ತಾರೆ. ನನಗೆ ಪಕ್ಷ ಬಿಟ್ಟು ಬಾಕಿ ಯಾವುದೂ ಇಲ್ಲವೆಂದು ಹೇಳುತ್ತಾರೆ. ಮೊನ್ನೆ ಚಕ್ರವ್ಯೂಹದ ಒಂದು ಕಾರ್ಯಕ್ರಮದಲ್ಲಿ ಅವರು ಮಾಡಿದಂತಹ ಸಂದರ್ಶನವನ್ನು ನಾನು ಒಂದು ಗಂಟೆಯವರೆಗೆ ಪೂರ್ಣವಾಗಿ ನೋಡಿದ್ದೇನೆ.

**ಪ್ರೊ. ಎಸ್.ಆರ್.ಲೀಲಾ:-** ನಾವು ಬಜೆಟ್ ಮೇಲೆ ಕೇಳೋಣ ಎಂದು ಸುಮನಾಗಿದ್ದೆವು.

**ಶ್ರೀ ಯಂ.ಸಿ.ನಾಣಯ್ಯ:-** ಮೇಡಂ, ನಾನು ಅದೇ ವಿಚಾರಕ್ಕೆ ಬರುತ್ತೇನೆ. ಇದು ಪೀಠಿಕೆ ಮಾತ್ರ.

**ಶ್ರೀ ಮತ್ತಿಕಟ್ಟಿ ವೀರಣ್ಣ:-** ಕಲವು ಸಂದರ್ಭಗಳಲ್ಲಿ ಇಂತಹ ವಿಚಾರಗಳನ್ನು ಹೇಳಬೇಕಾಗುತ್ತದೆ.

**ಉಪಸಭಾಪತಿಯವರು:-** ಇದೆಲ್ಲಾ ಕೆಲವು ಸಂದರ್ಭದಲ್ಲಿ ಇರಬೇಕಾ ಗುತ್ತದೆ.

**ಶ್ರೀ ಯಂ.ಸಿ.ನಾಣಯ್ಯ-** ಮೇಡಂ, ನಾನು ಒಂದು ವಿಚಾರವನ್ನು ಇಲ್ಲಿ ಹೇಳಲಿಕ್ಕೆ ಬಯಸುತ್ತೇನೆ. ಪಾರ್ಲಿಮೆಂಟ್‌ನಲ್ಲಿಯೂ ಕೂಡ ಚರ್ಚೆ ಮಾಡು ವಂತಹ ಸಂದರ್ಭದಲ್ಲಿ ಒಂದು ಹಂತದಲ್ಲಿ ಇದಕ್ಕಿಂತ ಮೇಲ್ಮಟ್ಟಕ್ಕೆ ಹೋಗು ತ್ತಾರೆ. ಅಲ್ಲಿಂದ theny they will come bak ಏಕೆಂದರೆ, wit humour,

repartees ಮತ್ತೆ ಆಚೆ ಕಡೆ, ಇಚೆ ಕಡೆ ಹೇಳುವಂತಹದ್ದು that is the part of the parliamentary system. ಅದು ಇಲ್ಲದೇ ಹೋದರೆ, whole drama ಆಗುತ್ತದೆ. ಇವತ್ತು ಬೆಳಿಗ್ಗೆ ಸ್ವಲ್ಪ ಹೊತ್ತು ನಮ್ಮ ಸಭಾ ನಾಯಕರಿಗೂ ಮತ್ತು ಶ್ರೀಯುತ ಬಸವರಾಜ ಹೊರಟ್ಟಿಯವರಿಗೂ ಜಗಳವಾಯಿತು. ಆಗ ಇದೆಲ್ಲಾ ಬೇಕು ಎಂದವರು ಹೇಳಿದರು. ಇಂತಹುದು ಕೆಲವು ಸಂದರ್ಭದಲ್ಲಿ ನಡೆಯ ಬೇಕಾಗುತ್ತದೆ. ಇದರಲ್ಲ ತಪ್ಪೇನೂ ಇಲ್ಲ. ಇದನ್ನು ನಾವು ವಿಚಾರ ಮಾಡಿ ಕೊಂಡು ಹೋದಾಗ ಕಡೆಗೆ ನಿಮಗೆ ಒಂದು ಅವಕಾಶವನ್ನು ಕೊಟ್ಟರು. ನಾನು ಅದನ್ನು ಕೆಲವು ಸಂದರ್ಭದಲ್ಲಿ ವಿಶ್ಲೇಷಣೆ ಮಾಡುವಾಗ ಹೇಳುವುದೇ ನೆಂದರೆ, by default or by lapse ಎಂದು ಹೇಳುವುದಕ್ಕಿಂತ probably ನಾನು ಹೇಳುತ್ತೇನೆ. The invisible voters of Karnatka Ultimately decided ನಿಮಗೆ ಮತ ಕೊಟ್ಟಿರುವುದು, ನಿಮ್ಮ ಮೇಲೆ ಇರುವಂತಹ ಪ್ರೀತಿಯಿಂದಲ್ಲ, ಪ್ರೇಮದಿಂದಲ್ಲ ಅಥವಾ ನೀವು ಬಿಜೆಪಿ ಗಿಂತ, ಜನತಾದಳಕ್ಕಿಂತ ದೊಡ್ಡ ಪ್ರಮಾಣದಲ್ಲಿ ನೀವು ಏನಾದರೂ ಆಡಳಿತವನ್ನು ಕೊಟ್ಟು, ಅವರ ಎಲ್ಲಾ ಸಮಸ್ಯಗಳಿಗೆ ಪರಿಹಾರವನ್ನು ಹುಡುಕುತ್ತೀರಿ ಎಂದೇನೂ ಅವರು ನಿಮಗೆ ಮತವನ್ನು ಕೊಟ್ಟಿಲ್ಲ. ದಯವಿಟ್ಟು ಇದನ್ನು ಮನಸ್ಸಿನಲ್ಲಟ್ಟುಕೊಳ್ಳಿ. ಶ್ರೀಯುತ ಪರಮೇಶ್ವರರವರು "ನಾನು ಅಧ್ಯಕ್ಷನಾದೆ. ಅಧ್ಯಕ್ಷನಾದ ಮೇಲೆ ನನ್ನ ಶ್ರಮ ದಿಂದ ನಾವು 120 ಸ್ಥಾನಗಳನ್ನು ಗೆಲ್ಲುವಂತಹ ಪರಿಸ್ಥಿತಿಯನ್ನು ನಿರ್ಮಾಣ ಮಾಡಿ ಸರ್ಕಾರವನ್ನು ನಾನು ಅಧಿಕಾರಕ್ಕೆ ತಂದಿದ್ದೇನೆ" ಎಂದು ಹೇಳು ವಂತಹ ಮಾತನ್ನು ಅಗಿಂದಾಗ್ಗೆ ಹೇಳುತ್ತಿರುತ್ತಾರೆ. ಇವತ್ತು ನಾನು ಈ ವಿಚಾರ ವನ್ನು ಹೇಳಬಹುದು. ನಿಮಗೆ ಹೇಳಲಿಕ್ಕೆ ಇರುವಂತಹ ಶಕ್ತಿ ನಿಮ್ಮಲ್ಲಿ ಉಂಟೋ ಏನೋ ನನಗೆ ಗೊತ್ತಿಲ್ಲ.

ಶ್ರೀಯುತ ಪರಮೇಶ್ವರ್‌ರವರೆ, ನಿಮ್ಮ ಶಕ್ತಿಯಿಂದಲೂ ಅಲ್ಲ. ನಿಮ್ಮ ಬುದ್ಧಿವಂತಿಕೆಯಿಂದಲೂ ಅಲ್ಲ, ಅಥವಾ ನೀವು ಸಂಘಟನೆಯನ್ನು ಮಾಡಿ ನಿಮ್ಮ ಮುಖಾಂತರ ಬಂದಿದೆ ಎನ್ನುವ ಮಾತನ್ನು ನೀವು ಹೇಳಿದರೆ ಬಹುಶಃ ಅದೂ ಕೂಡ ಸರಿಯಾಗಲಿಕ್ಕಿಲ್ಲ ಆಗ ನಾನು ಏನು ಹೇಳುತ್ತೇನೆಂದರೆ ಕರ್ನಾ ಟಕ ರಾಜ್ಯದ ಜನರ ಮನಸ್ಸು ಏನಿದೆ, ಈ ಮನಸ್ಸನ್ನು ಅರ್ಥ ಮಾಡಿ

ಕೊಂಡಿರುವಂತಹ ಪರಿಸ್ಥಿತಿಯೂ ಅಲ್ಲವೆಂದು ಹೇಳುತ್ತೇನೆ. ಅವರು ಸೋತಿದ್ದು ಏತಕ್ಕೆಂದು ಅವರೇ ಹೇಳಿದರು. ನಾನು ಏನು ಮಾಡಿದೆ ಎಂದರೆ, ಕರ್ನಾಟಕ ರಾಜ್ಯದಲ್ಲಿ ನಮ್ಮ ಸರ್ಕಾರ ಅಧಿಕಾರಕ್ಕೆ ಬರಬೇಕೆಂದು ಹೇಳಿ ಎಲ್ಲಾ ಕ್ಷೇತ್ರಗಳಿಗೂ ನಾನು ಹೋಗಿಬಿಟ್ಟೆ, ಎಲ್ಲಾ ಕ್ಷೇತ್ರಗಳಲ್ಲೂ ಗೆಲ್ಲಿಸಿಬಿಟ್ಟೆ. ಆದರೆ, ನನ್ನ ಕ್ಷೇತ್ರದಲ್ಲಿ ನಾನು ಗೆಲ್ಲಲಿಕ್ಕೆ ಆಗಲಿಲ್ಲ. ಕಾರಣ, ನಾನು ನನ್ನ ಕ್ಷೇತ್ರಕ್ಕೆ ಹೋಗಲಿಲ್ಲವೆಂದು ಹೇಳಿದರು. ಇರಬಹುದು. ನಾನು ಇಲ್ಲವೆಂದು ಹೇಳಲಿಕ್ಕೆ ತಯಾರಿಲ್ಲ. ಏಕೆಂದರೆ, ಜನರಿಗೆ ಒಂದು ಮನಸ್ಸು ಬಂತು. ನೀವು ನಮ್ಮ ಕ್ಷೇತ್ರಕ್ಕೆ ಬರುವುದಿಲ್ಲ, 120 ಕ್ಷೇತ್ರಗಳನ್ನು ಗೆಲ್ಲಿಸಿ ಬಿಡುತ್ತೇನೆಂದು ತಾವು ಏನು ಹೇಳಿಕೊಂಡು ಬಂದಿದ್ದೀರಿ. ನಾವು ನಿಮಗೆ ಪಾಠವನ್ನು ಕಲಿಸಿಬಿಡುತ್ತೇವೆಂದು ಅವರಿಗೆ ಪಾಠವನ್ನು ಕಲಿಸಿಬಿಟ್ಟರೀನೋ ನನಗೆ ಗೊತ್ತಿಲ್ಲ. ಆ ಹಿನ್ನೆಲೆಯಲ್ಲಿ ಬಂದಾಗ ನೀವು ಒಂದು ವಿಚಾರವನ್ನು ತಿಳಿದುಕೊಳ್ಳಿ. ಇನ್ನು ಮಂದಕ್ಕೆ ನಾವೇ ಎನ್ನುವಂತಹ ಯಾವುದೋ ಒಂದು ರೀತಿಯ ಊಹೆ ನಿಮ್ಮಲ್ಲಿ ಉಂಟು. ಹಿಂದೆ ಬಿಜೆಪಿಯವರು ಸಹ ಹೇಳಿದ್ದರು. ಇನ್ನು 20 ವರ್ಷಗಳವರೆಗೆ ನಮ್ಮ ಸರ್ಕಾರವೇ ಇರುತ್ತದೆ ಎಂದು ಹಿಂದೆ ಶ್ರೀಯುತ ಯಡಿಯೂರಪ್ಪನವರು ಹೇಳಿದಂತಹ ಮಾತು ನನಗೆ ಇನ್ನೂ ನೆನಪು ಇದೆ. ಇನ್ನು 20 ವರ್ಷ ಗಳವರೆಗೆ ಕರ್ನಾಟಕ ರಾಜ್ಯದಲ್ಲಿ ನಮ್ಮನ್ನು ಬಿಟ್ಟು ಯಾರು ಆಡಳಿತ ಮಾಡು ತ್ತಾರೆಂದು ನೋಡುತ್ತೇನೆಂದು ಹೇಳಿದ್ದರು. ಆದರೆ, ಪಾಪ, ಅವರು ಆ ಪಕ್ಷದಲ್ಲಿಯೇ ಉಳಿದುಕೊಳ್ಳಲಿಕ್ಕೆ ಆಗಲಿಲ್ಲ. ಪರಿಸ್ಥಿತಿ ಈಗೇನೋ ಅವರು ಇವರು ಎಂದು ಮಾಡಿಕೊಂಡು ಹಳೆಯ ಹೆಂಡತಿಯ ಪಾದವೇ ಗತಿ, ಅದು ಹಳೆ ಗಂಡನ ಪಾದವೋ, ಹಳೆ ಹೆಂಡತಿಯ ಪಾದವೋ ಗೊತ್ತಿಲ್ಲ. ಸರ್, ಈ ಪರಿಸ್ಥಿತಿ ಬಂದಾದ ಮೇಲೆ ನೀವು ಅಧಿಕಾರಕ್ಕೆ ಬಂದಿದ್ದೀರಿ. ನೀವು ಒಂದು ಬಜೆಟ್ ಅನ್ನು ಮಂಡನೆ ಮಾಡಿದ್ದೀರಿ. ಬಜೆಟ್ ಮಂಡನೆ ಮಾಡತಕ್ಕಂತಹ ಕಾಲದಲ್ಲಿ. ಮಾನ್ಯ ವಿರೋಧ ಪಕ್ಷದ ನಾಯಕರು ಒಂದು ವಿಚಾರವನ್ನು ಪ್ರಸ್ತಾಪ ಮಾಡಿದರು. ನೀವು ರಾಜ್ಯಪಾಲರ ಮೂಲಕ ಭಾಷಣ ಮಾಡ ತಕ್ಕಂತಹ ಸಂದರ್ಭದಲ್ಲಿಯೂ ಕೂಡ ಕೆಲವು ವಿಚಾರಗಳನ್ನು ಹೇಳಿದಿರಿ. ಮತ್ತೆ ಈ ಮುಂಗಡ ಪತ್ರವನ್ನು ಮಂಡಿಸುವಾಗಲೂ ಕೂಡ ಕೆಲವು ವಿಚಾರ

ಗಳನ್ನು, ಅಂದರೆ ಆರ್ಥಿಕ ಪರಿಸ್ಥಿತಿಯ ಬಗ್ಗೆ, ಆರ್ಥಿಕ ಸ್ಥಿತಿಯ ಬಗ್ಗ ಮತ್ತೆ ಸಾಲ ಮಾಡತಕ್ಕಂತಹದ್ದರ ಬಗ್ಗೆ ಬಹುಶಃ ಎಲ್ಲಿಯೋ ಹಳಿ ತಪ್ಪಿ ಹೋಗಿದೆ ಎನ್ನುವಂತಹ ವಿಚಾರವನ್ನು ಮುಂಗಡ ಪತ್ರದಲ್ಲಿ ನೀವು ಹಾಕಿದ್ದೀರಿ. ಅದನ್ನು ಹಾಕುವಂತಹ ಅವಶ್ಯಕತೆ ಇತ್ತಾ? ನಾವು ಎಲ್ಲಾ parameters ಒಳಗಡೆ ನಾವು ಕೆಲಸ ಮಾಡಿದ್ದೇವೆ, ನಾವು ಆರ್ಥಿಕ ಶಿಸ್ತನ್ನು ತಂದಿದ್ದೇವೆ ಎಂದು ಹೇಳುವ ಮಾತನ್ನು ಅವರು ಹೇಳಿದರು. ಆದರೆ, ಒಂದು ವಿಚಾರ ಮಾತ್ರ ಸತ್ಯ. ಅದನ್ನು ವಿರೋಧ ಪಕ್ಷದ ನಾಯಕರು, ಬಹಿರಂಗವಾಗಿ ಒಪ್ಪದೇ ಹೋದರೂ ಕೂಡ ಅಂತರಂಗದಿಂದ ಅವರು ಒಪ್ಪಿಕೊಳ್ಳಲೇ ಬೇಕು. ಕಳೆದ 5 ವರ್ಷಗಳ ಅವರ ಆಡಳಿತದಲ್ಲಿ ಏನಾಗಿದೆ ಎನ್ನುವುದರ ಬಗ್ಗೆ ನಾನು ನೇರವಾಗಿ ಹೇಳಲಿಕ್ಕೆ ಬಯಸುತ್ತೇನೆ. ಕರ್ನಾಟಕ ರಾಜ್ಯದ ನಮ್ಮ ಖಜಾನೆಯ ಹಣ ಏನಿದೆ, ಈ ಹಣ ಜನರ ತೆರಿಗೆಯಿಂದ ಬಂದಂತಹ ಹಣ, ಅದನ್ನು ಜನರಿಗೆ ಮುಟ್ಟಿಸ ಬೇಕೆಂದು ಹೇಳುವಂತಹ ಪರಿಸ್ಥಿತಿಯ ಬಗ್ಗೆ ನಾನು ಹೇಳಲಿಕ್ಕೆ ಬಯಸುತ್ತೇನೆ. ಬಹುಶ: ಆ 5 ವರ್ಷಗಳಲ್ಲಿ ಆ ಒಂದು ಭಾವನೆ ಇರಲಿಲ್ಲವೆಂದು ಬಹುತೇಕ ವಾಗಿ ಇದೆ. ಅಂದರೆ, ಅದನ್ನು ಯಾರಿಗೆ ಬೇಕಾದರೂ ಕೊಡಬಹುದು. ಬೇಕಾ ಬಿಟ್ಟಿ ಹಂಚುವ ಬಗ್ಗೆ ನಾನು ಹೇಳುವುದೇನೆಂದರೆ, Consolidated Fund of India ಈ ಹಣ ಏನು ಇದೆ, ಇದು ತೆರಿಗೆದಾರರ ಹಣವಾಗಿದ್ದು, ಇದನ್ನು ಬೇಕಾಬಿಟ್ಟಿ ಕೊಡುವಂತಹದ್ದಲ್ಲ.

ಆದ್ದರಿಂದ ಕಳೆದ 5 ವರ್ಷದಲ್ಲಿ ಅವರು ಮಾಡಿರತಕ್ಕಂಥ ಕಾರ್ಯ ಕ್ರಮಗಳು ಯಾವುದು ಇತ್ತು ಅದರ ಕಡೆಗೆ ನಾವು ಸ್ವಲ್ಪ ವಿಚಾರ ಮಾಡಬೇಕಾ ಗುತ್ತದೆ. ದೊಡ್ಡ ಪ್ರಮಾಣದಲ್ಲಿ ಸಾಲ ಇದೆ. ಯಾವ ಸರ್ಕಾರಕ್ಕೆ ಸಾಲ ಇಲ್ಲ ಅದನ್ನು ಹೇಳಿ. ಸರ್ಕಾರ ಸಾಲವನ್ನು ಮಾಡಲೇಬೇಕಾಗುತ್ತದೆ. ಸಾಲ ಮಾಡದೇ ಇರುವ ಯಾವುದಾದರೂ ಸರ್ಕಾರ ಇದೆಯೇ ಅದನ್ನು ಹೇಳಿ. ಕೇಂದ್ರ ಸರ್ಕಾರ ಸಾಲವನ್ನು ಮಾಡಲಿಲ್ಲವೇ? ಫೈನಾನ್ಸ್ ಕಮೀಷನ್ನಿನವರು ಕೆಲವು ಆರ್ಥಿಕ ಶಿಸ್ತಿನ ಬಗ್ಗೆ ನಮಗೆ ಕೊಟ್ಟಿದ್ದಾರೆ. ಅವರು ಕೊಟ್ಟಿರತಕ್ಕಂತಹ ಮಾಹಿತಿ ಏನು ಇದೆ ಆ ಮಾಹಿತಿಗನುಗುಣವಾಗಿ ನಾವು. ಕೆಲಸವನ್ನು ಮಾಡಬೇಕಾಗುತ್ತದೆ. ಮಾನ್ಯ ಎಸ್.ಎಂ. ಕೃಷ್ಣಾ ಅವರು ಮುಖ್ಯಮಂತ್ರಿಯಾಗಿ

ದ್ದಂತಹ ಸಂದರ್ಭದಲ್ಲಿ ಕರ್ನಾಟಕ ಫಿಸಿಕಲ್ ರಿಫಾರ್ಮ್ ಅನ್ನು ತಂದಿರತಕ್ಕಂತಹ ಆ ಸಂದರ್ಭದಲ್ಲಿ ನಾನೂ ಕೂಡ ಇಲ್ಲಿ ಸದಸ್ಯನಾಗಿದ್ದೆ. ಆ ಸಮಯದಲ್ಲಿ ಕರ್ನಾಟಕ ಫಿಸಿಕಲ್ ರಿಫಾರ್ಮ್ಸ್ ಅನ್ನು ತಂದಿದ್ದರು. ನಮ್ಮ ವಿತ್ತೀಯ ಕೊರತೆ ಎಷ್ಟು ಇರಬೇಕು fiscal deficit ಎಷ್ಟು ಇರಬೇಕು ನಮ್ಮ ಒಟ್ಟು debt component in relation to GDP (Gross Domestic Product) ಎಷ್ಟು ಇರಬೇಕು ಎಂಬುದೆಲ್ಲವನ್ನೂ ಮಾಡಿ ಈ ಫೈನಾನ್ಷಿಯಲ್ ರಿಫಾರ್ಮ್ಸ್ ನಲ್ಲಿ ಅದರ ಒಳಗಡೆ ನಾವು ಎಲ್ಲವನ್ನೂ ತಂದಿದ್ದೇವೆ. ಅದರ ಪ್ಯಾರಾಮೀಟರ್ಸ ಅನ್ನು ದಾಟಲಿಲ್ಲ ಎನ್ನುವುದು ನಿಮ್ಮ ಹೆಗ್ಗಳಿಕೆ ಅಲ್ಲ. ಆರ್ಥಿಕ ಶಿಸ್ತನ್ನು ತಂದಿದ್ದೇನೆ ಅದನ್ನು ಪೋಲು ಮಾಡಲಲ್ಲ ಎಂದು ಅಲ್ಲ. ವಸ್ತು ಸ್ಥಿತಿಯಲ್ಲಿ ನೀವು ಕರ್ನಾಟಕ ರಾಜ್ಯದಲ್ಲಿ ನೀವು ಮಾಡಿರತಕ್ಕಂಥಾದ್ದು ಏನು ಎಂಬುದು ಇಲ್ಲ ಮುಖ್ಯವಾಗುತ್ತದೆ. ಕರ್ನಾಟಕದಲ್ಲಿ ಹಣವನ್ನು ನೀವು ಯಾರ್ಯಾರಿಗೆ ಕೊಟ್ಟರಿ, ಯಾವ ಯಾವ ಸಂದರ್ಭದಲ್ಲಿ ಹಣವನ್ನು ಬಟವಾಡೆ ಮಾಡಿದಿರಿ ಇದರ ಬಗ್ಗೆ ಚಿಂತನೆಯನ್ನು ಮಾಡುವಾಗ this loand component which was about 64 lakhs as at the end of 2008, it came right up to… ಈಗ ಇವರು ಅಧಿಕಾರ ಬಿಟ್ಟಿದ್ದಾರೆ. ಮಾನ್ಯ ಜಗದೀಶ್ ಶೆಟ್ಟರ್ ಅವರು ಮುಂಗಡ ಪತ್ರವನ್ನು ಮಂಡಿಸಿದ್ದಾರೆ. ಅದರಲ್ಲ 2014 ಮಾರ್ಚ್‌ಗೆ our debt

component is Rs. 1,34,000 crores. It is virtually within the parameters GDP ( Gross Domestic Product) ಪರ್ಸೆಂಟ್ ಒಳಗೆ ಇರುತ್ತದೆ. I agree to it. Nothing wroing about that. 5 ವರ್ಷ ನೀವು ಆಡಳಿತ ಮಾಡಿರತಕ್ಕಂತಹ ಹಿನ್ನೆಲೆಯಲ್ಲಿ ಯೋಚನೆ ಮಾಡಬೇಕಾಗುತ್ತದೆ. ಸಿದ್ದರಾಮಯ್ಯನವರು ಅದನ್ನು ಹೇಳಬೇಕಾಗಿತ್ತೋ ಅಥವಾ ಹೇಳಬಾರದಾಗಿದೆಯೋ ಅದು ಅವರಿಗೆ ಬಿಟ್ಟಿರತಕ್ಕಂತಹ ವಿಚಾರವಾಗಿದೆ. ಮಾನ್ಯ ಸಿದ್ದರಾಮಯ್ಯನವರು ಮುಂದಿನ ವರ್ಷಕ್ಕೆ ಸಾಲವನ್ನು ಮಾಡುತ್ತಾರೆಯೋ ಅಥವಾ ಮಾಡುವುದಿಲ್ಲವೋ ಅದು ನಮಗೆ ಗೊತ್ತಿಲ್ಲ. Or will he say ಇಲ್ಲಿಯವರೆಗೆ ಮಾಡಿರತಕ್ಕಂತಹ 134,000 ಕೋಟಿ ರೂಪಾಯಿಯ ಸಾಲ ಏನು ಇದೆ. ಇದನ್ನು ತೀರಿಸುವವರೆಗೆ ಹೊಸ ಸಾಲ ಮಾಡುವುದಿಲ್ಲವಂದು ಹೇಳುವುದಕ್ಕೆ ಸಾಧ್ಯವಿದೆಯೇ? It is impossible

ಹಣಕಾಸು ಇಲಾಖೆಯಲ್ಲಿ ಇರತಕ್ಕಂತಹವರು ಇಲ್ಲ ಎಷ್ಟು ಜನರು ಇದ್ದಾರೆಯೋ ನನಗೆ ಗೊತ್ತಿಲ್ಲ. ಎಲ್ಲಾ ಸಂದರ್ಭದಲ್ಲಿಯೂ ನಮ್ಮ ಹಣಕಾಸು ಇಲಾಖೆ ಆಯವ್ಯಯವನ್ನು ತಯಾರು ಮಾಡಬೇಕಾದರೆ ಆ ಇಲಾಖೆಯಲ್ಲಿ ಆಯವ್ಯಯ ಶಾಖೆ ಎಂದು ಒಂದು ಶಾಖೆ ಉಂಟು. ಅವರು ಅದೆಲ್ಲವನ್ನೂ ತೆಗೆದುಕೊಳ್ಳುತ್ತಾರೆ. ಅವರು ಹಣ ಎಷ್ಟು ಬಂದಿದೆ ಎಷ್ಟು ಖರ್ಚು ಆಯಿತು ಎಂದು ಲೆಕ್ಕವನ್ನು ತೆಗೆದುಕೊಳ್ಳುತ್ತಾರೆ. ಆದರ ಮಾನ್ಯ ಯಡಿಯೂರಪ್ಪನಂತಹವರು ಬಂದಾಗ ಇಂತಹ ಕಡೆಗೆ ಇಷ್ಟು ಪ್ರಮಾಣದ ಹಣ ಆಗಲೇಬೇಕು ಹೇಗೆ ಒದಗಿಸುತ್ತೀರೋ, ಅದನ್ನು ಒದಗಿಸಿ ಅದನ್ನು ನೀವು ಹೇಳಿ ಎಂದು ಹೇಳುತ್ತಿದ್ದರು. ಹಣ ಉಂಟೋ ಇಲ್ಲವೋ ನನಗೆ ಗೊತ್ತಿಲ್ಲ. I think this is the thing which you should do ಅಂತಹ ಒಂದು ಪರಿಸ್ಥಿತಿಯನ್ನು ನಿರ್ಮಾಣ ಮಾಡಿದ ಮೇಲೆ then naturally they will agree. ಆದರೆ ಅದನ್ನು ಒದಗಿಸುವುದು ಹೇಗೆ? When you do not have money, Then ultimately you need have to depend upon whom? ಬೇರೆ ಎರಡು ಕಾಂಪೊನೆಂಟ್ ಯಾವುದು? Other two components are, one is the Central Government share which we are legitimately entitled to get. Devolution of tax share ಯಾವುದು ಉಂಟು that we are legitimately entitled go get ಅದನ್ನು ಕೇಂದ್ರ ಸರ್ಕಾರದವರು ನಿಮಗೆ ಬಳುವಳಿ ಕೊಟ್ಟಿದ್ದೇವೆಂದು ಹೇಳುವುದಕ್ಕಾಗುವುದಿಲ್ಲ. ಒಂದು ವರ್ಷಕ್ಕೆ ನಮಗೆ 25,000 ಕೋಟಿ ರೂಪಾಯಿ ಕೊಡುತ್ತೇನೆಂದು ಹೇಳಿದ್ದಾರೆ. ಅದು ವರ್ಷಕ್ಕೆ ಸುಮಾರು by and large approximately it amounts to 27,000 to 28,000 crores. One is contribution and another is Central Government tax ಯಿಂದ ನಮಗೆ ಬರುವ ನಮ್ಮ ಪಾಲಿನ ತೆರಿಗೆ ಹಣವನ್ನು ಅವರು ಕೊಡುತ್ತಾರೆ. ಆದರೆ ಅದನ್ನು ಕೇಂದ್ರ ಸರ್ಕಾರದವರು ಕೊಟ್ಟಿದ್ದಾರೆ ಎಂದು ಹೇಳುವುದಕ್ಕಾಗುವುದಿಲ್ಲ. ನಾವು 28,000 ಕೋಟಿ ರೂಪಾಯಿ ಕೊಟ್ಟಿದ್ದೇವೆಂದು ಹೇಳುವ ಒಂದು ಹೆಗ್ಗಳಿಕೆ. ಕಾಂಗ್ರೆಸ್ ಸರ್ಕಾರಕ್ಕೂ ಇಲ್ಲ. ಹಿಂದೆ ಇದ್ದಂತಹ ಎನ್.ಡಿ.ಎ. ಸರ್ಕಾರಕ್ಕೂ ಇಲ್ಲ. ಏಕೆಂದರೆ legitimaterly Karnataka

Government is entitled to get it. ಕೇಂದ್ರ ಸರ್ಕಾರ ನಮ್ಮ ರಾಜ್ಯದಲ್ಲಿ ಸಂಗ್ರಹ ಮಾಡುವ ತೆರಿಗೆಯಲ್ಲಿ. ನಮಗೆ ಬರತಕ್ಕಂತಹ ನಮ್ಮ ಪಾಲಿನ ಷೇರ್ ಅನ್ನು ಕೊಟ್ಟಿದ್ದಾರೆ. That is tax paid by all State Governments ಕೇಂದ್ರ ಸರ್ಕಾರದವರು ಟ್ಯಾಕ್ಸ್ ಅನ್ನು ಸಂಗ್ರಹ ಮಾಡಬೇಕಾದರೆ ಅದು ನಮ್ಮ ಜನರು ಕೊಟ್ಟಂತಹ ತೆರಿಗೆ ತಾನೆ That is the share we are goint to get it. ಅದು ನಮಗೆ ಬರಬೇಕಾದ ತೆರಿಗೆ ಹಣ ತಾನೇ. Most important thins ಯಾವು ದೆಂದರೆ ಇದಕ್ಕೆ ಆಕ್ಷೇಪಣೆ ತೆಗೆದರು. ಇದನ್ನು ಹೇಳಬಾರದಿತ್ತೆಂದು ಹೇಳಿದರು. ಆ 5 ವರ್ಷದಲ್ಲಿ ನಡೆದಿರತಕ್ಕಂತಹ ವಿಚಾರವನ್ನು ನಾನು ಇಲ್ಲಿ ವಿಸ್ತ್ರತವಾಗಿ ಹೇಳುವುದಕ್ಕೆ ಹೋಗುವುದಿಲ್ಲ. ಮಾನ್ಯ ಮುಖ್ಯಮಂತ್ರಿಗಳಾದ ಸಿದ್ದರಾಮಯ್ಯ ನವರು ನಮ್ಮ ರಾಜ್ಯದಲ್ಲಿ financial discipline ಅನ್ನು ತರಬೇಕೆಂದು ಯೋಚನೆ ಮಾಡಿದರು. ಆ ಯೋಚನೆ ಮಾಡುವ ಸಂದರ್ಭದಲ್ಲಿ ಅವರು ತಮ್ಮ ಮೊದಲ ಆಯವ್ಯಯವನ್ನು ಮಂಡನೆ ಮಾಡಿದರು. ಆ ಸಂದರ್ಭದಲ್ಲಿ ಅವರಿಗೆ 1 ಲಕ್ಷ 34 ಸಾವಿರ ಕೋಟಿ ರೂಪಾಯಿಯ ಸಾಲ ನಮ್ಮ ಮೇಲೆ

ಇದೆ ಎಂದು ಆಗ ಗೊತ್ತಿತಲ್ಲವೇ? ಇದನ್ನು ಹಳಿಯ ಮೇಲೆ ತರಬೇ ಕೆಂದು ಹೇಳುವ ಪರಿಸ್ಥಿತಿ ಆದರೆ, ಮುಂದೆ ಸಾಲವನ್ನು ಮಾಡುವ ಸಂದರ್ಭ ದಲ್ಲಿ ಯೋಚನೆ ಮಾಡಬೇಕಾದ ಯೋಜನೆಗಳು, ದಾರಿಗಳು ಏನೇನು ಎಂಬುದು ಅವರ ಗಮನಕ್ಕೆ ಬರಲೇಬೇಕಾಗುತ್ತದೆ. ಒಂದನ್ನು ವಿಚಾರ ಮಾಡಿ ಕೊಳ್ಳಿ. Financial prudence and Financial Expenditures ನ ಬಗ್ಗೆ ಹೇಳುವು ದಿದ್ದರೆ ನಾವು ಸಾಲ ಯಾವುದನ್ನು ಮಾಡುತ್ತೇವೆ either through market borrowing ಕೇಂದ್ರ ಸರ್ಕಾರದ ಸಾಲ ಅಥವಾ ನ್ಯಾಷನಲ್ ಸೇವಿಂಗ್ಸ್ ಸರ್ಟಿ ಫಿಕೇಟ್‌ನಲ್ಲಿ ನಿಮ್ಮ ಷೇರಿನ ಮೇಲೆ ಮಾಡತಕ್ಕಂತಹ ಸಾಲ ಇದು ಯಾವುದ ಆದರೂ ಕೂಡ the normal financial norma,s prudence ?? the loand you borrow shall not be spent for your revenue expenditure ರೆವಿನ್ಯೂ ಎಕ್ಸ್‌ಪೆಂಡಿಚರ್‌ನ ಹಣ ನಿಮಗೆ ಬಂದಿರುತ್ತದೆ. ಆ ಹಣವನ್ನು ಪುನ: ನೀವು ರೆವಿನ್ಯೂ ಎಕ್ಸ್‌ಪೆಂಡಿಚರ್‌ನ ಮೇಲೆ ಖರ್ಚು ಮಾಡುವುದಕ್ಕೆ ಹೋದರೆ the capital asset ಯಾವುದು ಇದೆ. ಆ ಅಸೆಟ್‌ನ volume ಉಂಟಲ್ಲಾ that

volume will get reduced. Normally any lona you borrow it shall be spend for creating capital assets ಆದರೆ. ಅದು ಇಲ್ಲಿಯವರೆಗೆ ನಡೆದಿಲ್ಲ. 134.000 ಕೋಟಿ ರೂಪಾಯಿಯ ಸಾಲ ಇದೆ. What is your debt servicing ? ಅದೂ ಕೂಡ parameters ನ ಒಳಗಡೆಯೇ ಇದೆ. ಆ parameters ನ ಒಳಗಡ ಅದು ಇಲ್ಲವೆಂದು ಹೇಳುವುದಕ್ಕೆ ನಾನು ತಯಾರಾಗಿಲ್ಲ. ಆ parameters ನ ಒಳಗಡೆ ಇದೆ ಎಂದಾದ ಮೇಲೆ, ನೀವು ಆ debt servicing ಅನ್ನು ಇದೇ ರೀತಿಯಲ್ಲಿ ತೆಗೆದುಕೊಂಡು ಹೋದರೆ ಆ

your debt servicing as at the end of March 2014 will be about 17,000 crores. ಇದೇ ರೀತಿ ಇಷ್ಟೆಲ್ಲಾ ಮಾಡಿ ಮಾನ್ಯ ಸಿದ್ದರಾಮ ಯ್ಯನವರು ಚುನಾವಣಾ ಪ್ರಣಾಳಿಕೆಯಲ್ಲಿ ಜನರಿಗೆ ಕೊಟ್ಟಿರುವ ಭರವಸೆಗಳನ್ನು ನಾನು ಈಡೇರಿಸಬೇಕು ಆ ಪ್ರಕಾರ ಕೆಲವು ಕಾರ್ಯಕ್ರಮವನ್ನು ಯೋಜನೆಯನ್ನು ಹಾಕಿಕೊಂಡಿದ್ದೇನೆಂದು ಹೇಳಿದರು. ಅದರಲ್ಲೂ ಪೈಪೋಟಿ ಮಾಡಿದ್ದಾರೆ. ಮಾನ್ಯ ಸದಾನಂದಗಾಡರವರು ತಮ್ಮ ಚುನಾವಣಾ ಪ್ರಣಾಳಿಕೆಯಲ್ಲಿ 1 ರೂಪಾಯಿಗೆ ಅಕ್ಕಿಯನ್ನು ಕೊಡುವುದಕ್ಕೆ ನಾವು ಮೊದಲು ಯೋಜನೆಯನ್ನು ಹಾಕಿಕೊಂಡಿದ್ದೆವು ಎಂದು ಹೇಳಿದರು. ನಾನು ಆ ಪ್ರಣಾಳಿಕೆಯನ್ನು ಓದುವು ದಕ್ಕೆ ಹೋಗಲಿಲ್ಲ. ಯಾವುದೇ ಸರ್ಕಾರ ಅಧಿಕಾರಕ್ಕೆ ಬರಲಿ ಯಾವುದೇ ಚುನಾವಣಾ ಪ್ರಣಾಳಿಕೆಯನ್ನು ಮಾಡಿಕೊಳ್ಳಲಿ, ಯಾವುದೇ ಪಕ್ಷ ಈ ಚುನಾ ವಣಾ ಪ್ರಣಾಳಿಕೆಯನ್ನು ಮಾಡಿಕೊಳ್ಳಲಿ. ಅದರ ಮುಖಾಂತರ ಅವರು ಅಧಿಕಾರಕ್ಕೆ ಬಂದರೆ ಅದರಲ್ಲಿ ಹೇಳಿರತಕ್ಕಂತಾದ್ದನ್ನು. ಯಾವುದೇ ಪಕ್ಷ ಪೂರ್ತಿ ಪ್ರಮಾಣದಲ್ಲಿ ಅನುಷ್ಠಾನಕ್ಕೆ ತರುವುದಕ್ಕಾಗುವುದಿಲ್ಲವೆಂದು ಎಲ್ಲರಿಗೂ ಗೊತ್ತಿರುವುದೇ ಆಗಿದೆ. ಆದುದರಿಂದ ಅದಕ್ಕ ಹೆಚ್ಚು ಒತ್ತನ್ನು ಕೊಡಬೇಕಾದ ಅವಶ್ಯಕತೆ ಇಲ್ಲ. ಕಾಂಗ್ರೆಸ್ ಪಕ್ಷದ ಅಧ್ಯಕ್ಷರವರು ಮುಖ್ಯಮಂತ್ರಿಯವರಿಗೆ ಪತ್ರವನ್ನು ಬರೆದಿದ್ದಾರೆ. ಬೆಂಗಳೂರಿನಲ್ಲಿ ಮುಖ್ಯಮಂತ್ರಿಗಳು ಇರುತ್ತಾರೆ. ಆ ಪಕ್ಷದ ಅಧ್ಯಕ್ಷರೂ ಇಲ್ಲಿಯೇ ಇದ್ದಾರೆ. ಅವರಿಬ್ಬರೂ ಬೆಂಗಳೂರಿನಲ್ಲಿ ಭೇಟಿ ಮಾಡುವುದಕ್ಕೆ ಅವಕಾಶವಿರುತ್ತದೆ. ಬೆಂಗಳೂರಿನಲ್ಲಿ ತಾಂತ್ರಿಕತೆ ಬಹಳವಾಗಿ ಮುಂದುವರಿದಿದೆ. ಇವತ್ತಿನ ಮಾಹಿತಿ ತಂತ್ರಜ್ಞಾನದಲ್ಲಿ ಹೇಳುವುದಾದರೆ,

ಇಬ್ಬರ ಬಳಿಯೂ ಮೊಬೈಲ್ ಫೋನ್ ಇರುತ್ತದೆ ಇದೂ ಸಾಲದೆಂಬಂತೆ video conference ಮಾಡಿಕೊಂಡು ಮಾತನಾಡುವುದಕ್ಕೆ ಮುಖಾ ಮುಖಾ ನೋಡುವುದಕ್ಕೆ ಅವಕಾಶ ಇರುತ್ತದೆ. ಆದರೂ ಪಕ್ಷದ ಅಧ್ಯಕ್ಷರವರು ಪತ್ರದ ಮುಖಾಂತರ ಮಾನ್ಯ ಮುಖ್ಯಮಂತ್ರಿಯವರಿಗೆ ಪತ್ರವನ್ನು ಬರೆಯಬೇಕೆಂದು ಹೇಳಿ ಪತ್ರವನ್ನು ಬರೆದಿದ್ದಾರೆ. ಅದರಲ್ಲಿ ಏನು ಹೇಳುತ್ತಾರೆಂದರೆ, "ಚುನಾ ವಣಾ ಪ್ರಣಾಳಿಕೆಯಲ್ಲಿ ಪ್ರಸ್ತಾಪ ಮಾಡಿದಂತಹ ಎಲ್ಲಾ ವಿಚಾರಗಳನ್ನೂ ನಿಮ್ಮ ಮುಂಗಡ ಪತ್ರದಲ್ಲಿ ನೀವು ಅಳವಡಿಸಿಕೊಳ್ಳತಕ್ಕದ್ದು? ಎಂದು ಹೇಳಿದ್ದಾರೆ ಮಾನ್ಯ ಪರಮೇಶ್ವರ್ ಅವರೇ ನಾಳೆ ನೀವು ಉಪ ಮುಖ್ಯಮಂತ್ರಿಯಾಗ ಬೇಕೆಂದು ಹೊರಟಿದ್ದೀರಿ. ನಾಳೆ ನೀವು ಎಲ್ಲಿಯಾದರೂ ಹಣಕಾಸು ಇಲಾಖೆ ಬೇಕು ಎಂದು ಹೇಳಿದರೆ, ನಿಮ್ಮಿಂದ ಈ ಕೆಲಸ ಮಾಡುವುದಕ್ಕೆ ಆಗುತ್ತ ದೆಯೇ? Whichever Government is in power, I am not trying to say that. ಒಂದು ರೂಪಾಯಿಗೆ ಒಂದು ಕೆ.ಜಿ ಅಕ್ಕಿ ಎಂದು ಒಂದು ಯೋಜನೆ ಯನ್ನು ಮಾಡಿದರು. Ok fair enouggh ನಾನು ಸಿದ್ದರಾಮಯ್ಯನವರನ್ನು ಇಷ್ಟೇ ಕೇಳುತ್ತೇನೆ.

I am not against to it. ತಾವು ಸ್ವಲ್ಪ ಮಟ್ಟಿಗೆ ಯೋಚನೆ ಮಾಡಿ. ಮಾನ್ಯ ಸಿದ್ದರಾಮಯ್ಯನವರನ್ನು ಒಂದು ಪ್ರಶ್ನೆ ಕೇಳಬಯಸುತ್ತೇನೆ. ಇದ ರಿಂದಾಗಿ ಒಂದು ಕುಟುಂಬಕ್ಕೆ ಒಂದು ಕೆ.ಜಿ ಅಕ್ಕಿಯನ್ನು ನೀಡುವ ಈ ಯೋಜನೆಯಿಂದ ಇದರ ಪ್ರಕಾರ ಒಬ್ಬರಿಗೆ ಒಂದು ತಿಂಗಳಿಗೆ 30 ರೂಪಾ ಯಿಗೆ 30 ಕೆ.ಜಿ ಅಕ್ಕಿ ಕೊಡುತ್ತೇವೆ ಎಂದು ಹೇಳಿದ್ದೀರಿ. ದಯವಿಟ್ಟು ಇದರಿಂದಾಗಿ ಆ ಕುಟುಂಬದ ಆರ್ಥಿಕ ಪರಿಸ್ಥಿತಿಯನ್ನು ಎಷ್ಟು ಮೇಲಕ್ಕೆ ಎತ್ತುವುದಕ್ಕೆ ನಿಮ್ಮ ಪ್ರಯತ್ನವೆಂದು ಹೇಳುತ್ತೀರಾ ಅದು ನಿಮಗೂ ಮತ್ತು ಬಿ.ಜೆ.ಪಿ ಪಕ್ಷದವರಿಗೂ ಅನ್ವಯಿಸುತ್ತದೆ. ನಮ್ಮ ಪಕ್ಷದ ಚುನಾವಣಾ ಪ್ರಣಾಳಿಕೆ ಯಲ್ಲಿ ಪುಗಸಟ್ಟೆ ಅಕ್ಕಿಯನ್ನು ಕೊಡುತ್ತೇವೆಂದು ನಾವು ಎಲ್ಲಿಯಾದರೂ ಹೇಳಿದ್ದಿದ್ದರೆ. ಅದು ನನಗೂ ಅನ್ವಯಿಸುತ್ತದೆ. What is the benefit for thouse households please tell me? What is total volume of money you have to spend from the state exchaequer? ಇದನ್ನು ಯೋಚನೆ ಮಾಡಿ.

There are two aspects ಒಬ್ಬರಿಗೆ 10 ಕೆ.ಜಿ ಅಕ್ಕಿಯಂತೆ ಕೊಡುತ್ತೇವೆಂದು ಹೇಳಿದ್ದೀರಿ. ಮೂವರು ಸದಸ್ಯರು ಇದ್ದರೆ 30 ಕೆ.ಜಿ ಅಕ್ಕಿಯನ್ನು ಕೊಡುತ್ತೀರಿ. ಇದುವರೆಗೆ ಇದೇ ಅಕ್ಕಿಯನ್ನು ಒಂದು ಕೆ.ಜಿಗೆ 3 ರೂಪಾಯಿಯಂತೆ ಕೊಡುತ್ತಿದ್ದೀರಿ. ಅದನ್ನು ಈಗ 1 ರೂಪಾಯಿಗೆ ಇಳಿಸಿದ್ದೀರಿ. 4 ಜನ ಇರುವ ಕುಟುಂಬಕ್ಕೆ ಒಂದು ತಿಂಗಳಿಗೆ ಅವರಿಗೆ 30 ರೂಪಾಯಿ ಲಾಭ ಮಾಡಿದ್ದೇವೆಂದು ಹೇಳುತ್ತೀರಿ. ಒಂದು ತಲೆಗೆ ಒಂದು ದಿವಸಕ್ಕೆ 50 ಪೈಸೆ ಆಯಿತು. Per head it is 50 pasise. 50 ಪೈಸೆಯನ್ನು ಒಬ್ಬರಿಗೆ ಕೊಡುವುದಕ್ಕೆ ಇರತಕ್ಕಂಥದ್ದು ಅಥವಾ ಒಂದು ಕುಟುಂಬಕ್ಕೆ ಅಥವಾ ನಾಲ್ಕು ಜನರಿಗೆ ಒಂದು ದಿವಸಕ್ಕೆ ಎರಡು ರೂಪಾಯಿಗಳನ್ನು ಕೊಡುವುದಕ್ಕೆ ಇರತಕ್ಕಂಥದ್ದು ಇಡೀ ರಾಜ್ಯಕ್ಕೆ ಅನ್ವಯಿಸಿದಾಗ ಆದಕ್ಕೆ ಎಷ್ಟು ಹಣ ಖರ್ಚಾಗುತ್ತದೆ ಸುಮಾರು 4,500 ಕೋಟಿ ರೂಪಾಯಿಗಳಾಗುತ್ತದೆ. ಇದನ್ನೇ ನಾನು ಹೇಳುತ್ತಿರುವುದು.

**ಶ್ರೀ ಆರ್.ವಿ.ದೇಶಪಾಂಡೆ (ಉನ್ನತ ಶಿಕ್ಷಣ ಸಚಿವರು):-** ಮಾನ್ಯ ಸಭಾಪತಿಯವರೆ, it becomes less when the Government of india brings the Food security Act.

**ಶ್ರೀ ಯಂ.ಸಿ.ನಾಣಯ್ಯ:-** ಮಾನ್ಯ ಸಭಾಪತಿಯವರೆ, I am coming to the Food Security Act. I am favour of the Public Distribution System. ಈ ರೀತಿಯ ಕಾರ್ಯಕ್ರಮಗಳು ನಮ್ಮ ದೇಶದಲ್ಲಿ ಮುಂದುವರೆಯಲೇಬೇಕು. Yes. The Public Distribution System shall continue. ಇದನ್ನು ಯಾರಿಂದಲೂ ಕೂಡ ಮಾಡುವುದಕ್ಕಾಗುವುದಿಲ್ಲ ನಮ್ಮ Food Security Act ನಲ್ಲಿ it is the right of every individual to get food ಎಂದು ಹೇಳುತ್ತಿರತಕ್ಕಂಥದ್ದು. OK. We will accept it. ನಾನು ಒಂದನ್ನು ತಿಳಿದು ಕೊಳ್ಳೋಣ. ಈಗ ದುಡಿಯುತ್ತಿರುವಂತಹ ಕೈಗಳು ಇದೆಯಲ್ಲಾ ಈ ದೇಶದಲ್ಲಿ ಒಟ್ಟು ಸುಮಾರು 120 ಕೋಟಿಯಷ್ಟು ಜನಸಂಖ್ಯೆ ಇದೆ. ಆ 120 ಕೋಟಿ ಜನತೆಗೆ 240 ಕೋಟಿ ಕೈಗಳು ಉಂಟು ಎನ್ನುವುದನ್ನು ಯಾವತ್ತು ಮರೆತು ಬಿಡಬೇಡಿ. What is more required whether for the Government of India or for your Government or for the BJP Government or whichever

Government is there now? The more important thing is, give work to the two hands. ಇದರ ಬಗ್ಗೆ ಬಜೆಟ್‌ನಲ್ಲಿ ಏನು ಕಾರ್ಯಕ್ರಮಗಳನ್ನು ಮಾಡಲಾಗಿದೆ? ಆ ವಿಷಯದಲ್ಲಿ ಯಾರೋ ಒಬ್ಬರು ಎಸ್‌ಎಂಎಸ್‌ನಲ್ಲಿ ಟ್ವೀಟ್ ಮಾಡಿದ್ದಾರಂತೆ. Somebody has twitted in the SMS ಸರ್ಕಾರ ಒಂದು ರೂಪಾಯಿಗೆ ಒಂದು ಕೆ.ಜಿ.ಯಂತೆ ಕೊಡುವುದರಿಂದ ಅಥವಾ ಉಚಿತವಾಗಿ ಕೊಡುವುದರಿಂದ ದುಡಿಯುವಂತಹ ಕೈಗಳನ್ನು ನೀವು ನಿಷ್ಕ್ರೀಯ ರನ್ನಾಗಿ ಮಾಡುತ್ತೀದ್ದೀರಿ ಎಂದು ಎಸ್‌ಎಂಎಸ್ ನಲ್ಲಿ ಕಳುಹಿಸಿ ದರಂತೆ. ಅಂದರೆ ಕೆಲಸವನ್ನು ಮಾಡುವಂತಹ ಕೈಗಳನ್ನು ನಿಷ್ಕ್ರೀಯನ್ನಾಗಿ ಮಾಡು ತ್ತಿದ್ದೀರಿ and you will make them lazy ಎನ್ನುವಂತಹ ಒಂದು ಎಸ್‌ಎಂಎಸ್ ಬಂತು. ಅದಕ್ಕೆ ಉತ್ತರ ಕೊಟ್ಟರು. Let me tell you, there is truth in it ನೀವು realistic ಅಗಿ ಯೋಚನೆ ಮಾಡಿ. ಒಬ್ಬರಿಗೆ ಒಂದು ದಿವಸಕ್ಕೆ 50 ಪೈಸೆ ಕೊಡುವುದರಿಂದ.

**ಶ್ರೀ ಆರ್.ವಿ.ದೇಶಪಾಂಡೆ (ಉನ್ನತ ಶಿಕ್ಷಣ ಸಚಿವರು):–** ಮಾನ್ಯ ಸಭಾಪತಿಯವರೆ, Poverty Alleviation Programme ನಮ್ಮ ಸರ್ಕಾರ ಏನು ಮೂದಲ ಬಾರಿ ನಾವು ಏನು ತೆಗೆದುಕೂಂಡು ಬಂದಿಲ್ಲ. ಆಂಧ್ರಪ್ರದೇಶದ ಸರ್ಕಾರದವರು ತೆಗೆದುಕೊಂಡು ಬಂದಿದ್ದಾರೆ ಮತ್ತು ನಮ್ಮ ದೇಶದ ಬೇರೆ ಬೇರೆ ರಾಜ್ಯದವರು ಕೂಡ ತೆಗೆದುಕೊಂಡು ಬಂದಿದ್ದಾರೆ. ಬಿಜೆಪಿ ಸರ್ಕಾರ ನಮ್ಮ ರಾಜ್ಯದಲ್ಲಿ ಆಡಳಿತವನ್ನು ನಡೆಸುತ್ತಿದ್ದಂತಹ ಕಾಲದಲ್ಲಿ ಭಾಗ್ಯಲಕ್ಷ್ಮಿ ಯೋಜನೆ ಈ ರೀತಿಯ ಬೇರೆ ಬೇರೆ ಯೋಜನೆಗಳನ್ನು ಜಾರಿಗೆ ತೆಗೆದು ಕೊಂಡು ಬಂದಿದ್ದಾರೆ. ನಮ್ಮ ದೇಶಕ್ಕೆ ಸ್ವಾತಂತ್ರ ಬಂದು ಬಹಳಷ್ಟು ವರ್ಷ ಗಳಾದರೂ ಕೂಡ ಇನ್ನು ನಮ್ಮ ದೇಶದಲ್ಲಿ ಬಹಳಷ್ಟು ಜನರು ಬಡತನ ರೇಖೆ ಗಿಂತಲೂ ಕೆಳಗಡೆ ಇದ್ದಾರೆ. ನಾವು ಒಂದು ರೂಪಾಯಿಗರ ಒಂದು ಕೆ.ಜಿ. ಯಂತೆ ಅಕ್ಕಿಯನ್ನು ಕೊಡುವುದು ಬಿಪಿಎಲ್ ಪಡಿತರ ಚೀಟಿಯನ್ನು ಹೊಂದಿ ರುವವರಿಗೆ ಮಾತ್ರ ಈಗ ಒಂದು ಮನೆಯಲ್ಲಿ ಒಬ್ಬರೇ ಇರುವಂಥವರು ಸುಮಾರು 3 ಲಕ್ಷ ಜನರಿದ್ದಾರೆ. ಅವರಿಗೆ ನಾವು ಒಂದು ತಿಂಗಳಿಗೆ ಅಕ್ಕಿ ಯನ್ನು ಕೊಡುವುದು ಕೇವಲ 10 ಕೆ.ಜಿ.ಗಳು ಮಾತ್ರ. ಅದೇ ರೀತಿಯಲ್ಲಿ

ಒಂದು ಕುಟುಂಬದಲ್ಲಿ ಇಬ್ಬರು ಮಾತ್ರ ಇರುವಂಥವರು 8 ಲಕ್ಷ ಬಿಪಿಎಲ್ ಪಡಿತರ ಚೀಟಿಯನ್ನು ಹೊಂದಿದ್ದಾರೆ. ಅವರಿಗೆ ನಾವು ಒಂದು ತಿಂಗಳಿಗೆ ಆ ಕುಟುಂಬಕ್ಕೆ ಕೊಡುವ ಅಕ್ಕಿ 20 ಕೆ.ಜಿ.ಗಳು ಮಾತ್ರ. Ultimately 30 ಕೆ.ಜಿ. ಗಳು ಒಂದು ಕುಟುಂಬಕ್ಕೆ ಯಾರಿಗೆ ಸಿಗುತ್ತದೆ ಎಂದರೆ, they get a benefit of about Rs. 900/-. That is a saving for them. Employment generation ಬಗ್ಗೆ ಈ ಮಹಾತ್ಮ ಗಾಂಧಿಯವರ ಹೆಸರಿನಲ್ಲಿ Employment Guarantee Scheme ಅನ್ನು Government of India ತೆಗೆದುಕೊಂಡು ಬಂದಿದ್ದಾರೆ. ಅದು ಬಹಳಷ್ಟು ಕಡ ಉಪಯೋಗವಾಗಿದೆ. ಮತ್ತೆ ಕೆಲವು ಕಡೆ ಇದರ ಬಗ್ಗೆ ದೂರು ಗಳು ಕೂಡ ಬಂದಿದೆ. ದೂರುಗಳು ಏಕೆ ಬಂದಿದೆ. ಎಂದರೆ, ದುರು ಪಯೋಗವಾಗದಂತೆ ಅದನ್ನು monitor ಮಾಡಬೇಕು. Assets create ಆಗ ಬೇಕು. Assets maintain ಆಗಬೇಕು. ಇದು ನಮ್ಮ ನಿಮ್ಮ ಸರ್ಕಾರದ ಜವಾ ಬ್ದಾರಿ. ಹಾಗಾಗಿ programme ಸರಿ ಇಲ್ಲ ಎಂದು ಒಪ್ಪಿಕೊಳ್ಳುವುದಕ್ಕಾಗು ವುದಿಲ್ಲ. ಬಡವರ ಬಗ್ಗೆ ಕಾರ್ಯಕ್ರಮಗಳನ್ನು ಹಾಕಿಕೊಳ್ಳಲೇಬೇಕಾಗುತ್ತದೆ.

**ಶ್ರೀ ಯಂ.ಸಿ.ನಾಣಯ್ಯ:-** ಮಾನ್ಯ ಸಭಾಪತಿಯವರೆ, I have not said so. ನಾನು programme ಬಗ್ಗೆ ಹೇಳುತ್ತಿಲ್ಲ. Public Distribution System (PDS) ನಮ್ಮ ಈ ದೇಶದಲ್ಲಿ. ಅದು. ಮುಂದುವರೆಯಲೇಬೇಕಾಗುತ್ತದೆ. Food security ಅನ್ನು ನಾವು ಕೊಡಲೇಬೇಕಾಗುತ್ತದೆ. ನಾನು ಇಲ್ಲವೆಂದು ಹೇಳುವುದಕ್ಕೆ ತಯಾರಿಲ್ಲ. But at what cost? That's all. In the open market, it is Rs. 25 or 26 would it be at the rate of Re 1? That's all my point ನಾನು ಬೇರೆಯದನ್ನು ಕೇಳುತ್ತಿಲ್ಲ.

**ಶ್ರೀ ಎಂ.ಬಿ.ಪಾಟೀಲ್ (ಜಲ ಸಂಪನ್ಮೂಲ ಸಚಿವರು):-** ಮಾನ್ಯ ಸಭಾಪತಿಯವರೆ, ಪಿಡಿಎಸ್ ಸಿಸ್ಟಂ ನಮ್ಮಲ್ಲಿ ದೇಶದಲ್ಲಿ ಮೊದಲಿನಿಂದಲೂ ಬಂದಿದೆ. ಬಿಪಿಎಲ್ ಪಡಿತರ ಚೀಟಿಯನ್ನು ಹೊಂದಿರುವವರಿಗೆ ಕೊಡುತ್ತೇವೆ. The amount that we are giving is very meager compared to the developed country like America which has social security, health

insurance etc. of course, subsidy to all farmers is there in the developed country like America. Here we are giving rice in the PDS.

**Sri. M.C. Nanaiah :** I will tell you, that is not the comparision.

**Sri. Veeranna Mathikatti :** It is for the food security.

ಇನ್ನು ಎರಡನೆಯದಾಗಿ ನಾಲ್ಕು ಸಂಸ್ಥೆಗಳಿಗೆ ಸಂಬಂಧಪಟ್ಟಂತೆ ಅಂದರೆ, ಡಾ: ಅಂಬೇಡ್ಕರ್ ಅಭಿವೃದ್ಧಿ ನಿಗಮಕ್ಕೆ ಸಂಬಂಧಪಟ್ಟಂತೆ, ಅಲ್ಪ ಸಂಖ್ಯಾತರ ಅಭಿವೃದ್ಧಿ ನಿಗಮಕ್ಕೆ ಹಾಗೆಯೇ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡಗಳ ಮತ್ತು ಹಿಂದುಳಿದ ಜಾತಿ ಹಾಗೂ ಅಲ್ಪಸಂಖ್ಯಾತರ ಸಾಲ ಮನ್ನಾ ಯೋಜನೆ. ಅವರ ಲೆಕ್ಕದ ಪ್ರಕಾರ ಸುಮಾರು 4000 ಕೋಟಿ ರೂಪಾಯಿಗಳು ಬೇಕಾಗುತ್ತದೆಂದು ಹೇಳಿದ್ದಾರೆ. ಈ ಹಣವನ್ನು ಎಲ್ಲಿಂದ ತರಲಾಗುತ್ತದೆ ಎನ್ನುವುದನ್ನು ಅವರು ಹೇಳಲೇಬೇಕಾಗುತ್ತದೆ.

ಇನ್ನು ಮೂರನೆಯದಾಗಿ, ಅವರು ತಂದಿರುವಂತಹ ಮತ್ತೊಂದು ಹೊಸ ಯೋಜನೆ ಎಂದರೆ, ಸಹಕಾರಿ ಹಾಲು ಉತ್ಪಾದಕರಿಗೆ ಒಂದು ಲೀಟರ್

ಹಾಲಿಗೆ ಎರಡು ರೂಪಾಯಿ ಹೆಚ್ಚುವರಿಯಾಗಿ ಪ್ರೋತ್ಸಾಹಧನವನ್ನು ಘೋಷಣೆ ಮಾಡಲಾಗಿದೆ. ಇದನ್ನು ನಾವು ಸ್ವಾಗತಿಸುತ್ತೇವೆ. At the moment in Karnataka 56 ಲಕ್ಷ ಲೀಟರ್‌ಗಳಷ್ಟು ಹಾಲು ನಮ್ಮ ರಾಜ್ಯದಲ್ಲಿ ಉತ್ಪಾದನೆ ಆಗುತ್ತಿದೆ. ಒಂದು ಲೀಟರ್‌ಗೆ ಒಂದು ದಿವಸಕ್ಕೆ ಎರಡು ರೂಪಾಯಿಗಳಂತೆ 56 ಲಕ್ಷ ಲೀಟರ್‌ಗೆ ಸರ್ಕಾರ ಕೊಡಬೇಕಾಗಿರುವ ಹಣದ ಮೊತ್ತ 1 ಕೋಟಿ 12 ಲಕ್ಷ ರೂಪಾಯಿಗಳಾಗುತ್ತದೆ. ಇದು ಒಂದು ದಿನಕ್ಕೆ ಕೊಡಬೇಕಾಗಿ ರುವಂತಹ ಮೊತ್ತವಾಗಿದೆ. That is approximately about 400 and odd crore.

ಇನ್ನು ನಾಲ್ಕನೆಯದಾಗಿ ವಸತಿ ಯೋಜನೆ ಅಡಿಯಲ್ಲಿ 3 ಲಕ್ಷ ಮನೆಗಳನ್ನು ನಿರ್ಮಾಣ ಮಾಡಬೇಕೆಂದು ಸರ್ಕಾರ ನಿರ್ಧರಿಸಿದೆ. ಹಿಂದೆ ವಸತಿ ನಿರ್ಮಾಣ ಘಟಕಕ್ಕೆ 75,000 ರೂಪಾಯಿಗಳನ್ನು ಸಬ್ಸಿಡಿ ರೂಪದಲ್ಲಿ ನೀಡಲಾಗುತ್ತಿತ್ತು. ಈಗ ಅದನ್ನು 1 ಲಕ್ಷ 22 ಸಾವಿರ ರೂಪಾಯಿಗಳಿಗೆ ಹೆಚ್ಚಿಸಲಾಗುತ್ತಿದೆ. ಅಂದರೆ ಒಂದು ವಸತಿ ಘಟಕಕ್ಕೆ 50,000 ರೂಪಾಯಿ ಗಳನ್ನು ಹಚ್ಚುವರಿಯಾಗಿ ನೀಡಬೇಕಾಗಿದೆ. ಅಂದರೆ, ಇದರ ಒಟ್ಟು ವೆಚ್ಚ 50000 multiplied by 3 lakh.

ಸನ್ಮಾನ್ಯ ಸಭಾಪತಿಯವರೇ, ಈ ಸರ್ಕಾರದವರು ಮಧ್ಯಂತರ ಹಣ ಕಾಸು ಯೋಜನೆಯನ್ನು ಕೊಟ್ಟಿದ್ದಾರೆ. ನಾನು how much amount your require? ಎಂದು ಲೆಕ್ಕ ಹಾಕಿದ್ದೇನೆ. ಮಾನ್ಯ ವಿರೋಧ ಪಕ್ಷದ ನಾಯಕರು ಹೇಳಿದಂತೆ ಅದು 20,000 ಕೋಟಿ ರೂಪಾಯಿಗಳನ್ನು ಮುಟ್ಟುವುದಿಲ್ಲ. ಅನ್ನ ಭಾಗ್ಯ ಯೋಜನೆಗಾಗಿ ಹೆಚ್ಚುವರಿಯಾಗಿ 3,000 ಕೋಟಿ ರೂಪಾಯಿಗಳಿಗಿಂತ ಹೆಚ್ಚು ಹಣ ಬೇಕಾಗಬಹುದು. ಹಾಲಿಗೆ ಹೆಚ್ಚುವರಿಯಾಗಿ ಎರಡು ರೂಪಾಯಿ ಗಳ ಪ್ರೋತ್ಸಾಹಧನ ನೀಡುತ್ತಿರುವುದರಿಂದ ಅದಕ್ಕ ಸುಮಾರು 440 ಕೋಟಿ ರೂಪಾಯಿಗಳು ಹೆಚ್ಚುವರಿಯಾಗಿ ಬೇಕಾಗಬಹುದು. ನಾಲ್ಕು ನಿಗಮಗಳ ಸಾಲ ಮನ್ನಾಕ್ಕಾಗಿ ಸುಮಾರು 3.000 ಕೋಟಿಗೂ ಹಚ್ಚು ಹಣ ಬೇಕಾಗಬಹುದು. ವಸತಿಗೆ ಸಂಬಂಧಪಟ್ಟಂತೆ 1500 ಕೋಟಿ ರೂಪಾಯಿಗಳ ಅವಶ್ಯಕತೆ ಇದೆ. ಇವಲ್ಲವನ್ನೂ ಒಟ್ಟಿಗೆ ಸೇರಿಸಿದರೆ ಅಂದಾಜು 10,000 ಕೋಟಿ ರೂಪಾಯಿಗಳ

ಅವಶ್ಯಕತೆ ಇದೆ. ಇಷ್ಟು ಹಣವನ್ನು ಎಲ್ಲಿಂದ ತರಲಾಗುತ್ತದೆ ಎನ್ನುವುದು ಸರ್ಕಾರಕ್ಕೆ ನನ್ನ ಪ್ರಶ್ನೆಯಾಗಿದೆ. ಮಾರ್ಚ್ 2014ರ ಅಂತ್ಯದ 1,34,000 ಕೋಟಿ ರೂಪಾಯಿಗಳಷ್ಟು ಸಾಲ ಆಗುತ್ತದೆ. ಹಿಂದಿನ ಮುಖ್ಯಮಂತ್ರಿಗಳಾಗಿದ್ದ ಮಾನ್ಯ ಜಗದೀಶ್ ಶೆಟ್ಟರ್ ಅವರು ಮಂಡಿಸಿದ್ದ ಆಯವ್ಯಯದಲ್ಲಿ. The total loan component is of the order of about 20,000 crores ಎಂದು ಹೇಳಿದ್ದಾರೆ. ಬಾಕಿ ಇರುವಂತಹ ಹಣವನ್ನು ಇವರು ಎಲ್ಲಿಂದ ತರುತ್ತಾರೆ ಎನ್ನುವುದನ್ನು ನಮಗೆ ತಿಳಿಸಬೇಕಾಗುತ್ತದೆ. ಮಧ್ಯಂತರ ಹಣಕಾಸಿನ ಯೋಜನೆಯಲ್ಲಿ, While manageing the fiscal stress on account of unfunded liabilities these are all unfunded liabilities. ಇದಕ್ಕೆ ಆಯವ್ಯಯದಲ್ಲಿ ಫಂಡ್ ಮಾಡಿಲ್ಲ. It is not the budgetary item at all.

Unfunded liabilities build up adequate resources have to be provided for the new announcement of the new government in place. ಇದು ಅವರು ಬರೆದಿರುವುದು. ಹೊಸ ಯೋಜನೆಗಳನ್ನು ಘೋಷಣೆ ಮಾಡಲಾಗಿದೆ. ಇದಕ್ಕಾಗಿ ಹಣಕಾಸಿನ ವ್ಯವಸ್ಥೆಯನ್ನು ಮಾಡಬೇಕಾಗುತ್ತದೆ. Additional

resources would be earmarked for | enhancement in subsidy to be provided by State for supply of rice at Rs.1 per kg. Enhancement of incentive to Milk Producers from Rs.2 to 4 per litre, benefitting 45 lakh farmers. Enhancement in housing subsidy from Rs.75,000 to Rs.1.2 lakh per unit and for one time waiver of OOD loan availed by disadvantage sections from Corporations and Social Welfare Department. This allocations a new and revised budget. ಮಾನ್ಯ ಜಗದೀಶ್ ಶೆಟ್ಟರ್ ಅವರು ಮಂಡಿಸಿದ ಆಯವ್ಯಯವನ್ನು ಅವರೇ ತಯಾರು ಮಾಡಿದ್ದಾರೆ. ಮಾನ್ಯ ಸಿದ್ದರಾಮಯ್ಯನವರು ಮಂಡಿಸಿರುವಂತಹ ಆಯವ್ಯ ಯವನ್ನು ಸಹ ಅವರೇ ತಯಾರು ಮಾಡಿದ್ದಾರೆ. ಹಣಕಾಸು ಇಲಾಖೆಯವರ ಪರಿಸ್ಥಿತಿಯನ್ನು ಸಹ ನಾವು ಯೋಚನೆ ಮಾಡಬೇಕಾಗುತ್ತದೆ. ಹಣಕಾಸು ಇಲಾಖೆಯವರ ಮೇಲೆ ಒತ್ತಡ ಹಾಕುವುದು. ಅಲ್ಲ. ಮಾನ್ಯ ಸಿದ್ದರಾಮಯ್ಯ

ನವರ ಬಗ್ಗೆ ನನಗೆ ಗೊತ್ತಿದೆ. ಅವರ ಒತ್ತಡ ಏಕೆ ಎಂದರೆ, I am very certain he will not within the financial parameters. ಕೆಲವೊಂದು ಸಂದರ್ಭದಲ್ಲಿ ಅದನ್ನು ಗಟ್ಟಿಯಾಗಿ ಇಟ್ಟುಕೊಂಡು ಹೋಗಬೇಕೆಂದು ಅವರು ಭಾವಿಸುತ್ತಾರೆ. ನಾನು ಇಲ್ಲವೆಂದು ಹೇಳುವುದಕ್ಕೆ ಹೋಗುವುದಿಲ್ಲ.ಆದರೆ, ಈ ಒಂದು ಅವಶ್ಯಕತಯನ್ನು ಸ್ವಲ್ಪ ಮಟ್ಟಿಗೆ ಮುಂದೂಡಿದ್ದರೆ ಆಗುತ್ತಿತ್ತೇ ಎನ್ನುವುದು ನಮ್ಮ ಚಿಂತನೆಯಾಗಿದೆ. You could have certainly saved your money, now you are spending on rice, if you waited for another three months. ಏಕೆಂದರೆ ಆಹಾರ ಭದ್ರತಾ ಕಾಯಿದೆ ಜಾರಿಗೆ ಬರುತ್ತದೆ ಎನ್ನುವುದು ಅವರಿಗೆ ಗೊತ್ತಿತ್ತು ಇದರ ಬಗ್ಗೆ ಕಳೆದ ಎರಡು ವರ್ಷಗಳಿಂದ ಚರ್ಚೆ ನಡೆಯುತ್ತಿದೆ. ಆಹಾರ ಸಂರಕ್ಷಣಾ ಕಾಯಿದೆಯನ್ನು ಲೋಕಸಭೆಯಲ್ಲಿ ಮಂಡನೆ ಮಾಡಿದ್ದಾರೆ. ಆದರ, ಭಾರತೀಯ ಜನತಾ ಪಕ್ಷದವರು ಅದನ್ನು stall ಮಾಡಿದ್ದಾರೆ. ಏಕೆಂದರೆ, economic reform ಅನ್ನು stall ಮಾಡಿದ್ದಾರೆ. ಸಾಮಾಜಿಕ ಭದ್ರತೆಗೆ ಸಂಬಂಧಪಟ್ಟ ಬಿಲ್‌ನ್ನು ಸಹ stall ಮಾಡಿದ್ದಾರೆ. ಆದರೆ, now we are not against to Food Security Act ಹೇಳಿದ್ದಾರೆ. ಆದರೆ, ನಮಗೆ ಬೇಕಾಗಿರುವುದನ್ನು ಪಾರ್ಲಿಮೆಂಟನ್‌ಲ್ಲಿ ಚರ್ಚೆ ಮಾಡಿ pros and cons ಮಾಡಿ ಮಾಡೋಣ ಎಂದು ಈಗ ಹೇಳಿದ್ದಾರೆ.

**ಶ್ರೀ ಗೋ.ಮಧುಸೂದನ್:**-ಸನ್ಮಾನ್ಯ ಸಭಾಪತಿಯವರೇ, ಫುಡ್ ಸೆಕ್ಯುರಿಟಿಗಿ0ತ ಹೆಚ್ಚಾಗಿ ಕಾಂಗ್ರೆಸ್ ಸೆಕ್ಯುರಿಟಿ ಬಿಲ್ ಆಗಿದೆ.

**ಶ್ರೀ ಡಿ.ವಿ.ಸದಾನಂದಗೌಡ:**-ಸನ್ಮಾನ್ಯ ಸಭಾಪತಿಯವರೇ, ಆಹಾರ ಭದ್ರತಾ ಕಾಯಿದೆಯನ್ನು ತರಾತುರಿಯಿಂದ ತರುವುದು ಸರಿಯಲ್ಲ. There should be a detail discussion on the floor of the House. After due discussion you should bring the Food Security Bill ಆ ಹಿನ್ನೆಲೆಯಲ್ಲಿ ಅದರ ಬಗ್ಗೆ even on the media and on the floor of the house. ಆ ಹಿನ್ನೆಲೆಯಲ್ಲಿ ಅದರ ಬಗ್ಗೆ even on the media and on the floor of the House ನಮ್ಮ ಸುಷ್ಮಾ ಸ್ವರಾಜ್‌ರವರು ಹೇಳಿದ್ದಾರೆ. Unless and until discussed on the floor of the House, it not be introduced ಎಂದು

ಹೇಳುವಂಥಾದ್ದನ್ನು ಮಾತ್ರ ಮಾಡಿದ್ದಾರೆ. ಆದಕಾರಣ ಅದರ ಬಗ್ಗೆ ವಿರೋಧವನ್ನು ಮಾಡಿಲ್ಲ.

**ಶ್ರೀ ಮತ್ತಿಕಟ್ಟಿ ವೀರಣ್ಣ (ವಿಧಾನ ಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ಹೋದ ಸಲದ ಲೋಕಸಭಾ ಅಧಿವೇಶನದಲ್ಲಿ ಅದಕ್ಕೆ ಕಾಂಗ್ರೆಸ್ ಪಕ್ಷದ ನಾಯಕತ್ವ ಕೇಂದ್ರ ಸರ್ಕಾರ ವಿವಿಧ ಪಕ್ಷಗಳ floor leaders ಜೊತೆಗೆ ಚರ್ಚೆ ಮಾಡಿದರು. ಚರ್ಚೆ ಮಾಡಿ ಒಮ್ಮತದ ಅಭಿಪ್ರಾಯವನ್ನು ತೆಗೆದುಕೊಂಡು ಬಂದು ಅದನ್ನು ಪಾಸ್ ಮಾಡಬೇಕೆಂಬ ಉದ್ದೇಶವಿತ್ತು ಮಾನ್ಯ ನಾಣಯ್ಯನವರು ಹೇಳಿದ್ದು ನೂರಕ್ಕೆ ನೂರು ಸತ್ಯವಿದೆ. ಇವತ್ತು ಅವರು ಹೇಳುತ್ತಿದ್ದಾರೆ, ಸುಷ್ಮಾ ಸ್ವರಾಜ್‌ರವರು ಹೇಳುತ್ತಿದ್ದಾರೆ. ನಾನು ಮಾನ್ಯ ಮಧುಸೂದನ್ರವರ ಬಗ್ಗೆ ಮಾತನಾಡುತ್ತಿಲ್ಲ.

**ಶ್ರೀ ಗೋ.ಮಧುಸೂದನ್:-** ಹಾಗಿದ್ದರೆ ordinance ಅನ್ನು ಏಕೆ ಹೊರಡಿಸಿದಿರಿ? ಇದಕ್ಕೆ ಯುಪಿಎ ಯಲ್ಲಿಯೇ ಸಹಮತವಿಲ್ಲ.

**ಶ್ರೀ ಮತ್ತಿಕಟ್ಟ ವೀರಣ್ಣ;-** ಒಂದು ನಿಮಿಷ ಕುಳಿತುಕೊಳ್ಳಿ. ನೀವು ಏನೇನು ಮಾಡುತ್ತೀರಿ ಎನ್ನುವುದೆಲ್ಲಾ ಜನರಿಗೆ ಗೊತ್ತಿದೆ. ನಾನು ಮಾನ್ಯ ಸದಾನಂದಗೌಡರ ಜೊತೆಗೆ ಮಾತನಾಡುತ್ತಿದ್ದೇನೆ. ಅವರು ಯಾವುದು ನೈಜತೆ ಇದೆ, ಸತ್ಯವಿದೆ ಅದನ್ನು ಒಪ್ಪಿಕೊಳ್ಳುತ್ತಾರೆ. ಅವರಿಗೆ ಅಷ್ಟು ದೊಡ್ಡ ಮನಸಿದೆ. ನಾನು ಅದಕ್ಕೋಸ್ಕರ ಹೇಳುತ್ತಿದ್ದೇನೆ. ಅಣು ಒಪ್ಪಂದ ನಿಮ್ಮದು. ಸನ್ಮಾನ್ಯ ವಾಜಪೇಯಿಯವರು ಅದನ್ನು ಹುಟ್ಟು ಹಾಕಿ ಮಾಡಬೇಕೆಂದು ಬಂದರು. ಕಮ್ಯುನಿಸ್ಟ್ ಪಾರ್ಟಿಯವರು ವಿರೋಧ ಮಾಡುತ್ತೇವೆಂದರು. ನೀವು ಅವರ ಜೊತೆಗೆ ಸೇರಿ ಸರ್ಕಾರವನ್ನು ಕೆಡವುದಕ್ಕೆ ಹೋದಿರಿ. ರಾಜ್ಯ ಮತ್ತು ರಾಷ್ಟದ ಹಿತ ಕಾಪಾಡಬೇಕು. ಆ ದೃಷ್ಟಿಯಲ್ಲಿ ಅವರು ಕೆಲವು ವಿಚಾರಗಳಿಗೆ ಒಪ್ಪುತ್ತಾರೆ. ಅದನ್ನೇ ಮಾನ್ಯ ನಾಣಯ್ಯನವರು ಹೇಳಿದ್ದಾರೆ.

**Sri. M.C. NANAIAH :** Sir, now my point is ಹಿಂದೆ Food Security ನ್ನು ತಂದಾಗಲೂ ನಾನು ಹೇಳಿದೆ Yes, Food Security Act ನ್ನು ತರಬೇಕು. ಈ ಕಾಯ್ದೆಯನ್ನು ತರಬಾರದು ಎಂದು ನಾನು ಹೇಳಲಿಕ್ಕೆ

ತಯಾರಿಲ್ಲ. Everbody should accept it ಏಕೆಂದರೆ food ಎನ್ನತಕ್ಕಂಥಾದ್ದು It should become fundamental right of everybody. Education is the fundamental right ಮಾತನಾಡುವುದು fundamental right ಆದುದರಿಂದ Food ಎನ್ನತಕ್ಕಂಥಾದ್ದು ಸಹ ಮೂಲಭೂತ ಹಕ್ಕು ಆಗಬೇಕು. ಅವರಲ್ಲಿ ಏನೂ ತಪ್ಪಿಲ್ಲ ಇದನ್ನು ಮಾಡಿ. Food ಎನ್ನತಕ್ಕಂಥಾದ್ದು ಮೂಲಭೂತ ಹಕ್ಕು ಆದರೆ food ನ್ನು produce ಮಾಡಲಿಕ್ಕೆ ಇರತಕ್ಕಂಥಾದ್ದಕ್ಕೆ ಎಷ್ಟು ಪ್ರಮಾಣದಲ್ಲಿ ಖರ್ಚು ಮಾಡಬೇಕೆಂಬುದು ಕೂಡ fundamental duty ಆಗುತ್ತದೆ right ಮಾತ್ರ ಆಗುವುದಿಲ್ಲ duty ಕೂಡ ಆಗಬೇಕಾಗುತ್ತದೆ. ಆದರೆ ನಾನು ಇಲ್ಲಿ ಇಷ್ಟನ್ನು ಮಾತ್ರ ಹೇಳುತ್ತೇನೆ. ಅಲ್ಲಿಯೂ ಕೂಡ ಅದು 3 ರೂ, 2 ರೂ. ಮತ್ತು 1 ರೂ... ಇದು ಯಾವುದನ್ನು ತರಬೇಕಾದರೂ ಇವರು ತಂದಿರತಕ್ಕಂಥ ವಿಧೇಯಕದಲ್ಲಿಯೂ ಕೂಡ ಮುಂದೆ ನಡೆಯತಕ್ಕಂಥ ಚುನಾವಣೆಯ ವಾಸನೆ ಇಟ್ಟುಕೊಂಡೆ ತಂದಿರುವುದು. ಇಲ್ಲವೆಂದು ಹೇಳಿದರೆ ನಾನು ಅದನ್ನು ಒಪ್ಪುವುದಿಲ್ಲ. ಆ ಒಂದು ವಾಸನೆ ಇದ್ದೇ ಇದೆ. ಆದರೆ ಅದರ ಹಿಂದೆ ಇರತಕ್ಕಂಥ laudable object ಇದೆಯಲ್ಲಾ ಅದನ್ನು ನಾನು appreciate ಮಾಡುತ್ತೇನೆ. ಆದರೆ ಇವರು ಅದನ್ನು ಏನು ಮಾಡುತ್ತಾರೆಂದರೆ, ಸಂಸತ್ತಿನಲ್ಲಿ ಅದು suddent ಆಗಿ ಬಂದಿಲ್ಲ. ಸಂಸತ್ತಿನಲ್ಲಿ ಅದನ್ನು introduce ಮಾಡಿ ಕಳೆದ ಅಧಿವೇಶನದಲ್ಲಿಯೇ ಮಾಡಿದ್ದಾರೆ. ಈ ಅಧಿವೇಶನದಲ್ಲಿ ಅದನ್ನು ತಂದು ಚರ್ಚೆ ಮಾಡಿದ್ದಾರೆ. ಇದರಲ್ಲಿ ಏನಾಗುತ್ತದೆಂದರೆ, let us wait and watch ಎಂದು ಹೇಳತಕ್ಕಂಥಾದ್ದು ಬಂದಿತ್ತು. ಇವರು ಈಗ ಹೇಳಲಿಲ್ಲವೇ. 1 ರೂ. ಎಂದು ಹೇಳತಕ್ಕಂಥಾದ್ದು ನಮ್ಮ ಪ್ರಣಾಳಿಕೆಯಲ್ಲಿ ಬಂದಿದ್ದನ್ನು ನೀವು ತಂದಿರಿ ಎನ್ನತಕ್ಕಂಥ ಮಾತನ್ನು ಹೇಳಿದರು.

**Sri. G. MADHUSUDHAN :** Women Reservation Bill ನ್ನು ಸಹ ಬರುವ ವರ್ಷದಿಂದ introduce ಮಾಡಿ ಎಂದು ಹೇಳುತ್ತಿದ್ದಾರೆ. Women Reservation Bill ನ್ನು ಸಹ ಬಹಳ ದಿವಸಗಳಿಂದ ಇಟ್ಟಿದ್ದಾರೆ. ಅದಕ್ಕೆ ಬಿಜೆಪಿ ಪಕ್ಷ ಲೋಕಸಭೆಯಲ್ಲಿ ಮತ್ತು ರಾಜ್ಯಸಭೆಯಲ್ಲಿ support ಕೊಡುತ್ತೇವೆಂದು ಹೇಳಿದ್ದೇವೆ.

**ಶ್ರೀ ಮತ್ತಿಕಟ್ಟಿ ವೀರಣ್ಣ:-** ಮಾನ್ಯ ಸಭಾಪತಿಯವರೆ, ಆ ವಿಚಾರವಾಗಿ ಸಂಪೂರ್ಣವಾದ ಚರ್ಚೆಯಾಗಬೇಕೆಂದರೆ ನಾವು ತಯಾರಿದ್ದೇವೆ. ನಾನು ತಮ್ಮ ಮೂಲಕ ಮಾನ್ಯ ಮಧುಸೂದನ್‌ರವರಿಗೆ ವಿನಂತಿ ಮಾಡಿಕೊಳ್ಳುವುದೇನೆಂದರೆ, ಸುಮ್ಮಸುಮ್ಮನೆ hit and run ಬೇಡ. ಯಾವುದಕ್ಕಾದರೂ ಒಂದು ತಾತ್ವಿಕವಾದ ತಳಹದಿಯ ಮೇಲೆ ಚಿಂತನೆ ಮಾಡಿ ಚರ್ಚೆ ಮಾಡುವುದಾದರೆ, ಅದಕ್ಕೆ ನಾವು ತಯಾರಿದ್ದೇವೆ. ಇದೆಲ್ಲಾ double role ಮಾಡುತ್ತಾ ಹೋದರೆ ಅದು ಈ ರಾಷ್ಟ್ರದಲ್ಲಿ ನಡೆಯುವುದಿಲ್ಲ. ನಾವು ಯಾವುದನ್ನು ಹೇಳುತ್ತೇವೆ, ಯಾವುದನ್ನು ಪ್ರತಿಪಾದನೆ ಮಾಡುತ್ತೇವೆ. ಅದಕ್ಕೆ ಬದ್ಧತೆ ಇರಬೇಕು. ಆ ಬದ್ದತೆ ಅವರಲ್ಲ ಇಲ್ಲ.

**ಶ್ರೀ ಗೋ.ಮಧುಸೂದನ್:-** ಅದಕ್ಕೆ ನೀವು ordiance ಮಾಡಲಿಲ್ಲ. Women Reservation Bill ಬಗ್ಗೆ ಬಹಳ ದಿವಸಗಳಿಂದ ಚರ್ಚೆ ನಡೆಯುತ್ತಿದೆ.

**ಶ್ರೀ ಮತ್ತಿಕಟ್ಟಿ ವೀರಣ್ಣ:-** ಅದಕ್ಕೂ ಸಹ ವಿರೋಧ ಮಾಡಿದವರು ನೀವೇ. ಒಂದು ಕಡೆ ಹ್ಞೂಂ ಎಂದು ಹೇಳುತ್ತೀರಿ.

**ಶ್ರೀ ಗೋ.ಮಧುಸೂದನ್:-** ನಾವು ವಿರೋಧ ಮಾಡಲಿಲ್ಲ. ವಿರೋದ ಮಾಡಿದವರು UPA partners.

**ಶ್ರೀ ಯಂ.ಸಿ.ನಾಣಯ್ಯ:-** ಮಾನ್ಯ ಸಭಾಪತಿಯವರೇ, Women Reservation Bill ಬಗ್ಗೆ ನಾನು ನೇರವಾಗಿ ಹೇಳಿಬಿಡುತ್ತೇನೆ. ನಿಮ್ಮವರು, ಬಿಜೆಪಿಯವರು, ಸಮಾಜವಾದಿ ಪಾರ್ಟಿಯವರು, ಲಾಲೂ ಪ್ರಸಾದ್ ಅವರ ಕಡೆಯ ಜನರು ಎಲ್ಲಾ ಸೇರಿ ಈ ಯೋಚನೆ ಏಕೆ ಬಂತು ಗೊತ್ತೇನು. ಸಂಸತ್ತಿನಲ್ಲಿ ಮೂರ್ನಾಲ್ಕು ಜನ ಮಹಿಳಯರಿದ್ದಾರಲ್ಲಾ. ಅವರು ಬಹಳ ಜೋರಾಗಿ ಯಾವ ರೀತಿ ಪ್ರಸ್ತಾಪಿಸಿದರು ಎಂಬುದು ಅವರ ಗಮನಕ್ಕೆ ಬಂತು. ನಮ್ಮ ಸದನದಲ್ಲಿ ಈಗ ಶ್ರೀಮತಿ ಭಾರತಿ ಶೆಟ್ಟರು, ಡಾ ಎಸ್.ಆರ್.ಲೀಲಾರವರು ಮುಂತಾದ ಮಹಿಳೆಯರಿದ್ದಾರೆ. ಇವರನ್ನು ಹೆಚ್ಚು ಹೆಚ್ಚು ಬೆಳಸಬಾರದು ಎಂದು ಹೇಳುತ್ತಿರತಕ್ಕಂಥಾದ್ದು. ಇದೆಲ್ಲಾ ಇದೆ. ಇದು ಏಕೆ ಬಂತು ಗೊತ್ತೇನು. ಈ ಮಮತಾ, ಜಯ, ಮಾಯವತಿ ಮತ್ತು ಪೂಲನ್ ದೇವಿ ಇವರುಗಳು.

**ಶ್ರೀ ಮತ್ತಿಕಟ್ಟಿ ವೀರಣ್ಣ:–** ಇವರೆಲ್ಲಾ ಮದುವೆ ಆಗದೇ ಇರುವವರು. ಮದುವೆ ಆದವರು ಹಾಗೆ ಆ ರೀತಿ ಇದ್ದಂಗಿಲ್ಲ.

**ಶ್ರೀ ಯಂ.ಸಿ.ನಾಣಯ್ಯ:–** ನಾನು ಹೇಳುತ್ತೇನೆ ಕೇಳಿ. ಮದುವೆ ಆದವರೋ, ಆಗದೇ ಇರುವವರೋ. ಲೋಕಸಭೆಯಲ್ಲಿ ಎಷ್ಟು ಜೋರು... ಮಾಯವತಿಯವರು ಮುಖ್ಯಮಂತ್ರಿಗಳಾದ ಮೇಲೆ ಯಾವ ರೀತಿಯಾದರು, ಜಯಲಲಿತಾರವರು ಈಗ ಯಾವ ರೀತಿ ಇದ್ದಾರೆ, ಮಮತಾ ಬ್ಯಾನರ್ಜಿ ಯವರು ಯಾವ ರೀತಿ ಇದ್ದಾರೆ. ಇದನೆಲ್ಲಾ ನೋಡಿದ ನಂತರ, ಅಯ್ಯೋ ಗ್ರಹಚಾರವೇ 4 ಜನರನ್ನೇ ನಮಗೆ ಲೋಕಸಭೆಯಲ್ಲಿ ತಡೆಯಲಿಕ್ಕೆ ಆಗಲಿಲ್ಲ. ಇದರ ಜೊತೆಯಲ್ಲಿ ಶೇಕಡ 50ರಷ್ಟು ಮೀಸಲಾತಿ ಬಂದರೆ ಗತಿ ಏನು ಎಂದು ಕಡೆಗೆ ಎಲ್ಲರೂ ಸುಮ್ಮನ್ನಾಗಿ ಬಿಟ್ಟರು. ನಾನೂ ಸಹ ಮಹಿಳೆಯರ ಪರವೇ.

**ಶ್ರೀ ಡಿ.ವಿ.ಸದಾನಂದಗೌಡ:–** ಮಾನ್ಯ ಸಭಾಪತಿಯವರೆ, ಇವತ್ತು ಸಂಜೆ 5.30 ಗಂಟೆಗೆ ನಮ್ಮ ಪಕ್ಷದ ಸಭೆ ಇರುವ ಕಾರಣ ನಾವೆಲ್ಲರೂ ತುರ್ತಾಗಿ ಹೋಗಬೇಕಾಗಿದೆ ಎಂದು ನಿನ್ನೆಯ ದಿವಸ ಸಭಾ ಪೀಠದಲ್ಲಿದ್ದ ಮಾನ್ಯ ಸಭಾಪತಿಯವರಿಗೆ ವಿನಂತಿ ಮಾಡಿಕೊಂಡು ಹೇಳಿದ್ದೆವು. ನನ್ನ ಒಂದು ನಿವೇದನೆ ಏನೆಂದರೆ, ಮಾನ್ಯ ನಾಣಯ್ಯನವರ ಮಾತುಗಳು ಈಗಲೇ ಮುಗಿಯಲಿಕ್ಕಿಲ್ಲ. ಅವರು ಇನ್ನು ಮಾತನಾಡುವುದಿದೆ ಎನಿಸುತ್ತದೆ.

**ಶ್ರೀ ಗೋ.ಮಧುಸೂದನ್:–** ಮಾನ್ಯ ಸಭಾಪತಿಯವರೆ, ಮಾನ್ಯ ನಾಣಯ್ಯನವರ ಭಾಷಣ ಎಕ್ಸೈಜ್ ಬಗ್ಗೆ ಮಾತನಾಡದೇ ಮುಗಿಯುವುದೇ ಇಲ್ಲ. ಅದರ ಬಗ್ಗೆ ಮಾತನಾಡಲು ಅವರಿಗೆ ಇನ್ನು ಸಮಯವೇ ಆಗಿಲ್ಲ.

**ಶ್ರೀ ಮತ್ತಿಕಟ್ಟಿ ವೀರಣ್ಣ:–** ಮಾನ್ಯ ಸಭಾಪತಿಯವರೆ, ಮಾನ್ಯ ಮಧು ಸೂದನರವರ ವಿಚಾರಕ್ಕೆ ಉತ್ತರವನ್ನು ಹೇಳುತ್ತೇನೆ. ಅದಕ್ಕೆ ಕತ್ತಲಾಗಬೇಕು. ಅವರು ಕತ್ತಲಾಗುವುದಕ್ಕೆ ಮುಂಜೆಯೇ ಹೊರಟರಲ್ಲಾ ಅದಕ್ಕೋಸ್ಕರವಾಗಿ ನಾವು ಹೇಳುತ್ತಿರುವುದು.

**ಶ್ರೀ ಡಿ.ವಿ.ಸದಾನಂದಗೌಡ:-** ಮಾನ್ಯ ಸಭಾಪತಿಯವರೆ, ನಾವುಗಳು ಯಾರೂ ಸಹ ಸದನದಲ್ಲಿ ಇರುವುದಿಲ್ಲ. ಹಾಗಾಗಿ ಮಾನ್ಯ ನಾಣಯ್ಯನವರು ನಾಳೆಯ ದಿವಸ ತಮ್ಮ ಮಾತುಗಳನ್ನು ಮುಂದುವರೆಸಲಿ. ಅವರ ಭಾಷಣ ವನ್ನು ಕೇಳಲಿಕ್ಕೆ ನಮಗೂ ಸಹ ಆಸಕ್ತಿ ಇದೆ. ಆದಕಾರಣ ಅವರು ತಮ್ಮ ಮಾತುಗಳನ್ನು ನಾಳೆಯ ದಿವಸ ಮುಂದುವರೆಸಿದರೆ ಒಳ್ಳೆಯದು ಎಂಬುದು ನನ್ನ ಒಂದು ವಿನಂತಿ. ಎರಡನೆಯದಾಗಿ ಇನ್ನೊಂದು ಬಹಳ ಗಂಭೀರ ವಾದಂಥ ವಿಚಾರವನ್ನು ಕಳದ ಎರಡು ದಿವಸಗಳಿಂದ ಪ್ರಶ್ನೆ ಮಾಡಬೇಕೆಂದು ಇದ್ದೆ. Visvesvaraya Technological University ಯಲ್ಲಿ ನೇಮಕಾತಿಗಳು ಪ್ರಾರಂಭವಾಗಿದೆ. ಅಲ್ಲಿರುವ ವಿದ್ಯಮಾನಗಳು ಮತ್ತು ಅದರಲ್ಲಿರುವಂಥ ಗಂಭೀರವಾದಂಥ ಹಲವಾರು ವಿಚಾರಗಳನ್ನು ಪ್ರಸ್ತಾಪ ಮಾಡಬೇಕೆಂದು ಹೇಳಿದರು. ನನಗೆ ಅನ್ನಿಸುವುದೇನೆಂದರೆ, ನಾಳೆಯ ದಿವಸ ಬೆಳಿಗ್ಗ ಪ್ರಶ್ನೋ ತ್ತರ ವೇಳೆ ಆದ ಕೂಡಲೇ ಆ ವಿಚಾರವನ್ನು ಚರ್ಚೆಗೆ ತೆಗೆದುಕೊಳ್ಳಬೇಕು. ಅದೊಂದು 15 ನಿಮಿಷಗಳ ಕಾಲ ಆಗಬಹುದು. ಇವತ್ತು ಈ ವಿಚಾರವನ್ನು ಚರ್ಚೆಗೆ ತೆಗೆದುಕೊಳ್ಳಬೇಕಾಗಿತ್ತು. ಮಾನ್ಯ ಉನ್ನತ ಶಿಕ್ಷಣ ಸಚಿವರು ಅದಕ್ಕಾಗಿಯೇ ಬಂದಿದ್ದರು. ಅದಕ್ಕಾಗಿ ನಾನು ಹೇಳುವುದೇನೆಂದರೆ, ಅದರ ಚರ್ಚೆಗಳನ್ನು ತಾವು ಸ್ವಲ್ಪ ನೋಟ್ ಮಾಡಿಕೊಂಡು ಈಗ ನೇಮಕಾತಿಗಳ ಬಗ್ಗೆ interview ಗಳನ್ನು ತಾತ್ಕಾಲಿಕವಾಗಿ ತಡೆ ಹಿಡಿಯುವುದನ್ನು ಮಾಡಿಬಿಟ್ಟು ಅದರ ಸುದೀರ್ಘ ಚರ್ಚೆಗಳನ್ನು ಎರಡು ದಿವಸಗಳು ಕಳದು ಸೋಮವಾರ ಮಾಡುವುದಕ್ಕೆ ಒಂದು ಅವಕಾಶವನ್ನು ಮಾಡಿಕೊಟ್ಟರೆ ಅದೊಂದು ಸಾರ್ವ ಜನಿಕ ಹಿತಾಸಕ್ತಿಗೆ ನಾವು ಕೊಡುವಂಥ ಗೌರವವಾಗುತ್ತದೆ ಎನ್ನುವುದು ನನ್ನ ಒಂದು ಅಭಿಪ್ರಾಯ. ಅಷ್ಟನ್ನು ನಾಳೆಯ ದಿವಸ ಬೆಳಿಗ್ಗೆ ಮಾಡಬೇಕೆಂದು ಕೇಳಿ ಕೊಳ್ಳುತ್ತೇನೆ.

**ಶ್ರೀ ಬಸವರಾಜ ಹೊರಟ್ಟಿ:-** ಮಾನ್ಯ ಸಭಾಪತಿಯವರೆ, ಈಗ ಅವರು ಸಂದರ್ಶನವನ್ನು ನಿಲ್ಲಿಸಬೇಕಾಗುತ್ತದೆ.

**ಶ್ರೀ ಮತ್ತಿಕಟ್ಟಿ ವೀರಣ್ಣ:-**ಮಾನ್ಯ ಸಭಾಪತಿಯವರೆ, ಈ ಚರ್ಚೆ ನಡೆ ಯುವಾಗ ಮಾನ್ಯ ಸಚಿವರು ಸದನದಲ್ಲಿರಬೇಕು.

**ಶ್ರೀ ಡಿ.ವಿ.ಸದಾನಂದಗೌಡ:-** ಮಾನ್ಯ ಸಭಾಪತಿಯವರೆ, ಅದರ ಬಗ್ಗೆ detail ಆದಂಥ ತೀರ್ಮಾನಗಳನ್ನು ಕೊಡಲಿಕ್ಕೆ ಮಂತ್ರಿಗಳು ಬೇಕು.

**ಶ್ರೀ ಬಸವರಾಜ ಹೊರಟ್ಟಿ:-** ಮಾನ್ಯ ಸಭಾಪತಿಯವರೆ, 1200 ಜನ ವಿದ್ಯಾರ್ಥಿಗಳಿಗೆ grace marks ಹಾಕಿ 20 ಅಂಕ ಇದ್ದವರಿಗೆ 65, 90 ಮಾರ್ಕ್ಸ್ ಮಾಡಿದ್ದಂತಹವು, ಅದೇ ತರಹ ಸಂದರ್ಶನ ತೆಗೆದುಕೊಳ್ಳುವುದು ಇಷ್ಟೆಲ್ಲಾ ಇದ್ದಾವೆ. ಹಾಗಾಗಿ ದಯಮಾಡಿ ಬೆಳಗಾವಿಗೆ ನಿಲ್ಲಿಸಿದರು. ಬೆಳಗಾವಿದು ಏಕೆ ನಿಲ್ಲಿಸಲಾಯಿತು? ಬೆಳಗಾವಿ ವಿಶ್ವವಿದ್ಯಾನಿಲಯದವರು interview ಕರೆದು interview ಬಂದಿದ್ದರು. ಇದನ್ನು ಏಕೆ ನಿಲ್ಲಿಸಿದರು ಎಂದರೆ ಅಲ್ಲಿ ಅನ್ಯಾಯವಾಗುತ್ತದೆ, ತಪ್ಪಾಗುತ್ತದೆ ಎಂದು ನಿಲ್ಲಿಸಿದರು. ಅದೇ ತರಹ ಇದಕ್ಕೆ ಸರ್ಕಾರ ಯಾವುದಾದರೂ ಒಂದು ತೀರ್ಮಾನವನ್ನು ಮಾಡಬೇಕು. ಇದು ಬಹಳ ಮಹತ್ವದ ವಿಚಾರವಾಗಿದೆ. ಬೆಳಗಾವಿಗೆ ಸಂಬಂಧಿಸಿದಂತೆ. recruitment ನಿಲ್ಲಿಸಿದರು. Non teaching ಗೆ ಬೆಳಗಾವಿಯಲ್ಲಿ ನಿಲ್ಲಿಸಿದರು. ಭ್ರಷ್ಟಾಚಾರವಾಗುತ್ತದೆ, ಸ್ವಜನ ಪಕ್ಷಪಾತವಾಗುತ್ತದೆ ಎಂಬುದಕ್ಕೆ ನಿಲ್ಲಿಸಿದರು. ಅದೇ ತರಹ ಇಲ್ಲಿಯೂ ನೇಮಕಾತಿ ಆಗುತ್ತದೆ. ಅದರ ಬಗ್ಗೆ Vice Chancellor ದೊಡ್ಡದಾದಂಥ ಗಲಾಟೆಯಾಗಿದೆ. ಆ ನೇಮಕಾತಿಯಲ್ಲಿ ಭ್ರಷ್ಟಾ ಚಾರವಾಗುತ್ತದೆ, ಅವ್ಯವಹಾರವಾಗುತ್ತದೆ ಎನ್ನುವಂಥಾದ್ದು ಬಂದಿದೆ. ಅದಕ್ಕಾಗಿ ಸರ್ಕಾರ ಇದನ್ನು ನಿಲ್ಲಿಸಲಿ. ಇದರ ಬಗ್ಗೆ ಚರ್ಚೆ ಮಾಡಲು ಮಂತ್ರಿಗಳು ಬರಬೇಕು.

**ಶ್ರೀ ಡಿ.ವಿ.ಸದಾನಂದಗೌಡ:-** ಮಾನ್ಯ ಸಭಾಪತಿಯವರೆ, ಇಲ್ಲಿರುವಂಥ ನಮ್ಮ ಅಪೇಕ್ಷೆ ಏನೆಂದರೆ, ಅದನ್ನು ಏನು ಮಾಡಬೇಕು, ಹೇಗೆ ಮಾಡಬೇಕು ಎನ್ನುವಂಥ ತೀರ್ಮಾನಗಳನ್ನು ಮಂತ್ರಿಗಳು ಮಾಡಲಿ. ಅದರಲ್ಲಿ ನಮ್ಮ ಅಭ್ಯಂತರವೇನೂ ಇಲ್ಲ. ಆ ಇಲಾಖೆಗೆ ಸಂಬಂಧಪಟ್ಟ ಹಾಗೆ ಅವರೇ ತೀರ್ಮಾನಗಳನ್ನು ತೆಗೆದುಕೊಳ್ಳಬೇಕು. ಆದರೆ ಈಗ ಇದನ್ನು ತರಾತುರಿಯಲ್ಲಿ ಮಾಡುವಂಥಾದ್ದು, ಈಗಾಗಲೇ rate list ಗಳು announce ಆಗಿರುವಂಥಾದ್ದು, ಇಂತಹ ಗಂಭೀರವಾದ ವಿಚಾರಗಳನ್ನು ನಮ್ಮ ನಾರಾಯಣಸ್ವಾಮಿಯವರು, ಬಸವರಾಜ ಹೊರಟ್ಟಿಯವರು, ಅರುಣ್ ಶಹಾಪುರರವರು ಪ್ರಸ್ತಾಪ ಮಾಡಿ

ದ್ದಾರೆ. ಇದರ ಬಗ್ಗೆ ನಿನ್ನೆಯ ದಿವಸ ಚರ್ಚೆಗೆ ತೆಗೆದುಕೊಳ್ಳಬೇಕಾಗಿತ್ತು. ಆದರೆ ನಿನ್ನೆಯ ದಿವಸ ಇದನ್ನು ಚರ್ಚೆಗೆ ತೆಗೆದುಕೊಳ್ಳಲಿಕ್ಕೆ ಆಗಲಿಲ್ಲ. ನಾನು ಮಾನ್ಯ ಮಂತ್ರಿಗಳ ಬಳಿ ಮಾತನಾಡಿದೆ. ಮಂತ್ರಿಗಳು ಕೂಡ ಇದಕ್ಕೆ ಸಹಮತವನ್ನು ವ್ಯಕ್ತಪಡಿಸಿದರು. ಆದರೆ ನಿನ್ನೆಯ ದಿವಸ ಕಾರ್ಯಕಲಾಪಗಳ ಸಲಹಾ ಸಮಿತಿ ಯಲ್ಲಿ ತೀರ್ಮಾನವಾದ ರೀತಿಯಲ್ಲಿ ನಮ್ಮ ಅಜೆಂಡಾ ಪ್ರಕಾರ ಹೋಗಬೇಕು ಎಂದು ಹೇಳಿದ್ದಕ್ಕೆ ನಾನು. ಒತ್ತಡ ಮಾಡಲಲ್ಲ. ಏಕೆಂದರೆ. ಈ ಬಜೆಟ್ನ ಚರ್ಚೆಗಳು ನಡೆಯಬೇಕು ಎಂಬುದಕ್ಕೆ ಹಿರಿಯರಾದಂಥ ಮಾನ್ಯ ನಾಣಯ್ಯ ನವರು ಚರ್ಚೆ ಮಾಡಿದರು. ಈಗ ನಮ್ಮಲ್ಲಿರುವಂಥಾದ್ದು ಏನೆಂದರೆ, ನಾವು ಅದನ್ನು ಏನು ಮಾಡಬೇಕು, ಹೇಗೆ ಮಾಡಬೇಕು ಎಂಬುದರ ಬಗ್ಗೆ ತೀರ್ಮಾನಗಳನ್ನು ಮಾನ್ಯ ಮಂತ್ರಿಗಳು ಕೊಡಲಿ. ಆದರೆ ಈಗ ಈ ಹಂತದಲ್ಲಿ ನಡೆಯುವಂತಹ ವ್ಯವಸ್ಥೆ ಏನಿದೆ ಅದನ್ನು ತಾತ್ಕಾಲಿಕವಾಗಿ ತಡೆಹಿಡಿಯಬೇಕು ಎನ್ನುವುದು ನಮ್ಮ ಅಭಿಪ್ರಾಯವಾಗಿದೆ. ಮಾನ್ಯ ಸದಸ್ಯರಾದ ಹೊರಟ್ಟಿ ಯವರು, ಮಾನ್ಯ ನಾಯರಾಯಣಸ್ವಾಮಿಯವರು, ಮಾನ್ಯ ಅರುಣಶಹಾಪುರ ರವರುಗಳು ಈ ಕುರಿತು ಚರ್ಚೆ ಮಾಡಿದ ಮೇಲೆ ಸೋಮವಾರ ಒಂದು ತೀರ್ಮಾನ ತೆಗೆದುಕೊಳ್ಳಲಿ. ಇದು ಗಂಭೀರವಾದ ವಿಷಯವಾಗಿದೆ. Professors, Assistant Professors ಗಳ ವಿಚಾರವಾಗಿದೆ. ಸಣ್ಣವರದ್ದಲ್ಲ.

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಗಳ, ವಿಷಯದ ಗಂಭೀರತೆಯನ್ನು ನೋಡಿಕೊಂಡು ನಾಳೆ ಚರ್ಚೆ ಮಾಡಲಿ..

**ಶ್ರೀ ಯಂ.ಸಿ.ನಾಣಯ್ಯ:-** ನಾನೊಂದು ಸಲಹೆ ಕೊಡುತ್ತೇನೆ. ಈಗಾಗಲೇ ಅಲ್ಲಿ ನೇಮಕಾತಿ ಶುರು ಆಗಿದೆ. ಬಹಳ ದೊಡ್ಡ ಪ್ರಮಾಣದಲ್ಲಿ ರುವ Professors, Assistant Professors ಗಳನ್ನು ನೇಮಕ ಮಾಡು ವುದಕ್ಕೆ ಹೊರಟ್ಟಿದ್ದಾರೆ. ಈ ಹಿಂದೆ ಬೆಳಗಾವಿಯದ್ದು ಬಂದಾಗ ಮಾಡಬಾರದು ಎಂದು ಸರ್ಕಾರ ತಡಹಿಡಿದಿತ್ತು. ಈಗಲೂ ಇಷ್ಟೇ ಮಾಡಬೇಕು. ನಾಳೆ ಚರ್ಚೆ ಆದಮೇಲೆ ಬೇಕಾದರೆ ತೀರ್ಮಾನ ತೆಗೆದುಕೊಳ್ಳಲಿ. ಅಥವಾ ವಿಷಯದ ಗಾಂಭೀರ್ಯತೆಯನ್ನು ಅರಿತು. Hon'ble Minister R.V.Deshpande is here today. ಅವರು ಒಂದು ನಿರ್ದೇಶನ ಕೊಡಲಿ to stop appointment.

ಸೋಮವಾರ ಬೇಕಾದರೆ ಸುದೀರ್ಘ ಚರ್ಚೆ ಮಾಡೋಣ. ನೇಮಕಾತಿಯನ್ನು ತಡಹಿಡಿಯುತ್ತೇವೆ ಎಂದು ಹೇಳಿಬಿಟ್ಟರೆ, we will keep quite ಮೂರು ದಿವಸ ಕಳೆದಾದ ಮೇಲೆ ಬೇಕಾದರೆ ಚರ್ಚೆ ಮಾಡೋಣ.

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ನಾಣಯ್ಯನವರ ಇವತ್ತು ಕ್ಯಾಬಿನೆಟ್ ಇದೆ. ಅಲ್ಲಿ ಮುಖ್ಯಮಂತ್ರಿಗಳಿರುತ್ತಾರೆ. ತಾವು ಈ ವಿಷಯದ ಗಾಂಭೀರ್ಯತೆ ಬಗ್ಗೆ ಸರ್ಕಾರದ ಗಮನ ಸೆಳದ್ದೀರಿ. ಪಾರದರ್ಶಕ ಆಡಳಿತ ನೀಡಬೇಕೆಂದು ನಮ್ಮ ಸರ್ಕಾರ ಉತ್ಸುಕತೆಯಿಂದ ಕೆಲಸ ಮಾಡುತ್ತಿದೆ. ಅನ್ಯಾಯ ಮತ್ತು ಭ್ರಷ್ಟಾಚಾರವನ್ನು ನಾವು ಸಹಿಸುವುದಿಲ್ಲ. ಕ್ಯಾಬಿನೆಟ್‌ನಲ್ಲಿ ಮಾನ್ಯ ಮುಖ್ಯಮಂತ್ರಿಗಳಿರುತ್ತಾರೆ. ಉನ್ನತ ಶಿಕ್ಷಣ ಸಚಿವರಿರುತ್ತಾರೆ. ನೀವು ವಿಷಯದ ಗಂಭೀರತೆ ಬಗ್ಗ ನಮ್ಮ ಗಮನಕ್ಕೆ ತಂದಿದ್ದೀರಿ. ಅದರ ಬಗ್ಗೆ ಚರ್ಚೆ ಮಾಡಿ ಸೂಕ್ತ ನಿರ್ಣಯಕ್ಕೆ ಬರುತ್ತೇವೆ.

**ಶ್ರೀ ಬಸವರಾಜ ಹೊರಟ್ಟಿ:-** ತಾವು ಸಭಾನಾಯಕರಾಗಿದ್ದೀರಿ. ಸಭಾ ನಾಯಕರಿಗೆ ನೇಮಕಾತಿ ನಿಲ್ಲಿಸುವಂತಹ ಅಧಿಕಾರ ಇಲ್ಲ ಎಂದಮೇಲೆ ಏಕೆ ಸಭಾನಾಯಕರಾಗಿರಬೇಕು?

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಹೊರಟ್ಟಿಯವರು ಬೆಳಗಿನಿಂದ ಇಲ್ಲಿಯ ತನಕ ನನ್ನ ಬೆನ್ನು ಹತ್ತಿದ್ದಾರೆ. ನಿಮ್ಮ ವಿಚಾರ ನಮಗೆ ಗೊತ್ತಿದೆ. ಯಾವುದೇ ತೀರ್ಮಾನ ತೆಗೆದುಕೊಳ್ಳುವುದಕ್ಕೆ ನಾವು ಹಿಂದೇಟು ಹಾಕುವು ದಿಲ್ಲ. I will take decision, But, I will take judicious decision.

**ಉಪಸಭಾಪತಿಯವರು:-** ಮಾನ್ಯ ಸಭಾನಾಯಕರೆ, ಇದು ಗಮನ ಸೆಳೆಯುವ ಸೂಚನೆ ಅಡಿಯಲ್ಲಿದೆ. ಮಾನ್ಯ ಉನ್ನತ ಶಿಕ್ಷಣ ಮತ್ತು ಪ್ರವಾ ಸೋದ್ಯಮ ಸಚಿವರ ಗಮನವನ್ನು ಸೆಳೆಯಬೇಕು. ಅದಕ್ಕೆ ಸಚಿವರಿರಬೇಕಾ ಗುತ್ತದೆ.

**ಶ್ರೀ ಡಿ.ವಿ.ಸದಾನಂದಗೌಡ:-** ಈ ಸದನದಲ್ಲಿ ಎಲ್ಲ ಸಚಿವರಿಗೂ ಒಬ್ಬ ಮುಖ್ಯಸ್ಥರಿರುತ್ತಾರೆ. ಅದು ಸಭಾನಾಯಕರಾದ ಮಾನ್ಯ ಎಸ್.ಆರ್. ಪಾಟೀ ಲರು.

(ಗೊಂದಲ)

**ಶ್ರೀ ಎಸ್.ಆರ್.ಪಾಟೀಲ್:-** ಯಾವುದೇ ವಿಶ್ವವಿದ್ಯಾಲಯ ಪಾರದರ್ಶಕವಾಗಿ ನಡೆಯಬೇಕು. ಇದರಲ್ಲಿ ಎರಡು ಮಾತಿಲ್ಲ.

**ಶ್ರೀ ಬಸವರಾಜ ಹೊರಟ್ಟಿ:-** ಈಗ ಈ ವಿಚಾರವನ್ನು ಚರ್ಚೆಗೆ ತೆಗೆದುಕೊಳ್ಳಿ.

**ಶ್ರೀ ಎಸ್.ಆರ್.ಪಾಟೀಲ್:-** ಇವತ್ತು ನಮ್ಮ ಕ್ಯಾಬಿನಟ್ ಇದೆ, ಸೂಕ್ತ ನಿರ್ಣಯ ತೆಗೆದುಕೊಳ್ಳುತ್ತೇವೆ ಎಂದು ಹೇಳಿದ್ದೇನೆ.

**ಶ್ರೀ ಯಂ.ಸಿ.ನಾಣಯ್ಯ:-** ಮಾನ್ಯ ಸಭಾನಾಯಕರೆ, ನೀವು ಸರ್ಕಾರದ ವತಿಯಿಂದ ನಿಮ್ಮ ತೀರ್ಮಾನವನ್ನು ಈಗಾಗಲೇ ಬಹಿರಂಗ ಮಾಡಿದ್ದೀರಿ. ಆ ಒಬ್ಬ ವೈಸ್‌ಚಾನ್ಸಲರ್‌ನ ನೇಮಕಾತಿಯಲ್ಲಿ ಮಾನ್ಯ ರಾಜ್ಯಪಾಲರು, ನನಗೆ ಸರ್ಕಾರದಿಂದ ಅವರ ಅಭ್ಯರ್ಥಿ ಯಾರು ಎನ್ನುವ ಪಟ್ಟಿಯೇ ಬರಲಿಲ್ಲ ಎಂದು ಹೇಳಿರುವುದು ಬಹಿರಂಗವಾಗಿ ಬಂದಿದೆ. ಮಾನ್ಯ ದೇಶಪಾಂಡೆಯವರು ಅದಕ್ಕೆ ಒಂದು ಉತ್ತರವನ್ನು ಕೊಟ್ಟಿದ್ದಾರೆ. ನಾವು ನಮ್ಮ ಪತ್ರಿನಿಧಿಯನ್ನು 26ನೇ ತಾರೀಖಿನಲ್ಲಿ ಪಟ್ಟಿಯನ್ನು ಕಳುಹಿಸಿ ಕೊಟ್ಟಿದ್ದೇವೆ ಎಂದು ಹೇಳಿದರು. ಅದಾದ ಮೇಲೂ ಕೂಡ. ಸಮಿತಿಯೂ ಕೊಟ್ಟಿರುವ ಶಿಫಾರಸನ್ನೇ ಗಣನೆಗೆ ತೆಗೆದುಕೊಳ್ಳದೆ, ನಿವೃತ್ತರಾದ ಮೇಲೆ ಅವರನ್ನೇ ಒಂದು ವರ್ಷದವರೆಗೆ extension ಮಾಡಿರತಕ್ಕಂಥದ್ದು ಸರ್ಕಾರದ ಗಮನಕ್ಕೆ ಬಂದಿದೆ. ನಿಮ್ಮನ್ನೂ ಕೂಡ bypass ಮಾಡಿ ಆಗಿರುವಂತಹ ಕೆಲಸ ಇದಾಗಿದೆ. ವೈಸ್‌ಚಾನ್ಸಲರ್ ಆಗಿ ಮುಂದುವರೆಯುತ್ತಿರುವ ಆ ಒಬ್ಬ ವ್ಯಕ್ತಿ ಯಾರಿದ್ದಾರೆ. ಆತನ ನೇಮಕಾತಿಯಲ್ಲಿ ಭ್ರಷ್ಟಾಚಾರ ನಡೆದಿದೆ ಎಂದು ಎಲ್ಲಾ ಪತ್ರಿಕೆಗಳಲ್ಲಿ ಬಂದು ಜಗಜ್ಜಾಹೀರಾಗಿದೆ. ಪುನಃ ಆತನಿಗೆ ಒಂದು ವರ್ಷ ಕೊಟ್ಟರೆ, ಆತ ಕೊಟ್ಟಿರುವ ಹಣವನ್ನು ವಾಪಸ್ಸು ಪಡೆಯಲು ಪುನಃ ವಸೂಲಿಗೆ ಇಳಿಯುತ್ತಾನೆ. ಆ ಒಂದು ಕಾರ್ಯಕ್ರಮವನ್ನು ಶುರು ಮಾಡುವುದಕ್ಕೆ ಹೊರಟಿದ್ದಾರೆ. ಇದಕ್ಕೆ ಅವಕಾಶ ಮಾಡಿಕೊಡಬಾರದು. ಆದ್ದರಿಂದ ಇದನ್ನು ಕ್ಯಾಬಿನೆಟ್ನಲ್ಲಿ

ತಂದು ಆ ನೇಮಕಾತಿಯನ್ನು ತಡೆಹಿಡಿಯಬೇಕು. ನೇಮಕಾತಿಯನ್ನು ತಡೆಹಿಡಿದಿದ್ದೇವೆ ಎಂದು ಸದನಕ್ಕೆ ಹೇಳಿಬಿಟ್ಟರೆ ಚರ್ಚೆ ಬೇಕಾದರೆ ನಾಳೆ ಮಾಡೋಣ.

(ಗೊಂದಲ)

**ಶ್ರೀ ಗೋ.ಮಧುಸೂದನ್:–** ತಡೆಹಿಡಿಯುವುದೇನೂ ಶಿಕ್ಷೆ ಅಲ್ಲವಲ್ಲ. ತಡೆಹಿಡಿಯಿರಿ.

(ಗೊಂದಲ)

**ಶ್ರೀ ಡಿ.ವಿ.ಸದಾನಂದಗೌಡ:–** ಇದರ ಗಂಭೀರತೆ ಬಗೆಗಿನ ಅರಿವು ನಿಮ್ಮ ಮಂತ್ರಿಗಳಿಗಿದ. ಅವರು ಮುಕ್ತವಾಗಿ statement ಮಾಡಿದ್ದಾರೆ.

**ಶ್ರೀ ಎಸ್.ಆರ್.ಪಾಟೀಲ್;–** ಮಾನ್ಯ ಸಚಿವರನ್ನು ಕರೆಸುತ್ತೇನೆ.

**ಶ್ರೀ ಡಿ.ವಿ.ಸದಾನಂದಗೌಡ:–**ಈ ಕುರಿತು ಪತ್ರಿಕೆಗಳಲ್ಲಿ ಅನೇಕ ವಿಚಾರಗಳು ಬಂದಿದೆ. ಆ ಪತ್ರಿಕಗಳನ್ನು ನಿಮಗೆ ಕಳುಹಿಸಿ ಕೊಡುತ್ತೇನೆ. ಆಂಗ್ಲ ಪತ್ರಿಕೆಯಲ್ಲಿ Behaviour of Governor is disgraceful ಎಂದು Former Bangalore University vice chancellor ಹೇಳಿದ್ದಾರೆ. Extension of VTU (Visvesvaraya Technological University's) vice chancellor is not justifiable, says the Hon'ble Minister R.V.Deshpande ಎಂದು ಹೆಡ್‌ಲೈನ್‌ಗಳಲ್ಲಿ ಬಂದಿದೆ. ಅವರೂ ಕೂಡ ಇದರ ಬಗ್ಗೆ ಗಂಭೀರವಾಗಿ ಆಲೋಚನೆ ಮಾಡಿದ್ದಾರೆ... ಈಗಾಗಲೇ rate list announce ಆಗಿದೆ, agents ಗಳು fix ಆಗಿದ್ದಾರೆ, ಬಾಕಿಯದಲ್ಲೆವೂ ನಡೆಯುತ್ತಲೇ ಇದೆ. ಪ್ರಾರಂಭದಿಂದಲೇ ಭ್ರಷ್ಟಾಚಾರದ ವಿರುದ್ಧ ಈ ಸರ್ಕಾರ ಭಾರೀ ತೀವ್ರವಾದಂತಹ ಆಕ್ರೋಶವನ್ನು ವ್ಯಕ್ತಪಡಿಸಿದೆ. ಆದಕಾರಣ ತಕ್ಷಣ ಸ್ಪಂದಿಸಿದರೆ. ಅದು justifiable ಆಗುತ್ತದೆ. Extension ಹೇಗೆ not justifiable ಎಂದರೋ, ಹಾಗೆಯೇ ನಿಮ್ಮ stay justifiable ಆಗುತ್ತದೆ. ಹಾಗಾಗಿ ಇದನ್ನು ಮಾಡಬೇಕು.

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಹಿರಿಯ ಸದಸ್ಯರುಗಳು ಅನೇಕ ವಿಚಾರಗಳನ್ನು ಹೇಳಿದ್ದಾರೆ. ನನಗೆ ಅದು convincing ಆಗಿಲ್ಲ ಎಂದು ಹೇಳುತ್ತಿಲ್ಲ. ಮಾನ್ಯ ಉನ್ನತ ಶಿಕ್ಷಣ ಸಚಿವರು ಇನ್ನೊಂದು 2 ನಿಮಿಷದಲ್ಲಿ ಸದನಕ್ಕೆ ಬರುತ್ತಾರೆ. ಈ ಸರ್ಕಾರ ಪಾರದರ್ಶಕ ಆಡಳಿತದ ಪರವಾಗಿ ಇದೆ. ಭ್ರಷ್ಟರಿಗೆ ರಕ್ಷಣೆ ಇಲ್ಲವೇ ಇಲ್ಲ. However higher he may be, however higher position he may be holding. We will never give shelter to such peoples. Mercilessaly we will take action against the corrupt peoples.

(ಗೊಂದಲ)

**ಶ್ರೀ ಅಮರನಾಥ ಪಾಟೀಲ್:-** ಹೈದರಾಬಾದ್-ಕರ್ನಾಟಕಕ್ಕೆ ಸಂಬಂಧಪಟ್ಟ ಹಾಗೆ 37/(ಜೆ) ಅಡಿಯಲ್ಲಿ ಸಂಪುಟ ಉಪಸಮಿತಿ ನಿರ್ಣಯ ಕೈಗೊಳ್ಳುವವರೆಗೂ ಈ ನೇಮಕಾತಿಯನ್ನು ತಡೆಹಿಡಿಯಬೇಕು.

(ಗೊಂದಲ)

**ಶ್ರೀ ಅರುಣಶಹಾಪುರ:-** ಮಾನ್ಯ ಅಮರನಾಥ ಪಾಟೀಲ್ರವರು, ಹೈದರಾಬಾದ್-ಕರ್ನಾಟಕಕ್ಕೆ ಸಂಬಂಧಪಟ್ಟ ಹಾಗೆ 371(ಜೆ) ಅಡಿಯಲ್ಲಿ ಸಂಪುಟ ಉಪಸಮಿತಿ ನಿರ್ಣಯ ಕೈಗೊಳ್ಳುವವರೆಗೂ ಈ ನೇಮಕಾತಿಯನ್ನು ನಿಲ್ಲಿಸಬೇಕು ಎಂದು ಹೇಳುತ್ತಿದ್ದಾರೆ.

**ಶ್ರೀ ಎಸ್.ಆರ್.ಪಾಟೀಲ್:-** ಅವರ version ನ್ನೇ ಬೇರೆ. ಅವರು ಆರ್ಟಿಕಲ್ 371 (ಜೆ) ಪ್ರಕಾರ ಚರ್ಚೆ ಮಾಡುತ್ತಾರೆ. ದೊಡ್ಡ ಪ್ರಮಾಣದಲ್ಲಿ ಭ್ರಷ್ಟಾಚಾರ ನಡೆಯುತ್ತಿದೆ ಎಂದು ಹೇಳುತ್ತಿದ್ದೀರಿ. ಅದನ್ನು ಸರ್ಕಾರ ಗಣನೆಗೆ ತೆಗೆದುಕೊಳ್ಳುತ್ತದೆ.

(ಈ ಹಂತದಲ್ಲಿ ಮಾನ್ಯ ಆರ್.ವಿ.ದೇಶಪಾಂಡೆಯವರು ಸದನಕ್ಕೆ ಬಂದರು)

**ಶ್ರೀ ಡಿ.ವಿ.ಸದಾನಂದಗೌಡ:-** ಇವತ್ತು ನಾವು ಕೊಟ್ಟಿರುವ ಗಮನಸೆಳೆಯುವ ಸೂಚನೆಯಲ್ಲಿ ಇರುವ ವಿಷಯದ ಬಗ್ಗೆ ಮಾನ್ಯ ಉನ್ನತ ಶಿಕ್ಷಣ ಸಚಿವರಿಗೆ ಅರಿವಿದೆ ಎಂದು ಭಾವಿಸುತ್ತೇನೆ. ಈಗಾಗಲೇ ಆ ವೈಸ್‌ಚಾನ್ಸ್‌ಲರ್

ವರ extension, it is not justifiable ಎನ್ನುವ ಮಾತುಗಳು ತಮ್ಮ ಕಡೆಯಿಂದ ಮತ್ತು ಸರ್ಕಾರದ ಕಡೆಯಿಂದ ಬಂದಿವೆ. ಈ ಕುರಿತು paper cuttings ಇದೆ. ಮಾನ್ಯ ಹೊರಟ್ಟಿಯವರು ಈಗ ನಿಮ್ಮ ಗಮನ ಸೆಳಯುತ್ತಾರೆ.

## 6. ಗಮನ ಸೆಳೆಯುವ ಸೂಚನೆಗಳು

**ವಿಷಯ: ವಿಶ್ವೇಶ್ವರಯ್ಯ /ವಿಶ್ವವಿದ್ಯಾಲಯದ ಕುಲಪತಿಗಳ ವಿರುದ್ಧ ಅನೇಕ ಆರೋಪಗಳಿದ್ದರೂ ಸಹ ಒಂದು ವರ್ಷದ ಅವಧಿಗೆ ಮುಂದುವರೆಸಿ ರುವುದು ಹಾಗೂ ಪ್ರಸ್ತುತ ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ ದಲ್ಲಿ ನಡೆಯುತ್ತಿರುವ ನೇಮಕಾತಿ ಸಂದರ್ಶನಗಳು ನಿಯಮ ಬಾಹಿರವಾಗಿರುವ ಬಗ್ಗೆ.**

**ಶ್ರೀ ಬಸವರಾಜ ಹೊರಟ್ಟೀ (ಶಿಕ್ಷಕರ ಕ್ಷೇತ್ರ):–** ಮಾನ್ಯ ಸಭಾಪತಿ ಯವರೇ, ವಿಶ್ವೇಶ್ವರಯ್ಯ ವಿಶ್ವವಿದ್ಯಾಲಯದ ಕುಲಪತಿಗಳ ವಿರುದ್ಧ ಅನೇಕ ಆರೋಪಗಳಿದ್ದರೂ ಸಹ ಒಂದು ವರ್ಷದ ಅವಧಿಗೆ ಮುಂದುವರೆಸಿರುವುದು ಹಾಗೂ ಪ್ರಸ್ತುತ ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯದಲ್ಲಿ ನಡೆಯುತ್ತಿರುವ ನೇಮಕಾತಿ ಸಂದರ್ಶನಗಳು ನಿಯಮ ಬಾಹಿರವಾಗಿರುವ ಬಗ್ಗೆ ಮಾನ್ಯ ಉನ್ನತ ಶಿಕ್ಷಣ ಮತ್ತು ಪ್ರವಾಸೋದ್ಯಮ ಸಚಿವರ ಗಮನ ಸೆಳೆಯಬಯಸು ತ್ತೇನೆ.

**ಶ್ರೀ ಆರ್.ವಿ.ದೇಶಪಾಂಡೆ(ಉನ್ನತ ಶಿಕ್ಷಣ ಮತ್ತು ಪ್ರವಾಸೋದ್ಯಮ ಸಚಿವರು):–** ಮಾನ್ಯ ಸಭಾಪತಿಯವರೇ,

ಡಾ: ಹೆಚ್. ಮಹೇಶಪ್ಪ, ಪ್ರಾಂಶುಪಾಲರು, ಕೇಂಬ್ರಿಡ್ಜ್ ಇನ್ಸಿಟಿಟ್ಯೂಟ್ ಆಫ್ ಟೆಕ್ನಾಲಜಿ, ಕೆ.ಆರ್. ಪುರಂ, ಬೆಂಗಳೂರು ಇವರನ್ನು ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯದ ಕುಲಪತಿಗಳನ್ನಾಗಿ ಅಧಿಸೂಚನೆ ಸಂಖ್ಯೆ: ಜಿಎಸ್ 6 ಟಿಯುಎ0 2010, ದಿನಾಂಕ 30.6.2010 ರಲ್ಲಿ ದಿನಾಂಕ 02.7.2010 ರಿಂದ ಜಾರಿಗೆ ಬರುವಂತೆ 3 ವರ್ಷಗಳವರೆಗೆ ನೇಮಕ ಮಾಡಲಾಗಿರುತ್ತದೆ.

ಡಾ.ಹೆಚ್.ಮಹೇಶಪ್ಪ ಕುಲಪತಿಗಳು, ಎಶ್ವೇಶ್ವರಯ್ಯ ತಾಂತ್ರಿಕ ವಿಶ್ವ ವಿದ್ಯಾಲಯ ಇವರ ವಿರುದ್ಧ ಸರ್ಕಾರದಲ್ಲಿ ಸ್ವೀಕೃತವಾದ ದೂರುಗಳ ಹಿನ್ನೆಲೆ ಯಲ್ಲಿ, ದಿನಾಂಕ:22.12.2010ರಂದು. ಅವರ ವಿವರಣೆಯನ್ನು ಕೋರಿ, ಕಾರಣ ಕೇಳುವ ನೊಟೀಸನ್ನು ಜಾರಿ ಮಾಡಲಾಗಿತ್ತು. ಈ ನೋಟೀಸಿನ ವಿರುದ್ಧವಾಗಿ, ಸದರಿಯವರು ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿ ರಿಟ್ ಅರ್ಜಿ ಸಂಖ್ಯೆ: 674/2011 ನ್ನು ಸಲ್ಲಿಸಿ ತಡೆಯಾಜ್ಞೆ ತಂದಿರುತ್ತಾರೆ.

ಇದೇ ರೀತಿ ಶ್ರೀ ಜೆ.ಹೆಚ್. ಅನಿಲ್ಕುಮಾರ್, ಇವರು ಸದರಿಯವರು ಸುಳ್ಳು ದಾಖಲೆಗಳನ್ನು ನೀಡಿ ಕುಲಪತಿಗಳಾಗಿದ್ದಾರೆಂದು ಸಾರ್ವಜನಿಕ ಹಿತಾ ಸಕ್ತಿ ಅರ್ಜಿಯನ್ನು ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿ ರಿಟ್ ಅರ್ಜಿ ಸಂಖ್ಯೆ: 2731/2011ಯನ್ನು ಸಲ್ಲಿಸಿರುತ್ತಾರೆ.

ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯವು ಸದರಿ ಪ್ರಕರಣಗಳನ್ನು ಇತ್ಯರ್ಥಪಡಿಸಿ, ವಿಚಾರಣೆ ನಡೆಸುವ ಅಧಿಕಾರವನ್ನು ಘನತೆವೆತ್ತ ಕುಲಾಧಿಪತಿ ಗಳಿಗೆ ನೀಡಿರುತ್ತದೆ.

ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯದ ಆದೇಶದನ್ವಯ ಘನತೆ ವೆತ್ತ ಕುಲಾಧಿಪತಿಗಳು ದಿನಾಂಕ. 7.5.2012ರಂದು ಹೊರಡಿಸಿರುವ ಅಧಿ ಸೂಚನೆಯಲ್ಲಿ ಮಧ್ಯಪ್ರದೇಶದ ಉಚ್ಚ ನ್ಯಾಯಾಲಯಲದ ನಿವೃತ್ತ ನ್ಯಾಯಾ ಧೀಶರಾದ ಜಸ್ಟೀಸ್ ಶ್ರೀ ಅಭಯ ಗೋಹಿಲ್‌ರವರ ನೇತೃತ್ವದಲ್ಲಿ ವಿಚಾರಣಾ ಆಯೋಗವನ್ನು ನೇಮಿಸಿರುತ್ತಾರೆ. ತದನಂತರ ಸದರಿ ವಿಚಾರಣಾ ಆಯೋಗವು ವರದಿ ನೀಡಿದ ಬಗ್ಗೆ ಮಾಹಿತಿಯು ಲಭ್ಯವಿರುವುದಿಲ್ಲ.

ಘನತೆವೆತ್ತ ಕುಲಾಧಿಪತಿಗಳು ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲ ಯದ ಕುಲಪತಿಗಳ ಆಯ್ಕೆಗೆ ರಚಿಸಿರುವ ಶೋಧನಾ ಸಮಿತಿಗೆ ಖ್ಯಾತ ಶಿಕ್ಷಣ ತಜ್ಞ ಡಾ: ಪದ್ಮನಾಭನ್ ಬಲರಾಮ್, ನಿರ್ದೇಶಕರು, ಇಂಡಿಯನ್ ಇನ್ಸಿಟಿ ಟ್ಯೂಟ್ ಆಫ್ ಸೈನ್ಸ್ ಬೆಂಗಳೂರು ಇವರನ್ನು ರಾಜ್ಯ ಸರ್ಕಾರದ ಪ್ರತಿನಿಧಿ ಯಾಗಿ ನೇಮಿಸಲು ಘನತೆವೆತ್ತ ಕುಲಾಧಿಪತಿಗಳ ಕಾರ್ಯದರ್ಶಿಯವರಿಗೆ ದಿನಾಂಕ 27.6.2013ರಂದೇ ಸರ್ಕಾರವು ಕಡತವನ್ನು ಕಳುಹಿಸಲಾಗಿರುತ್ತದೆ.

ಘನತೆವೆತ್ತ ಕುಲಾಧಿಪತಿಗಳ ಕಛೇರಿಯಲ್ಲಿ ದಿನಾಂಕ 29.6,2013 ರಂದು ಶೋಧನಾ ಸಮಿತಿಯ ಸಭೆಯು ನಡೆದಿದೆ ಎಂದು ತಿಳಿದು ಬಂದಿದ್ದು ಈ ಬಗ್ಗೆ ಯಾವುದೇ ಸೂಚನೆಯನ್ನು ಸರ್ಕಾರದಲ್ಲಿ ಸ್ವೀಕರಿಸಿರುವುದಿಲ್ಲ.

ಘನತೆವೆತ್ತ ಕುಲಾಧಿಪತಿಗಳು ದಿನಾಂಕ 1.7.2013ರ ಅಧಿಸೂಚನೆ ಸಂಖ್ಯೆ ಜಿಎಸ್ 11ಟಿಯುಎಂ 2013ರಲ್ಲಿ ಡಾ: ಹೆಚ್. ಮಹೇಶಪ್ಪರವರನ್ನೆ ದಿನಾಂಕ 2.7.2013ರಿಂದ ಜಾರಿಗೆ ಬರುವಂತೆ ಒಂದು ವರ್ಷದ ಅವಧಿಗೆ ಮೀರದಂತೆ ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯದ ಕುಲಪತಿಗಳನ್ನಾಗಿ ನೇಮಿಸಿ ಆದೇಶ ಹೊರಡಿಸಿರುತ್ತಾರೆ.

**ಶ್ರೀ ಬಸವರಾಜ ಹೊರಟ್ಟಿ:–** ಮಾನ್ಯ ಸಭಾಪತಿಯವರೇ, ಇಲ್ಲ ಮುಖ್ಯ ವಾಗಿರುವುದೇನೆಂದರೆ, ಕುಲಾಧಿಪತಿಗಳು ಹೊರಡಿಸಿರುವ ಆರ್ಡರೇ ತಪ್ಪು ಎನ್ನುವುದು ಎಲ್ಲರ ಅನಿಸಿಕೆ. ಇಂತಹ ಪರಿಸ್ಥಿತಿಯಲ್ಲ ಎಲ್ಲಾ ಪತ್ರಿಕೆ, ಟಿ.ವಿ. ಮಾಧ್ಯಮಗಳಲ್ಲಿ ಬಂದು ಇಂಥವರನ್ನು ಕುಲಪತಿಗಳನ್ನಾಗಿ ಮಾಡಬಾರದು ಎನ್ನುವುದು ಎಲ್ಲಾ ಕಡೆ ಬಂದರೂ ಕೂಡ ಅವರನ್ನೇ ಕುಲಪತಿಯಾಗಿ ಮುಂದುವರೆಸಿರುವುದು ಸರಿಯಲ್ಲ. 'ವಿಚಾರಣಾ ಆಯೋಗವು ವರದಿ ನೀಡಿದ ಬಗ್ಗೆ ಮಾಹಿತಿಯು ಲಭ್ಯವಿರುವುದಿಲ್ಲ. ಡಾ.ಪದ್ಮನಾಭನ್ ಬಲರಾಮ್, ನಿರ್ದೇಶಕರು, ಇಂಡಿಯನ್ ಇನ್ಸಿಟಿಟ್ಯೂಟ್ ಆಫ್ ಸೈನ್ಸ್ ಬೆಂಗಳೂರು ಇವರನ್ನು ರಾಜ್ಯ ಸರ್ಕಾರದ ಪ್ರತಿನಿಧಿಯಾಗಿ ನೇಮಿಸಲು ಘನತೆವೆತ್ತ ಕುಲಾಧಿಪತಿಗಳ ಕಾರ್ಯದರ್ಶಿಯವರಿಗೆ ದಿನಾಂಕ:27.6.2013 ರಂದೇ ಸರ್ಕಾರವು ಕಡತವನ್ನು ಕಳುಹಿಸಲಾಗಿರುತ್ತದೆ' ಎಂದು ಉತ್ತರದಲ್ಲಿ ಹೇಳಿದ್ದಾರೆ. ಇವರು ಹಾಜರಾಗಿದ್ದಾರೆಯೋ ಇಲ್ಲವೋ ಗೊತ್ತಿಲ್ಲ. 'ಘನತೆವತ್ತ ಕುಲಾಧಿಪತಿಗಳು ದಿನಾಂಕ: 1.7.2013ರ ಅಧಿಸೂಚನೆ ಸಂಖ್ಯೆಜಿಎಸ್ 11 ಟಿಯುಎಂ 2013ರಲ್ಲಿ ಡಾ. ಹೆಚ್. ಮಹೇಶಪ್ಪರವರನ್ನೇ ದಿನಾಂಕ:2.7.2013 ರಿಂದ ಜಾರಿಗೆ ಬರುವಂತ ಒಂದು ವರ್ಷದ ಅವಧಿಗೆ ಮೀರದಂತೆ ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯದ ಕುಲಪತಿಗಳನ್ನಾಗಿ ನೇಮಿಸಿ ಆದೇಶ ಹೊರಡಿಸಿರುತ್ತಾರೆ" ಎಂದು ಉತ್ತರದಲ್ಲಿ ಹೇಳಿದ್ದಾರೆ. ನಾನು ಕೇಳುವುದು ಇಷ್ಟೆ, ಸರ್ಕಾರ ನಮಗೇನು ಗೊತ್ತಿಲ್ಲ ಎಂದು ಹೇಳುವುದಕ್ಕೆ ಬರುವುದಿಲ್ಲ. ಸಂಪೂರ್ಣವಾಗಿ ರಾಜ್ಯಪಾಲರಿಗೆ

ಅಧಿಕಾರ ಕೊಟ್ಟಿದ್ದೇವೆಂದು ಹೇಳುವುದಕ್ಕೆ ಬರುವುದಿಲ್ಲ. ಈಗ ರಾಜಭವನದ ಮೇಲೇಯೇ ಸಂಶಯ ಬರುತ್ತಿದೆ. ರಾಜಭವನದ ಮೇಲೆ ತೂಗುಕತ್ತಿ ಆಡುತ್ತಿರುವುದು ಸರ್ಕಾರಕ್ಕೂ ಗೊತ್ತಿದೆ, ನಮಗೂ ಗೊತ್ತಿದೆ. ಸರ್ಕಾರದ ಅನುಮತಿ ಮೇಲೆ ಅವರನ್ನು ನೇಮಕಾತಿ ಮಾಡಲಾಗಿದೆ ಎಂದು ರಾಜ್ಯಪಾಲರ ಕಚೇರಿಯವರು ಹೇಳುತ್ತಾರೆ. ಸರ್ಕಾರಕ್ಕೆ ಇಷ್ಟೆಲ್ಲಾ ಗೊತ್ತಿದ್ದರೂ ಕೂಡ ಹೇಗೆ ಅನುಮತಿಯನ್ನು ಕೊಟ್ಟಿದ್ದಾರೆ. ಈ ನೇಮಕಾತಿ ಮಾಡುವುದಕ್ಕೆ. ಪ್ರಾರಂಭ ಮಾಡಿದ್ದಾರೆ. ಯಾವ ಉಪನ್ಯಾಸಕರುಗಳು ಅಲ್ಲಿ ನೇಮಕಾತಿಯಾಗಿದೆ ಆ ನೇಮಕಾತಿಗೆ 20 ರಿಂದ 25 ಲಕ್ಷ ರೂಪಾಯಿಗಳವರಿಗೆ ವ್ಯವಹಾರ ನಡೆದಿವೆ. ಅದಕ್ಕೆ ಎಲ್ಲರಿಗೂ ಏಜೆಂಟರಿದ್ದಾರೆ. ಇವರು ಕುಲಪತಿಗಳಾಗಿದ್ದಾರಲ್ಲಾ ಇವರು merit ಮೇಲೆ ಕುಲಪತಿಗಳಾಗಿಲ್ಲ. payment ಮೇಲೆ ಆಗಿದ್ದಾರೆ. payment ಮೇಲೆ ಆದವರಿಗೆ ಬಹಳ ಕಷ್ಟವಿದೆ. ಆ payment ನ್ನು ಅವರು ಹೇಗೆ ತೆಗೆಯಬೇಕು? 10 ಕೋಟಿ, 15 ಕೋಟಿ ಕೊಟ್ಟರೆ ಇವರು ಏನು ಮಾಡುವುದು? ಇಲ್ಲಿ ಪ್ರೊಫೆಸರ್‌ಗಳು ಬರುತ್ತಾರೆ.

**ಶ್ರೀ ಕೆ.ಗೋವಿಂದರಾಜ್:-** ಆ ಹಣವನ್ನು ಯಾರಿಗೆ ಕೊಟ್ಟಿದ್ದಾರೆ?

**ಶ್ರೀ ಬಸವರಾಜ ಹೊರಟ್ಟಿ:-** ಅದು ಎಷ್ಟೇ ಇರಲಿ. ಗೋವಿಂದ ರಾಜರ್‌ವರೇ, ಇದು ಜಗಜ್ಜಾಹಿರಾಗಿದೆ. ಯಾರಿಗೆ ಕೊಟ್ಟಿದ್ದಾರೆ ಎನ್ನುವುದು ನೀವು ಮತ್ತೆ ತೆಗೆಸಿಕೊಳ್ಳಬೇಡಿ. ಅಂಗೈ ತೋರಿಸಿ ಅವಲಕ್ಷಣ ಮಾಡಿಸಿಕೊಳ್ಳಬೇಡಿ. ಸುಮ್ಮನೆ ಕುಳಿತುಕೊಳ್ಳಿ. ಈಗ ರಾಜಭವನಕ್ಕೂ ನಿಮಗೂ ಬಹಳ ಸಂಬಂಧ ಸರಿ ಇದೆ. ಎಲ್ಲಾ ನಿಮ್ಮ throught ಹೋಗುತ್ತಿದೆ ಎಂದು ಅವರು ಹೇಳುತ್ತಿದ್ದಾರೆ. ನಿಮ್ಮ ಥ್ರೂ ಎಂದರೆ ವೀರಣ್ಣ ಮತ್ತಿಕಟ್ಟಿ through ಅಲ್ಲ.

**ಶ್ರೀ ಮತ್ತಿಕಟ್ಟಿ ವೀರಣ್ಣ :-** ನಿಮ್ಮ throught ನೇ ಅಲ್ಲಿ ಎಲ್ಲಾ ನಡೆಯುವುದು ಎನ್ನುವುದು ಜಗತ್ತಿಗೆ ಗೊತ್ತಿದೆ.

**ಶ್ರೀ ಬಸವರಾಜ ಹೊರಟ್ಟಿ:-** ನಮ್ಮ through ನಡೆದಿದೆಯೋ ನಿಮ್ಮ through ನಡೆದಿದೆಯೋ ಎಂಬುದನ್ನು ನೋಡೋಣ. ಅದಕ್ಕೆ ನೀವು ತೆಗೆದುಕೊಂಡಿದ್ದೀರೋ ನಾವು ತೆಗೆದುಕೊಂಡಿದ್ದೇವೋ, ಯಾರು ತೆಗೆದುಕೊಂಡಿದ್ದಾರೆ

ಎನ್ನುವುದನ್ನು ಹೇಳುವುದು ಬೇಡ. ರಾಜ್ಯಪಾಲರೇ? ವೀರಣ್ಣ ಮತ್ತಿಕಟ್ಟಿಯ ವರು ರಾಜಭವನದ ಕಡೆ ಏನೋ ಕೈ ಮಾಡಿ ತೋರಿಸುತ್ತಿದ್ದೀರಲ್ಲಾ?

**ಶ್ರೀ ಮತ್ತಿಕಟ್ಟಿ ವೀರಣ್ಣ :–** ನಾನು ಏನು ಹೇಳಲಿಲ್ಲ.

**ಶ್ರೀ ಬಸವರಾಜ ಹೊರಟ್ಟಿ:–** ಈ ಕಡೆ ಕೈ ಮಾಡಿ ತೋರಿಸಿದಿರಿ. ಅದಕ್ಕೆ ನಾನು ಹೇಳಿದೆ. ನೀವು ಹೆದರಿಕೊಳ್ಳಬೇಡಿ. ಅವರು ಈಗ ನಿಮ್ಮನ್ನು ಮಂತ್ರಿ ಮಾಡುವುದಿಲ್ಲ.

**ಶ್ರೀ ಮತ್ತಿಕಟ್ಟಿ ವೀರಣ್ಣ :–** ಮಂತ್ರಿಯಾಗುವುದು ಒಂದೇ ಸಾಧ ನೆಯೇ? ಬಸವರಾಜ ಹೊರಟ್ಟಿಯವರೇ, ನಾವು ಸಾಧಿಸಬೇಕಾಗಿರುವುದನ್ನು ಸಾಧಿಸಿದ್ದೇವು. ಆ ಹಂತ ಮುಟ್ಟಿಬಿಟ್ಟಿದ್ದೇವೆ. ಈ ಕರ್ನಾಟಕ ಜನರ ಆಶೀ ರ್ವಾದ, ನನ್ನ ಪಕ್ಷದ ಕಾರ್ಯಕರ್ತರ ಆಶೀರ್ವಾದ, ಹಿರಿಯರ ಆಶೀ ರ್ವಾದದಿಂದ ನಾವೇನು ಮುಟ್ಟಬೇಕಾಗಿತ್ತು ಅದನ್ನು ಮುಟ್ಟಿಬಿಟ್ಟಿದ್ದೇವೆ.

**ಶ್ರೀ ಬಸವರಾಜ ಹೊರಟ್ಟಿ:–** ನಮ್ಮ ಸ್ನೇಹಿತರು ಇನ್ನೂ ದೊಡ್ಡ ಸ್ಥಾನಕ್ಕೆ ಹೋಗಬೇಕು.

**ಶ್ರೀ ಅರುಣ ಶಹಾಪುರ:–** ಪ್ರಚಾರ ಸಮಿತಿಯ ಅಧ್ಯಕ್ಷರು ಮಾಡಿ ಅಧಿಕಾರಕ್ಕೆ ಬಂದು ನಿಮ್ಮನ್ನು ಸರಿಯಾಗಿ ನಡೆಸಿಕೊಳ್ಳಲಿಲ್ಲ ಎಂಬುದು ನಮ್ಮ ನೋವು ಅಷ್ಟೆ.

**ಶ್ರೀ ಬಸವರಾಜ ಹೊರಟ್ಟಿ:–** ಮಾನ್ಯ ಸಭಾಪತಿಯವರೇ, ಗಂಭೀರತೆ ಯನ್ನು ಅರ್ಥ ಮಾಡಿಕೊಳ್ಳಬೇಕು. ಇದು. ಯಾರೇ ಮಾಡಲಿ. ನನಗನಿಸು ತ್ತಿದೆ, ನಮ್ಮ ರಾಜ್ಯದಲ್ಲಿ ವಿಶ್ವವಿದ್ಯಾನಿಲಯಗಳ ಕುಲಪತಿಗಳು ಈ ರೀತಿ ಮಾರಾಟಕ್ಕೆ ಇದ್ದಾರೆ ಎನ್ನುವುದನ್ನು ನಾನು ನೋಡಿರಲಿಲ್ಲ. ಮಾನ, ಮರ್ಯಾದೆ ಏನು ಇಲ್ಲ. ಎಲ್ಲಾ ವಿಶ್ವವಿದ್ಯಾನಿಲಯಗಳು 100ಕ್ಕೆ 90 ರಷ್ಟು ಪರ್ಸೆಂಟ್ ಅಂದರೆ, ವೈಸ್‌ಛಾನ್ಸಲರ್ ಎಲ್ಲರ ಮೇಲೂ complaint ಬಂದಿದೆ. ತುಮಕೂರು, ಬೆಳಗಾವಿ, ಬಳ್ಳಾರಿ, ಮೈಸೂರು, ಈ ಎಲ್ಲಾ ಕಡೆಯಲ್ಲೂ compliant ಬಂದಿದೆ ನಾನು ತಮಗೆ ಹೇಳುತ್ತೇನೆ, ಇದನ್ನು off the record

ಹೇಳುವುದಿಲ್ಲ. On the record ಹೇಳುತ್ತೇನೆ. ನನಗೆ ಮಾಹಿತಿ ಬಂದಿದೆ. ಇಲ್ಲಿಗೆ ಒಬ್ಬ ಒಳ್ಳೆಯ ಕುಲಪತಿಗಳು ಬಂದರು. ಅವರು ಸೈಟ್ ಮಾರಾಟ ಮಾಡಿ ಹಣವನ್ನು ಕೊಟ್ಟರು. ಇನ್ನೂ ಒಂದಷ್ಟು ಉದ್ರಿ(ಸಾಲ) ಉಳಿಸಿಕೊಂಡಿದ್ದಾರೆ. ಇನ್ನೂ ಅವರು ಹಣವನ್ನು ಕೊಡಬೇಕು. ಅವರು ಹಣವನ್ನು ಹೇಗೆ ಕೊಡ ಬೇಕು? ಆವರು. ಹಣವನ್ನು ತಿನ್ನುವ ಹಾಗಿಲ್ಲ. ಮತ್ತು ವೈಸ್‌ಛಾನ್ಸಲರ್‌ವರಿಗೆ ಬೇಕು. ಪರಿಸ್ಥಿತಿ ಏನು? ಇವೆಲ್ಲಾ ಮಾತನಾಡುತ್ತಾರೆ. ಪತ್ರಿಕೆಗಳಲ್ಲಿ ಬರುತ್ತದೆ. ಇದಕ್ಕೆ ಮುಖ್ಯವಾದದ್ದು ಏನೆಂದರೆ, ಈಗ ಸರ್ಕಾರ ಏನು ತೀರ್ಮಾನ ತೆಗೆದುಕೊಳ್ಳುತ್ತದೆಯೋ ತೆಗೆದುಕೊಳ್ಳಲ. ಆದರೆ, ಪ್ರಶ್ನೆ ಏನು ಎಂದಿದೆ. ಎಂದರೆ, ಇವತ್ತು interview ತೆಗೆದುಕೊಳ್ಳುತ್ತಾರೆ. ಮಾನ್ಯ ದೇಶಪಾಂಡೆ ಯವರು ಪ್ರಾಮಾಣಿಕರಿದ್ದಾರೆ. ಮಾನ್ಯ ದೇಶಪಾಂಡೆಯವರು ಬೆಳಗಾವಿ ಯದ್ದನ್ನು ನಿಲ್ಲಿಸಿದ್ದಾರೆ. ನಾನು appreciate ಮಾಡಿದೆ. ಯಾವುದೇ ಮುಲಾ ಜಿಲ್ಲದೆ ಅವರು ನಿಲ್ಲಿಸಿದ್ದಾರೆ. ನಾನು ಪ್ರಾಮಾಣಿಕವಾಗಿ ಹೇಳುತ್ತೇನೆ, ಮಾನ್ಯ ದೇಶಪಾಂಡೆಯವರು ಉನ್ನತ ಶಿಕ್ಷಣ ಸಚಿವರಾಗಿ ಬಹಳ ಉತ್ತಮವಾದ ಕೆಲಸ ಗಳನ್ನು ಮಾಡಿದ್ದಾರೆ. ನಾನು ಯಾರಿಗಾದರೂ certificate ಕೊಡುವುದು ಬಹಳ ಕಡಿಮೆ. ನಾನು ಪ್ರಾಮಾಣಿಕವಾಗಿ ಹೇಳುತ್ತೇನೆ. ಆರೋಪ ಪತ್ರಿಕೆಯಲ್ಲಿ ಬಂತು. ತಕ್ಷಣ ನಿಲ್ಲಿಸಿದ್ದಾರೆ. ಇಷ್ಟೆಲ್ಲಾ ಭ್ರಷ್ಟಾಚಾರ ನಡೆದಿರುವಾಗ 1200 ವಿದ್ಯಾರ್ಥಿಗಳಿಗೆ. ನಾನು ಈ ಮಾತನ್ನು ಏಕೆ ಹೇಳುತ್ತೇನೆಂದರೆ, ಈಗೇನು ನೇಮಕಾತಿ ಮಾಡಿಕೊಳ್ಳುತ್ತಾರಲ್ಲಾ ಇವೆಲ್ಲಾ ಮುಚ್ಚಿಡುವುದಕ್ಕೆ ನೇಮಕಾತಿ ಮಾಡಿಕೊಳ್ಳುತ್ತಾರೆ. ಇದರಲ್ಲಿ ಒಟ್ಟು 1226 ವಿದ್ಯಾರ್ಥಿಗಳಿಗೆ ಮೊದಲ ಮೌಲ್ಯ ಮಾಪನದಲ್ಲಿ 25 ಅಂಕಗಳನ್ನು ಕೊಟ್ಟಿದ್ದಾರೆ. ಮರುಮೌಲ್ಯಮಾಪನದಲ್ಲ ಮತ್ತೆ 25 ಅಂಕಗಳು ಬಂದಿದೆ. Challenge Valuation ನಲ್ಲಿ 35 ಅಂಕಗಳು ಆದವು. ಒಟ್ಟು 53 ಅಂಕಗಳು. ಹೀಗೆ ಎಲ್ಲಾ ಕಡೆ. 1200 ವಿದ್ಯಾರ್ಥಿಗಳಿಗಿಂತ ಹೆಚ್ಚು ಫೇಲ್ ಆದಂಥವರನ್ನು ಪಾಸ್ ಮಾಡಿದ್ದಾರೆ. ಇವರಿಗೆ ಎಲ್ಲಾ ಕಡೆ ಏಜೆಂಟ್‌ಗಳು ಇದ್ದಾರೆ. ಇವರು ಎಲ್ಲಾ ಸಿಟಿಗಳಿಗೂ ಬಂದು ಪರೀಕ್ಷೆಗೆ ಯಾರು ಯಾರು ಕುಳಿತುಕೊಂಡಿದ್ದೀರಿ ಅವರೆಲ್ಲರಿಗೂ ಹಣ ಕೊಟ್ಟರೆ ನಿಮ್ಮನ್ನು ಪಾಸ ಮಾಡಿಸುತ್ತೇವೆ ಎಂದು ಹೇಳುತ್ತಾರೆ. ಇಂತಹ ಪರಿಸ್ಥಿತಿಯಲ್ಲಿ

ನಾನು ಹೇಳುವುದು ಏನು ಅತಿಶಯೋಕ್ತಿಯಲ್ಲ. ಈ ವಿಚಾರ ಪತ್ರಿಕೆಯಲ್ಲಿ ಸಾಕಷ್ಟು ಬರೆದಿದ್ದಾರೆ. ಮತ್ತೆ ಅಲ್ಲಿ ಉಪ ಕುಲಪತಿಗಳಾಗಿ ಕೆಲಸ ಮಾಡಿದಂತ ಹವರ್ಯಾರು ಯೋಗ್ಯರು ಇರಲಿಲ್ಲವೇ? ಒಂದು ವರ್ಷದವರೆಗೆ ಅವರನ್ನೇ ಮಾಡುವಂತಹ ಅವಶ್ಯಕತೆ ಏನಿತು? ಒಂದು ವಿಚಾರವನ್ನು ಮಾನ್ಯ ಸಚಿವ ರಾದ ಶ್ರೀ ಆರ್ ವಿ. ದೇಶಪಾಂಡೆಯವರಿಗೆ ಕೇಳಲಿಕ್ಕೆ ಬಯಸುತ್ತೇನೆ. ತಾವು ಈ ಒಂದು ಪ್ರಕ್ರಿಯೆಯನ್ನು ತಕ್ಷಣ ನಿಲ್ಲಿಸಬೇಕು. ಅವರಿಗೆ ವೈಸ್ ಚಾನ್ಸಲರ್ ಆಗಿ ಮಾಡಿದ್ದೇ ತಪ್ಪು. ಈ ವಿಚಾರ ರಾಜ್ಯಪಾಲರಿಗೆ ತಿಳಿಯುತ್ತದೋ ಇಲ್ಲವೋ ನನಗೆ ಗೊತ್ತಾಗುತ್ತಿಲ್ಲ. ಇಡಿ ರಾಜ್ಯದ ತುಂಬ ಶಂಖ ಹೊಡೆದರೂ ಸಹಿತ ಮತ್ತೆ ಅವರನ್ನೇ ಮುಂದುವರಿಸುತ್ತಾರೆಂದರೆ ಹೇಗೆ? ರಾಜ್ಯ ಸರ್ಕಾರದ ಒಪ್ಪಿಗೆಯನ್ನು ಪಡೆದೇ ನೇಮಕಾತಿ ಮಾಡಲಾಗಿದೆ. ಎಂದು ಅವರು ಹೇಳುತ್ತಾರೆ. ಹೀಗಾಗಿ, ಇದನ್ನು ರಾಜ್ಯ ಸರ್ಕಾರದ ಒಪ್ಪಿಗೆಯಿಂದ ಮಾಡಿ ದ್ದಾರೋ ಇಲ್ಲವೋ ಎನ್ನುವುದನ್ನು ಈಗ ಹೇಳಬೇಕಾಗಿದೆ. ಒಬ್ಬರಿಗೆ ಮೊದಲ ಮೌಲ್ಯಮಾಪನದಲ್ಲಿ 13 ಅಂಕಗಳಿವೆ, 2ನೇ ಸಾರಿ ಮಾಡುವಾಗ 13 ಅಂಕ ಗಳು ಬಂದಿವೆ. ತದನಂತರ ಚಾಲೆಂಜ ಮೌಲ್ಯಮಾಪನದಲ್ಲಿ 43 ಅಂಕಗಳು ಬಂದಿವೆ. ಸುಮಾರು 400–500 ಇಂತಹ ಪ್ರಕರಣಗಳಿವೆ.

ಮಾನ್ಯ ಸಭಾಪತಿಯವರಲ್ಲಿ ನಾನು ಕೇಳಿಕೊಳ್ಳುವುದೇನೆಂದರೆ ವಿದ್ಯಾರ್ಥಿಗಳ ಪರಿಸ್ಥಿತಿ ಈ ರೀತಿಯಾದಲ್ಲಿ ಅವರುಗಳ ಜೀವನ ಯಾವ ರೀತಿ ಆಗಬೇಕು, ಅವರು ಯಾವ ರೀತಿಯಲ್ಲಿ ಇಂಜಿನಿಯರ್ ಆಗಬೇಕು, ಮುಂದೆ. ಅವರುಗಳ ಪರಿಸ್ಥಿತಿ ಏನಾಗಬೇಕು? ಈ ಎಲ್ಲಾ ಹಿನ್ನೆಲೆಗಳಲ್ಲಿ ದಯಮಾಡಿ. ಮೊದಲಿಗೆ ನೇಮಕಾತಿ ಪ್ರಕ್ರಿಯೆಯನ್ನು ನಿಲ್ಲಿಸಿ. ಆ ವೈಸ್ ಚಾನ್ಸಲರ್‌ವರನ್ನು ಹಿಂದಕ್ಕೆ ಕರೆಸಿಕೊಳ್ಳುವ ಮತ್ತು ಅವರನ್ನು ತೆಗೆಯುವಂತಹ ಅಧಿಕಾರ ಇದೆ. ಅದಕ್ಕೆ ಈ ಎಲ್ಲಾ ಹಿನ್ನೆಲೆಯಲ್ಲಿ ಬಹಳಷ್ಟು ವಿಷಯಗಳನ್ನು ಸವಿಸ್ತಾರವಾಗಿ ಮಾತನಾಡುವುದಿದೆ. ಅದಕ್ಕೂ ಮೊದಲು ಮಾನ್ಯ ಉನ್ನತ ಶಿಕ್ಷಣ ಸಚಿವರು ಇದರ ಬಗ್ಗೆ ಏನಾದರೂ ಒಂದು ಕ್ರಮ ತೆಗೆದುಕೊಳ್ಳಬೇಕು. ಈ ವಿಚಾರವಾಗಿ ಪತ್ರಿಕೆಯಲ್ಲಿ ಬರೆದಿದ್ದಾರೆ. ತಾವು ಅದನ್ನು ಓದಿದ್ದೀರಿ. ಸಾಕಷ್ಟು ಪತ್ರಿಕೆಯಲ್ಲಿ ಸವಿಸ್ತಾರವಾಗಿ ಈ ಬಗ್ಗೆ ಬರೆದಿದ್ದಾರೆ. ಘನತೆವೆತ್ತ ರಾಜ್ಯಪಾಲರ ಮತ್ತು ವೈಸ್

ಚಾನ್ಸಲರ್‌ರವರ ಫೋಟೋ ಹಾಕಿದ್ದಾರೆ. ಪುಣ್ಯಕ್ಕೆ ಯಾವ ಮಂತ್ರಿಯ ಫೋಟೋ ಹಾಕಲ್ಲ. ಶ್ರೀ ತಿಮ್ಮಪ್ಪ ಎನ್ನುವ ex Vice Chancellor note of dissent ಕೊಟ್ಟಿದ್ದಾರೆ. ಅವರು ಇದು ಸರಿಯಾದುದಲ್ಲವಂದು ಹೇಳಿದ್ದಾರೆ. ಈ ಎಲ್ಲಾ ಹಿನ್ನೆಲೆಯಲ್ಲ ತಕ್ಷಣ ಈ ನೇಮಕಾತಿಗೆ ಸಂಬಂಧಪಟ್ಟಂತೆ ಏನು ಸಂದರ್ಶನವನ್ನು ಮಾಡುತ್ತಿದ್ದಾರೆ, ಅದನ್ನು ನಾಳೆಯಿಂದಲೇ ನಿಲ್ಲಿಸಿಬಿಡಿ. ನಿಲ್ಲಿಸಿದ ಮೇಲೆ ಈ ವಿಚಾರವಾಗಿ ಸರಿಯಾಗಿ ವಿಚಾರ ಮಾಡಿ. ಸರ್ಕಾರಕ್ಕೆ ಅದರ ಬಗ್ಗೆ ಸಷ್ಟವಾದಂತಹ ಮಾಹಿತಿ ಸಿಕ್ಕಿದರೆ ನೀವು ಬೆಳಗಾಂ ವಿಷಯ ವನ್ನು ಯಾವ ರೀತಿಯಲ್ಲಿ ಮಾಡಿದ್ದೀಡಿ, ಅದೇ ರೀತಿಯಲ್ಲಿ ಮಾಡುವುದು ಸೂಕ್ತ ಎಂದು ನನ್ನ ಅನಿಸಿಕೆಯಾಗಿದೆ. ಈ ಬಗ್ಗೆ ಬಹಳ ವಿಚಾರಗಳನ್ನು ಹೇಳ ಬೇಕಾಗಿದೆ. ಆದರೆ. ಈಗ ನನಗೆ ಸಮಯ ಇರುವುದಿಲ್ಲ. 6–00 ಗಂಟೆ ನಂತರ ಮಾತನಾಡಿದರೆ ಅದು ಪೇಪರಿನಲ್ಲಿಯೂ ಬರುವುದಿಲ್ಲ. ಅದು ಮಾಧ್ಯಮದಲ್ಲಿಯೂ ಬರುವುದಿಲ್ಲ. ಇಂತಹ ಪ್ರಮುಖವಾದ ವಿಷಯಗಳೇ ಇಷ್ಟು ಹೊತ್ತಿಗೆ ಬರುತ್ತವೆ. ಕೆಲವು ಮಂದಿಗೆ ಗೊತ್ತೆ ಆಗುವುದಿಲ್ಲ. ಈ ವಿಚಾರ ಗಳ ಬಗ್ಗೆ ಇವರು ಏನು ಮಾಡುತ್ತಾರೆ? ಇದರ ಬಗ್ಗೆ ನಿಯಮ 72 ರಲ್ಲಿ ಚರ್ಚೆ ಮಾಡಬಹುದಾಗಿದೆ. ಇದರ ಬಗ್ಗೆ ಸಾಕಷ್ಟು ಚರ್ಚೆಯಾಗಬೇಕಾಗಿದೆ. ಸಾಕಷ್ಟು ಮಾಹಿತಿಗಳನ್ನು ನಾವು ಸಂಗ್ರಹ ಮಾಡಿದ್ದೇವೆ. ಇವೆಲ್ಲದರ ಹಿನ್ನೆಲೆ ಯಲ್ಲಿ ಆ ವೈಸ್ ಚಾನ್ಸಲರ್ ಹೇಗೆ ಸುಮ್ಮನೆ ಕುಳಿತುಕೊಳ್ಳುತ್ತಾರೆ. ಇಡಿ ರಾಜ್ಯದ ತುಂಬಾ ಜನರು ಇವರ ಬಗ್ಗೆ ಮಾತನಾಡುತ್ತಲೇ ಇದ್ದಾರೆ. ಅಲ್ಲಿ ಹೋಗಿ ಕುಳಿತುಕೊಳ್ಳುವುದಕ್ಕೆ ಅವರಿಗೆ ಮಾನ ಮರ್ಯಾದೆ ಬೇಡವೇ? ನಮ ಗಂತೂ ನೋವು ಎನಿಸುತ್ತಿದೆ. ಈ ಹಿನ್ನೆಲೆಯಲ್ಲಿ ಸರ್ಕಾರಕ್ಕೆ ನಾನು ವಿನಂತಿ ಮಾಡುವುದೇನೆಂದರೆ. ಈ ಬಗ್ಗೆ ಸತ್ಯಾಸತ್ಯತೆಯಿಂದ ನಾವು. ಹೇಳುತ್ತಿರುವುದು, 100ಕ್ಕೆ 100ರಷ್ಟು ಸತ್ಯ ಎಂದು ಹೇಳುವುದಕ್ಕೆ ಹೋಗುವುದಿಲ್ಲ. ಆದರೆ, ನಾವು ರೆಕಾರ್ಡ್ ಇಟ್ಟುಕೊಂಡು ಮಾತನಾಡುತ್ತಿದ್ದೇವೆ. Right to Information ನಿಂದ ತಂದಂತಹ ರೆಕಾರ್ಡ್ ಇದಾಗಿದೆ. ಇಂತಹ ರೆಕಾರ್ಡ್‌ಗಳನ್ನು ತಮ್ಮ ಮುಂದೆ ಇಡುತ್ತೇವೆ. ಈ ಹಿನ್ನೆಲೆಯಲ್ಲಿ ನಾನು ಸರ್ಕಾರಕ್ಕೆ ವಿನಂತಿ ಮಾಡಿಕೊಳ್ಳುವು ದೇನೆಂದರೆ ಇದು ಶಿಕ್ಷಣದ ವಿಚಾರವಾಗಿದ್ದು, ಎಲ್ಲದರಲ್ಲೂ ಸ್ವಲ್ಪ ತೊಂದರೆ

ಆದರೂ ಸಹ ಶಿಕ್ಷಣ ಕ್ಷೇತ್ರದಲ್ಲ ಆಗಬಾರದು. ಅದರಲ್ಲೂ ವೈಸ್ ಚಾನ್ಸಲರ್‌ಗಳು ಮತ್ತು ಯೂನಿವರ್ಸಿಟಿಗಳು ಈ ರೀತಿ ಆದರೆ ಪರಿಸ್ಥಿತಿ ಏನು? ಎಲ್ಲಾ ಯೂನಿವರ್ಸಿಟಿಗಳನ್ನು ನೋಡಿ. ಬಹಳಷ್ಟು ಯೂನಿವರ್ಸಿಟಿಗಳು ಇದೇ ರೀತಿಯಲ್ಲಿವೆ. ಪ್ರತಿ ದಿವಸವೂ ಯೂನಿವರ್ಸಿಟಿಗಳಿಂದ ಒಂದೊಂದು ಸಂಗತಿಗಳು ಬರುತ್ತಲೇ ಇವೆ. ಈ ಹಿನ್ನೆಲೆಯಲ್ಲಿ ತಕ್ಷಣ ಈ ನೇಮಕಾತಿ ಪ್ರಕ್ರಿಯೆಯನ್ನು ನಿಲ್ಲಿಸಬೇಕೆಂದು ನಾನು ಸರ್ಕಾರಕ್ಕೆ ವಿನಂತಿ ಮತ್ತು ಒತ್ತಾಯ ಮಾಡುತ್ತೇನೆ. ಇದರ ಬಗ್ಗೆ ವಿಚಾರಣೆ ಮಾಡಿ. ನಾವು ಹೇಳುವುದೆಲ್ಲಾ ಸರಿ ಇದೆಯೋ ಇಲ್ಲವೋ ಎನ್ನುವುದನ್ನು ನಂತರ ನೀವು ಪರಿಶೀಲನೆ ಮಾಡಿ. ಮಾಡಿದ ನಂತರ ಇದರ ಬಗ್ಗೆ ಕ್ರಮ ಕೈಗೊಳ್ಳಿ ಎಂದು ತಮ್ಮ ಮೂಲಕ ಮಾನ್ಯ ಉನ್ನತ ಶಿಕ್ಷಣ ಸಚಿವರಿಗೆ ಮನವಿ ಮಾಡಿಕೊಂಡು ನನ್ನ ಮಾತನ್ನು ಮುಗಿಸುತ್ತೇನೆ.

**ಡಾ. ಎ.ಹೆಚ್.ಶಿವಯೋಗಿ ಸ್ವಾಮಿ (ಪದವೀಧರರ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ಬಹಳ ಪ್ರಮುಖವಾದ, ಗಂಭೀರವಾದ ವಿಷಯದ ಬಗ್ಗೆ ಪ್ರಸ್ತಾಪ ಮಾಡಲಿಕ್ಕೆ ಅವಕಾಶವನ್ನು ಕೊಟ್ಟಿದ್ದೀರಿ. ಮಾನ್ಯ ಸಚಿವರು ಈಗಾಗಲೇ ಉತ್ತರವನ್ನು ಕೊಟ್ಟಿದ್ದಾರೆ. ಎರಡು ಅಂಶಗಳು ಇಲ್ಲಿ ಪ್ರಮುಖವಾಗಿರುತ್ತವೆ. ಮೊದಲನೆಯವಾಗಿ, ಯಾವುದೇ ಒಂದು ವಿಶ್ವವಿದ್ಯಾನಿಲಯಕ್ಕೆ. ಉಪ ಕುಲಪತಿಗಳನ್ನು ನೇಮಕ ಮಾಡಬೇಕಾದರೆ ಯಾವ ಒಂದು ಮಾನ ದಂಡ ಇರುತ್ತದೆ, ಯಾವ ಒಂದು ನಿಯಮಗಳಿವೆ, ಅದರ ನೇರ ಉಲ್ಲಂಘನೆ ಪ್ರಕರಣದಲ್ಲಾಗಿದೆ. ತಮಗೆಲ್ಲಾ ಗೊತ್ತಿರುವಂತೆ ಯಾವುದೇ ವಿಶ್ವವಿದ್ಯಾನಿಲಯಕ್ಕೆ ವೈಸ್ ಚಾನ್ಸಲರ್ ನೇಮಕ ಮಾಡಬೇಕಾದರೆ ಸರ್ಚ್ ಕಮಿಟ ಮಾಡುತ್ತಾರೆ. VTU ವೈಸ್ ಚಾನ್ಸಲರ್ ಸೇವಾ ಅವಧಿ ದಿನಾಂಕ: 20-06-2013 ರಂದು ಮುಗಿಯುತ್ತದೆ. ಅಂದು ಭಾನುವಾರವಾಗಿರುತ್ತದೆ. ಹೀಗಾಗಿ, ಒಂದು ದಿವಸ ಮುಂಚೆ ಅಂದರೆ ದಿನಾಂಕ:29-06-2013ರ ಮಧ್ಯಾಹ್ನಕ್ಕೆ ಅವರು ಇನ್ನೊಬ್ಬ ವೈಸ್ ಚಾನ್ಸಲರಗೆ ಚಾರ್ಜ್ ಕೊಡಬೇಕಾಗುತ್ತದೆ. ಸರ್ಚ್ ಕಮಿಟಿ ಮಾಡಿದ್ದಾರೆ. ಸರ್ಚ್ ಕಮಿಟಿಯನ್ನು ದಿನಾಂಕ 27-06-2013 ಕ್ಕೆ ಮಾಡಿದ್ದಾರೆ. ದಿನಾಂಕ; 29-06-2013 ರಂದು ಮಿಟಿಂಗ್ ಆಗಿರುತ್ತದೆ. ಆದರೆ, ನಾನು

ಇಲ್ಲಿ ಹೇಳುತ್ತಿರುವುದೇನೆಂದರೆ ಒಬ್ಬ ವೈಸ್ ಚಾನ್ಸ್‌ಲವರ ಸಮಯ 3 ವರ್ಷಗಳು ಇದ ಎಂದು ಗೊತ್ತಾದಮೇಲೆ ಆ 3 ವರ್ಷದ ಅವಧಿ ಯಾವಾಗ ಮುಗಿಯುತ್ತದೆ ಎಂದು ಸರ್ಕಾರಕ್ಕೆ ಮುಂಚೆಯೇ ಗೊತ್ತಿರುತ್ತದೆ. ಮತ್ತೆ ವಿಶೇಷವಾಗಿ ಕುಲಪತಿಗಳಾದಂತಹ ನಮ್ಮ ಗೌರವಾನ್ವಿತ ರಾಜ್ಯಪಾಲರು ಈ ಕೆಲಸವನ್ನು ಮಾಡಬೇಕಾಗಿತ್ತು. ಸರ್ಚ್ ಕಮಟಿಯನ್ನು ಎರಡು ದಿನಗಳ ಮೊದಲು ಮಾಡಿದ್ದಾರೆ. 30ನೇ ತಾರೀಖು ಇವರ ಸೇವಾ ಅವಧಿ ಮುಗಿಯುತ್ತದೆ. 29ನೇ ತಾರೀಖು ಮಧ್ಯಾಹ್ನದೊಳಗೆ ಮತ್ತೊಬ್ಬರಿಗೆ ಚಾರ್ಜ್ ಕೊಡಬೇಕು. ಹೀಗಿರುವಾಗ 27ನೇ ತಾರೀಖು ಸರ್ಚ್ ಕಮಿಟಿ ಮಾಡಿದ್ದಾರೆ. ಆ ಸರ್ಚ್ ಕಮಿಟಯುವರು 29ನೇ ತಾರೀಖಿನಂದು ಮಿಟಿಂಗ್ ಮಾಡಿದ್ದಾರೆ. ಅದು ಒಂದೇ ಮಿಟಿಂಗ್‌ನಲ್ಲಿ ಅಂದೇ ಸಾಯಂಕಾಲ ಅವರು ನಾಲ್ಕು ಹೆಸರುಗಳನ್ನು ಕಳುಹಿಸಿಕೊಟ್ಟರು.

ಮಾನ್ಯ ಸಭಾಪತಿಯವರೆ, ವಿಟಿಯು ನ ಆಕ್ಟ್ ಇದೆ. ವಿಟಿಯು ನ ಆಕ್ಟ್ ಪ್ರಕಾರ ಏನಿದೆ ಎಂದರೆ ಈ ಸರ್ಚ್ ಕಮಿಟಿಗೆ ಒಂದು ಜವಾಬ್ದಾರಿ ಇದೆ. ಸರ್ಚ್ ಕಮಿಟಿಯವರು ಏನು ಮಾಡಬೇಕೆಂದರೆ, I am quoting VTU Act 1994 Section 13 (2)

"13. The Vice Chancellor : (2) The Vice Chancellor shall be appointed by the Chancellor from a panel of three persons who are outstanding in the field of Engineering Technology or education and recommended by the committee.

ಅಂದರೆ 3 ಜನರ ಹೆಸರನ್ನು ಕಮಿಟಿಯಿಂದ ಅವರು ಕಳುಹಿಸಬೇಕಾಗಿತ್ತು. ಈ ಸರ್ಚ್ ಕಮಿಟಿಯವರು 4 ಹೆಸರನ್ನು ಕಳುಹಿಸಿದ್ದರು. It is a very gross, evident violation. ಅವರು ಕಳುಹಿಸಿದ ಹೆಸರುಗಳಂದರೆ 1. ಪ್ರೊ. ಎಂ.ಎಸ್.ಶಿವಕುಮಾರ್ 2. ಪ್ರೊ.ನಾಗಭೂಷಣ್ 3. ಪ್ರೊ. ಕೆ.ಆರ್. ವೇಣುಗೋಪಾಲ್ ಮತ್ತು ಕೊನೆಯದಾಗಿ ಸೇರಿಸಿರುವಂತಹ ಹೆಸರು 4.

ಡಾ.ಹೆಚ್. ಮಹೇಶಪ್ಪ ಸರ್ಚ್ ಕಮಿಟಿಯವರು ಕಳುಹಿಸಿರುವ ಹೆಸರುಗಳಲ್ಲಿ 4 ನೆಯ ಹೆಸರಾಗಿ ಇವರ ಹೆಸರನ್ನು ಕಳುಹಿಸಿದರು.

ಇದರಲ್ಲಿ ಮತ್ತೊಂದು ಪ್ರಮುಖವಾದ ಸಂಗತಿ ಏನೆಂದರೆ, ನಮ್ಮ ಘನತೆವತ್ತ ರಾಜ್ಯಪಾಲರು ಏನು ಇವರ ನೇಮಕಾತಿ ಮಾಡಬೇಕಾಗಿತ್ತು ಆ ಸಂದರ್ಭದಲ್ಲಿ ಈ ಸರ್ಚ್ ಕಮಿಟಿಯ ಶಿಫಾರಸ್ಸನ್ನು ಕೈಬಿಟ್ಟರು. ಕೈಬಿಟ್ಟು ಅವರು ಏನು ಮಾಡಿದರು ಎಂದರೆ. ಈ ಒಂದು ಆಕ್ಟ್‌ನೊಳಗೆ 13ನೇ ಸೆಕ್ಷನ್ನ 5ನೇ ಸಬ್ ಸೆಕ್ಷನ್ ಅನ್ನು ಅವರು ಉಪಯೋಗಿಸಿಕೊಂಡರು. ಅದು ಏನು ಹೇಳುತ್ತದೆ ಎಂದರೆ,

"13 (5) The Chancellor may direct that a Vice Chancellor whose term of office has expired shall continue in the office for such period not exceeding one year as may be specified in the direction.

ಅಂದರೆ, ಇದರ ಪ್ರಕಾರ ಯಾರು ವೈಸ್ ಚಾನ್ಸಲರ್ ಇದ್ದರು, ಅವರಿಗೆ ಒಂದು ವರ್ಷದವರೆಗೆ ಮುಂದುವರಿಸುವ ಬಗ್ಗೆ ಅವಕಾಶವಿದೆ ಎನ್ನು ವುದನ್ನು ಉಪಯೋಗಿಸಿಕೊಂಡರು. ಆದರೆ, ಇದು ಬಹಳ ಪ್ರಮುಖ ವಾದ ಸಂಗತಿ ಎಂದರೆ. ಇವರು ಯಾರು ವೈಸ್ ಚಾನ್ಸಲರ್ ಇದ್ದರು, ಅವರ ಟರ್ಮ್ ದಿನಾಂಕ 29–06–2013ಕ್ಕೆ ಮುಗಿದು ಹೋಗಿತ್ತು.

**ಶ್ರೀ ಆರ್.ವಿ.ದೇಶಪಾಂಡೆ(ಉನ್ನತ ಶಿಕ್ಷಣ ಸಚಿವರು):** ಮಾನ್ಯ ಸಭಾಪತಿಯವರೆ, ಅವರ ಟರ್ಮ್ ನೋಡಿ. ಕೊನೆಯ ಲೈನ್ ಅನ್ನು ಓದು ತ್ತೇನೆ. 30ನೇ ಜೂನ್ 2013 ಕ್ಕೆ ರಾಜ್ಯಪಾಲರ ಹಾಗೂ ಚಾನ್ಸ್‌ಲರ್ ಕಡೆ ಯಿಂದ ಅಧೀನ ಕಾರ್ಯದರ್ಶಿಯವರು ಒಂದು ಆದೇಶವನ್ನು ಹೊರಡಿಸಿ ದ್ದಾರೆ. ಅದೆಲ್ಲವನ್ನೂ ನಾನು ಓದಲಿಕ್ಕೆ ಹೋಗದೆ ಪ್ರಮುಖವಾದುದದನ್ನು ಓದಲಿಕ್ಕೆ ಬಯಸುತ್ತೇನೆ;

"I hereby appoint Dr. H. Maheshappa Principal Cambridge Institute of Technology, KR Puram, Bangalore as Vice Chancellor,

Visvesvaraya Technological University, Belgaum for a period of three years with effect from 2nd July 2010"

This is the order

**ಡಾ. ಎ.ಹೆಚ್.ಶಿವಯೋಗಿಸ್ವಾಮಿ:–** ಮಾನ್ಯ ಸಭಾಪತಿಯವರೆ, then I stand corrected ಹಾಗಾದರೆ, ಅವರಿಗೆ 2ನೇ ಜುಲೈವರೆಗೆ ಟರ್ಮ್ ಇತ್ತು. ಅದನ್ನು ಮುಂದುವರಿಸಿದ್ದಾರೆಂದು ಹೇಳುತ್ತಿದ್ದಾರೆ. ಅದರ ಬಗ್ಗೆ ನಾನು ಹೇಳುತ್ತಿಲ್ಲ. ಆದರೆ, ಇಲ್ಲ ವಿಶೇಷವಾದ ಪ್ರಮುಖ ಸಂಗತಿ ಎಂದರೆ ಈಗ ವೈಸ್ ಚಾನ್ಸಲರ್ ರವರ ಮೇಲೆ ಇರತಕ್ಕಂತಹ ಏನು ಅರೋಪಗಳಿವೆ. ಅವು ಗಳ ಬಗ್ಗೆ ಗಮನಿಸಬೇಕಾಗಿದೆ.

ಮಾನ್ಯ ಸಭಾಪತಿಯವರೆ, ಒಂದು ನೇರವಾದಂತಹ ವಿಷಯವನ್ನು ತಮ್ಮ ಮೂಲಕ ಮಾನ್ಯ ಸಚಿವರ ಗಮನಕ್ಕೆ ಆನ್ ರೆಕಾರ್ಡ್ ತರುವುದಕ್ಕೆ ನಾನು ಪ್ರಯತ್ನ ಮಾಡುವುದೇನೆಂದರೆ ಇವತ್ತು ಬೆಳಿಗ್ಗೆ ದಾವಣಗೆರೆಯಿಂದ ಒಂದು ಫೋನ್ ಬಂತು.

ನಾನು ನೇರವಾಗಿ ಆರೋಪ ಮಾಡುತ್ತಿದ್ದೇನೆ. ದಾವಣಗೆರೆಯ ಯು.ಬಿ.ಡಿ.ಟಿಯಲ್ಲಿನ ಸಿವಿಲ್ ಇಲಾಖೆಯಲ್ಲಿ Assistant Professor ಹುದ್ದೆಗೆ ಸಂದರ್ಶನಕ್ಕೆ ಹೋದ ವ್ಯಕ್ತಿ ವಿ.ಸಿ. ಅವರನ್ನು ಭೇಟಿ ಮಾಡಿದರೆ ಅವರು ಒಬ್ಬ "X" ಎಂಬ ವ್ಯಕ್ತಿಯನ್ನು ಭೇಟಿ ಮಾಡಿ ಎಂದು ಹೇಳಿದ್ದಾರೆ. ಆ ಸಂದರ್ಶ ನಕ್ಕೆ ಹೋದಂತಹ ವ್ಯಕ್ತಿ ಹೋಗಿ ಆ ವ್ಯಕ್ತಿಯನ್ನು ಭೇಟಿ ಮಾಡಿದರೆ ಅವರು. ಸಹಾಯಕ ಪ್ರಾಧ್ಯಾಪಕರ ಹುದ್ದೆಗೆ 15 ಲಕ್ಷ ರೂಪಾಯಿ ಹಣವನ್ನು ಕೇಳಿದ್ದಾರೆ. ಈ ಸಂದರ್ಶನಕ್ಕೆ ಹೋಗಿದ್ದಂತಹ ವ್ಯಕ್ತಿ ನನ್ನನ್ನು ಏನು ಮಾಡಬೇಕೆಂದು ಕೇಳಿದರು. ಅದಕ್ಕೆ ನಾನು ಅವರಿಗೆ 10 ರೂಪಾಯಿ ಕೊಡ ಬೇಡಿ. ಈ ವಿಚಾರವನ್ನು ನಾನು ಇಂದು ಸದನದಲ್ಲಿ ಮಾನ್ಯ ಸಚಿವರ ಗಮನಕ್ಕೆ ತರುತ್ತೇನೆ ಇಲ್ಲಿ ಪ್ರಸ್ತಾಪ ಮಾಡುತ್ತೇನೆ ಎಂದು ಹೇಳಿದೆ. ಯಾವುದೇ ಕಾರಣಕ್ಕೂ ಈ ರೀತಿಯ ಅವ್ಯವಹಾರ ಏನು ನಡಯುತ್ತಿದೆ ಅದನ್ನು ಒಪ್ಪುವುದಕ್ಕೆ ಸಾಧ್ಯವಿಲ್ಲ. ಇದನ್ನು ಯಾರೂ ಕೂಡ ಅಭಿನಂದಿಸುವುದಕ್ಕೆ ಆಗುವುದಿಲ್ಲ. ಈ ಸರ್ಕಾರ

ಇದನ್ನು ಮಚ್ಚುವುದಿಲ್ಲವೆಂದು ನಾನು ಅಂದು ಕೊಂಡಿದ್ದೇನೆ. ಈ ಸಂದರ್ಶನವನ್ನು ನಿಲ್ಲಿಸುವುದಕ್ಕೆ ಮಾನ್ಯ ಮಂತ್ರಿಗಳಲ್ಲಿ ಮನವಿ ಮಾಡುತ್ತೇನೆಂದು ನಾನು ಅವರಿಗೆ ತಿಳಿಸಿದ್ದೇನೆ. ನಮ್ಮ ನಾಯಕರು. ಹೇಳಿದಂತೆ ಇವಲ್ಲಕ್ಕೂ ಒಂದು ರೇಟ್ ಲಿಸ್ಟ್ ಅನ್ನು ಹಾಕಿಕೊಂಡಿದ್ದಾರೆ. ಈ ರೀತಿಯ ಅವ್ಯವಹಾರಗಳು ಏನು ನಡಯುತ್ತಿವೆ ಇದನ್ನು ತಾವು ಬಹಳ ಗಂಭೀರವಾಗಿ ಪರಿಗಣಿಸಬೇಕಾಗುತ್ತದೆ. ಇವರನ್ನು ಕಂಟಿನ್ಯೂ ಮಾಡಿರುವುದೇ ಬಹಳ ದೂಡ್ಡ ಅಪರಾಧ. ಹಿಂದೆಲ್ಲಾ ವಿ.ಸಿ. ಅಂದರೆ. ಆ ಸ್ಥಾನಕ್ಕೆ ಎಷ್ಟು ಗೌರವ ಇರುತ್ತಿತ್ತು ಎಂಬುದು ನಮಗೆಲ್ಲರಿಗೂ ಗೊತ್ತಿರುವ ವಿಚಾರವಾಗಿದೆ. ಹಿಂದೆಲ್ಲಾ ವಿ.ಸಿ. ಅವರು ಅಮೇರಿಕಾಗೆ ಹೋದಾಗ ಅಲ್ಲಿನ ಅಧ್ಯಕ್ಷರ ಮನೆಗೆ ಹೋಗುತ್ತಿರಲಿಲ್ಲ. ಅಲ್ಲಿನ ಅಧ್ಯಕ್ಷರೇ ವಿ.ಸಿ. ಅವರು ಇರುವಲ್ಲಿಗೆ ಹೋಗಿ ಅವರನ್ನು ಭೇಟಿ ಮಾಡಿ ಬರುತ್ತಿದ್ದರು. ಅಷ್ಟು ಗೌರವ ಅವರಿಗೆ ಇರುತ್ತಿತ್ತು. ವಿ.ಸಿ. ಅವರು ಅಮೇರಿಕಾ ಅಧ್ಯಕ್ಷರ ಮನೆಗೆ ಹೋಗುತ್ತಿರಲಿಲ್ಲವೆಂದು ಹೇಳುವಂತಹ ಒಂದು ಕಾಲ ಇತ್ತು ಎಂದು ಮಾನ್ಯ ನಾಣಯ್ಯನವರು ಹೇಳಿದರು ವಿ.ಸಿ. ಗಳು ಅಂದರೆ ಹಿಂದೆಲ್ಲಾ ಎಂತೆಂತಹವರು ವಿ.ಸಿ.ಗಳಾಗಿ ಹೋಗಿದ್ದಾರೆ. ಮಾನ್ಯ ಡಿ.ಸಿ. ಪಾಟೀಲ್, ರಾಷ್ಟಕವಿಯಾಗಿದ್ದ ಕುವೆಂಪು ಮತ್ತು ಡಾ: ಹೆಚ್. ನರಸಿಂಹಯ್ಯ ಅಂತಹವರು ಇದ್ದರು ಎಂದು ಮೊನ್ನೆ ಮಾನ್ಯ ಸಭಾ ನಾಯಕರು ಹೇಳುತ್ತಿದ್ದರು. ಯಾವುದೇ ಒಬ್ಬ ವ್ಯಕ್ತಿ ಆ ಕುರ್ಚಿಯಿಂದ ಅವರು ದೊಡ್ಡವರಾಗಬಾರದು. ಆ ವ್ಯಕ್ತಿಯಿಂದ ಆ ಕುರ್ಚಿಗೆ ಆ ಸ್ಥಾನಕ್ಕೆ ಗೌರವ ಬರಬೇಕು ಎಂದು ಹೇಳಿದರು. ಆದರೆ ಇಂತಹ ವ್ಯಕ್ತಿಗಳು ಆ ಸ್ಥಾನದಲ್ಲಿ ಕುಳಿತುಕೊಳ್ಳುತ್ತಿರುವುದರಿಂದ ಆ ಕುರ್ಚಿಯ ಸ್ಥಾನ, ಗೌರವ ಹಾಳಾಗುತ್ತಿದೆ. ಈಗಿನ ವಿ.ಸಿ. ಅವರುಗಳಿಂದ ಆ ಸ್ಥಾನದ ಮಹಿಮೆ ಗೌರವ ಕೂಡ ಕಡಿಮೆಯಾಗುತ್ತದೆ. ಈ ಪ್ರಕರಣದ ಬಗ್ಗೆ ತಾವು ವಿವರವಾಗಿ ಒಂದು ವಿಚಾರಣೆಯನ್ನು ಮಾಡಿಸಬೇಕು. ಎಂದು ತಮ್ಮಲ್ಲಿ ವಿನಂತಿ ಮಾಡುತ್ತಿದ್ದೇನೆ. ಮತ್ತು ಕೂಡಲೇ ಈ ಸಂದರ್ಶನಗಳನ್ನು ನಿಲ್ಲಿಸುವ ಮೂಲಕ ಅರ್ಹ ಬಡ ವಿದ್ಯಾರ್ಥಿಗಳು ಯಾರು ಬಹಳ ಕಷ್ಟಪಟ್ಟು ಈ ಪದವಿಯನ್ನು ಮುಗಿಸಿ ಉದ್ಯೋಗಾಕಾಂಕ್ಷಿಗ

ಳಿದ್ದಾರೆ ಅವರಿಗೆ ಅನ್ಯಾಯವಾಗದಂತೆ ತಾವು ಗಮನಿಸಬೇಕೆಂದು ವಿನಂತಿಸಿ ತಮಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

**ಶ್ರೀ ವೈ.ಎ. ನಾರಾಯಣ ಸ್ವಾಮಿ (ಶಿಕ್ಷಕರ ಕ್ಷೇತ್ರ):–** ಮಾನ್ಯ ಉಪ ಸಭಾಪತಿಯವರೆ, ನನಗೆ ಮಾತನಾಡಲು ಅವಕಾಶ ಕಲ್ಪಿಸಿಕೊಟ್ಟದ್ದಕ್ಕಾಗಿ ತಮಗೆ ಧನ್ಯವಾದಗಳನ್ನು ಅರ್ಪಿಸುತ್ತೇನೆ. ಡಾ: ಕೆ. ಮಹೇಶಪ್ಪ ಅವರು ದಿನಾಂಕ 30–6–2010 ರಲ್ಲಿ ಕುಲಪತಿಗಳಾಗಿ ನೇಮಕವಾಗಿದ್ದು ಇವರ ಅಧಿ ಕಾರಾವಧಿ 2013 ನೇ ಇಸವಿಯವರೆಗೂ ಇರುತ್ತದೆ. ಇವರು ಈ ಹುದ್ದೆಗೆ ನೇಮಕಾತಿ ಆಗುವಾಗಲೇ ತಪ್ಪು ಮಾಹಿತಿಯನ್ನು ಕೊಟ್ಟು ನೇಮಕಾತಿ ಆಗಿದ್ದಾರೆ.

**ಉಪ ಸಭಾಪತಿಯವರು:–** ತಾವು 5 ನಿಮಿಷದಲ್ಲಿ ಮುಗಿಸಿಬಿಡಿ. ಹಿಂದೆ ಮಾತನಾಡಿದಂತಹ ಸದಸ್ಯರು ಹೇಳಿದ ವಿಷಯಗಳನ್ನು ತಾವು ಪುನರಾ ವರ್ತನೆ ಮಾಡದೆ ನೀವು ಹೇಳಬೇಕೆಂದಿರುವ ವಿಚಾರಗಳನ್ನು ಮಾನ್ಯ ಸಚಿವರ ಗಮನಕ್ಕೆ ತನ್ನಿ ಸಚಿವ ಸಂಪುಟದ ಸಭೆ ಇದಿಯಂತೆ.

**ಶ್ರೀ ವೈ.ಎ. ನಾರಾಯಣಸ್ವಾಮಿ:–** ತಮ್ಮನ್ನು ಕೈ ಮುಗಿದು ಕೇಳ ಬಯಸುತ್ತೇನೆ. ಅದೊಂದನ್ನೂ ಮತ್ತೆ ರಿಪೀಟ್ ಮಾಡುವುದಿಲ್ಲ. ಇವರು ನೇಮಕಾತಿ ಆಗುವಾಗಲೇ ಘನತೆವೆತ್ತ ರಾಜ್ಯಪಾಲರಿಗೆ ತಪ್ಪು ಮಾಹಿತಿಯನ್ನು ನೀಡಿದ್ದಾರೆ. ಇವರು ಸೆಕೆಂಡ್ ಕ್ಲಾಸ್ ಬಿ.ಇ. ಪಾಸ್ ಹೊಂದಿದ್ದರೂ ಮೊದ ಲನೇ ದರ್ಜೆ ಬಿ.ಇ. ಎಂದು ಮಾನ್ಯ ರಾಜ್ಯಪಾಲರಿಗೆ ಮಿಸ್‌ಲೀಡ್ ಮಾಡಿ ನೇಮಕ ಆಗಿದ್ದಾರೆ ಎಂಬ ಬಗ್ಗೆ ಒಂದು ದೂರು ಇತ್ತು. ಸೆಕೆಂಡ್ ಕ್ಲಾಸ್ ಬಿ.ಇ. ಮಾಡಿದ್ದಾರೆ ಎಂಬ ದೂರು ಇದ್ದರೂ ಅದನ್ನು ಒಪ್ಪಿಕೊಳ್ಳುವುದಕ್ಕೆ ಮಾನ್ಯ ರಾಜ್ಯಪಾಲರ ಕಚೇರಿ ಸಿದ್ಧವಿರಲಿಲ್ಲ ಎಂದು ಹೇಳಿ, ಆರ್.ಟಿ.ಐ. ನಲ್ಲಿ ಮಾಹಿತಿ ತೆಗೆದುಕೊಂಡಿದ್ದಾರೆ. ಆ ಸಂದರ್ಭದಲ್ಲಿ ಶ್ರೀ ಮಹೇಶಪ್ಪ ಅವರು ಸೆಕೆಂಡ್ ಕ್ಲಾಸ್ BE (Mechanical) ಹೊಂದಿದ್ದಾರೆ ಎಂಬ ಅಂಶ ಬೆಳಕಿಗೆ ಬಂತು. ಆ ರೀತಿಯ ಉತ್ತರವನ್ನು ಮೈಸೂರು ವಿಶ್ವವಿದ್ಯಾನಿಲಯದ ರಿಜಿಸ್ಟಾರ್ ಅವರು ಉತ್ತರವನ್ನು ಕೊಟ್ಟಿದ್ದಾರೆ ಮತ್ತು ಡಿಗ್ರಿ ಆಗಿ 5 ವರ್ಷವಾದರೂ ಆ

ಡಿಗ್ರಿ ಸರ್ಟಿಫಿಕೇಟ್ ಅನ್ನು ತೆಗೆದುಕೊಂಡಿಲ್ಲ ಎಂಬ ಅಂಶವನ್ನು ಕೂಡ ಉಲ್ಲೇಖ ಮಾಡಿದ್ದಾರೆ. ಇಷ್ಟೆಲ್ಲಾ ಮಾಹಿತಿಯನ್ನು ಕೊಟ್ಟರೂ ಕೂಡ ಮಾನ್ಯ ರಾಜ್ಯಪಾಲರು ಏನೂ ಕ್ರಮ ತೆಗೆದುಕೊಂಡಿಲ್ಲ ಎನ್ನುವುದನ್ನು ಇಲ್ಲಿ ಮಾನ್ಯ ದೇಶಪಾಂಡೆಯವರು ಬಹಳ ಚೆನ್ನಾಗಿ ಉತ್ತರವನ್ನು ಕೊಟ್ಟಿದ್ದಾರೆ ಶ್ರೀ ಅನಿಲ್ ಕುಮಾರ್ ಅವರು ಇದನ್ನು ಪ್ರಶ್ನಿಸಿ ನ್ಯಾಯಾಲಯಕ್ಕೆ ಹೋದರು. ನ್ಯಾಯಾಲಯದಲ್ಲಿ ಮಾನ್ಯ ರಾಜ್ಯಪಾಲರಿಗೆ ರೀ ಡೈರೆಕ್ಟ್ ಮಾಡಿ ಇದರ ಬಗ್ಗೆ ಪುನರ್ ಪರಿಶೀಲನೆ ಮಾಡಿ ನಿರ್ಧಾರವನ್ನು ತೆಗೆದುಕೊಳ್ಳಿ ಎಂದು ಹೇಳಿದರು. ಮಾನ್ಯ ರಾಜ್ಯಪಾಲರು ನಿವೃತ್ತ ನ್ಯಾಯಾಧೀಶರಾದ ಜಸ್ಟೀಸ್ ಶ್ರೀ ಅಭಯ್ ಗೋಹಿಲ್ ಅವರ ನೇತೃತ್ವದಲ್ಲಿ ವಿಚಾರಣಾ ಆಯೋಗವನ್ನು ನೇಮಕ ಮಾಡಿದರು. ಆದರೆ ಮಾನ್ಯ ಅಭಯ್ ಗೋಹಿಲ್ ಅವರು ನೀಡಿದಂತಹ ವರದಿ ಇದುವರೆಗೂ ಬಹಿರಂಗ ಆಗಲಿಲ್ಲ. ಮಾನ್ಯ ಉನ್ನತ ಶಿಕ್ಷಣ ಸಚಿವರಲ್ಲಿ ಏನಾದರೂ ಈ ವರದಿ ಬಗ್ಗೆ ಮಾಹಿತಿ ಇದ್ದರೆ ಆ ವರದಿ ಏನು ಹೇಳುತ್ತದೆ ಎಂದು ಹೇಳಬೇಕು. ಆ ವರದಿ ಹಾಗೆಯೇ ಇದೆ. ಆದರೆ ಅಷ್ಟರಲ್ಲಿ ಇವರ ಕಾಲಾವಧಿ ಕೂಡ ಮುಕ್ತಾಯವಾಯಿತು. ಅವರ ಅವಧಿ ಮುಗಿಯುವುದಕ್ಕಿಂದ ಮೊದಲು ನಡೆದ ಒಂದು ಘಟನೆಯನ್ನು ತಮ್ಮ ಗಮನಕ್ಕೆ ತರಬಯಸುತ್ತೇನೆ. ಡಾ. ಆಚಾರ್ಯ ಅವರು ಆಗ ಉನ್ನತ ಶಿಕ್ಷಣ ಸಚಿವರಾಗಿದ್ದರು. ಈಗತಾನೆ ಮಾನ್ಯ ಹೊರಟ್ಟಿಯವರು ಆ ಮಾರ್ಕ್ಸ್‌ನ್ನು ಒತ್ತಿ ಒತ್ತಿ ಹೇಳುತ್ತಿದ್ದರು. ಒಂದು ಸೆಮಿಸ್ಟರಿಗೆ ಒಂದು ಸಾವಿರ ಪೇಪರುಗಳಿಗೆ ಸಂಬಂಧಿಸಿದಂತೆ ಒಂದು ಪೇಪರಿಗೆ ಒಂದು ಲಕ್ಷ ರೂಪಾಯಿಯಂತೆ ಮ್ಯಾನೇಜ್ ಮಾಡಿ ಒಂದೂಂದು ಸೆಮಿಸ್ಟರ್‌ನಲ್ಲಿ ಹತ್ತತ್ತು ಕೋಟಿ ರೂಪಾಯಿಯನ್ನು ಲೂಟಿ ಮಾಡಿದ್ದಂತಹ ಒಂದು ಪ್ರಸಂಗವನ್ನು ನಾನು ಮತ್ತು ಮಾನ್ಯ ಅರುಣ್ ಶಹಾಪುರ್ ಹಾಗೂ ಕ್ಯಾ. ಗಣೇಶ್ ಕಾರ್ಣಿಕ್ ಅವರು ಸೇರಿದಂತೆ ಇಲ್ಲಿ ಪ್ರಸ್ತಾಪ ಮಾಡುವ ಮೂಲಕ ಆಗ ಇದ್ದಂತಹ ಮಾನ್ಯ ಆಚಾರ್ಯ ಅವರ ಗಮನಕ್ಕೆ ತಂದೆವು. ಡಾ: ಆಚಾರ್ಯ ಅವರು ಒಂದು ಸಮಿತಿಯನ್ನು ರಚನೆ ಮಾಡಿದರು. Commissioner of Collegiate Education ಅವರನ್ನು ಒಳಗೊಂಡಂತೆ ಒಂದು ಸಮಿತಿಯನ್ನು ಮಾಡಿ ಅಲ್ಲಿಗೆ ಕಳಿಸಿದರು. ಆ ಕುಲಪತಿಗಳು ಎಷ್ಟು

ಸಂಭಾವಿತರು ಎಂದರೆ ಆ ಸಮಿತಿಯನ್ನು ಒಳಕ್ಕೆ ಬಿಟ್ಟುಕೊಳ್ಳಲಿಲ್ಲ.. Who are you to come here, you have no power ಎಂದು ಹೇಳಿದರು. ಅವರನ್ನು ಆಚೆ ನೂಕಿದರು. ಸಮಿತಿ ವಿಚಾರಣೆ ಮಾಡುವುದಕ್ಕೇ ಬಿಡಲಿಲ್ಲ. ಅವರು ನಿವೃತ್ತರಾಗುವ ಕೊನೇ ಗಳಿಗೆಯಲ್ಲಿ ಮೂರು ತಿಂಗಳ ಮುಂಚೆ ಯಾವುದೇ ನೇಮಕಾತಿಯನ್ನು ಮಾಡಿಕೊಳ್ಳಬಾರದು Financial implication ಇರುವಂತಹ ಯಾವುದೇ ನಿರ್ಣಯ ತೆಗೆದುಕೊಳ್ಳಬಾರದೆಂದು ಸರ್ಕಾರದ ಆದೇಶ ಇದ್ದರೂ ಕೂಡ ಅದೆಲ್ಲವನ್ನೂ ಉಲ್ಲಂಘನೆ ಮಾಡಿದರು. ಅವರ ಅಧಿಕಾರಾವಧಿ ಕೇವಲ ಎರಡು ತಿಂಗಳು ಇರಬೇಕಾದರೆ 248 ಕೋಟಿ ರೂಪಾಯಿಗಳಿಗೆ ಸಂಬಂಧ ಪಟ್ಟಂತೆ KTTP Act ಅನ್ನು violate ಮಾಡಿ ಅವರಿಗೆ ಬೇಕಾದ ಕಂಪೆನಿಗೆ ಆದೇಶವನ್ನು ಕೊಟ್ಟಿದ್ದಾರೆ. ಆ ಬಗ್ಗೆ ಮಾಹಿತಿ ನಮ್ಮಲ್ಲಿ ಇದೆ. ಆ ಆದೇಶವನ್ನು ಉಳಿಸಿಕೊಳ್ಳಬೇಕಾದರೆ ಮತ್ತು ಅವರು ಕೊಟ್ಟರುವ ಹಣವನ್ನು repay ಮಾಡ ಬೇಕಲ್ಲಾ ಅದಕ್ಕಾಗಿ ಮರು ನೇಮಕ ಆಗಬೇಕೆಂದು ಒಂದು ಸ್ಕೆಚ್ ಅನ್ನು ಹಾಕಿ ದ್ದರು. ಆದರೆ ಇಲ್ಲಿ ದುರಂತ ಏನು ಎಂದರೆ, ವಿ.ಟಿ.ಯು. ಆಕ್ಟ್‌ನಲ್ಲಿ ಸರ್ಚ್ ಸಮಿತಿಯ ಇಬ್ಬರು ಸದಸ್ಯರುಗಳನ್ನು VTU ನ Executive Council ಮಾಡ ಬೇಕೆಂದು ಇದೆ. ಮೊದಲನೆಯವರು ಶ್ರೀ ಕುವೆಂಪು ಅವರ ಅಳಿಯ ಮಾಜಿ ಕುಲಪತಿಗಳಾಗಿದ್ದ ಶ್ರೀ ಚಿದಾನಂದಗೌಡರವರು, ಅವರು ಬಹಳ ಸಂಭಾವಿ ತರು, ಅವರ ಬಗ್ಗೆ ಬಹಳ ಗೌರವ ಇದೆ. ಮತ್ತೊಬ್ಬರು ಶ್ರೀ ಡಿ.ಹೆಚ್. ರಾವ್, ಅವರು ಖಾಸಗಿ ಜೈನ್ ಇಂಜಿನಿಯರಿಂಗ್ ಕಾಲೇಜಿನಲ್ಲಿ Professor & Principal ಆಗಿದ್ದವರು. ತಮ್ಮ ಮಾಹಿತಿಗಾಗಿ ಒಂದು ವಿಚಾರವನ್ನು ಹೇಳ ಬಯಸುತ್ತೇನೆ. ಈ ವಿ.ಟಿ.ಯು. ನಲ್ಲಿ ಯು.ಬಿ.ಡಿ.ಟಿ. ಎಂಬ constituent College ಇತ್ತೀಚೆಗೆ ಬಂತು. ಅದಕ್ಕೆ ಮೊದಲು ಯಾವುದೇ constituent College ಇರಲಿಲ್ಲ. ಆ ರೀತಿ ಇರಬೇಕಾದರೆ ಡೀನ್ ಅನ್ನು ನೇಮಕ ಮಾಡ ಬೇಕಾದರೆ. ಮೊದಲು ಸರ್ಕಾರೀ ಕಾಲೇಜಿನಲ್ಲಿರುವ ಪ್ರೊಫೆಸರ್‌ಗಳನ್ನು ನೇಮಕ ಮಾಡಬೇಕಾಗುತ್ತದೆ ಅದರ ನಂತರ ಅನುದಾನಿತ ಕಾಲೇಜುಗಳಲ್ಲಿನ ಪ್ರೊಫೆಸರ್‌ಗಳನ್ನು ನೇಮಕ ಮಾಡಬೇಕಾಗುತ್ತದೆ ಅದರ ನಂತರ ಖಾಸಗಿ ಕಾಲೇಜುಗಳಲ್ಲಿನ ಪ್ರೊಫೆಸರ್‌ಗಳನ್ನು ನೇಮಕ ಮಾಡಬೇಕಾಗುತ್ತದೆ. ಹಿಂದೆ

ಮೈಸೂರಿನಲ್ಲಿನ SJCE ನಲ್ಲಿ ಪ್ರೊ.ಸಂಗಮೇಶ್ ಎನ್ನುವವರು Professor & Principal ಆಗಿದ್ದರು. ಅವರು ಇಲ್ಲಿಂದ ಹೋಗಿ ದೆಹಲಿಯಲ್ಲಿ AICTE ಯಲ್ಲಿ ನಿರ್ದೇಶಕರಾಗಿದ್ದರು. ಅಂತಹ ಹಿರಿಯರನ್ನೆಲ್ಲಾ ಬಿಟ್ಟು ಇವರನ್ನು ನೇಮಕ ಮಾಡಿದ್ದಾರೆ. ಈ ಕಾಲೇಜು ಪ್ರಾರಂಭವಾಗಿ ಮೂರು ವರ್ಷ ಆಗಿಲ್ಲ ಅಂತಹ ಕಾಲೇಜಿನ ಪ್ರಿನ್ಸಿಪಾಲರನ್ನು ಸರ್ಚ್ ಸಮಿತಿಯ ಸದಸ್ಯರಾಗಿ ಕಳಿಸಿದರು. ಈ ಸಂದರ್ಶನ ಪ್ರಕ್ರಿಯೆ ಏನು ಇದೆಯಲ್ಲಾ ಇದರ ಅರ್ಜಿಗಳನ್ನು ಸ್ಕ್ರೀನ್ ಮಾಡುವುದಕ್ಕೆ ಒಂದು Screening Committee ಮಾಡಿದ್ದಾರೆ. ಇದೇ ಶ್ರೀ ಡಿ.ಹೆಚ್. ರಾವ್ ಅವರು ಆ ಸ್ಕ್ರೀನಿಂಗ್ ಸಮಿತಿಯ ಅಧ್ಯಕ್ಷರಾಗಿದ್ದಾರೆ. ಅಂದರೆ ನಾವು ಏನಾದರೂ ಗಲಾಟೆ ಮಾಡಿ ನಿಮ್ಮನ್ನು ಮರು ನೇಮಕ ಮಾಡಿಕೊಂಡು ಬರುತ್ತೇವೆ. ಆ ರೀತಿ ಮಾಡಿಕೊಂಡು ಬಂದ ಮೇಲೆ ನನಗೆ ಈ ಎಲ್ಲಾ ಅಧಿಕಾರವನ್ನು ಕೂಡಿ ಇಬ್ಬರೂ ಸೇರಿ ಸ್ಕ್ರೀನ್ ಮಾಡಿ ಎಲ್ಲ ಹಣವನ್ನು ಲೂಟಿ ಮಾಡಿಕೊಂಡು ಬಿಡೋಣ ಎಂಬ ಯೋಜನೆ ಇವರ ದ್ದಾಗಿತ್ತು. ಈ ಡಿ.ಹೆಚ್. ರಾವ್ ಅವರು ಎಲೆಕ್ಟ್ರಾನಿಕ್ ವಿಭಾಗದಲ್ಲಿ ಪ್ರೊಫೆಸರ್ ಆಗಿ ಕಾರ್ಯ ನಿರ್ವಹಿಸುತ್ತಿದ್ದರು. He has no business to screen applications of Mechanical, Electrical and Civil Departments. But unfortunately he is the Chairma of Screening Committee for Electrical and Electronics even though he is not a professor in this subject ಈ ಸ್ಕ್ರೀನಿಂಗ್ ಸಮಿತಿಯ ಮಾಹಿತಿ ಇಲ್ಲೇ ಇದೆ. ಎಲೆಕ್ಟ್ರಿಕಲ್ ಇಂಜಿನಿಯರಿಂಗ್ ಸ್ಕ್ರೀನಿಂಗ್ ಸಮಿತಿಯಲ್ಲಿ ಮೊದಲು ಡಿ.ಹೆಚ್.ರಾವ್ ಅಧ್ಯಕ್ಷರಾಗಿದ್ದಾರೆ. Abdul Sharief, a Mechanical Professor is the Screening Committee Member for Electrical Department. ಇದು ಎಲ್ಲಿಯಾದರೂ ಉಂಟೆ? ಇದರಲ್ಲಿ ಎಷ್ಟು ಮ್ಯಾಚ್ ಫಿಕ್ಸಿಂಗ್ ಮಾಡಿದ್ದಾರೆ ಅಂದರೆ, ಮೊದಲನೆಯದಾಗಿ ನೇಮ ಕಾತಿಯಲ್ಲಿಯೇ ಗೊಂದಲವನ್ನು ಸೃಷ್ಟಿ ಮಾಡಿದರು. ಅವರು ತಮ್ಮ ಮೇಲೆ ಹೇಳಿದರು. It is not my mistake it is the mistake of the Government. The Government has not sent the nominee. ಸರ್ಕಾರ ಒಂದು ಸಣ್ಣ ತಪ್ಪುಮಾಡಿತ್ತು. ಪ್ರೊ. ಬಲರಾಮ್ ಅವರನ್ನು ಕಳಿಸಿದರು. Mr. Balaram is a

very renowned person. He was the Director of IIM ಆದರೆ ಅವರು ಹೋಗಿ ಈ ಡಿ.ಹೆಚ್. ರಾವ್ ಅವರು ಅಧ್ಯಕ್ಷರಾಗಿರುವವರ ಪಕ್ಕದಲ್ಲಿ ಸದಸ್ಯ ರಾಗಿ ಕುಳಿತುಕೊಳ್ಳುವುದಕ್ಕೆ ಆಗುತ್ತದೆಯೇ ತಾವು ದಯವಿಟ್ಟು ಹೇಳಿ Sri. L.M. Patnaik is the Chairman of the Search Committee ಆದರೆ ಈ ಸಮಿತಿಯ ಅಧ್ಯಕ್ಷರು ಯಾರು . . ..

**ಶ್ರೀ ಆರ್.ವಿ. ದೇಶಪಾಂಡೆ:–** ಮಾನ್ಯ ಉಪ ಸಭಾಪತಿಯವರೆ, he is highly qualified ಅವರು highest integrity ಇರುವ ಮನುಷ್ಯ ಇದಕ್ಕಾಗಿ ನೀವು ಸರ್ಕಾರವನ್ನು ಅಭಿನಂದಿಸಬೇಕು.

**Sri. Y.A. NARAYANASWAMY :-** I am complimenting you

**ಶ್ರೀ ವೈ.ಎ.ನಾರಾಯಣಸ್ವಾಮಿ (ಶಿಕ್ಷಕರ ಕ್ಷೇತ್ರ):–** ಮಾನ್ಯ ಸಭಾಪತಿ ಯವರೆ, ಮಾನ್ಯ ಉನ್ನತ ಶಿಕ್ಷಣ ಸಚಿವರಾದ ಶ್ರೀ ಆರ್.ವಿ. ದೇಶಪಾಂಡೆಜೀ ಯವರ ಕೈಯನ್ನು ಬಲಪಡಿಸುತ್ತೇನೆ. ಅವರು ಒಳ್ಳೆಯ ದೃಷ್ಟಿಯಿಂದ ಶ್ರೀ ಬಲ ರಾಮ್‌ರವರನ್ನು ನೇಮಕ ಮಾಡಿದರು. ಆದರೆ ಅವರಿಗೆ ಸಮಸ್ಯೆ ಏನೆಂದರೆ, Sri. D.H.Rao is the junior most Principal ಅವರ ಪಕ್ಕದಲ್ಲಿ ಸದಸ್ಯರಾಗಿ ಕುಳಿತುಕೊಳ್ಳುವುದಕ್ಕಾಗುತ್ತದೆಯೇ? ಅವರನ್ನು ಛೇರ್ಮನ್ ಮಾಡಿದ್ದರೆ he would have gove to the meeting. That's why he was not going to meetings ಅವರು ಯಾವಾಗ ಸಭೆಗೆ ಹೋಗಲಿಲ್ಲವೋ Sri. Patnak is the Chairman, Sri. D.H.Rao and Sri Chidananadagowda were Members ಈ ಮೂರು ಜನಗಳು ಮೆಂಬರ್ ಆದರು. ಬಹಳ ದುರಂತ ಎಂದರೆ ಯಾವ ಸರ್ಚ್ ಕಮಿಟಿಯೂ ಸಹ Section 13 (3) of the VTU Act ಪ್ರಕಾರ ಮೂರು ಜನ ಹೆಸರನ್ನು ಕೊಡಬೇಕು. ನಾಲ್ಕು ಜನರ ಹೆಸರನ್ನು ಕೊಡುವುದಕ್ಕೆ provision ಇಲ್ಲ. ಇವತ್ತು ತಮ್ಮ ಮುಖಾಂತರ ಸರ್ಕಾರಕ್ಕೆ ಆಗ್ರಹ ಮಾಡು ವುದೇನೆಂದರೆ, ಈ ಸರ್ಚ್ ಕಮಿಟಿಯ ಮೇಲೆ ಕ್ರಮವನ್ನು ತೆಗೆದುಕೊಳ್ಳಬೇಕು. They have not business to give four names. Where is the provision in the Act, tell me. There is no provision. Therefore they have given four

names to mislead the Governor, t mislead the entire system ಹಾಗಾಗಿ ಏನಾಯಿತು ಎಂದರೆ ರಾಜ್ಯಪಾಲರಿಗೆ ನಾಲ್ಕು ಜನರ ಹೆಸರನ್ನು ಕೊಟ್ಟರು. It has become a tool in his hands. But, as per section 13 (3) of the VTU Act, ಇನ್ನೊಂದು ಸಾರಿ ಘನತವೆತ್ತ ರಾಜ್ಯಪಾಲರು ಅದರ ಬಗ್ಗೆ ಸಹಮತ ವನ್ನು ವ್ಯಕ್ತಪಡಿಸದೇ ಇದ್ದರೆ ತಕ್ಷಣ he should have gone for the second panel. Until then, he has got powers to extend ಅದಕ್ಕೆ provision ಇದೆ ಇಲ್ಲಿ. ಎಲ್ಲಿಯವರೆಗೆ extend ಮಾಡಬಹುದು ಎಂದರೆ, according to rule 13 (5) of the VTU Act

"(5) The Chancellor may direct that a Vice Chancellor whose term of of office has expired shall continue in the office for such period not exceeding one year as may be specified in the direction'

ಎಂದರೆ ಹೋಗಪ್ಪ ಹೊಲವನ್ನಲ್ಲಾ ಚೆನ್ನಾಗಿ ಉತ್ಕೊ ಎಂದು ಮೊದಲೇ ಒಂದು ವರ್ಷ ಕೊಟ್ಟು ಬಿಟ್ಟರು. ಅಂದರೆ ಸರ್ಚ್ ಕಮಿಟಿ ಕೊಟ್ಟ ಕಾನೂನನ್ನು ರಿಜೆಕ್ಟ್ ಮಾಡಿ, ಅದೇ ಕಮಿಟಿಯಿಂದ ಇನ್ನೊಂದು ಸರ್ಚ್ ಕಮಿಟಿಯನ್ನು ಫಾರ್ಮೇಷನ್ ಮಾಡುವುದಕ್ಕೆ ಅಧಿಕಾರ ಇದೆ. ಇನ್ನೊಂದು panel ಅನ್ನು ತೆಗೆದುಕೊಳ್ಳುವ ಅಧಿಕಾರ ಇದೆ. ಆ ಫ್ಯಾನಲ್ ತೆಗೆದುಕೊಂಡು ಒಬ್ಬ ಹೊಸ ವ್ಯಕ್ತಿಯನ್ನು ಅಪಾಯಿಂಟ್ ಮಾಡುವವರೆಗೆ ಅವರಿಗೆ ಕೊಟ್ಟಿದ್ದಿದ್ದರೆ ಯಾವುದೇ ಸಂಶಯಕ್ಕೆ ಎಡೆ ಇರುತ್ತಿರಲಲ್ಲ. ಆದರೆ ಆ ರೀತಿಯಾಗಿ ಮಾಡಲಿಲ್ಲ. ಏಕಾ ಏಕಿ ನಾಲ್ಕು ಜನರ ಹೆಸರನ್ನು ಟಿಕ್ ಮಾಡಿ, ಒಂದು ವರ್ಷ ಇದ್ದುಕೂಂಡು ಹೋಗಪ್ಪ ಎಂದು ಕೊಟ್ಟುಬಿಟ್ಟರು. ಆದರೆ ಅದರ ಪ್ರತಿಫಲ ಏನಾಗಿದೆ ಎಂದರೆ, ಯೂನಿವರ್ಸಿಟಿಯಿಂದ ನಿವೃತ್ತಿಯಾಗುವುದಕ್ಕೆ ಮೂರು ತಿಂಗಳ ಕೊನೆಯ ಭಾಗದಲ್ಲಿ ಅವರು ಸಂದರ್ಶನಕ್ಕೆ ಕರೆದರು. ಈ ವಿಶ್ವವಿದ್ಯಾನಿಲಯವು 1995ನೇ ಇಸವಿಯಲ್ಲಿ ಪ್ರಾರಂಭವಾಗಿರುವಂಥದ್ದು. It was one of the prestigious and world class Universities. ನಮ್ಮ ಕರ್ನಾಟಕ ರಾಜ್ಯದಲ್ಲಿಯೇ. ಅದು ಬಹಳ ಪ್ರತಿಷ್ಠಿತವಾದಂತಹ ವಿಶ್ವ ವಿದ್ಯಾನಿಲಯವಾಗಿದೆ. ಇದುವರೆಗೂ ಕೂಡ ಒಂದು ನೇಮಕಾತಿ ಕೂಡ ಆಗಿಲ್ಲ.

ಮೊದಲನೆಯ ಸಲ ಈ ರೀತಿಯಾಗುತ್ತಿದೆ. ಶ್ರೀ ಮಹೇಶಪ್ಪನವರು ಹೋಗುವುದಕ್ಕೆ ಮುಂಚೆ ಇದನ್ನು ಪ್ರಾರಂಭ ಮಾಡಿದರು. ಮೊದಲು ಶ್ರೀ ಆರ್.ವಿ. ದೇಶಪಾಂಡೆಯವರು ಸಂದರ್ಶನವನ್ನು ನಿಲ್ಲಿಸಬೇಡಿ ಎಂದು ಹೇಳಿದರು. ಅನಂತರ ಅದರ ಬಗ್ಗೆ ದೂರುಗಳು ಬಂದಾಗ ಸಂದರ್ಶನವನ್ನು ನಿಲ್ಲಿಸಿದ್ದರು. ಆದರೆ ಎರಡನೆ ಸಾರಿ ಅವರ ಅಧಿಕಾರವಧಿಯನ್ನು ಮುಂದುವರೆಸಿದ ಮೇಲೆ 2ನೇ ತಾರೀಖು assume ಮಾಡಿಕೊಂಡಿದ್ದು 10ನೇ ತಾರೀಖಿನಿಂದ ಸಂದರ್ಶನ ನಡೆಯುತ್ತಿದೆ. ಇವತ್ತು 17ನೇ ತಾರೀಖು ಆಗಿದೆ. ಅಲ್ಲಿಂದ ನಿರಂತರವಾಗಿ ಸಂದರ್ಶನ ನಡೆಯುತ್ತಿದೆ. ಒಬ್ಬ ಅಭ್ಯರ್ಥಿಗೆ ಎರಡು ನಿಮಿಷಗಳ ಕಾಲ ಸಂದರ್ಶನವನ್ನು ಮಾಡುತ್ತಿದ್ದಾರೆ. ಅದೇ ಕಮಿಟಿ ಅವರೇ ಶ್ರೀ ಡಿ.ಹೆಚ್.ರಾವ್ ಇದ್ದಾರೆ. ದುಡ್ಡನ್ನು ವಸೂಲು ಮಾಡುವುದಕ್ಕೆ ಎಲ್ಲಾ ಕಂದಾಯ ವಿಭಾಗಗಳಲ್ಲಿ ಏಜೆಂಟರುಗಳನ್ನು ಅಪಾಯಿಂಟ್ ಮಾಡಿದ್ದಾರೆ. ಅವರುಗಳು ಯಾರು ಎಂದರೆ, ಅವರ ಹತ್ತಿರ ಯಾರು ಸ್ಪೇಷಲ್ ಆಫೀಸರ್ ಆಗಿ ಕೆಲಸವನ್ನು ಮಾಡುತ್ತಿದ್ದರು, ಅವರುಗಳೆ ಏಜೆಂಟರುಗಳಿದ್ದಾರೆ ಅವರ ಹೆಸರುಗಳು ಕೂಡ ಇದೆ. ತಾವು ಅನುಮತಿಯನ್ನು ಕೊಟ್ಟರ ಅವರುಗಳ ಹೆಸರನ್ನು ಕೂಡ ಹೇಳುತ್ತೇನೆ.

**ಶ್ರೀ ಪುಟ್ಟಣ್ಣ:–** ಮಾನ್ಯ ಸಭಾಪತಿಯವರೆ, ಇದು. ಬಹಳ ಮಹತ್ವವಾದಂತಹ ವಿಷಯವಾಗಿರುವುದರಿಂದ ಎಲ್ಲರೂ ಮಾತನಾಡುವುದಕ್ಕೆ ಅವಕಾಶವನ್ನು ಕೊಡಿ. ಜೊತೆಗೆ ಏಜೆಂಟರಾಗಿ ಯಾರು ಕೆಲಸ ಮಾಡುತ್ತಿದ್ದಾರೆಂದು ಶ್ರೀ ವೈ.ಎ.ನಾರಾಯಣಸ್ವಾಮಿಯವರು ಹಿಸರಗಳನ್ನು ಹೇಳುವುದಕ್ಕೆ ತಮ್ಮ ಅನುಮತಿಯನ್ನು ಕೇಳುತ್ತಿದಾರೆ, ಅವರುಗಳ ಹಸರನ್ನು ಹೇಳುವುದಕ್ಕೆ ಅವಕಾಶವನ್ನು ಕೊಡಬೇಕು.

**ಉಪ ಸಭಾಪತಿಯವರು:–** ಆದರೆ ಬೇಗ ಮುಗಿಸಬೇಕು.

**ಶ್ರೀ ಅರುಣ್ ಶಹಾಪುರ:–** ಮಾನ್ಯ ಸಭಾಪತಿಯವರೆ, ಇದು. ಬಹಳ ಮುಖ್ಯವಾದಂತಹ ವಿಷಯವಾಗಿರುವುದರಿಂದ ನನ್ನ ಸಮಯವನ್ನು ಕೂಡ ಶ್ರೀ ವೈ.ಎ.ನಾರಾಯಣಸ್ವಾಮಿಯವರಿಗೆ ಕೊಡಿ.

**ಶ್ರೀ ವೈ.ಎ.ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೆ, ನಾನು ಏಕೆ ಹೇಳುತ್ತಿದ್ದೇನೆಂದರೆ, it is a serious allegation ಅಭ್ಯರ್ಥಿಗಳನ್ನು ಹುಡುಕಾಡಿ ಅವರುಗಳನ್ನು ಕರೆದುಕೊಂಡು ಬರುತ್ತಾರೆ. ಡಾ:ಎ.ಹೆಚ್. ಶಿವಯೋಗಿಸ್ವಾಮಿಯವರು 15 ಲಕ್ಷ ರೂಪಾಯಿಗಳ ಹಣವನ್ನು ಕೇಳಿದ್ದಾ ರೆಂದು ಹೇಳಿದರು. ಪಾಪ ಅವರಿಗೆ ಒಂದೇ ಒಂದು ಮಾಹಿತಿ ಬಂದಿರು ವುದು. ನಿಮ್ಮ ಕ್ಷೇತ್ರದ UBDT Engineering College ಕಾಲೇಜಿಗೆ ಪ್ರಾಂಶುಪಾಲರನ್ನು ಅಪಾಯಿಂಟ್ ಮಾಡುವುದಕ್ಕೆ 35 ಲಕ್ಷ ರೂಪಾಯಿಗಳನ್ನು ಕೇಳಿದ್ದಾರೆ. ಶ್ರೀ ಯೋಗನಂದ ಎಂದು ಇದ್ದಾರೆ ಇವರು he was a Special Officer at VTU earlier. Now, he is a teaching member. He wanted to become Assistant Professor ಅಲ್ಲಿಯೇ. ಎರಡನೆಯವರು ಶ್ರೀ ರಮೇಶ್ ಗೌಡ ಎಂದು ಸ್ಪೇಷಲ್ ಆಫೀಸರ್ ಆಗಿ ಮೈಸೂರಿನಲ್ಲಿದ್ದರು. ಮೂರನೆ ಯವರು ಬಳ್ಳಾರಿ ಎಂದು he is P.A. to Vice Chancellor ಆಮೇಲೆ ಇದೇ ಶ್ರೀ ಡಿ.ಹೆಚ್.ರಾವ್. ಈ ನಾಲ್ಕು ಜನಗಳು. ಬೇಕಾದರೆ ಇವರುಗಳನ್ನು ಮಂಪರು ಪರೀಕ್ಷೆಗೆ ಒಳಪಡಿಸಿದರೆ ಎಲ್ಲಾ ವಿಷಯಗಳು ಹೊರಗಡೆ ಬಂದು ಬಿಡುತ್ತದೆ. ಇದು ಕೆಪಿಎಸ್‌ಸಿ ಹಗರಣಕ್ಕಿಂತಲೂ ಬಹಳ ದೊಡ್ಡ ಹಗರಣ ವಾಗಿದೆ. ದಯವಿಟ್ಟು ತಮ್ಮ ಮುಖಾಂತರ ಸಚಿವರನ್ನು ಕೈ ಮುಗಿದು ಕೇಳಿ ಕೊಳ್ಳುತ್ತೇನೆ. ಈಗ ಕೇಂದ್ರ ಸರ್ಕಾರದವರು ಭಾರತ ಸಂವಿಧಾನದ ಪರಿಚ್ಛೇದ 317 ಜೆ ಕೊಡುಗೆಯನ್ನು ಕೊಡಲಾಗಿದೆ. ಆ ಭಾಗದ ಜನರಿಗೆ ಅನುಕೂಲ ವಾಗಬೇಕೆಂದು ನಾವು ನೀವು ಎಲ್ಲರೂ ಸೇರಿ ಯಾವುದೇ ಹುದ್ದೆಗಳನ್ನು ತುಂಬಬಾರದೆಂದು ಆಗ್ರಹ ಮಾಡುತ್ತಿದ್ದೇವೆ. ಮಾನ್ಯ ಸಚಿವರು ರಾಯಚೂರು ಕೃಷಿ ವಿಶ್ವವಿದ್ಯಾನಿಲಯದಲ್ಲ ನಡೆಯಬೇಕಾದಂತಹ ಅಪಾಯಿಂಟ್‌ಮೆಂಟ್‌ನ್ನು ನಿಲ್ಲಿಸಲಾಗಿದೆ. ಬೆಳಗಾಂನಲ್ಲಿ ಹುದ್ದೆಗಳನ್ನು ತುಂಬಬೇಕಾಗಿರುವುದನ್ನು ನಿಲ್ಲಿಸ ಲಾಗಿದೆ. ಅರಣ್ಯ ಇಲಾಖೆಯಲ್ಲಿ ಏನು ಸಂದರ್ಶನವನ್ನು ನಡೆಸಬೇಕಾಗಿತ್ತು ಅದನ್ನು ಕೂಡ ಮುಂದಕ್ಕೆ ಹಾಕಲಾಗಿದೆ. ದಯವಿಟು ತಮ್ಮ ಮುಖಾಂತರ ಸರ್ಕಾರಕ್ಕೆ ಕೈ ಮುಗಿದು ಕೇಳಿಕೊಳ್ಳುವುದೇನೆಂದರೆ, ಮೊದಲನೆಯದಾಗಿ, ಅವರ ಉದ್ದೇಶ ಏನೆಂದರೆ, ಸಂದರ್ಶನ ನಡೆದು ಸೆಲೆಕ್ಟ್ ಆದ ಅಭ್ಯರ್ಥಿಗಳ

ಹೆಸರು ಲಕೋಟಿಗೆ ಅವರ ಹೆಸರುಗಳು ಹೋಗಿಬಿಡಲಿ. ಅಷ್ಟಕ್ಕೆ ಇವರ ಕಥೆ ಮುಗಿಯಿತು. ಆಮೇಲೆ ಅದನ್ನು ನೀವು ನಿಲ್ಲಿಸಲಿ ಅಥವಾ ಬಿಡಲಿ ಇನ್ನು ಯಾರು ಬಂದರೂ ಕೂಡ ನನ್ನ ಕೆಲಸ ಮುಗಿದುಹಹೋಗಿದೆಯಪ್ಪ ಹಣ ತೆಗೆದುಕೊಂಡು ಬಿಟ್ಟಿದ್ದೇನೆ, no repayment ಎಂದು ಹೇಳುತ್ತಾರೆ. ಏಕೆಂದರೆ ಹೆಸರನ್ನು ಲಕೋಟೆ ಒಳಗಡೆಗೆ ಹಾಕಿಬಿಟ್ಟಿದ್ದೇವೆ ಇನ್ನು ಅದನ್ನು ತೆರೆಯುವುದು ಒಂದೇ ಬಾಕಿ. ನಂತರ ಯಾರದರು V.C., ಬಂದು ಸಿಂಡಿಕೇಟ್ ಮೀಟಿಂಗ್‌ನಲ್ಲಿಟ್ಟು ಲಕೋಟಿಯನ್ನು ಓಪನ್ ಮಾಡಿದರೆ ಕೆಲಸ ಸಿಕ್ಕಿಬಿಡುತ್ತದೆ. ಈ ರೀತಿಯಾಗಿ ಹೇಳಿ ಈ ಸ್ಕೀಂ ಅನ್ನು ಮಾಡುತ್ತಿದ್ದಾರೆ. 10ನೇ ತಾರೀಖಿನಿಂದ ಇವತ್ತಿನವರೆಗೆ ಸುಮಾರು 250 ಅಭ್ಯರ್ಥಿಗಳನ್ನು ಸಂದರ್ಶನ ಮಾಡಿದ್ದಾರೆ. ಸರ್ಕಾರದಿಂದ ಸಂದರ್ಶನವನ್ನು ನಿಲ್ಲಿಸದೇ ಇದ್ದರೆ ಎಲ್ಲಾ ಅಭ್ಯರ್ಥಿಗಳನ್ನು ಸಂದರ್ಶನ ಮಾಡಿ ಆಯ್ಕೆಯಾದವರ ಹೆಸರುಗಳನ್ನು ಲಕೋಟೆಗೆ ಹಾಕಿ ಸೀಲ್ ಮಾಡಿ, ಆ ಯೂನಿವರ್ಸಿಟಿಯ fate ನ್ನು seize ಮಾಡಿ ಮನೆಗೆ ಹೊರಟು ಹೋಗುತ್ತಾರೆ. ಆದ್ದರಿಂದ ತಮ್ಮ ಮುಖಾಂತರ ಮಾನ್ಯ ಸಚಿವರಲ್ಲಿ ಮನವಿ ಮಾಡುವದೇನೆಂದರೆ, ತಾವು ನಾಳೆ ದಿವಸ ದಿಂದಲೇ ಸಂದರ್ಶನ ಮಾಡುವುದನ್ನು ನಿಲ್ಲಿಸಬೇಕು. ಮಾನ್ಯ ಸಚಿವರಾದ ಶ್ರೀ ಆರ್.ವಿ.ದೇಶಪಾಂಡೆಜೀ ಯವರು ಕೊಟ್ಟಿರುವಂತಹ ಲಿಖಿತ ಉತ್ತರ ಬಹಳ ಚೆನ್ನಾಗಿದೆ. ಒಂದು fact ಅನ್ನೂ ಸಹ hide ಮಾಡದೇ ಎಲ್ಲವನ್ನು ಹೇಳಿದ್ದಾರೆ. ಅದೇ ರೀತಿಯಲ್ಲಿ ಇವತ್ತಿನ ದಿವಸವೇ ಅವರಿಗೆ ಸಂದರ್ಶನವನ್ನು ನಿಲ್ಲಿಸುವುದಕ್ಕೆ ನಿರ್ದೇಶನವನ್ನು ಕೊಡಬೇಕಾಗಿದೆ. ಮತ್ತು ಈ ಸಂಬಂಧ ಏನೇನು ಕುಲಪತಿಗಳು ಮಾಡಿರುವಂತಹ ಅವ್ಯವಹಾರಗಳು, ಅನಾಚಾರಗಳು, ಕರ್ಮಕಾಂಡಗಳು ಎಲ್ಲವನ್ನೂ CID enquire ಯನ್ನು ಮಾಡಿಸುತ್ತೀರೋ ಅಥವಾ ಯಾವ ರೀತಿಯಾಗಿ ತನಿಖೆಯನ್ನು ಮಾಡಿಸುವುದಕ್ಕೆ provision ಇದೆಯೋ ನನಗೆ ಗೊತ್ತಿಲ್ಲ. ದಯವಿಟ್ಟು provision ಗೆ ಅನುಗುಣವಾಗಿ ಒಂದು Enquiry Committee ಯನ್ನು ನೇಮಕ ಮಾಡಿ, ಈ ಎಲ್ಲವನ್ನು ಭೇದಿಸಿ ಆ ಯೂನಿವರ್ಸಿಟಿಯ ಗೌರವವನ್ನು ಕಾಪಾಡಬೇಕೆಂದು ತಮ್ಮ ಮುಖಾಂತರ ಸರ್ಕಾರವನ್ನು ಕೇಳಿಕೊಳ್ಳುತಿದ್ದೇನೆ.

**ಶ್ರೀ ಅಮರನಾಥ ಪಾಟೀಲ್(ಶಿಕ್ಷಕರ ಕ್ಷೇತ್ರ):–** ಮಾನ್ಯ ಸಭಾಪತಿಯವರೆ, ಆ ಭಾಗದಲ್ಲ ಹಲವಾರು ವರ್ಷಗಳಿಂದ ಆ ಭಾಗದ ಎಲ್ಲಾ ಪಕ್ಷದ ಮುಖಂಡರುಗಳು ಪಕ್ಷಾತೀತವಾಗಿ ಹೋರಾಟ ಮಾಡಿ ಫಲವಾಗಿ 60 ವರ್ಷಗಳ ನಂತರ ಹೈದರಾಬಾದ್ ಕರ್ನಾಟಕಕ್ಕೆ 371 ಜೆ ಗೆ ಕೇಂದ್ರ ಸರ್ಕಾರ ತಿದ್ದುಪಡಿಯನ್ನು ತಗೆದುಕೊಂಡು ಬಂದಿದೆ. ಅದುದರಿಂದ ಇಲ್ಲಿ ಈ ವಿಷಯದ ಬಗ್ಗೆ ಮಾತನಾಡುವುದಕ್ಕೆ ದಯಮಾಡಿ 5 ನಿಮಿಷ ಸಮಯಾವಕಾಶವನ್ನು ಕೊಡಬೇಕು. ಕೇಂದ್ರ ಸರ್ಕಾರ ಇರಬಹುದು, ರಾಜ್ಯ ಸರ್ಕಾರ ಇರಬಹುದು ಇವತ್ತಿನ ದಿವಸ ಹೈದರಾಬಾದ್ ಕರ್ನಾಟಕಕ್ಕೆ ವಿಶೇಷ ಸ್ಥಾನಮಾನವವನು ಕೊಟ್ಟಿದೆ. ಈಗಾಗಲೇ ಆ ಭಾಗದ ಜನರು ಹಲವಾರು ಅವಕಾಶಗಳನ್ನು ಕಳೆದುಕೊಳ್ಳುತ್ತಿದ್ದಾರೆ. ಉದಾಹರಣೆಗೆ ಸಿಇಟಿ ಪರೀಕ್ಷೆಗಳು ಹಲವಾರು ಕಾಲೇಜುಗಳ ಪ್ರವೇಶ ಏನು ನಡೆಯುತ್ತಿದೆ ಅದನ್ನು ಕಳೆದುಕೊಂಡಿದ್ದೇವೆ. ಏಕೆಂದರೆ ರಾಜ್ಯ ಸರ್ಕಾರ ಶ್ರೀ ಹೆಚ್.ಕೆ.ಪಾಟೀಲ್‌ರವರ ನೇತೃತ್ವದ ಒಂದು. ಉಪ ಸಮಿತಿ ಮಾಡಲಾಗಿತ್ತು. ನಾವು ಶ್ರೀ ಹೆಚ್.ಕೆ. ಪಾಟೀಲ್‌ರವರನ್ನು ಹೆಚ್.ಕೆ. ಎಂದರೆ ಹೈದರಾಬಾದ್ ಕರ್ನಾಟಕ ಪಾಟೀಲ್ ರವರು ಉಪ ಸಮಿತಿಯ ಅಧ್ಯಕ್ಷರಾಗಿದ್ದಾರೆ ನಮಗೆ ನ್ಯಾಯ ಒದಗಿಸಿಕೊಡುತ್ತಾರೆ ಮತ್ತು ಇವತ್ತು ಒಳ್ಳೆ ರೀತಿಯಿಂದ ಈ ಒಂದು ನಿಯಮಾವಳಿಯನ್ನು ರೂಪಿಸಿ ಆ ಭಾಗದ ಯುವಕರಿಗೆ. ಪದವೀದರರಿಗೆ. ಸಿಗಬೇಕಾದಂತಹ ನ್ಯಾಯವನ್ನು ಒದಗಿಸಿಕೊಡುತ್ತಾರೆಂಬ ವಿಶ್ವಾಸ ಮತ್ತು ಭರವಸೆ ಸರ್ಕಾರದ ಮೇಲೆ ನಮಗಿದೆ. ಆ ನಿಟ್ಟಿನಲ್ಲ ಈಗಾಗಲೇ ಶ್ರೀ ಹೆಚ್ ಕೆ.ಪಾಟೀಲ್‌ರವರ ಉಪ ಸಮಿತಿಯು ಹಲವಾರು series of meetings ಮಾಡಿದೆ. ಇಲ್ಲಿಯ ಎಲ್ಲಾ ಆರು ಜಿಲ್ಲೆಗಳಿಗೆ ಹೋಗಿ ಆ ಜಿಲ್ಲೆಯ ಶಾಸಕರುಗಳ. ಅಲ್ಲಿಯ ಮುಖಂಡರ, ಹೋರಾಟಗಾರರ ಅನಿಸಿಕೆಗಳನ್ನು ಮತ್ತು ಭಾವನೆಗಳನ್ನು ತಿಳಿದುಕೊಂಡು, ನಿಯಮಾವಳಿಗಳನ್ನು ರೂಪಿಸಿ. 371 ಜೆ ಜಾರಿಗೆ ಬರುವವರೆಗೆ ಯಾವುದೇ ನೇಮಕಾತಿಗಳನ್ನು ಮಾಡುವುದಿಲ್ಲವೆಂದು ಸರ್ಕಾರದ ಒಂದು ಅದೇಶವನ್ನು ಕೊಟ್ಟಿರುವುದು ತಮಗೆಲ್ಲರಿಗೂ ತಿಳಿದಿದೆ. ಈಗಾಗಲೇ ನೆನ್ನೆಯ ದಿವಸ ವಿಧಾನ ಸಭೆಯಲ್ಲಿ ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ

ಸಿದ್ದರಾಮಯ್ಯನವರು ಮತ್ತು ಕಾನೂನು ಸಚಿವರು ಕೂಡ ಈ ಭಾಗದಲ್ಲಿ ಮೀಸಲಾತಿ ನಿಗದಿಯಾಗುವವರೆಗೆ ನೇಮಕಾತಿಯನ್ನು ತಡೆಹಿಡಿಯಲಾಗುವುದೆಂದು ತಿಳಿಸಿದ್ದಾರೆ. ಇದರ ಹೊರತಾಗಿಯೂ ಕೂಡ ಈ ರೀತಿಯಾದಂತಹ ಭಾರೀ ಭ್ರಷ್ಟಾಚಾರವನ್ನು ಮಾಡುತ್ತಿದ್ದಾರೆ. ಇದರ ಬಗ್ಗೆ ಸರ್ಕಾರ ಕ್ರಮವನ್ನು ಕೈಗೊಳ್ಳದೇ ಇದ್ದರೆ ಆ ಭಾಗದ ಜನರು ಇಷ್ಟು ದಿವಸ ಕಂಡಂತಹ ಕನಸಿಗೆ ಮಣ್ಣು ಎರಚಿದಂತಾಗುತ್ತದೆ ಮತ್ತು ಘೋರ ಅನ್ಯಾಯವಾಗುತ್ತದೆ ಎನ್ನುವಂತಹ ಮಾತನ್ನು ತಮ್ಮ ಮುಖಾಂತರ ಸರ್ಕಾರಕ್ಕೆ ಹೇಳುತ್ತಾ ಮಾನ್ಯ ಉನ್ನತ ಶಿಕ್ಷಣ ಸಚಿವರಿಗೆ ಮತ್ತು ಸರ್ಕಾರಕ್ಕೆ ಮನವಿ ಮಾಡಿಕೊಳ್ಳುವುದೇನೆಂದರೆ, 371 ಜೆ ಜಾರಿಯಾಗುವವರೆಗೂ ಹೈದರಾಬಾದ್ ಕರ್ನಾಟಕ ಭಾಗದ ಪದವೀಧರರ ಮತ್ತು ಯುವಕರ ಕಳಕಳಿಯ ದೃಷ್ಟಿಯಿಂದ ದಯವಿಟ್ಟು ಈ ನೇಮಕಾತಿ ಪ್ರಕ್ರಿಯೆಯನ್ನು ತಕ್ಷಣ ತಡೆಹಿಡಿಯಬೇಕು. ಈ ಪ್ರತಿಕ್ರಿಯೆ ಮುಂದುವರೆಯದಂತೆ ಸರ್ಕಾರ ನೋಡಿಕೊಳ್ಳಬೇಕೆಂದು ಹೇಳುತ್ತಿದ್ದೇನೆ.

**ಶ್ರೀ ಪುಟ್ಟಣ್ಣ(ಶಿಕ್ಷಕರ ಕ್ಷೇತ್ರ):-** ಸನ್ಮಾನ್ಯ ಸಭಾಪತಿಯವರೇ, ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ತಮಗೆ ಧನ್ಯವಾದಗಳು. ಸನ್ಮಾನ್ಯ ಆರ್.ವಿ. ದೇಶಪಾಂಡೆಯವರು ಉನ್ನತ ಶಿಕ್ಷಣ ಸಚಿವರಾದ ಮೇಲೆ ಈ ಇಲಾಖೆಯನ್ನು ಸ್ವಚ್ಛಗೊಳಿಸಿ ಒಳ್ಳೆಯ ಕೆಲಸ ಮಾಡಬೇಕೆಂದು ಪ್ರಾಮಾಣಿಕವಾಗಿ ಮತ್ತು ಪಾರದರ್ಶಕತೆಯಿಂದ ಪ್ರಯತ್ನಗಳನ್ನು ಮಾಡುತ್ತಿದ್ದಾರೆ. ಅದಕ್ಕೆ ನಮ್ಮೆಲ್ಲರ ಸಂಪೂರ್ಣವಾದ ಬೆಂಬಲವಿದೆ, ಏಕೆಂದರೆ. ಅವರು ಮಂತ್ರಿಗಳಾಗಿ ಅಧಿಕಾರ ಸ್ವೀಕಾರ ಮಾಡಿದಂತಹ ಒಂದು ವಾರದಲ್ಲಿಯೇ ನಮ್ಮನ್ನೆಲ್ಲಾ ಕರೆದು ಒಂದು ಸಭೆ ನಡೆಸಿ, ಇಲಾಖೆಯ ಬಗ್ಗೆ ವಿವರಗಳನ್ನೆಲ್ಲಾ ತಿಳಿದುಕೊಂಡು ಇದರಲ್ಲಿ ರತಕ್ಕಂತಹ ಭ್ರಷ್ಟಾಚಾರವನ್ನು ತೊಡೆದುಹಾಕಲೇಬೇಕು ಎನ್ನುವಂತಹ ಒಂದು ದೃಢ ಸಂಕಲ್ಪವನ್ನು ಮಾಡಿರುವುದಾಗಿ ಅವರು ಆ ಸಭೆಯಲ್ಲಿ ತಿಳಿಸಿದರು. ಅದಕ್ಕಾಗಿ ನಾವು ಅವರಿಗೆ ಮೊಟ್ಟ ಮೊದಲನೆಯದಾಗಿ ಅಭಿನಂದನೆಗಳನ್ನು ಸಲ್ಲಿಸುತ್ತೇವೆ.

ಮಾನ್ಯ ಸಭಾಪತಿಯವರೇ, ಕೆಲವು ಮನೆಗಳಲ್ಲಿ 'ಮದ್ದು ಹಾಕುವುದು' ಎನ್ನುವಂತಹ ಒಂದು ಪದ್ಧತಿ ರೂಢಿಯಲ್ಲಿದೆಯಂತೆ. ಮದ್ದು ಹಾಕಲು ಅವ

ರಿಗೆ ಯಾರೂ ಸಿಗದಿದ್ದರೆ ಕಡೆಗೆ ಮನೆಯವರಿಗೇ ಹಾಕಿಬಿಡುತ್ತಾರಂತೆ. ಆ ರೀತಿಯಾಗಿ. ನಮ್ಮ ವಿಶ್ವವಿದ್ಯಾಲಯಗಳ ಜವಾಬ್ದಾರಿಯನ್ನು ಹೊತ್ತುಕೊಂಡು, ಅದರ ಗುಣಮಟ್ಟವನ್ನು ಕಾಪಾಡಿಕೊಂಡು ವಿದ್ಯಾರ್ಥಿಗಳಿಗೆ ನ್ಯಾಯವನ್ನು ಒದಗಿಸಬೇಕಾದಂತಹ, ಸರ್ಕಾರಕ್ಕೆ ಸಲಹೆ–ಸೂಚನೆಗಳನ್ನು ಕೊಡಬೇಕಾ ದಂತಹ ಕುಲಾಧಿಪತಿಗಳೇ 'ಮದ್ದು' ಅಂದರೆ ವಿಷವನ್ನು ಹಾಕುತ್ತಿದ್ದಾರೆ ಎನ್ನು ವಂತಹ ವಿಚಾರವನ್ನು ನಾನು ನೇರವಾಗಿ ತಿಳಿಸಬಯಸುತ್ತಿದ್ದೇನೆ. ಅಲ್ಲಿ ಏನಾ ಗಿದೆ ಎಂದರೆ, ಕಳೆದ 3 ವರ್ಷಗಳಲ್ಲಿ ಸುಮಾರು 250 ರಿಂದ 300 ಕೋಟಿ ರೂಪಾಯಿಗಳಷ್ಟು ಕಾಮಗಾರಿಗಳು ನಡೆದಿವೆ. ಯಾವುದೇ KTPP (Karnataka Transparency in Public Procurements) Act ನ್ನು ಇದರಲ್ಲಿ ಅನುಸರಿಸಿರುವುದಿಲ್ಲ. ಈ ಕಾಮಗಾರಿಗಳಿಗೆ ಯಾವುದೇ ಟೆಂಡರ್ ಪ್ರಕ್ರಿಯೆ ನಡೆದಿಲ್ಲ. ಅವಲ್ಲವನ್ನೂ ಗೋಲ್‌ಮಾಲ್ ಮಾಡಿ ಮಾಡಿದ್ದಾರೆ.

**ಉಪ ಸಭಾಪತಿಯವರು:–** ಈಗ ಸಂಜೆ ಆರೂವರೆ ಗಂಟೆಗೆ ಕ್ಯಾಬಿನೆಟ್ ಮೀಟಿಂಗ್ ಇರುವುದರಿಂದ ತಾವು ಆದಷ್ಟೂ ಮುಖ್ಯವಾದ ವಿಷಯಗಳ ಬಗ್ಗೆ ಪ್ರಸ್ತಾಪ ಮಾಡಿ ಮುಗಿಸುವುದು ಒಳ್ಳೆಯದು. ಈಗಾಗಲೇ ಮಾತನಾಡಿರುವಂತಹ ಮಾನ್ಯ ಸದಸ್ಯರು ಬಹಳಷ್ಟು ವಿಷಯಗಳನ್ನು ಸಚಿವರ ಗಮನಕ್ಕೆ ತಂದಿದ್ದಾರೆ. ಆದ್ದರಿಂದ ಈ ವಿಚಾರವಾಗಿ ಇವೊತ್ತೇ ಮಾನ್ಯ ಸಚಿವರು ಉತ್ತರ ಕೊಡಲಿದ್ದಾರೆ.

**ಶ್ರೀ ಪುಟ್ಟಣ್ಣ:–** ಮಾನ್ವ ಸಭಾಪತಿಯವರೇ, ಇಲ್ಲಿ ಏನಾಗಿದೆ. ಎಂದರೆ, ನಾವೆಲ್ಲರೂ ಮಹೇಶಪ್ಪ ಎಂಬುವವರನ್ನು ಎಳೆದಾಡುತ್ತಿದ್ದೇವೆ. ಇಲ್ಲಿ ಮಹೇ ಶಪ್ಪ ಮುಖ್ಯವಲ್ಲ, ಏಕೆಂದರೆ ಅವರು ಇವೊತ್ತಿರುತ್ತಾರೆ, ನಾಳೆ ಹೋಗುತ್ತಾರೆ. ಆದರೆ ಮಹೇಶಪ್ಪ ಇಂತಹವರು ಎಂದು ತಿಳಿದ ಮೇಲೆ ಕೂಡ ಏನು ನೇಮಕಾತಿಗಳನ್ನು ಮಾಡುತ್ತಿದ್ದಾರೆ. ಅವರು ಎಂತಹವರು ಎಂದು ನಾನು ಕೇಳುತ್ತಿದ್ದೇನೆ. ಅವರಿಗೆ ಏನೂ ಇಲ್ಲವೇ? ಒಂದೊಂದು ಎಶ್ವವಿದ್ಯಾಲಯದ ವೈಸ್ ಛಾನ್ಸಲರ್‌ಗಳ ನೇಮಕಕ್ಕೆ ಐದೈದು ಕೋಟಿ, ಏಜೆಂಟ್‌ಗಳು ಗವರ್ನರ್ ಆಫೀಸ್‌ನಲ್ಲಿ, ಗವರ್ನರ್‌ವರ ಕಛೇರಿಯಲ್ಲಿಯೇ ಏಜೆಂಟ್‌ಗಳು. ಏನೋ

ರಾಜ್ಯ ಸರ್ಕಾರದಲ್ಲಿ ಮಂತ್ರಿಗಳೋ, ಇನ್ನೊಬ್ಬರೋ ತೆಗೆದುಕೊಳ್ಳುವುದಲ್ಲ, ಅವರು ಮಾಡುವುದಲ್ಲ.

**ಶ್ರೀ ಆರ್.ವಿ.ದೇಶಪಾಂಡೆ(ಉನ್ನತ ಶಿಕ್ಷಣ ಸಚಿವರು):–** ಮಾನ್ಯ ಸಭಾಪತಿಯವರೇ, ಗೌರವಾನ್ವಿತ ರಾಜ್ಯಪಾಲರ ಬಗ್ಗೆ ಈ ರೀತಿ. ಅಪವಾದ ಮಾಡುವುದು ಸರಿಯಲ್ಲ. ಅದು ದಾಖಲೆಗಳಲ್ಲಿ. ಹೋಗಬಾರದು. ಏಕೆಂದರೆ... 15 ದಿವಸಗಳಲ್ಲಿ ಯಾರೂ ಸಾಧನೆ ಮಾಡುವುದಕ್ಕಾಗುವುದಿಲ್ಲ.. ಸನ್ಮಾನ್ಯ ರಾಜ್ಯಪಾಲರ ಬಗ್ಗೆ ಈ ರೀತಿಯಾಗಿ ಮಾತನಾಡುವುದಕ್ಕೆ ಬರುವುದಿಲ್ಲ, ಅವರ ಬಗ್ಗೆ ಈ ರೀತಿಯಾಗಿ ಆಪಾದನೆ ಮಾಡುವುದು ಸರಿಯಲ್ಲ. ಇದನ್ನು ನಾವು ಖಂಡಿಸುತ್ತೇವೆ. ಆದ್ದರಿಂದ ಅವರು ಸನ್ಮಾನ್ಯ ರಾಜ್ಯಪಾಲರ ಬಗ್ಗೆ ಹೇಳಿ ರುವಂತಹ ಮಾತುಗಳನ್ನು ದಯಮಾಡಿ ಕಡತದಿಂದ ವಜಾ ಮಾಡಿಸ ಬೇಕೆಂದು ತಮ್ಮಲ್ಲಿ ವಿನಂತಿಸುತ್ತೇನೆ.

**ಶ್ರೀ ಪುಟ್ಟಣ್ಣ:–** ಹೇಳುತ್ತೇನೆ, ಏಕೆ ಹೇಳಬಾರದು? ನಾನು ಹೇಳುತ್ತೇನೆ, ಏನಾದರಾಗಲಿ ನಾನು ಹೇಳುತ್ತೇನೆ ಸಾಮಿ. ನಾನು ಅವರ ಮೇಲೆ ಹೇಳುತ್ತಿಲ್ಲ, ನಾನು ಏನು ಹೇಳುತ್ತಿದ್ದೇನೆ ಎಂಬುದನ್ನು ತಾವು ದಯಮಾಡಿ ಕಳಿ. ಪೀಠದಲ್ಲಿ ಉಪಸ್ಥಿತರಿರುವ ಮಾನ್ಯ ಉಪ ಸಭಾಪತಿಯವರಿಗೂ ಗೊತ್ತಿದೆ.

**ಶ್ರೀ ಗೋ. ಮಧೂಸೂದನ್ :** ಸನ್ಮಾನ್ಯ ಸಭಾಪತಿಯವರೇ, ಸಭಾ ಪತಿಯವ ಆದೇಶನುಸಾರ ಕಡತದಿಂದ ತೆಗೆದು ಹಾಕಲಾಗಿದೆ.

(ಗೊಂದಲ)

**ಉಪ ಸಭಾಪತಿಯವರು:–** ಇದು ಕಡತಕ್ಕೆ ಹೋಗಬಾರದು, ಇದು ಕಡತಕ್ಕೆ ಹೋಗಬಾರದು.

(ಗೊಂದಲ)

**ಶ್ರೀ ಮತ್ತಿಕಟ್ಟಿ ವೀರಣ್ಣ:–** ಮಾನ್ಯ ಸಭಾಪತಿಯವರೇ, ಮಾನ್ಯ ಮಧು ಸೂದನ್‌ರವರು ಮಾತನಾಡಿದ್ದನ್ನು ಕಡತದಿಂದ ತೆಗೆಸಬೇಕೆಂದು ವಿನಂತಿ ಸುತ್ತೇನೆ.

(ಗೊಂದಲ)

**ಶ್ರೀ ಎಸ್.ಆರ್.ಪಾಟೀಲ್(ಸಭಾನಾಯಕರು):–** ಮಾನ್ಯ ಸಭಾಪತಿ ಯವರೇ, ಇವರು rules of procedure ನ್ನು ಬಿಟ್ಟು ಹೋಗುತ್ತಾರೇನು? Will you go according to rules of procedure? ಇವರು ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯವಿಧಾನ ಹಾಗೂ ನಡವಳಿಕೆಯ ನಿಯಮಗಳಿಗೆ ವಿರುದ್ಧ ವಾಗಿ ಮಾತನಾಡುತ್ತಾರೆಯೇ? Let us go according to rules of procedure.

(ಗೊಂದಲ)

**ಶ್ರೀ ಮತ್ತಿಕಟ್ಟಿ ವೀರಣ್ಣ:–** ಮಾನ್ಯ ಸಭಾಪತಿಯವರೇ, ಮಾನ್ಯ ಮಧು ಸೂದನ್‌ರವರು ಹೇಳಿರುವ ಮಾತನ್ನು ದಯಮಾಡಿ ಕಡತದಿಂದ ತೆಗೆಸ ಬೇಕೆಂದು ವಿನಂತಿಸುತ್ತೇನೆ.

**ಉಪ ಸಭಾಪತಿಯವರು:–** ಅದನ್ನು ಕಡತದಿಂದ ತೆಗೆಯಲು ನಾನು ಈಗಾಗಲೇ ತಿಳಿಸಿದ್ದೇನೆ.

(ಗೊಂದಲ)

**ಶ್ರೀ ಮತ್ತಿಕಟ್ಟಿ ವೀರಣ್ಣ:–** ಕಾಂಗ್ರೆಸ್ ಎಂದಲ್ಲ, ಸಭಾಪತಿಯವ ಆದೇ ಶಾನುಸಾರ ಕಡತದಿಂದ ತೆಗೆದುಹಾಕಲಾಗಿದೆ.

(ಗೊಂದಲ)

**ಶ್ರೀ ಪುಟ್ಟಣ್ಣ:–** ಮಾನ್ಯ ಸಭಾಪತಿಯವರೇ, ನಾನು ಮಾತನಾಡುವುದು ಬೇಡವೆ?

(ಗೊಂದಲ)

**ಉಪ ಸಭಾಪತಿಯವರು:–** ಎಲ್ಲರೂ ಈ ರೀತಿ ಎದ್ದು ನಿಂತು ಮಾತ ನಾಡುವುದು ಸರಿಯಲ್ಲ. ಅದನ್ನು ನಾನು ಈಗಾಗಲೇ ಕಡತದಿಂದ ತೆಗೆಸಿದ್ದೇನೆ, ದಯಮಾಡಿ ಎಲ್ಲರೂ ಕುಳಿತುಕೊಳ್ಳಿ.

**ಶ್ರೀ ಪುಟ್ಟಣ್ಣ:-** ಮಾನ್ಯ ಸಭಾಪತಿಯವರೇ, ಇರುವಂತಹ ವಿಚಾರವನ್ನು ಮಾತನಾಡುವುದು ಬೇಡವೆ ?

**ಉಪ ಸಭಾಪತಿಯವರು:-** ಈಗಾಗಲೇ ನಾನು ಅದನ್ನು ಕಡತದಿಂದ ತೆಗೆಸಿದ್ದೇನೆ.

**ಶ್ರೀ ಎಂ.ಬಿ.ಪಾಟೀಲ್ (ಮಾನ್ಯ ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು):-** ಅದಕ್ಕೆ ಏನಾದರೂ ನಿಮ್ಮಲ್ಲಿ proof ಇದೆಯೇ?

**ಶ್ರೀ ಎಸ್.ಆರ್.ಪಾಟೀಲ್(ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರುನಿಯಮಗಳಿಗೆ ವ್ಯತಿರಿಕ್ತವಾಗಿ ಮಾತನಾಡುತ್ತಿದ್ದಾರೆ. Kindly expunge all those things.

**ಶ್ರೀ ಪುಟ್ಟಣ್ಣ:-** ಮಾನ್ಯ ಸಭಾಪತಿಯವರೇ, proof ಇದೆಯೇ ಎಂದರೆ, ಸಭಾಪತಿಯವರ ಆದೇಶಾನುಸಾರ ಕಡತದಿಂದ ತೆಗೆದು ಹಾಕಲಾಗಿದೆ. ಯಾರು ಮಾಡುತ್ತಾರೆ ಅವರೇನು ವೀಡಿಯೋ ಚಿತ್ರೀಕರಣ ಮಾಡಿಸಿ ಕೊಳ್ಳುತ್ತಾರೆಯೇ? ಮಾನ್ಯ ಸಚಿವರು ಏನು ಮಾತನಾಡುತ್ತಿದ್ದಾರೆ?

**ಶ್ರೀ ಎಂ.ಬಿ.ಪಾಟೀಲ್:-** ನಾಳೆ ನಿಮ್ಮ ಮೇಲೆಯೇ ಈ ರೀತಿಯ ಆರೋಪ ಬಂದರೆ ಏನು ಮಾಡುತ್ತೀರಿ?

**ಶ್ರೀ ಪುಟ್ಟಣ್ಣ:-** ಬರಲಿ ಬಿಡಿ ಸ್ವಾಮಿ, ತನಿಖೆ ಮಾಡಿಸಿ... ನಾನು ತಮ್ಮ ಮೂಲಕ ಸರ್ಕಾರವನ್ನು ಒತ್ತಾಯಪಡಿಸುವುದೇನೆಂದರೆ, ಆದೇಶಾನುಸಾರ ಕಡತದಿಂದ ತೆಗೆದು ಹಾಕಲಾಗಿದೆ ಅದರಲ್ಲಿ ಏನೇನು ನಡೆದಿವೆ ಎನ್ನುವುದರ ಬಗ್ಗೆ ಸಿ.ಬಿ.ಐ. ತನಿಖೆಗೆ ವಹಿಸಿಕೊಡಿ, enquiry ಆಗಲಿ.

**ಉಪ ಸಭಾಪತಿಯವರು:-** ನೀವು ನಿಮ್ಮ ಡಿಮಾಂಡ್ ಏನೆಂಬುದನ್ನು ಹೇಳಿದ್ದೀರಿ, ದಯಮಾಡಿ ಕುಳಿತುಕೊಳ್ಳಿ

**ಶ್ರೀ ಪುಟ್ಟಣ್ಣ:-** ಮಾನ್ಯ ಸಭಾಪತಿಯವರೇ, ಆದೇಶಾನುಸಾರ ಕಡತದಿಂದ ತೆಗೆದು ಹಾಕಲಾಗಿದೆ ಎಂದು ನಾವು ಹೇಳುತ್ತಿದ್ದೇವೆ. ಆದೇಶಾನುಸಾರ ಕಡತದಿಂದ ತೆಗೆದು ಹಾಕಲಾಗಿದೆ ಎನ್ನುವುದು ಮನೆಮಾತಾಗಿದೆ.

ಇದರಲ್ಲಿ ಯಾವುದೇ ಅನುಮಾನವಿಲ್ಲ. ನಾನು ಈ ವಿಚಾರದಲ್ಲಿ ಹೆಚ್ಚು ಮಾತನಾಡುವುದಕ್ಕೆ ಹೋಗುವುದಿಲ್ಲ. ಈ VTU Act ನಲ್ಲಿ ಸರ್ಕಾರಕ್ಕೆ ಹಚ್ಚಿನ ಅಧಿಕಾರವಿಲ್ಲ, ದಯಮಾಡಿ ಮಾನ್ಯ ಮಂತ್ರಿಗಳು ಇದನ್ನೇನಾದರೂ set right ಮಾಡುವುದಾದರೆ ಮಾಡಿ ದಯಮಾಡಿ ಹಿಂದೆ. VTU Act ಗೆ ಏನು ತಿದ್ದು ಪಡಿ ತಂದಿದ್ದಾರೆ ಅದನ್ನಾದರೂ ಅಪ್ರೂವಲ್ ಮಾಡಿಸಬೇಕು. ಇಲ್ಲವಾದರೆ ಮತ್ತೊಮ್ಮೆ VTU Act ಗೆ ತಿದ್ದುಪಡಿ ತರುವ ಮುಖಾಂತರ ಅಧಿಕಾರವನ್ನು ಪಡೆದುಕೊಂಡು, ಅದರ ಮೂಲಕ ಈ ವಿಶ್ವವಿದ್ಯಾಲಯಗಳನ್ನು ಉಳಿಸತಕ್ಕಂತಹ ಕೆಲಸವನ್ನು ಮಾಡಬೇಕಾಗುತ್ತದೆ. ಅದರ ಜೊತೆ ಮತ್ತೊಮ್ಮೆ ನಾನು ಒತ್ತಾಯ ಪಡಿಸುವುದೇನೆಂದರೆ, ದಯಮಾಡಿ ಛಾನ್ಸಲರ್‌ಗಳ ಕಚೇರಿಯಲ್ಲಿ ನಡೆಯುತ್ತಿರುವ ಅವ್ಯವಹಾರಗಳೇನಿವೆ, ಅದು ಸಿಂಡಿಕೇಟ್ ಮೆಂಬರ್‌ಗಳ ನೇಮಕಾತಿಯಲ್ಲಿರಬಹುದು, ಸೆನೆಟ್ ಮೆಂಬರ್‌ಗಳ ನೇಮಕಾತಿಯಲ್ಲಿರಬಹುದು, ವೈಸ್ ಛಾನ್ಸಲರ್‌ನ ನೇಮಕಾತಿಯಲ್ಲಿರಬಹುದು ಅದರಲ್ಲೆಲ್ಲಾ ಏನೇನು ನಡೆದಿದೆ ಇದರ ಬಗ್ಗೆ ಸಿ.ಬಿ.ಐ. ಮುಖಾಂತರ ತನಿಖೆ ಮಾಡಿಸಬೇಕೆಂದು ನಾನು ತಮ್ಮ ಮೂಲಕ ಮತ್ತೊಮ್ಮೆ ಒತ್ತಾಯಪಡಿಸುತ್ತೇನೆ.

**ಶ್ರೀ ಆರ್.ವಿ.ದೇಶಪಾಂಡೆ:–** ಮಾನ್ಯ ಗೌರವಾನ್ವಿತ ರಾಜ್ಯಪಾಲರ ಬಗ್ಗೆ ಕೆಲವು ವಿಚಾರಗಳನ್ನು ಸದನದಲ್ಲಿ ಏನು ಪ್ರಸ್ತಾಪಿಸಲಾಗಿದೆ ಅದು ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯವಿಧಾನ ಮತ್ತು ನಡವಳಿಕೆಯ ನಿಯಮ 306ರ ಪಕಾರ ಕೂಡ ಸರಿಯಾಗುವುದಿಲ್ಲ.

**ಉಪ ಸಭಾಪತಿಯವರು:–** ಅದನ್ನು ಈಗಲೇ ಕಡತದಿಂದ ತೆಗೆಸಲಾಗಿದೆ.

(ಗೊಂದಲ)

**ಶ್ರೀ ಗೋ.ಮಧುಸೂದನ್:–** ಮಾನ್ಯ ಸಭಾಪತಿಯವರೇ, ನಾನು ಆರೋಪ ಮಾಡಿದ್ದು ಕಾಂಗ್ರೆಸ್ ಪಕ್ಷದ ಮೇಲೆ, ರಾಜ್ಯಪಾಲರ ಮೇಲೆ ಅಲ್ಲವೇ ಅಲ್ಲ.

(ಗೊಂದಲ)

**ಶ್ರೀ ಮತ್ತಿಕಟ್ಟಿ ವೀರಣ್ಣ:-** ಮಾನ್ಯ ಸಭಾಪತಿಯವರೇ, ನಾನು ಮಾನ್ಯ ಮಧುಸೂದನ್‌ರವರಿಗೆ ಒಂದು ಮಾತನ್ನು ಹೇಳಬಯಸುತ್ತೇನೆ. ಇವರು ಅತಿವೃಷ್ಟಿಯಾದರೂ ಕಾಂಗ್ರೆಸ್ ಎನ್ನುತ್ತಾರೆ, ಅನಾವೃಷ್ಟಿಯಾದರೂ ಕಾಂಗ್ರೆಸ್ ಎನ್ನುತ್ತಾರೆ. ಹೀಗಾಗಿ. ಅವರು ಒಳ್ಳೆಯದನ್ನು ಕೂಡ ಮಾತನಾಡುವುದನ್ನು ಕಲಿಯಬೇಕೆಂದು ನಾನು ವಿನಂತಿಸುತ್ತೇನೆ.

ಶ್ರೀ ಗೋ.ಮಧುಸೂದನ್:- ನೀವು ಒಳ್ಳೆಯದನ್ನು ಮಾಡುವುದೇ ಇಲ್ಲವಲ್ಲಾ.

(ಗೊಂದಲ)

**ಉಪ ಸಭಾಪತಿಯವರು:-** ಆಯಿತು, ಇವೊತ್ತು ಕ್ಯಾಬಿನೆಟ್ ಮೀಟಂಗ್ ಇದೆ, ದಯಮಾಡಿ ಎಲ್ಲರೂ ಕುಳಿತುಕೊಳ್ಳಿ. ಸನ್ಮಾನ ಸದಸ್ಯರ ಗಮನಕ್ಕೆ ಒಂದು ಅಂಶವನ್ನು ತರಬಯಸುತ್ತೇನೆ. ಅದೇನೆಂದರೆ:

**ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯವಿಧಾನ ಹಾಗೂ ನಡವಳಿಕೆಯ ನಿಯಮ 306(10) ರ ಪ್ರಕಾರ ರಾಷ್ಟಾಧ್ಯಕ್ಷರು ಅಥವಾ ರಾಜ್ಯಪಾಲರ ಅಥವಾ ಯಾವುದೇ ನ್ಯಾಯಾಲಯದ ನಡವಳಿಯನ್ನು ಕುರಿತು ಆರೋಪಿಸತಕ್ಕದ್ದಲ್ಲ ಅಥವಾ ಚರ್ಚೆಯನ್ನು ಪರಿಣಾಮಕಾರಿಯಾಗಿ ಮಾಡುವ ಉದ್ದೇಶಕ್ಕಾಗಿ ರಾಜ್ಯಪಾಲರ ಅಥವಾ ರಾಷ್ಟಾಧ್ಯಕ್ಷರ ಹೆಸರನ್ನು ಬಳಸತಕ್ಕದ್ದಲ್ಲ ;**

ಆದ್ದರಿಂದ ಅದನ್ನು ಕಡತದಿಂದ ತೆಗೆಯಬೇಕೆಂದು ಈಗಾಗಲೇ ತಿಳಿಸಲಾಗಿದೆ.

**ಶ್ರೀ ಪುಟ್ಟಣ್ಣ:-** ಮಾನ್ಯ ಸಭಾಪತಿಯವರೇ, ನಾನು ರಾಜ್ಯಪಾಲರ ಹೆಸರನ್ನು ಹೇಳಿಲ್ಲ. ಆದೇಶಾನುಸಾರ ಕಡತದಿಂದ ತೆಗೆದು ಹಾಕಲಾಗಿದೆ ಎಂದು ಹೇಳಿದ್ದೇನೆ, ಇದು ಒಂದು ವಿಚಾರ. ಇನ್ನು ಎರಡನೆಯದಾಗಿ 'ಕುಲಾಧಿಪತಿಗಳು' ಎಂದು ಹೇಳಿದ್ದೇನೆ, ನಾನು ಇಲ್ಲವೆಂದು ಹೇಳುತ್ತಿಲ್ಲ. 'ಕುಲಾಧಿಪತಿಗಳು' ಎಂದು ಹೇಳಿದ್ದೇನೆ ಎನ್ನುವಂತಹ ವಿಚಾರವನ್ನು ನಾನು ಈಗಲೂ ಹೇಳುತ್ತಿದ್ದೇನೆ.

(ಗೊಂದಲ)

**ಉಪ ಸಭಾಪತಿಯವರು:–** ದಯಮಾಡಿ ಎಲ್ಲರೂ ಕುಳಿತುಕೊಳ್ಳಿ.

**ಶ್ರೀ ಶ್ರೀನಿವಾಸ ಪ್ರಸಾದ್ (ಕಂದಾಯ ಸಚಿವರು):–** ವೈಸ್ ಚಾನ್ಸಲರ್ ಗಳ ನೇಮಕಕ್ಕೆ ಐದೈದು ಕೋಟಿ ರೂಪಾಯಿಗಳನ್ನು ತೆಗೆದುಕೊಂಡಿದ್ದಾರೆ ಎನ್ನುವಂತಹ ವಿಚಾರವನ್ನು ಮಾನ್ಯ ಸದಸ್ಯರು ತಿಳಿಸಿದ್ದಾರೆ.

**ಶ್ರೀ ಪುಟ್ಟಣ್ಣ:–** ಮಾನ್ಯ ಸಭಾಪತಿಯವರೇ, ಅವರು ಬಂದ ಮೇಲೆ ಆಗಿರುವಂತಹ ನೇಮಕಾತಿಗಳೆಲ್ಲವುಗಳ ಬಗ್ಗೆಯೂ ಸಿ.ಬಿ.ಐ. ತನಿಖೆಯಾಗ ಬೇಕೆಂದು ನಾನು ಹೇಳಿದ್ದೇನೆ.

(ಗೊಂದಲ)

**ಉಪ ಸಭಾಪತಿಯವರು:–** ಸದನದ ಗೌರವವನ್ನು ಕಾಪಾಡುವುದು ಇಲ್ಲಿರುವ ಪ್ರತಿಯೊಬ್ಬರ ಕರ್ತವ್ಯವಾಗಿದೆ. ದಯಮಾಡಿ ಎಲ್ಲರೂ ಕುಳಿತು ಕೊಳ್ಳಿ.

**ಶ್ರೀ ಯಂ.ಸಿ.ನಾಣಯ್ಯ:–** ಮಾನ್ಯ ಸಭಾಪತಿಯವರೇ. ನಾವು ಒಂದು ಗಂಭೀರ ಸ್ವರೂಪದ ವಿಚಾರವನ್ನು ಚರ್ಚೆ ಮಾಡುತ್ತಿದ್ದೇವೆ. ಮಾನ್ಯ ಮಂತ್ರಿ ಗಳಿಂದ ನಾವು ಉತ್ತರವನ್ನು ಕೂಡ ಬಯಸುತ್ತಿದ್ದೇವೆ. ಆ ಸಮಸ್ಯೆಗಳಿಗೆ ನಾವು ಪರಿಹಾರಗಳನ್ನು ಪಡೆಯಬೇಕಾಗಿದೆ. ನಾಳೆ ಅಥವಾ ನಾಡಿದ್ದರಿಂದ ಪ್ರಾರಂಭವಾಗುತ್ತಿರತಕ್ಕಂತಹ ನೇಮಕಾತಿಯಲ್ಲಿ ಬಹಳ ದೊಡ್ಡ ಪ್ರಮಾಣದ ಅವ್ಯವಹಾರ ಆಗುತ್ತದೆ ಎಂಬುದನ್ನು ಈಗಾಗಲೇ ಎಲ್ಲ ಪತ್ರಿಕೆಗಳಲ್ಲಿ ವರದಿ ಯಾಗಿರುವಂತಹ ವಿಚಾರದ ಬಗ್ಗೆ ತಾವು ಗಮನ ಹರಿಸಿ. ಆ ವಿಶ್ವವಿದ್ಯಾ ಲಯಗಳ ಪಾವಿತ್ರ್ಯತೆಯನ್ನು ಕಾಪಾಡಬೇಕಾಗಿರತಕ್ಕಂತಹ ಜವಾಬ್ದಾರಿ ಕುಲಪತಿ ಗಳಿಗಿಂತಲೂ ಹೆಚ್ಚಾಗಿ ನಮ್ಮ ಮೇಲೆ ಕೂಡ ಇದೆ ಎಂಬುದನ್ನು ನಾವು ಕೋರ್ಪಡಿಸಬೇಕು. ಈ ಹಿನ್ನೆಲೆಯಲ್ಲಿ ನಾನು ಈ ವಿಚಾರವನ್ನು ಪ್ರಸ್ತಾಪ ಮಾಡಿದ್ದೇನೆ.

ಮಾನ್ಯ ಮಿತ್ರರು ಕೆಲವು ವಿಷಯಗಳನ್ನು ಪ್ರಸ್ತಾಪ ಮಾಡಿದ್ದಾರೆ, ಬಹುಶಃ ಸಾರ್ವಜನಿಕವಾಗಿ ಬರುತ್ತಿರುವಂಥ ಮಾತುಗಳನ್ನು ಈ ಕೆಲವು

ಸಂದರ್ಭದಲ್ಲಿ ನಾವು ಆ ಮಾತುಗಳನ್ನು ಉದ್ಧರಿಸಬೇಕಾಗುತ್ತದೆ. ಉದ್ಧರಿಸ ಬೇಕಾದಂತಹ ಸಂದರ್ಭದಲ್ಲಿ ನಿಯಮಾವಳಿಗಳನ್ನು ಸ್ವಲ್ಪ ಮಟ್ಟಿಗೆ ನಾವೇ ಮನಸ್ಸಿನಲ್ಲಿಟ್ಟುಕೊಂಡು ನಿಯಮಗಳಿಗೆ ಮೀರದಂತೆ ಮಾತನಾಡುವಂತಹ ಅವಕಾಶವೂ ನಮಗಿದೆ. ಅದು ಇಲ್ಲವೆಂದು ಹೇಳುವುದಕ್ಕೆ ಯಾರಿಂದಲೂ ಆಗುವುದಿಲ್ಲ. ಆದುದರಿಂದ ಆ ಕಲಸವನ್ನು ಮಾಡೋಣ. ಈ ಸಂದರ್ಭದಲ್ಲಿ ತಮ್ಮ ಮೂಲಕ ಸರ್ಕಾರವನ್ನು ಕೇಳುವುದೇನೆಂದರೆ, ತಾವು ಉತ್ತರವನ್ನು ಕೊಟ್ಟಿದ್ದೀರಿ, ಕೊಟ್ಟಿರುವಂತಹ ಉತ್ತರದಲ್ಲಿ ಮಾನ್ಯ ಕುಲಪತಿಗಳು ತಮಗೆ ಕಳು ಹಿಸಿರುವಂತಹ ಒಂದು ಪತ್ರವನ್ನು ನಾನು ತಮ್ಮ ಗಮನಕ್ಕೆ ತರಬಯಸುತ್ತೇನೆ. ಅದಕ್ಕಿಂತ ಮೊದಲು 2010ರಲ್ಲಿ ಉಪ ಕುಲಪತಿಗಳನ್ನು ನೇಮಕ ಮಾಡು ತ್ತಾರೆ. ನಂತರ ಸರ್ಕಾರಕ್ಕೆ ಬೇಕಾದಷ್ಟು ದೂರುಗಳನ್ನು ಸಾರ್ವಜನಿಕರು ಮತ್ತು ಸದಸ್ಯರು ತಮಗೆ ಸಲ್ಲಿಸುತ್ತಾರೆ. ಸರ್ಕಾರ ಅದನ್ನು ಬಹಳ ಗಂಭೀರವಾಗಿ ಪರಿಗಣಿಸಿ ನಿಜವಾಗಿಯು ಅದರಲ್ಲಿ ಉರುಳಿದೆ, ಸತ್ಯಾಂಶವಿದೆ ಎಂಬುದನ್ನು ಮನಗಂಡು ಸರ್ಕಾರದವರು ಉಪ ಕುಲಪತಿಗಳಿಗೆ ಒಂದು notice ನ್ನು ಜಾರಿ ಮಾಡಿ ಅವರಿಂದ ವಿವರಣೆಯನ್ನು ಕೇಳಿದ್ದಾರೆ. ಮಾನ್ಯ ಸಭಾಪತಿಯವರೆ, ನಮ್ಮ ಕಾನೂನಿನ ಅಡಿಯಲ್ಲ ಈ ರೀತಿ ಕೇಳುವುದಕ್ಕೆ ಸರ್ಕಾರಕ್ಕೆ ಅಧಿಕಾರ ವಿದೆ. ಈ ಹಿನ್ನಲೆಯಲ್ಲಿ ನಿಮ್ಮ ಮೇಲೆ ಗಂಭೀರ ಸ್ವರೂಪದ ಆರೋಪ ಬಂದಿ ರುವುದರಿಂದ notice ಕಳಿಸಿರುತ್ತೇವೆ ಎಂದು ನೊಟೀಸನ್ನು ಜಾರಿ ಮಾಡು ತ್ತಾರೆ. ಕಳಿಸಿರುವಂತಹ notice ನ್ನು ಅವರು ರಾಜ್ಯ ಉಚ್ಚನ್ಯಾಯಾಲಯದಲ್ಲಿ ಅದನ್ನು writ petition ಮುಖಾಂತರ ಪ್ರತಿಪಾದನೆ ಮಾಡುತ್ತಾರೆ. ರಾಜ್ಯ ಉಚ್ಚನ್ಯಾಯಾಲಯ ಅದಕ್ಕೆ ತಡೆಯಾಜ್ಞೆಯನ್ನು ಕೊಡುತ್ತದೆ. Notice ನ್ನು ಕೊಟ್ಟು ವಿವರಣೆ ಕೇಳಿರುವಂಥದ್ದಕ್ಕೆ ರಾಜ್ಯ ಉಚ್ಚನ್ಯಾಯಾಲಯ ತಡಯಾಜ್ಞೆ ಕೊಡುತ್ತದೆ. ನನಗೆ ಅನ್ನಿಸುತ್ತದೆ ಕೆಲವು ಸಂದರ್ಭದಲ್ಲಿ ರಾಜ್ಯ ಉಚ್ಚ ನ್ಯಾಯಾ ಲಯವು ಈ ರೀತಿಯ ತಡಯಾಜ್ಞೆಗಳನ್ನು ಕೊಡುತ್ತಿರುವಂಥದ್ದು ಬಹಳಷ್ಟು ಸಂದರ್ಭಗಳಲ್ಲಿ ಮಾಮೂಲು ಆಗುತ್ತಿರುವುದನ್ನು ನಾವು ನೋಡು ತ್ತಿದ್ದೇವೆ. ಈ ಮಾತನ್ನು ಹೇಳುವಂತಹ ಅಧಿಕಾರ ನಮಗಿದೆ. ಏಕೆಂದರೆ, ನಾವು ಅವರ ತೀರ್ಪುಗಳನ್ನು ಪ್ರಶ್ನೆ ಮಾಡುತ್ತಿರುವಂಥದ್ದು ಕೆಲವು. ಸಂದರ್ಭಗಳಲ್ಲಿ ಅಂತಹ

ತೀರ್ಪುಗಳನ್ನು ಏತಕ್ಕೋಸ್ಕರ ಕೊಡುತ್ತಾರೋ ನನಗಂತು ಅರ್ಥವಾಗುತ್ತಿಲ್ಲ. ಆದರೆ ರಾಜ್ಯ ಉಚ್ಚನ್ಯಾಯಾಲಯವು ನೀಡಿರುವ ತಡೆ ಯಾಜ್ಞೆ ಮೇಲೆ ಸರ್ಕಾರ ಒಂದು ಮೇಲ್ಮನವಿಯನ್ನು ಸಲ್ಲಿಸುವಂತಹ ಪರಿಸ್ಥಿತಿ ಯನ್ನು ಏಕೆ ನಿರ್ಮಾಣ ಮಾಡಲಿಲ್ಲ ಎಂದು ಗೊತ್ತಿಲ್ಲ. ಆ ರೀತಿಯ ತೀರ್ಪನ್ನು ನ್ಯಾಯಾ ಲಯ ಕೊಟ್ಟಮೇಲೆ ಸರ್ಕಾರದ ಹಿತದೃಷ್ಟಿಯಿಂದ ನೀವೆ ಒಂದು notice ನ್ನು ಕೊಟ್ಟು ವಿವರಣೆ ಕೇಳಿದಾಗ, ಆ ವಿವರಣೆಯನ್ನು ಪಡೆ ಯುವುದಕ್ಕೂ ಸಹ ನಿಮಗೆ ಅಧಿಕಾರ ಇಲ್ಲದಂತಾಯಿತು. ಆದರೆ ಕಾನೂನಿನಲ್ಲಿ ಇದ್ದಂತಹ ಅಧಿಕಾರವನ್ನು ತಡೆಯಾಜ್ಞೆ ಮುಖಾಂತರ ತಡೆಯುವುದಾದರೆ ಅದಕ್ಕೆ ಮೇಲ್ಮನವಿಯನ್ನು ಸಲ್ಲಿಸಬೇಕಾದಂತಹ ಜವಾಬ್ದಾರಿಕೆಯನ್ನು ಸರ್ಕಾರ ಆ ಸಮಯದಲ್ಲಿ ತೆಗೆದುಕೊಳ್ಳಬೇಕಾಗಿತ್ತು. ಆದರೆ ಆ ಸಂದರ್ಭದಲ್ಲಿ ಸರ್ಕಾರ ಆ ಕೆಲಸವನ್ನು ಮಾಡಲಿಲ್ಲ. ಆದು ಸರ್ಕಾರದ ಪಾಲಿಗೆ ಒಂದು ಲೋಪ ವೆಂದು ಹೇಳಬಯಸುತ್ತೇನೆ. ಎರಡನೆಯದಾಗಿ ತಡೆಯಾಜ್ಞೆ ಕೊಟ್ಟ ಮೇಲೆ ಇನ್ನೊ ಬ್ಬರು ಇನ್ನೊಂದು writ ಅರ್ಜಿಯನ್ನು ಸಲ್ಲಿಸುತ್ತಾರೆ ಅದೇ ಉಪ ಕುಲಪತಿ ಯಗಳ ವಿಚಾರದಲ್ಲಿ ಒಂದು judgment ಕೊಡುತ್ತಾರೆ. ಅವರು ಸಲ್ಲಿಸುತ್ತಿರು ವಂಥ certificate ಯಾವುದು ಇದೆ, ಅದು ಸ್ವಲ್ಪ ಮಟ್ಟಿಗೆ ನೈಜತೆ ಇಲ್ಲದಿರು ವಂತಹ certificate ಅಂದರೆ ಅವರಿಗೆ ಪ್ರಥಮದರ್ಜೆ ಸಿಗಬೇಕಾಗಿತ್ತು ಆದರೆ ದ್ವಿತೀಯ ದರ್ಜೆ ಸಿಕ್ಕಿದೆ ಎಂದು ಹೇಳಿದಮೇಲೆ ನ್ಯಾಯಾಲಯ ಇದಕ್ಕೆ ಸಂಬಂಧಪಟ್ಟಂತೆ ಇದರ ಬಗ್ಗೆ ಕುಲಪತಿಗಳು ವಿಚಾರ ಮಾಡಿ ಕ್ರಮವನ್ನು ಕೈಗೊಳ್ಳಬೇಕೆಂಬ ಆದೇಶವನ್ನು ಕೊಡುತ್ತದೆ. ಆ ಆದೇಶ ಬಂದಿರುವಂಥದ್ದು ದಿನಾಂಕ:13/01/2012ರಲ್ಲ. ಅದರಲ್ಲಿ ಅನಿಲ್‌ಕುಮಾರ್ ಎಂಬುವರು. writ ಅರ್ಜಿಯನ್ನು ಕಳಿಸುತ್ತಾರೆ. ಅದರಲ್ಲಿ ಏನು ಹೇಳುತ್ತಾರೆ ಎಂದರೆ,

"Mr. Holla, learned Senior Counsel appearing for Respondent No. 1 states that the Chancellor is quite willing to consider the matter once again in view of the interpretations of the relevant regulations. In these circumstances, the writ petition stands disposed off. The proceedings before this court shall not be

relevant for the Chancellor to arrive at a fresh decision as to whether Respondent No. 4 has obtained First Class or Second Class in the relevant examination"

ಈ ಆದೇಶ ಹೋದಕೂಡಲೆ ನಮ್ಮ Chancellor ದಿನಾಂಕ: 07/05/2012ರಂದು ಇದರ ಬಗ್ಗೆ ತಕ್ಷಣ ಒಂದು enquiry ಗೆ order ಮಾಡಿ ಮಧ್ಯಪ್ರದೇಶದ ಉಚ್ಚ ನ್ಯಾಯಾಲಯದ ನಿವೃತ್ತ ನ್ಯಾಯಾಧೀಶರಾದ Justice Abhay Goel ಅವರ ನೇತೃತ್ವದಲ್ಲಿ ಒಂದು ವಿಚಾರಣಾ ಆಯೋಗವನ್ನು ನೇಮಕ ಮಾಡುತ್ತಾರೆ... ನಂತರ ಅವರಿಗೆ ಒಂದು ಸಮಯವನ್ನು ನಿಗದಿ ಪಡಿಸುತ್ತಾರೆ. ಅಲ್ಲಿಂದ ಪುನಃ ಸಮಯವನ್ನು ನಿಗದಿಪಡಿಸಿ ಮೂರು ತಿಂಗಳು ಹೆಚ್ಚುವರಿ ಮಾಡುತ್ತಾರೆ. ಇಲ್ಲಿ ಪ್ರಶ್ನೆ ಬಂದಿರುವುದು ರಾಜ್ಯಪಾಲರು High Court ಆದೇಶದ ಹಿನ್ನಲೆಯಲ್ಲಿ ಮಧ್ಯಪ್ರದೇಶದ ಉಚ್ಚ ನ್ಯಾಯಾಲಯದ ನಿವೃತ್ತ ನ್ಯಾಯಾಧೀಶರನ್ನು ನೇಮಕ ಮಾಡಿದಮೇಲೆ ಅವರು ಏನು ವರದಿ ಯನ್ನು ಕೊಟ್ಟಿದ್ದಾರೆ ಎಂಬುದು ಇದೂವರೆವಿಗೂ ಸರ್ಕಾರದ ಗಮನಕ್ಕೆ ಬಂದಿಲ್ಲ. ಬಹುಶಃ ಆ ವರದಿ ಬಂದಿದೆಯೋ ಇಲ್ಲವೋ ಎಂಬುದು ಯಾರಿಗೂ ಗೊತ್ತಿಲ್ಲ. ಈ ಹಿನ್ನಲೆಯಲ್ಲಿ ಇಂತಹ ಒಂದು ಪರಿಸ್ಥಿತಿ ಇದ್ದಾಗ ಮಾನ್ಯ ರಾಜ್ಯಪಾಲರೇ ಒಬ್ಬ ನಿವೃತ್ತ ನ್ಯಾಯಾಧೀಶರನ್ನು ತನಿಖೆ ಮಾಡ ಬೇಕೆಂದು ನೇಮಕ ಮಾಡಿ ಆದೇಶ ಮಾಡಿದಮೇಲೆ ಆ ಆದೇಶದಲ್ಲಾಗಲಿ ಅಥವಾ ಆ ವರದಿಯಲ್ಲಿ ಬಂದಿರುವಂತಹ ವಿಚಾರಗಳು ಏನು ಎಂಬುದನ್ನು ಯಾರಿಗೂ ಬಹಿರಂಗಪಡಿಸದೆ. ಪುನಃ ಅದೇ ಒಬ್ಬ ವ್ಯಕ್ತಿಯನ್ನು ಉಪಕುಲಪತಿ ಯನ್ನಾಗಿ ನೇಮಕ ಮಾಡುತ್ತಿರುವುದು ಎಷ್ಟರ ಮಟ್ಟಿಗೆ ಸರಿ ಎಂಬುದರ ಬಗ್ಗೆಯೂ ಸಹ ಚರ್ಚೆ ಮಾಡಬೇಕಾಗಿದೆ. ಇದು ಒಂದು ಭಾಗ. ಎರಡನೆಯ ದಾಗಿ, ನೀವು ಕೂಡ ನಿಮ್ಮ ಪ್ರತಿನಿಧಿಯಾಗಿ ಯಾರು ಇರಬೇಕು ಅವರನ್ನು ಕಳಿಸಿ ಕೊಟ್ಟಿದ್ದೀರಿ. ದಿನಾಂಕ:29ನೇ ತಾರೀಖಿನಂದು ಸಭೆಯನ್ನು ಮಾಡಿ ದ್ದಾರೆ. ಆ ಸಭೆ ನಡೆಸಿದ ಮೇಲೆ ಕಡೆಗೆ ನಾಲ್ಕು ಜನರ ಹೆಸರನ್ನು ಸೂಚಿಸಿ ದರು ಎಂಬ ಕಾರಣಕ್ಕಾಗಿ ಅವರನ್ನು ನೇಮಕಾತಿ ಮಾಡುತ್ತಾರೆ. ಡಾ. ಎ. ಹೆಚ್. ಶಿವಯೋಗಿಸ್ವಾಮಿಯವರು ದಿನಾಂಕ: 30ನೇ ಜೂನ್ ಮಧ್ಯಾಹ್ನದ

ಮೇಲೆ ನಿವೃತ್ತರಾಗಬೇಕಾಗಿತ್ತು ಎಂದು ತಿಳಿಸಿದರು. ಆದರೆ. ಮಾನ್ಯ ರಾಜ್ಯ ಪಾಲರು ಸರ್ಕಾರಕ್ಕೆ ಕಳಿಸಿರುವಂತಹ ಪತ್ರದಲ್ಲಿ ಇವರು ಜುಲೈ 1ನೇ ತಾರೀಖು ಮಧ್ಯಾಹ್ನದ ಮೇಲೆ ನಿವೃತ್ತಿ ಹೊಂದುತ್ತಾರೆಂದು ನಿಮಗೆ ತಿಳಿಸು ತ್ತಾರೆ. ಅಂದರೆ virtually ಅವರ ನೇಮಕಾತಿ ದಿವಸದಿಂದ ಅವರು 30ನೇ ತಾರೀಖು ನಿವೃತ್ತಿ ಹೊಂದಬೇಕೆಂದರೆ ಆ ದಿವಸ ಭಾನುವಾರ ರಜಾ ದಿವಸ ವಾಗಿತ್ತು ಆದುದರಿಂದ ಕಾನೂನಿನ ಅಡಿಯಲ್ಲಿ ನನಗೆ ತಿಳಿದ ಮಾಹಿತಿಯಲ್ಲಿ ದಿನಾಂಕ:29ರಂದು ಅವರು ತಮ್ಮ ಅಧಿಕಾರವನ್ನು demit ಮಾಡಲೇ ಬೇಕಾಗುತ್ತದೆ. ಆದರೆ ಇಲ್ಲಿ ಏನಾಗಿದೆ ಎಂದರೆ ಮಾನ್ಯ ರಾಜ್ಯಪಾಲರು ಜುಲೈ 1ನೇ ತಾರೀಖು ಮಧ್ಯಾಹ್ನದ ಮೇಲೆ ನಿವೃತ್ತಿ ಹೊಂದುತ್ತಾರೆ ಎಂದು ನಿಮಗೆ ತಿಳಿಸಿ, ಸರ್ಕಾರ ತಮ್ಮ ಪ್ರತಿನಿಧಿಯನ್ನು ಕಳಿಸಿ ಎಂದು ಹೇಳುತ್ತಾರೆ... ಬಹುಶಃ ಯಾವ ಕಾರಣದಿಂದ ಈ ರೀತಿ ಮಾಡಿದರು ಎಂಬುದು ಗೊತ್ತಿಲ್ಲ. ಆದರೂ ಅವರನ್ನು ನೇಮಕಾತಿ ಮಾಡಿ ಒಂದು ವರ್ಷ extension ಕೊಟ್ಟಿದ್ದಾರೆ. ಆದುದರಿಂದ ನಾನು ಹೇಳುವುದೇನೆಂದರೆ, ಈ ಷಯದ ಬಗ್ಗೆ ಸದನದಲ್ಲಿ ಚರ್ಚೆ ಮಾಡುವುದಾಗಲಿ, ಏಚಾರ ಮಾಡುವುದಾಗಲಿ ಸರ್ಕಾರ ಅದನ್ನು ರದ್ದು ಮಾಡುವುದಕ್ಕಾಗಲಿ ಅಧಿಕಾರವೇ ಇಲ್ಲ. ಏಕೆಂದರೆ ಅವರು ಆ ಅಧಿ ಕಾರವನ್ನು ಬಳಸಿಕೊಂಡಿದ್ದಾರೆ. ಈಗ ಇಲ್ಲಿರುವಂತಹ ವಿಷಯವೇನೆಂದರೆ, ಅವರ ಮೇಲೆ ಆಪಾದನೆ ಬಂದ ಕಾರಣ ಮಧ್ಯಪ್ರದೇಶದ ಉಚ್ಚ ನ್ಯಾಯಾ ಲಯದ ನಿವೃತ್ತ ನ್ಯಾಯಾಧೀಶರಾದ Justice Abhay Goel ಅವರ ನೇತೃತ್ವ ದಲ್ಲಿ ಒಂದು ವಿಚಾರಣಾ ಆಯೋಗವನ್ನು ನೇಮಕ ಮಾಡುತ್ತಾರೆ. ಆದರೆ ನಿವೃತ್ತ ನ್ಯಾಯಾಧೀಶರು ಇದುವರೆಗೆ ಏನು ವರದಿಯನ್ನು ಕೊಟ್ಟಿದ್ದಾರೆ. ಎಂಬುದು ಗೊತ್ತಿಲ್ಲ. ಮೂರನೆಯದಾಗಿ. ಮಾನ್ಯ ಸಚಿವರೆ, ಈಗ ನಿಮ್ಮನ್ನು ಕೇಳುವುದೇನೆಂದರೆ, ಕಾನೂನಿನ ಅಡಿಯಲ್ಲಿ ಸರ್ಕಾರಕ್ಕೆ ಒಂದು ಅಧಿಕಾರ ವನ್ನು ಕೊಟ್ಟಿದೆ. ಅಂದರೆ ಈ ರೀತಿ ಯಾವುದಾದರು ಆಡಳಿತಾತ್ಮಕವಾದಂತಹ ವಿಚಾರಗಳಿಗೆ ಸಂಬಂಧಪಟ್ಟಂತೆ governance ಗೆ ಸಂಬಂಧಪಟ್ಟಂತೆ ಅಲ್ಲ ಏನಾದರು miscounduct ಆದರೆ, irregularities ಆದರೆ ಅದು ಸರ್ಕಾರದ ಗಮನಕ್ಕೆ ಬಂದರೆ, ಕಾನೂನಿನ ಅಡಿಯಲ್ಲಿ ಕೂಡಲೆ ಅದಕ್ಕೆ ವಿವರಣೆಯನ್ನು

ಕೇಳುವಂತಹ ಅಧಿಕಾರವನ್ನು ನಮಗೆ ಕೊಟ್ಟಿದೆ. ಈಗ ಇಲ್ಲಿ ದೊಡ್ಡ ಪ್ರಮಾಣದಲ್ಲಿರುವಂತಹ ನೇಮಕಾತಿಯನ್ನು ಮಾಡುವುದಕ್ಕೆ ಹೊರಟಿದ್ದಾರೆ. ಆದುದರಿಂದ ನಾವೆಲ್ಲರೂ ಕೇಳುವುದೇನೆಂದರೆ, ಯಾವ ಉಪಕುಲಪತಿಯ ಮೇಲೆ ಆಪಾದನೆ ಬಂದಿದೆ ಅವರ ಮೇಲೆ ಮಾನ್ಯ ರಾಜ್ಯಪಾಲರೇ ಒಬ್ಬ ನಿವೃತ್ತ ನ್ಯಾಯಾಧೀಶರಿಂದ ತನಿಖೆಗಾಗಿ ಆದೇಶ ಮಾಡಿದ್ದರು. ಮಾನ್ಯ ನಿವೃತ್ತ ನ್ಯಾಯಾಧೀಶರು ತನಿಖೆ ಮಾಡಿ ಏನು ವರದಿಯನ್ನು ಕೊಟ್ಟಿದ್ದಾರೆ ಎಂಬುದು ಗೊತ್ತಿಲ್ಲ. ಒಂದು ವೇಳೆ ಆ ವರದಿಯಲ್ಲಿ ಅವರು innocent ಎಂದು ಬಂದಿದ್ದರೆ ಪ್ರಶ್ನೆ ಬೇರೆ, ಆದರೆ ಅದನ್ನು ಸಹ ಹೇಳದೆ, ಇಂತಹ ಸಂದರ್ಭದಲ್ಲಿ ಅಂದರೆ ನೇಮಕಾತಿಯನ್ನು ನೀವು ಪ್ರಶ್ನೆ ಮಾಡಿಲ್ಲ, ನಾವು ಪ್ರಶ್ನೆ ಮಾಡಿಲ್ಲ, ಆದರೆ ನಾನು ತಮ್ಮನ್ನು ಕೇಳುವುದೇನೆಂದರೆ, kindly exercise your authority as a Government now. Exercise the authority as a Government and give a direction to the Vice Chancellor stating that "All appointments which are scheduled to be fixed on such and such a date will have to be stopped pending enquiry into certain matters. ನಾವು ಇಷ್ಟೇ ಹೇಳುವುದು. In respect of one matter ನೀವು ಒಂದು notice ಕೊಟ್ಟಿದ್ದು ಅದು High Court ಗೆ ಹೋಗಿದೆ. In respect of this also ತಕ್ಷಣವೇ ಅವರಿಗೆ ಒಂದು fax message ಕಳಿಸಿ ಈ ರೀತಿ ಬಂದಿದೆ ಆದುದರಿಂದ ತನಿಖೆ ನಡೆಸುತ್ತಿರುವಂಥ ಸಂದರ್ಭದಲ್ಲಿ ನೇಮಕಾತಿಯನ್ನು ಕೂಡಲೆ ತಡೆಹಿಡಿಯಬೇಕು ಎಂದು ಕಳಿಸಿ. ಈ ಒಂದು ಕೆಲಸವನ್ನು ಸರ್ಕಾರ ಮಾಡಬೇಕೆಂದು ನಾವು ಕೇಳುತ್ತಿರುವುದು. ನೀವು ಸರ್ಕಾರದ ಪರವಾಗಿ ಮಾಡದೆ ಹೋದರೆ ಇಷ್ಟು ದೊಡ್ಡ ಪ್ರಮಾಣದಲ್ಲಿ ನಾವು ಈ ಸದನದಲ್ಲಿ ಚರ್ಚೆ ಮಾಡಿ. ಪತ್ರಿಕೆಯಲ್ಲಿ ಈ ವಿಷಯ ಪ್ರಕಟವಾದ ಮೇಲೆಯೂ ಸಹ ಸರ್ಕಾರ ಇದಕ್ಕೆ ಮೀನಾಮೇಷ ಎಣಿಸುತ್ತಿದೆ ಎಂದರೆ ನೀವು ಏಕೆ ನಿಮ್ಮ ತಲೆಯ ಮೇಲೆ ಚಪ್ಪಡಿಕಲ್ಲು ಹಾಕಿಕೊಳ್ಳುತ್ತೀರಿ? ಏಕೆಂದರೆ ಅದರಲ್ಲಿಯೂ Education Minister, you are the Minister in charge and you need have to take the decision. Kindly take the decision and don't try to become

a privy ನೀವು ಈ ಕೆಲಸವನ್ನು ಮಾಡದೆ. ಹೋದರೆ ಸಾರ್ವಜನಿಕರಿಂದ ಸರ್ಕಾರ ಇವರ ಜೊತೆ ಸೇರಿಕೊಂಡಿದ್ದಾರೆ ಎಂಬ ಆಪಾದನೆಯನ್ನು ಕೇಳಬೇಕಾಗುತ್ತದೆ.

**ಶ್ರೀ ಗೋ.ಮಧುಸೂದನ್:–** ಆ ವಿಷಯವನ್ನೇ ನಾನು ಹೇಳಿದ್ದು.

**ಶ್ರೀ ಯಂ.ಸಿ.ನಾಣಯ್ಯ:–** ನೀವು ಹೇಳಿದ್ದು –ಬೇರೆ– ಬಿಡಿ. ಮಾನ್ಯ ಮಧುಸೂದನ್‌ರವರು ಹೇಳಿದ ಮಾತನ್ನು ಬಹುಶಃ ನಾನೇನಾದರು ಆ ಸ್ಥಾನದಲ್ಲಿ ಕುಳಿತುಕೊಂಡಿದ್ದರೆ ಖಂಡಿತ ಮಾನ್ಯ ಮಧುಸೂದನ್‌ವರಿಂದ ಆ ಮಾತನ್ನು ಒಂದಕ್ಕೆ ಪಡೆದುಕೊಳ್ಳುವಂತೆ ಮಾಡುತ್ತಿದ್ದೆ. ಆದರೆ ನೀವು ಯಾರೂ ಆ ಕೆಲಸ ಮಾಡಲಿಲ್ಲ ಅದಕ್ಕೋಸ್ಕರ ಮಾನ್ಯ ಮಧುಸೂದನ್‌ರವರು ಸಹ ಸುಮ್ಮನೆ ಕುಳಿತುಕೊಂಡಿದ್ದಾರೆ.

**ಉಪ ಸಭಾಪತಿಯವರು:–** ಅದು expunge ಆಗಿದೆ. ದಯವಿಟ್ಟು ಎಲ್ಲರೂ ಕುಳಿತುಕೊಳ್ಳಿ.

**ಶ್ರೀ ಯಂ.ಸಿ.ನಾಣಯ್ಯ:–** ಅದು expunge ಆಗಿದೆಯೇ? ಇದರ ಜೊತೆಯಲ್ಲಿ ಒಂದು enquiry ಮಾಡುವ ಅಧಿಕಾರ ಸರ್ಕಾರಕ್ಕೆ ಇದೆ. ನೀವು. enquiry ಮಾಡಿ ಮಾನ್ಯ ರಾಜ್ಯಪಾಲರಿಗೆ ಪತ್ರ ಬರೆಯಿರಿ. And you suggest a name.

**ಶ್ರೀ ಎಂ.ಆರ್.ಸೀತರಾಮು (ವಿಧಾನಸಭಾ ಕ್ಷೇತ್ರ):–** ಮಾನ್ಯ ಸಭಾಪತಿ ಗಳೇ, ಈಗಾಗಲೇ ಸಾಕಷ್ಟು ಸದಸ್ಯರು ಅವರದ್ದೇ ಆದ ಧಾಟಿಯಲ್ಲ ಈ ಹಗ ರಣ ಮತ್ತು ತನಿಖೆಯ ಬಗ್ಗೆ ಪ್ರಸ್ತಾಪವನ್ನು ಮಾಡಿದ್ದಾರೆ. ಇದರ ಬಗ್ಗೆ ವರದಿ ಯನ್ನು ತರಿಸಿಕೊಳ್ಳುವ ಅಧಿಕಾರ ಸರ್ಕಾರಕ್ಕೆ ಇದೆ... ಅದನ್ನು ಅವರು ಮಾಡು ತ್ತಾರೆ. ನಾನು ತಮ್ಮ ಮೂಲಕ ಸರ್ಕಾರಕ್ಕೆ ಮನವಿಯನ್ನು ಮಾಡಿಕೊಳ್ಳುವು ದೇನೆಂದರೆ, ಈಗ ಎಲ್ಲಾ ಇಲಾಖೆಗಳಲ್ಲಿಯೂ ಆರ್ಟಿಕಲ್ 371 ಜೆ ಇದರ ಪರವಾಗಿ ಎಲ್ಲಾ ಕಡೆ ಸಮನಾದ representation ಅವಕಾಶ ದೊರೆಯ ಬೇಕೆಂದು ಮಾಡಲಾಗಿದೆ, ಇದು ಸಹ ದೊಡ್ಡ ಪ್ರಮಾಣದಲ್ಲಿ ಆಗುತ್ತಿರುವು

ದರಿಂದ ಇದನ್ನು ಸಹ 371 ಜೆ ಗೋಸ್ಕರ ತಡೆಹಿಡಿದು ನಂತರ apply ಅಷ್ಟೆ ಆಗದಿದ್ದರೂ ಸಹ, ಈ ಕಲಸವನ್ನು ಮಾಡಲು ಸರ್ಕಾರ ಬದ್ಧವಾಗಿದೆ.

**Sri. M.C.NANAAH :** Please her me. Don't mix up. Don't dilute the issue. Article 371 J per se it has no application. ಅಲ್ಲಿ ನಡೆಯುತ್ತಿರುವ ಅನ್ಯಾಯಗಳ ಬಗ್ಗೆ ನಾವು ಮಾತನಾಡುತ್ತಿದ್ದೇವೆ. Don't try to mix up Article 371 J.

**ಶ್ರೀ ಎಂ.ಆರ್.ಸೀತಾರಾಮು:–** ನಾನು ಕೂಡ ಅಲ್ಲಿ ನಡೆಯುತ್ತಿರುವ ಅವ್ಯವಹಾರಗಳ ಬಗ್ಗೆ ವರದಿ ತರಿಸಿಕೊಳ್ಳುವುದಕ್ಕೆ ಸರ್ಕಾರಕ್ಕೆ ಸಂಪೂರ್ಣ ಅಧಿಕಾರ ಇದೆ. ಅದನ್ನು ತರಿಸಿಕೊಳ್ಳಲಿ ಎನ್ನುವ ಮಾತನ್ನು ಹೇಳುತ್ತಿದ್ದೇನೆ. ಹಾಗೆಯೇ ಸಮಗ್ರವಾಗಿ ಎಲ್ಲಾ ಇಲಾಖೆಗಳಲ್ಲೂ ಕೂಡ ಆರ್ಟಿಕಲ್ 371 ಜೆ ಪಕಾರ ಆ ಭಾಗದ ಜನರಿಗೂ ಅವಕಾಶ ನೀಡುವುದಕ್ಕ ಸರ್ಕಾರ ಬದ್ಧವಾಗಿದೆ. ಆದ್ದರಿಂದ ಇದನ್ನು ಸಹ ತಡಹಿಡಿದು ಆ ಭಾಗದ ಜನರಿಗೂ ನ್ಯಾಯ ಒದಗಿ ಸುವುದಕ್ಕೆ ಇದನ್ನು ಸದ್ಯಕ್ಕೆ ಮುಂದೂಡಬೇಕೆಂದು ತಮ್ಮ ಮೂಲಕ ಸರ್ಕಾರಕ್ಕೆ ಒತ್ತಾಯ ಮಾಡುತ್ತೇನೆ.

**ಶ್ರೀ ಮರಿತಿಬ್ಬೇಗೌಡ (ಶಿಕ್ಷಕರ ಕ್ಷೇತ್ರ):–** ಮಾನ್ಯ ಸಭಾಪತಿಯವರೆ, ಈಗ ಹಾಲಿ ಹಿರಿಯ ಸದಸ್ಯರೆಲ್ಲರೂ ಏನು ಚರ್ಚೆಯನ್ನು ಮಾಡಿ ಸರ್ಕಾರದ ಗಮನವನ್ನು ಸಳದಿದ್ದಾರೆ ಅದೇ ವಿಚಾರವನ್ನು ನಾನು ಪುನಃ ಮಾತನಾಡು ವುದಿಲ್ಲ. ಅವರೆಲ್ಲರ ಅಭಿಪ್ರಾಯಕ್ಕೆ ನನ್ನ ಸಹಮತವನ್ನು ನಾನು ವ್ಯಕ್ತಪಡಿಸು ತ್ತೇನೆ. ಈ ವಿಶ್ವೇಶ್ವರ ತಾಂತ್ರಿಕಯ್ಯ ಎಶ್ವವಿದ್ಯಾನಿಲಯ ಐಟಿ–ಬಿಟಿ ಕ್ಷೇತ್ರದಲ್ಲಿ ವಿಶ್ವದಲ್ಲಿಯೇ ಹೆಸರು ಮಾಡಿದಂತಹ ಒಂದು ವಿಶ್ವವಿದ್ಯಾನಿಲಯ. ಆದರೆ ಈ ಕುಲಪತಿ ನೇಮಕ ಆದ ನಂತರ ಕಳೆದ ಮೂರು ವರ್ಷಗಳಿಂದ Technical University ಪದವಿಗೆ ಮೂರು ಕಾಸಿನ ಕಿಮ್ಮತ್ತು ಇಲ್ಲದಂತಾಗಿರುವುದು ಅತ್ಯಂತ ನೋವಿನ ಸಂಗತಿ. ಕಾರಣ ಅಲ್ಲಿನ ಆಡಳಿತ ವ್ಯವಸ್ಥೆ ಇದು ಯಾವ ರೀತಿ ಇದೆಯೆಂದರೆ ಅಲ್ಲಿ ಒಂದು ವರ್ಷಕ್ಕೆ ಸುಮಾರು 70 ರಿಂದ 80 ಸಾವಿರ ವಿದ್ಯಾರ್ಥಿಗಳು ಪದವಿಗೆ ಸೇರ್ಪಡೆಯಾಗುತ್ತಾರೆ. 5 ವಿದ್ಯಾರ್ಥಿಗಳಿಂದ

ಪರಿಶಿಷ್ಟ ಜಾತಿ ಮತ್ತು ಪಂಗಡಗಳ ವಿದ್ಯಾರ್ಥಿಗಳನ್ನು ಸಹ ಸೇರಿಸಿ ವರ್ಷಕ್ಕೆ 4500 ರೂಪಾಯಿಗಳ ಶುಲ್ಕವನ್ನು ಪಡೆಯುತ್ತಾರೆ... ಇದರಿಂದ ವರ್ಷಕ್ಕೆ 50 ರಿಂದ 70 ಕೋಟಿ ರೂಪಾಯಿಗಳ ಹಣ ಈ ವಿಶ್ವವಿದ್ಯಾನಿಲಯಕ್ಕೆ ಬರುತ್ತದೆ. ಇವರು ಈ ಹಣವನ್ನು ಹೇಗೆ ಖರ್ಚು ಮಾಡುತ್ತಾರೆ? ಈಗಿರುವ ಕುಲಪತಿಗಳ ನೇಮಕ ಆದ ಮೇಲೆ ಅಲ್ಲಿ Finance Officer ಇಲ್ಲ, ಅಲ್ಲಿರುವ ತಾತ್ಕಲಿಕ ಉಪನ್ಯಾಸಕರನ್ನು Finance Officer ಆಗಿ ನೇಮಕ ಮಾಡಿದ್ದಾರೆ. ಬೆಳಿಗ್ಗೆ ರಿಜಿಸ್ಟ್ರಾರ್ ಅವರು ಸೇರಿ ಒಂದು ರೆಸಲ್ಯೂಶನ್ ಅನ್ನು ಮಾಡಿದ್ದಾರೆ, ಸಂಜೆ ನಾಲ್ಕು ಗಂಟೆಗೆ ತಾತ್ಕಲಿಕ ಉಪನ್ಯಾಸಕರಿಂದ Cheque ಬಿಕರಿ ಆಗುತ್ತದೆ. ಇಲ್ಲಿ Finance Officer ಇದ್ದಿದ್ದರೆ ಎಲ್ಲದಕ್ಕೂ query ಹಾಕುತ್ತಿದ್ದರು, ಅಡ್ಡಿ ಮಾಡುತ್ತಿದ್ದರು.

ಮಾನ್ಯ ಸಭಾಪತಿಗಳೇ, ಇವರು ಕುಲಪತಿ ಆದ ಮೇಲೆ ನಡದಿರತಕ್ಕ ಸಿಂಡಿಕೇಟ್ ಸಭೆಗಳಲ್ಲಿ ಸದಸ್ಯರುಗಳಿಗೆ ಮಹತ್ವದ ವಿಚಾರಗಳನ್ನು ಒಳಗೊಂಡಿರುವ ಅಜೆಂಡಾ ಕಳುಹಿಸುವ ವಿಚಾರವೇ ಇಲ್ಲ. ಕೆಲಸಕ್ಕೆ ಬಾರದ ಸಣ್ಣಪುಟ್ಟ ವಿಚಾರಗಳನ್ನು ಅಜೆಂಡಾದಲ್ಲಿ ಕಳುಹಿಸುವುದು, ಸಭೆಗೆ. ಬಂದಾಗ ಪ್ರಮುಖವಾದ ವಿಚಾರಗಳ ಬಗ್ಗೆ ಹಣಕಾಸಿನ ವಿಚಾರಗಳ ಬಗ್ಗೆ ಆರ್ಥಿಕ ಇಲಾಖೆಗೆ ಸಂಬಂಧಪಟ್ಟ ವಿಚಾರಗಳನ್ನು, ಟೆಂಡರ್‌ಗಳನ್ನು Table Agenda ದಲ್ಲಿಡುತ್ತಾರೆ. ಸದಸ್ಯರು ಅದನ್ನು ಅಲ್ಲಿ ನೋಡಿ, ಅಲ್ಲಿಯೇ ಅದಕ್ಕೆ ಸಹಿಯನ್ನು ಹಾಕಬೇಕು. ಎಲ್ಲ ಸದಸ್ಯರು ಅದಕ್ಕೆ ಒಪ್ಪಿಗೆಯನ್ನು ನೀಡಬೇಕು. ಈ ಪದ್ಧತಿಯನ್ನು ಮೂರು ಜನ Syndicate Members ಒಂದು ಹಂತದಲ್ಲಿ ವಿರೋಧ ಮಾಡಿದರು.

ಇದನ್ನು ಪ್ರತಿರೋಧಿಸಿದ ಈ ಮೂರು ಜನ Syndicate Members ನ್ನು ಕೂಡ ಕ್ಯಾಂಪಸ್‌ನಿಂದ ಆ ತಕ್ಷಣ ಒದ್ದು ಆಚೆ ಹಾಕಿದರು. ಇದಕ್ಕೆ ಬಹಳ ಪ್ರಭಾವವನ್ನು ಬೀರಿದರು.

ಆದೇ ರೀತಿ LIC Committee ಎಂದಿದೆ. ಪ್ರತಿವರ್ಷ ಎಲ್ಲಾ ಕಾಲೇಜುಗಳಿಗೆ ಹೋಗಿ permanent LIC ನೀಡುವುದು, temporary LIC

ನೀಡುವುದು ಕಾಲೇಜಿನ ಗುಣಮಟ್ಟವನ್ನು ನೋಡಿ ಪರವಾನಗಿಯನ್ನು ನೀಡುವುದು, ಅದಲ್ಲದೇ RRC ಒಂದನ್ನು ಇಟ್ಟುಕೊಂಡಿದ್ದಾರೆ. RRC Committee ಎಂದರೆ Record Review Committee ಈ LIC Committee ಯಲ್ಲಿ ಯಾವ ಕಾಲೇಜಿಗೆ ಗುಣಮಟ್ಟ ಇದೆ ಅನುಮತಿ ಕೊಡಬಹುದು ಎನ್ನುವ ಅಭಿಪ್ರಾಯ ಬರುತ್ತದೆ. ಅದನ್ನು ಅಲ್ಲ ಓಕೆ ಮಾಡುತ್ತಾರೆ. ಯಾವ ಕಾಲೇಜಿಗೆ LIC Committee ಯಲ್ಲಿ ವಿರೋಧವಾಗಿ ಈ ಕಾಲೇಜು ಸರಿಯಲ್ಲ ಇದಕ್ಕೆ ಅನುಮತಿಯನ್ನು ಕೊಡಬಾರದು ಎನ್ನುವ ವರದಿ ಬರುತ್ತದೆ, ಅದನ್ನು Record Review Committee ಗೆ refer ಮಾಡುತ್ತಾರೆ. ನಂತರ ಹಣ ಪಡೆದು Record Review Committee ಯಲ್ಲಿ ಓಕೆ ಮಾಡಿ ಅದಕ್ಕೆ ಅನುಮತಿಯನ್ನು ನೀಡುತ್ತಾರೆ.

ಇನ್ನು digital valuation ಎನ್ನುವ ಹೊಸ ಪದ್ದತಿ ಬಂದಿದೆ. ಇದರಲ್ಲಿ ಕಂಪ್ಯೂಟರ್ ಮೂಲಕವೇ ಮೌಲ್ಯಮಾಪನವನ್ನು ಮಾಡುವುದು, ಮತ್ತು ಸ್ಕ್ಯಾಬಿಂಗ್ ಮಾಡುವುದು. ಒಂದು ಸ್ಕೀಮ್ ಪರೀಕ್ಷೆಯಲ್ಲಿ 18 ರಿಂದ 21 ಲಕ್ಷ ವಿದ್ಯಾರ್ಥಿಗಳು ಪರೀಕ್ಷೆಯನ್ನು ಬರೆಯುತ್ತಾರೆ. ಇವರು ಒಂದು ಪ್ರಶ್ನೆ ಪತ್ರಿಕೆಯನ್ನು download ಮಾಡಿಕೊಳ್ಳುವುದಕ್ಕೆ 19.80 ಪೈಸ ನೀಡಬೇಕಾಗುತ್ತದೆ. ಆಡಿಟ್ ವರದಿಯಲ್ಲಿ ಒಂದು ಸ್ಕೀಮ್ exam ಗೆ 1 ಕೋಟಿ 31 ಲಕ್ಷ ರೂಪಾಯಿಗಳಿಗೆ ಕೊಡುವ ಬದಲಿಗೆ 6 ಕೋಟಿ 80 ಲಕ್ಷ ರೂಪಾಯಿಗಳನ್ನು ಕೊಡಲಾಗಿದೆ ಎಂದು ಆಕ್ಷೇಪಣೆ ಮಾಡಿದ್ದಾರೆ. ಇವತ್ತು ಕಂಪ್ಯೂಟರ್‌ನಿಂದ ಒಂದು ಪ್ರಶ್ನೆ ಪತ್ರಿಕೆಯನ್ನು download ಮಾಡಿಕೊಂಡು ಅದನ್ನು ಜೆರಾಕ್ಸ್ ಮಾಡಿಸಲು 20 ಪೈಸೆ ಸಾಕಾಗುತ್ತದೆ. ಅಂತಹದ್ದರಲ್ಲಿ 21 ಲಕ್ಷ ವಿದ್ಯಾರ್ಥಿಗಳ ಪರೀಕ್ಷೆಗೆ ಪ್ರಶ್ನೆಪತ್ರಿಕಗಳನ್ನು download ಮಾಡಲು ಗುತ್ತಿಗೆದಾರರಿಗೆ 6 ಕೋಟಿ 80 ಲಕ್ಷ ಕೊಟ್ಟಿದ್ದಾರೆ, ಇದೆಲ್ಲಾ ಆಡಿಟ್ ವರದಿಯಲ್ಲಿದೆ, ನಾನೇನು ಸ್ವಂತವಾಗಿ ಹೇಳುತ್ತಿಲ್ಲ.

ಅದೇ ರೀತಿ ಲ್ಯಾಬ್‌ಗೆ ಒಂದು ಉಪಕರಣವನ್ನು ಖರೀದಿ ಮಾಡುತ್ತಾರೆ. ಕಟ್ಟಡ ಕಟ್ಟುವುದಕ್ಕೆ ಮೊದಲೇ 56 ಲಕ್ಷ ರೂಪಾಯಿಗಳಿಗೆ ಇದನ್ನು ಖರೀದಿ ಮಾಡುತ್ತಾರೆ, ಕಟ್ಟಡ ಕಟ್ಟಿದ ನಂತರ ಈ ಉಪಕರಣವನ್ನು ಅಲ್ಲ

ಅಳವಡಿಸುತ್ತಾರೆ. ಅದು ಕೆಲಸವನ್ನೇ ಮಾಡುತ್ತಿಲ್ಲ... ಇದರ ಬಗ್ಗೆ ಸಂಬಂಧ ಪಟ್ಟ ಕಂಪನಿಗೆ ದೂರು ಸಲ್ಲಿಸಿದರೆ ಅವರು ಇದರ expiry date ಆಗಿ ಹೋಗಿದೆ, ಸರ್ವೀಸ್ ಅವಧಿ ಮುಗಿದಿದೆ. ಈಗ ಏನು ಮಾಡಲು ಸಾಧ್ಯವಿಲ್ಲ ನೀವು ಹೊಸದಾಗಿ ಖರೀಟ ಮಾಡಬೇಕೆಂದು ಹೇಳುತ್ತಿದ್ದಾರೆ.

**ಉಪಸಭಾಪತಿಯವರು:–** ಆದಷ್ಟು ಬೇಗ ಮುಗಿಸಿ, ಸಮಯವನ್ನು ತಾವು ನೋಡಬೇಕು. ಇನ್ನು ಒಂದು ನಿಮಿಷದಲ್ಲಿ ಮುಗಿಸಬೇಕು.

**ಶ್ರೀ ಮರಿತಿಬ್ಬೇಗೌಡ:–** ಮಾನ್ಯ ಸಭಾಪತಿಗಳೇ, ನಾನು ಆದಷ್ಟು ಬೇಗ ಮುಗಿಸುತ್ತೇನೆ. ಈಗ ಬಹಳ ಸ್ವಾರಸ್ಯವಾದ ಒಂದು ವಿಚಾರವನ್ನು ಹೇಳಿ ಒಂದು ನಿಮಿಷದಲ್ಲಿ ಮುಗಿಸುತ್ತೇನೆ. ಒಂದು ವರ್ಷದ ಅವರಿಗೆ ಮತ್ತೆ ಅನು ಮತಿ ಸಿಕ್ಕಿದ ಮೇಲೆ ಅಲ್ಲ ಅರ್ಧಂಬರ್ಧ ಆಗಿದ್ದ ನೇಮಕಾತಿಗಳಿಗೆ ಪುನಃ ಅಲ್ಲ ಸಂದರ್ಶನ ಶುರುವಾಗಿದೆ. ಈಗ ಬಿಡುವಿಲ್ಲದೇ ಸದನ ನಡೆಯುತ್ತಿದ್ದರೂ ಸಹ ಬಹಳ ಧೈರ್ಯದಿಂದ ಸಂದರ್ಶನವನ್ನು ನಡೆಸುತ್ತಿದ್ದಾರೆ. ಒಂದು ದಿವಸಕ್ಕೆ ನೂರು ಜನ ಅಭ್ಯರ್ಥಿಗಳನ್ನು ಸಂದರ್ಶನಕ್ಕೆ ಕರೆದಿದ್ದಾರೆ... ಮೆಕಾನಿಕ್‌ನಲ್ಲಿ ಇವತ್ತಿನಿಂದ ನಾಲ್ಕು ದಿವಸಗಳ ಕಾಲ ಸಂದರ್ಶನ ನಡೆಯು ತ್ತದೆ, ಇದಕ್ಕೆ 400 ಮಂದಿ ಅರ್ಜಿಯನ್ನು ಹಾಕಿದ್ದಾರೆ.

**ಉಪಸಭಾಪತಿಯವರು:–** ಈ ಎಲ್ಲಾ ಅವ್ಯವಹಾರಗಳ ಬಗ್ಗೆ ಈಗಾ ಗಲೇ ಪ್ರಸ್ತಾಪ ಆಗಿದೆ.

**ಶ್ರೀ ಮರಿತಿಬ್ಬೇಗೌಡ:–** ಮಾನ್ಯ ಸಭಾಪತಿಗಳೇ, ಅರ್ಜಿ ಹಾಕಿದವರಿ ಗೆಲ್ಲಾ ಸಂದರ್ಶನಕ್ಕೆ ಕರೆದಿದ್ದಾರೆ. ಅರ್ಜಿ ಹಾಕಿದವರಿಗೆಲ್ಲಾ ಸಂದರ್ಶನಕ್ಕೆ ಕರೆಯುವುದನ್ನು ನಾನು ನಮ್ಮ ರಾಜ್ಯದ ಯಾವ ಇಲಾಖೆಯಲ್ಲಿಯೂ ನೋಡಿಲ್ಲ. ಇಲ್ಲಿ ಒಂದು Screening Committee ಯನ್ನು ಮಾಡಿದ್ದಾರೆ. ನಾಳೆ ಸಂದರ್ಶನ ಇದ್ದರೆ ಇವತ್ತು ನೂರು ಜನರನ್ನು ಈ Screening Committee ಮುಂದೆ ಕರೆಯುತ್ತಾರೆ. ಅಲ್ಲ 5 ಮಂದಿ experts ಇರುತ್ತಾರೆ. ಅಲ್ಲಿ ಈ ನೂರು ಜನರು ತಾವು ಯಾವ ಶೈಲಿಯಲ್ಲಿ ಪಾಠ ಮಾಡುತ್ತೇವೆ ಎನ್ನುವುದನ್ನು ತೋರಿಸಿಕೊಡಬೇಕು.

**ಉಪಸಭಾಪತಿಯವರು :–** 5 ನಿಮಿಷದ ಕಾಲಾವಕಾಶ ಕೇಳಿದಿರಿ, 5 ನಿಮಿಷ ಆಯಿತು ಕುಳಿತುಕೊಳ್ಳಿ.

**ಉಪಸಭಾಪತಿಯವರು:–** ಮರಿತಿಬ್ಬೇಗೌಡರೆ ನೀವು ಒಂದು ನಿಮಿಷ ಎಂದು ಹೇಳುತ್ತಾನೆ ಇದ್ದಿರಾ, ದಯಮಾಡಿ ಕುಳಿತುಕೊಳ್ಳಿ.

**ಶ್ರೀ ಮರಿತಿಬ್ಬೇಗೌಡ:–** ಮಾನ್ಯ ಸಭಾಪತಿಗಳ, ಅರ್ಜಿ ಹಾಕಿದವರಿಗೆಲ್ಲಾ ಏಕೆ ಸಂದರ್ಶನಕ್ಕೆ ಕರೆದಿದ್ದಾರೆ ಎಂದರೆ, ಹೊರಟ್ಟಿಯವರು ಹೇಳಿದ ಹಾಗೆ, 15ಲಕ್ಷ, 20ಲಕ್ಷ, 25ಲಕ್ಷ ರೂ.ಗಳೆಂದು demand create ಮಾಡಲು ಕರೆದಿದ್ದಾರೆ.

**ಉಪಸಭಾಪತಿಯವರು:–** ಮರಿತಿಬ್ಬೇಗೌಡರೆ ಕುಳಿತುಕೊಳ್ಳಿ, ಸಚಿವರು ಉತ್ತರ ಕೊಡುತ್ತಾರೆ. ಕುಳಿತುಕೊಳ್ಳಿ.

**ಶ್ರೀ ಮರಿತಿಬ್ಬೇಗೌಡ;–** ನಾರಾಯಣಸ್ವಾಮಿಯವರು ನಾಲ್ಕು ಜನರ ಹೆಸರನ್ನು ಹೇಳಿದರು. ಆದರೆ ನಾನು ಹಸರನ್ನು ಹೇಳುವುದಿಲ್ಲ. ನನ್ನ ಹತ್ತಿರ 9 ದೂರವಾಣಿ ಸಂಖ್ಯೆಗಳು ಇವೆ. ಈ ದೂರವಾಣಿ ಯಾರ್‍ಯಾರದು ಎನ್ನುವ ಎಲ್ಲಾ ವಿವರಗಳು ಇವೆ. ಈ ದೂರವಾಣಿ ನಂಬರ್‌ಗಳನ್ನು ಈ ಕೂಡಲೇ ಸರ್ಕಾರ ತನಿಖೆಗೆ ಒಳಪಡಿಸಿದರೆ ಈಗ ನಡೆಸುತ್ತಾ ಇರುವಂತಹ ಸಂದರ್ಶನದ ಇಡೀ ಜಾತಕ ಹೊರಗೆ ಬರುತ್ತದೆ. ಈ ಕೆಲಸವನ್ನು ಮಾಡಬೇಕೆಂದು ದಯಮಾಡಿ ತಮ್ಮ ಮೂಲಕ ವಿನಂತಿಸಿಕೊಳ್ಳುತ್ತೇನೆ. ಇದನ್ನು ತಮಗೆ ಕಳುಹಿಸಿ ಕೊಡುತ್ತೇನೆ.

**ಉಪಸಭಾಪತಿಯವರು:–** ಕಳುಹಿಸಿಕೊಡಿ.

**ಶ್ರೀ ಮರಿತಿಬ್ಬೇಗೌಡ:–** ಈ ಸಂದರ್ಶನ ದೊಡ್ಡ ಅಕ್ರಮ, ದಂಧೆಯಂತೆ ನಡೆಯುತ್ತಿದೆ. ಇದು ತಕ್ಷಣ ನಿಲ್ಲಬೇಕು. ಈ ವಿಶ್ವವಿದ್ಯಾನಿಲಯದಲ್ಲಿ ಮೂರು ವರ್ಷಗಳಿಂದ ನಡೆದಿರುವಂತಹ ಅಕ್ರಮಗಳು ಏನು ಇವೆ, irregular activities ಗಳನ್ನು ಮತ್ತು ಟೆಂಡರ್ ಪ್ರಕರಣ ಎಲ್ಲದರ ಬಗ್ಗೆ ಉನ್ನತ ಮಟ್ಟದ ಸಮಿತಿಯಿಂದ ತನಿಖೆ ಮಾಡಬೇಕು.

**ಉಪಸಭಾಪತಿಯವರು:–** ಸಾಕು ಕುಳಿತುಕೊಳ್ಳಿ ಮರಿತಿಬ್ಬೇಗೌಡರೆ, ಈ ರೀತಿ ಮಾಡಿದರೆ ಸದನ ನಡೆಸುವುದು ಹೇಗೆ? ದಯಮಾಡಿ ಕುಳಿತುಕೊಳ್ಳಿ

**ಶ್ರೀ ಮರಿತಿಬ್ಬೇಗೌಡ:–** ಇವು ತಕ್ಷಣ ನಿಲ್ಲಬೇಕು. ಇವರು ಇರುವವರೆಗೆ ಆ ವಿಶ್ವವಿದ್ಯಾನಿಲಯದಲ್ಲಿ ಯಾವುದೇ ಪ್ರಮುಖವಾದ ನಿರ್ಧಾರವನ್ನು ತೆಗೆದು ಕೊಳ್ಳಲು ಸರ್ಕಾರ ಅನುಮತಿ ಕೊಡಬಾರದು ಎಂದು ತಮ್ಮ ಮೂಲಕ ಈ ಘನ ಸರ್ಕಾರವನ್ನು ಒತ್ತಾಯಿಸುತ್ತೇನೆ.

**ಶ್ರೀ ಆರ್.ವಿ.ದೇಶಪಾಂಡೆ (ಉನ್ನತ ಶಿಕ್ಷಣ ಸಚಿವರು);–** ಮಾನ್ಯ ಸಭಾಪತಿಗಳೆ, ಸದನದ ಗೌರವಾನ್ವಿತ ಸದಸ್ಯರಾದ ಮಾನ್ಯ ನಾಣಯ್ಯನವರು, ಹೊರಟ್ಟಿಯವರು, ಶಿವಯೋಗಿಸ್ವಾಮಿಯವರು, ನಾರಾಯಣಸ್ವಾಮಿಯವರು, ಅಮರನಾಥವರು, ಪುಟ್ಟಣ್ಣನವರು. ಮತ್ತು. ಮರಿತಿಬ್ಬೇಗೌಡರು. ಸೀತಾರಾಮು ರವರು ಕುಲಸಚಿವರ ಪುನರ್ ನೇಮಕಾತಿ ಬಗ್ಗ ಅಲ್ಲಿ ನಡೆದಿರುವ ಸಂದರ್ಶ ನದ ಬಗ್ಗೆ ಮತ್ತು ಹಲವಾರು ಗಂಭೀರವಾದ ಭ್ರಷ್ಟಾಚಾರದ ಅಪವಾದಗಳ ಬಗ್ಗೆ ಸರ್ಕಾರದ ಗಮನಕ್ಕೆ ತಂದಿದ್ದಾರೆ. ನಾನು ಈ ಇಲಾಖೆಯ ಜವಾಬ್ದಾರಿ ತೆಗೆದುಕೊಂಡ ಮೇಲೆ, ಈ ಇಲಾಖೆಯಲ್ಲಿ ಒಳ್ಳೆಯ ಗುಣಮಟ್ಟದ ಶಿಕ್ಷಣ ಇರ ಬೇಕು, ಕಾಲೇಜಿನಲ್ಲಿ, ವಿಶ್ವವಿದ್ಯಾನಿಲಯಗಳಲ್ಲಿ ಸರಿಯದ ಮೂಲಭೂತ ಸೌಕರ್ಯಗಳು ಇರಬೇಕು, ಮಾನವ ಸಂಪನ್ಮೂಲ ಇರಬೇಕು ಮತ್ತು ಮುಖ್ಯ ವಾದ ಆಡಳಿತದಲ್ಲಿ. ನೇಮಕಾತಿಗಳಲ್ಲಿ ಪಾರದರ್ಶಕತೆ ಇರಬೇಕು ಎಂದು ಹಲವಾರು ಕ್ರಮಗಳನ್ನು ತೆಗೆದುಕೊಂಡಿದ್ದೇನೆ. 24 ಜೂನ್ 2013ರಲ್ಲಿ ದಾವಣಗೆರೆಯಲ್ಲಿ ಎಲ್ಲಾ ಉಪ ಕುಲಪತಿಗಳ ಜೊತೆಯಲ್ಲಿ ಮೀಟಿಂಗ್ ಮಾಡಿ ಅವರ ಕಷ್ಟ-ಸುಖಗಳನ್ನು ಕೇಳಿದ್ದೇನೆ. ವಿಶ್ವವಿದ್ಯಾನಿಲಯಗಳಲ್ಲಿಯ ಮೂಲ ಭೂತ ಸೌಕರ್ಯಗಳ ಕೊರತೆ ಬಗ್ಗೆ ಮಾನವ ಸಂಪನ್ಮೂಲದ ಕೊರತೆ ಬಗ್ಗೆ ವಿಚಾರಿಸಿದ್ದೇನೆ. ಅದೇ ಪ್ರಕಾರ ಸರ್ಕಾರ ತೀರ್ಮಾನವನ್ನು ಹೇಳಿದ್ದೇನೆ. ಪಾರ ದರ್ಶಕತೆ ಇರಬೇಕು. ಶಿಕ್ಷಣದಲ್ಲಿ ಗುಣಮಟ್ಟ ಇರಬೇಕು ಇನ್ನು ಹಲವಾರು ವಿಚಾರಗಳನ್ನು ಪ್ರಸ್ಥಾಪ ಮಾಡಿದ್ದೇನೆ. ನಂತರ 10ನೇ ಜುಲೈ 2013ರಂದು ಸಂದರ್ಶನವನ್ನು ಯಾವ ಪ್ರಕಾರ ನಡೆಸಬೇಕು ಎನ್ನುವ ಬಗ್ಗೆಯು ಮಾರ್ಗ ದರ್ಶನ ಮಾಡಿದ್ದೇನೆ. ಅದನ್ನು ಓದಿ ಹೇಳುತ್ತನೆ; similarly suitable

guidelines have to be attired to ensure transparency, credible pathology in determining the merits in the case of non teaching staffs in the universities and colleges. Teaching staff ನಲ್ಲಿ UGC guidelines ಇವೆ non teaching ನಲ್ಲಿ be kept in sealed covers. Marks obtained in the written examination or test shall be collaborated with marks obtained in the viva or oral interview for basing the selection. Interview marks as per Supreme Court Judgment in Ashok Kumar Yadav & Others Vs. State of Hariyana ®& Others. Civil Appeal No.10160 & 10162/83, dated:10.05.1995 an upper limit of 12% of total marks for performance in interview shall be strictly followed. ಕೆಲವು ವಿಶ್ವವಿದ್ಯಾಲಯಗಳಲ್ಲಿ 30–40 ಮಾರ್ಕ್ಸ್‌ಗಳು ಇವೆ. only after finalization of the selection based on this revised transparency and subject to guidelines the marks obtained in the written examination and oral interview published in the website of university should be published and displayed in the notice board within twenty-four hours. For the above new transparency and objective guidelines ought to be implemented in letter expiate. The university shall make all administrative arrangements like in-camera, videography, oral interview ಎಲ್ಲಾ ಮಾಡಿದ್ದೇವೆ Web application development and all other activities incidental that were complete them within fifteen days. ಸರ್ಕಾರದ ಧೋರಣೆ ಬಹಳ ಸ್ಪಷ್ಟವಾಗಿ ಇದೆ. ಭ್ರಷ್ಟಾಚಾರಕ್ಕೆ ಇಲ್ಲಿ ಅವಕಾಶ ವಿಲ್ಲ. ಭ್ರಷ್ಟಾಚಾರ ಮಾಡಿದವರ ಮೇಲೆ ಕ್ರಮವನ್ನು ತೆಗೆದುಕೊಳ್ಳುತ್ತೇನೆ. ಪಾರದರ್ಶಕತೆ ಇರಬೇಕು. ಇವತ್ತು ಪವಿತ್ರವಾದ ಶಿಕ್ಷಣ ಕೇತ್ರದಲ್ಲ ಪಾರದರ್ಶ ಕತೆ ಉಳಿದಿಲ್ಲ ಎಂದರೆ ಇನ್ನು ಎಲ್ಲಿ ಇರಲು ಸಾಧ್ಯ? ನನಗೂ ಒಂದೊಂದು ಸಾರಿ ನೋವಾಗುತ್ತದೆ. ಏಕೆಂದರೆ ಈ ಇಲಾಖೆಯ ಜವಾಬ್ದಾರಿ ಹೊಸದಾಗಿ ತೆಗೆದುಕೊಂಡ ನಂತರ ಹಲವಾರು ಮೂಲಭೂತ ಸೌಲಭ್ಯಗಳಿಗೆ ಸಂಬಂಧಿಸಿ

ದಂತೆ ಈ ಪ್ರಕಾರದ ವಾತಾವರಣ ಏಕ ಸೃಷ್ಟಿಯಾಗಿದೆ ಎಂದು ನೋವಾಗುತ್ತದೆ. VTU Vice Chancellor term ಮುಗಿಯಲು ಬಂದಾಗ ಮಾನ್ಯ ಸದಸ್ಯರು ಹೇಳಿದ ಹಾಗೆ, ನಾವು 27ನೇ ತಾರೀಖು ಡಾ:ಬಿ.ಬಲರಾಮ ನಿರ್ದೇಶಕರು, Indian Institute of Science ಇವರ ಹೆಸರನ್ನು ಸೂಚನೆ ಮಾಡಲಾಗಿತ್ತು ಏಕೆಂದರೆ as per the Act ಇದರಲ್ಲಿ ಸರ್ಕಾರದ ಯಾವುದೆ ರೀತಿಯ ಅಧಿಕಾರವಿಲ್ಲ. ತಮಗೆ ಗೊತ್ತಿದೆ ತಾವು ಹೇಳಿ ಶ್ರೀ ಬಲರಾಮ ಹೇಳಿದ ಹಾಗೆ man of highest integrity and distinction ಇದರ ಬಗ್ಗೆ ಯಾರಿಂದ ವಾದ–ವಿವಾದವಿಲ್ಲ ಎಂದು ಅಂದುಕೊಳ್ಳುತ್ತೇನೆ. 27ನೇ ತಾರೀಖಿನಂದು ನಾವು ಕಳುಹಿಸಿದ ನಂತರ 29 ನೇ ತಾರೀಖಿಗೆ ಸರ್ಚ್ ಕಮಿಟಿಯಾಯಿತು, to our knowledge ನಮಗೆ ಏನು officiall communication ಇಲ್ಲ, ಇರಬೇಕು ಎಂದು ಇಲ್ಲ. ಇದರ ನಂತರ ರಾಜ್ಯಪಾಲರು ದಿನಾಂಕ 1–7–2013 ಕ್ಕೆ I H. R. Bharadwaj, Governor of Karnataka and Chancellor, Visvesvaraya Technological University, Belgaum in exercise of the powers conferred on me under Sect 13 (2) of Visevesvaraya Technical University 1994, Belgaum hereby continue the services of Dr. H. Maheshappa, Vice Chancellor, Visvesvaraya Technological University, Belgaum for a period of not exceeding one year from 2nd July 2013 ಹೀಗಾಗಿ ರಾಜ್ಯಪಾಲರು ಆದೇಶವನ್ನು ಮಾಡಿದ್ದಾರೆ. VTU ಕಾಯಿದೆ–ಕಾನೂನು ಪ್ರಕಾರ ಆ ಅಧಿಕಾರ ಅವರಿಗೆ ಇದೆ. ನಾವು ಆ ಮಾನ್ಯತೆ, ಗೌರವವನ್ನು ಕಾನೂನು–ಕಾಯಿದೆ ಪ್ರಕಾರ ಕೊಡಬೇಕಾಗುತ್ತದೆ. ರಾಜ್ಯಪಾಲರ ಬಗ್ಗೆ ನಮಗೆ ಸಾಕಷ್ಟು ಗೌರವವಿದೆ. ಈಗ ಬಂದಿರುವ ಪ್ರಶ್ನೆ ಏನು...ಎಂದರೆ, ಒಂದು ವರ್ಷದ not exceeding one year ಇವತ್ತು ಸಹ ಕುಲಪತಿಗಳ ನೇಮಕವನ್ನು ಈಗ ಏನು ಸರ್ಚ್ ಕಮಿಟಿ ಇದೆ ಅದೇ ಕಮಿಟಿ reconstitute ಮಾಡಿ, ಹೊಸ ಕಮಿಟಿ ಮಾಡಿ, ಹೊಸ ಉಪಕುಲಪತಿಯವರನ್ನು ನೇಮಕ ಮಾಡಲು ಅವಕಾಶವಿದೆ. ಇದಕ್ಕೆ ಸರ್ಕಾರ ಸಂಪೂರ್ಣ ಸಹಕಾರವನ್ನು ಕೊಡುತ್ತದೆ. ಎಂದು ಈ ಸದನದ ಮುಖಾಂತರ ನಾನು ಹೇಳು

ತ್ತೇನೆ. ಆದರೆ ಅದು ಗೌರವಾನ್ವಿತ ರಾಜ್ಯಪಾಲರಿಗೆ ಬಿಟ್ಟ ವಿಚಾರ. ಅದರಲ್ಲಿ ನಾವು ಕೈಹಾಕಲು ತಯಾರಿಲ್ಲ. ನಮಗೆ ಪಾರದರ್ಶಕತೆ ಬೇಕು. ಆ ದಿಕ್ಕಿನಲ್ಲಿ ಸಂಪೂರ್ಣವಾದ ಸಹಕಾರವನ್ನು ಕೊಡಲು ನಾವು ಸಿದ್ಧರಿದ್ದೇವೆ.

ಅವರೇ ಒಂದು ವರ್ಷ ಇರಬೇಕೆಂದಾಗ ಘನತೆವೆತ್ತ ರಾಜ್ಯಪಾಲರ ಆದೇಶವನ್ನು ಗೌರವಿಸಲೂ ನಾವು ತಯಾರಿದ್ದೇವೆ. ಅಲ್ಲವಂದರೆ ಇದೇ Search Committee ಇರಲಿ ಅಥವಾ reconstitute ಮಾಡಿ ಎಂದರೂ ನಾವು ಸಂಪೂರ್ಣವಾದ ಸಹಕಾರ ಕೊಡಲು ಸಿದ್ಧರಿದ್ದೇವೆ. ಮಾನ್ಯ ನಾಣಯ್ಯನವರು ಕೆಲವು ವಿಚಾರಗಳನ್ನು ಪ್ರಸ್ತಾಪ ಮಾಡಿದರು. ದೂರುಗಳು ಬಂದಾಗ ನೋಟೀಸ್ ಕೊಟ್ಟರೆ ಹೈಕೋರ್ಟ್‌ಗೆ ಹೋಗಿ ಸ್ಟೇ ತಂದರು. ತದನಂತರ ಶ್ರೀ ಅನಿಲ್ ಕುಮಾರವರು Public Interest Litigation ನಲ್ಲಿ ಕೋರ್ಟ್‌ಗೆ ಹೋಗಿದ್ದರು. ಎರಡೂ ಕೇಸಗಳಲ್ಲಿ ಕೋರ್ಟು ಇದರ ಬಗ್ಗೆ Chancellor ಅವರು ನಿರ್ಧಾರ ತಗೆದುಕೊಳ್ಳಬೇಕೆಂದು ಹೇಳಿತು.

**ಶ್ರೀ ಬಸವರಾಜ ಹೊರಟ್ಟಿ:–** ಒಂದು ವರ್ಷ ಮಾಡುವುದಕ್ಕೆ ಬರುವುದಿಲ್ಲ,

**ಶ್ರೀ ಆರ್.ವಿ. ದೇಶಪಾಂಡೆ:–** ಅವರು ಒಂದು ವರ್ಷ ಮಾಡಲಿಲ್ಲ. Up to one year ಎಂದು ಮಾಡಿದರು.

**ಶ್ರೀ ಬಸವರಾಜ ಹೊರಟ್ಟಿ:–** ಅದು ತಪ್ಪು

**ಶ್ರೀ ಆರ್.ವಿ. ದೇಶಪಾಂಡೆ:–** ಒಂದು ವರ್ಷ ಎಂದು ಹೇಳಲಿಲ್ಲ, it may year/month one, two months or six months also. Not exceeding one year, section 9 of VTU Act reads thus ;

"9. Accountability of the University : (1) If at any time the State Government is of opinion that in any matter the affirs of the University are not managed in the furtherance of the objectives of the University or in accordance with the provisions of this Act and the

Statutes and Regulations or that special measures are desirable to maintain the standards of University, teaching, examination or research, it may indicate to any matter in regard to which it desires the explanation and call upon the Executive Council to offer such explanation within such time as may be specified by the State Government. If it fails to offer any explanation within the time specified or offers an explanation which in the opinion of the state Government is unsatisfactory, the State Government with the concurrence of the Chancellor may issue such instructions as appear to it to be necessary and desirable in the circumstances of the case, and may exercise such powers as may be necessary for giving effect to those instructions.

ಕಾನೂನಿನಲ್ಲಿ ನೇರವಾಗಿ ವಿಚಾರಣೆ ಮಾಡುವ ಅಧಿಕಾರ ಸರ್ಕಾರಕ್ಕಿಲ್ಲ. ಆದ್ದರಿಂದ ಮಾನ್ಯ ಸದಸ್ಯರು ಮಾಡಿದ ಗಂಭೀರ ಆಪಾದನೆಗಳಲ್ಲಿ ಸತ್ಯ ಮತ್ತು ಅಸತ್ಯಗಳು ನನಗೆ ಗೊತ್ತಿಲ್ಲ. ಏಕೆಂದರೆ ಯಾರಿಗೂ opportunity ಕೊಡುವುದಿಲ್ಲ. ಸತ್ಯ ಪರಿಸ್ಥಿತಿ ತಿಳಿಯದೇ ಅದರ ಮೇಲೆ ಕಾಮಂಟ್ ಮಾಡುವುದು ಕಷ್ಟವಾಗುತ್ತದೆ. ಹಾಗಾಗಿ ಸರ್ಕಾರವು ಹೆಚ್ಚೆಂದರೆ Exectutive Council ಕಡೆಯಿಂದ ವಿವರಣೆ ಕೇಳಬಹುದು. ಅದನ್ನು ಕೇಳುತ್ತೇನೆ ಎಂಬ ಭರವಸೆಯನ್ನು ಕೊಡುತ್ತಿದ್ದೇನೆ. ಇದಲ್ಲದೇ ಮಾನ್ಯ ಸದಸ್ಯರಲ್ಲಿಯೂ ವಿನಂತಿ ಮಾಡುವದೇನೆಂದರೆ, ಇಂತಹ ಗಂಭೀರ ಆರೋಪ ಮಾಡಿದಾಗ ಅವರ ಕಡೆ ಇರುವ ದಾಖಲೆ ಹಾಗೂ ಪುರಾವೆಗಳನ್ನು ಕೊಟ್ಟರೆ ನಮಗೆ ಅನುಕೂಲವಾಗಬಹುದೆಂದು ಭಾವಿಸುತ್ತೇನೆ. ಅದೇ ಪ್ರಕಾರ ಅಲ್ಲ ನಡೆಯುತ್ತಿರುವ ನೇಮಕಾತಿಗಳು 371(ಜೆ) ಕೆಳಗೆ ಆಗಬೇಕು, ಎಲ್ಲಾ ಇಂಟರ್‌ವ್ಯೂ ನಿಲ್ಲಿಸಬೇಕೆಂದು ಹೇಳಿದ್ದಾರೆ. ಅದೇ ರೀತಿ ಅನೇಕ ಗಂಭೀರ ಆಪಾದನೆಗಳನ್ನು ಮಾಡಿದ್ದಾರೆ. ನಾನು ಹೆಚ್ಚಿನ ವಿವರಗಳಿಗೆ ಹೋಗುವುದಿಲ್ಲ. ಏಕೆಂದರೆ ಯಾವಾಗ ಸೇರಿದರು ಎಂಬಿತ್ಯಾದಿ ವಿಷಯಗಳು ಚರ್ಚೆಯಲ್ಲಿ ಬಂದಿವೆ. ವಿಶ್ವೇಶ್ವರಯ್ಯ ತಾಂತ್ರಿಕ

ವಿಶ್ವವಿದ್ಯಾಲಯಕ್ಕೆ ದಿನಾಂಕ 11/7/2012ರಂದು ಒಟ್ಟು 168 ಹುದ್ದೆಗಳ ನೇಮಕಾತಿಗೆ ಅನುಮತಿ ಸಿಕ್ಕಿದ್ದು, ಇದರಲ್ಲ 30 ಪ್ರೊಫೆಸರಗಳು, ಸಹಾಯಕ ಪ್ರೊಫೆಸರ್‌ಗಳು 42, ಉಪನ್ಯಾಸಕರು 96 ಸೇರಿವೆ. ಇದಕ್ಕ ಸರ್ಕಾರವು ಅನುಮತಿ ಕೊಟ್ಟಿದ್ದು, ಇದರ ಸ್ಯಾಲರಿ ಬಿಲ್. 8.93 ಕೋಟಿ ರೂಪಾಯಿಗಳಾಗಿದೆ. ಗುಲ್ಬರ್ಗ ವಿಭಾಗದ 371(ಜೆ) ಬಗ್ಗೆ ಪ್ರಸ್ತಾಪವಾಗಿದ್ದು, ಆ ವಿಭಾಗೀಯ ಕಛೇರಿಗೆ 5 ಪೊಫೆಸರ್‌ಗಳು, ಸಹಾಯಕ ಪ್ರೊಫೆಸರ್‌ಗಳು 8. ಉಪನ್ಯಾಸಕರು 19 ಸೇರಿ ಒಟ್ಟು 32 ಜನರನ್ನು ನೇಮಕಾತಿ ಮಾಡಲು ಅವಕಾಶ ಇದೆ. ಮಾನ್ಯ ಸದಸ್ಯರು ಕೊಟ್ಟ ಮಾಹಿತಿಗಳು ಹಾಗೂ ನಮ್ಮ ಕಡೆ ಇರುವ ಮಾಹಿತಿಗಳಂತೆ ಕಾಯಿದೆ-ಕಾನೂನಿನಡಿಯಲ್ಲಿ ಛಾನ್ಸಲರ್ ಸಹಕಾರದಿಂದ ವಿಚಾರಣೆ ಮಾಡಲು ಪ್ರಯತ್ನ ಮಾಡುತ್ತೇನೆ. ಎರಡನೆಯದಾಗಿ 371 (ಜೆ) ಪ್ರಕಾರ ಆರೋಗ್ಯ ಇಲಾಖೆ, ಅರಣ್ಯ ಇಲಾಖೆ ಹಾಗೂ ಬೇರೆ ಬೇರೆ ಇಲಾಖೆಗಳಲ್ಲಿ ನೇಮಕಾತಿಯನ್ನು ಸರ್ಕಾರವು ತಾತ್ಕಾಲಿಕವಾಗಿ ಸ್ಟೇ ಮಾಡಿದೆ. ಹಾಗಾಗಿ 371(ಜೆ) ಇಲ್ಲಿ ಪ್ರಸ್ತಾಪವಾಗಿದೆ. ನಾನು ಸದನದಲ್ಲಿ ನೇರವಾಗಿ ಹೇಳಿದರೂ ಇದರ ಬಗ್ಗೆ ಕ್ಯಾಬಿನೆಟ್ನಲ್ಲಿಯೂ ಸಹ ಚರ್ಚೆ ಮಾಡಬೇಕಾಗುತ್ತದೆ. ಆದರೆ ಕ್ಯಾಬಿನಿಟ್‌ನಲ್ಲಿ ನಿರ್ಧಾರ ತೆಗೆದುಕೊಳ್ಳುವಾಗ ಮಾನ್ಯ ಸದಸ್ಯರು ನಿಧಾನವಾಗ ಬಹುದೆಂದು ತಿಳಿಸಬಹುದು. ಸದ್ಯಕ್ಕ 7 ದಿನಗಳ ಕಾಲ ಇಂಟರ್ವ್ಯೂ ಅನ್ನು ನಾನು ಸಸ್ಪೆಂಡ್ ಮಾಡುತ್ತಿದ್ದೇನೆ. ಈ ಪ್ರಕಾರದ ಸೂಚನೆ ಕೊಡುತ್ತೇನೆ. ಇದಲ್ಲದೇ ಇದರ ಬಗ್ಗೆ ಕ್ಯಾಬಿನಿಟ್ನಲ್ಲಿ ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ತರುತ್ತೇನೆ. ಹೈದರಬಾದ್-ಕರ್ನಾಟಕದ ಹಿತ ಕಾಯಬೇಕು ಮತ್ತು ಅಲ್ಲಿಗೆ ಪ್ರೊಫೆಸರ್‌ಗಳು ಬೇಕಾಗಿದ್ದು, ಅವರಿಲ್ಲದೇ ನಡೆಸುವುದಕ್ಕೂ ಆಗುವುದಿಲ್ಲ. ಆದ್ದರಿಂದ ಮಾನ್ಯ ಮುಖ್ಯಮಂತ್ರಿಗಳ  ಜೊತೆ ಚರ್ಚೆ ಮಾಡಿ ಮುಂದಿನ ಕ್ರಮ ಕೈಗೊಳ್ಳುತ್ತೇನೆ. ಎಲ್ಲಾ ಮಾನ್ಯ ಸದಸ್ಕರ ಸಹಕಾರದಿಂದ ಎಲ್ಲಾ ರೀತಿಯ ಪಾರದರ್ಶಕತೆ ವಿಶ್ವವಿದ್ಯಾಲಯ, ಕಾಲೇಜುಗಳು, ಇಲಾಖೆಗಳಲ್ಲಿ ಇಡಲು ಪ್ರಯತ್ನ ಮಾಡುತ್ತೇನೆ.

**ಉಪ ಸಭಾಪತಿಯವರು:–** ನಿಮ್ಮ ಬೇಡಿಕೆಯನ್ನು ಮಾನ್ಯ ಸಚಿವರು ಪೂರೈಸಿದ್ದಾರೆ. ಸಭೆಯ ಗಮನಕ್ಕೆ ಒಂದು ಅಂಶವನ್ನು ತರಬೇಕಾಗಿದೆ. ಎಲ್ಲರೂ ಕುಳಿತುಕೊಳ್ಳಿ. ಈ ವಿಷಯ ಇಲ್ಲಿಗೆ ಮುಕ್ತಾಯವಾಗಿದೆ.

**ಶ್ರೀ ಮರಿತಿಬ್ಬೇಗೌಡ:–** ಒಂದು ಆಡಿಟ್ ವರದಿ ಇದೆ. ಮಾನ್ಯ ಸಚಿವರು ದಾಖಲೆ ಇದ್ದರೆ ಕೊಡಲು ತಿಳಿಸಿದ್ದು, ಕೋಟ್ಯಾಂತರ ರೂಪಾಯಿಗಳ ಅವ್ಯವಹಾರವಾಗಿರುವ ಆಡಿಟ್ ವರದಿ ಇದೆ, ಅದನ್ನು ಕಳುಹಿಸಿಕೊಡುತ್ತೇನೆ. ಇದರೊಂದರ ಮೇಲೆ ತನಿಖೆ ಮಾಡಿದರೆ ಸಾಕು.

(ಗೊಂದಲ)

**ಶ್ರೀ ಆರ್.ವಿ. ದೇಶಪಾಂಡೆ:–** ನಡೆಯುತ್ತಿರುವ ಇಂಟರ್‌ವ್ಯೂ ಅನ್ನು ಸ್ಟಾಪ್ ಮಾಡಿದ್ದೇನೆ. ಅದು decide ಆದ ನಂತರ fate ನೋಡೋಣ.

**ಉಪ ಸಭಾಪತಿಯವರು:–** ಈ ವಿಷಯ ಇಲ್ಲಿಗೆ ಮುಕ್ತಾಯವಾಗಿದ್ದು, ನಾನು ಒಂದು ವಿಷಯವನ್ನು ಪ್ರಸ್ತಾಪ ಮಾಡಬೇಕಾಗಿದೆ. ಬೆಳಿಗ್ಗೆ ಮಾನ್ಯ ನಾರಾಯಣಸ್ವಾಮಿಯವರು ಒಂದು ಇದೇ ವಿಷಯಕ್ಕೆ ಸಂಬಂಧಪಟ್ಟಂತೆ ಹೆಸರು ಇಲ್ಲ ಎಂಬ ಬಗ್ಗೆ ಪ್ರಸ್ತಾಪ ಮಾಡಿದ್ದರು. Rule 72 of the Rules of procedure and Conduct of Business in the Karnataka Legislative Council reads thus :

“ Provided that list of business shall not show the name of more than five members”

ಇಲ್ಲಿ ಎಲ್ಲರ ಹೆಸರನ್ನು ಕ್ರೋಢೀಕರಿಸಿ, 10 ಜನರ ಹೆಸರುಗಳನ್ನು ಹಾಕಿ ಮಹತ್ವದ ವಿಷಯದ ಮೇಲೆ ಒಳ್ಳೆಯ ಚರ್ಚೆ ನಡೆದಿದೆ. ಇದನ್ನು ತಪ್ಪು ಮಾಹಿತಿ ಹೋಗಬಾರದೆಂದು ಹೇಳುತ್ತಿದ್ದೇನೆ. ಈಗ ಸದನವನ್ನು ನಾಳ ಬೆಳಿಗ್ಗೆ 11–00 ಗಂಟೆಯವರೆಗೆ ಮುಂದೂಡುತ್ತೇನೆ.

**(ಸದನವು ಸಂಜೆ 7 ಗಂಟೆ 8 ನಿಮಿಷಕ್ಕೆ ಮುಕ್ತಾಯಗೊಂಡು ಪುನ: ದಿನಾಂಕ 18 ನೇ ಜುಲೈ ಮಾಹೆ 2013ರ ಗುರುವಾರದಂದು ಬೆಳಿಗ್ಗೆ 11 ಗಂಟೆಗೆ ಸೇರಲು ನಿಶ್ಚಯಿಸಿತು)**